# ಮಾಂಡೂಕ್ಯೋಪನಿಷತ್ತು



ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ-573211
2002

# ಮಾಂಡೂಕ್ಯೋಪನಿಷತ್ತು



ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ-573211
2002

ಶ್ರೀ ಶಾಂಕರ ಭಾಷ್ಯ ಸಮೇತ

ಗೌಡಪಾದಕಾರಿಕಾಸಹಿತ

# ಮಾಂಡೂಕ್ಯೋಪನಿಷತ್ತು

(ಉಪನಿಷತ್ತಿನ, ಕಾರಿಕೆಯ, ಮತ್ತು ಭಾಷ್ಯದ ಸಂಸ್ಕೃತಮೂಲ,
ಅನುವಾದ, ಟಿಪ್ಪಣಿ, ಸಾರ-ಮುಂತಾದವುಗಳೊಡನೆ)

ಬರೆದವರು :

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೬

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೨೦೦೨

# ಮುನ್ನುಡಿ

ಮಾಂಡೂಕ್ಯೋಪನಿಷತ್ತು ಹಾಗೂ ಅದರ ವಿವರಣರೂಪವಾದ ಗೌಡಪಾದ ಕಾರಿಕೆಗಳು - ಇವುಗಳಿಗೆ ಶ್ರೀ ಶಂಕರಭಗವತ್ಪಾದರು ಅಮೋಘವಾದ ಭಾಷ್ಯವನ್ನು ರಚಿಸಿ ಮುಮುಕ್ಷುಗಳಿಗೆ ವೇದಾಂತಾರ್ಥವನ್ನು ಅನುಸಂಧಾನಮಾಡಲು ಪರಮೋಪ ಕಾರವನ್ನು ಮಾಡಿರುತ್ತಾರೆ. ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾಗಿದ್ದ ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಮಾಂಡೂಕ್ಯ ಉಪನಿಷತ್ತು ಹಾಗೂ ಗೌಡಪಾದಕಾರಿಕೆಗಳ ಮೇಲಿನ ಶಂಕರಭಾಷ್ಯವನ್ನು ಟಿಪ್ಪಣಿ ಸಮೇತ ಕನ್ನಡಭಾಷೆಗೆ ಅನುವಾದಿಸಿ ಪ್ರಕಟಿಸಿರುವದಲ್ಲದೆ ಸಂಸ್ಕೃತಭಾಷೆಯಲ್ಲಿ "ಮಾಂಡೂಕ್ಯರಹಸ್ಯವಿವೃತಿಃ" ಎಂಬ ಗ್ರಂಥವನ್ನೂ ಕನ್ನಡದಲ್ಲಿ "ಗೌಡಪಾದ ಹೃದಯ" ಎಂಬ ಗ್ರಂಥವನ್ನೂ ರಚಿಸಿದ್ದು ಅವುಗಳು ಕಾರ್ಯಾಲಯದಿಂದ ಪ್ರಕಟ ವಾಗಿ ಜಿಜ್ಞಾಸುಗಳಿಗೆ ಅಧ್ಯಾತ್ಮವಿದ್ಯೆಯ ಅನುಸಂಧಾನಕ್ಕೆ ಉಪಕಾರಕವಾಗಿರುತ್ತವೆ. ಹೀಗೆ ಕೇವಲ ಹನ್ನೆರಡು ಮಂತ್ರಗಳಿಂದ ಕೂಡಿರುವ ಮಾಂಡೂಕ್ಯೋಪನಿಷತ್ತು ಮೂರ್ತಿಯಲ್ಲಿ ಚಿಕ್ಕದಾದರೂ ಕೀರ್ತಿಯಲ್ಲಿ ಓರಿಯದಾಗಿದ್ದು ವೇದಾಂತಾರ್ಥಸಾರ ಸಂಗ್ರಹವೆನಿಸಿರುತ್ತದೆ.

ಬ್ರಹ್ಮೀಭೂತ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಕನ್ನಡದಲ್ಲಿ ರಚಿಸಿ ರುವ ಶಾಂಕರಭಾಷ್ಯ-ಗೌಡಪಾದಕಾರಿಕಾ ಸಹಿತವಾದ ಮಾಂಡೂಕ್ಯೋಪನಿಷತ್ತನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ, ಇವರು ಈಗ ಐದನೆಯ ಬಾರಿಗೆ ಪುನರ್ಮುದ್ರಿಸಿ ಪ್ರಕಟಿಸಿರುತ್ತಾರೆ. ಈ ಗ್ರಂಥವನ್ನು ಜಿಜ್ಞಾಸುಗಳು ಅವಶ್ಯ ವಾಗಿ ಅಧ್ಯಯನಮಾಡಿ ಜ್ಞಾನನಿಷ್ಠೆಯನ್ನು ಸಂಪಾದಿಸಿ ಶ್ರೇಯೋಪಂತರಾಗುವಂತೆ ಶ್ರೀಶಂಕರಭಗವತ್ಪಾದರವರು ಅನುಗ್ರಹಿಸಲೆಂದು ಪ್ರಾರ್ಥಿಸಲಾಗಿದೆ.

ಹೊಳೆನರಸೀಪುರ
ತಾ|| ೧೯.೫.೨೦೦೨

ಇತಿ - ಸಜ್ಜನವಿಧೇಯ,

ಪ್ರೊ. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

# ಪೀಠಿಕೆ

## ಮಾಂಡೂಕ್ಯೋಪನಿಷತ್ತು

ಅಥರ್ವವೇದಕ್ಕೆ ಸೇರಿದ ಉಪನಿಷತ್ತುಗಳಲ್ಲಿ ಮುಂಡಕ, ಪ್ರಶ್ನ, ಮಾಂಡೂಕ್ಯ-ಈ ಮೂರಕ್ಕೆ ಮಾತ್ರ ಶ್ರೀಶಂಕರಾಚಾರ್ಯರವರು ಭಾಷ್ಯವನ್ನು ಬರೆದಿರುತ್ತಾರೆ. ಆ ಮೂರರಲ್ಲಿ-ಅಷ್ಟೇ ಅಲ್ಲ, ಆಚಾರ್ಯರು ಭಾಷ್ಯವನ್ನು ಬರೆಯುವದಕ್ಕೆ ಆರಿಸಿಕೊಂಡಿರುವ ಉಪನಿಷತ್ತುಗಳಲ್ಲೆಲ್ಲ-ಮಾಂಡೂಕ್ಯವು ತೀರ ಚಿಕ್ಕದಾಗಿರುತ್ತದೆ. ಆದರೂ ಇದು 'ಸರ್ವವೇದಾಂತಾರ್ಥಸಾರಸಂಗ್ರಹ' ವಾಗಿರುವದೆಂದು ಆಚಾರ್ಯರೇ ವರ್ಣಿಸಿರುತ್ತಾರೆ. ಶ್ರೀಗೌಡಪಾದಾಚಾರ್ಯರವರ ಕಾರಿಕಾರೂಪವಾದ ವಿವರಣೆಯೂ ಇರುವದರಿಂದ ವೇದಾಂತದ ಇತಿಹಾಸದ ದೃಷ್ಟಿಯಿಂದ ಈ ಉಪನಿಷತ್ತಿಗೆ ಒಂದು ವಿಶೇಷಮಹತ್ವವು ಇರುತ್ತದೆ. ಈ ಉಪನಿಷತ್ತು ಅಥರ್ವವೇದದ ಯಾವ ಭಾಗದಲ್ಲಿದೆ ಎಂಬುದನ್ನು ನಿರ್ಧರಿಸುವದಕ್ಕೆ ನಮಗೆ ಯಾವ ಆಧಾರವೂ ದೊರೆತಿಲ್ಲ, ಆಚಾರ್ಯರು ಆ ವಿಷಯಕ್ಕೆ ತಮ್ಮ ಭಾಷ್ಯದಲ್ಲಿ ಏನನ್ನೂ ಹೇಳಿರುವದೂ ಇಲ್ಲ. ಅವಸ್ಥಾತ್ರಯ ನಿರೂಪಣೆಯ ಮೂಲಕ ಪರಮಾರ್ಥವನ್ನು ನಿರ್ಧರಿಸಿ ತಿಳಿಸುವ ಪ್ರಕ್ರಿಯೆಯೊಂದೇ ಈ ಉಪನಿಷತ್ತಿನಲ್ಲಿ ಕಂಡುಬಂದಿರುವದರಿಂದ ಇದು ಆ ವೇದದ ಆರಣ್ಯಕ ದಲ್ಲಿರಬೇಕೆಂದು ಊಹಿಸುವದಕ್ಕೆ ಅವಕಾಶವಿದೆ.

## ಮಾಂಡೂಕ್ಯಕಾರಿಕೆಗಳ ಗ್ರಂಥಕರ್ತರ ಬಗ್ಗೆ ವಿಕಲ್ಪಗಳು

ಶ್ರೀಶಂಕರಾಚಾರ್ಯರು ಉಪನಿಷತ್ತಿಗೂ ಭಾಷ್ಯವನ್ನು ಬರೆದು ಕಾರಿಕೆಗಳಿಗೂ ವಿವರಣವನ್ನು ಬರೆದಿರುತ್ತಾರಾದರೂ ತಾವು ಉಪನಿಷತ್ತಿಗೆ ಸ್ವಪ್ರಧಾನವಾಗಿ ಭಾಷ್ಯವನ್ನು ಬರೆದಿದೇವೆಂದು ಹೇಳಿಕೊಂಡಿಲ್ಲ. ಉಪನಿಷತ್ತನ್ನು ವಿವರಿಸುವ ಕಾರಿಕೆಗಳಿಗೇ ಅವರು ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಕಾರಿಕೆಗಳು ಪ್ರಕೃತದಲ್ಲಿ ಆಗಮ, ವೈತಥ್ಯ, ಅದ್ವೈತ, ಅಲಾತಶಾಂತಿ - ಎಂಬ ನಾಲ್ಕು ಪ್ರಕರಣಗಳಾಗಿ ವಿಂಗಡಿಸಿಕೊಂಡಿರುತ್ತವೆ. ಒಂದು ಪ್ರಕರಣಕ್ಕಿಂತಲೂ ಮುಂದಿನ ಇನ್ನೊಂದು ಪ್ರಕರಣದಲ್ಲಿ ಹೆಚ್ಚುಹೆಚ್ಚು ಕಾರಿಕೆ (ಶ್ಲೋಕ)ಗಳಿರುತ್ತವೆ. ಇವುಗಳಲ್ಲಿ ಮೊದಲನೆಯದಾದ ಆಗಮಪ್ರಕರಣವು ಈಗ್ಗೆ ಉಪನಿಷತ್ತಿನ ನಡುನಡುವೆ ಭಾಗಭಾಗವಾಗಿ ಹೆಣೆದುಕೊಂಡಿರುವ ಇಪ್ಪತ್ತೊಂಬತ್ತು ಕಾರಿಕೆಗಳ ಗುಂಪಾಗಿರುತ್ತದೆ. ಮಿಕ್ಕ ಮೂರು ಪ್ರಕರಣಗಳೂ ಸ್ವತಂತ್ರವಾಗಿರುತ್ತವೆ. ತೀರ ದೊಡ್ಡದಾಗಿರುವ, ನೂರು ಕಾರಿಕೆಗಳ, ಅಲಾತಶಾಂತಿಪ್ರಕರಣವು ಗ್ರಂಥದ ಕೊನೆಯಲ್ಲಿದ್ದು ಅದರ ಆದಿಯಲ್ಲಿಯೂ ಅಂತ್ಯದಲ್ಲಿಯೂ ಮಂಗಲಶ್ಲೋಕಗಳಿವೆ.

ಹೀಗಿರುವದರಿಂದ ಉಪನಿಷತ್ತಿನ ವಿಷಯದಲ್ಲಿಯೂ, ಪ್ರಕರಣಗಳ ವಿಷಯದಲ್ಲಿಯೂ ಗ್ರಂಥಕರ್ತೃವಿಚಾರದಲ್ಲಿ ಬಗೆಬಗೆಯ ಅಭಿಪ್ರಾಯಗಳು ವಿದ್ವಾಂಸರುಗಳಲ್ಲಿ ಅಂಕುರಿಸಿರುತ್ತವೆ.

ಮೊದಲನೆಯದಾಗಿ ಈ ನಾಲ್ಕೂ ಶ್ರೀಶಂಕರಾಚಾರ್ಯರ ಪರಮಗುರುಗಳಾದ ಗೌಡಪಾದರು ಬರೆದ ಪ್ರಕರಣಗಳು ಎಂದು ಅನೇಕ ಅದ್ವೈತಿಗಳ ಮತವಿದೆ. ಎರಡನೆಯದಾಗಿ ಆಗಮಪ್ರಕರಣವೆಂಬುದು ಪೌರುಷೇಯವೇ ಅಲ್ಲವೆಂದೂ ಬ್ರಹ್ಮದೃಷ್ಟವಾದ ಮಂತ್ರಗಳನ್ನು ತಿಳಿವಳಿಕೆಯ ದಾಢ್ರ್ಯಾರ್ಥವಾಗಿ ಉಪನಿಷತ್ತಿನಲ್ಲಿ ಉದಾಹರಿಸಿದೆಯೆಂದೂ ಮಾಂಡೂಕ್ಯೋಪನಿಷತ್ತು ಮತ್ತು ಕಾರಿಕೆ-ಎರಡೂ ಶ್ರುತಿಯೇ ಎಂದೂ ಮಧ್ವಾಚಾರ್ಯರು ಅಂಗೀಕರಿಸಿರುತ್ತಾರೆ. ಈ ನಾಲ್ಕು ಪ್ರಕರಣಗಳೂ ಮಾಂಡೂಕ್ಯವೂ ಸೇರಿದ ಒಟ್ಟೇ ಗೌಡಪಾದರ ಕೃತಿ - ಎಂದು ಡಾಯ್ಸನ್ ಎಂಬ ಜರ್ಮನ್ ವಿದ್ವಾಂಸನ ಮತವಿದೆ. ಗೌಡಪಾದರ ಪ್ರಕರಣಗಳಲ್ಲಿ, ಅದರಲ್ಲಿಯೂ ನಾಲ್ಕನೆಯ ಪ್ರಕರಣದಲ್ಲಿ, ಬೌದ್ಧರ ಗ್ರಂಥದಲ್ಲಿ ಕಾಣಬರುವ ಅನೇಕ ಪ್ರಕ್ರಿಯೆಗಳು ಕಾಣಬರುತ್ತವೆ ; ಗೌಡಪಾದರು ಅಶ್ವಘೋಷ, ನಾಗಾರ್ಜುನ, ಅಸಂಗ, ವಸುಬಂಧು-ಮುಂತಾದ ಪ್ರಸಿದ್ಧ ಬೌದ್ಧಾಚಾರ್ಯರುಗಳ ತರುವಾಯ ಬಂದವರಾದ್ದರಿಂದ ಅವರೂ ಪ್ರಾಯಶಃ ಒಬ್ಬ ಬೌದ್ಧರೆಂದೋ ಬುದ್ಧನ ಉಪದೇಶದಲ್ಲಿ ಗೌರವವುಳ್ಳ ಆಚಾರ್ಯರೆಂದೋ ಕಲ್ಪಿಸಬೇಕಾಗಿದೆ - ಎಂದು ಪ್ರೊಫೆಸರ್ ಸುರೇಂದ್ರನಾಥ ದಾಸಗುಪ್ತ (Prof. S. N. Dasagupa M.A., Ph.D.) ಮುಂತಾದ ಆಧುನಿಕವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಈ ನಾಲ್ಕು ಏಪ್ರತಿಪನ್ನಮತಗಳಲ್ಲಿ ಕೊನೆಯ ಮೂರೂ ಕಲ್ಪನಾಮಾತ್ರವೆಂದು ನಮಗೆ ತೋರುತ್ತದೆ. ಈ ಅಭಿಪ್ರಾಯವನ್ನು ಸ್ಪಷ್ಟಪಡಿಸುವದಕ್ಕಾಗಿ ಈಗ ಒಂದೊಂದನ್ನೂ ಸ್ವಲ್ಪ ಸಮಾಲೋಚನೆ ಮಾಡುವೆವು.

## ಆಗಮಪ್ರಕರಣವು ಶ್ರುತಿಯೆಂಬುದು ಸರಿಯಲ್ಲ

ಆಗಮಪ್ರಕರಣದ ಕಾರಿಕೆಗಳೂ ಉಪನಿಷತ್ತಿನ ಭಾಗವೆಂಬುದಕ್ಕೆ ಮಧ್ವಾಚಾರ್ಯರು ಕೊಟ್ಟಿರುವ ಪ್ರಮಾಣವೇನು ? ಎಂಬುದನ್ನು ಮೊದಲು ಸಮಾಲೋಚನೆ ಮಾಡೋಣ. ಆ ಆಚಾರ್ಯರು ಉದಾಹರಿಸಿರುವ ಆಧಾರವು ಬ್ರಹ್ಮತರ್ಕವೆಂಬ ಗ್ರಂಥವೊಂದು, ಗರುಡಪುರಾಣವೊಂದು. ಬ್ರಹ್ಮತರ್ಕವೆಂಬ ಗ್ರಂಥವು ಈಗ ಸಿಕ್ಕುವದಿಲ್ಲ ; ಆ ಗ್ರಂಥವನ್ನು ಮತ್ತೆ ಯಾವ ಆಚಾರ್ಯರೂ ಪ್ರಮಾಣವೆಂದು ಹೆಸರಿಸಿಯೂ ಇಲ್ಲ. ಪುರಾಣಗಳಲ್ಲಿ ಆಗಿಂದಾಗ್ಗೆ ಎಷ್ಟು ಹೊಸ ಶ್ಲೋಕಗಳಾದರೂ ಸೇರುವ ಸಂಭವವಿರುವ

ದರಿಂದ ಗರುಡಪುರಾಣವನ್ನು ಪ್ರಕೃತವಿಷಯಕ್ಕೆ ಪ್ರಮಾಣವಾಗಿ ಹಿಡಿಯುವ ಮುಂಚೆ ನಾವು ಮತ್ತೆ ಯಾರಾದರೂ ಈ ಕಾರಿಕೆಗಳನ್ನು ಉಪನಿಷತ್ತುಗಳೆಂದು ಎಣಿಸಿದಾರೆಯೆ ? ಎಂಬುದನ್ನು ವಿಚಾರಿಸಬೇಕಾಗಿದೆ. ಆದರೆ ಮಧ್ವಾಚಾರ್ಯರಿಗಿಂತ ಹಿಂದೆ ಯಾರೊಬ್ಬರೂ ಹಾಗೆಂದು ಎಣಿಸಿದ್ದಕ್ಕೆ ಆಧಾರವಿರುವದಿಲ್ಲ. **ಶಂಕರಾಚಾರ್ಯರು ತಾವು ನಾಲ್ಕು ಪ್ರಕರಣಗಳಿಗೆ** ವ್ಯಾಖ್ಯಾನವನ್ನು ಬರೆಯುವೆವೆಂದು (೧, ೩) ಕಂಠೋಕ್ತವಾಗಿ ಹೇಳಿರುತ್ತಾರೆ ; ಅವರ ಶಿಷ್ಯರಾದ **ಸುರೇಶ್ವರರು** ಆಗಮಪ್ರಕರಣದಿಂದ ಎರಡು ಕಾರಿಕೆಗಳನ್ನು ಗೌಡಪಾದರು ಬರೆದವು - ಎಂದು ತಮ್ಮ **ನೈಷ್ಕರ್ಮ್ಯಸಿದ್ಧಿ** ಎಂಬ ವೇದಾಂತಪ್ರಕರಣದಲ್ಲಿ ಉದಾಹರಿಸಿರುತ್ತಾರೆ. ಮಧ್ವಾಚಾರ್ಯರಿಗಿಂತ ಈಚಿನ ಕೆಲವರು ಅದ್ವೈತವೇದಾಂತಿಗಳು ಕೂಡ ಆಗಮಪ್ರಕರಣವನ್ನು ಶ್ರುತಿಯೆಂದು ಕರೆದಿರುವದುಂಟು ; ಆದರೆ ಅವರು ಆ ತಮ್ಮ ಅಭಿಪ್ರಾಯಕ್ಕೆ ಯಾವ ಆಧಾರವನ್ನೂ ಕೊಟ್ಟಿರುವದಿಲ್ಲ. ಈ ವಿಷಯದಲ್ಲಿ **ರಾಮಾನುಜಾಚಾರ್ಯರ** ಅಭಿಪ್ರಾಯವೇನೋ ತಿಳಿಯುವಂತಿಲ್ಲ ; ಅವರ ಅನುಯಾಯಿಗಳಾದ **ಕೂರನಾರಾಯಣರು** ಮಧ್ವಾಚಾರ್ಯರನ್ನೇ ಅನುಸರಿಸಿರುತ್ತಾರೆ. ಹೀಗಿರುವದರಿಂದ ಆಗಮಪ್ರಕರಣವು ಉಪನಿಷತ್ತೆಂಬುದಕ್ಕೆ ನಮಗೆ ನಂಬತಕ್ಕ ಪ್ರಮಾಣವೇನೂ ಈವರೆಗೆ ದೊರೆತಿಲ್ಲವೆಂದು ಹೇಳಬೇಕಾಗಿದೆ.

## ಮಾಂಡೂಕ್ಯೋಪನಿಷತ್ತು ಗೌಡಪಾದರ ಕೃತಿ ಎಂಬ ವಾದದಲ್ಲಿ ಹುರುಳಿಲ್ಲ

ಎರಡನೆಯದಾಗಿ ಮಾಂಡೂಕ್ಯೋಪನಿಷತ್ತನ್ನು ಶಂಕರಾಚಾರ್ಯರು ಉಪನಿಷತ್ತೆಂದು ಭಾವಿಸಿದ್ದರೆಂಬುದಕ್ಕೆ ಪ್ರಮಾಣವಿಲ್ಲವೆಂದೂ ಗೌಡಪಾದರೇ ಆ ಗ್ರಂಥಭಾಗವನ್ನು ಬರೆದಿರಬಹುದೆಂದೂ ಡಾಯ್ಸನ್ ಎಂಬ ಪಾಶ್ಚಾತ್ಯವಿದ್ವಾಂಸನು ಊಹಿಸಿರುತ್ತಾನೆ. **"ವೇದಾಂತಾರ್ಥಸಾರಸಙ್ಗ್ರಹಭೂತಮಿದಂ ಪ್ರಕರಣಚತುಷ್ಟಯಮ್ ಓಮಿತ್ಯೇತದಕ್ಷರಮ್ ಇತಿ ಆರಭ್ಯತೇ"** (೧) ಎಂಬ ಭಾಷ್ಯವಾಕ್ಯದಲ್ಲಿ ಮಾಂಡೂಕ್ಯವೂ ಪ್ರಕರಣಚತುಷ್ಟಯದಲ್ಲಿ ಸೇರಿದೆಯೆಂಬ ಸೂಚನೆ ಇದೆ ; ಆಚಾರ್ಯರು ಮಾಂಡೂಕ್ಯವನ್ನು ಶ್ರುತಿಯೆಂದು ಎಲ್ಲಿಯೂ ಉದಾಹರಿಸಿಲ್ಲ-ಎಂಬ ಎರಡು ಯುಕ್ತಿಗಳೇ ಆತನ ಊಹೆಗೆ ಊರುಗೋಲು. ಆದರೆ ಮಾಂಡೂಕ್ಯವನ್ನು ಗೌಡಪಾದಕೃತಿಯೆಂದು ಆಚಾರ್ಯರು ಮತ್ತೆಲ್ಲಿಯೂ ಉದಾಹರಿಸಿರುವದು ಕಂಡುಬಂದಿರುವದಿಲ್ಲ. ಡಾಯ್ಸನ್ನನು ತೋರಿಸಿರುವ ವಾಕ್ಯದಲ್ಲಿ 'ಓಮಿತ್ಯೇತದಕ್ಷರಮ್ ಎಂಬ (ಉಪನಿಷತ್ತು)

ಆದಿಯಾಗಿರುವ ಪ್ರಕರಣಚತುಷ್ಟಯವು' ಎಂದೂ ಅರ್ಥವನ್ನು ಮಾಡುವದಕ್ಕೆ ಬರುತ್ತದೆ. ಆಗಮಪ್ರಕರಣದ (೧-೧೬) ಒಂದು ಕಾರಿಕೆಯನ್ನೂ ಅದ್ವೈತಪ್ರಕರಣದ (೩-೧೫) ಒಂದು ಕಾರಿಕೆಯನ್ನೂ ಸಂಪ್ರದಾಯವಿದರ ವಚನವೆಂದು (ಸೂ. ಭಾ. ೧-೪-೧೪, ೨-೧-೯) ಉದಾಹರಿಸಿರುತ್ತಾರೆ. ''ಅತ್ರೈತೇ ಶ್ಲೋಕಾ ಭವನ್ತಿ'' ಎಂದು ಉದಾಹರಿಸಿರುವ ಶ್ಲೋಕಗಳಂತೆ ಉಪನಿಷತ್ತನ್ನೂ ಗೌಡಪಾದರೇ ಬರೆದಿದ್ದರೆ ವ್ಯಾಖ್ಯೇಯಗದ್ಯಭಾಗವು ಸಂಕ್ಷಿಪ್ತವಾಗಿಯೂ, ವ್ಯಾಖ್ಯಾನರೂಪವಾಗಿರುವ ಪದ್ಯ ಭಾಗವು ವಿಸ್ತಾರವಾಗಿಯೂ ಇರುವದಕ್ಕೆ ಕಾರಣವೇನೆಂಬುದು ಗೊತ್ತಾಗುವಂತಿಲ್ಲ ; ಗದ್ಯಭಾಗವನ್ನು ವಿಸ್ತರಿಸಿ ಅಲ್ಲಿ ಹೇಳಿದ್ದನ್ನೇ ಪದ್ಯದಲ್ಲಿ ಸಂಗ್ರಹಿಸುವ ಪದ್ಧತಿಯು ಸಂಸ್ಕೃತಗ್ರಂಥಕರ್ತೃಗಳಲ್ಲಿರುವಂತೆ ಅದಕ್ಕೆ ವಿಪರೀತವಾದ ಪದ್ಧತಿಯು ಕಂಡು ಬರುವದಿಲ್ಲ[1]. ಇದೆಲ್ಲದರ ಜೊತೆಗೆ ಶಂಕರಾಚಾರ್ಯರ ಸಾಕ್ಷಾಚ್ಛಿಷ್ಯರಾದ ಸುರೇಶ್ವರರು ಮಾಂಡೂಕ್ಯವನ್ನು ಶ್ರುತಿ ಎಂದು ಕಂಠೋಕ್ತವಾಗಿ ಕರೆದಿರುವದು ಬೃಹದಾರಣ್ಯಕ ವಾರ್ತಿಕದಲ್ಲಿ (ಬೃ. ವಾ. ೩-೮-೨೬) ಕಂಡುಬರುತ್ತದೆ. ಹೀಗಿರುವದರಿಂದ ಮಾಂಡೂಕ್ಯವು ಶ್ರುತಿ ಎಂದೂ ಆಗಮಾದಿಪ್ರಕರಣಚತುಷ್ಟಯವೂ ಒಬ್ಬ ಗ್ರಂಥಕರ್ತನ ಕೃತಿಯೆಂದೂ ಭಾವಿಸುವದಕ್ಕೆ ಯಾವ ಅಡ್ಡಿಯೂ ಕಾಣುವದಿಲ್ಲ.

## ಗೌಡಪಾದರು ಬೌದ್ಧರೆಂಬ ವಾದದ ಜೊಳ್ಳುತನ

ಮಾಂಡೂಕ್ಯೋಪನಿಷದ್ಭಾಷ್ಯಕ್ಕೂ ಕಾರಿಕೆಯ ವ್ಯಾಖ್ಯಾನಕ್ಕೂ ಟೀಕೆಯನ್ನು ಬರೆದಿರುವ ಆನಂದಗಿರಿ ಎಂಬಾತನು ತಾನು ಗೌಡಪಾದೀಯಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವರಾಗಿ (ಪು. ೧) ಹೇಳಿಕೊಂಡಿರುತ್ತಾನೆ. ಮಾಂಡೂಕ್ಯವು ಶ್ರುತಿಯೆಂದೂ (ಪು. ೪, ೮), ಪ್ರಕರಣಚತುಷ್ಟಯವು ನಾರಾಯಣಪ್ರಸಾದದಿಂದ ಗೌಡಪಾದಾಚಾರ್ಯರು ಸಂಪಾದಿಸಿದ ವಿದ್ಯೆಯ ಫಲವೆಂದೂ (ಪು. ೨, ೧೫೭)[2] ಹೇಳಿರುತ್ತಾನೆ. ಈ ಸಾಂಪ್ರದಾಯಿಕಕಥೆಯು ಆನಂದಗಿರಿಗಿಂತ ಪೂರ್ವದಲ್ಲಿಯೇ ಇದ್ದಿರಬೇಕೆಂಬುದು ಸ್ಪಷ್ಟವಾಗಿರುತ್ತದೆ. ಹೀಗಿದ್ದರೂ ವ್ಯಾಲೆಸನ್ (Wallesen) ಎಂಬಾತನು ಅಲಾತ

1. ಗದ್ಯವೂ ಆಗಮಪ್ರಕರಣವೂ ಉಪನಿಷತ್ತೇ ಎಂಬವರೂ ಇಲ್ಲಿ ಉದಾಹರಿಸಿರುವ ಶ್ಲೋಕಗಳು ಪತಕ್ಕೆ ಇಷ್ಟು ವಿವರವಾಗಿವೆ ಎಂಬುದಕ್ಕೆ ಕಾರಣವನ್ನು ಕೊಡುವದಕ್ಕೆ ಆಗುವಂತಿಲ್ಲ. ಏಕೆಂದರೆ ಉಪನಿಷತ್ತುಗಳ ಪದ್ಧತಿಯು ಇದಕ್ಕೆ ವಿಪರೀತವಾಗಿರುತ್ತದೆ.

2. ಇಲ್ಲಿ ತೋರಿಸಿರುವ ಪುಟಸಂಖ್ಯೆಗಳು ಪೂನಾದಲ್ಲಿ ಆನಂದಾಶ್ರಮ ಮುದ್ರಣಾಲಯದಲ್ಲಿ ಅಚ್ಚಾಗಿರುವ ಮಾಂಡೂಕ್ಯಭಾಷ್ಯಪುಸ್ತಕದವುಗಳು.

ಶಾಂತಿಪ್ರಕರಣದಲ್ಲಿ ಭಾವವಿವೇಕನೆಂಬ ಬೌದ್ಧನು ಬರೆದ ತರ್ಕಜ್ವಾಲಾ ಎಂಬ ಗ್ರಂಥದಲ್ಲಿ ಕಾಣುವ ಶ್ಲೋಕಗಳ ಛಾಯೆಯುಳ್ಳ ಹಲವು ಶ್ಲೋಕಗಳಿರುವದರಿಂದ ಗೌಡಪಾದನೆಂಬ ಹೆಸರಿನ ಒಬ್ಬ ಗ್ರಂಥಕರ್ತನಿದ್ದನೆಂಬುದೇ ಸಂಶಯಗ್ರಸ್ತವೆಂದು ಅಭಿಪ್ರಾಯಪಟ್ಟಿರುತ್ತಾನೆ. ಪ್ರೊಫೆಸರ್ ದಾಸಗುಪ್ತರವರು ಗೌಡಪಾದರಿಗೆ ಬೌದ್ಧರ ಪ್ರಕ್ರಿಯೆಯಲ್ಲಿ ಸಹಾನುಭೂತಿಯಿತ್ತೆಂದು ಅಭಿಪ್ರಾಯಪಟ್ಟಿರುವದನ್ನು ಆಗಲೆ ತಿಳಿಸಿರುತ್ತೇವೆ. ಸುರೇಶ್ವರರೇ ಮುಂತಾದವರು ಕಾರಿಕೆಗಳು ಗೌಡಪಾದರ ಕೃತಿಯೇ ಎಂದು ಸ್ಪಷ್ಟವಾಗಿ ಹೇಳಿರುವದನ್ನು ಕಡೆಗಣಿಸುವದಕ್ಕೆ ಈ ಆಧುನಿಕವಿದ್ವಾಂಸರಿಗೆ ಯಾವ ಆಧಾರವಿದೆಯೋ ನಮಗೆ ತಿಳಿಯದು. ಶಂಕರಾಚಾರ್ಯರು ತಮ್ಮ ಭಾಷ್ಯದ ಕೊನೆಯಲ್ಲಿ ತಮ್ಮ 'ಪರಮಗುರು'ಗಳನ್ನು ಸ್ಮರಿಸಿರುವದನ್ನು ನಾವು ಅಲಕ್ಷಿಸುವಂತಿಲ್ಲ. ಕಾರಿಕಾಕಾರರಿಗೆ ಗೌಡಪಾದರೆಂಬ ಹೆಸರಿತ್ತೋ ಇಲ್ಲವೋ ಎಂಬ ಸಂಶಯವುಂಟಾದರೂ ಆಗಬಹುದು ; ಏಕೆಂದರೆ ಅವರು ಗೌಡದೇಶದವರೆಂಬ ಕಾರಣದಿಂದಲೂ ಗೌಡಪಾದರೆಂಬ ಹೆಸರು ಪ್ರಸಿದ್ಧವಾಗಿರುವದಕ್ಕೆ ಸಾಕು. ಆದರೆ ಕಾರಕಾಕಾರರ ಮತಕ್ಕೂ ಬೌದ್ಧರ ಸಿದ್ಧಾಂತಕ್ಕೂ ಇರುವ ತಾರತಮ್ಯವು ಮಾತ್ರ ಅಸಡ್ಡೆಮಾಡುವಷ್ಟು ಅಸ್ಪುಟವಾಗಿಲ್ಲ. ಅಲಾತಶಾಂತಿಪ್ರಕರಣದಲ್ಲಿ ಗೌಡಪಾದರವರು ಬೌದ್ಧರ ಯುಕ್ತಿಗಳನ್ನೇ ಬಹಳವಾಗಿ ಉಪಯೋಗಿಸಿಕೊಂಡು ಮಿಕ್ಕವರ ಮತಗಳನ್ನು ಖಂಡಿಸಿರುವದರಿಂದಲೂ ಬೌದ್ಧಗ್ರಂಥಗಳಲ್ಲಿರುವ ಹಲವು ಪಾರಿಭಾಷಿಕಶಬ್ದಗಳನ್ನು ಉಪಯೋಗಿಸಿರುವದರಿಂದಲೂ ನಮ್ಮ ದೇಶದಲ್ಲಿಯೂ ಕೆಲವರು ಅವಿವೇಕಿಗಳು ಕಾರಿಕಾಕಾರರನ್ನು ಪ್ರಚ್ಛನ್ನ ಬೌದ್ಧರು ಎಂದು ಕರೆದಿರುತ್ತಾರೆ. ಆದ್ದರಿಂದ ಮಾಂಡೂಕ್ಯಕಾರಿಕೆಯ ಪ್ರಕ್ರಿಯೆಯಲ್ಲಿ ಬೌದ್ಧಮತದ ಸಾಂಕರ್ಯವಿದೆ ಎಂಬ ಶಂಕೆಯನ್ನು ತೊಲಗಿಸಿ ತತ್ತ್ವ ಜಿಜ್ಞಾಸುಗಳಿಗೆ ವೇದಾಂತದ ಅಸಾಧಾರಣಪ್ರಕ್ರಿಯೆಯನ್ನು ಮನಗಾಣಿಸುವದಕ್ಕಾಗಿ ಇಲ್ಲಿ ಇಡಿಯ ಗ್ರಂಥದ ವಿಷಯವನ್ನು ವಿಭಾಗಮಾಡಿ ಸಂಗ್ರಹವಾಗಿ ತಿಳಿಸುವೆವು.

## ಆಗಮಪ್ರಕರಣ

ಮಾಂಡೂಕ್ಯೋಪನಿಷತ್ತನ್ನು ವಿವರಿಸುವದಕ್ಕಾಗಿ ಸಾಂಪ್ರದಾಯಿಕಕ್ರಮವನ್ನನುಸರಿಸಿರುವದರಿಂದ ಈ ಪ್ರಕರಣಕ್ಕೆ ಈ ಹೆಸರು ಬಂದಿರುತ್ತದೆ. ಈ ಪ್ರಕರಣದಲ್ಲಿ ಅವಸ್ಥಾತ್ರಯದ ನಿರೂಪಣೆಯಿದೆ. ಎಚ್ಚರದ ಆತ್ಮನು ವಿಶ್ವನು, ಎಂದರೆ ಇಡಿಯ ಸ್ಥೂಲ ಪ್ರಪಂಚವನ್ನೇ ಉಪಾಧಿಯಾಗುಳ್ಳ ಆತ್ಮನು ; ಕನಸಿನ ಆತ್ಮನು ತೈಜಸನು ಅಥವಾ ಹಿರಣ್ಯಗರ್ಭನು, ಇಡಿಯ ಸೂಕ್ಷ್ಮಪ್ರಪಂಚವನ್ನೇ ಉಪಾಧಿಯಾಗುಳ್ಳವನು ;

ತನಿನಿದ್ರೆಯ ಆತ್ಮನು ಪ್ರಾಜ್ಞನು ಅಥವಾ ಅವ್ಯಾಕೃತನು, ಜಗತ್ತಿಗೆಲ್ಲ ಕಾರಣನಾಗಿರುವಾತನು. ಹೀಗೆ ಒಬ್ಬ ಆತ್ಮನೇ ಮೂರು ಬಗೆಯಾಗಿ ತೋರುತ್ತಾನೆ (೧-೧). ಈ ಅವಸ್ಥೆಗಳಲ್ಲಿ ಒಂದೊಂದರಲ್ಲಿಯೂ ಜ್ಞೇಯರಾಶಿಯೆಲ್ಲ ಅಡಗಿರುವದರಿಂದ ಈ ವಿಶ್ವಾದಿಗಳು ಆತ್ಮನ ಒಂದೊಂದು ಪಾದವೆನಿಸಿರುವರು. ಆದರೆ ಆತ್ಮನ ಪರಮಾರ್ಥ ರೂಪವು ಈ ಮೂರಕ್ಕಿಂತಲೂ ಅತ್ಯಂತವಿಲಕ್ಷಣವಾಗಿರುತ್ತದೆ (೧-೧೦ ರಿಂದ ೧೫). ಈ ಮೂರೂ ಆತ್ಮನಲ್ಲಿ ಅನಾದಿಮಾಯೆಯಿಂದ ತೋರುತ್ತಿರುವ ಅಸತ್ಯವಾದ ರೂಪಗಳು ; ಅವು ನಿಜವಾಗಿರುವದಿಲ್ಲ (೧-೧೬). ಈ ಆತ್ಮತತ್ತ್ವವು ವಾಚ್ಯವಾಚಕಭಾವರಹಿತವಾಗಿರುವದರಿಂದ ಇದನ್ನು ಓಂಕಾರವೆಂದೂ ಆತ್ಮನೆಂದೂ ಕರೆಯುವರು. ಈ ಓಂಕಾರವು ಅಥವಾ ಆತ್ಮನು ಪ್ರಪಂಚೋಪಶಮನಾದ ಶಿವನೇ (೧-೨೪ ರಿಂದ ೨೯) ಎಂಬುದು ಆಗಮಪ್ರಕರಣದ ಸಾರವು. ಇಲ್ಲಿರುವ ಅವಸ್ಥಾತ್ರಯಪ್ರಕ್ರಿಯೆಯನ್ನೇ ಅಲಾತಶಾಂತಿ ಪ್ರಕರಣದಲ್ಲಿ (೪-೪೭ ರಿಂದ ೯೦) ಉಪಸಂಹಾರ ಮಾಡಿರುವದರಿಂದ ಈ ಎರಡು ಪ್ರಕರಣಗಳಿಗೂ ಪ್ರತಿಪಾದ್ಯವಿಷಯವು ಒಂದೇ ಎಂದು ಸಿದ್ಧವಾಗುತ್ತದೆ. ಅವಸ್ಥಾತ್ರಯಗಳ ಮೂಲಕ ಆತ್ಮವಾದವನ್ನು ಸ್ಥಾಪಿಸುವ ಈ ಪ್ರಕ್ರಿಯೆಯು ಬೌದ್ಧರಿಗೆ ಸ್ವಲ್ಪವೂ ಒಪ್ಪಿಲ್ಲ.

## ವೈತಥ್ಯಪ್ರಕರಣ

ಎಚ್ಚರಕನಸುಗಳೆಂಬ ಅವಸ್ಥೆಗಳೆರಡೂ ಎಲ್ಲಾ ಬಗೆಯಿಂದಲೂ ಸಮಾನವಾಗಿರುವವೆಂದು ಸಾಧಿಸಿದ ಬಳಿಕ (೨-೧ ರಿಂದ ೧೦) ಆತ್ಮನಲ್ಲಿಯೇ ದ್ವೈತವೆಲ್ಲವೂ ಕಲ್ಪಿತವಾಗಿರುವದೆಂದು (೨-೧೧ ರಿಂದ ೩೮) ತೋರಿಸಿಕೊಟ್ಟಿರುತ್ತದೆ. ಆತ್ಮನು ಪ್ರಪಂಚಾಧ್ಯಾಸಕ್ಕೆ ಅಧಿಷ್ಠಾನವೆಂಬ ಈ ವಾದವೂ ಬೌದ್ಧರ ನೈರಾತ್ಮ್ಯವಾದಕ್ಕೆ ವಿರುದ್ಧವಾಗಿರುತ್ತದೆ.

## ಅದ್ವೈತಪ್ರಕರಣ

ಈ ಪ್ರಕರಣದಲ್ಲಿ ಬ್ರಹ್ಮವು ಚೇತನಾಚೇತನರೂಪವಾಗಿ ಜನಿಸಿರುವದೆಂದೂ ಜೀವರು ಉಪಾಸನೆಯಿಂದ ಬ್ರಹ್ಮಸ್ವರೂಪವನ್ನು ಪಡೆಯುವರೆಂದೂ ವಾದಿಸುತ್ತಿದ್ದವರ ಜಾತಬ್ರಹ್ಮವಾದವನ್ನು ಖಂಡಿಸಿ ಶ್ರುತಿಯಲ್ಲಿ ಹೇಳಿರುವ ಸೃಷ್ಟಿಯು ಜೀವಪರಮಾತ್ಮರ ಐಕ್ಯವನ್ನು ತಿಳಿಸುವದಕ್ಕೆ ಉಪಾಯಮಾತ್ರವು ಎಂದು ಸಾಧಿಸಿರುತ್ತದೆ. (೩-೧ ರಿಂದ ೨೭). ಬ್ರಹ್ಮವು ಮಾಯೆಯಿಂದ ಜಗದ್ರೂಪವಾಗಿ ಹುಟ್ಟಿಬಹುದು ; ಆದರೆ ಅಸತ್ತು ನಿಜವಾಗಿಯಾಗಲಿ ಮಾಯೆಯಿಂದಲಾಗಲಿ ಹುಟ್ಟಲೇ ಆರದು ಎಂದು ಸತ್ಕಾರ್ಯ

ರೂಪವಾದ ಸ್ವಮತವನ್ನು ಸ್ಪಷ್ಟಪಡಿಸಿದೆ (೩-೨೭, ೨೮). ಆತ್ಮನೇ ಸತ್ಯನೆಂಬುದನ್ನು ಅರಿತರೆ ಮನಸ್ಸು ಅಮನಸ್ಕಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ (೩-೨೯ ರಿಂದ ೩೯). ಮನೋನಿಗ್ರಹದಿಂದಲೂ ಈ ತತ್ತ್ವವನ್ನು ಮಧ್ಯಮಾಧಿಕಾರಿಗಳು ಕಂಡು ಕೊಳ್ಳಬಹುದೆಂದು ಉಪದೇಶಿಸಿದೆ (೩-೪೦ ರಿಂದ ೪೬). ಹೀಗೆ ಶ್ರುತ್ಯರ್ಥವನ್ನು ವಿಚಾರಮಾಡಿ ಯುಕ್ತಿಯಿಂದ ಅದ್ವೈತವನ್ನು ಸ್ಥಾಪಿಸುವ, ಮತ್ತು ಅಸತ್ಕಾರ್ಯ ವಾದವನ್ನು ಸ್ಪಷ್ಟೋಕ್ತಿಯಿಂದ ತಿರಸ್ಕರಿಸಿ ಸದ್ವಿವರ್ತವಾದವನ್ನು ಅಂಗೀಕರಿಸುವ, ಈ ಪ್ರಕರಣವು ಯಾವ ಬೌದ್ಧನಿಗೂ ಒಪ್ಪಾಗಲಾರದು.

## ಅಲಾತಶಾಂತಿಪ್ರಕರಣ

ಈ ಪ್ರಕರಣದಲ್ಲಿ ಜ್ಞಾತೃಜ್ಞೇಯಜ್ಞಾನಗಳ ಅಭೇದವನ್ನು ಉಪಕ್ರಮ ದಲ್ಲಿಯೂ, ಉಪಸಂಹಾರದಲ್ಲಿಯೂ (೪-೧, ೪-೯೯) ಮಂಗಳರೂಪವಾಗಿ ಹೇಳಿರುತ್ತದೆ. ದ್ವೈತಿಗಳು ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಿಸುತ್ತಿರುವದರಿಂದಲೂ ಅವರಲ್ಲಿ ಯಾರೊಬ್ಬರ ಯುಕ್ತಿಯನ್ನೂ ಪ್ರತಿಪಕ್ಷದವರು ಒಪ್ಪುವ ಹಾಗಿರುವದಿಲ್ಲ ವಾದ್ದರಿಂದಲೂ ದ್ವೈತದರ್ಶನಗಳು ಮಿಥ್ಯೆ. ಪರಮಾರ್ಥವನ್ನು ಹೇಳುವ ಅದ್ವೈತ ದರ್ಶನವು ಯಾವದಕ್ಕೂ ವಿರುದ್ಧವಲ್ಲ (೩-೧೭, ೧೮) ಎಂದು ಅದ್ವೈತಪ್ರಕರಣದಲ್ಲಿ ಸೂತ್ರರೂಪವಾಗಿ ಹೇಳಿರುವದನ್ನು ಇಲ್ಲಿ ವಿಸ್ತಾರವಾಗಿ ವರ್ಣಿಸಿ ಅಜಾತಿವಾದವನ್ನು ಸ್ಥಾಪಿಸಿರುತ್ತದೆ (೪-೨ ರಿಂದ ೨೩). ಹೊರಗಿನ ವಿಷಯವು ಸತ್ಯವೆಂದು ಒಪ್ಪುವ ವೈಭಾಷಿಕಸೌತ್ರಾಂತಿಕರ ಮತವನ್ನು ಒಳಗಿನ ವಿಜ್ಞಾನವನ್ನು ಮಾತ್ರ ಒಪ್ಪುವ ವಿಜ್ಞಾನವಾದಿಗಳ ದೃಷ್ಟಿಯಿಂದ ಖಂಡಿಸಿ (೪-೨೪ ರಿಂದ ೨೭) ಅದೇ ಯುಕ್ತಿಯಿಂದ ವಿಜ್ಞಾನವಾದವನ್ನೂ ಖಂಡಿಸಿ (೪-೨೮) ಅಜಾತಿವಾದವನ್ನು ವಿಸ್ತಾರವಾಗಿ ಪ್ರತಿಪಾದಿಸಿರುತ್ತದೆ (೪-೨೯ ರಿಂದ ಮುಂದಕ್ಕೆ). ಅವಿದ್ಯಾದಿಗಳು ಒಂದರಿಂದ ಒಂದು ಹುಟ್ಟುವವೆಂಬ ಬೌದ್ಧರ ಪ್ರತೀತ್ಯಸಮುತ್ಪಾದಕ್ಕೂ ಅದ್ವಿತೀಯಾತ್ಮನಿಗೆ ಹುಟ್ಟೆಂಬುದೇ ಪರಮಾರ್ಥವಾಗಿಲ್ಲ ಎಂಬ ಅಜಾತಿವಾದಕ್ಕೂ ಯಾವ ಸಂಬಂಧ ವನ್ನೂ ಹೇಳುವದಕ್ಕೆ ಯಾರಿಂದಲೂ ಆಗಲಾರದು.

ಮಾಂಡೂಕ್ಯಕಾರಿಕೆಗೂ ಬೌದ್ಧಗ್ರಂಥಗಳಿಗೂ ಪ್ರಕ್ರಿಯಾಸಾಮ್ಯವನ್ನು ಕಂಡಿ ರುವ ಈಗಿನ ವಿಮರ್ಶಕರು ಕಾರಿಕೆಗೆ ಶಂಕರಾಚಾರ್ಯರು ಬರೆದಿರುವ ವ್ಯಾಖ್ಯಾನ ವನ್ನು ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲ. ಭಾಷ್ಯಕಾರರು ತಿಳಿದೋ ತಿಳಿಯದೆಯೋ ಕಾರಿಕೆಗೆ ಬೇರೊಂದು ತೆರನಾದ ಅರ್ಥವನ್ನೇಕೆ ಮಾಡಿರಬಾರದು ?-ಎಂದು ಯುಕ್ತಿ ಪ್ರಧಾನರಾದವರು ಶಂಕಿಸಬಹುದಷ್ಟೆ. ಅಂಥವರ ಶಂಕೆಯ ತೊಲಗಿಸುವದಕ್ಕಾಗಿ

ನಾವು ಭಾಷ್ಯವನ್ನು ಬಿಟ್ಟು ಬರಿಯ ಗೌಡಪಾದಕಾರಿಕೆಯ ವಿಮರ್ಶೆಯಿಂದಲೇ ಕಾರಿಕೆಗೂ ಬೌದ್ಧರ ಗ್ರಂಥಗಳಲ್ಲಿರುವ ಪ್ರಕ್ರಿಯೆಗೂ ಯಾವ ಸಂಬಂಧವೂ ಇಲ್ಲವೆಂದು ಮೇಲೆ ತೋರಿಸಿಕೊಟ್ಟಿರುತ್ತೇವೆ. ಭಾಷ್ಯಕಾರರ ಅಭಿಪ್ರಾಯವನ್ನು ಮನದಂದರಂತೂ ಕಾರಿಕೆಯು ವೇದಾಂತಪ್ರಸ್ಥಾನತ್ರಯದ ಪ್ರಕ್ರಿಯೆಯನ್ನೇ ಯುಕ್ತಿಯಿಂದಲೂ ಸಾಧಿಸಿರುತ್ತದೆ-ಎಂಬುದು ಸುಸ್ಪಷ್ಟವಾಗಿರುತ್ತದೆ. ಮಾಂಡೂಕ್ಯಕಾರಿಕೆಗಳಿಗೂ ಬೌದ್ಧಗ್ರಂಥಗಳಿಗೂ ಕೆಲಕೆಲವು ಕಡೆಗಳಲ್ಲಿ ಶಬ್ದ ಸಾಮ್ಯವು ಕಂಡುಬರುವದು ನಿಜ ; ಆದರೆ ಆ ಶಬ್ದಗಳಿಗೆ ಅರ್ಥಸಾಮ್ಯವಿರುವದಿಲ್ಲ. ಬಾದರಾಯಣಸೂತ್ರದಲ್ಲಿ 'ಪ್ರಧಾನ', 'ಪ್ರತ್ಯಕ್ಷ', 'ಅನುಮಾನ' ಮುಂತಾದ ದರ್ಶನಾಂತರದ ಪಾರಿಭಾಷಿಕಶಬ್ದಗಳನ್ನು ವೇದಾಂತಕ್ಕೆ ಒಪ್ಪಾದ ರೀತಿಯಿಂದ ಪ್ರಯೋಗಿಸಿರುವಂತೆ ಗೌಡಪಾದರೂ ಬೌದ್ಧರ ಶಬ್ದಗಳನ್ನು ವೇದಾಂತಕ್ಕೆ ಅನುಗುಣವಾದ ಬೇರೆಯ ಅರ್ಥದಲ್ಲಿಯೇ ಉಪಯೋಗಿಸಿರುತ್ತಾರೆ. ಕುತೂಹಲಿಗಳಾದ ವಾಚಕರ ಸಲುವಾಗಿ ಇಂಥ ಶಬ್ದಗಳನ್ನೂ ವಾಕ್ಯಗಳನ್ನೂ ಪರಿಶಿಷ್ಟದಲ್ಲಿ ಕೊಟ್ಟು ಈ ಅರ್ಥಭೇದವನ್ನು ತೋರಿಸಿರುತ್ತೇವೆ. ಈ ಪ್ರಕರಣದಲ್ಲಿ ಬೌದ್ಧರ ಯುಕ್ತಿಗಳಿಂದ ಮಿಕ್ಕ ವಾದಿಗಳ ಮತವನ್ನು ಖಂಡಿಸಿ ಬೌದ್ಧರನ್ನೂ ಆ ಯುಕ್ತಿಗೇ ಸಿಕ್ಕಿಸಿಕೊಂಡು ಖಂಡಿಸಿರುವದರಿಂದ ಈ ಸಂದರ್ಭದಲ್ಲಿ ಬೌದ್ಧರ ಯುಕ್ತಿಗಳೂ ಕೆಲವು ಕಾಣಬರುವದು ಸೋಜಿಗವಲ್ಲ. ಅಶ್ವಘೋಷ, ನಾಗಾರ್ಜುನ-ಮುಂತಾದ ಬೌದ್ಧರು ಗೌಡಪಾದರಿಗಿಂತ ಹಿಂದಿನವರೋ ಈಚಿನವರೋ ಎಂಬ ವಾದಗ್ರಸ್ತವಿಷಯವನ್ನು ನಾವು ಇಲ್ಲಿ ಚರ್ಚಿಸಬೇಕಾದದ್ದಿಲ್ಲ. ಗೌಡಪಾದರೇ ಆ ಬೌದ್ಧರಿಗಿಂತ ಈಚಿನವರೆಂದು ಹೇಳುವವರೂ ಮೇಲೆ ಹೇಳಿದ ಅಭಿಪ್ರಾಯಕ್ಕೆ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ಏಕೆಂದರೆ ಪ್ರತಿಪಕ್ಷವನ್ನು ಖಂಡಿಸುವಾಗ ಅವರವರ ಪರಿಭಾಷೆಗಳನ್ನೂ ಯುಕ್ತಿಗಳನ್ನೂ ಬಳಸಿದ ಮಾತ್ರದಿಂದಲೇ ಆ ಪ್ರತಿಪಕ್ಷವನ್ನು ಒಪ್ಪಿದ ಹಾಗಾಗುವದೆಂದು ಯಾರೂ ಹೇಳುವದಕ್ಕೆ ಬರುವದಿಲ್ಲ.

## ಅಲಾತಶಾಂತಿಪ್ರಕರಣವು ಒಂದು ಸ್ವತಂತ್ರ ಗ್ರಂಥವೆ ?

ಈ ಪ್ರಕರಣದಲ್ಲಿ ಮೊದಲೂ ಕೊನೆಯಲ್ಲಿಯೂ ಮಂಗಲಶ್ಲೋಕಗಳಿರುವದು, ಬೌದ್ಧರ ವಚನಗಳನ್ನೂ ಯುಕ್ತಿಗಳನ್ನೂ ಹೇರಳವಾಗಿ ಉಪಯೋಗಿಸಿರುವದು-ಇಷ್ಟು ಮಾತ್ರದಿಂದ ಇದು ಹಿಂದಿನ ಮೂರುಪ್ರಕರಣಗಳಿಗೆ ಸಂಬಂಧವಿಲ್ಲದ ಒಂದು ಬೇರೆಯ ಗ್ರಂಥವೆಂದು ಕೆಲವರು ಊಹಿಸಿದ್ದಾರೆ. ಈ ವಾದದ ಪೊಳ್ಳುತನವೂ ಮೇಲೆ ಹೇಳಿರುವ ಯುಕ್ತಿಗಳಿಂದಲೇ ಸ್ಪಷ್ಟವಾಗುತ್ತದೆ. ಶಂಕರಾಚಾರ್ಯರವರು ಈ ಪ್ರಕರಣವನ್ನು 'ಶಾಸ್ತ್ರ'ವೆಂದು ಕರೆದಿರುತ್ತಾರೆ (೪-೧ ; ೪-೧೦೦). ಆದರೆ ಅಷ್ಟು ಮಾತ್ರದಿಂದ ಇದು

ಬೇರೊಂದು ಗ್ರಂಥವೆಂದು ಹೇಳಲಾಗುವದಿಲ್ಲ ; ಹಾಗೆ ಹೇಳಿದರೆ ನಾಲ್ಕು ಪ್ರಕರಣ ಗಳಿಗೂ ಭಾಷ್ಯವನ್ನು ಬರೆಯುವದಾಗಿ ಅವರೇ ಪ್ರಾರಂಭದಲ್ಲಿ ಮಾಡಿರುವ ಪ್ರತಿಜ್ಞೆಗೆ ವಿರುದ್ಧವಾಗುತ್ತದೆ. ಆದ್ದರಿಂದ ಗೀತೆಯ ಹದಿನೈದನೆಯ ಅಧ್ಯಾಯವನ್ನು ಗೀತಾಶಾಸ್ತ್ರದ ಸಾರವೆಂಬರ್ಥದಲ್ಲಿ 'ಶಾಸ್ತ್ರ'ವೆಂದು (ಗೀ. ೧೫-೨೦) ಕರೆದಿರುವಂತೆಯೇ ಇಲ್ಲಿಯೂ ಮಾಂಡೂಕ್ಯೋಪನಿಷದ್ರೂಪವಾದ ಶಾಸ್ತ್ರದ ಸಾರವನ್ನು ತಿಳಿಸುವ ಈ ಪ್ರಕರಣವನ್ನು ಭಾಷ್ಯಕಾರರು 'ಶಾಸ್ತ್ರ'ವೆಂದು ಕರೆದಿರುತ್ತಾರೆ-ಎಂದು ಭಾವಿಸಬೇಕಾಗಿದೆ. ಮಿಕ್ಕ ಮೂರು ಪ್ರಕರಣಗಳಲ್ಲಿರುವ ಅರ್ಥವನ್ನೇ ಈ ಪ್ರಕರಣದಲ್ಲಿ ಉಪಸಂಹಾರ ಮಾಡಿರುತ್ತದೆ ಎಂಬುದನ್ನು ನಾವು ಆಗಲೇ ತಿಳಿಸಿಕೊಟ್ಟಿರುವದರಿಂದ ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸುವೆವು.

## ಬೌದ್ಧದರ್ಶನಕ್ಕೂ ಉಪನಿಷತ್ತೇ ಮೂಲವು

ಚೆನ್ನಾಗಿ ನೋಡಿದರೆ ಬೌದ್ಧಮತವು ಯುಕ್ತಿಯ ಬಲದಿಂದ ಪ್ರಸಾರವಾಗುವದಕ್ಕೂ ಉಪನಿಷತ್ತೇ ಪರಂಪರೆಯಿಂದ ಕಾರಣವಾಯಿತೆಂದು ಹೇಳಬೇಕಾಗುತ್ತದೆ. ಏಕೆಂದರೆ ಬೌದ್ಧರಲ್ಲಿ ಮೊದಮೊದಲು ಯುಕ್ತಿಪ್ರಧಾನವಾದ ಗ್ರಂಥಗಳು ಇರಲೇ ಇಲ್ಲ ; 'ದ್ವಾದಶನಿದಾನ ಅಥವಾ ಭವಚಕ್ರ', 'ಶೀಲ', 'ಸಮಾಧಿ', 'ಪ್ರಜ್ಞಾ'-ಇವುಗಳನ್ನೇ ಅವರು ಮುಖ್ಯವಾಗಿ ಉಪದೇಶಿಸುತ್ತಿದ್ದರು. ಆತ್ಮನಿಲ್ಲವೆಂಬ ವಾದವೇ ಅವರ ಅಸಾಧಾರಣಮತ. ಆದರೂ ಕ್ರಿ. ಶ. ೧ನೆಯ ಶತಮಾನದಿಂದೀಚೆಗೆ ಪ್ರಪಂಚನಿರಾಕರಣ ಯುಕ್ತಿಯು ಅವರಲ್ಲಿ ಬಲವಾಯಿತು. ಇದಕ್ಕೆ ಕಾರಣವೇನೆಂದರೆ ಅಶ್ವಘೋಷನೆಂಬ ಬ್ರಾಹ್ಮಣನು ವಾದದಲ್ಲಿ ಜಿತನಾಗಿ ಬೌದ್ಧಮತಕ್ಕೆ ಸೇರಿದ ಬಳಿಕ ಅವನು 'ತಥಾತಾ' ಎಂಬ ಹೊಸಸಿದ್ಧಾಂತವೊಂದನ್ನು ತೆಗೆದನು. ನಮ್ಮಲ್ಲಿ ಸಂಸಾರ್ಯಂಶವೊಂದು, 'ಭೂತತಥಾತಾ' (ಇದ್ದದ್ದು ಇದ್ದಂತೆಯೇ ಇರುವದು) ಎಂಬ ಅಂಶವೊಂದು-ಹೀಗೆ ಎರಡು ಅಂಶಗಳಿರುವವೆಂದೂ ಸಂಸಾರವು ಅಸತ್ಯವೆಂದೂ 'ತಥಾತಾ' ಎಂಬುದು ಸತ್ಯವೆಂದಾಗಲಿ ಅಸತ್ಯವೆಂದಾಗಲಿ ಹೇಳುವದಕ್ಕೆ ಬಾರದ ಸ್ವರೂಪವುಳ್ಳದ್ದೆಂದೂ ಅವನು ವಾದಿಸಿದನು. ಉಪನಿಷತ್ತಿನ ಕೂಟಸ್ಥನಿರ್ವಿಶೇಷಾತ್ಮವಾದಕ್ಕೆ ಇದು ಎಷ್ಟು ಹತ್ತಿರ ವಿರುವದೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಅಶ್ವಘೋಷನ ಅನಂತರ ಅವನ ವಾದವು ಬಲಪಡಲಿಲ್ಲ. 'ಲಂಕಾವತಾರ' ವೇ ಮುಂತಾದ ಗ್ರಂಥಗಳಲ್ಲಿ 'ತಥಾಗತಗರ್ಭನ್' ಎಂಬ ನಾಮಾಂತರದಲ್ಲಿ ಇದೇ ಅಭಿಪ್ರಾಯವನ್ನು ತಿಳಿಸಿದೆಯಾದರೂ ಆತ್ಮನುಂಟೆಂದು ನಂಬುವ ಅಜ್ಞರಿಗಾಗಿ ಈ ವಾದವನ್ನು ಮೊದಲನೆಯ ಭೂಮಿಕೆಯಾಗಿ ಉಪದೇಶಿಸಿದೆಯೆಂದೂ ಇದು ಪರಮಾರ್ಥವಲ್ಲವೆಂದೂ ಅಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿದೆ. ಇದು

ಹಾಗಿರಲಿ. ಅಶ್ವಘೋಷನ ತರುವಾಯ ಬಂದ ವಾದಿಗಳೆಲ್ಲರೂ ಪ್ರಪಂಚನಿರಾಕರಣ ವಾದವನ್ನು ಬೆಳೆಯಿಸುತ್ತಾ ಹೋದರು. ನಾಗಾರ್ಜುನ, ಚಂದ್ರಕೀರ್ತಿ ಮೊದಲಾದವರು ಹೊಸಯುಕ್ತಿಗಳನ್ನು ಜೋಡಿಸಿ ಈ ವಾದಕ್ಕೆ ಬಲವನ್ನು ಕೊಟ್ಟರು. ಅಂತೂ ಉಪನಿಷತ್ತಿ ನಲ್ಲಿದ್ದ ಬ್ರಹ್ಮಸತ್ಯತ್ವವಾದ, ಜಗನ್ಮಿಥ್ಯಾತ್ವವಾದ-ಎಂಬ ಎರಡು ವಾದಗಳಲ್ಲಿ ಎರಡನೆ ಯದು ಬೌದ್ಧರಮೂಲಕವಾಗಿ ಪಕ್ವವಾಯಿತು. ಅವರು ಉಪನಿಷತ್ಪ್ರಮಾಣವನ್ನು ಇಟ್ಟು ಕೊಳ್ಳಲಿಲ್ಲವಾದ್ದರಿಂದ ಬ್ರಹ್ಮಸತ್ಯತ್ವವನ್ನು ಪ್ರತಿಪಾದಿಸುವ ಪ್ರಧಾನವಾದಕ್ಕೆ ಅವರಲ್ಲಿ ಇಂಬು ದೊರೆಯದೆ ಹೋಯಿತು.

ಬೌದ್ಧರು ಪ್ರಪಂಚನಿರಾಕರಣವಾದದಲ್ಲಿ ನಿಪುಣರು. ಜಗತ್ತು ಸತ್ಯವೆಂದು ನಮ್ಮ ಅನುಭವದಲ್ಲಿರುವಾಗ ಅದನ್ನು ಇಲ್ಲವೆನ್ನಬಹುದೆ ? - ಎಂಬ ಶಂಕೆಗೆ ಜಡರು ಅನುಭವದಲ್ಲಿದೆ ಎನ್ನುವ ಜಗತ್ತಿನ ವಿಷಯಕ್ಕೆ ಬಗೆಬಗೆಯ ವಿಕಲ್ಪಗಳನ್ನು ಹಾಕಿ ಯಾವದೊಂದು ವಿಕಲ್ಪವೂ ತರ್ಕದ ಹೊಡೆತಕ್ಕೆ ನಿಲ್ಲುವಂತಿಲ್ಲವೆಂದು ತೋರಿಸಿ ಕೊಡುವದೇ ಬೌದ್ಧರ ಮುಖ್ಯಯುಕ್ತಿ. ಈ ಯುಕ್ತಿಯನ್ನೇ ಶ್ರೀಗೌಡಪಾದಾಚಾರ್ಯರು ಅಲಾತಶಾಂತಿಪ್ರಕರಣದಲ್ಲಿ ಉಪಯೋಗಿಸಿಕೊಂಡು ಅದರಿಂದಲೇ ಬೌದ್ಧರ ಪ್ರಕ್ರಿಯೆ ಯನ್ನೂ ನಿರಾಕರಣಮಾಡಿ ದ್ವೈತವಾದವನ್ನೆಲ್ಲ ಖಂಡಿಸಿ ವೈದಿಕತರ್ಕದ ಮಹತ್ತ್ವವನ್ನು ತೋರಿಸಿಕೊಟ್ಟಿರುತ್ತಾರೆ. ಈ ಗುಟ್ಟನ್ನರಿಯದ ವಿಮರ್ಶಕಂಮನ್ಯರು ಗೌಡಪಾದರ ವೇದಾಂತದಲ್ಲಿ ಬೌದ್ಧಮತದ ಸಾಂಕರ್ಯವಿದೆ ಎಂದು ಭ್ರಮಿಸಿರುತ್ತಾರೆ.

## ಕಾರಿಕೆಯ ಮೇಲಿನ ಶಾಂಕರಭಾಷ್ಯ

ಗೌಡಪಾದರ ಕಾರಿಕೆಯು ಬಹು ಪ್ರಾಚೀನವಾಗಿರುವದರಿಂದ ಇದರ ಒಂದು ಭಾಗವನ್ನು ಉಪನಿಷತ್ತೆಂದೂ ಇನ್ನೊಂದು ಭಾಗವನ್ನು ಬೌದ್ಧರ ಪ್ರಕರಣವೆಂದೂ ಭ್ರಮಿಸುವಂತಾಗಿದೆ ಎಂದು ಆಗಲೆ ತಿಳಿಸಿದ್ದಾಗಿದೆಯಷ್ಟೆ. ಈ ಪ್ರಕರಣಚತುಷ್ಟಯಕ್ಕೆ ಶಂಕರಾಚಾರ್ಯರ ಭಾಷ್ಯವು ಇಲ್ಲದಿದ್ದರೆ ವೇದಾಂತಿಗಳೂ ಇದರ ನಿಜವನ್ನು ತಿಳಿಯುವದು ಕಷ್ಟವಾಗುತ್ತಿತ್ತೆಂಬುದು ನಿಶ್ಚಯ. ಏಕೆಂದರೆ ಶಂಕರರಿಗಿಂತ ಕೆಲವರು ಹಿಂದಿನವರು ವಸ್ತುತಂತ್ರವಾದ ಜ್ಞಾನವನ್ನೇ ಪ್ರಧಾನವಾಗಿ ಪ್ರತಿಪಾದಿಸುವ ಈ ಗ್ರಂಥಕ್ಕೂ ಉಪಾಸನಾಪರವಾಗಿ ವ್ಯಾಖ್ಯಾನಮಾಡುತ್ತಿದ್ದರೆಂಬುದಕ್ಕೆ ನಮಗೆ ಬೃಹದಾರಣ್ಯಕಭಾಷ್ಯವಾರ್ತಿಕದಲ್ಲಿ ಆಧಾರವು ಸಿಕ್ಕುತ್ತದೆ. ಆ ವಾರ್ತಿಕದಲ್ಲಿ ವೈತಥ್ಯ ಪ್ರಕರಣದ ೩೮ನೆಯ ಶ್ಲೋಕವನ್ನೂ, ಅದ್ವೈತಪ್ರಕರಣದ ೪೬ನೆಯ ಶ್ಲೋಕವನ್ನೂ ಜ್ಞಾನಾಭ್ಯಾಸಪರವಾಗಿ ಭಾವಿಸಿ ಉದಾಹರಿಸುತ್ತಿದ್ದವರ ಮತವನ್ನು (ಬೃ. ವಾ. ೪-೪-೪೮೭, ೪೮೮) ಖಂಡಿಸಿರುತ್ತದೆ. ಕಾರಿಕೆಯಲ್ಲಿನ ವೇದಾಂತದ ವಿಷಯಕ್ಕೆ ಯಾಗಲೂ

ಅದ್ವೈತಿಗಳಲ್ಲಿಯೇ ಹಲವು ವಿಚಿತ್ರವಾದ ಮತಭೇದಗಳು ಕಂಡುಬರುತ್ತವೆ. ಈ ಕಾರಣದಿಂದ ಕಾರಿಕಾಭಾಷ್ಯದಲ್ಲಿರುವ ಕೆಲವು ಮುಖ್ಯವಿಚಾರಗಳನ್ನು ಇಲ್ಲಿ ವಾಚಕರ ಲಕ್ಷ್ಯಕ್ಕೆ ತರುವದು ಅವಶ್ಯವೆಂದು ನಮಗೆ ತೋರಿರುತ್ತದೆ. ಕಾರಿಕೆಯಲ್ಲಿ ಅಡಗಿರುವ ಸಿದ್ಧಾಂತದ ತತ್ತ್ವವನ್ನು ಅರಿತುಕೊಳ್ಳಬೇಕೆಂಬ ಜಿಜ್ಞಾಸುಗಳಿಗೆ ಇದರಿಂದ ಪ್ರಯೋಜನ ವಾಗುವದೆಂದು ನಮ್ಮ ನಂಬಿಕೆ.

## ಅದ್ವೈತವು ಶಾಸ್ತ್ರಸಿದ್ಧವೊ, ತರ್ಕಸಿದ್ಧವೊ ?

ಇಡಿಯ ಜಗತ್ತಿನ ತಿರುಳನ್ನು ವೇದಾಂತದಲ್ಲಿ ಬ್ರಹ್ಮವೆಂದು ಕರೆದಿರುತ್ತದೆ. ಬ್ರಹ್ಮವು ನಮ್ಮೆಲ್ಲರಿಗೂ ಆತ್ಮನಾಗಿರುತ್ತದೆ, ಅದು ಅದ್ವಿತೀಯವಾಗಿ ನಿರ್ವಿಶೇಷ ವಾಗಿರುತ್ತದೆ ಎಂಬುದು ವೇದಾಂತಸಿದ್ಧಾಂತವು. ಈ ಸಿದ್ಧಾಂತವು ಉಪನಿಷತ್ತು ಗಳಿಂದಲೇ ತಿಳಿಯಬರುವದೆಂದೂ ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ಅದನ್ನು ತಿಳಿಯುವದಕ್ಕೆ ಆಗುವದಿಲ್ಲವೆಂದೂ ವೇದಾಂತಿಗಳು ಹೇಳುತ್ತಾರೆ. ಬ್ರಹ್ಮವು ಉಪನಿಷದ್ರೂಪವಾದ ಶಾಸ್ತ್ರವೊಂದರಿಂದಲೇ ತಿಳಿಯಬರತಕ್ಕದ್ದೆಂದು ತಿಳಿಸುವದಕ್ಕೆ 'ಔಪನಿಷದ' ಎಂಬ ವಿಶೇಷಣವನ್ನು ಶ್ರುತಿಯಲ್ಲಿ ಉಪಯೋಗಿಸಿರುತ್ತದೆ ; 'ಶಾಸ್ತ್ರಯೋನಿ' ಎಂಬ ವಿಶೇಷಣವನ್ನು ಬ್ರಹ್ಮಸೂತ್ರದಲ್ಲಿ ಉಪಯೋಗಿಸಿರುತ್ತದೆ. ಇದೆಲ್ಲವೂ ತರ್ಕಪ್ರಧಾನರಾದ ಈಗಿನವರಿಗೆ ವಿರುದ್ಧವಾಗಿ ತೋರುತ್ತದೆ. ವೇದವನ್ನು ನಂಬುವವರಿಗೆ ಬ್ರಹ್ಮವು ಶಾಸ್ತ್ರೈಕವೇದ್ಯವಾಗಿರಬಹುದು ; ಆದರೆ ವೇದಪ್ರಾಮಾಣ್ಯ ದಲ್ಲಿ ಶ್ರದ್ಧೆಯಿಲ್ಲದ ಬೌದ್ಧರೇ ಮುಂತಾದವರು ಹಾಗೆಂದು ಒಪ್ಪಿಯಾರೆ ? ಇಲ್ಲ. ಈ ಕಾರಣದಿಂದ ಗೌಡಪಾದರು ವೇದಪ್ರಾಮಾಣ್ಯವನ್ನು ಓಡಿದು ಆಗಮಪ್ರಕರಣ ದಲ್ಲಿ ಪರಮಾರ್ಥವನ್ನು ತಿಳಿಸಿಕೊಟ್ಟು, ಅದನ್ನು ನಂಬದವರಿಗಾಗಿ ಮಿಕ್ಕ ಮೂರು ಪ್ರಕರಣಗಳಲ್ಲಿ ಕೇವಲ ಯುಕ್ತಿಯಿಂದಲೇ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿರುತ್ತಾರೆ, ಶಂಕರಾಚಾರ್ಯರೂ ಹಾಗೆಂದೇ ಬರೆದಿರುತ್ತಾರೆ-ಎಂಬುದು ಈ ತರ್ಕಪ್ರಿಯರ ಮತವು.

ಶಾಂಕರಭಾಷ್ಯವನ್ನು ಸರಿಯಾಗಿ ಪರಿಶೀಲಿಸದೆ ಇರುವದರಿಂದಲೂ ಪ್ರಮಾಣ ತರ್ಕಗಳ ಸ್ವಭಾವತಾರತಮ್ಯವನ್ನು ಅರಿತುಕೊಳ್ಳದೆ ಇರುವದರಿಂದಲೂ ಈ ವಿಚಿತ್ರಾ ಭಿಪ್ರಾಯವು ಹೊರಬಿದ್ದಿರುತ್ತದೆ ಎಂದು ನಮಗೆ ತೋರುತ್ತದೆ. ಏಕೆಂದರೆ ಶ್ರುತಿ ಯುಕ್ತಿಗಳೆರಡರಿಂದಲೂ ತಾವು ಅದ್ವೈತವನ್ನು ಸ್ಥಾಪಿಸಿರುವದಾಗಿ ಶಂಕರಾಚಾರ್ಯರು ಬಾಯಿಬಿಟ್ಟು ಹೇಳಿರುವ ವಚನಗಳು ಕಾರಿಕಾಭಾಷ್ಯದಲ್ಲಿ ನಾಲ್ಕು ಪ್ರಕರಣಗಳಲ್ಲಿಯೂ ಸಿಕ್ಕುತ್ತವೆ. ಹೇಗೆಂದರೆ :

(೧) ಪ್ರಥಮಂ ಪ್ರಕರಣಮ್ ಆಗಮಪ್ರಧಾನಮ್ (ಭಾ. ಭಾ. ೩).

(೨) ಆಗಮಮಾತ್ರಂ ತತ್ । ತತ್ರ ಉಪಪತ್ತ್ಯಾಪಿ ದೃಷ್ಟತಸ್ಯ ವೈತಥ್ಯಂ ಶಕ್ಯತೇ ಅವಧಾರಯಿತುಮ್ ಇತಿ ದ್ವಿತೀಯಂ ಪ್ರಕರಣಂ ಆರಭ್ಯತೇ (ಭಾ. ಭಾ. ೭೫).

(೩) ಅದೃಷ್ಟಂ ಕಿಮಾಗಮಮಾತ್ರೇಣ ಪ್ರತಿಪತ್ತವ್ಯಮ್, ಆಹೋಸ್ವಿತ್ ತರ್ಕೇಣಾಪಿ ಇತಿ ? ಅತ ಆಹ-ಶಕ್ಯತೇ ತರ್ಕೇಣಾಪಿ ಜ್ಞಾತುಮ್ । ತತ್ ಕಥಮ್ ಇತಿ ಅದೃಷ್ಟತಪ್ರಕರಣಮ್ ಆರಭ್ಯತೇ (ಭಾ. ಭಾ. ೧೨೭).

(೪) ಶಾಸ್ತ್ರೋಪಪತ್ತಿಭ್ಯಾಮ್ ಅವಧಾರಿತತ್ವಾತ್ ಅದ್ವಯಾತ್ಮದರ್ಶನಂ ಸಮ್ಯಗ್ದರ್ಶನಮ್ । ತದ್ಬಾಹ್ಯತ್ವಾತ್ ಮಿಥ್ಯಾದರ್ಶನಮ್ ಅನ್ಯತ್ (ಭಾ. ಭಾ. ೧೬೦).

(೫) ಓಙ್ಕಾರನಿರ್ಣಯದ್ವಾರೇಣ ಆಗಮತಃ ಪ್ರತಿಜ್ಞಾತಸ್ಯ ಅದೃಷ್ಟತಸ್ಯ ಬಾಹ್ಯ ವಿಷಯಭೇದವೈತಥ್ಯಾಚ್ಚ ಸಿದ್ಧಸ್ಯ, ಪುನಃ ಅದೃಷ್ಟತೇ ಶಾಸ್ತ್ರಯುಕ್ತಿಭ್ಯಾಂ ಸಾಕ್ಷಾತ್ ನಿರ್ಧಾರಿತಸ್ಯ ''ಏತತ್ತದುತ್ತಮಂ ಸತ್ಯಮ್'' (೩-೪೮) ಇತಿ ಉಪಸಂಹಾರಃ ಕೃತಃ ಅನ್ಯೇ । ತಸ್ಯೈತಸ್ಯ ಆಗಮಾರ್ಥಸ್ಯ ಅದೃಷ್ಟತದರ್ಶನಸ್ಯ ಪ್ರತಿಪಕ್ಷಭೂತಾಃ ದೃಷ್ಟಿನಃ ವೈನಾಶಿಕಾಶ್ಚ । .....(ಭಾ. ಭಾ. ೨೧೨).

ಇಲ್ಲಿ ಐದನೆಯ ವಾಕ್ಯದಲ್ಲಿ ಅದೃಷ್ಟತದರ್ಶನವು 'ಆಗಮಾರ್ಥ'ವೆಂದೇ ಉಪ ಸಂಹಾರಮಾಡಿರುವದನ್ನು ನಾವು ಲಕ್ಷ್ಯದಲ್ಲಿಡಬೇಕು ; ಏಕೆಂದರೆ ಅದೃಷ್ಟತವನ್ನು ಯುಕ್ತಿ ಯಿಂದಲೂ ಸಾಧಿಸಿದ್ದರೂ ಅದಕ್ಕೆ ಮುಖ್ಯವಾಗಿ ಆಗಮವೇ ಪ್ರಮಾಣವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆಗಮಪ್ರಕರಣದಲ್ಲಿ ಮಾತ್ರವಲ್ಲದೆ ಮಿಕ್ಕ ಮೂರು ಪ್ರಕರಣಗಳಲ್ಲಿಯೂ (೨-೩೧, ೩-೧೧, ೩-೧೨, ೪-೯೦) ಉಪನಿಷತ್ತುಗಳನ್ನು ಉದಾಹರಿಸಿರುತ್ತದೆ. ತರ್ಕಪ್ರಧಾನವಾಗಿರುವ ಆ ಪ್ರಕರಣಗಳಲ್ಲಿ ಯುಕ್ತಿಗೆ ಹೆಚ್ಚಿನ ಸ್ಥಾನವಿರುವದೆಂಬುದು ನ್ಯಾಯವಾಗಿರುತ್ತದೆ.

ಶಾಸ್ತ್ರಪ್ರಮಾಣವನ್ನು ಹಿಡಿದು ವಾದಿಸಿದರೆ ಮಿಕ್ಕ ವಾದಿಗಳಿಗೆ ಸಿದ್ಧಾಂತವು ಒಪ್ಪಾಗುವದು ಹೇಗೆ ? ಎಂದು ಆಕ್ಷೇಪಿಸಬಾರದು. ಏಕೆಂದರೆ ಶ್ರುತಿವಾಕ್ಯವನ್ನು ಪ್ರಮಾಣ ವೆಂದು ನಂಬುವ ಪ್ರಸಂಗವೇನೂ ಇಲ್ಲಿಲ್ಲ. ಕರ್ಮಕಾಂಡದಲ್ಲಿ ಈ ಪ್ರಸಕ್ತಿಯು ಬರುತ್ತದೆ ಯಾದರೂ ಜ್ಞಾನಕಾಂಡದ ವಸ್ತುಬೋಧಕವಾಕ್ಯಗಳು ವಸ್ತ್ವನುಸಾರಿಯಾದ ಜ್ಞಾನ ವನ್ನೇ ಉಂಟುಮಾಡುವದರಿಂದ ಅವನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಹಾಗಿದ್ದರೆ ತರ್ಕವೇತಕ್ಕೆ ? - ಎಂದು ಕೇಳಬಹುದು. ಪ್ರಮಾಣದಿಂದುಂಟಾಗುವ ಅನುಭವವನ್ನು ತರ್ಕದಿಂದ ಶೋಧನೆಮಾಡಿಯೇ ಒಪ್ಪಬೇಕೆಂಬುದು ನೈಯಾಯಿಕರ ತತ್ತ್ವವು. ಆದ್ದರಿಂದ ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿದುಬರುವದನ್ನು ತರ್ಕದಿಂದ ಪರೀಕ್ಷಿಸಿದ ಬಳಿಕವೇ

ಒಪ್ಪುವಂತೆ ಆಗಮಪ್ರಮಾಣದಿಂದ ತಿಳಿದುಬಂದದ್ದನ್ನೂ ತರ್ಕದಿಂದ ಶೋಧನೆಮಾಡಿ ನಿರ್ಧರಿಸಬೇಕಾದದ್ದು ಯುಕ್ತವಾಗಿದೆ. ಶಾಸ್ತ್ರವು ಬೋಧಕವು, ತರ್ಕವು ಶೋಧಕವು. ಆದ್ದರಿಂದಲೇ ಆಚಾರ್ಯರು ಆಗಮೋಪಪತ್ತಿಗಳಿಂದ ಸಿದ್ಧವಾಗುವದೇ ಕೊನೆಗೂ ನಿಲ್ಲುವ ಪರಮಾರ್ಥವೆಂದು ತಮ್ಮ ಮಿಕ್ಕ ಭಾಷ್ಯಗಳಲ್ಲಿಯೂ ಬರೆದಿರುತ್ತಾರೆ.

## ಶಾಸ್ತ್ರವು ಪರಮಾರ್ಥವನ್ನು ತಿಳಿಸುವ ಬಗೆ

ಶಾಸ್ತ್ರವು ಆತ್ಮರೂಪವಾಗಿರುವ ಬ್ರಹ್ಮವನ್ನು ಹೇಗೆ ತಿಳಿಸುತ್ತದೆ ? - ಎಂಬ ಪ್ರಶ್ನೆಗೆ ಆಚಾರ್ಯರು ಕೊಟ್ಟಿರುವ ಉತ್ತರವು ವಿಮರ್ಶನೀಯವಾಗಿರುತ್ತದೆ. ಬ್ರಹ್ಮದಲ್ಲಿ ಯಾವ ಶಬ್ದಪ್ರವೃತ್ತಿನಿಮಿತ್ತವೂ ಇಲ್ಲವಾದ್ದರಿಂದ ಅದನ್ನು ಯಾವ ಶಬ್ದದಿಂದಲೂ ತಿಳಿಸುವದಕ್ಕೆ ಆಗುವದಿಲ್ಲ (ಭಾ. ಭಾ. ೨೫). ಆದ್ದರಿಂದ ಅದರಲ್ಲಿ ತಪ್ಪು ತಿಳಿವಳಿಕೆಯಿಂದ ಕಾಣಬರುವ ಯಾವ ವಿಶೇಷವೂ ಇಲ್ಲವೆಂದು ಹೇಳುವ ಮೂಲಕವೇ ಶಾಸ್ತ್ರವು ಅದನ್ನು ತಿಳಿಸಿಕೊಡುತ್ತದೆ (ಭಾ. ಭಾ. ೩೪, ೧೧೫). ಆತ್ಮನಲ್ಲಿ ಅವಸ್ಥಾತ್ರಯನಿಮಿತ್ತದಿಂದ ಅಂತಃಪ್ರಜ್ಞತ್ವವೇ ಮುಂತಾದ ಧರ್ಮಗಳು ಕಲ್ಪಿತವಾಗಿರುವವು. ಈ ಅಧ್ಯಾರೋಪವನ್ನು ಅಲ್ಲಗಳೆಯುವದರಿಂದಲೇ ಆತ್ಮಸ್ವರೂಪವನ್ನು ತಿಳಿಸಿಕೊಡಬೇಕಾಗಿದೆ ; ಹೀಗೆ ಅಲ್ಲಗಳೆಯುವದು ಆತ್ಮನು ಅವಸ್ಥಾತೀತನೆಂದು ತಿಳಿಸುವದಕ್ಕೇ ಹೊರತು ಅವನು ತುರೀಯವೆಂಬ ಬೇರೊಂದು ಅವಸ್ಥೆಯುಳ್ಳವನೆಂದು ತಿಳಿಸುವದಕ್ಕಲ್ಲ (ಭಾ. ಭಾ. ೩೮). ಅದ್ವೈತವು ಜಿಜ್ಞಾಸುವಿನ ಆತ್ಮನೇ ಆಗಿ ಅಧ್ಯಸ್ತವಾದ ದ್ವೈತವಿಕಲ್ಪಗಳಿಗೆಲ್ಲ ಭ್ರಾಂತಿಯ ಹಾವಿಗೆ ಹಗ್ಗದಂತೆ ಆಸ್ಪದವಾಗಿರುವದರಿಂದಲೂ ಅಧ್ಯಾರೋಪಿತವಾದದ್ದನ್ನು ಅಲ್ಲಗಳೆಯುವದರಿಂದಲೇ ಅದ್ವೈತಜ್ಞಾನವು ಅವಶ್ಯವಾಗಿ ಉಂಟಾಗುತ್ತದೆ ; ಆತ್ಮಸ್ವರೂಪವು ಆರೋಪಿತವಾಗಿರುವ ವಿಕಲ್ಪಗಳಲ್ಲೆಲ್ಲ ಅನುಗತವಾಗಿರುವದರಿಂದ ಆತ್ಮಸ್ವರೂಪದ ಪ್ರತ್ಯಯವನ್ನು ಹೊಸದಾಗಿ ಉಂಟುಮಾಡಬೇಕಾದದ್ದೇನೂ ಇರುವದಿಲ್ಲ (ಭಾ. ಭಾ. ೧೧೫). ಆತ್ಮನಲ್ಲಿ ಇಂಥದ್ದೊಂದು ಧರ್ಮವಿಲ್ಲ ಎಂದು ತಿಳಿಸಿದರೆ ಅದಕ್ಕೆ ವಿರುದ್ಧವಾದ ಧರ್ಮವೊಂದು ಇದೆ ಎಂಬ ಅಭಿಪ್ರಾಯವೇನೂ ಶಾಸ್ತ್ರಕ್ಕೆ ಇರುವದಿಲ್ಲ ; ಏಕೆಂದರೆ ಆತ್ಮನಲ್ಲಿ ಯಾವ ಧರ್ಮವೂ ನಿತ್ಯವಾಗಿರುವದು ಕಂಡುಬರುವದಿಲ್ಲ (ಭಾ. ಭಾ. ೧೧೫).

ಆದ್ದರಿಂದ ಶಾಸ್ತ್ರಕ್ಕೆ ಆತ್ಮವಿಷಯದ ಅಜ್ಞಾನವನ್ನು ಕಳೆಯುವದೊಂದೇ ಕೆಲಸವು. ಯಾವ ಪ್ರಮಾಣವೇ ಆಗಲಿ, ಪ್ರಮೇಯದ ಅಜ್ಞಾನವನ್ನು ಕಳೆಯುವದೊಂದೇ ಕೆಲಸವನ್ನು ಮಾಡೀತೇ ಹೊರತು ಇದರ ಜೊತೆಗೆ ಪ್ರಮೇಯವನ್ನು ವಿಷಯೀಕರಿಸಿ ಬೆಳಗುವದೆಂಬ ಮತ್ತೊಂದು ವ್ಯಾಪಾರವೂ ಅದಕ್ಕೆ ಇರುವದೆಂದು

ತಿಳಿಯುವದು ತಪ್ಪು ; ವಿಷಯದ ತಿಳಿವಳಿಕೆಯು ಅಜ್ಞಾನನಾಶದಿಂದ ತಾನೇ ಆಗುತ್ತದೆಯಾದ್ದರಿಂದ ಅದು ಪ್ರಮಾಣಫಲವಲ್ಲ. ಆದ್ದರಿಂದ ಪರಮಾರ್ಥ ತತ್ತ್ವದ ಜ್ಞಾನವು ಆತ್ಮನಲ್ಲಿ ಆರೋಪಿತವಾಗಿರುವ ಅನರ್ಥಪ್ರಪಂಚದ ನಿವೃತ್ತಿ ಮಾತ್ರದಿಂದಲೇ ಆಗಿಬಿಡುತ್ತದೆ ; ಅದಕ್ಕಾಗಿ ಮತ್ತೆ ಸಾಕ್ಷಾತ್ಕಾರವೆಂಬ ಪ್ರಮಾಣಾಂತರವಾಗಲಿ ಪ್ರಸಂಖ್ಯಾನವೇ ಮುಂತಾದ ಸಾಧನಾಂತರವಾಗಲಿ ಬೇಕಿರುವದಿಲ್ಲ (ಭಾ. ಭಾ. ೩೯).

## ಶಾಸ್ತ್ರಜ್ಞಾನದಿಂದ ತೊಲಗುವ ಅಜ್ಞಾನ

ಅಜ್ಞಾನವು ತತ್ತ್ವವನ್ನು ತಿಳಿಯದ್ದೆಂಬ ನಿದ್ರೆ, ತಪ್ಪಾಗಿ ತಿಳಿದುಕೊಳ್ಳುವದೆಂಬ ಕನಸು-ಎಂದು ಎರಡು ಬಗೆಯಾಗಿರುತ್ತದೆ (೧-೧೫). ಅಗ್ರಹಣವು ಎಂದರೆ ತಿಳಿಯದೆ ಇರುವದು, ಅನ್ಯಥಾಗ್ರಹಣಕ್ಕೆ (ತಪ್ಪಾಗಿ ತಿಳಿಯುವದಕ್ಕೆ) ಕಾರಣವಾಗಿರುತ್ತದೆ (೧-೧೫), ಸುಷುಪ್ತಿಯಲ್ಲಿ ಕಾರಣವು ಮಾತ್ರ ಇರುತ್ತದೆ, ಎಚ್ಚರಕನಸುಗಳಲ್ಲಿ ಕಾರ್ಯಕಾರಣಗಳಿರಡೂ ಇರುತ್ತವೆ ; ಆದರೆ ಅವಸ್ಥಾರಹಿತನಾದ ತುರೀಯನಲ್ಲಿ, ಎಂದರೆ ಶುದ್ಧಾತ್ಮನಲ್ಲಿ ಇವೆರಡೂ ಇರುವದಿಲ್ಲ (೧-೧೧, ೧೪). ಈ ಎರಡೂ ಆತ್ಮನಲ್ಲಿವೆ ಎಂಬುದು ವಿಪರ್ಯಾಸವು, ಭ್ರಾಂತಿಯು (೧-೧೫)-ಎಂದು ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಸ್ಪಷ್ಟವಾಗಿ ಬರೆದಿರುತ್ತದೆ. ಆದರೂ ಇಷ್ಟು ನಿಃಸಂದಿಗ್ಧವಾಗಿರುವ ಉಕ್ತಿಗೆ ವಿರುದ್ಧವಾಗಿ ರಚಿನ ವ್ಯಾಖ್ಯಾನಕಾರರು ಕಾರಣಾಜ್ಞಾನವೆಂದರೆ 'ಮೂಲಾವಿದ್ಯೆ' ಎಂಬ ಒಂದಾನೊಂದು ಆವರಣವಿಶೇಷವೆಂದು ಕಲ್ಪಿಸಿರುತ್ತಾರೆ. ಅಗ್ರಹಣವೆಂದರೆ ತತ್ತ್ವವನ್ನು ಅರಿಯದಿರುವದು ; ಅದು ಜಾಗ್ರತ್ಸ್ವಪ್ನಗಳ ವಿಶೇಷಜ್ಞಾನಕ್ಕೆ ಕಾರಣವಾಗಿರುವದರಿಂದ ಸುಷುಪ್ತಿಯಲ್ಲಿ ಕಾರಣಾವಿದ್ಯೆ ಎನಿಸಿಕೊಳ್ಳುವದು. ತುರೀಯನೆಂಬ ಶುದ್ಧಾತ್ಮನಲ್ಲಿಯೂ ಈ ಅಗ್ರಹಣವುಂಟು ; ಆದರೆ ಅದರಿಂದ ಅನ್ಯಥಾಜ್ಞಾನವೇನೂ ಆಗುವಂತಿಲ್ಲವಾದ್ದರಿಂದ ಅದು ಕಾರಣಾವಿದ್ಯೆಯಲ್ಲ (೧-೧೩) ಎಂದು ಹೇಳಿರುವದರಿಂದ ಈ ಮೂಲಾವಿದ್ಯಾವಾದಕ್ಕೆ ಕಾರಿಕೆಯಲ್ಲಿ ಎಳ್ಳಷ್ಟೂ ಎಡೆಯಿಲ್ಲವೆಂದು ಹೇಳಬೇಕಾಗಿದೆ.

ಇನ್ನು ಜಗತ್ತಿನ ನಾಮರೂಪಗಳ ತೋರಿಕೆಗೆ ಕಾರಣವೆಂದು ಕಲ್ಪಿಸಬೇಕಾಗುವ ಅವ್ಯಾಕೃತನಾಮರೂಪಬೀಜವನ್ನೇ ಮಾಯೆಯೆಂದೂ ಮೂಲಾವಿದ್ಯೆಯೆಂದೂ ಕರೆದಿರುವದು ಕೆಲವು ವ್ಯಾಖ್ಯಾನಗಳಲ್ಲಿ ಕಂಡುಬರುತ್ತದೆ. ಆದರೆ ಭಾಷ್ಯದಲ್ಲಿ ಕಂಡುಬರುವ 'ಅವಿದ್ಯಾಕೃತನಾಮರೂಪಮಾಯಾಸ್ವರೂಪೇಣ', 'ಅವಿದ್ಯಾಕೃತಮಾಯಾಬೀಜೋತ್ಪನ್ನಾ ನಾಮ್' ಎಂಬ ವಾಕ್ಯಗಳಲ್ಲಿ (ಭಾ. ಭಾ. ೨೯) ನಾಮರೂಪಗಳ ಬೀಜವಾದ

ಮಾಯೆಯು ಅವಿದ್ಯಾಕೃತವಾಗಿರುವದೆಂದು ಹೇಳಿರುವದರಿಂದ ಮಾಯೆಯೇ ಅಧ್ಯಸ್ತ ವೆಂದೂ, ಆದ್ದರಿಂದ ಅದು ಅಧ್ಯಾಸಕ್ಕೆ ಕಾರಣವಾಗಿರುವ ಮೂಲಾವಿದ್ಯೆ ಎಂಬುದು ಭಾಷ್ಯಾನುಸಾರವಲ್ಲವೆಂದೂ, ಏರ್ಪಡುತ್ತದೆ. ಆದ್ದರಿಂದ ಹೀಗೂ ಕಾರಿಕಾಭಾಷ್ಯದಲ್ಲಿ ಮೂಲಾವಿದ್ಯಾವಾದಕ್ಕೆ ಅವಕಾಶವಿಲ್ಲವೆಂದು ನಿಶ್ಚಯವಾಗುತ್ತದೆ.

## ಅಜಾತಿವಾದ

ಆತ್ಮನು ಪರಮಾರ್ಥವಾಗಿಯೇ ಜನ್ಮಾದಿವಿಕಾರರಹಿತನಾಗಿರುತ್ತಾನೆ, ಪ್ರಪಂಚೋ ಪಶಮನಾಗಿರುತ್ತಾನೆ-ಎಂಬ ವಾದಕ್ಕೆ ಅಜಾತಿವಾದವೆಂದು ಹೆಸರು. ಮಾಂಡೂಕ್ಯ ದಲ್ಲಿ ಈ ವಾದವನ್ನೇ ತಾತ್ಪರ್ಯದಿಂದ ಹೇಳಿರುತ್ತದೆ. ಚೇತನಾಚೇತನರೂಪವಾದ ಪ್ರಪಂಚವು ಆತ್ಮನಲ್ಲಿ ನಮಗೆಲ್ಲರಿಗೂ ಕಾಣುತ್ತಿರುವದಲ್ಲ, ಇದಕ್ಕೇನು ಗತಿ ?-ಎಂಬ ಆಕ್ಷೇಪಕ್ಕೆ ನಮಗೆ ಕಾಣಿಸುತ್ತಿರುವ ಪ್ರಪಂಚವೆಲ್ಲವೂ ಕನಸಿನಂತೆ ಮಿಥ್ಯೆ ಯಾಗಿರುತ್ತದೆ (ಭಾ. ಭಾ. ೯೦, ೯೧) ; ಪರಮಾರ್ಥವಾಗಿ ಇದೆಲ್ಲವೂ ಆತ್ಮನೇ ಆಗಿರುತ್ತದೆ (ಭಾ. ಭಾ. ೧೨೬)-ಎಂಬ ಪರಿಹಾರವನ್ನು **ವೈತಥ್ಯಪ್ರಕರಣ**ದಲ್ಲಿ ಹೇಳಿರುತ್ತದೆ. ಉಪನಿಷತ್ತಿನಲ್ಲಿ ತೈಜಸನಿಗೂ ವೈಶ್ವಾನರನಂತೆಯೇ ಸಪ್ತಾಂಗಗಳೂ ಏಕೋನವಿಂಶತಿಮುಖಿಗಳೂ ಇರುವವೆಂದು ಹೇಳಿರುವದನ್ನೇ ಈ ಪ್ರಕರಣದಲ್ಲಿ ವಿಸ್ತರಿಸಿ ಹೇಳಿರುತ್ತದೆ ಎಂದು ಭಾವಿಸಬಹುದು.

ಬ್ರಹ್ಮದಿಂದ ಜೀವರು ಉತ್ಪನ್ನರಾಗಿರುವರೆಂದೂ ಉಪಾಸನೆಯಿಂದ ಅವರು ಬ್ರಹ್ಮಸಾಯುಜ್ಯವನ್ನು ಪಡೆಯುವರೆಂದೂ ಬೇರೆಯ ಶ್ರುತಿಗಳಲ್ಲಿ ಹೇಳಿರುತ್ತದೆ ಯಲ್ಲ !-ಎಂಬ ಶಂಕೆಗೆ ಸಮಾಧಾನವನ್ನು **ಅದ್ವೈತಪ್ರಕರಣ**ದಲ್ಲಿ ಹೇಳಿರುತ್ತದೆ. ಆಕಾಶವು ಗಡಿಗೆಯೇ ಮುಂತಾದ ಉಪಾಧಿಗಳಿಂದ ಹುಟ್ಟುವಹಾಗೆ ತೋರುವಂತೆಯೇ ಜೀವರೂ ಶರೀರಾದಿರೂಪವಾದ ಉಪಾಧಿಗಳ ವಶದಿಂದ ಹುಟ್ಟುವ ಹಾಗೆ ತೋರುತ್ತಾರೆ. ನಿಜವಾಗಿ ಆಕಾಶವೇ ಗಡಿಗೆ ಮುಂತಾದವುಗಳ ತಿರುಳೂ ಆಗಿರುವಂತೆ ಉಪಾಧಿಗಳೂ ಆತ್ಮನೇ (ಭಾ. ಭಾ. ೧೩೨) ಆಗಿರುತ್ತಾನೆ. ಶರೀರಾದಿಗಳು ತಮ್ಮ ರೂಪದಿಂದ ಕನಸಿನ ಶರೀರಗಳಂತೆ ಮಿಥ್ಯೆಯೇ (ಭಾ. ಭಾ. ೧೪೭) ಆಗಿರುವದರಿಂದ ಆತ್ಮನು ಅದ್ವಿತೀಯನು, ಅಜನು, ನಿಷ್ಪ್ರಪಂಚನು ಎಂಬುದಕ್ಕೆ ಯಾವ ಅಡ್ಡಿಯೂ ಇಲ್ಲ. ಶ್ರುತಿ ಗಳಲ್ಲಿ ಹೇಳಿರುವ ಸೃಷ್ಟಿಯು ಈ ಮಾಯಿಕಸೃಷ್ಟಿಯೇ. ಶ್ರುತಿಗೆ ಸೃಷ್ಟಿಯಲ್ಲಿ ಪರಮ ತಾತ್ಪರ್ಯವಿಲ್ಲ ; ಅದು ಆತ್ಮನ ಏಕತ್ವವನ್ನು ತಿಳಿದುಕೊಳ್ಳುವದಕ್ಕೆ ಉಪಾಯವೇ ಹೊರತು ದ್ವೈತವು ಸತ್ಯವೆನ್ನುವದಕ್ಕಲ್ಲ (ಭಾ. ಭಾ. ೧೫೩, ೧೫೫, ೧೫೬) ಆದ್ದ

ರಿಂದಲೇ ಶ್ರುತಿಯಲ್ಲಿ ಆತ್ಮೈಕತ್ವವನ್ನು ಹೊಗಳಿರುವದು, ನಾನಾತ್ವವನ್ನು ನಿಂದಿಸಿರುವದು, ಅಲ್ಲಗಳೆದಿರುವದು (ಭಾ. ಭಾ. ೧೫೧, ೧೭೨, ೧೭೩). ಶ್ರುತಿಯಲ್ಲಿ ಉಪಾಸನೆಯನ್ನೂ ಅದರಿಂದಾಗುವ ಬ್ರಹ್ಮಸಾಯುಜ್ಯವನ್ನೂ ಉಪದೇಶಿಸಿರುವದು ಪರಮಾರ್ಥವನ್ನು ಅರಿಯದ ಅವಿದ್ಯಾದೃಷ್ಟಿಯ ಅಧಿಕಾರಿಗಳಿಗಾಗಿ (ಭಾ. ಭಾ. ೧೫೯) ; ಆದ್ದರಿಂದ ಶ್ರುತಿಯು ತಾತ್ಪರ್ಯದಿಂದ ಹೇಳುವ ಅಜಾತಿವಾದಕ್ಕೆ ಯಾವ ಬಾಧಕವೂ ಇಲ್ಲ.

ಸಾಂಖ್ಯಿರು, ಕಾಣಾದರು, ಜೈನರು, ಬೌದ್ಧರು-ಮುಂತಾದ ವಾದಿಗಳು ಯುಕ್ತಿಯಿಂದ ಪರಮಾರ್ಥವನ್ನು ನಿರೂಪಣಮಾಡಿರುತ್ತಾರಲ್ಲ ! ಆತ್ಮನು ಅಜನೆಂದೂ ನಿಷ್ಪ್ರಪಂಚನೆಂದೂ ಹೇಳುವ ವೈದಿಕವಾದವು ಅವರ ದರ್ಶನಗಳಿಗೆ ವಿರುದ್ಧವಾಗುವದಿಲ್ಲವೆ ?-ಎಂದು ಒಂದು ಆಕ್ಷೇಪವು ಎದ್ದುಕೊಳ್ಳಬಹುದು. ಮಿಕ್ಕ ವಾದಿಗಳು ಕಾರ್ಯಕಾರಣವಾದವನ್ನು ಒಪ್ಪುತ್ತಾರೆಂಬುದು ನಿಜ. ಆದರೆ ಅವರು 'ಕಾರ್ಯವು ಕಾರಣದಿಂದ ಹೇಗೆ ಹುಟ್ಟುತ್ತದೆ ? ಕಾರ್ಯಕಾರಣಗಳ ಸ್ವರೂಪವೇನು ?'-ಎಂಬ ಬಗ್ಗೆ ಒಂದೇ ಮತದವರಾಗಿಲ್ಲ, ಒಬ್ಬರಿಗೊಬ್ಬರು ವಿರುದ್ಧವಾಗಿರುತ್ತಾರೆ. ಅವರು ಒಬ್ಬರ ಮತದಲ್ಲಿ ಒಬ್ಬರು ಹೇಳುತ್ತಿರುವ ದೋಷವು ಅಪರಿಹರಣೀಯವಾಗಿದೆ ; ಇದರಿಂದಲೇ ಅಜಾತಿವಾದವು ಸರಿ ಎಂದು ಏರ್ಪಡುತ್ತದೆ. ಆದರೆ ದ್ವೈತವೆಲ್ಲವೂ ಮಾಯಿಕವಾಗಿ ಹುಟ್ಟುತ್ತದೆಯೇ ಹೊರತು ಹುಟ್ಟಿಂಬುದು ಪರಮಾರ್ಥವಲ್ಲ ಎಂಬ ಅದ್ವೈತದರ್ಶನಕ್ಕೆ ಯಾವ ದ್ವೈತವೂ ವಿರುದ್ಧವಾಗುವಂತಿಲ್ಲ-ಎಂಬ ಪರಿಹಾರವನ್ನು ಅದ್ವೈತಪ್ರಕರಣದಲ್ಲಿ ಸಂಗ್ರಹವಾಗಿಯೂ (ಭಾ. ಭಾ. ೧೬೧-೧೬೩), ಅಲಾತಶಾಂತಿಪ್ರಕರಣದಲ್ಲಿ ವಿಸ್ತಾರವಾಗಿಯೂ (ಭಾ. ಭಾ. ೨೧೬, ೨೨೧.....) ತೋರಿಸಿರುತ್ತದೆ. ಈ ಕಾರಣಗಳಿಂದ ಅಜಾತಿವಾದವು ನಿರ್ದುಷ್ಟವಾದ ಸಿದ್ಧಾಂತವೆಂದು ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಸಿದ್ಧಾಂತಮಾಡಿರುತ್ತದೆ.

## ಪ್ರಾತಿಭಾಸಿಕವಸ್ತುಗಳ ತತ್ತ್ವ

ಅಜಾತಿವಾದದಲ್ಲಿ ಜೀವರೂ ಜಡವಸ್ತುಗಳೂ ಹುಟ್ಟಿಯೇ ಇಲ್ಲವೆಂಬುದು ಪರಮಾರ್ಥ, ಅವು ಹುಟ್ಟಿರುವದೆಂಬುದು ಮಾಯಿಕ-ಎಂದು ಕಾರಿಕೆಯಲ್ಲಿಯೂ, ಭಾಷ್ಯದಲ್ಲಿಯೂ (೧-೧೬,೧೭ ; ೨-೨ ; ೩-೧೯, ೨೪, ೨೭) ಹೇಳಿರುತ್ತಾರಷ್ಟೆ. ಈ ವಾದವನ್ನು ಸ್ಪಷ್ಟಗೊಳಿಸುವದಕ್ಕಾಗಿ ರಜ್ಜುಸರ್ಪವೇ ಮುಂತಾದ ದೃಷ್ಟಾಂತಗಳನ್ನು ಅವರು ಕೊಟ್ಟಿರುತ್ತಾರೆ. ಇಲ್ಲಿ ಮಾಯೆ ಎಂದರೆ ಮೂಲಾವಿದ್ಯೆ ಎಂಬ ಅರ್ಥವನ್ನು ಮಾಡುವ ವ್ಯಾಖ್ಯಾನಪ್ರಸ್ಥಾನವನ್ನು ಆಗಲೇ ತಿಳಿಸಿದ್ದಾಗಿದೆ. ಆ ಪ್ರಸ್ಥಾನವನ್ನು

ಅವಲಂಬಿಸಿರುವವರು ಲೋಕಸಿದ್ಧವಾಗಿರುವ ಈ ದೃಷ್ಟಾಂತಗಳನ್ನೂ ಅನಿರ್ವಚನೀಯ ಪದಾರ್ಥೋತ್ಪತ್ತಿಯೆಂಬ ಹೊಸವಾದಕ್ಕೆ ಉಪಯೋಗಿಸಿಕೊಂಡು ವಾದಗ್ರಸ್ತವಾಗಿ ಮಾಡಿಬಿಟ್ಟಿರುತ್ತಾರೆ. ಅವರು ಹೇಳುವದೇನೆಂದರೆ : ''ಹಗ್ಗದ ಹಾವು ಮುಂತಾದ ಪ್ರಾತಿಭಾಸಿಕವಸ್ತುಗಳು 'ತೂಲಾವಿದ್ಯೆ' ಅಥವಾ 'ಪಲ್ಲವಾವಿದ್ಯೆ' ಎಂದು ಕರೆಯಲ್ಪಡುವ ಅವಿದ್ಯೆಯ ಪರಿಣಾಮವಾಗಿವೆ. ಈ ದೃಷ್ಟಾಂತದಿಂದಲೇ ಪ್ರಪಂಚವು ಮಾಯಿಕವಾಗಿದೆ. ಎಂದರೆ ಮೂಲಾವಿದ್ಯಾಪರಿಣಾಮವಾಗಿದೆ ಎಂಬುದು ಸಿದ್ಧವಾಗುತ್ತದೆ.''

ಈ ಮತಕ್ಕೆ ಕಾರಿಕೆಯಲ್ಲಾಗಲಿ ಭಾಷ್ಯದಲ್ಲಾಗಲಿ ಎಳ್ಳಷ್ಟೂ ಬೆಂಬಲವಿರುವದಿಲ್ಲ. ಇದು ಅಜಾತಿವಾದಕ್ಕೆ ವಿರುದ್ಧವೂ ಆಗಿರುತ್ತದೆ. ಕಾರಿಕೆಯಲ್ಲಿ ''ಹಗ್ಗವನು ಹಗ್ಗವೆಂದು ತಿಳಿಯದ್ದರಿಂದ ಅದು ಹಾವೆಂದೂ ನೀರಿನ ಕೋಡಿ ಮುಂತಾದದ್ದೆಂದೂ ಜನರು ವಿಕಲ್ಪಿಸುವಂತೆ ಆತ್ಮನೂ ಬಗೆಬಗೆಯಾಗಿ ವಿಕಲ್ಪಿತನಾಗಿರುತ್ತಾನೆ. ಇದು ಹಾವೇ ಎಂದು ನಿಶ್ಚಯಿಸಿದಾಗ ಅದೊಂದೇ ಇರುವಂತೆ ನಿಶ್ಚಯದೃಷ್ಟಿಯಿಂದ ಆತ್ಮನೊಬ್ಬನೇ ಇರುತ್ತಾನೆ.'' (೨-೧೭, ೧೮) ಎಂದು ಬರೆದಿದೆ. ಭಾಷ್ಯದಲ್ಲಿ ''ಹಗ್ಗದಲ್ಲಿ ಭ್ರಾಂತಿ ಬುದ್ಧಿಯಿಂದ ಕಲ್ಪಿತವಾದ ಹಾವು ನಿಜವಾಗಿ ಇದ್ದುಕೊಂಡಿದ್ದು ವಿವೇಕದಿಂದ ಹೋಗುವುದಿಲ್ಲ''. (ಭಾ. ಭಾ. ೫೫) ; ''ಮನಸ್ಸಿನ ವಿಕಲ್ಪನೆಯಾಗಿರುವ ಹಗ್ಗದ ಹಾವು ಮುಂತಾದದ್ದು ಹಗ್ಗದಲ್ಲಿ ಅಡಗುವದೂ ಇಲ್ಲ, ಹುಟ್ಟುವದೂ ಇಲ್ಲ'' (ಭಾ. ಭಾ. ೧೨೩) ; ''ಆದೇ ಆಕಾಶದಿಂದ ಗಡಿಗೆಯೇ ಮುಂತಾದ ಗುಂಪುಗಳು ಹೇಗೆ ಹುಟ್ಟುವವೋ, ಹಾಗೆ ಆಕಾಶದಂತಿರುವ ಪರಮಾತ್ಮನಿಂದ ಪೃಥಿವಿಯೇ ಮುಂತಾದ ಭೂತಗಳ ಗುಂಪುಗಳೂ (ನಮ್ಮ) ಒಳಗಿನ ಕಾರ್ಯಕರಣರೂಪವಾದ (ಗುಂಪುಗಳೂ) ಹಗ್ಗದ ಹಾವಿನಂತೆ ವಿಕಲ್ಪಿತವಾಗಿ ಹುಟ್ಟುವವು'' (ಭಾ. ಭಾ. ೧೩೨) ಎಂಬ ವಾಕ್ಯಗಳಿವೆ. ಈ ವಾಕ್ಯಗಳನ್ನು ನೋಡಿದರೆ ಕಾರಿಕಾಕಾರರ ಅಥವಾ ಭಾಷ್ಯಕಾರರ ಮನದಲ್ಲಿ ಪ್ರಾತಿಭಾಸಿಕದ ಉತ್ಪತ್ತಿಯ ಕಲ್ಪನೆಯು ಒಂದಿಷ್ಟೂ ಇರಲಿಲ್ಲವೆಂದು ಖಂಡಿತವಾಗಿ ಹೇಳಬಹುದಾಗುತ್ತದೆ. ಹಗ್ಗದ ಹಾವೇ ಮುಂತಾದವುಗಳು ಹಗ್ಗವೇ ಮುಂತಾದವುಗಳಲ್ಲಿ ಕಲ್ಪನೆಯ ಕಾಲಕ್ಕೆ ತೋರಿದರೂ ಅಲ್ಲಿ ನಿಜವಾಗಿ ಹುಟ್ಟಿರುವದಿಲ್ಲ ; ಇದರಂತೆ ಆತ್ಮನಿಂದ ಜಗತ್ತು ಹುಟ್ಟಿರುವದೆಂದು ಹೇಳಿದರೂ ಅದು ಹಗ್ಗದ ಹಾವಿನಂತೆ ತೋರಿಕೆ ಎಂಬುದೇ ಶ್ರುತಿಯ ಅಭಿಪ್ರಾಯ. (೨-೩೧, ಭಾ. ಭಾ. ೧೧೮ ; ೪-೪೨. ಭಾ. ಭಾ. ೨೪೭; ೪-೪೯, ಭಾ. ಭಾ. ೨೯೭). ಆತ್ಮನು ಅಜನು ಎಂದು ಹೇಳುವದಾದರೂ ಪರಮಾರ್ಥದೃಷ್ಟಿಯಿಂದಲ್ಲ ; ಏಕೆಂದರೆ ಜನ್ಮವುಳ್ಳ ಪದಾರ್ಥಗಳವೆ ಎಂಬ ಅವಿದ್ಯಾದೃಷ್ಟಿಯನ್ನು ಇಟ್ಟುಕೊಂಡೇ ವೇದಾಂತಿಗಳು ಆತ್ಮನು ಅಜನು, ಮಿಕ್ಕ ಪದಾರ್ಥ

ಗಳಂತೆ ಜನ್ಮವುಳ್ಳವನಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಪರಮಾರ್ಥದೃಷ್ಟಿಯಲ್ಲಿ ಆತ್ಮನು ಅಜನೂ ಅಲ್ಲ, ಅವನು ಯಾವದೊಂದು ಧರ್ಮವೂ ಇಲ್ಲದ ನಿರ್ವಿಶೇಷ ಚಿನ್ಮಾತ್ರನಾಗಿರುತ್ತಾನೆ (೪-೭೪, ಭಾ. ಭಾ. ೩೨೫)- ಎಂಬುದೇ ಕಾರಿಕೆಯಲ್ಲಿಯೂ, ಭಾಷ್ಯದಲ್ಲಿಯೂ ಸಾರಿರುವ ಅಜಾತಿವಾದದ ಸಂಗ್ರಹವು.

## ಮಾಯಾವಾದದ ಮೇಲಿನ ಆಕ್ಷೇಪ

ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಪ್ರಪಂಚವು ವಿತಥ, ಮಿಥ್ಯಾ, ಮಾಯಿಕ- ಎಂದು ಹೇಳಿರುವದು ದ್ವೈತಸತ್ಯತ್ವಬುದ್ಧಿಯಲ್ಲಿ ಮುಳುಗಿರುವವರಿಗೆ ನಂಬುವದಕ್ಕೆ ಕಷ್ಟವಾಗಿರುತ್ತದೆ. ಎಲ್ಲವೂ ಮಿಥ್ಯೆ ಎಂದಾದರೆ ಮಿಥ್ಯೆಯೆಂಬುದೂ ಮಿಥ್ಯೆಯಾಗಿ- ಎಲ್ಲವೂ ಸತ್ಯವೇ ಎಂದಾಗುವದಿಲ್ಲವೆ ?-ಎಂಬ ತರ್ಕವನ್ನು ಇಂಥ ದ್ವೈತಿಗಳು ಒಡ್ಡುತ್ತಲೇ ಬಂದಿರುತ್ತಾರೆ ; ಎಲ್ಲವೂ ಮಿಥ್ಯೆಯೆಂದೊಪ್ಪಿದರೆ ತಾವು ಹೇಳುವ ದೋಷವೂ ಮಿಥ್ಯೆಯೆಂಬುದು ಅವರಿಗೆ ಏಕೆ ಹೊಳೆಯುವದಿಲ್ಲವೋ ದೇವರೇ ಬಲ್ಲನು. 'ಎಲ್ಲವೂ ಮಿಥ್ಯೆ, ಮಿಥ್ಯೆ ಎಂಬುದೂ ಮಿಥ್ಯೆ' ಎಂಬಿವು ಪರಸ್ಪರವಿರುದ್ಧವಾದ ವಿಕಲ್ಪಗಳಲ್ಲ ಎಂಬುದೂ ಅವರಿಗೆ ಅದೇಕೋ ಮನವರಿಕೆಯಾಗದೆ ಇರುತ್ತದೆ.

ಮಾಯಾವಾದದ ಮೇಲೆ ದ್ವೈತಿಗಳು ಹಾಕಿರುವ ಮತ್ತೊಂದು ಆಕ್ಷೇಪವುಂಟು. ಅದನ್ನು ಇತ್ತೀಚೆಗೆ **ಸರ್ ರಾಧಾಕೃಷ್ಣನ್‌ರವರು** ಪುಷ್ಟಿಗೊಳಿಸಿ ಹೀಗೆಂದಿರುತ್ತಾರೆ : ''ಎಲ್ಲವೂ ಮಿಥ್ಯೆ ಎಂಬ ಅಭಿಪ್ರಾಯವು ಗೌಡಪಾದರ ಗ್ರಂಥದಲ್ಲೆಲ್ಲ ಹಾಸುಹೊಕ್ಕಾಗಿರುತ್ತದೆ. ಆದರೆ ಮಿಥ್ಯೆಯಾದ ಜೀವನು ಮಿಥ್ಯೆಯಾದ ಪ್ರಪಂಚದಲ್ಲಿರುವ ಮಿಥ್ಯಾ ಬಂಧವನ್ನು ತಪ್ಪಿಸಿಕೊಂಡು ಮಿಥ್ಯಾರೂಪವಾದ ಪರಮಪುರುಷಾರ್ಥವನ್ನು ಪಡೆದು ಕೊಳ್ಳುವದಕ್ಕಾಗಿ ಸಾಧನಮಾಡುತ್ತಿರುವನೆಂದು ಹೇಳುವ ಶಾಸ್ತ್ರವು ತಾನೂ ಮಿಥ್ಯೆಯಾಗಿರ ಬಹುದು-ಎಂದು ಖಂಡನಾವ್ಯಸನಿಯೊಬ್ಬನು ಹೇಳಬಹುದು.'' ಈ ಖಂಡನೆಯು ಹೊಸದೇನೂ ಅಲ್ಲ. ಇದಕ್ಕೆ 'ಶಾಸ್ತ್ರಶಿಷ್ಯರೇ ಮುಂತಾದ ವಿಕಲ್ಪವು ಉಪದೇಶಕ್ಕಾಗಿ ಕಲ್ಪಿತವಾಗಿದೆಯೇ ಹೊರತು ಪರಮಾರ್ಥವಲ್ಲ' ಎಂದು ಗೌಡಪಾದರೂ ಭಾಷ್ಯಕಾರರೂ (ಕಾ. ೧-೧೮, ಭಾ. ಭಾ. ೫೭) ಉತ್ತರವನ್ನು ಹೇಳಿಯೂ ಇರುತ್ತಾರೆ.

ಆದರೆ ಶ್ರೀ ರಾಧಾಕೃಷ್ಣನ್‌ರವರು ಈ ಉತ್ತರವನ್ನು ಲೆಕ್ಕಿಸದೆ ತಮ್ಮದೇ ಆಗಿರುವ ಒಂದು ಸಿದ್ಧಾಂತವನ್ನು ಮಂಡಿಸಿ ಕಾರಿಕಾಭಾಷ್ಯಗಳ ಸಿದ್ಧಾಂತವನ್ನೇ ತಲೆಕೆಳಗು ಮಾಡುವ ಮತ್ತೊಂದು ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ ; ''ನಿರ್ವಿಕಾರವಾದ ಪರಮಾರ್ಥವು ತನ್ನ ಸ್ವಭಾವವನ್ನು ಮಾರ್ಪಡಿಸದೆ ಜಗದ್ರೂಪವಾಗಿ ತೋರಿಕೊಳ್ಳುವದು

ಹೇಗೆಂಬುದು ಒಂದು ಅಭೇದ್ಯರಹಸ್ಯವು ಎಂದು ಹೇಳುವ ವಾದಕ್ಕೂ ಇಡಿಯ ಪ್ರಪಂಚವೆಂಬುದು ಒಂದು ಮೃಗಮರೀಚಿಕೆ ಎಂದು ಅಲ್ಲಗಳೆಯುವ ವಾದಕ್ಕೂ ಬಹಳ ತಾರತಮ್ಯವಿದೆ.'' ಪರಮಾರ್ಥವು ಜಗದ್ರೂಪವಾಗಿ ತೋರಿಕೊಳ್ಳುವದು ಹೇಗೆಂಬುದು ಅಭೇದ್ಯರಹಸ್ಯವು ಎಂದು ಹೇಳುವ ಹೇಡಿತನದ ವಾಕ್ಯವು ತತ್ತ್ವಶಾಸ್ತ್ರಕ್ಕೆ ಒಪ್ಪಾಗುವ ದೆಂದು ಕಾರಿಕಾಕಾರರಾಗಲಿ ಭಾಷ್ಯಕಾರರಾಗಲಿ ನಂಬಿರುವದಿಲ್ಲ ; ಇಂಥ ಅಶಕ್ತಿ ಸೂಚಕವಾದ ಅಭಿಪ್ರಾಯವು ಪರಮಪುರುಷಾರ್ಥವನ್ನು ಬಯಸುವವರಿಗೆ ಯಾವ ಉಪಯೋಗಕ್ಕೂ ಬರುವದಿಲ್ಲವೆಂಬುದು ಸ್ಪಷ್ಟವಾಗಿದೆ. ಜಾಗ್ರತ್ಪ್ರಪಂಚವು ಎಚ್ಚರದಲ್ಲಿ ಮಾತ್ರ ಇರುವದೇ ಹೊರತು ಕನಸಿನಲ್ಲಾಗಲಿ, ತನಿನಿದ್ರೆಯಲ್ಲಾಗಲಿ ಇರುವದಿಲ್ಲ ಎಂಬುದು ಎಲ್ಲರ ಅನುಭವದಲ್ಲಿದೆ ; ಆತ್ಮನು ಮೂರು ಅವಸ್ಥೆಗಳಲ್ಲಿಯೂ ಮುಕ್ಯಾಗದೆ ತಾನಿದ್ದಂತೆಯೇ ಇರುತ್ತಾನೆಂಬುದೂ ಅನುಭವಗಮ್ಯವಾಗಿದೆ. ಈ ಎರಡನ್ನು ಬಿಟ್ಟರೆ ಮತ್ತೊಂದು ಪದಾರ್ಥವೇ ಇಲ್ಲದ್ದರಿಂದ ಜಗತ್ತು ಮಿಥ್ಯೆ, ಆತ್ಮನಲ್ಲಿ ಕಾಣುವ ಹುಸಿತೋರಿಕೆ ; ಪೂರ್ಣದೃಷ್ಟಿಯಿಲ್ಲದವರು ಆತ್ಮನನ್ನೇ ಜಗತ್ತೆಂದು ವ್ಯವಹರಿಸುತ್ತಿದಾರೆಯೇ ಹೊರತು ಆತ್ಮನೇನೂ ಜಗದ್ರೂಪವಾಗಿ ಮಾರ್ಪಟ್ಟಿಲ್ಲ ಎಂಬ ಅನುಭವಾನುಸಾರಿಯಾದ ಸಿದ್ಧಾಂತವು ವಿಜೃಂಭಿಸುತ್ತದೆ. ಈ ಉತ್ತಮವಾದ ಶ್ರೌತತರ್ಕವನ್ನು ಅರಗಿಸಿಕೊಳ್ಳಲಾರದವರು ಇದೊಂದು ಅಭೇದ್ಯರಹಸ್ಯ ಎಂದರೆ ವೇದಾಂತಿಗಳು ಈ ವಿಚಾರ ಶೂನ್ಯತೆಗೆ ಮರುಕವನ್ನು ತೋರಿಸಬಹುದೇ ಹೊರತು ಮತ್ತೇನು ಮಾಡಲಾಪರು ?

ಮಾಯಾವಾದವನ್ನು ಅನುಸರಿಸಿದರೆ ವ್ಯವಹಾರದಲ್ಲಿ ಒದಗುವ ವಿರೋಧಾಭಾಸವೊಂದನ್ನು ಶ್ರೀ ರಾಧಾಕೃಷ್ಣನ್‌ರವರು ಹೀಗೆ ಪ್ರಕಟಿಸಿರುತ್ತಾರೆ : ''ಜೀವನವೆಂಬ ಸ್ಪರ್ಧೆಯ ಆಟವನ್ನು ಆಡುವವರು ಈ ಆಟವೆಂಬುದು ಬರಿಯ ತೋರಿಕೆಯೆಂದೂ ಇಲ್ಲಿ ಸಿಕ್ಕುವ ಬಹುಮಾನಗಳು ಬರಿಯ ಸೊನ್ನೆಗಳೆಂದೂ ನಂಬಿ ಆಡುವದು ಎಂದಿಗೂ ಸಾಧ್ಯವಿಲ್ಲ,'' ''ಯಾವ ಪದಾರ್ಥಗಳೂ ನಿಜವಾಗಿಲ್ಲ, ಯಾವ ಪದಾರ್ಥಕ್ಕೂ ಯಾವ ಬೆಲೆಯೂ ಇಲ್ಲ ಎಂದು ನಿತ್ಯವೂ ನುಡಿಯುತ್ತಲೆ ಅದೇ ಪದಾರ್ಥಗಳನಿಟ್ಟುಕೊಂಡು ವ್ಯವಹರಿಸುತ್ತಿರಬೇಕಾಗುವದೆಂಬವದು ಈ ವಾದದಲ್ಲಿರುವ ಪರಮದೋಷವು.'' ಜಗತ್ತೆಲ್ಲವೂ ಸ್ಪರ್ಧೆಯೆಂಬುದೂ ಇಲ್ಲಿ ಬಹುಮಾನಗಳನ್ನು ಪಡೆಯುವದಕ್ಕಾಗಿ ನಾವು ಈ ಸ್ಪರ್ಧೆಯ ಆಟದಲ್ಲಿ ನಿರತರಾಗಿರುವೆವೆಂಬುದೂ ಪೈಪೋಟಿಯ ವ್ಯಾಪಾರವನ್ನು ಮುಂದು ಮಾಡಿಕೊಂಡು ಹೊರಟಿರುವ ಅರ್ಥಶಾಸ್ತ್ರಪ್ರಧಾನವಾದ ಪಾಶ್ಚಾತ್ಯನಾಗರಿಕತೆಗೆ ಒಪ್ಪುವ ಮಾತಾದೀತೇ ಹೊರತು ಧರ್ಮಶಾಸ್ತ್ರಪ್ರಧಾನವಾದ ನಮ್ಮ ದೇಶದ ಸಂಸ್ಕೃತಿಗೆ ಎಂದಿಗೂ ಅನುಗುಣವೆನಿಸಲಾರದು. ವೇದೋಕ್ತವಾದ ಕಾಮ್ಯಕರ್ಮಗಳು ಸ್ವರ್ಗಾದಿ

ಫಲವನ್ನು ಕೊಡುವವಾದರೂ ಅವು ಕೂಡ 'ಅವರಕರ್ಮಗಳು' (ಕೀಳುಕರ್ಮಗಳು) ಎಂದು ಜರೆದು ಪರಮಪುರುಷಾರ್ಥವನ್ನು ಬಯಸುವ ವಿವೇಕಿಗಳಿಗಾಗಿ ಸಂಗವಿಲ್ಲದೆ ಫಲಾಸಕ್ತಿಯಿಲ್ಲದೆ ಮಾಡುವ ಕರ್ಮಯೋಗವನ್ನು ಉಪದೇಶಿಸಿರುವ ಭಗವದ್ಗೀತೆಯನ್ನು ಸ್ಮರಿಸಿಕೊಂಡರೆ ಸಾಕು, ಪ್ರಪಂಚದ ಆಟದಲ್ಲಿ ಸಿಕ್ಕುವ ಬಹುಮಾನಗಳ ಆಶೆ ಎಂಬ ಪಿಶಾಚಿಯು ದಿಕ್ಕುಗೆಟ್ಟು ಓಡುವದು. ಆಶೆಯಿರುವವರು ಬಹುಮಾನಗಳಿಗಾಗಿ ಕೆಲಸಮಾಡುವರೆಂಬುದು ಸ್ವಾಭಾವಿಕವೇ ಆಗಿದೆ ; ಆದರೆ ಅವರನ್ನೇ ಬೆನ್ನುಚಪ್ಪರಿಸಿ 'ಭಲೇ !' ಎನ್ನುವದು ಒಂದು ತತ್ತ್ವಶಾಸ್ತ್ರವೆನಿಸಲಾರದು. ಇನ್ನು ಪ್ರಪಂಚವು ಮಿಥ್ಯೆ ಎಂದರೆ 'ಯಾವ ಪದಾರ್ಥಗಳೂ ನಿಜವಾಗಿಲ್ಲ. ಯಾವ ಪದಾರ್ಥಕ್ಕೂ ಯಾವ ಬೆಲೆಯೂ ಇಲ್ಲ'-ಎಂಬರ್ಥವೆಂದು ಕಲ್ಪಿಸುವದು ಈ ವಾದಕ್ಕೆ ತೀರ ಅನ್ಯಾಯಮಾಡಿದಂತೆ. ಏಕೆಂದರೆ ಪದಾರ್ಥಗಳು ಮಿಥ್ಯೆ ಎಂದರೆ ಅವಕ್ಕೆ ಯಾವ ಬೆಲೆಯೂ ಇಲ್ಲವೆಂದು ಅಭಿಪ್ರಾಯವಲ್ಲ, ಅವೆಲ್ಲವೂ ನಿಜವಾಗಿ ಬ್ರಹ್ಮವೇ ಎಂದರ್ಥ. ನಾವು ಕಲ್ಪಿಸಿರುವ ತೋರಿಕೆಯ ಬೆಲೆಗಳು ಆ ಪರಮಾರ್ಥವಾದ ಬೆಲೆಗೆ ಹೋಲಿಸಿದರೆ ಸೊನ್ನೆಗಳೇ ಆಗಿರುವವು. ಎಲ್ಲವೂ ಬ್ರಹ್ಮವೇ ಎಂಬ ಅರಿವುಳ್ಳವರು ಯಾವ ವ್ಯವಹಾರವನ್ನು ಮಾಡುವದೂ ಅಸಾಧ್ಯವೆನ್ನುವವರು ಬರಿಯ ಗೌಡಪಾದರ ಸಿದ್ಧಾಂತವನ್ನಲ್ಲ, ಗೀತಾಚಾರ್ಯನಾದ ಶ್ರೀಭಗವಂತನ ಸಿದ್ಧಾಂತವನ್ನೇ ಖಂಡಿಸುವದಕ್ಕೆ ಹೊರಟಿರುತ್ತಾರೆನ್ನಬೇಕಾಗುತ್ತದೆ. ಭಗವದ್ಗೀತೆಯಲ್ಲಿರುವ "ಬ್ರಹ್ಮಾರ್ಪಣಂ ಬ್ರಹ್ಮಹವಿಃ" (ಗೀ. ೪-೨೪) ಎಂಬ ಶ್ಲೋಕವನ್ನೂ ಅದರ ಮೇಲೆ ಶಂಕರಾಚಾರ್ಯರು ಬರೆದಿರುವ ಭಾಷ್ಯವನ್ನೂ ಮನಮುಟ್ಟಿ ಓದಿದವರಿಗೆ ಇಲ್ಲಿ ನಾವು ಹೇಳಿರುವದರ ನಿಜವು ಮನದಟ್ಟಾಗುವದು. ಜ್ಞಾನಿಗಳು ಎಲ್ಲಾ ಕರ್ಮಗಳನ್ನೂ ಮಾಡುತ್ತಿದ್ದರೂ ನಿಜವಾಗಿ ಯಾವ ಕರ್ಮವನ್ನೂ ಮಾಡುವದಿಲ್ಲ - ಎಂಬ ಗೀತೋಪದೇಶವನ್ನು ಮನದಂದವರಿಗೆ ಜ್ಞಾನಿಗಳು ಮಾಡುವ ವ್ಯವಹಾರದಿಂದ ಪ್ರಕೃತವಾದಕ್ಕೆ ಪರಮದೋಷವೊಂದು ಗಂಟು ಬೀಳುವದೆಂಬ ತಪ್ಪುತಿಳಿವಳಿಕೆಯೂ ಹಾರಿಹೋಗುವದು.

ಸರ್ ರಾಧಾಕೃಷ್ಣನ್‌ರವರು ಈ ವಾದದ ವಿಷಯಕ್ಕೆ ಹೇಳಿರುವ ಮತ್ತೊಂದು ವಾಕ್ಯವನ್ನು[1] ವಿಮರ್ಶಿಸಿ ಈ ವಿಷಯವನ್ನು ಉಪಸಂಹಾರಮಾಡುವೆವು. "ಪ್ರಪಂಚವೆಂಬುದು ಅಭೇದ್ಯರಹಸ್ಯವೂ ಅನಿರ್ವಚನೀಯವೂ ಆಗಿರಬಹುದು. ಆದರೆ ಇದರಿಂದ ಈ ಪ್ರಪಂಚವನ್ನೂ ತನ್ನೊಳಗೆ ಅಡಕಮಾಡಿಕೊಂಡಿರುವ, ಇದನ್ನು ಮೀರಿರುವ,

---

1. ಇಲ್ಲಿ ಕೊಟ್ಟಿರುವ ಶ್ರೀರಾಧಾಕೃಷ್ಣನ್‌ರವರ ಉಕ್ತಿಗಳು ಅವರ "Indian Philosophy" ಎಂಬ ಗ್ರಂಥದಿಂದ ತೆಗೆದುಕೊಂಡವುಗಳು.

ಮತ್ತೊಂದು ತತ್ತ್ವವು ಇರಬೇಕೆಂದು ನಿಶ್ಚಯವಾದೀತೇ ಹೊರತು ಜಗತ್ತೆಲ್ಲವೂ ಸ್ವಪ್ನಮಾತ್ರವೆಂದು ಎಂದಿಗೂ ಏರ್ಪಡುವದಿಲ್ಲ.'' ಪ್ರಪಂಚವು ಅಭೇದ್ಯರಹಸ್ಯವೆಂಬ ಮಾತಿನ ಜೊಳ್ಳುತನವನ್ನು ನಾವು ಆಗಲೇ ತೋರಿಸಿಕೊಟ್ಟಿರುತ್ತೇವೆ. ಜಗತ್ತು ಸ್ವಪ್ನ ಮಾತ್ರವೆಂಬುದನ್ನು ಅದು ಅಭೇದ್ಯರಹಸ್ಯವೆಂಬ ಹೇತುವಿನಿಂದ ಗೌಡಪಾದರಾಗಲಿ ಶಂಕರಾಚಾರ್ಯರಾಗಲಿ ತರ್ಕಿಸಿರುವದಿಲ್ಲ. ಸ್ವಪ್ನಕ್ಕೂ ಎಚ್ಚರಕ್ಕೂ ಯಾವ ವಿಧ ದಿಂದಲೂ ಯಾವ ತಾರತಮ್ಯವೂ ಇರುವದಿಲ್ಲವೆಂಬುದನ್ನು ಅವರು ಸರ್ವಾನುಭವ ಸಮ್ಮತವಾದ ಯುಕ್ತಿಯಿಂದ ವೈತಥ್ಯಪ್ರಕರಣದಲ್ಲಿ ಸಾಧಿಸಿರುತ್ತಾರೆ. ಗೌಡಪಾದರ ಮತದಲ್ಲಿ ದೋಷವನ್ನು ತೋರಿಸುವವರು ಅವರ ಯುಕ್ತಿಗಳಲ್ಲಿ ದೋಷವನ್ನು ತೋರಿಸಬೇಕು ; ಸ್ವಪ್ನಕ್ಕಿಂತ ಜಾಗ್ರತ್ತಿನಲ್ಲಿ ಯಾವ ವಿಶೇಷವಿದೆ ಎಂಬುದನ್ನಾದರೂ ತೋರಿಸಬೇಕು. ಆ ಕೆಲಸವನ್ನು ಮಾಡದೆ ಆ ಮತವು ಒಪ್ಪತಕ್ಕದ್ದಲ್ಲ ಎಂದರೆ ಬರಿಯ ಉಕ್ತಿಮಾತ್ರವಾದೀತೇ ಹೊರತು ಸಿದ್ಧಾಂತದ ದೂಷಣೆಯಾಗಲಾರದು.

## ಸ್ವಪ್ನವಿಷಯಕ್ಕೆ ಗೌಡಪಾದರಿಗೂ ಭಾಷ್ಯಕಾರರಿಗೂ ವಿಮತಿಯಿಲ್ಲ

ಶ್ರೀ ಶಂಕರಾಚಾರ್ಯರವರು ಎಚ್ಚರಕ್ಕೂ ಕನಸಿಗೂ ವೈಧರ್ಮ್ಯವುಂಟೆಂದು ಬ್ರಹ್ಮ ಸೂತ್ರಭಾಷ್ಯ (೨-೨-೧೯)ದಲ್ಲಿ ಹೇಳಿರುವದರ ಬಲದಿಂದ ಅವರಿಗೂ ಗೌಡಪಾದರಿಗೂ ಅಭಿಪ್ರಾಯಭೇದವಿರುವದೆಂದು ಸರ್ ರಾಧಾಕೃಷ್ಣನ್ ಮುಂತಾದವರು ಕಲ್ಪಿಸಿರುತ್ತಾರೆ. ಶ್ರೀ ಕೋಕಿಲೇಶ್ವರಶಾಸ್ತ್ರಿಗಳು ವೈತಥ್ಯಪ್ರಕರಣದ ಭಾಷ್ಯವಾಕ್ಯಗಳನ್ನು ಕೂಡ ತಿರಿಚಿ ಅರ್ಥಮಾಡುವದರ ಮೂಲಕ ಶಂಕರಾಚಾರ್ಯರಿಗೆ ಜಾಗ್ರತ್ಸ್ವಪ್ನಭೇದವೇ ಸಮ್ಮತ ವೆಂದು ತೋರಿಸುವ ಸಾಹಸಕ್ಕೆ ಕೈಹಾಕಿರುತ್ತಾರೆ.

ಆದರೆ ನಿಷ್ಪಕ್ಷಪಾತದೃಷ್ಟಿಯಿಂದ ನೋಡಿದರೆ ಈ ವಿಷಯದಲ್ಲಿ ಆ ಇಬ್ಬರು ಆಚಾರ್ಯರಿಗೂ ಯಾವ ಅಭಿಪ್ರಾಯತಾರತಮ್ಯವನ್ನೂ ತೋರಿಸಿಕೊಡುವದಕ್ಕೆ ಆಗುವದಿಲ್ಲ. ಶಂಕರಾಚಾರ್ಯರು ವೈತಥ್ಯಪ್ರಕರಣಭಾಷ್ಯದಲ್ಲಿ, ಅಥವಾ ಮತ್ತೆ ಯಾವ ಕಡೆಯಲ್ಲಾದರೂ ಗೌಡಪಾದರ ಅಭಿಪ್ರಾಯವು ತಮಗೆ ಸಮ್ಮತವಿಲ್ಲವೆಂದು ಹೇಳಿರುವದಿಲ್ಲ. ಸೂತ್ರಭಾಷ್ಯದಲ್ಲಿ ಗೌಡಪಾದರನ್ನು ''ವೇದಾಂತಾರ್ಥಸಂಪ್ರದಾಯ ವನ್ನು ಬಲ್ಲ ಆಚಾರ್ಯರು'' (ಸೂ. ಭಾ. ೧-೪-೧೪, ೨-೧-೯) ಎಂದು ಗೌರವದಿಂದ ಕರೆದಿರುತ್ತಾರೆ. ಆದ್ದರಿಂದ ಸೂತ್ರಭಾಷ್ಯದಲ್ಲಿ ಕನಸಿಗೂ ಎಚ್ಚರಕ್ಕೂ ತಾರತಮ್ಯವಿರು ವದೆಂದು ಹೇಳಿರುವದು ವ್ಯವಹಾರದೃಷ್ಟಿಯಿಂದಲೇ ಎಂದು ಹೇಳಬೇಕಾಗಿರುತ್ತದೆ. ''ಅತೋ ವೈಶೇಷಿಕಮಿದಂ ಸನ್ಯಸ್ಯ ಮಾಯಾಮಾತ್ರತ್ವಮ್ ಉದಿತಮ್'' (ಸೂ. ಭಾ.

೩-೨-೪) ಎಂಬ ಭಾಷ್ಯದಲ್ಲಿ ಎಚ್ಚರವೂ ಕನಸಿನಂತೆ ಮಾಯಿಕವೇ ಆಗಿರುವದೆಂದು ಅವರೇ ಹೇಳಿರುವದು ಇದಕ್ಕೆ ಅನುಗುಣವಾಗಿಯೇ ಇರುತ್ತದೆ.

## ಅದ್ವೈತಪ್ರಕರಣದಲ್ಲಿ ಹೇಳಿರುವ ಮನೋನಿಗ್ರಹ

ಈ ವಿಷಯದಲ್ಲಿ ಈಗಿನ ವೇದಾಂತಿಗಳಲ್ಲಿ ಬೇರೆಬೇರೆಯ ಅಭಿಪ್ರಾಯಗಳು ಉಂಟಾಗಿರುತ್ತವೆ. ಆದ್ದರಿಂದ ಕಾರಿಕಾಕಾರರೂ ಭಾಷ್ಯಕಾರರೂ ಈ ಬಗ್ಗೆ ಏನು ಹೇಳಿರುವರೆಂಬುದನ್ನು ಸ್ವಲ್ಪ ವಿಮರ್ಶಿಸುವದು ಅವಶ್ಯವಾಗಿದೆ.

(೧) ''ಆತ್ಮಸತ್ಯಾನುಬೋಧದಿಂದ ಯಾವಾಗ ಸಂಕಲ್ಪಿಸುವದಿಲ್ಲವೋ ಆಗ ಮನಸ್ಸು ಅಮನಸ್ತೆಯನ್ನು ಹೊಂದುವದು'' (ಕಾ. ೩-೨೩).

(೨) ''ನಿಗ್ರಹವಾದ ನಿರ್ವಿಕಲ್ಪವಾದ ಮನಸ್ಸಿನ ಪ್ರಚಾರವನ್ನು ಅರಿತುಕೊಳ್ಳಬೇಕು. ಸುಷುಪ್ತಿಯಲ್ಲಿರುವ ಮನಸ್ಸಿನ ಪ್ರಚಾರವು ಬೇರೆಯಾಗಿರುವದು ; ಏಕೆಂದರೆ ಅಲ್ಲಿ ಮನಸ್ಸು ಲಯವಾಗುತ್ತದೆ. ನಿಗ್ರಹವಾದಾಗ ಲಯವಾಗುವದಿಲ್ಲ'' (ಕಾ.೩-೩೪, ೩೫).

ಮೇಲಿನ ಕಾರಿಕೆಗಳಲ್ಲಿ ಮನಸ್ಸನ್ನು ನಿಗ್ರಹಮಾಡಿದರೆ ಆಗುವ ಸಮಾಧಿಯನ್ನು ಪರಾಮರ್ಶಿಸಿದೆಯೆಂದೂ ಸುಷುಪ್ತಿಯಲ್ಲಿರುವ ಮೂಲಾವಿದ್ಯೆಯು ಸಮಾಧಿಯಲ್ಲಿರುವದಿಲ್ಲ ಎಂಬುದು ಕಾರಿಕೆಗಳ ಒಟ್ಟಾರ್ಥವೆಂದೂ ಕೆಲವರು ಭಾವಿಸಿರುತ್ತಾರೆ. ಮೂಲಾವಿದ್ಯಾವಾದವು ಕಾರಿಕೆಗೂ ಭಾಷ್ಯಕ್ಕೂ ಅಪರಿಚಿತವಾದದ್ದು ಎಂದು ನಾವು ಆಗಲೇ ತೋರಿಸಿಕೊಟ್ಟಿರುತ್ತೇವೆ. ಸುಷುಪ್ತಿಯಲ್ಲಿಯೂ ಸಮಾಧಿಯಲ್ಲಿರುವಂತೆ ಅದ್ವೈತಾತ್ಮ ಸ್ವರೂಪವೊಂದೇ ಇರುವದೆಂದು ಕಾರಿಕೆಯ ಭಾಷ್ಯದಲ್ಲಿಯೂ (ಭಾ. ಭಾ. ೧೨೩, ೧೬೩, ೧೮೪, ೨೬೧), ಗೀತಾಭಾಷ್ಯ (ಭಾ. ಭಾ. ೬೦೧), ಸೂತ್ರಭಾಷ್ಯ (೨-೧-೯, ೩-೨-೭)-ಇವುಗಳಲ್ಲಿಯೂ ಕಂಠೋಕ್ತವಾಗಿ ಹೇಳಿರುತ್ತದೆ. ಇದೂ ಅಲ್ಲದೆ ಇದು ಜ್ಞಾನದ ಪ್ರಕರಣವಾದ್ದರಿಂದ ವಿವೇಕದಿಂದ ಆತ್ಮಸತ್ಯವನ್ನರಿತುಕೊಂಡು ಚಿತ್ತನಿರೋಧವನ್ನು ಮಾಡಿಕೊಳ್ಳುವದನ್ನೇ ಇಲ್ಲಿ ನಿಗ್ರಹವೆಂಬ ಹೆಸರಿನಿಂದ ಕರೆದಿದೆ ಎಂದು ತಿಳಿಯಬೇಕಾಗಿದೆ. ಆದ್ದರಿಂದ ಸುಷುಪ್ತಿಯಿಂದ ಎಚ್ಚತ್ತಬಳಿಕ ದ್ವೈತವು ಎಂದಿನಂತೆ ಸತ್ಯವಾಗಿ ತೋರುವ ಹಾಗೆ ದ್ವೈತವು ಜ್ಞಾನದಿಂದ ಬಾಧಿತವಾದ ಬಳಿಕ ಎಂದಿಗೂ ಸತ್ಯವಾಗಿ ತೋರಲಾರದು - ಎಂಬುದೇ ಇಲ್ಲಿ ಹೇಳಿರುವ ತಾರತಮ್ಯವು. ಆಗಮ ಪ್ರಕರಣದಲ್ಲಿ ಪ್ರಾಜ್ಞತುರೀಯರಿಗೆ ಹೇಳಿರುವ ತಾರತಮ್ಯವನ್ನೇ ಇಲ್ಲಿ ಪ್ರಕಾರಾಂತರದಿಂದ ತಿಳಿಸಿದೆ ಎಂದು ತಿಳಿಯಬೇಕು.

ಇನ್ನು ಇದೇ ಪ್ರಕರಣದ ನಲವತ್ತನೆಯ ಕಾರಿಕೆಯಲ್ಲಿರುವ ವಿಷಯವನ್ನು ಪರಿಶೀಲಿಸೋಣ.

(೩) ''ಎಲ್ಲಾ ಯೋಗಿಗಳಿಗೂ ಅಭಯವೂ ದುಃಖಿಕ್ಷಯವೂ ಜ್ಞಾನವೂ ಅಕ್ಷಯವಾದ ಶಾಂತಿಯೂ ಮನಸ್ಸಿನ ನಿಗ್ರಹಕ್ಕೆ ಅಧೀನವಾಗಿರುತ್ತದೆ.'' (೩-೪೦)

ಇಲ್ಲಿ ಹೇಳಿರುವ ಮನೋನಿಗ್ರಹದ ಸ್ವರೂಪವೇನು ? ಎಂಬುದು ವಿಚಾರಣೀಯವಾಗಿರುತ್ತದೆ. ಏಕೆಂದರೆ ಈ ನಿಗ್ರಹವನ್ನು ವಿವರಿಸುವಾಗ ''ಲಯ, ವಿಕ್ಷೇಪ, ಕಷಾಯ, ಸುಖಾಸ್ವಾದ-ಎಂಬ ನಾಲ್ಕು ಎಡರುಗಳನ್ನು ದಾಟಿದರೆ ಮನಸ್ಸು ಬ್ರಹ್ಮವಾಗುತ್ತದೆ.'' ಎಂಬ ಅಭಿಪ್ರಾಯವು (ಕಾ. ೩-೪೨ರಿಂದ ೪೬) ರಲ್ಲಿ ಕಂಡುಬರುತ್ತದೆ. ಇಲ್ಲಿ ನಿರ್ವಿಕಲ್ಪಸಮಾಧಿಯನ್ನು ಹೇಳಿದೆಯೆಂದೂ ಆ ಸಮಾಧಿಯನ್ನು ಅನುಭವಿಸಿ ಎಚ್ಚೆತ್ತವನಿಗೆ ಪ್ರಾರಬ್ಧಕರ್ಮವು ಸವೆಯುವವರೆಗೂ **ಅಜ್ಞಾನದ ಲೇಶ ಅಥವಾ ಸಂಸ್ಕಾರ** ಎಂಬ ಕಲಂಕವು ಇದ್ದುಕೊಂಡಿರುವದೆಂದೂ ಶರೀರವು ಬಿದ್ದಬಳಿಕ ಪ್ರಾಣವು ಬ್ರಹ್ಮದಲ್ಲಿ ಲಯವಾಗಲು **ವಿದೇಹಕೈವಲ್ಯ**ವೆಂಬ ಮುಖ್ಯಮುಕ್ತಿಯುಂಟಾಗುವದೆಂದೂ ಕೆಲವರು ವರ್ಣಿಸುತ್ತಾರೆ.

ಆದರೆ ಈ ವಾದಕ್ಕೆ ಕಾರಿಕೆಯಲ್ಲಾಗಲಿ ಕಾರಿಕಾಭಾಷ್ಯದಲ್ಲಾಗಲಿ ಪ್ರಸ್ಥಾನತ್ರಯದ ಮಿಕ್ಕ ಭಾಷ್ಯಗಳಲ್ಲಿಯೇ ಆಗಲಿ ಯಾವ ಆಧಾರವೂ ಇರುವದಿಲ್ಲ. ಜ್ಞಾನಯೋಗಕ್ಕೆ ಅಂತರಂಗಸಾಧನವಾಗಿ ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುವಂತೆಯೇ ಇಲ್ಲಿಯೂ ಧ್ಯಾನಯೋಗವನ್ನೇ ಮನೋನಿಗ್ರಹವೆಂಬ ಹೆಸರಿನಿಂದ ಉಪದೇಶಿಸಿರುತ್ತದೆ ಎಂದು ಭಾವಿಸಿದರೆ ಈ ಎರಡುಕಡೆಗಳಲ್ಲಿರುವ ಆಚಾರ್ಯರ ಅಭಿಪ್ರಾಯಕ್ಕೂ ಏಕವಾಕ್ಯತೆಯುಂಟಾಗುತ್ತದೆ. ಮಧ್ಯಮಾಧಿಕಾರಿಗಳಿಗೆ ಉಪದೇಶಿಸಿರುವ ಈ ಮನೋನಿಗ್ರಹವು ಪುರುಷತಂತ್ರವಾದ ಉಪಾಸನೆಯಲ್ಲ ; ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿ ರತ್ನದ ತತ್ತ್ವವನ್ನು ನಿಶ್ಚಯಿಸುವಂತೆ ಮನಸ್ಸನ್ನು ವಿಷಯಚಿಂತೆಯಿಂದ ಚದರಿಸದೆ, ಆತ್ಮಚಿಂತೆಯಿಂದ ಬೇಸತ್ತು ಲಯವಾಗಗೊಳಿಸದೆ, ಈ ಪರಿಶೀಲನೆಯ ಆನಂದದಿಂದಲೇ ತೃಪ್ತನೂ ಆಗದೆ, ಏಕಾಗ್ರತೆಯಿಂದ ಆತ್ಮಸ್ವರೂಪವನ್ನು ಚಿಂತಿಸುವದೇ ಮನೋನಿಗ್ರಹವೆಂಬ ಮಾತಿನಿಂದ ಇಲ್ಲಿ ಹೇಳಿರುವ ಸಾಧನವು. ಇದನ್ನು ನಿದಿಧ್ಯಾಸನವೆಂದೂ ಕರೆಯುತ್ತಾರೆ. ಅದ್ವೈತಪ್ರಕರಣವೇ ಉಪಾಸನಾನಿಂದೆಯಿಂದ ಪ್ರಾರಂಭವಾಗಿರುವದರಿಂದಲೂ ಇಲ್ಲಿ ಉಪದೇಶಿಸಿರುವದು ಉಪಾಸನೆಗಿಂತ ಬೇರೆಯಾದ ನಿದಿಧ್ಯಾಸನವೆಂದು ಸಿದ್ಧವಾಗುತ್ತದೆ. ಈ ನಿದಿಧ್ಯಾಸನವನ್ನು ಉಪಾಸನೆಯೆಂದು ಕರೆಯುವದರಲ್ಲೇನೂ ದೋಷವಿಲ್ಲ ; ಏಕೆಂದರೆ ಜ್ಞಾನವನ್ನು ಕೂಡ ಉಪಾಸನೆ ಎಂಬ ಹೆಸರಿನಿಂದಲೂ ಕರೆದಿರುವದು ಶ್ರುತಿಸ್ಮೃತಿಗಳಲ್ಲಿ ಕಂಡುಬರುತ್ತದೆ. ಆದರೆ ಲೋಕಾಂತರದಲ್ಲಿ ಬ್ರಹ್ಮಸಾಯುಜ್ಯವನ್ನು ಪಡೆಯುವದಕ್ಕೆ ಸಾಧನವಾಗಿರುವ ಉಪಾಸನೆಗೂ ಇಲ್ಲಿಯೇ ಆತ್ಮಸತ್ಯಾನುಬೋಧಕ್ಕೆ

ಕಾರಣವಾಗಿರುವದೆಂದು ಹೇಳಿರುವ ಈ ಉಪಾಸನೆಗೂ ಇರುವ ತಾರತಮ್ಯವನ್ನು ಮಾತ್ರ ಕಡೆಗಣಿಸಬಾರದು. ಆದ್ದರಿಂದಲೇ ಭಾಷ್ಯಕಾರರು ಅದ್ವೈತಪ್ರಕರಣದ ಅರ್ಥವನ್ನು ಉಪಸಂಹಾರಮಾಡುವ ಸಂದರ್ಭದಲ್ಲಿ ಹೀಗೆಂದು ಬರೆದಿರುತ್ತಾರೆ :

"ಈ ಮನೋನಿಗ್ರಹಾದಿಗಳೂ ಮೃಲ್ಲೋಹಾದಿಗಳಂತೆ ಎಂದು ಹೇಳಿದ ಸೃಷ್ಟಿಯೂ, ಉಪಾಸನೆಯೂ ಪರಮಾರ್ಥವನ್ನು ತಿಳಿಯುವದಕ್ಕೆ ಉಪಾಯವೆಂದು ಹೇಳಿದೆಯೇ ಹೊರತು ಪರಮಾರ್ಥಸತ್ಯವೆಂದು ಹೇಳಿಲ್ಲ" (ಭಾ. ಭಾ. ೨೧೦).

## ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಕಾಣಬರುವ ದ್ವೈತಖಂಡನೆ

ಗೌಡಪಾದರೂ ಆಚಾರ್ಯರೂ ಇಲ್ಲಿ ವೈಶೇಷಿಕರು, ಸಾಂಖ್ಯರು, ಬೌದ್ಧರು, ಜೈನರು, ಮಿಮಾಂಸಕರು-ಮುಂತಾದವರ ಮತಗಳನ್ನು ಅಲ್ಲಲ್ಲಿ ಖಂಡಿಸಿರುತ್ತಾರೆ. ಈ ಖಂಡನೆಯ ಪ್ರಯೋಜನವೇನೆಂಬುದನ್ನೂ ವಿಚಾರಪೂರ್ವಕವಾಗಿ ಗೊತ್ತುಪಡಿಸ ಬೇಕಾಗಿದೆ. ಏಕೆಂದರೆ ಶೂನ್ಯವಾದಿಗಳೂ ಸಾಂಖ್ಯವೈಶೇಷಿಕಾದಿಗಳೂ ತಮ್ಮ ತಮ್ಮ ಮತವೊಂದೇ ಸರಿ ಎಂದು ತೋರಿಸುವದಕ್ಕಾಗಿ ಪರಮತವನ್ನು ಖಂಡಿಸಲೇಬೇಕಾಗಿರು ವಂತೆ ಅದ್ವೈತಿಗಳಿಗೆ ಈ ಖಂಡನೆಯ ಆವಶ್ಯಕತೆಯಿರುವದಿಲ್ಲ, ದ್ವೈತಿಗಳಿಗೆ ದ್ವೈತವು ಪರಮಾರ್ಥಸತ್ಯವಾದ್ದರಿಂದ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದಮೇಲೂ ಅವರಿಗೆ ಪರಮತವು ದುಷ್ಟವೆಂದು ತೋರಿಸಬೇಕಾದದ್ದು ಉಳಿದುಕೊಂಡಿರುತ್ತದೆ. ಆದರೆ ಅದ್ವೈತಿಗಳ ದೃಷ್ಟಿಯಿಂದ ದ್ವೈತವೆಲ್ಲವೂ ಮಾಯಾಕಲ್ಪಿತವಾಗಿರುವದರಿಂದ ಆ ಕಲ್ಪಿತದ್ವೈತದಿಂದ ಅದ್ವೈತಕ್ಕೆ ಯಾವ ಹಾನಿಯೂ ಇಲ್ಲ (೩-೧೭, ೧೮) ; ಆದ್ದರಿಂದ ಅದ್ವೈತವನ್ನು ಸ್ಥಾಪಿಸುವದರಿಂದಲೇ ದ್ವೈತವನ್ನು ಖಂಡಿಸಿದಂತೆ ಆಗಿಬಿಡುತ್ತದೆ. ಹೀಗಿದ್ದರೂ ದ್ವೈತವನ್ನು ಬೇರೆಯಾಗಿ ಖಂಡಿಸಿರುವದೇಕೆಂದರೆ (೧) ದ್ವೈತಸಿದ್ಧಾಂತಗಳು ಪರಸ್ಪರವಿರುದ್ಧವಾಗಿರುವದರಿಂದ ದ್ವೈತಬುದ್ಧಿಯು ರಾಗದ್ವೇಷಾದಿಗಳಿಗೆ ಕಾರಣವಾಗಿ ರುವದೆಂದೂ (೩-೧೭, ಭಾ. ಭಾ. ೧೬೧) ಅದ್ವೈತವು ಸರ್ವಕಲ್ಪನೆಗಳಿಗೂ ಆಧಾರ ವಾಗಿರುವದರಿಂದ ಯಾವಾಗಲೂ ಶಿವಸ್ವರೂಪವಾಗಿರುವದೆಂದೂ (೨-೩೩, ಭಾ. ಭಾ. ೧೧೭)ಮುಮುಕ್ಷುಗಳಿಗೆ ತಿಳಿಸಿಕೊಡುವದಕ್ಕೆ ; ದ್ವೈತಿಗಳು ವೇದವಿರುದ್ಧವಾದ ಕುದೃಷ್ಟಿ ಯನ್ನವಲಂಬಿಸಿರುವದರಿಂದ ಅವರ ದರ್ಶನಗಳು ಸರಿಯಾದ ವಿಚಾರಕ್ರಮದಿಂದ ಪರೀಕ್ಷಿಸಿದರೆ ಅಯುಕ್ತವೆಂದೇ ಸ್ಪಷ್ಟವಾಗುವದೆಂದು ತಿಳಿಸುವದಕ್ಕೆ (೩-೧೩, ಭಾ. ಭಾ. ೧೫೧). ಈ ಅಭಿಪ್ರಾಯವನ್ನು ಭಾಷ್ಯಕಾರರು ಈ ಕೆಳಗೆ ಉದಾಹರಿಸುವಂಥ ವಾಕ್ಯ ಗಳಲ್ಲಿ ಮತ್ತೆಮತ್ತೆ ಸೂಚಿಸಿರುತ್ತಾರೆ :-

# ಶ್ರೀ ಶಂಕರಾಚಾರ್ಯರ ದಶೋಪನಿಷದ್ಭಾಷ್ಯಗಳು

ಇವುಗಳಲ್ಲಿ ಮೂಲ, ಭಾಷ್ಯ, ಟಿಪ್ಪಣಿ, ಸಾರ, ಶಬ್ದಾನುಕ್ರಮಣಿಕೆ – ಇವೆಲ್ಲವೂ ಇವೆ. ಭಾಷ್ಯದ ಸಂಸ್ಕೃತಮೂಲವನ್ನು ಕನ್ನಡದ ಅಕ್ಷರದಲ್ಲಿ ಕೊಟ್ಟಿರುತ್ತದೆ. ಅನುವಾದವನ್ನು ಪರಿಷ್ಕರಿಸಿ ಪೀಠಿಕೆ, ಟಿಪ್ಪಣಿ– ಮುಂತಾದವುಗಳನ್ನು ಹೊಸದಾಗಿಯೇ ಸೇರಿಸಿ ಸಂಸ್ಕೃತ ಮೂಲಕ್ಕೆ ಬಿಂಬ ಪ್ರತಿಬಿಂಬದಂತೆ ಅನುವಾದವನ್ನು ಕೊಟ್ಟಿರುವದರಿಂದ ಮೂಲಸಂಸ್ಕೃತದ ಭಾಷ್ಯವನ್ನು ಓದುವದಕ್ಕೆ ಪ್ರಯತ್ನಿಸುವವರಿಗೂ, ಶಾಂಕರಭಾಷ್ಯವನ್ನು ಪ್ರಸ್ಥಾನತ್ರಯಭಾಷ್ಯಗಳ ಮತ್ತು ಪ್ರಕರಣಗಳ ಪರಸ್ಪರ ಹೋಲಿಕೆಯಿಂದ ಅರ್ಥಮಾಡಿಕೊಳ್ಳಬೇಕೆನ್ನುವವರಿಗೂ ಈ ಗ್ರಂಥಗಳು ಅತ್ಯಮೂಲ್ಯವಾಗಿವೆ. ಶಂಕರಾಚಾರ್ಯರ ಸಂಪೂರ್ಣಗ್ರಂಥಗಳನ್ನು ಪುಸ್ತಕ ಭಂಡಾರದಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕೆನ್ನುವವರಿಗೆ ಇದೊಂದು ಸುಸಂಧಿ. ಸ್ಕೂಲುಗಳೂ ಕಾಲೇಜುಗಳೂ ತಮ್ಮ ಪುಸ್ತಕಭಂಡಾರದಲ್ಲಿ ಅವಶ್ಯವಾಗಿ ಈ ಪುಸ್ತಕಗಳನ್ನು ಸಂಗ್ರಹಿಸಬೇಕು.

೧. **ಈಶಾವಾಸ್ಯೋಪನಿಷತ್ತು** : ಇದು ಶುಕ್ಲಯಜುರ್ವೇದಕ್ಕೆ ಸೇರಿದ್ದು. ಇದರಲ್ಲಿ ಕರ್ಮ, ಉಪಾಸನೆ, ಜ್ಞಾನ – ಇವುಗಳ ಸಂಬಂಧವನ್ನು ಸ್ಪಷ್ಟಪಡಿಸಿರುತ್ತದೆ. ಆಚಾರ್ಯರು ಇದಕ್ಕೆ ರಚಿಸಿರುವ ಭಾಷ್ಯದಲ್ಲಿ ಪ್ರವೃತ್ತಿ – ನಿವೃತ್ತಿ ಎಂಬ ಎರಡು ಬಗೆಯಾಗಿರುವ ವೇದೋಕ್ತ ಧರ್ಮಗಳನ್ನು ವಿವರಿಸಿ ಪರಮಾತ್ಮನ ಸ್ವರೂಪವನ್ನು ಮುಖ್ಯವಾಗಿ ತಿಳಿಸುವದೇ ಈ ಉಪನಿಷತ್ತಿನ ಉದ್ದೇಶವೆಂದು ಸ್ಫುಟಗೊಳಿಸಿದ್ದಾರೆ. ಮಾಧ್ಯಂದಿನಪಾಠವನ್ನೂ ಕೊಡಲಾಗಿದೆ.

*(ಐದನೆಯ ಮುದ್ರಣ : ೨೦೦೦ – ಪುಟಗಳು ಡೆಮ್ಮಿ ೬+೬೨)*

೨. **ಕೇನೋಪನಿಷತ್ತು**: ಬ್ರಹ್ಮವು ಎಲ್ಲವನ್ನೂ ಬೆಳಗುವ ಚೈತನ್ಯಸ್ವರೂಪವಾದ ನಮ್ಮೆಲ್ಲರ ಆತ್ಮನು: ಅದರ ಶಕ್ತಿಯಿಂದಲೇ ಎಲ್ಲವೂ ತನ್ನ ಕೆಲಸಮಾಡುತ್ತಿರುವದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಉಪನಿಷತ್ತಿಗೆ ಪದಭಾಷ್ಯ, ವಾಕ್ಯಭಾಷ್ಯ – ಎಂಬ ಎರಡು ಭಾಷ್ಯಗಳಿವೆ.

*(ಐದನೆಯ ಮುದ್ರಣ : ೧೯೯೪ – ಪುಟಗಳು ಡೆಮ್ಮಿ ೬ + ೧೧೧)*

೩. **ಕಾಠಕೋಪನಿಷತ್ತು**: ಧರ್ಮಾಧರ್ಮಗಳಿಗೂ ಕಾಲತ್ರಯಕ್ಕೂ ಕಾರ್ಯಕಾರಣ ಭಾವಕ್ಕೂ ಕಟ್ಟು ಬೀಳದ ಬ್ರಹ್ಮವೇ ನಮ್ಮೆಲ್ಲರ ಆತ್ಮವೆಂಬುದನ್ನು ತಿಳಿಸುವ ಉಪನಿಷತ್ತಿದು.

ಈಗ ಇದು ನಿಮ್ಮ ಕೈಯಲ್ಲಿದೆ *(ಆರನೆಯ ಮುದ್ರಣ : ೨೦೦೨ – ಪುಟಗಳು ಡೆಮ್ಮಿ ೧೨ + ೨೦೮)*

೪. **ಮುಂಡಕೋಪನಿಷತ್ತು**: ವೇದೋಕ್ತವಾದ ವಿದ್ಯೆಯನ್ನು ಪರವಿದ್ಯೆ, ಅಪರವಿದ್ಯೆ – ಎಂದು ಎರಡು ವರ್ಗಗಳಾಗಿ ವಿಂಗಡಿಸಿ ಜಗತ್ಕಾರಣವಾದ ಅಕ್ಷರವೆಂಬ ಹೆಸರಿನ ಅದ್ವಿತೀಯ ಬ್ರಹ್ಮವನ್ನು ಅರಿತುಕೊಳ್ಳುವ ವಿದ್ಯೆಯೇ ಪರವಿದ್ಯೆ ಎಂದು ಇಲ್ಲಿತಿಳಿಸಿದೆ. ಎಲ್ಲವೂ ಬ್ರಹ್ಮವೊಂದೇ ಆಗಿರುವದರಿಂದ ಅದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದೆಂತಲೂ, ಈ ಬ್ರಹ್ಮಜ್ಞಾನದಿಂದ ಜೀವನ್ಮುಕ್ತಿಯು ಲಭಿಸುವದೆಂತಲೂ ಪ್ರತಿಪಾದಿಸಿದೆ. ಜ್ಞಾನಕ್ಕೆ ಬೇಕಾದ ಸತ್ಯಾದಿಸಾಧನಗಳನ್ನು ಪ್ರತಿಪಾದಿಸಿರುವದು ಇದರ ವಿಶೇಷ.

*(ನಾಲ್ಕನೆಯ ಮುದ್ರಣ : ೧೯೯೯ – ಪುಟಗಳು ಡೆಮ್ಮಿ ೧೮ + ೧೭೦)*

೫. **ಪ್ರಶ್ನೋಪನಿಷತ್ತು**: ಮುಂಡಕೋಪನಿಷತ್ತಿನ ವಿಷಯವನ್ನು ಇಲ್ಲಿ ವಿವರಿಸಿದೆ. ಮುಂಡಕ– ಪ್ರಶ್ನೆಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷರಾಖ್ಯಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯೂ ಉಪಾಸನೆಯಿಂದ ಕ್ರಮಮುಕ್ತಿಯೂ ಆಗುವದೆಂದು ನಿರೂಪಿಸುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರವರು ಅವಸ್ಥಾತ್ರಯ, ಜ್ಞಾನಸ್ವರೂಪ, ಕರ್ತೃತ್ವ ಭೋಕ್ತೃತ್ವ– ಎಂಬ ಮೂರು ವಿಷಯಗಳನ್ನು ವಿಸ್ತಾರವಾಗಿ ಚರ್ಚಿಸಿರುತ್ತಾರೆ.

*(ನಾಲ್ಕನೆಯ ಮುದ್ರಣ : ೧೯೯೨ – ಪುಟಗಳು ಡೆಮ್ಮಿ ೧೮ + ೧೬೮)*

೬. **ಮಾಂಡೂಕ್ಯೋಪನಿಷತ್ತು**: ಎಚ್ಚರ, ಕನಸು, ತನಿನಿದ್ರೆ – ಎಂಬ ಮೂರವಸ್ಥೆಗಳ ಸೋಂಕೂ ಇಲ್ಲದ ನಿರ್ಮಲವಾಗಿರುವ ನಮ್ಮೆಲ್ಲರ ಆತ್ಮನಾದ ಬ್ರಹ್ಮದ ಸ್ವರೂಪವನ್ನು ಅನುಭವಾನುಸಾರವಾಗಿ

"ವಿಗತದೋಷೈರೇವ ಪಣ್ಡಿತೈರ್ವೇದಾನ್ತಾರ್ಥತತ್ಪರೈಃ ಸಂನ್ಯಾಸಿಭಿಃ ಅಯಮಾತ್ಮಾ ದ್ರಷ್ಟುಂ ಶಕ್ಯಃ, ನಾನ್ಯೈಃ ರಾಗಾದಿಕಲುಷಿತಚೇತೋಭಿಃ ಸ್ವಪಕ್ಷ ಪಾತಿದರ್ಶನೈಃ ತಾರ್ಕಿಕಾದಿಭಿಃ ಇತ್ಯಭಿಪ್ರಾಯಃ" (೨-೩೫, ಭಾ. ಭಾ. ೧೨೧). "ಯಾವ ದೋಷಗಳೂ ಇಲ್ಲದ, ವೇದಾಂತಾರ್ಥದಲ್ಲಿಯೇ ತತ್ಪರರಾಗಿರುವ ಸಂನ್ಯಾಸಿ ಗಳಿಗೇ ಈ ಆತ್ಮನನ್ನು ಕಾಣುವದು ಶಕ್ಯವೇ ಹೊರತು ರಾಗವೇ ಮುಂತಾದ (ದೋಷ ಗಳಿಂದ) ಚಿತ್ತವು ಕದಡಿರುವ, ತಮಗೆ ಬೇಕಾಗಿರುವ ದರ್ಶನಗಳನ್ನೇ (ಇಟ್ಟು ಕೊಂಡಿರುವ) ತಾರ್ಕಿಕರೇ, ಮುಂತಾದವರಿಗೆ ಆಗಲಾರದು - ಎಂದು ಅಭಿಪ್ರಾಯ."

ಶಾಸ್ತ್ರೋಕ್ತವಾದ ಉಪಾಸನೆಗಳನ್ನು ನಿಂದಿಸಿರುವದು ಅಜಾತಿವಾದದ ಹೆಚ್ಚು ಗಾರಿಕೆಯನ್ನು ತಿಳಿಸುವದಕ್ಕೇ ಹೊರತು ಆ ಸಾಧನಗಳು ಸರ್ವಥಾ ಉಪಯೋಗವಿಲ್ಲ ವೆಂಬ ಭಾವದಿಂದಲ್ಲ. ಆದ್ದರಿಂದಲೇ ಮಂದಮಧ್ಯಮಾಧಿಕಾರಿಗಳಿಗೆ ಕರ್ಮವನ್ನೂ ಉಪಾಸನೆಯನ್ನೂ ಶ್ರುತಿಯು ಕನಿಕರದಿಂದ ವಿಧಿಸಿದೆ ಎಂದೂ (೩-೧೬), ಸ್ಥೂಲ ಬುದ್ಧಿಗಳಾದ ಶ್ರೋತ್ರಿಯರಿಗೆ ಕರ್ಮಾಧಿಸಾಧನಗಳಿಗೆ ಅನುಕೂಲವಾಗಿರಲೆಂದು ಸೃಷ್ಟಿ ಯನ್ನು ಒಪ್ಪಿದೆ ಎಂದೂ (೪-೪೨) ಕಾರಿಕಾಕಾರರೂ ಭಾಷ್ಯಕಾರರೂ ಹೇಳಿರುತ್ತಾರೆ. ಈ ರೀತಿಯಲ್ಲಿ ನೋಡಿದರೆ ದ್ವೈತವು ವ್ಯಾವಹಾರಿಕಸತ್ಯ, ಅದ್ವೈತವು ಪರಮಾರ್ಥ ಸತ್ಯ-ಎಂಬುದೇ ಕಾರಿಕಾಕಾರರ ಮತ್ತು ಭಾಷ್ಯಕಾರರ ಸಿದ್ಧಾಂತವಾಗಿರುತ್ತದೆ.

ಈ ಪೀಠಿಕೆಯು ಈಗಾಗಲೇ ಬಲುದೊಡ್ಡದಾಗಿರುತ್ತದೆ. "ಗೌಡಪಾದ ಹೃದಯ" ಎಂಬ ಒಂದು ದೊಡ್ಡ ಪ್ರಬಂಧದಲ್ಲಿ ಗೌಡಪಾದಕಾರಿಕೆಯ ಗಡುಚಾದ ವಿಷಯಗಳನ್ನೆಲ್ಲ ಚರ್ಚಿಸಿ ವಿಸ್ತಾರವಾಗಿ ಲಲಿತವಾದ ಶೈಲಿಯಿಂದ ಬರೆದು ಕಾರ್ಯಾಲಯದ ಮೂಲಕ ಈಚೆಗೆ ಪ್ರಕಾಶಗೊಳಿಸಿರುತ್ತೇವೆ. ವಾಚಕರು ಆ ಗ್ರಂಥವನ್ನು ಕೊಂಡು ಇದರ ಜೊತೆಗೇ ಅಧ್ಯಯನಮಾಡಿದಲ್ಲಿ ಇಲ್ಲಿರುವ ವಿಷಯಗಳು ಚೆನ್ನಾಗಿ ಕರಗತವಾಗುವವು. ಈ ಪೀಠಿಕೆ ಯಲ್ಲಿಯೂ ಪ್ರಸ್ತಾಪಿಸಿರುವ ಪ್ರಧಾನವಿಷಯಗಳಿಂದಲೂ ವಾಚಕರು ಸಾಕಷ್ಟು ತಿಳಿವಳಿಕೆ ಯನ್ನು ಹೊಂದಬಹುದಾಗಿದೆ. ಈ ಸಂಸ್ಕರಣವನ್ನು ಮೊದಲಿಗಿಂತ ಅನೇಕ ಪ್ರಕಾರಗಳಿಂದ ತೃಪ್ತಿಕರವಾದ ರೂಪದಲ್ಲಿ ಪ್ರಕಾಶಗೊಳಿಸುವದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಪರಮೇಶ್ವರನನ್ನು ಭಕ್ತಿಯಿಂದ ನಮಸ್ಕರಿಸಿ ಈ ಪೀಠಿಕೆಯನ್ನು ಇಲ್ಲಿಗೆ ಮುಗಿಸುವೆವು.

೧೯೪೭, ಸರ್ವಜಿತ್ ಸಂವತ್ಸರ
ಮಾಘಬಹುಳ ಷಷ್ಠಿ

- ಗ್ರಂಥಕರ್ತ

# ವಿಷಯಾನುಕ್ರಮಣಿಕೆ

## ಭಾಷ್ಯಕಾರರ ಅವತರಣಿಕೆ

ಮಂಗಲ-ಈ ಪ್ರಕರಣದ ಸಂಬಂಧ (೧)-ವೇದಾಂತದ ಅನುಬಂಧಗಳು (೨)-ಪ್ರಕರಣ ವಿಷಯಗಳ ವಿಂಗಡ (೩). ಪುಟ (೧-೫)

## ೧. ಉಪನಿಷತ್ತು

ಓಂಕಾರನಿರ್ಣಯದಿಂದ ಆತ್ಮತತ್ತ್ವಜ್ಞಾನವಾಗುವ ರೀತಿ (೪)-ಎಲ್ಲವೂ ಓಂಕಾರವೇ (೫-೬)-ಎಲ್ಲವೂ ಬ್ರಹ್ಮವೇ, ಬ್ರಹ್ಮವು ಆತ್ಮನೇ (೭-೮) ಆತ್ಮನಿಗೆ ನಾಲ್ಕುಪಾದಗಳು (೯)-ವೈಶ್ವಾನರನೆಂಬ ಮೊದಲನೆಯ ಪಾದ (೧೦-೧೧)-ಆತ್ಮನ ಪಾದಗಳು ಸಮಷ್ಟ್ಯುಪಾಧಿಯಿಂದ ಕೂಡಿವೆ (೧೨-೧೩)-ತೈಜಸನೆಂಬ ಎರಡನೆಯ ಪಾದ (೧೪)-ಪ್ರಾಜ್ಞನೆಂಬ ಮೂರನೆಯ ಪಾದ (೧೫-೧೭). ಪುಟ (೬-೨೫)

## ೧. ಕಾರಿಕೆ : ಆಗಮಪ್ರಕರಣ

ಕಾರಿಕಾರಂಭ (೧೮)-ವಿಶ್ವಾದಿಗಳು ಮೂವರಲ್ಲ, ಒಬ್ಬನೇ (೧೯)-ಎಚ್ಚರದಲ್ಲಿಯೇ ವಿಶ್ವಾದಿಗಳ ಅನುಭವ (೨೦-೨೨)-ಪ್ರಾಜ್ಞನೂ ಅವ್ಯಾಕೃತನೂ ಒಬ್ಬನೇ (೨೩)-ಅವ್ಯಾಕೃತನಿಗೆ ಪ್ರಾಣನೆಂಬ ಹೆಸರು ಹೇಗೆ ? (೨೪)-ಶುದ್ಧಬ್ರಹ್ಮವನ್ನು ಶ್ರುತಿಯಲ್ಲಿಯೂ ಕಾರಿಕೆಯಲ್ಲಿಯೂ ಹೇಳಿದೆ (೨೫)-ಎಚ್ಚರದಲ್ಲಿಯೇ ಪ್ರಾಜ್ಞನ ಅನುಭವವೂ ಇದೆ (೨೬)-ಭೋಕ್ತೃ ಒಬ್ಬನೇ, ಭೋಜ್ಯವೂ ಒಂದೇ (೨೭-೨೮)-ಪ್ರಾಣಾತ್ಮನಿಂದ ಸೃಷ್ಟಿ, ಸತ್ಕಾರ್ಯವಾದ (೨೯-೩೦)-ಸೃಷ್ಟಿ ಪರಮಾರ್ಥವಲ್ಲ (೩೧-೩೩). ಪುಟ (೨೬-೪೫)

## ೨. ಉಪನಿಷತ್ತು

ತುರೀಯಮಂತ್ರದ ಅವತರಣಿಕೆ (೩೪)-ತುರೀಯವು ನಿರ್ವಿಶೇಷವಾದರೂ ಶೂನ್ಯವಲ್ಲ (೩೫)-ತುರೀಯವು ನಿಷ್ಪ್ರಯೋಜನವಲ್ಲ (೩೬)-ತುರೀಯನು ಅಂತಃಪ್ರಜ್ಞಾದಿಗಳಿಗಿಂತ ಬೇರೆ ಎಂದಿರುವದರ ಪ್ರಯೋಜನ (೩೭-೩೮)-ಪ್ರತಿಷೇಧವಾಕ್ಯದ ಪ್ರಾಮಾಣ್ಯ (೩೯-೪೨). ಪುಟ (೪೬-೫೯)

## ಕಾರಿಕೆ : ಆಗಮಪ್ರಕರಣ

ತುರೀಯಸ್ವರೂಪ (೪೩)-ವಿಶ್ವಾದಿಗಳಿಗೂ ತುರೀಯನಿಗೂ ತಾರತಮ್ಯ (೪೪-೪೫)-ಪ್ರಾಜ್ಞನಿಗೂ ತುರ್ಯನಿಗೂ ತಾರತಮ್ಯ (೪೬-೪೦)-ತುರೀಯನ ಜ್ಞಾನ (೪೧-೪೭). ಪುಟ (೬೦-೭೩)

## ೩. ಉಪನಿಷತ್ತು

ಆತ್ಮನ ಪಾದಗಳಿಗೂ ಓಂಕಾರದ ಮಾತ್ರೆಗಳಿಗೂ ತಾರತಮ್ಯ (೫೮)-ವೈಶ್ವಾನರನಿಗೂ ಅಕಾರಕ್ಕೂ ತಾದಾತ್ಮ್ಯ (೫೯-೬೦)-ತೈಜಸನಿಗೂ ಉಕಾರಕ್ಕೂ ತಾದಾತ್ಮ್ಯ (೬೧)-ಪ್ರಾಜ್ಞನಿಗೂ ಮಕಾರಕ್ಕೂ ತಾದಾತ್ಮ್ಯ (೬೨)- ಪುಟ (೭೪-೮೦)

## ಕಾರಿಕೆ : ಆಗಮಪ್ರಕರಣ

ಓಂಕಾರದ ಮೂರು ಮಾತ್ರೆಗಳು (೬೩-೬೫)-ಪಾದಮಾತ್ರೆಗಳ ಹೋಲಿಕೆಯ ಜ್ಞಾನಕ್ಕೆ ಫಲ (೬೬-೬೭). ಪುಟ (೮೧-೮೪)

## ೪. ಉಪನಿಷತ್ತು

ಅಮಾತ್ರವಾದ ಓಂಕಾರ (೬೮). ಪುಟ (೮೫-೮೬)

## ಕಾರಿಕೆ : ಆಗಮಪ್ರಕರಣ

ಪರಮಾರ್ಥವಾದ ಓಂಕಾರ (೬೯-೭೪). ಪುಟ (೮೭-೯೨)

## ೨. ವೈತಥ್ಯಪ್ರಕರಣ

ಈ ಪ್ರಕರಣದ ಸಂಬಂಧ (೭೫)-ಕನಸಿನ ಪದಾರ್ಥಗಳು ಹುಸಿತೋರಿಕೆ (೭೬-೮೦)-ಎಚ್ಚರದ ಭಾವಗಳು ಕನಸಿನವುಗಳಂತೆ ಹುಸಿಯೇ (೮೧)-ಕನಸಿಗೂ ಎಚ್ಚರಕ್ಕೂ ಭೇದವಿಲ್ಲ (೮೨-೯೧)-ಎಲ್ಲವೂ ಆತ್ಮನಲ್ಲಿ ಹುಟ್ಟುಗಟ್ಟಿದ ತೋರಿಕೆ (೯೨-೯೪)-ಹುಟ್ಟುಗಟ್ಟುವ ಪ್ರಕಾರಗಳು (೯೫-೯೬)-ಒಳಗಿನ ಹೊರಗಿನ ವಸ್ತುಗಳೆರಡೂ ಕಲ್ಪಿತವೇ (೯೭-೯೯)-ಕಲ್ಪನೆಗಳಿಗೆಲ್ಲ ಮೂಲ (೧೦೦-೧೦೧)-ಜೀವಕಲ್ಪನೆಗೆ ಆತ್ಮನನ್ನು ಅರಿಯದಿರುವದೇ ಕಾರಣ (೧೦೨-೧೦೩)-ಸರ್ವಕಲ್ಪನಾನಿವೃತ್ತಿಯು ಜ್ಞಾನದ ಫಲ (೧೦೪)-ಆತ್ಮನಲ್ಲಿ ತೋರುವ ವಿಕಲ್ಪಗಳು ಮಾಯಾ ಮಾತ್ರ (೧೦೫)-ಆತ್ಮನಲ್ಲಿ ವಾದಿಗಳ ಕಲ್ಪನೆಗಳು (೧೦೬-೧೦೭)-ಆತ್ಮಜ್ಞಾನಿಯೇ ವೇದಾರ್ಥವನ್ನು ಬಲ್ಲವನು (೧೦೮)-ದ್ವೈತಮಿಥ್ಯಾತ್ವಕ್ಕೆ ವೇದಾಂತಪ್ರಮಾಣ (೧೦೯)-ವ್ಯವಹಾರವು ಯಾವದೂ ಪರಮಾರ್ಥವಲ್ಲ (೧೧೦-೧೧೨)-ಹುಟ್ಟುಹೊಂದುಗಳು ಇಲ್ಲ ವೆಂಬುದು ಹೇಗೆ ? (೧೧೩)-ದ್ವೈತವು ಅಸತ್ತಾದರೂ ಶೂನ್ಯವಾದವು ಸಿದ್ಧಿಸುವದಿಲ್ಲ (೧೧೪)-ಶಾಸ್ತ್ರವು ದ್ವೈತದ ಅರಿವನ್ನು ಹೇಗೆ ಬಾಧಿಸುತ್ತದೆ ? (೧೧೫)-ಅದ್ವೈತವೇ ಮಂಗಲಕರವು (೧೧೬-೧೧೯)-ತತ್ತ್ವದರ್ಶನವನ್ನು ಯಾರು ಬಲ್ಲರು ? (೧೨೦-೧೨೧)-ಜ್ಞಾನಿಗಳ ವ್ಯವಹಾರ (೧೨೨-೧೨೬). ಪುಟ (೯೩-೧೪೫)

## ೩. ಅದ್ವೈತಪ್ರಕರಣ

ಗ್ರಂಥಸಂಬಂಧ (೧೨೭-೧೨೮)-ಅಜಾತಬ್ರಹ್ಮವಾದಕ್ಕೆ ಅವತರಣಿಕೆ (೧೨೯-೧೩೦)-ಜೀವನ ಹುಟ್ಟೂ ಸಾವೂ ಔಪಾಧಿಕ (೧೩೧-೧೩೩) ಆತ್ಮೈಕತ್ವವಾದದಲ್ಲಿ ಸುಖದುಃಖಾಟಗಳ

ವ್ಯವಸ್ಥೆ (೧೩೪-೧೩೫)-ಆತ್ಮೈಕತ್ವವಿಷಯದಲ್ಲಿ ಸಾಂಖ್ಯರ ಆಕ್ಷೇಪಕ್ಕೆ ಪರಿಹಾರ (೧೩೬-೧೩೭)-ವೈಶೇಷಿಕಾದಿಗಳ ಖಂಡನೆ (೧೩೭-೧೩೮)-ಅವಿದ್ಯಾಕೃತವ್ಯವಹಾರಕ್ಕೆ ದೃಷ್ಟಾಂತ (೧೩೯-೧೪೨)-ಜೀವನ ಸಂಸಾರವು ಪರಮಾರ್ಥವಲ್ಲ (೧೪೩-೧೪೭)-ಆತ್ಮನಿಗೆ ಹುಟ್ಟು ಮುಂತಾದವಿಲ್ಲವೆಂಬುದಕ್ಕೆ ಶ್ರುತಿ (೧೪೮-೧೫೧)-ಶ್ರುತ್ಯುಕ್ತ ಜೀವಬ್ರಹ್ಮಭೇದಕ್ಕೆ ಗತಿ (೧೫೨-೧೫೪)-ಸೃಷ್ಟಿವಾಕ್ಯಗಳ ತಾತ್ಪರ್ಯ (೧೫೫-೧೫೭)-ಕರ್ಮೋಪಾಸನಾವಾಕ್ಯಗಳ ಗತಿ (೧೫೮-೧೫೯)-ರಾಗದ್ವೇಷಾದಿಗಳಿಗೆಡೆಯಲ್ಲದ್ದರಿಂದ ಅದ್ವೈತವೇ ಸರಿಯಾದ ದರ್ಶನ (೧೬೦-೧೬೫)-ಜಾತಬ್ರಹ್ಮವಾದದಲ್ಲಿ ದೋಷ (೧೬೬-೧೬೮)-ಅಜಾತಿವಾದದಲ್ಲಿ ಸೃಷ್ಟಿಶ್ರುತಿಯ ತಾತ್ಪರ್ಯ (೧೬೯-೧೭೪)-ಶ್ರುತಿಯಿಂದ ಅಜಬ್ರಹ್ಮಜ್ಞಾನವಾಗುವ ರೀತಿ (೧೭೫)-ಸದ್ವಸ್ತುವಿಗೆ ಮಾಯೆಯಿಂದ ಜನ್ಮವುಂಟು (೧೭೬-೧೭೯)-ಜನ್ಮವು ಮಾಯಿಕವೆಂಬುದು ಹೇಗೆ ? (೧೮೦-೧೮೨)-ದ್ವೈತವು ಮನೋಮಾತ್ರ (೧೮೩-೧೮೪)-ಜ್ಞಾನದಿಂದ ಮನಸ್ಸು ಅಮನಸ್ಕಾಗುವದು (೧೮೫-೧೮೬)-ಜ್ಞಾನದ ಸ್ವರೂಪ (೧೮೭-೧೮೮)-ಜ್ಞಾನದಿಂದ ನಿಗ್ರಹವಾದ ಮನಸ್ಸಿನ ಸ್ವರೂಪ (೧೮೯-೧೯೯)-ಮಧ್ಯಮಾಧಿಕಾರಿಗಳಿಗೆ ಮನೋನಿಗ್ರಹದಿಂದ ಪುರುಷಾರ್ಥ (೨೦೦-೨೦೮)-ಮನೋನಿಗ್ರಹದಿಂದ ಸಿದ್ಧವಾಗುವ ಸುಖ (೨೦೯)-ಪ್ರಕರಣದ ಉಪಸಂಹಾರ (೨೧೦-೨೧೧).

ಪುಟ (೧೪೬-೨೩೩)

## ೪. ಅಲಾತಶಾಂತಿಪ್ರಕರಣ

ಈ ಪ್ರಕರಣದ ಸಂಬಂಧ (೨೧೨)-ಮಂಗಲಾಚರಣೆ (೨೧೩-೨೧೬)-ದ್ವೈತಿಗಳ ವಿವಾದದಿಂದ ಅಜಾತಿವಾದದ ಸಿದ್ಧಿ (೨೧೭-೨೨೧)-ಜಾತಿವಾದದಲ್ಲಿ ದೋಷ (೨೨೨-೨೨೫)-ಅಜಾತಿವಾದದ ಉಪಸಂಹಾರ (೨೨೬-೨೨೭)-ದ್ವೈತಿಗಳ ವಿವಾದದಿಂದ ಕಾರ್ಯಕಾರಣವಾದದ ನಿರಾಸ (೨೨೮-೨೩೨)-ಧರ್ಮಾಧರ್ಮಗಳಿಗೂ ಶರೀರಕ್ಕೂ ಕಾರ್ಯಕಾರಣಭಾವವಿಲ್ಲ (೨೩೩-೨೪೮)-ಹೇತುಫಲಗಳ ಅಜಾತಿತ್ವಸಿದ್ಧಿ (೨೪೯-೨೫೫)-ಚಿತ್ತಕ್ಕಿಂತ ಬೇರೆಯಾದ ವಿಷಯವಿಲ್ಲ (೨೫೬-೨೬೫)-ಚಿತ್ತವು ಆತ್ಮನಿಗಿಂತ ಬೇರೆ ಇರಲಾರದು (೨೬೬-೨೬೭)-ಅಜಾತಿವಾದವೇ ಸರಿಯಾದದ್ದು (೨೬೮-೨೬೯)-ಸಂಸಾರಮೋಕ್ಷಗಳು ಪರಮಾರ್ಥವೆಂದರೆ ದೋಷ (೨೭೦-೨೭೧)-ಜಾಗ್ರತ್ಪದಾರ್ಥಗಳು ಮಿಥ್ಯೆ, ಆದ್ದರಿಂದಲೂ ಸಂಸಾರಮೋಕ್ಷಗಳಿಲ್ಲ (೨೭೨)-ಕನಸಿನಂತೆ ಎಚ್ಚರವೂ ಮಿಥ್ಯೆ (೨೭೩-೨೭೬)-ಎಚ್ಚರಕನಸುಗಳಿಗೆ ಕಾರ್ಯಕಾರಣಭಾವವಿಲ್ಲ (೨೭೭-೨೮೬)-ವೇದಾಂತಿಗಳು ಜನ್ಮವುಂಟೆಂದು ಹೇಳುವದರ ಅಭಿಪ್ರಾಯ (೨೮೭-೨೮೮)-ವ್ಯವಹಾರಗೋಚರವಾದ ಮಾತ್ರಕ್ಕೆ ದ್ವೈತವು ಸತ್ಯವಾಗಲಾರದು (೨೮೯-೨೯೩)-ಅಜಾತವಸ್ತುವಿಗೆ ದೃಷ್ಟಾಂತ (೨೯೪-೩೦೦)-ಆತ್ಮನಲ್ಲಿ ಕಾರ್ಯಕಾರಣಭಾವವಿಲ್ಲವೆಂಬುದಕ್ಕೆ ಯುಕ್ತಿ (೩೦೧-೩೦೩)-ಹೇತುಫಲಾಭಿಮಾನವು ಹೋದರೆ ಮುಕ್ತಿ (೩೦೪-೩೦೭)-ಪರಮಾರ್ಥದೃಷ್ಟಿಯಲ್ಲಿ ನಿತ್ಯಾನಿತ್ಯವಿಭಾಗವಿಲ್ಲ (೩೦೮-೩೧೩)-ದ್ವೈತವೆಲ್ಲವೂ ಚಿತ್ತದ ಅಲುಗಾಟ (೩೧೪-೩೨೧)-ಶಾಸ್ತ್ರಾಭಿಭೇದವೂ, ಅಜತ್ವವೂ, ಅವಿದ್ಯಕವೇ (೩೨೨-೩೨೫)-ಮಿಥ್ಯಾಭಿಮಾನದಿಂದ ಸಂಸಾರ, ಜ್ಞಾನದಿಂದ ಮೋಕ್ಷ (೩೨೬-೩೪೨)-ಜ್ಞಾನದ ವ್ಯಾವಹಾರಿಕಪ್ರಯೋಜನ

(೩೪೩-೩೪೪)-ವೇದಾಂತಪ್ರಕ್ರಿಯೆ (೩೪೫-೩೪೭)-ಆತ್ಮನು ಅವಸ್ಥಾರಹಿತನು (೩೪೮-೩೪೯)-ಉಪಸಂಹಾರ (೩೫೧-೩೬೬)-ಮಂಗಲ (೩೬೭-೩೬೮). ಪುಟ (೨೩೪-೩೬೨)

## ಮಾಂಡೂಕ್ಯಕಾರಿಕೆಯ ಸಾ

೧. ಆಗಮಪ್ರಕರಣ ಪುಟ ೩೬೩-೩೬೪

೨. ವೈತಥ್ಯಪ್ರಕರಣ ಪುಟ ೩೬೪-೩೬೬

೩. ಅದ್ವೈತಪ್ರಕರಣ ಪುಟ ೩೬೬-೩೬೯

೪. ಅಲಾತಶಾಂತಿಪ್ರಕರಣ ಪುಟ ೩೬೯-೩೭೨

## ಪರಿಶಿಷ್ಟ

೧. ಬೌದ್ಧಪ್ರಕ್ರಿಯಾಸಾಮ್ಯವಿಚಾರ ಪುಟ ೩೭೩-೩೭೬

೨. ಕಾರಿಕೆಗಳಿಗೂ ಬೌದ್ಧಗ್ರಂಥಗಳಿಗೂ ಸಮಾನವಾದ ಶಬ್ದಗಳು ಪುಟ ೩೭೭-೩೮೧

೩. ಶ್ರುತ್ಯುದಾಹರಣಸೂಚನೆ ಪುಟ ೩೮೨-೩೮೩

**ಕಾರಿಕೆಗಳ ಅನುಕ್ರಮಣಿಕೆ** ಪುಟ ೩೮೪-೩೮೭

**ಶಬ್ದಾನುಕ್ರಮಣಿಕೆ** ಪುಟ ೩೮೮-೪೦೦

## ಸಂಕೇತಗಳ ವಿವರ

ಈ ಸಂಪುಟದಲ್ಲಿ ಮುಂಡಕ, ಪ್ರಶ್ನ-ಇವುಗಳ ಭಾಷ್ಯಗಳಲ್ಲಿ ಉಪಯೋಗಿಸಿರುವ ಸಂಕೇತ ಗಳನ್ನೇ ಉಪಯೋಗಿಸಿದೆ. ಆ ಸಂಕೇತಾಕ್ಷರಗಳನ್ನು ಈ ಪುಸ್ತಕಗಳಲ್ಲಿ ವಿವರಿಸಿರುತ್ತದೆ. ಇಲ್ಲಿ ಕೆಲವು ಅಕ್ಷರಸಂಕೇತಗಳನ್ನು ಮಾತ್ರ ಕೊಟ್ಟಿದೇವೆ.

| | |
|---|---|
| ಈ. ಮಾ. | ಈಶಾವಾಸ್ಯ, ಮಾಧ್ಯಂದಿನ ಪಾಠ. |
| ಗೌ. ಭಾಷ್ಯ. | ಗೌಡಪಾದರು ಸಾಂಖ್ಯಕಾರಿಕೆಗೆ ಬರೆದ ಭಾಷ್ಯ. |
| ನಾ. | ತೈತ್ತಿರೀಯೋಪನಿಷತ್ತು ನಾರಾಯಣಪನ್ನ. |
| ನ್ಯಾ. ಸೂ. | ನ್ಯಾಯಸೂತ್ರ, ಗೌತಮವಿರಚಿತ. |
| ಮಂ. | ಮಂತ್ರ. |
| ಯೋ. ಸೂ. | ಯೋಗಸೂತ್ರ. |
| ಸಾಂ. ಕಾ. | ಸಾಂಖ್ಯಕಾರಿಕಾ, ಈಶ್ವರಕೃಷ್ಣಕೃತ. |

ಉಪನಿಷತ್ತುಗಳನ್ನು ಮೊದಲನೆಯ ಅಕ್ಷರದಿಂದಲೂ ಭಾಷ್ಯಭಾಗವನ್ನು ಭಾ. ಭಾ. ಎಂಬ ಅಕ್ಷರಗಳಿಂದಲೂ ತಿಳಿಸಿದೆ.

॥ ಓಂ ॥

# ಶ್ರೀಶಾಂಕರಭಾಷ್ಯಸಮೇತ

# ಶ್ರೀಗೌಡಪಾದೀಯಕಾರಿಕಾಸಹಿತ

# ಮಾಂಡೂಕ್ಯೋಪನಿಷತ್ತು

## ಭಾಷ್ಯಕಾರರ ಅವತರಣಿಕೆ

### ಮಂಗಲ

ಪ್ರಜ್ಞಾನಾಂಶುಪ್ರತಾನೈಃ ಸ್ಥಿರಚರನಿಕರವ್ಯಾಪಿಭಿರ್ವ್ಯಾಪ್ಯ ಲೋಕಾನ್
ಭುಕ್ತ್ವಾ ಭೋಗಾನ್ ಸ್ಥವಿಷ್ಠಾನ್ ಪುನರಪಿ ಧಿಷಣೋದ್ಭಾಸಿತಾನ್ ಕಾಮಜನ್ಯಾನ್ ।
ಪೀತ್ವಾ ಸರ್ವಾನ್ ವಿಶೇಷಾನ್ ಸ್ವಪಿತಿ ಮಧುರಭುಜ್ ಮಾಯಯಾ ಭೋಜಯನ್ವೋ
ಮಾಯಾಸಜ್ಞಾತುರೀಯಂ ಪರಮಮೃತಮಜಂ ಬ್ರಹ್ಮ ಯತ್ತನ್ನತೋಽಸ್ಮಿ ॥೧॥

೧. ಸ್ಥಾವರಜಂಗಮ (ಪ್ರಾಣಿಗಳ) ಸಮೂಹಗಳಲ್ಲಿ ಹಬ್ಬಿರುವ ಜ್ಞಾನರೂಪವಾದ (ತನ್ನ) ಕಿರಣಗಳ ಹರಡುವಿಕೆಯಿಂದ ಲೋಕಗಳನ್ನು ವ್ಯಾಪಿಸಿಕೊಂಡು ಅತ್ಯಂತ ಸ್ಥೂಲವಾದ ಭೋಗಗಳನ್ನು ಅನುಭವಿಸಿ, ಮತ್ತೂ ಒಮ್ಮೆ ಕಾಮದಿಂದ ಹುಟ್ಟಿದವುಗಳೂ ಬುದ್ಧಿಯು ತೋರಿಸಿಕೊಡತಕ್ಕವುಗಳೂ ಆದ (ಸೂಕ್ಷ್ಮಭೋಗಗಳನ್ನೂ ಅನುಭವಿಸಿ), ಎಲ್ಲಾ ವಿಶೇಷಗಳನ್ನೂ ಹೀರಿಕುಡಿದು ಸುಖವನ್ನು ಅನುಭವಿಸುತ್ತಾ ಮಾಯೆಯಿಂದ ನಮ್ಮಗಳಿಗೆ ಭೋಗವನ್ನುಂಟುಮಾಡಿಕೊಡುತ್ತಾ ನಿದ್ರಿಸುತ್ತಿರುವ (ಕಲ್ಪಿತವಾದ ಮೂರವಸ್ಥೆಗಳ) ಮಾಯಾಸಂಖ್ಯೆಗೆ ನಾಲ್ಕನೆಯದಾದ ಅಮೃತವೂ ಅಜವೂ ಆಗಿರುವ ಪರಬ್ರಹ್ಮವು ಯಾವದೋ ಅದನ್ನು ನಮಸ್ಕರಿಸುವೆನು.

ಯೋ ವಿಶ್ವಾತ್ಮಾ ವಿವಿಧವಿಷಯಾನ್ ಪ್ರಾಶ್ಯ ಭೋಗಾನ್ ಸ್ಥವಿಷ್ಠಾನ್
ಪಶ್ಚಾಚ್ಚಾನ್ಯಾನ್ ಸ್ವಮತಿವಿಭವಾನ್ ಜ್ಯೋತಿಷಾ ಸ್ವೇನ ಸೂಕ್ಷ್ಮಾನ್ ।
ಸರ್ವಾನೇತಾನ್ ಪುನರಪಿ ಶನೈಃ ಸ್ವಾತ್ಮನಿ ಸ್ಥಾಪಯಿತ್ವಾ
ಹಿತ್ವಾ ೞನ್ ವಿಶೇಷಾನ್ ವಿಗತಗುಣಗಣಃ ಪಾತ್ವಸೌ ನಸ್ತುರೀಯಃ[1] ॥೨॥

೨. ಯಾವ ಸರ್ವಾತ್ಮನು ಬಗೆಬಗೆಯ[2] ವಿಷಯಗಳ ರೂಪದ ಸ್ಥೂಲತಮ

1. ಈ ಪಾದದಲ್ಲಿ ವೃತ್ತದ ಲಕ್ಷಣವಿಲ್ಲವಲ್ಲ ! - ಎಂಬ ಶಂಕೆಗೆ ಇದರಲ್ಲಿ ಗಾಥಾ ಲಕ್ಷಣವಿದೆ ಎಂಬ ಸಮಾಧಾನವನ್ನು ಆ ॥ ವ್ಯಾಖ್ಯಾನಕಾರರು ಕೊಟ್ಟಿರುತ್ತಾರೆ.

2. "ವಿಧಿಜವಿಷಯಾನ್" ಎಂಬ ಪಾಠವನ್ನು ಸ್ವೀಕರಿಸಿ ಧರ್ಮಾಧರ್ಮಗಳಿಂದ ಆಗಿರುವ ವಿಷಯಗಳನ್ನು ಎಂದು ಆ ॥ ವ್ಯಾಖ್ಯಾನದಲ್ಲಿ ಅರ್ಥಮಾಡಿರುತ್ತದೆ.

ಭೋಗಗಳನ್ನು ಅನುಭವಿಸಿ,[1] ಬಳಿಕ ತನ್ನ ಮನಸ್ಸಿನಿಂದ ಹರಡಿಕೊಂಡಿರುವ[2] ಸೂಕ್ಷ್ಮವಾದ ಬೇರೆಯ (ಭೋಗಗಳನ್ನೂ ಅನುಭವಿಸಿ), ಆಮೇಲೆ ಮೆಲ್ಲಮೆಲ್ಲಗೆ ಈ ಭೋಗಗಳನ್ನೆಲ್ಲ ತನ್ನ ಸ್ವರೂಪದಲ್ಲಿಯೇ ಇಟ್ಟು, ವಿಶೇಷಗಳನ್ನೆಲ್ಲ ಬಿಟ್ಟು, ಗುಣಸಮೂಹವಿಲ್ಲದವನಾಗುವನೋ ಆ ನಾಲ್ಕನೆಯ (ಆತ್ಮನು) ನಮ್ಮಗಳನ್ನು ಕಾಪಾಡಲಿ ![3]

## ಈ ಪ್ರಕರಣದ ಸಂಬಂಧ

### (ಭಾಷ್ಯ)

೧. ''ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಮ್'' । ವೇದಾನ್ತಾರ್ಥಸಾರಸಂಗ್ರಹಭೂತಮ್ ಇದಂ ಪ್ರಕರಣಚತುಷ್ಟಯಮ್ ಓಮಿತ್ಯೇತದಕ್ಷರಮ್ ಇತ್ಯಾದಿ ಆರಭ್ಯತೇ । ಅತ ಏವ ನ ಪೃಥಕ್ ಸಂಬನ್ಧಾಭಿಧೇಯಪ್ರಯೋಜನಾನಿ ವಕ್ತವ್ಯಾನಿ । ಯಾನ್ಯೇವ ತು ವೇದಾನ್ತೇ ಸಂಬನ್ಧಾಭಿಧೇಯಪ್ರಯೋಜನಾನಿ ತಾನ್ಯೇವೇಹ ಭವಿತುಮ್ ಅರ್ಹನ್ತಿ । ತಥಾಪಿ ಪ್ರಕರಣವ್ಯಾಚಿಖ್ಯಾಸುನಾ ಸಂಕ್ಷೇಪತಃ ವಕ್ತವ್ಯಾನಿ ।।[4]

### (ಭಾಷ್ಯಾರ್ಥ)

''ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಮ್ (ಎಂಬ ಗ್ರಂಥದ ಸಂಬಂಧವೇನೆಂದರೆ) : ''ಓಮಿತ್ಯೇತದಕ್ಷರಮ್'' ಎಂದು ಮುಂತಾಗಿರುವ ವೇದಾಂತಾರ್ಥದ ಸಾರದ ಸಂಗ್ರಹವಾಗಿರುವ[5] ಈ ಪ್ರಕರಣಚತುಷ್ಟಯವನ್ನು[6] ಆರಂಭಿಸಿರುತ್ತದೆ. ಆದ್ದರಿಂದಲೇ ಸಂಬಂಧ, ವಿಷಯ, ಪ್ರಯೋಜನ-ಇವುಗಳನ್ನು

---

1. 'ಪ್ರಾಪ್ಯ' ಎಂಬ ಪಾಠಕ್ಕೆ ಹೊಂದಿ ಎಂದು ಅರ್ಥ.

2. ''ಸ್ವಮತಿವಿಭವಾನ್'' ಎಂಬ ಮಾತಿಗೆ ತನ್ನ ಮನೋಮಾತ್ರದಿಂದ ಎಂದರೆ - ವಾಸನೆಯಿಂದ ಹುಟ್ಟಿದ ಎಂದು ಆ ।। ವ್ಯಾಖ್ಯಾನದ ಅರ್ಥ. ''ಕಾಮಜನ್ಯಾನ್'' ಎಂಬ ಶಬ್ದದಿಂದಲೇ ಈ ಅಭಿಪ್ರಾಯವು ಹೊರಡುತ್ತದೆಯಾದ್ದರಿಂದ ಮನಸ್ಸೇ ವಿಷಯರೂಪವನ್ನೂ ಪಡೆಯುವದೆಂಬ ಅರ್ಥವನ್ನು ನಾವು ತೆಗೆದಿದ್ದೇವೆ.

3. ಇಲ್ಲಿರುವ ಎರಡು ಶ್ಲೋಕಗಳೂ ಒಂದೇ ಅಭಿಪ್ರಾಯದವು. ಇವುಗಳನ್ನು ರಚಿಸಿರುವವರ ಮತ್ತು ಇವುಗಳ ಪ್ರಯೋಜನದ ವಿಷಯಕ್ಕೆ ಪೀಠಿಕೆಯನ್ನು ನೋಡಿ.

4. ''ವಕ್ತವ್ಯಾನೀತಿ ಮನ್ಯನ್ತೇ ವ್ಯಾಖ್ಯಾತಾರಃ'' ಎಂಬ ಪಾ ।। ಪಾಠವು ಬೇಕಿಲ್ಲ.

5. ವೇದಾಂತವೆಂದರೆ ಉಪನಿಷತ್ತು. ಅದರ ಅರ್ಥವೆಂದರೆ ಉಪಾಸನೆ, ಆತ್ಮಸ್ವರೂಪಜ್ಞಾನ -ಮುಂತಾದದ್ದು : ಅದರಲ್ಲಿ ಸಾರವೆಂದರೆ ಆತ್ಮಜ್ಞಾನವು. ಅದರ ಸಂಗ್ರಹವೆಂದರೆ ಸಂಕ್ಷೇಪಕಥನವು. ಆ ।। ವ್ಯಾಖ್ಯಾನದಲ್ಲಿ ಈ ಮಾತಿಗೆ ಬೇರೆಯ ರೀತಿಯಾಗಿ ಅರ್ಥವನ್ನು ಕಲ್ಪಿಸಿದೆ.

6. ''ಓಮಿತ್ಯೇತದಕ್ಷರಮ್'' ಎಂಬುದೇ ಮುಂತಾದ ಉಪನಿಷತ್ತನ್ನು ಆಬಯಲ್ಲುಳ್ಳ ಪ್ರಕರಣಚತುಷ್ಟಯವನ್ನು ಎಂದರ್ಥ. ಇದರ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ

ಬೇರೆಯಾಗಿ ಹೇಳಬೇಕಾದದ್ದು ಇರುವದಿಲ್ಲ. (ಏಕೆಂದರೆ) ವೇದಾಂತದಲ್ಲಿ[1] ಯಾವವು ಸಂಬಂಧ, ವಿಷಯ, ಪ್ರಯೋಜನ-ಎನ್ನಿಸಿರುವವೋ ಅವೇ ಇಲ್ಲಿಯೂ (ಸಂಬಂಧಾದಿಗಳಾ)ಗಿರಬೇಕಾಗಿದೆ. ಹೀಗಿದ್ದರೂ ಪ್ರಕರಣವನ್ನು ವ್ಯಾಖ್ಯಾನಮಾಡುವಾತನು[2] (ಇವನ್ನು) ಸಂಕ್ಷೇಪವಾಗಿ ಹೇಳತಕ್ಕದ್ದು (ಅವಶ್ಯ).

## ವೇದಾಂತದ ಅನುಬಂಧಗಳು

(ಭಾಷ್ಯ)

೨. ತತ್ರ ಪ್ರಯೋಜನವತ್ಸಾಧನಾಭಿವ್ಯಞ್ಜಕತ್ವೇನ ಅಭಿಧೇಯಸಂಬದ್ಧಂ ಶಾಸ್ತ್ರಂ ಪಾರಮ್ಪರ್ಯೇಣ ವಿಶಿಷ್ಟಸಂಬನ್ಧಾಭಿಧೇಯಪ್ರಯೋಜನವತ್ ಭವತಿ । ಕಿಂ ಪುನಸ್ತತ್ ಪ್ರಯೋಜನಮ್ ಇತಿ ? ಉಚ್ಯತೇ । ರೋಗಾರ್ತಸ್ಯೇವ ರೋಗನಿವೃತ್ತೌ ಸ್ವಸ್ಥತಾ ತಥಾ ದುಃಖಾತ್ಮಕಸ್ಯ ಆತ್ಮನಃ ದ್ವೈತಪ್ರಪಞ್ಚೋಪಶಮೇ ಸ್ವಸ್ಥತಾ ಅದ್ವೈತಭಾವಃ ಪ್ರಯೋಜನಮ್ । ದ್ವೈತಪ್ರಪಞ್ಚಾಸ್ಯ ಅವಿದ್ಯಾಕೃತತ್ವಾತ್ ವಿದ್ಯಯಾ ತದುಪಶಮಃ ಸ್ಯಾತ್ ಇತಿ ಬ್ರಹ್ಮವಿದ್ಯಾಪ್ರಕಾಶನಾಯ ಅಸ್ಯ ಆರಮ್ಭಃ ಕ್ರಿಯತೇ । ''ಯತ್ರ ಹಿ ದ್ವೈತಮಿವ ಭವತಿ'' (ಬೃ. ೨-೪-೧೪, ೪-೫-೧೫) ''ಯತ್ರ ವಾ ಅನ್ಯದಿವ ಸ್ಯಾತ್ ತತ್ರಾನ್ಯೋಽನ್ಯತ್ ಪಶ್ಯೇತ್ ..... ಅನ್ಯೋಽನ್ಯದ್ವಿಜಾನೀಯಾತ್'' (ಬೃ. ೪-೩-೩೧), ''ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್ ..... ಕೇನ ಕಂ ವಿಜಾನೀಯಾತ್'' (ಬೃ. ೪-೫-೧೫) ಇತ್ಯಾದಿಶ್ರುತಿಭ್ಯಃ ಅಸ್ಯಾರ್ಥಸ್ಯ ಸಿದ್ಧಿಃ ॥

(ಭಾಷ್ಯಾರ್ಥ)

ಇಲ್ಲಿ ಪ್ರಯೋಜನವುಳ್ಳ ಸಾಧನವನ್ನು ತಿಳಿಸಿಕೊಡುವದರಿಂದ ಶಾಸ್ತ್ರಕ್ಕೆ ವಿಷಯದ ಸಂಬಂಧವಿರುವದರಿಂದ, ಪರಂಪರೆಯಿಂದ (ಅದಕ್ಕೆ) ಅಸಾಧಾರಣವಾದ ಸಂಬಂಧ, ವಿಷಯ, ಪ್ರಯೋಜನ[3] - ಇವುಗಳು ಇದ್ದಂತೆ ಆಯಿತು.

(ಪ್ರಶ್ನೆ) :- ಹಾಗಾದರೆ ಆ ಪ್ರಯೋಜನವು ಯಾವದು ?

(ಉತ್ತರ) :- ಹೇಳುತ್ತೇವೆ, (ಕೇಳಿ). ರೋಗದಿಂದ ನರಳುತ್ತಿರುವವನಿಗೆ

1. ಉಪನಿಷತ್ತಿನಲ್ಲಿ.

2. ಆಚಾರ್ಯರು ಪ್ರಕರಣಕ್ಕೇ ತಾವು ವ್ಯಾಖ್ಯಾನಮಾಡುವೆವೆಂದೂ ಉಪನಿಷತ್ತಿನ ಅರ್ಥವು ಪ್ರಕರಣದಲ್ಲಿ ಅಡಗಿದೆಯೆಂದೂ ಇಲ್ಲಿ ಹೇಳಿಕೊಂಡಿದ್ದಾರೆ.

3. ಗ್ರಂಥವು ಯಾರಿಗೆ (ಅಧಿಕಾರಿ), ಇಲ್ಲಿ ಹೇಳಿರುವದೇನು (ವಿಷಯ), ಇದರಿಂದ ಆಗುವದೇನು (ಪ್ರಯೋಜನ), ಇದು ಯಾವದಕ್ಕೆ ಸಂಬಂಧಪಟ್ಟದ್ದು (ಸಂಬಂಧ) - ಎಂಬಿವು ಪ್ರತಿಯೊಂದು ಗ್ರಂಥಕ್ಕೂ ಇರಬೇಕು

ರೋಗವು ತೊಲಗಲು ಹೇಗೆ ಸ್ವಸ್ಥತೆಯುಂಟಾಗುವದೆಂಬ (ಪ್ರಯೋಜನವಾಗುವದೋ), ಹಾಗೆ ದುಃಖವನ್ನು ಅನುಭವಿಸುತ್ತಿರುವ ಆತ್ಮನಿಗೆ ದ್ವೈತಪ್ರಪಂಚವು ನಾಶವಾಗಲು ಅದ್ವೈತಭಾವವನ್ನು ಹೊಂದುವದೆಂಬ ಸ್ವಸ್ಥತೆಯು[1] ಪ್ರಯೋಜನವಾಗುವದು. ದ್ವೈತಪ್ರಪಂಚವು ಅವಿದ್ಯೆ (ತಪ್ಪುತಿಳಿವಳಿಕೆ)ಯಿಂದ ಆಗಿರುವದರಿಂದ ವಿದ್ಯೆಯಿಂದ ಅದರ ನಾಶವುಂಟಾಗುತ್ತದೆ. ಆದ್ದರಿಂದ ಬ್ರಹ್ಮವಿದ್ಯೆಯನ್ನು ತಿಳಿಸುವದಕ್ಕಾಗಿ ಈ (ಗ್ರಂಥ)ವನ್ನು ಪ್ರಾರಂಭಿಸಿರುತ್ತದೆ. "ಎಲ್ಲಿ ದ್ವೈತದಂತೆ ಇರುವದೋ" (ಬೃ. ೨-೪-೧೪, ೪-೫-೧೫), "ಎಲ್ಲಿ ಬೇರೊಂದು (ವಸ್ತು)ವಿದ್ದಂತಿರುವದೋ ಅಲ್ಲಿ ಒಬ್ಬನು ಮತ್ತೊಂದು (ವಸ್ತು)ವನ್ನು ಕಾಣುವನು.....ಒಬ್ಬನು ಮತ್ತೊಂದು (ವಸ್ತು)ವನ್ನು ಅರಿಯುವನು" (ಬೃ. ೪-೩-೩೧), "ಆದರೆ ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಗಿಬಿಟ್ಟಿರುವದೋ ಅಲ್ಲಿ ಏತರಿಂದ ಯಾರನ್ನು ಕಂಡಾನು ?.....ಏತರಿಂದ ಯಾರನ್ನು ಅರಿತಾನು ?" (ಬೃ. ೪-೫-೧೫) ಮುಂತಾದ ಶ್ರುತಿಗಳಿಂದ[2] ಈ ವಿಷಯವು ಸಿದ್ಧವಾಗುತ್ತದೆ.

## ಪ್ರಕರಣದ ವಿಷಯಗಳ ವಿಂಗಡ

(ಭಾಷ್ಯ)

೩. ತತ್ರ ತಾವತ್ ಓಂಕಾರನಿರ್ಣಯಾಯ ಪ್ರಥಮಂ ಪ್ರಕರಣಮ್ ಆಗಮ ಪ್ರಧಾನಮ್ ಆತ್ಮತತ್ತ್ವಪ್ರತಿಪತ್ತ್ಯುಪಾಯಭೂತಮ್ । ಯಸ್ಯ ದ್ವೈತಪ್ರಪಞ್ಚಸ್ಯ ಉಪಶಮೇ ಅದ್ವೈತಪ್ರತಿಪತ್ತಿಃ ರಜ್ಜ್ವಾಮಿವ ಸರ್ಪಾದಿವಿಕಲ್ಪೋಪಶಮೇ ರಜ್ಜು ತತ್ತ್ವಪ್ರತಿಪತ್ತಿಃ ತಸ್ಯ ದ್ವೈತಸ್ಯ ಹೇತುತಃ ವೈತಥ್ಯಪ್ರತಿಪಾದನಾಯ ದ್ವಿತೀಯಂ ಪ್ರಕರಣಮ್ । ತಥಾ ಅದ್ವೈತಸ್ಯಾಪಿ ವೈತಥ್ಯಪ್ರಸಙ್ಗಪ್ರಾಪ್ತೌ ಯುಕ್ತಿತಃ ತಥಾತ್ವ ದರ್ಶನಾಯ ತೃತೀಯಂ ಪ್ರಕರಣಮ್ । ಅದ್ವೈತಸ್ಯ ತಥಾತ್ವಪ್ರತಿಪತ್ತಿಪ್ರತಿಪಕ್ಷ

1. ವೈದ್ಯಶಾಸ್ತ್ರದಂತೆ ನಮ್ಮ ದರ್ಶನವು ದುಃಖವನ್ನು ಪರಿಹರಿಸುವದೆಂದು ಬೌದ್ಧರು ಯೋಗಿಗಳು-ಮುಂತಾದವರೂ ಹೇಳುತ್ತಾರೆ. ಆದರೆ ಮುಕ್ತಿಯು ನಿತ್ಯಪ್ರಾಪ್ತವಾಗಿದೆ ಎಂಬ ಅದ್ವೈತದರ್ಶನಕ್ಕೆ ಈ ಹೋಲಿಕೆಯು ಹೊಂದುವಷ್ಟು ಪೂರ್ಣವಾಗಿ ಉಳಿಕ್ಕ ಯಾವ ದರ್ಶನಕ್ಕೂ ಹೊಂದುವದಿಲ್ಲ.

2. ಇಲ್ಲಿ ಮೊದಲನೆಯ ಎರಡು ಶ್ರುತಿಗಳು ಅವಿದ್ಯಾಕಲ್ಪಿತವಾದ ದ್ವೈತಪ್ರಪಂಚವು ಕಾಣುತ್ತಿರುವಾಗಲೇ ವ್ಯವಹಾರವಿರುವದೆಂಬುದನ್ನು ಹೇಳುವವು. ಆತ್ಮನೊಬ್ಬನೇ ಇರುವಾಗ ವ್ಯವಹಾರವಿಲ್ಲವೆಂದು ಮೂರನೆಯ ಶ್ರುತಿ ಹೇಳುತ್ತದೆ.

ಭೂತಾನಿ ಯಾನಿ ವಾದಾನ್ತರಾಣಿ ಅವೈದಿಕಾನಿ ಸನ್ತಿ, ತೇಷಾಮ್ ಅನ್ಯೋನ್ಯ ವಿರೋಧಿತ್ವಾತ್ ಅತಥಾರ್ಥತ್ವೇನ ತದುಪಪತ್ತಿಭಿರೇವ ನಿರಾಕರಣಾಯ ಚತುರ್ಥಂ ಪ್ರಕರಣಮ್ ।।

(ಭಾಷ್ಯಾರ್ಥ)

ಇಲ್ಲಿ ಎಲ್ಲಕ್ಕೂ ಮೊದಲು ಓಂಕಾರವನ್ನು ನಿರ್ಣಯಿಸುವದಕ್ಕಾಗಿ ಆಗಮ ಪ್ರಧಾನವಾದ[1] ಒಂದನೆಯ ಪ್ರಕರಣವು (ಬಂದಿರುತ್ತದೆ. ಇದು) ಆತ್ಮತತ್ತ್ವವನ್ನು ಅರಿತುಕೊಳ್ಳುವದಕ್ಕೆ ಉಪಾಯವಾಗಿರುತ್ತದೆ. ಹಗ್ಗದಲ್ಲಿ ಹಾವೇ ಮುಂತಾದ ತಪ್ಪು ಕಲ್ಪನೆಗಳು ನೀಗಲು, ಹಗ್ಗದ ನಿಜದ ಅರಿವು ಉಂಟಾಗುವಂತೆ ಯಾವ ದ್ವೈತಪ್ರಪಂಚವು ಇಲ್ಲವಾಗಲು ಅದ್ವೈತದ ಅರಿವು ಆಗುವದೋ, ಆ ದ್ವೈತವು ಹುಸಿ ಎಂಬುದನ್ನು ಯುಕ್ತಿಯಿಂದ ತೋರಿಸಿಕೊಡುವದಕ್ಕಾಗಿ ಎರಡನೆಯ ಪ್ರಕರಣವು (ಬಂದಿರುತ್ತದೆ). (ಹಾಗಾದರೆ) ಅದರಂತೆ ಅದ್ವೈತವೂ ಹುಸಿಯಾಗಬೇಕೆಂದು ಆಗಲಾಗಿ ಯುಕ್ತಿಯಿಂದ ಅದು ನಿಜವಾದದ್ದು ಎಂದು ತೋರಿಸುವದಕ್ಕಾಗಿ ಮೂರನೆಯ ಪ್ರಕರಣವು (ಬಂದಿರುತ್ತದೆ). ಅದ್ವೈತವು ಸತ್ಯವೆಂದು ತಿಳಿಯುವದಕ್ಕೆ ಅಡ್ಡಿಯಾಗಿರುವ ಅವೈದಿಕವಾದ ಬೇರೆಯ ವಾದಗಳಿರುವವಷ್ಟೆ, ಅವು ಒಂದಕ್ಕೊಂದು ವಿರುದ್ಧವಾಗಿರುವದರಿಂದ ಸರಿಯಲ್ಲ ಎಂದು ಅವುಗಳ ಯುಕ್ತಿಗಳಿಂದಲೇ (ಅವನ್ನು) ತಳ್ಳಿಹಾಕುವದಕ್ಕಾಗಿ ನಾಲ್ಕನೆಯ ಪ್ರಕರಣವು (ಬಂದಿರುತ್ತದೆ).

******

1. ಉಪದೇಶರೂಪವಾಗಿರುವ ; ಇದರಲ್ಲಿ ಯುಕ್ತಿಯು ಇದ್ದರೂ ಮುಖ್ಯವಲ್ಲ.

# ಉಪನಿಷತ್ತು

## ಓಂಕಾರನಿರ್ಣಯದಿಂದ ಆತ್ಮತತ್ತ್ವಜ್ಞಾನವಾಗುವ ರೀತಿ

೪. ಕಥಂ ಪುನಃ ಓಂಕಾರನಿರ್ಣಯಃ ಆತ್ಮತತ್ತ್ವಪ್ರತಿಪತ್ತ್ಯುಪಾಯತ್ವಂ ಪ್ರತಿ ಪದ್ಯತೇ ಇತಿ ? ಉಚ್ಯತೇ । ''ಓಮಿತ್ಯೇತತ್'' (ಕ. ೧-೨-೧೫), ಏತದಾಲಮ್ಬನಮ್'' (ಕ. ೧-೨-೧೭), ಏತದ್ಧ್ಯೇ ಸತ್ಯಕಾಮ''[1] (ಪ್ರ. ೫-೨). 'ಓಮಿತ್ಯಾತ್ಮಾನಂ ಯುಞ್ಜೀತ' (ನಾ. ೭೯), 'ಓಮಿತಿ ಬ್ರಹ್ಮ' (ತೈ. ೧-೮), ''ಓಂಕಾರ ಏವೇದಗ್ಂ ಸರ್ವಮ್'' (ಛಾ. ೨-೨೩-೩)-ಇತ್ಯಾದಿಶ್ರುತಿಭ್ಯಃ । ರಜ್ಜ್ವಾದಿರಿವ ಸರ್ಪಾದಿವಿಕಲ್ಪಸ್ಯ ಆಸ್ಪದಃ, ಅದ್ವಯ ಆತ್ಮಾ ಪರಮಾರ್ಥತಃ[2] ಸನ್ ಪ್ರಾಣಾದಿವಿಕಲ್ಪಸ್ಯ ಆಸ್ಪದೋ ಯಥಾ, ತಥಾ ಸರ್ವೋಽಪಿ ವಾಕ್ಪ್ರಪಞ್ಚಃ ಪ್ರಾಣಾದ್ಯಾತ್ಮ ವಿಕಲ್ಪವಿಷಯಃ ಓಂಕಾರ ಏವ । ಸ ಚ ಆತ್ಮಸ್ವರೂಪಮೇವ ತದಭಿಧಾಯಕತ್ವಾತ್ । ಓಂಕಾರವಿಕಾರಶಬ್ದಾಭಿಧೇಯಶ್ಚ ಸರ್ವಃ ಪ್ರಾಣಾದಿರಾತ್ಮವಿಕಲ್ಪಃ ಅಭಿಧಾನವ್ಯತಿರೇಕೇಣ ನಾಸ್ತಿ । ''ವಾಚಾರಮ್ಭಣಂ ವಿಕಾರೋ ನಾಮಧೇಯಮ್'' (ಛಾಂ. ೬-೧-೪), ''ತದಸ್ಯೈದಂ ವಾಚಾ ತನ್ಯಾ ನಾಮಭಿರ್ದಾಮಭಿಃ ಸರ್ವಂ ಸಿತಮ್ । ಸರ್ವಂ ಹೀದಂ ನಾಮನೀ ೩'' (ಐ. ಆ. ೨-೧-೬) ಇತ್ಯಾದಿಶ್ರುತಿಭ್ಯಃ । ಅತ ಆಹ -

(ಭಾಷ್ಯಾರ್ಥ)

(ಪ್ರಶ್ನೆ) :- ಓಂಕಾರನಿರ್ಣಯವು ಆತ್ಮತತ್ತ್ವವನ್ನು ಅರಿತುಕೊಳ್ಳುವದಕ್ಕೆ ಸಾಧನವಾಗುವದಾದರೂ ಹೇಗೆ ?

(ಉತ್ತರ) :- ಹೇಳುತ್ತೇವೆ, (ಕೇಳಿ). ''ಇದೇ ಓಂ ಎಂಬುದು'' (ಕ. ೧-೨-೧೫), ''ಈ ಆಲಂಬನವೇ (ಶ್ರೇಷ್ಠವಾದದ್ದು)'' (ಕ. ೧-೨-೧೭), ''ಸತ್ಯಕಾಮನೆ, ಇದೇ ಪರಬ್ರಹ್ಮವು, ಮತ್ತು ಅಪರಬ್ರಹ್ಮವು'' (ಪ್ರ. ೫-೨), ''ಓಂ ! ಎಂದು ಆತ್ಮನನ್ನು ಧ್ಯಾನಿಸಬೇಕು'' (ನಾ. ೭೯), ''ಓಂ ! ಎಂಬುದು ಬ್ರಹ್ಮವು'' (ತೈ. ೧-೮), ''ಇದೆಲ್ಲವೂ ಓಂಕಾರವೇ'' (ಛಾಂ. ೨-೨೩-೩)-ಮುಂತಾದ

1. ವಾ ।। ಮೈ ।। ಗಳಲ್ಲಿ ವಾಕ್ಯವು ಪೂರ್ಣವಾಗಿದೆ.

2. ''ಪರಮಾರ್ಥಃ ಸನ್'' ಎಂಬ ಪಾಠಕ್ಕಿಂತ ಇದು ಮೇಲು ; ''ಪರಮಾರ್ಥಸನ್ ನಂದಿದ್ದರೆ ಮತ್ತೂ ಚೆನ್ನಾಗಿತ್ತು.

ಶ್ರುತಿಗಳು[1] ಇದಕ್ಕೆ ಪ್ರಮಾಣವು. ಪರಮಾರ್ಥವಾಗಿ ಸತ್ಯವಾಗಿರುವ ಆತ್ಮನು, ಹಾವೇ ಮುಂತಾದ ವಿಕಲ್ಪಗಳಿಗೆ ಆಧಾರವಾಗಿರುವ ಹಗ್ಗವೇ ಮುಂತಾದದ್ದರಂತೆ, ಪ್ರಾಣನೇ ಮುಂತಾದ[2] ವಿಕಲ್ಪಕ್ಕೆ ಹೇಗೆ ಆಧಾರವಾಗಿರುವನೋ ಹಾಗೆ ಪ್ರಾಣನೇ ಮುಂತಾದ ಆತ್ಮವಿಕಲ್ಪಗಳನ್ನು[3] ವಿಷಯಮಾಡಿಕೊಂಡಿರುವ ವಾಕ್ಪ್ರಪಂಚವೆಲ್ಲವೂ ಓಂಕಾರವೇ[4]. ಆ ಓಂಕಾರವು ಆತ್ಮಸ್ವರೂಪವೇ, ಏಕೆಂದರೆ ಅದರ ವಾಚಕವಾಗಿರುತ್ತದೆ. ಓಂಕಾರದ ಕಾರ್ಯವಾಗಿರುವ ಶಬ್ದಗಳಿಂದ[5] ಹೇಳಲ್ಪಡುವ ಪ್ರಾಣನೇ ಮುಂತಾದ ಆತ್ಮವಿಕಲ್ಪವು ಯಾವದೂ (ತನ್ನ) ಹೆಸರನ್ನು ಬಿಟ್ಟು ಇರುವದಿಲ್ಲ. ''ಕಾರ್ಯವೆಂಬುದು ಮಾತಿನಿಂದ ಆಗಿರುವ ಹೆಸರೇ''[6] (ಛಾಂ. ೬-೧-೪), ''ಆದ್ದರಿಂದ ಈತನ ವಾಕ್ಕೆಂಬ ಸರವಿಯಿಂದ ಹೆಸರುಗಳೆಂಬ ಕಣ್ಣಿಗಳಿಂದ ಇದೆಲ್ಲವೂ ಬಿಗಿಯಲ್ಪಟ್ಟಿರುವದು. ಇದೆಲ್ಲವೂ ಹೆಸರುಗಳಿಂದಲೇ (ವ್ಯವಹಾರಕ್ಕೆ) ತರಲ್ಪಡುವದಲ್ಲವೆ ?''[7] (ಐ. ಆ. ೨-೧-೬) ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು. ಆದ್ದರಿಂದ (ಉಪನಿಷತ್ತು) ಹೇಳುತ್ತದೆಯೇನೆಂದರೆ :-

---

1. ಇಲ್ಲಿರುವ ಶ್ರುತಿಗಳು ಓಂಕಾರವು ಪರಬ್ರಹ್ಮವನ್ನು ಅರಿತುಕೊಳ್ಳುವದಕ್ಕೂ ಅಪರ ಬ್ರಹ್ಮವನ್ನು ಉಪಾಸನೆಮಾಡುವದಕ್ಕೂ ಉತ್ತಮವಾದ ಸಾಧನವೆಂದು ಹೇಳುತ್ತವೆ. ಪ್ರಕೃತದಲ್ಲಿ ಓಂಕಾರನಿರ್ಣಯವು ಪರಮಾತ್ಮತತ್ತ್ವವನ್ನು ಅರಿತುಕೊಳ್ಳುವ ಜ್ಞಾನಕ್ಕೇ ಸಾಧನವೆಂಬುದನ್ನು ತೋರಿಸಬೇಕಾಗಿದೆ.

2. ಮುಂದೆ ಕಾರಿಕೆಯ ೨-೧೯ ರಿಂದ ೨೮ ರ ವರೆಗಿನ ಗ್ರಂಥದಲ್ಲಿ ಹೇಳಿರುವ-ಎಂದರ್ಥ.

3. ಆತ್ಮನಲ್ಲಿ ವಿಶೇಷವಾಗಿ ಕಲ್ಪಿಸಿರುವ ತೋರಿಕೆಯ ವಸ್ತುಗಳನ್ನು.

4. ಓಂಕಾರವು ಹೇಳುವದಕ್ಕಿಂತ ಬೇರೆ ಏನನ್ನೂ ಹೇಳವು. ಏಕೆಂದರೆ ಓಂಕಾರವು ಸರ್ವವಾಚಕವಾದ್ದರಿಂದ ಅದು ಹೇಳದ ವಸ್ತುವೇ ಮಿಕ್ಕ ವಾಚಕಗಳಿಗೆ ಉಳಿಯುವದಿಲ್ಲ.

5. ಓಂಕಾರವಾಚ್ಯನಾದ ಆತ್ಮನ ವಿಕಲ್ಪಗಳಾದ ಕಾರ್ಯಗಳನ್ನು ಹೇಳುವದರಿಂದ ಇವನ್ನು ಓಂಕಾರದ ಕಾರ್ಯವೆಂದಿದೆ.

6. ಗಡಿಗೆ ಎಂಬ ಹೆಸರೊಂದಲ್ಲದೆ ಮಣ್ಣಿಗಿಂತ ಬೇರೆಯಾದ ಗಡಿಗೆ ಎಂಬ ವಸ್ತುವಿರುವದಿಲ್ಲ.

7. ಹಲವು ಹಸುಗಳನ್ನು ಒಂದು ಉದ್ದನೆಯ ಸರವಿಗೆ ಕಣ್ಣಿಗಳ ಮೂಲಕ ಕಟ್ಟಿಹಾಕುವಂತೆ ವಾಕ್ಸಾಮಾನ್ಯವೆಂಬ ಆಧಾರದ ಮೇಲೆ ವಿಶೇಷನಾಮಗಳ ಮೂಲಕ ಪದಾರ್ಥಗಳನ್ನು ಜನರು ವ್ಯವಹರಿಸುತ್ತಾರೆ-ಎಂದು ಶ್ರುತಿಯ ಅರ್ಥ. ಇಲ್ಲಿ ಓಂಕಾರವನ್ನೇ ವಾಕ್ಸಾಮಾನ್ಯವೆಂದು ಭಾವಿಸಬಹುದು.

# ಎಲ್ಲವೂ ಓಂಕಾರವೇ

## (ಉಪನಿಷತ್ತು)

ಓಮಿತ್ಯೇತದಕ್ಷರಮಿದಗ್ಂ ಸರ್ವಂ ತಸ್ಯೋಪವ್ಯಾಖ್ಯಾನಂ
ಭೂತಂ ಭವದ್ಭವಿಷ್ಯದಿತಿ ಸರ್ವಮೋಂಕಾರ ಏವ ।
ಯಚ್ಚಾನ್ಯತ್ತ್ರಿಕಾಲಾತೀತಂ ತದಪ್ಯೋಂಕಾರ ಏವ ॥೧॥

೧. ಓಂ ಎಂಬೀ ಅಕ್ಷರವೇ ಇದೆಲ್ಲವೂ. ಅದರ ಉಪವ್ಯಾಖ್ಯಾನವು : ಹಿಂದೆ ಆಗಿ ಹೋಗಿರುವದು, ಈಗ ಇರುವದು, ಮುಂದೆ ಆಗುವದು - ಇದೆಲ್ಲವೂ ಓಂಕಾರವೇ. ಮೂರುಕಾಲವನ್ನೂ ಮೀರಿದ್ದು ಇನ್ನೂ ಯಾವದುಂಟೋ ಅದೂ ಓಂಕಾರವೇ.

(ಭಾಷ್ಯ)

೫. ''ಓಮಿತ್ಯೇತದಕ್ಷರಮಿದಂ ಸರ್ವಮ್'' ಇತಿ । ಯದಿದಮ್ ಅರ್ಥಜಾತಮ್, ಅಭಿಧೇಯಭೂತಂ ತಸ್ಯ ಅಭಿಧಾನಾವ್ಯತಿರೇಕಾತ್ ಅಭಿಧಾನಸ್ಯ ಚ ಓಂಕಾರಾವ್ಯತಿರೇಕಾತ್ ಓಂಕಾರ ಏವೇದಂ ಸರ್ವಮ್ । ಪರಂ ಚ ಬ್ರಹ್ಮ ಅಭಿಧಾನಾಭಿಧೇಯೋಪಾಯಪೂರ್ವಕಮೇವ ಗಮ್ಯತೇ[1] ಇತಿ ಓಂಕಾರ ಏವ । ತಸ್ಯ ಏತಸ್ಯ ಪರಾಪರಬ್ರಹ್ಮರೂಪಸ್ಯ ಅಕ್ಷರಸ್ಯ ಓಮ್ ಇತ್ಯೇತಸ್ಯ ಉಪವ್ಯಾಖ್ಯಾನಮ್ ಬ್ರಹ್ಮಪ್ರತಿಪತ್ತ್ಯುಪಾಯತ್ವಾತ್ ಬ್ರಹ್ಮಸಮೀಪತಯಾ ವಿಸ್ಪಷ್ಟಂ ಪ್ರಕಥನಮ್ ಉಪವ್ಯಾಖ್ಯಾನಮ್ । ಪ್ರಸ್ತುತಂ ವೇದಿತವ್ಯಮ್ ಇತಿ ವಾಕ್ಯಶೇಷಃ ॥

(ಭಾಷ್ಯಾರ್ಥ)

''ಓಂ ಎಂಬೀ ಅಕ್ಷರವೇ ಇದೆಲ್ಲವೂ.'' ಅಭಿಧೇಯವಾಗಿರುವ (ಹೆಸರಿನಿಂದ ಹೇಳುವ) ಈ ಪದಾರ್ಥಸಮೂಹವಿದೆಯಲ್ಲ, ಇದು ಅಭಿಧಾನಕ್ಕಿಂತ ಬೇರೆಯಾಗಿಲ್ಲವಾದ್ದರಿಂದಲೂ, (ಆ) ಅಭಿಧಾನವು ಓಂಕಾರಕ್ಕಿಂತ ಬೇರೆಯಲ್ಲವಾದ್ದರಿಂದಲೂ ಇದೆಲ್ಲವೂ ಓಂಕಾರವೇ. ಪರಬ್ರಹ್ಮವೂ ಅಭಿಧಾನ, ಅಭಿಧೇಯ-ಎಂಬ ಸಾಧನದ ಮೂಲಕವಾಗಿಯೇ ತಿಳಿಯಬರುತ್ತದೆಯಾದ್ದರಿಂದ[2] ಓಂಕಾರವೇ ಅಂಥ ಈ ಪರಾಪರ ಬ್ರಹ್ಮರೂಪವಾದ[3] ಓಂ ಎಂಬೀ ಅಕ್ಷರದ ಉಪವ್ಯಾಖ್ಯಾನವು, ಬ್ರಹ್ಮವನ್ನು

1. ''ಪೂರ್ವಕಮವಗಮ್ಯತೇ'' ಆ ॥

2. ಬ್ರಹ್ಮವು ಹೆಸರು, ಹೆಸರಿಸುವ ವಸ್ತು-ಎಂಬ ಸಾಧನದ ಮೂಲಕವಾಗಿಯೇ ತಿಳಿಯಬರುವದೆಂಬುದು ಹೇಗೆಂಬುದನ್ನು ಈ ಉಪನಿಷತ್ತಿನಲ್ಲಿ ತಿಳಿಸಿದೆ.

3 ಪರಬ್ರಹ್ಮವನ್ನು ಬಿಟ್ಟು ಅದರಿಂದ ಆಗಿರುವ ವ್ಯಾಕೃತವೆಲ್ಲ ಅಪರಬ್ರಹ್ಮವೇ

ಅರಿತುಕೊಳ್ಳುವದಕ್ಕೆ ಸಾಧನವಾಗಿರುವದರಿಂದ ಬ್ರಹ್ಮಕ್ಕೆ (ಉಪ) ಸಮೀಪವಾಗಿದೆ ಎಂದು (ವಿ) ವಿಸ್ಪಷ್ಟವಾಗಿ (ಆಖ್ಯಾನಂ) ವಿವರಿಸಿ ಹೇಳುವದು,[1] ''ಪ್ರಾರಂಭವಾಗಿದೆ ಎಂದು ತಿಳಿಯಬೇಕು'' ಎಂದು (ಈ) ವಾಕ್ಯಕ್ಕೆ ಸೇರಿಸಿಕೊಳ್ಳಬೇಕು.

(ಭಾಷ್ಯ)

೬. ಭೂತಂ ಭವತ್ ಭವಿಷ್ಯತ್ ಇತಿ ಕಾಲತ್ರಯಪರಿಚ್ಛೇದ್ಯಂ ಯತ್ ತದಪಿ ಓಂಕಾರ ಏವ ಉಕ್ತನ್ಯಾಯತಃ । ಯಚ್ಚ ಅನ್ಯತ್ ತ್ರಿಕಾಲಾತೀತಂ ಕಾರ್ಯಾಧಿಗಮ್ಯಂ ಕಾಲಾಪರಿಚ್ಛೇದ್ಯಮ್ ಅವ್ಯಾಕೃತಾದಿ ತದಪಿ ಓಂಕಾರ ಏವ ।।

(ಭಾಷ್ಯಾರ್ಥ)

ಹಿಂದೆ ಆಗಿರುವದು, ಈಗ ಇರುವದು, ಮುಂದೆ ಆಗುವದು-ಎಂದು ಕಾಲತ್ರಯಕ್ಕೆ ಕಟ್ಟುಬಿದ್ದಿರುವದಲ್ಲ, ಅದೆಲ್ಲವೂ ಓಂಕಾರವೇ, ಇದಕ್ಕೆ ಹಿಂದೆ ಹೇಳಿರುವ ಯುಕ್ತಿಯು[2] (ಇರುತ್ತದೆ). ಮತ್ತು (ಈ) ಮೂರುಕಾಲವನ್ನೂ ಮೀರಿದ್ದು ಕಾರ್ಯದಿಂದ ತಿಳಿದು ಬರುವಂಥದ್ದು ಕಾಲದ ಅಳತೆಗೆ ಸಿಗದೇ ಇರುವಂಥದ್ದು ಯಾವ (ಯಾವ) ದುಂಟೋ ಅದೂ, ಅಂಥ ಅವ್ಯಾಕೃತವೇ[3] ಮುಂತಾದದ್ದೂ, ಓಂಕಾರವೇ

## ಎಲ್ಲವೂ ಬ್ರಹ್ಮವೇ, ಬ್ರಹ್ಮವು ಆತ್ಮನೇ

(ಭಾಷ್ಯ)

೭. ಅಭಿಧಾನಾಭಿಧೇಯಯೋಃ ಏಕತ್ವೇಽಪಿ ಅಭಿಧಾನಪ್ರಾಧಾನ್ಯೇನ ನಿರ್ದೇಶಃ ಕೃತಃ ''ಓಮಿತ್ಯೇತದಕ್ಷರಮಿದಂ ಸರ್ವಮ್'' ಇತ್ಯಾದಿ । ಅಭಿಧಾನಪ್ರಾಧಾನ್ಯೇನ ನಿರ್ದಿಷ್ಟಸ್ಯ ಪುನರಭಿಧೇಯಪ್ರಾಧಾನ್ಯೇನ ನಿರ್ದೇಶಃ ಅಭಿಧಾನಾಭಿಧೇಯಯೋರೇಕತ್ವ ಪ್ರತಿಪತ್ತ್ಯರ್ಥಃ । ಇತರಥಾ ಹಿ ಅಭಿಧಾನತನ್ತ್ರಾ ಅಭಿಧೇಯಪ್ರತಿಪತ್ತಿಃ ಇತಿ ಅಭಿಧೇಯಸ್ಯ ಅಭಿಧಾನತ್ವಂ ಗೌಣಮ್ ಇತ್ಯಾಶಙ್ಕಾ ಸ್ಯಾತ್ । ಏಕತ್ವಪ್ರತಿಪತ್ತೇಶ್ಚ ಪ್ರಯೋಜನಮ್ ಅಭಿಧಾನಾಭಿಧೇಯಯೋಃ ಏಕೇನೈವ ಪ್ರಯತ್ನೇನ ಯುಗಪತ್ ಪ್ರವಿಲಾಪಯನ್ ತದ್ವಿಲಕ್ಷಣಮ್ ಬ್ರಹ್ಮ ಪ್ರತಿಪದ್ಯೇತ ಇತಿ । ತಥಾ ಚ ವಕ್ಷ್ಯತಿ ''ಪಾದಾ ಮಾತ್ರಾ ಮಾತ್ರಾಶ್ಚ ಪಾದಾಃ'' (ಮಾ ೮) ಇತಿ । ತದಾಹ -

---

1. ಖ್ಯಾ-ಪ್ರಕಥನೇ ಎಂಬ ಧಾತುವಿನಿಂದ ವ್ಯಾಖ್ಯಾನಮ್ ಎಂಬ ರೂಪವಾಗಿದೆ ಎಂದು ಭಾವ. ತ್ಯ. ಭಾ. ಭಾ. ೬ ನೋಡಿ.

2. ಅಭಿಧಾನಗಳು ಓಂಕಾರಕ್ಕಿಂತ ಬೇರೆಯಲ್ಲ, ಅಭಿಧೇಯವಾದ ವಸ್ತು ಅಭಿಧಾನಕ್ಕಿಂತ ಬೇರೆಯಿಲ್ಲ-ಎಂಬ ಯುಕ್ತಿ.

3. ಕಾಲತ್ರಯವೂ ಅವ್ಯಾಕೃತದಿಂದಾಗಿರುವದರಿಂದ, ಅವ್ಯಾಕೃತವು (ಜಗದ್ಬೀಜವು) ಕಾಲವನ್ನು ಮೀರಿದೆ. ಮುಂತಾದದ್ದು ಎಂದರೆ ಹಿರಣ್ಯಗರ್ಭನನ್ನು ಗ್ರಹಿಸಬೇಕು.

(ಭಾಷ್ಯಾರ್ಥ)

ಅಭಿಧಾನ, ಅಭಿಧೇಯ-ಇವೆರಡೂ (ನಿಜವಾಗಿ) ಒಂದೇ ಆದರೂ ಅಭಿಧಾನಕ್ಕೆ ಮುಖ್ಯತ್ವವನ್ನು ಕೊಟ್ಟು "ಇದೆಲ್ಲವೂ ಓಂ ಎಂಬೀ ಅಕ್ಷರವೇ" ಎಂದು (ಹಿಂದಿನ ಮಂತ್ರದಲ್ಲಿ) ಹೇಳಿರುತ್ತದೆ. (ಹೀಗೆ) ಅಭಿಧಾನಕ್ಕೆ ಮುಖ್ಯತ್ವವನ್ನು ಕೊಟ್ಟು ಹೇಳಿದ್ದನ್ನು ಮತ್ತೊಮ್ಮೆ ಅಭಿಧೇಯಕ್ಕೆ ಮುಖ್ಯತ್ವವನ್ನು ಕೊಟ್ಟು (ಈಗ ಹೇಳುವದು. ಅಭಿಧಾನ, ಅಭಿಧೇಯ-ಇವೆರಡೂ (ನಿಜವಾಗಿ) ಒಂದೇ[1] ಎಂದು ಅರಿತುಕೊಳ್ಳುವದಕ್ಕಾಗಿ. ಹೀಗೆ ಹೇಳದೆ ಇದ್ದಿದ್ದರೆ ಅಭಿಧೇಯದ ಅರಿವು ಅಭಿಧಾನಕ್ಕೆ ಅಧೀನವಾಗಿರುವದೆಂಬ ಕಾರಣದಿಂದ ಅಭಿಧೇಯವನ್ನು ಅಭಿಧಾನವೆಂದಿರುವದು ಉಪಚಾರಕ್ಕೆ ಎಂದು ಆಶಂಕೆಯುಂಟಾಗುತ್ತಿತ್ತು.[2] (ಇವೆರಡೂ) ಒಂದೇ ಎಂದು ಅರಿತುಕೊಳ್ಳುವದರ ಪ್ರಯೋಜನವೇನೆಂದರೆ ಅಭಿಧಾನ, ಅಭಿಧೇಯ-ಈ ಎರಡನ್ನೂ ಒಂದೇ ಪ್ರಯತ್ನದಿಂದ ಒಂದೇ ಸಲಕ್ಕೆ ಅಡಗಿಸಿಕೊಂಡು[3] ಅವುಗಳಿಂದ ವಿಲಕ್ಷಣವಾಗಿರುವ ಬ್ರಹ್ಮವನ್ನು ಅರಿತುಕೊಳ್ಳಬಹುದು. ಆದ್ದರಿಂದಲೇ ಮುಂದೆ "ಪಾದಗಳು ಮಾತ್ರೆಗಳು, ಮಾತ್ರೆಗಳು ಪಾದಗಳು"[4] (ಮಂ. ೮) ಎಂದು (ಶ್ರುತಿಯಲ್ಲಿ) ಹೇಳಿರುತ್ತದೆ. ಅದನ್ನು (ಮುಂದಿನ ಮಂತ್ರವು) ಹೇಳುತ್ತದೆ :-

## (ಉಪನಿಷತ್ತು)

**ಸರ್ವಗ್ಂ ಹ್ಯೇತದ್ಬ್ರಹ್ಮಾಯಮಾತ್ಮಾ ಬ್ರಹ್ಮ ಸೋಽಯಮಾತ್ಮಾ ಚತುಷ್ಪಾತ್ ॥೨॥**

೨. ಇದೆಲ್ಲವೂ ಬ್ರಹ್ಮವೇ. ಈ ಆತ್ಮನು ಬ್ರಹ್ಮ. ಆ ಈ ಆತ್ಮನು ನಾಲ್ಕು ಪಾದಗಳುಳ್ಳವನು.

(ಭಾಷ್ಯ)

೮. "ಸರ್ವಂ ಹ್ಯೇತದ್ಬ್ರಹ್ಮ" ಇತಿ । ಸರ್ವಂ ಯದುಕ್ತಮ್ ಓಂಕಾರಮಾತ್ರಮಿತಿ

1. ಒಂದೇ ತತ್ತ್ವವು ಒಂದು ದೃಷ್ಟಿಯಿಂದ ಅಭಿಧಾನವಾದ ಓಂಕಾರವಾಗಿ, ಇನ್ನೊಂದು ದೃಷ್ಟಿಯಿಂದ ಅಭಿಧೇಯವಾದ ಬ್ರಹ್ಮವಾಗಿ ತೋರುತ್ತದೆ-ಎಂದು ಅರಿಯುವದಕ್ಕಾಗಿ.

2. ಎಲ್ಲವೂ ಓಂಕಾರವೇ ಎಂದರೆ ಓಂಕಾರವಾಚ್ಯವೇ ಎಂದಿಷ್ಟೇ ಅರ್ಥವೇ ಹೊರತು ನಿಜವಾಗಿ ಓಂಕಾರವಲ್ಲ ಎಂದಾಗುತ್ತಿತ್ತು.

3. ಒಂದೇ ಹಗ್ಗವನ್ನು ಹಾವೆಂದು ಒಬ್ಬನೂ ನೆಲದ ಬಿರುಕೆಂದು ಒಬ್ಬನೂ ಭಾವಿಸಿರಬಹುದು. ಒಬ್ಬ ಚಂದ್ರನೇ ಕಣ್ಣಿನ ದೋಷದಿಂದ ಇಬ್ಬರಾಗಿ ತೋರಬಹುದು. ಹೀಗೆಯೇ ಒಂದೇ ಬ್ರಹ್ಮವು ಪದ, ಪದಾರ್ಥ-ಎಂಬ ಎರಡು ರೂಪದಿಂದ ತೋರುತ್ತಿರುವದು, ಬ್ರಹ್ಮವು ನಾಮ ರೂಪಗಳಿಲ್ಲದ್ದು-ಎಂದು ತಿಳಿಯುವದೇ ಇವೆರಡರ ಐಕ್ಯಜ್ಞಾನದ ಪ್ರಯೋಜನವು

4. ಈ ಮಂತ್ರದ ವ್ಯಾಖ್ಯಾನದಲ್ಲಿ ಇದು ಸ್ಪಷ್ಟವಾಗುತ್ತದೆ.

ತದೇತತ್ ಬ್ರಹ್ಮ । ತಚ್ಚ ಬ್ರಹ್ಮ ಪರೋಕ್ಷಾಭಿಹಿತಂ ಪ್ರತ್ಯಕ್ಷತಃ ವಿಶೇಷೇಣ ನಿರ್ದಿಶತಿ- "ಅಯಮಾತ್ಮಾ ಬ್ರಹ್ಮ" ಇತಿ । ಅಯಮ್ ಇತಿ ಚತುಷ್ಪಾತ್ತ್ವೇನ ಪ್ರವಿಭಜ್ಯಮಾನಂ ಪ್ರತ್ಯಗಾತ್ಮತಯಾ ಅಭಿನಯೇನ ನಿರ್ದಿಶತಿ[1] ॥

(ಭಾಷ್ಯಾರ್ಥ)

"ಇದೆಲ್ಲವೂ ಬ್ರಹ್ಮವು" ಎಲ್ಲವೂ ಎಂದರೆ ಓಂಕಾರವೇ ಎಂದು ಹೇಳಿತ್ತಲ್ಲ, ಆ ಇದು ಬ್ರಹ್ಮವು, ಪರೋಕ್ಷವಾಗಿ ಹೇಳಿರುವ ಆ ಬ್ರಹ್ಮವನ್ನು "ಈ ಆತ್ಮನು ಬ್ರಹ್ಮವು" ಎಂದು ಪ್ರತ್ಯಕ್ಷವಾಗಿ[2] ಗೊತ್ತಾಗಿ ತಿಳಿಸಿಕೊಟ್ಟಿರುತ್ತದೆ. ಈ (ಆತ್ಮನು) ನಾಲ್ಕುಪಾದಗಳುಳ್ಳವನೆಂದು (ಮುಂದಿನ ವಾಕ್ಯಗಳಲ್ಲಿ) ವಿಂಗಡಿಸಿರುವ (ಆತ್ಮನು ನಮ್ಮ) ಒಳಗಿನ ಆತ್ಮನೇ ಎಂದು ಅಭಿನಯದಿಂದ ತೋರಿಸಿರುತ್ತದೆ.

## ಆತ್ಮನಿಗೆ ನಾಲ್ಕುಪಾದಗಳು

(ಭಾಷ್ಯ)

೯. ಸೋಽಯಮ್ ಆತ್ಮಾ ಓಂಕಾರಾಭಿಧೇಯಃ ಪರಾಪರತ್ವೇನ ವ್ಯವಸ್ಥಿತಃ ಚತುಷ್ಪಾತ್ ಕಾರ್ಷಾಪಣವತ್ ನ ಗೌರಿವ[3] । ತ್ರಯಾಣಾಂ ವಿಶ್ವಾದೀನಾಂ ಪೂರ್ವ ಪೂರ್ವಪ್ರವಿಲಾಪನೇನ ತುರೀಯಸ್ಯ ಪ್ರತಿಪತ್ತಿಃ ಇತಿ ಕರಣಸಾಧನಃ ಪಾದಶಬ್ದಃ । ತುರೀಯಸ್ಯ ಪದ್ಯತೇ ಇತಿ ಕರ್ಮಸಾಧನಃ ಪಾದಶಬ್ದಃ ॥

(ಭಾಷ್ಯಾರ್ಥ)

ಓಂಕಾರಕ್ಕೆ ಅಭಿಧೇಯನಾಗಿರುವ, ಪರ(ಬ್ರಹ್ಮವೂ) ಅಪರಬ್ರಹ್ಮವೂ ಆಗಿರುವ ಆ ಈ ಆತ್ಮನು ನಾಲ್ಕು ಪಾದಗಳುಳ್ಳವನು ; ಕಾರ್ಷಾಪಣದಂತೆ[4] (ನಾಲ್ಕು ಪಾದಗಳುಳ್ಳವನು), ಗೋವಿನಂತೆ (ನಾಲ್ಕು ಕಾಲುಗಳುಳ್ಳ)ವನಲ್ಲ.[5] (ಮುಂದಿನ

---

1. "ಅಯಮಾತ್ಮೇತಿ" ಎಂದು ಆ ॥ ಪಾಠದಲ್ಲಿ ಹೆಚ್ಚಾಗಿದೆ.

2. ಬ್ರಹ್ಮವೆಂದು ಪರೋಕ್ಷವಾಗಿ ಹೇಳಿದ್ದನ್ನು ಈ ಆತ್ಮನು ಎಂದು ಪ್ರತ್ಯಕ್ಷವಾಗಿ ಹೇಳಿದೆ.

3. 'ಗೌರಿವೇತಿ' ಆ ॥

4. ಕಾರ್ಷಾಪಣವೆಂಬುದು ಒಂದು ದೇಶದಲ್ಲಿ ಚಲಾವಣೆಯಲ್ಲಿದ್ದ ಹದಿನಾರು ಪಣಗಳ ಬೆಲೆಯ ಚಿನ್ನದ ನಾಣ್ಯವು. ಅದು ಬಹಳ ಬೆಲೆಯುಳ್ಳದ್ದಾದ್ದರಿಂದ ಅದನ್ನು ಎಲ್ಲರೂ ಬಳಸುವದಕ್ಕೆ ಆಗುತ್ತಿರಲಿಲ್ಲವಾದ್ದರಿಂದ ರೂಪಾಯಿಯನ್ನು ಪಾವಲಿಗಳಾಗಿ ವಿಂಗಡಿಸಿರುವಂತೆ ನಾಲ್ಕುಪಾದಗಳಾಗಿ ವಿಭಾಗಿಸಿಕೊಂಡು ವ್ಯವಹರಿಸುತ್ತಿದ್ದರು. ಹೀಗೆಯೇ ಆತ್ಮನನ್ನು ವಿಶ್ವನೇ ಮುಂತಾದ ರೀತಿಯಲ್ಲಿ ಜಾಗ್ರದಾದಿಗಳಲ್ಲಿ ವ್ಯವಹರಿಸುತ್ತಾರೆಂದು ಭಾವ. ಆದರೆ ವಿಶ್ವನೇ ಮೊದಲಾದವರು ಆತ್ಮನ ನಾಲ್ಕನೆಯ ಒಂದು ಭಾಗವೆಂದೇನೂ ಅಭಿಪ್ರಾಯವಿಲ್ಲ

5. ಆತ್ಮನಿಗೆ ಗೋವಿನಂತೆ ಅವಯವಗಳಿಲ್ಲ.

ಮಂತ್ರಗಳಲ್ಲಿ ಹೇಳಿರುವ) ವಿಶ್ವನೇ ಮೊದಲಾದವರಲ್ಲಿ ಹಿಂದುಹಿಂದಿನದನ್ನು ಮುಂದು ಮುಂದಿನ ಪಾದಗಳಲ್ಲಿ ಪ್ರವಿಲಯಮಾಡುವದರಿಂದ[1] ತುರೀಯನ ಅರಿವು ಆಗುತ್ತದ ಯಾದ್ದರಿಂದ (ಅವುಗಳನ್ನು ಹೇಳುವ) ಪಾದಶಬ್ದವು ಕರಣಾರ್ಥದಲ್ಲಿ[2] ಬಂದಿರುತ್ತದೆ. ತುರೀಯನನ್ನು (ಹೇಳುವ) ಪಾದಶಬ್ದವು (''ಪದ್ಯತೇ ಇತಿ'') ಪಡೆಯಲ್ಪಡುತ್ತಾನಾದ್ದ ರಿಂದ (ಪಾದವು) ಎಂದು ಕರ್ಮಾರ್ಥದಲ್ಲಿ ಬಂದಿರುತ್ತದೆ.

## ವೈಶ್ವಾನರನೆಂಬ ಮೊದಲನೆಯ ಪಾದ

(ಭಾಷ್ಯ)

೧೦. ಕಥಂ ಚತುಷ್ಪಾತ್ತ್ವಮ್ ಇತಿ ? ಉಚ್ಯತೇ -

(ಭಾಷ್ಯಾರ್ಥ)

ನಾಲ್ಕುಪಾದಗಳುಳ್ಳವನೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ :-

**ಜಾಗರಿತಸ್ಥಾನೋ ಬಹಿಷ್ಪ್ರಜ್ಞಃ ಸಪ್ತಾಙ್ಗ ಏಕೋನವಿಂಶತಿಮುಖಃ**
**ಸ್ಥೂಲಭುಗ್ ವೈಶ್ವಾನರಃ ಪ್ರಥಮಃ ಪಾದಃ** ॥೩॥

೩. ಎಚ್ಚರವೆಂಬ ಸ್ಥಾನವುಳ್ಳ ಹೊರಗಿನ ಪ್ರಜ್ಞೆಯುಳ್ಳ ಸಪ್ತಾಂಗನಾದ ಹತ್ತೊಂಬತ್ತು ಮುಖಗಳ, ಸ್ಥೂಲಭೋಗಿಯಾದ, ವೈಶ್ವಾನರನು ಮೊದಲನೆಯ ಪಾದವು.

(ಭಾಷ್ಯ)

೧೧. ಜಾಗರಿತಂ ಸ್ಥಾನಮ್ ಅಸ್ಯ ಇತಿ ಜಾಗರಿತಸ್ಥಾನಃ । ಬಹಿಷ್ಪ್ರಜ್ಞಃ (ಬಹಿಃ)[3] ಸ್ಮಾತ್ಮವ್ಯತಿರಿಕ್ತೇ ವಿಷಯೇ ಪ್ರಜ್ಞಾ ಯಸ್ಯ ಸಃ ಬಹಿಷ್ಪ್ರಜ್ಞಃ । ಬಹಿರ್ವಿಷಯಾ ಇವ ಪ್ರಜ್ಞಾ ಅವಿದ್ಯಾಕೃತಾ ಅವಭಾಸತೇ ಇತ್ಯರ್ಥಃ । ತಥಾ ಸಪ್ತ ಅಙ್ಗಾನಿ ಅಸ್ಯ । ''ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾತ್ಮಾ ಸನ್ದೇಹೋ ಬಹುಲೋ ಬಸ್ತಿರೇವ ರಯಿಃ ಪೃಥಿವ್ಯೇವ ಪಾದೌ''

---

1. ಒಂದನ್ನು ಮತ್ತೊಂದೆಂದೇ ಅರಿತು ಅದರಲ್ಲಿ ಅಡಕಮಾಡುವದರಿಂದ ; ಈ ಪ್ರಕಾರವು ಮುಂದೆ ವಿಶದವಾಗುವದು.

2. ತುರೀಯನು ನಿಜವಾದ ಆತ್ಮನು ; ಅವನನ್ನು ಪಡೆಯುವದಕ್ಕೆ ವಿಶ್ವಾದಿಗಳು ಸಾಧನ. ಆದ್ದರಿಂದ ಪದ್ಯತೇ ಅನೇನ ಇತಿ ಪಾದಃ ಎಂದು ಕರಣಾರ್ಥದಲ್ಲಿ ಪಾದಶಬ್ದವು ಅವನಿಗೆ ಸಲ್ಲುತ್ತದೆ.

3. ''ಬಹಿಷ್ಪ್ರಜ್ಞಃ'' ಎಂಬ ಮಾತು ಬೇಕಿಲ್ಲ ; ಬಹಿಃ ಎಂಬುದಕ್ಕೇ ಸ್ವಾತ್ಮವ್ಯತಿರಿಕ್ತೇ ವಿಷಯೇ ಎಂಬುದು ವ್ಯಾಖ್ಯಾನ.

(ಛಾಂ. ೫-೧೮-೨) ಇತ್ಯಗ್ನಿಹೋತ್ರಕಲ್ಪನಾಶೇಷತ್ವೇನ[1] ಆಹವನೀಯೋಽಗ್ನಿಃ ಅಸ್ಯ ಮುಖಿತ್ವೇನೋಕ್ತಃ[2] ಇತ್ಯೇವಂ ಸಪ್ತ ಅಙ್ಗಾನಿ ಯಸ್ಯ ಸಃ ಸಪ್ತಾಙ್ಗಃ । ತಥಾ ಏಕೋನವಿಂಶತಿಃ ಮುಖಾನಿ ಅಸ್ಯ । ಬುದೀನ್ದ್ರಿಯಾಣಿ ಕರ್ಮೇನ್ದ್ರಿಯಾಣಿ ಚ ದಶ । ವಾಯವಶ್ಚ ಪ್ರಾಣಾದಯಃ ಪಞ್ಚ । ಮನಃ, ಬುದ್ಧಿಃ, ಅಹಂಕಾರಃ, ಚಿತ್ತಮ್-ಇತಿ ಮುಖಾನೀವ ಮುಖಾನಿ ತಾನಿ । ಉಪಲಬ್ಧಿದ್ವಾರಾಣಿ ಇತ್ಯರ್ಥಃ । ಸ ಏವಂವಿಶಿಷ್ಟಃ ವೈಶ್ವಾನರಃ ಯಥೋಕ್ತೈಃ ದ್ವಾರೈಃ ಶಬ್ದಾದೀನ್ ಸ್ಥೂಲಾನ್ ವಿಷಯಾನ್ ಭುಜ್ಕ್ತೇ ಇತಿ ಸ್ಥೂಲಭುಕ್ । ವಿಶ್ವೇಷಾಂ ನರಾಣಾಮ್ ಅನೇಕಧಾ ನಯನಾತ್[3] ವೈಶ್ವಾನರಃ । ಯದ್ ವಾ ವಿಶ್ವಶ್ಚ ಅಸೌ ನರಶ್ಚ ಇತಿ ವಿಶ್ವಾನರಃ । ವಿಶ್ವಾನರ ಏವ ವೈಶ್ವಾನರಃ । ಸರ್ವಪಿಣ್ಡಾತ್ಮಾನನ್ಯತ್ವಾತ್ । ಸ ಪ್ರಥಮಃ ಪಾದಃ । ಏತತ್ಪೂರ್ವಕತ್ವಾತ್ ಉತ್ತರ ಪಾದಾಧಿಗಮಸ್ಯ ಪ್ರಾಥಮ್ಯಮ್ ಅಸ್ಯ ॥

(ಭಾಷ್ಯಾರ್ಥ)

ಎಚ್ಚರವು ಇವನಿಗೆ ಸ್ಥಾನವಾಗಿರುವದರಿಂದ[4] ಇವನು ಜಾಗರಿತಸ್ಥಾನನೆನಿಸಿ ಕೊಂಡಿರುತ್ತಾನೆ. ಹೊರಗೆ ಎಂದರೆ ತನಗಿಂತ ಬೇರೆಯಾಗಿರುವ ವಿಷಯದಲ್ಲಿ ಅರಿವು ಉಳ್ಳವನಾದ್ದರಿಂದ ಇವನು ಬಹಿಷ್ಪ್ರಜ್ಞನು. ಅವಿದ್ಯೆಯಿಂದಾಗಿರುವ ಅರಿವು ಇವನಿಗೆ ಹೊರಗಡೆ ವಿಷಯಗಳನ್ನು (ಬೆಳಗುವಂತೆ) ತೋರುತ್ತಿರುವದು ಎಂದರ್ಥ. ಇದರಂತೆ ಇವನಿಗೆ ಏಳು ಅಂಗಗಳು. "ಆ ಈ ವೈಶ್ವಾನರನೆಂಬ ಆತ್ಮನಿಗೆ ದ್ಯುಲೋಕವೇ ತಲೆಯು. ನಾನಾರೂಪನಾದ ಸೂರ್ಯನು ಕಣ್ಣು, ಬೇರೆಬೇರೆ ದಿಕ್ಕುಗಳಲ್ಲಿ ಸಂಚರಿಸುವ ವಾಯುವು ಪ್ರಾಣವು, ವ್ಯಾಪಕವಾದ ಆಕಾಶವು ಸೊಂಟವು, ನೀರು ಮೂತ್ರಸ್ಥಾನವು, ಭೂಮಿಯು ಪಾದಗಳು" (ಛಾಂ. ೫-೧೮-೨) ಎಂದು ಹೇಳಿದ ಬಳಿಕ ವೈಶ್ವಾನರೋಪಾಸಕನಿಗೆ ಭೋಜನವನ್ನು) ಅಗ್ನಿಹೋತ್ರವೆಂದು ಕಲ್ಪಿಸುವಾಗ ಆಹವನೀಯಾಗ್ನಿಯನ್ನು (ವೈಶ್ವಾನರನ) ಮುಖವೆಂದು ಹೇಳಿರುತ್ತದೆ.[5] ಹೀಗೆ ಏಳು ಅಂಗಗಳುಳ್ಳವನಾದ್ದರಿಂದ

1. "ಅಗ್ನಿಹೋತ್ರಾಹುತಿಕಲ್ಪನಾಶೇಷತ್ವೇನ" ಎಂಬ ವಾ ॥ ಪಾಠಕ್ಕಿಂತ ಇದು ಮೇಲು.
2. "ಅಗ್ನಿರ್ಮುಖಿತ್ವೇನ ಆಹವನೀಯ ಉಕ್ತಃ" ವಾ ॥.
3. 'ಸುಖಾದಿನಯನಾತ್' ವಾ ॥
4. ಅವಸ್ಥೆಯಾಗಿರುವದರಿಂದ.
5. ಉಪಾಸಕನು ಸರ್ವಾತ್ಮನಾಗಿ ಅನ್ನವನ್ನು ತಿನ್ನುತ್ತಾನೆ. ವೈಶ್ವಾನರವಿದ್ಯೆಗೆ ಅಂಗವಾದ ಪ್ರಾಣಾಗ್ನಿಹೋತ್ರವನ್ನು ಹೇಳುವದಕ್ಕೆ ಹೊರಟು ಅವನ ಎದೆಯೇ ವೇದಿ, ಲೋಮಗಳೇ ದರ್ಭೆಗಳು, ಹೃದಯವು ಗಾರ್ಹಪತ್ಯವು, ಮನಸ್ಸು ಅನ್ವಾಹಾರ್ಯಪಚನವು, ಆಸ್ಯವು ಆಹವನೀಯವು ಎಂದು ಶ್ರುತಿಯಲ್ಲಿ ಹೇಳಿದ

ಇವನು ಸಪ್ತಾಂಗನು.[1] ಇದರಂತೆ ಇವನಿಗೆ ಹತ್ತೊಂಬತ್ತು ಮುಖಗಳು. ಬುದ್ಧೀಂದ್ರಿಯಗಳೂ ಕರ್ಮೇಂದ್ರಿಯಗಳೂ (ಸೇರಿ) ಹತ್ತು ; ಪ್ರಾಣವೇ ಮುಂತಾದ[2] (ವಾಯುಗಳು) ಐದು ; ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ[3] - ಈ (ಹತ್ತೊಂಬತ್ತು) ಮುಖಗಳಂತಿರುವದರಿಂದ ಮುಖಗಳು. ಅವು ಅರಿಯುವಿಕೆಗೆ ದ್ವಾರಗಳು ಎಂದರ್ಥ. ಈ ವಿಶೇಷಣಗಳಿಂದೊಡಗೂಡಿದ ಆ ವೈಶ್ವಾನರನು ಮೇಲೆ ಹೇಳಿದ ದ್ವಾರಗಳಿಂದ ಶಬ್ದಾದಿಗಳೆಂಬ ಸ್ಥೂಲವಿಷಯಗಳನ್ನು ಭೋಗಿಸುತ್ತಾನಾದ್ದರಿಂದ (ಅವನನ್ನು) ''ಸ್ಥೂಲಭುಕ್'' (ಎಂದಿದೆ). ವಿಶ್ವ (ಎಲ್ಲಾ) ನರರನ್ನೂ ಬೇರೆಬೇರೆಯ ಪ್ರಕಾರವಾಗಿ (ಫಲಭೋಗಕ್ಕೆ) ಕರೆದೊಯ್ಯುವದರಿಂದ[4] **ವೈಶ್ವಾನರನು**. ಅಥವಾ ವಿಶ್ವನೂ ನರನೂ (ಎಲ್ಲಾ ಜೀವರೂ) ಆಗಿರುವದರಿಂದ (ಇವನು) ವಿಶ್ವಾನರನು ; ವಿಶ್ವಾನರನೇ **ವೈಶ್ವಾನರನು** (ಎಂದು ಸ್ವಾರ್ಥದಲ್ಲಿ ತದ್ಧಿತಪ್ರತ್ಯಯವು ಬಂದಿದೆ ಎಂದಾದರೂ ಈ ಶಬ್ದದ ವ್ಯುತ್ಪತ್ತಿಯನ್ನು ವಿವರಿಸಬಹುದು)[5]. ಏಕೆಂದರೆ ಎಲ್ಲಾ ಶಾರೀರಾತ್ಮರೂ ತಾನೇ ಆಗಿರುತ್ತಾನೆ.

ಈತನು ಮೊದಲನೆಯ ಪಾದವು ; ಮುಂದಿನ ಪಾದವನ್ನು ಅರಿತುಕೊಳ್ಳುವದಕ್ಕೆ ಇವನನ್ನು ಮೊದಲು ತಿಳಿಯಬೇಕಾಗುವದರಿಂದ ಇವನನ್ನು ಮೊದಲನೆಯವನು ಎಂದಿದೆ.[6]

1. ವೈಶ್ವಾನರವಿದ್ಯೆಯು ಉಪಾಸನೆಯಾದರೂ ಇಲ್ಲಿ ಹೇಳಿರುವ ಸಪ್ತಾಂಗತ್ವವು ವೈಶ್ವಾನರನ ಧರ್ಮವೇ ಆಗಿರುತ್ತದೆ. ಇದನ್ನು ಮುಂದೆ ಭಾಷ್ಯದಲ್ಲಿ ಸ್ಪಷ್ಟಪಡಿಸಿರುತ್ತದೆ.

2. ಪ್ರಾಣ, ಅಪಾನ-ಮುಂತಾದ ವೃತ್ತಿಗಳಿಂದ ಅಧ್ಯಾತ್ಮವಾಯು ಐದು ಬಗೆ.

3. ಯೋಚಿಸುವದು (ಮನನ), ಅರಿತುಕೊಳ್ಳುವದು (ಬುದ್ಧಿ), ಅಭಿಮಾನಿಸುವದು (ಅಹಂಕಾರ), ಸಾಮಾನ್ಯವಾಗಿ ಅರಿಯುವದು (ಚೇತನ)-ಎಂಬ ವೃತ್ತಿಗಳಿಂದ ಅಂತಃಕರಣವು ನಾಲ್ಕು ಬಗೆ. ಸೂ. ಭಾ. ೨-೩-೩೨.

4. ಅವರವರ ಪುಣ್ಯಪಾಪಗಳಿಗೆ ತಕ್ಕಂತೆ ಅವರವರನ್ನು ಫಲಭಾಗಿಗಳನ್ನಾಗಿ ಮಾಡುವದರಿಂದ ಎಂದರ್ಥ. ಛಾಂ. ಭಾ. ೫-೧೮-೧.

5. ಇಲ್ಲಿ ಕೊಟ್ಟಿರುವ ಎರಡರ್ಥಗಳಿಂದಲೂ ವಿಶ್ವ ಅಥವಾ ವೈಶ್ವಾನರ-ಎಂಬ ಶಬ್ದಗಳು ಸಮಷ್ಟಿಯಾದ ವೈಶ್ವಾನರ ಅಥವಾ ವಿರಾಟ್ಪುರುಷನನ್ನೇ ತಿಳಿಸುವವೆಂಬುದು ಸ್ಪಷ್ಟವಾಗಿದೆ. ವಿಶ್ವನೆಂದರೆ ಜಾಗ್ರದಭಿಮಾನಿಯಾದ ವ್ಯಷ್ಟಿಜೀವನೆಂದು ಅರ್ವಾಚೀನವೇದಾಂತಿಗಳು ಇಟ್ಟುಕೊಂಡಿರುವ ಪರಿಭಾಷೆಗೆ ಭಾಷ್ಯದ ಆಧಾರವು ಕಾಣುವದಿಲ್ಲ. ಪೀಠಿಕೆಯನ್ನು ನೋಡಿ.

6. ಇವನೇ ಮೊದಲು ಉಂಟಾದವನು ಎಂಬ ಅಭಿಪ್ರಾಯದಿಂದಲ್ಲ.

## ಆತ್ಮನ ಪಾದಗಳು ಸಮಷ್ಟ್ಯುಪಾಧಿಯಿಂದ ಕೂಡಿವೆ

(ಭಾಷ್ಯ)

೧೨. ಕಥಮ್ ''ಅಯಮಾತ್ಮಾ ಬ್ರಹ್ಮ'' ಇತಿ ಪ್ರತ್ಯಗಾತ್ಮನಃ ಅಸ್ಯ ಚತುಷ್ಪಾತ್ತ್ವಂ ಪ್ರಕೃತೇ ದ್ಯುಲೋಕಾದೀನಾಂ ಮೂರ್ಧಾದ್ಯಙ್ಗತ್ವಮ್ ಇತಿ ? । ನೈಷ ದೋಷಃ । ಸರ್ವಸ್ಯ ಪ್ರಪಞ್ಚಸ್ಯ ಸಾಧಿದೈವಿಕಸ್ಯ ಅನೇನ ಆತ್ಮನಾ ಚತುಷ್ಪಾತ್ತ್ವಸ್ಯ ವಿವಕ್ಷಿತತ್ವಾತ್ । ಏವಂ ಚ ಸತಿ ಸರ್ವಪ್ರಪಞ್ಚೋಪಶಮೇ ಅದ್ವೈತಸಿದ್ಧಿಃ । ಸರ್ವಭೂತಸ್ಥಶ್ಚ ಆತ್ಮಾ ಏಕೋ ದೃಷ್ಟಃ ಸ್ಯಾತ್ ಸರ್ವಭೂತಾನಿ ಚ ಆತ್ಮನಿ । ''ಯಸ್ತು ಸರ್ವಾಣಿ ಭೂತಾನಿ'' (ಈ. ೬) ಇತ್ಯಾದಿಶ್ರುತ್ಯರ್ಥಃ ಉಪಸಂಹೃತಶ್ಚ ಏವಂ ಸ್ಯಾತ್ । ಅನ್ಯಥಾ ಹಿ ಸ್ವದೇಹಪರಿಚ್ಛಿನ್ನ ಏವ ಪ್ರತ್ಯಗಾತ್ಮಾ ಸಾಙ್ಖ್ಯಾದಿಭಿರಿವ ದೃಷ್ಟಃ ಸ್ಯಾತ್ । ತಥಾ ಚ ಸತಿ ಅದ್ವೈತಮ್ ಇತಿ ಶ್ರುತಿಕೃತೋ ವಿಶೇಷೋ ನ ಸ್ಯಾತ್ । ಸಾಙ್ಖ್ಯಾದಿದರ್ಶನೇನ ಅವಿಶೇಷಾತ್ । ಇಷ್ಯತೇ ಚ ಸರ್ವೋಪನಿಷದಾಂ ಸರ್ವಾತ್ಮೈಕ್ಯಪ್ರತಿಪಾದಕತ್ವಮ್ । ಅತಃ ಯುಕ್ತಮೇವ ಅಸ್ಯ ಆಧ್ಯಾತ್ಮಿಕಸ್ಯ ಪಿಣ್ಡಾತ್ಮನಃ ದ್ಯುಲೋಕಾದ್ಯಙ್ಗತ್ವೇನ ವಿರಾಡಾತ್ಮನಾ ಆಧಿದೈವಿಕೇನ ಏಕತ್ವಮ್ ಅಭಿಪ್ರೇತ್ಯ ಸಪ್ತಾಙ್ಗತ್ವವಚನಮ್ । ''ಮೂರ್ಧಾ ತೇ ವ್ಯಪತಿಷ್ಯತ್'' (ಛಾಂ. ೫-೧೨-೨) ಇತ್ಯಾದಿಲಿಙ್ಗದರ್ಶನಾಚ್ಚ ॥

(ಭಾಷ್ಯಾರ್ಥ)

(ಆಕ್ಷೇಪ) :- ''ಈ ಆತ್ಮನು ಬ್ರಹ್ಮ'' (ಮಂ. ೨) ಎಂದು ಪ್ರತ್ಯಗಾತ್ಮನಿಗೆ[1] ನಾಲ್ಕು ಪಾದಗಳಿರುವವೆಂಬುದು ಪ್ರಕೃತವಾಗಿರುವಲ್ಲಿ ದ್ಯುಲೋಕವೇ ಮುಂತಾದವು (ಇವನ) ತಲೆಯೇ ಮುಂತಾದ ಅವಯವಗಳು ಎಂದು (ಹೇಳಿರುವದು) ಹೇಗೆ (ಸರಿ) ?

(ಪರಿಹಾರ) :- ಇದು ತಪ್ಪಲ್ಲ. ಅಧಿದೈವಿಕದೊಡಗೂಡಿರುವ[2] ಸರ್ವ ಪ್ರಪಂಚವೂ ಈ ಆತ್ಮನೊಡನೆ (ಸೇರಿ) ಆತ್ಮನ ನಾಲ್ಕುಪಾದಗಳು[3] ಎಂದು

1. ನಮ್ಮೊಳಗಿನ, ನಮ್ಮ ಶರೀರದೊಳಗಿರುವ, ಆತ್ಮನು ಬ್ರಹ್ಮವು ಎಂಬುದು ಪ್ರಕೃತ. ಇವನಿಗೆ ದ್ಯುಲೋಕವು ತಲೆ ಎಂದು ಮುಂತಾಗಿ ಹೇಳಿದ್ದು ಹೇಗೆ ?-ಎಂದು ಆಕ್ಷೇಪ.

2. ಸೂರ್ಯ, ಚಂದ್ರ, ನಕ್ಷತ್ರ-ಮುಂತಾದ ದ್ಯುಲೋಕದ ವಿಷಯವಾದದ್ದು ಆಧಿದೈವಿಕ.

3. ಇಲ್ಲಿ ಕೊಟ್ಟಿರುವದು ವಾಕ್ಯದ ಒಟ್ಟರ್ಥ. ಈಗ ಇರುವಂತೆ ಅನ್ವಯಿಸಿದರೆ ಪ್ರಪಂಚಕ್ಕೇ ಚತುಷ್ಪಾತ್ತ್ವವನ್ನು ಹೇಳಿದಂತೆ ಆಗುವದೆಂದು ತೋರುತ್ತದೆ ; ಇದನ್ನು ಹೇಗೆ ಅನ್ವಯಿಸ ಬೇಕೆಂಬುದನ್ನು ವಿದ್ವಾಂಸರು ನಿರ್ಣಯಿಸಬೇಕಾಗಿದೆ.

ಶ್ರುತಿಯ ಅಭಿಪ್ರಾಯ. ಹೀಗಾದರೆ ಪ್ರಪಂಚವೆಲ್ಲವೂ ಲಯವಾದರೆ[1] ಅದ್ವೈತವು ಸಿದ್ಧವಾಗುವದು ; ಸರ್ವಭೂತಗಳಲ್ಲಿಯೂ ಇರುವ ಒಬ್ಬ ಆತ್ಮನನ್ನೇ ಕಂಡು ಕೊಂಡಂತೆಯೂ ಸರ್ವಭೂತಗಳನ್ನೂ ಆತ್ಮನಲ್ಲಿ ಕಂಡುಕೊಂಡಂತೆಯೂ ಆಗುವದು. ಹಾಗಾದರೆ ''ಯಸ್ತು ಸರ್ವಾಣಿ ಭೂತಾನಿ'' (ಯಾವನು ಸರ್ವಭೂತಗಳನ್ನೂ ಆತ್ಮನಲ್ಲಿಯೇ ಕಂಡುಕೊಳ್ಳುವನೋ, ಈ. ೬) ಎಂಬುದೇ ಮುಂತಾದ ಶ್ರುತಿಯ ಅರ್ಥವನ್ನು ಇಲ್ಲಿಯೂ ಸೇರಿಸಿಕೊಂಡಂತೆ ಆಗುವದು. ಹೀಗಲ್ಲದೆ ಹೋದರೆ ತನ್ನ ದೇಹದಳತೆಗೆ ಸಿಕ್ಕಿರುವ ಪ್ರತ್ಯಗಾತ್ಮನನ್ನೇ ಸಾಂಖ್ಯಾದಿಗಳಂತೆ[2] ಕಂಡುಕೊಂಡಂತೆ ಆಗುತ್ತದೆ ; ಆ ಪಕ್ಷದಲ್ಲಿ ಅದ್ವೈತವೆಂದು ಶ್ರುತಿಯಲ್ಲಿ ಏರ್ಪಟ್ಟಿರುವ (ಸಿದ್ಧಾಂತ) ವಿಶೇಷವು ಇಲ್ಲದೆ ಹೋಗುವದು. ಏಕೆಂದರೆ ಆಗ (ಈ ಮತಕ್ಕೂ) ಸಾಂಖ್ಯರೇ ಮೊದಲಾದವರ (ಮತಕ್ಕೂ ಹೆಚ್ಚುಕಡಿಮೆಯೇನೂ ಇರುವದಿಲ್ಲ[3]. ಉಪನಿಷತ್ತುಗಳೆಲ್ಲವೂ ಎಲ್ಲರ ಆತ್ಮನೂ ಒಬ್ಬನೇ ಎಂದು ಹೇಳುವವೆಂಬುದು (ನಮಗೆಲ್ಲ) ಒಪ್ಪಿಗೆಯಾಗಿರುತ್ತದೆ[4]. ಆದ್ದರಿಂದ ಆಧ್ಯಾತ್ಮಿಕನಾದ ಶರೀರಾತ್ಮನು ದ್ಯುಲೋಕಾದಿಯಾದ ಅವಯವಗಳುಳ್ಳವನೆಂದು ಆಧಿದೈವಿಕನಾದ ವಿರಾಡಾತ್ಮನಿಗೂ (ಇವನಿಗೂ) ಏಕತ್ವವನ್ನು (ಹೇಳುವ) ಅಭಿಪ್ರಾಯದಿಂದ (ಈ ಆತ್ಮನು) ಸಪ್ತಾಂಗವುಳ್ಳವನು. ಎಂದು ಹೇಳಿರುವದು ಸರಿಯೇ. ''ನಿನ್ನ ತಲೆಯು ಬಿದ್ದುಬಿಡುತ್ತಿತ್ತು'' (ಛಾಂ. ೫-೧೨-೨) ಎಂದು ಮುಂತಾದ ಲಿಂಗವಿರುವದು ಕಾಣಬರುವದರಿಂದಲೂ (ಇದು ಸರಿಯೇ ಆಗಿರುತ್ತದೆ)[5].

1. ಜ್ಞಾನದಿಂದ ಬಾಧಿತವಾದರೆ.

2. ಸಾಂಖ್ಯರೇ ಮೊದಲಾದವರು ಒಂದೊಂದು ದೇಹಕ್ಕೂ ಒಬ್ಬೊಬ್ಬ ಆತ್ಮನು ನಿಜವಾಗಿರುವನೆಂದು ಅಭಿಪ್ರಾಯಪಡುತ್ತಾರೆ.

3. ಪ್ರಪಂಚವು ನಮ್ಮ ಹೊರಗೆ ಇರುವದೆಂದೂ ನಾವು ಅದರಲ್ಲಿ ಎಚ್ಚರವೇ ಮುಂತಾದ ಅವಸ್ಥಾತ್ರಯವನ್ನು ಅನುಭವಿಸುತ್ತಿರುವೆವೆಂದೂ ಇಟ್ಟುಕೊಂಡು ಅವಸ್ಥಾತ್ರಯವನ್ನು ಪರೀಕ್ಷಿಸಿದರೆ ದೇಹಾದ್ಯತಿರಿಕ್ತನಾದ ಆತ್ಮನ ಸಿದ್ಧಿಯಾದರೂ ಆತ್ಮೈಕತ್ವವು ಸಿದ್ಧಿಸುವದಿಲ್ಲ.

4. ಆದ್ದರಿಂದ ಈ ಉಪನಿಷತ್ತಿನಲ್ಲಿಯೂ ಅದನ್ನೇ ಹೇಳಿದೆಯೆಂಬುದು ಯುಕ್ತ.

5. ಉಪಮನ್ಯುವಿನ ಮಗನಾದ ಪ್ರಾಚೀನಶಾಲನೆಂಬುವನು ದ್ಯುಲೋಕವನ್ನೇ ವೈಶ್ವಾನರನೆಂದು ಉಪಾಸನೆಮಾಡುತ್ತಿದ್ದನು. ಅಶ್ವಪತಿ ಎಂಬ ರಾಜನ ಬಳಿಯಲ್ಲಿ ಜಿಜ್ಞಾಸೆ ಮಾಡುತ್ತಿರುವಾಗ ಆ ಆಚಾರ್ಯನು ಇದು ವೈಶ್ವಾನರನ ತಲೆಯು ; ಇದನ್ನೇ ಪೂರ್ಣವೈಶ್ವಾನರನೆಂದು ಉಪಾಸನೆ ಮಾಡುತ್ತಾ ಇದ್ದಿದ್ದರೆ, ಪೂರ್ಣವಿದ್ಯೆಯನ್ನು ನನ್ನಿಂದ ಕಲಿತುಕೊಳ್ಳದೆ ಇದ್ದಿದ್ದರೆ, ನಿನ್ನ ತಲೆಯು ಬಿದ್ದುಹೋಗುತ್ತಿತ್ತು-ಎಂದಿದಾನೆ. ಉಪಾಸಕನಿಗೂ ಉಪಾಸ್ಯವಾದ ವೈಶ್ವಾನರನಿಗೂ ಏಕತ್ವವನ್ನು ಹೇಳುವದು ಶ್ರುತಿಯ ಅಭಿಪ್ರಾಯವೆಂದು ಇದರಿಂದ ಸೂಚಿತವಾಗುತ್ತದೆ. ಇದರಂತೆ ''ನೀನು ಕುರುಡನಾಗಿ ಬಿಡುತ್ತಿದ್ದೆ'' (ಛಾಂ. ೫-೧೩-೧) ಮುಂತಾದ ಲಿಂಗ(ಸೂಚನೆ)ಗಳೂ ಇದೇ ಪ್ರಕರಣದಲ್ಲಿ ಕಾಣಬರುತ್ತವೆ

(ಭಾಷ್ಯ)

೧೩. ವಿರಾಜ್ಯೇಕತ್ವಮ್ ಉಪಲಕ್ಷಣಾರ್ಥಂ ಹಿರಣ್ಯಗರ್ಭಾವ್ಯಾಕೃತಾತ್ಮನೋಃ । ಉಕ್ತಂ ಚೈತತ್ ಮಧುಬ್ರಾಹ್ಮಣೇ "ಯಶ್ಚಾಯಮಸ್ಯಾಂ ಪೃಥಿವ್ಯಾಂ ತೇಜೋಮಯೋಽಮೃತಮಯಃ ಪುರುಷೋ ಯಶ್ಚಾಯಮಧ್ಯಾತ್ಮಮ್" (ಬೃ. ೨-೫-೧) ಇತ್ಯಾದಿ । ಸುಷುಪ್ತಾವ್ಯಾಕೃತಯೋಸ್ತ್ವೈಕತ್ವಂ ಸಿದ್ಧಮೇವ ನಿರ್ವಿಶೇಷತ್ವಾತ್ । ಏವಂ ಚ ಸತಿ ಏತತ್ ಸಿದ್ಧಂ ಭವಿಷ್ಯತಿ ಸರ್ವದ್ವೈತೋಪಶಮೇ ಚ ಅದ್ವೈತಮ್ ಇತಿ ॥

(ಭಾಷ್ಯಾರ್ಥ)

(ಎಚ್ಚರದ ಆತ್ಮನೂ) ವಿರಾಡಾತ್ಮನೂ ಒಬ್ಬನೇ ಎಂದು ಹೇಳಿರುವದು ಹಿರಣ್ಯಗರ್ಭ, ಅವ್ಯಾಕೃತ-ಈ ಇಬ್ಬರೊಡನೆ (ಅಧ್ಯಾತ್ಮಾತ್ಮರ ಏಕತ್ವವನ್ನು ಹೇಳುವದಕ್ಕೆ) ಉಪಲಕ್ಷಣವು. ಈ (ಅಭಿಪ್ರಾಯ)ವನ್ನು[1] ಮಧುಬ್ರಾಹ್ಮಣದಲ್ಲಿ "ಈ ಪೃಥ್ವಿಯಲ್ಲಿ ತೇಜೋಮಯನಾಗಿ,[2] ಅಮೃತಮಯನಾಗಿ[3] ಇರುವ ಯಾವ ಪುರುಷನಿರುವನೋ ಮತ್ತು ಶರೀರದೊಳಗೆ ಯಾವ (ತೇಜೋಮಯನಾದ, ಅಮೃತಮಯನಾದ ಪುರುಷನು) ಇರುವನೋ (ಇವನೇ ಆ ಆತ್ಮನು)[4]" (ಬೃ. ೨-೫-೧) ಎಂದು ಮುಂತಾಗಿ ಹೇಳಿರುತ್ತದೆ. ಸುಷುಪ್ತಾತ್ಮನೂ ಅವ್ಯಾಕೃತಾತ್ಮನೂ ಒಬ್ಬನೇ ಎಂಬುದಂತೂ ಸಿದ್ಧವೇ ಆಗಿರುತ್ತದೆ ; ಏಕೆಂದರೆ (ಇಬ್ಬರಲ್ಲಿಯೂ) ಯಾವ ವಿಶೇಷವೂ ಇರುವದಿಲ್ಲ. ಹೀಗಿರುವದರಿಂದ ದ್ವೈತವೆಲ್ಲವೂ ಹೋದರೆ[5] ಅದ್ವೈತವಾಗುವದು ಎಂಬುದು ಸಿದ್ಧವಾಗುವದು.

## (ಉಪನಿಷತ್ತು)

## ತೈಜಸನೆಂಬ ಎರಡನೆಯ ಪಾದ

ಸ್ವಪ್ನಸ್ಥಾನೋಽನ್ತಃಪ್ರಜ್ಞಃ ಸಪ್ತಾಙ್ಗ ಏಕೋನವಿಂಶತಿಮುಖಃ
ಪ್ರವಿವಿಕ್ತಭುಕ್ ತೈಜಸೋ ದ್ವಿತೀಯಃ ಪಾದಃ　　॥೪॥

---

1. ಸೂಕ್ಷ್ಮ ಶರೀರಾಭಿಮಾನಿಯೂ ಹಿರಣ್ಯಗರ್ಭನೂ ಒಬ್ಬನೇ ಎಂಬದನ್ನು.

2. ಚಿದಾತ್ಮಪ್ರಕಾಶನಾಗಿ.　　3. ಸಾವಿಲ್ಲದ ಸ್ವಭಾವವನಾಗಿ.

4 ಪೃಥಿವಿ, ಶರೀರ-ಇವು ಪರಸ್ಪರವಾಗಿ ಉಪಕಾರಕವಾಗಿರುವದರಿಂದಲೂ, ಲಿಂಗಾತ್ಮನಾದ ಪುರುಷನು ಶರೀರದಲ್ಲಿಯೂ ಹೊರಗೆ ಪೃಥಿವಿಯಲ್ಲಿಯೂ ಇದ್ದು, ಭೂತಗಳಿಗೆ ಉಪಕಾರಕನಾಗಿಯೂ ಉಪಕಾರ್ಯನಾಗಿಯೂ ಇರುವದರಿಂದಲೂ ಇವೆಲ್ಲ ಒಂದೇ ಕಾರಣವಾದ ಬ್ರಹ್ಮವೆಂದ ಆಗಿರುತ್ತವೆ-ಎಂಬುದು ಶ್ರುತ್ಯರ್ಥವು. ಹೀಗೆ ಮಿಕ್ಕ ಪರ್ಯಾಯಗಳಲ್ಲಿಯೂ ಈ ಬ್ರಾಹ್ಮಣದಲ್ಲಿ ಹೇಳಿರುತ್ತದೆ. ಬೃ. ಭಾ ವನ್ನು ನೋಡಿ. ಅಧ್ಯಾತ್ಮನಾದ ಲಿಂಗಾತ್ಮನಿಗೂ ಅಧಿಭೂತಾಧಿದೈವನಾಗಿರುವ ಹಿರಣ್ಯಗರ್ಭನಿಗೂ ಐಕ್ಯವು ಇಲ್ಲಿ ಉಕ್ತವಾಗಿದೆ

5. ಜ್ಞಾನದಿಂದ ಬಾಧಿತವಾದರೆ

೪. ಸ್ವಪ್ನಸ್ಥಾನನಾಗಿಯೂ, ಅಂತಃಪ್ರಜ್ಞನಾಗಿಯೂ ಸಪ್ತಾಂಗನಾಗಿಯೂ ಹತ್ತೊಂಬತ್ತುಮುಖಿವುಳ್ಳವನಾಗಿಯೂ ಪ್ರವಿವಿಕ್ತಭುಕ್ತಾಗಿಯೂ ಇರುವ ತೈಜಸನು ಎರಡನೆಯ ಪಾದವು.

(ಭಾಷ್ಯ)

೧೪. ಸ್ವಪ್ನಃ ಸ್ಥಾನಮ್ ಅಸ್ಯ ತೈಜಸಸ್ಯ ಇತಿ[1] ಸ್ವಪ್ನಸ್ಥಾನಃ । ಜಾಗ್ರತ್ಪ್ರಜ್ಞಾ ಅನೇಕಸಾಧನಾ ಬಹಿರ್ವಿಷಯೇವ ಅವಭಾಸಮಾನಾ ಮನಃಸ್ಪನ್ದನಮಾತ್ರಾ ಸತೀ ತಥಾ ಭೂತಂ ಸಂಸ್ಕಾರಂ ಮನಸಿ ಆಧತ್ತೇ । ತನ್ಮನಃ ತಥಾ ಸಂಸ್ಕೃತಂ ಚಿತ್ರಿತ ಇವ ಪಟಃ ಬಾಹ್ಯಸಾಧನಾನಪೇಕ್ಷಮ್ ಅವಿದ್ಯಾಕಾಮಕರ್ಮಭಿಃ ಪ್ರೇರ್ಯಮಾಣಂ ಜಾಗ್ರದ್ವತ್ ಅವಭಾಸತೇ । ತಥಾ ಚೋಕ್ತಮ್ ''ಅಸ್ಯ ಲೋಕಸ್ಯ ಸರ್ವಾವತೋ ಮಾತ್ರಾಮ್ ಉಪಾದಾಯ'' (ಬೃ. ೪-೩-೯) ಇತಿ । ತಥಾ ''ಪರೇ ದೇವೇ ಮನಸ್ಯೇಕೀ ಭವತಿ'' (ಪ್ರ. ೪-೨) ಇತಿ ಪ್ರಸ್ತುತ್ಯ ''ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ'' (ಪ್ರ. ೪-೫) ಇತಿ ಆಥರ್ವಣೇ । ಇನ್ದ್ರಿಯಾಪೇಕ್ಷಯಾ ಅನ್ತಃಸ್ಥತ್ವಾತ್ ಮನಸಃ ತದ್ವಾಸನಾರೂಪಾ ಚ ಸ್ವಪ್ನೇ ಪ್ರಜ್ಞಾ ಯಸ್ಯ[2] (?) ಇತಿ ಅನ್ತಃಪ್ರಜ್ಞಃ । ವಿಷಯಶೂನ್ಯಾಯಾಂ ಪ್ರಜ್ಞಾಯಾಂ ಕೇವಲಪ್ರಕಾಶಸ್ವರೂಪಾಯಾಂ ವಿಷಯಿತ್ವೇನ ಭವತಿ ಇತಿ ತೈಜಸಃ ವಿಶ್ವಸ್ಯ ಸವಿಷಯತ್ವೇನ ಪ್ರಜ್ಞಾಯಾಃ ಸ್ಥೂಲಾಯಾಃ ಭೋಜ್ಯತ್ವಮ್ । ಇಹ ಪುನಃ ಕೇವಲಾ ವಾಸನಾಮಾತ್ರಾ ಪ್ರಜ್ಞಾ ಭೋಜ್ಯಾ ಇತಿ ಪ್ರವಿವಿಕ್ತೋ ಭೋಗಃ ಇತಿ[3] । ಸಮಾನಮ್ ಅನ್ಯತ್ । ದ್ವಿತೀಯಃ ಪಾದಃ ತೈಜಸಃ ॥

(ಭಾಷ್ಯಾರ್ಥ)

ತೈಜಸನಿಗೆ ಕನಸೇ ಸ್ಥಾನವಾದ್ದರಿಂದ ಇವನು ಸ್ವಪ್ನಸ್ಥಾನನು. ಎಚ್ಚರದ ಅರಿವು ಅನೇಕಸಾಧನಗಳಿಂದ[4] ಆಗುವದಾಗಿ ಹೊರಗೆ ವಿಷಯಗಳುಳ್ಳದ್ದಾಗಿರುವಂತೆ ತೋರುವ[5] ಬರಿಯ ಮನಸ್ಸಿನ ಅಲುಗಾಟವು ಮಾತ್ರವಾಗಿದ್ದು[6] ಅಂಥ ಸಂಸ್ಕಾರವನ್ನೇ ಮನಸ್ಸಿನಲ್ಲಿ

1. ವಾ ॥ ಕಾ ॥ ಪಾಠದಲ್ಲಿ ಮಾತ್ರ ಇದೆ.

2. ಅಸ್ಯ ಎಂದಿರಬೇಕೆಂದು ತೋರುತ್ತದೆ ; ಅಚ್ಚಿನ ಪುಸ್ತಕಗಳಲ್ಲಿ ಯಸ್ಯ ಎಂದೇ ಇರುತ್ತದೆ.

3. ಇಲ್ಲಿ ಈ ಮಾತಿನ ಮುಂದೆ 'ಪ್ರವಿವಿಕ್ತಭುಕ್' ಎಂಬ ಮಾತು ಬಿಟ್ಟುಹೋಗಿರುವಂತೆ ಕಾಣುತ್ತದೆ. 4. ಚಕ್ಷುರಾದಿಯಾದ ಇಂದ್ರಿಯ, ಹೊರಗಿನ ಬೆಳಕು-ಮುಂತಾದದ್ದು.

5. ನಿಜವಾಗಿ ಅಲ್ಲಿಯೂ ವಿಷಯವಿಲ್ಲವೆಂದು ಭಾವ.

6. ಇಲ್ಲಿ ಎಲ್ಲವೂ ಮನಸ್ಸಿನ ಅಲುಗಾಟವೇ ಎಂದು ಹೇಳಿದ್ದರೂ ವಿಜ್ಞಾನವಾದವಾಗುವದಿಲ್ಲ. ಪೀಠಿಕೆಯನ್ನು ನೋಡಿ.

ಉಂಟುಮಾಡುತ್ತದೆ. ಆ ಮನಸ್ಸು ಹಾಗೆ ಸಂಸ್ಕಾರವನ್ನು ಹೊಂದಿ ಚಿತ್ರವನ್ನು ಬರೆದ ಬಟ್ಟೆಯಂತೆ ಹೊರಗಿನ ಸಾಧನಗಳನ್ನು ಬಯಸದೆಯೇ ಅವಿದ್ಯಾಕಾಮಕರ್ಮಗಳಿಂದ ಪ್ರೇರಿಸಲ್ಪಟ್ಟು ಎಚ್ಚರದಂತೆಯೇ ತೋರುವದು. ಆದ್ದರಿಂದಲೇ ''ಈ ಸರ್ವವನ್ನೂ ಉಳ್ಳ[1] (ಜಾಗ್ರತ್ತೆಂಬ) ಲೋಕದ ಅಂಶವನ್ನು ತೆಗೆದುಕೊಂಡು (ಕನಸನ್ನು ಅನುಭವಿಸುತ್ತಾನೆ)'' (ಬೃ. ೪-೩-೯) ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಇದರಂತೆ ''ಅದೆಲ್ಲವೂ ಪರಮದೇವನಾದ ಮನಸ್ಸಿನಲ್ಲಿ ಒಂದಾಗಿಬಿಡುತ್ತದೆ''[2] (ಪ್ರ. ೪-೨) ಎಂದು ಪ್ರಾರಂಭಿಸಿ ''ಇಲ್ಲಿ ಈ ದೇವನು ಮಹಿಮೆಯನ್ನು ಅನುಭವಿಸುತ್ತಾನೆ.''[3] (ಪ್ರ. ೪-೫) ಎಂದು ಅಥರ್ವಣದಲ್ಲಿ (ಹೇಳಿರುತ್ತದೆ). ಮನಸ್ಸು ಇಂದ್ರಿಯಗಳಿಗಿಂತಲೂ ಒಳಗೆ ಇರುವದರಿಂದ ಅದರ ವಾಸನೆಯ ರೂಪದ ಪ್ರಜ್ಞೆಯು ಕನಸಿನಲ್ಲಿ ಇವನಿಗೆ ಆಗುವದೆಂಬ ಕಾರಣದಿಂದ[4] (ಇವನು) ಅಂತಃಪ್ರಜ್ಞನೆನಿಸಿರುವನು. ವಿಷಯವಿಲ್ಲದೆ ಕೇವಲ ಪ್ರಕಾಶಸ್ವರೂಪವಾದ ಪ್ರಜ್ಞೆಗೆ ವಿಷಯಿಯಾಗಿರುವದರಿಂದ ತೈಜಸನೆಂದು ಹೆಸರು. ವಿಶ್ವನ ಪ್ರಜ್ಞೆಗೆ ವಿಷಯವೂ ಇರುವದರಿಂದ[5] ಸ್ಥೂಲವಾಗಿರುವ (ಪ್ರಜ್ಞೆಯು ಅವನಿಗೆ) ಭೋಜ್ಯವಾಗಿರುತ್ತದೆ : ಆದರೆ ಇಲ್ಲಿ ಕೇವಲ ವಾಸನೆಯ ರೂಪವಾಗಿರುವ ಪ್ರಜ್ಞೆಯು ಭೋಜ್ಯವಾಗಿರುವದರಿಂದ ಭೋಗವು ವಿಂಗಡವಾಗಿರುತ್ತದೆಯಾಗಿ (ಪ್ರವಿವಿಕ್ತಭುಕ್ ಎಂದು ಕರೆದಿದೆ). ಉಳಿದದ್ದು[6] (ಹಿಂದಿನ ಪಾದಕ್ಕೂ ಇದಕ್ಕೂ) ಸಮಾನವಾಗಿದೆ. ತೈಜಸನು ಎರಡನೆಯ ಪಾದವು.

## ಪ್ರಾಜ್ಞನೆಂಬ ಮೂರನೆಯ ಪಾದ

**ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ ಕಂಚನ**
**ಸ್ವಪ್ನಂ ಪಶ್ಯತಿ ತತ್ ಸುಷುಪ್ತಮ್ । ಸುಷುಪ್ತಸ್ಥಾನ**

---

1. ಸರ್ವಸಾಧನಸಂಪತ್ತ್ರೂ ಇರುವ ಜಾಗ್ರತ್ತಿನ ವಾಸನೆಯನ್ನು ತೆಗೆದುಕೊಂಡು.

2. ಇಂದ್ರಿಯಗಳು ವ್ಯಾಪಾರವನ್ನು ಬಿಟ್ಟುಬಿಡುವವು. ಮನಸ್ಸು ಒಂದೇ ಉಳಿಯುವದು ಎಂದರ್ಥ.

3. ವಿಷಯವಿಷಯಿಗಳೆರಡೂ ತಾನೇ ಆಗುವ ಹೆಚ್ಚುಗಾರಿಕೆಯನ್ನು ಮನಸ್ಸು ಪಡೆಯುತ್ತದೆ.

4. ಈ ಪ್ರಕರಣದಲ್ಲಿ ಕನಸು ಜಾಗ್ರತ್ತಿನ ವಾಸನೆ ಎಂಬ ವ್ಯಾವಹಾರಿಕದೃಷ್ಟಿಯನ್ನು ಅವಲಂಬಿಸಿರುತ್ತದೆ. ಕನಸಿನಲ್ಲಿ ಕಾಣುವದು ಯಾವದೂ ಎಚ್ಚರದ ಕಾರ್ಯವಲ್ಲವೆಂಬುದನ್ನು ೪-೪೧ ರ ಭಾಷ್ಯದಲ್ಲಿ ಸ್ಪಷ್ಟಪಡಿಸಿದೆ.

5. ಇದೂ ವ್ಯಾವಹಾರಿಕದೃಷ್ಟಿಯಿಂದ, ನಿಜವಾಗಿ ವಿಷಯವಿಲ್ಲವಿದ್ದರೂ ವಿಷಯವಿರುವಂತೆ ತೋರುತ್ತದೆ-ಎಂದು ಈ ಭಾಷ್ಯಭಾಗದಲ್ಲಿಯೇ ಮೇಲೆ ಹೇಳಿದ್ದಾಗಿದೆ.

6. ಸಪ್ತಾಂಗನಾಗಿರುವದು ಮುಂತಾದದು

ಏಕೀಭೂತಃ ಪ್ರಜ್ಞಾನಘನ ಏವಾನನ್ದಮಯೋ ಹ್ಯಾನನ್ದ-
ಭುಕ್ಚೇತೋಮುಖಃ ಪ್ರಾಜ್ಞಸ್ತೃತೀಯಃ ಪಾದಃ ॥೫॥

೫. ಎಲ್ಲಿ ನಿದ್ರಿಸುತ್ತಿರುವವನು ಯಾವ ಕಾಮವನ್ನೂ ಬಯಸುವದಿಲ್ಲವೋ ಯಾವ ಕನಸನ್ನೂ ಕಾಣುವದಿಲ್ಲವೋ ಅದು ಸುಷುಪ್ತವು. ಸುಷುಪ್ತಸ್ಥಾನನೂ ಏಕೀಭೂತನೂ ಪ್ರಜ್ಞಾನಘನನೇ ಆದವನೂ ಆನಂದಮಯನೂ ಆನಂದ ಭೋಗಿಯೂ ಚೇತೋಮುಖನೂ ಆಗಿರುವ ಪ್ರಾಜ್ಞನು ಮೂರನೆಯ ಪಾದವು.

(ಭಾಷ್ಯ)

೧೫. ದರ್ಶನಾದರ್ಶನವೃತ್ತ್ಯೋಃ ತತ್ತ್ವಾಪ್ರತಿಬೋಧಲಕ್ಷಣಸ್ಯ ಸ್ವಾಪಸ್ಯ ತುಲ್ಯತ್ವಾತ್ ಸುಷುಪ್ತಗ್ರಹಣಾರ್ಥಂ "ಯತ್ರ ಸುಪ್ತಃ" ಇತ್ಯಾದಿವಿಶೇಷಣಮ್ । ಅಥವಾ ತ್ರಿಷ್ವಪಿ ಸ್ಥಾನೇಷು ತತ್ತ್ವಾಪ್ರತಿಬೋಧಲಕ್ಷಣಃ ಸ್ವಾಪಃ ಅವಿಶಿಷ್ಟಃ ಇತಿ ಪೂರ್ವಾಭ್ಯಾಂ ಸುಷುಪ್ತಂ ವಿಭಜತೇ । ಯತ್ರ ಯಸ್ಮಿನ್ ಸ್ಥಾನೇ ಕಾಲೇ ವಾ ಸುಪ್ತಃ ನ ಕಂಚನ ಕಾಮಂ ಕಾಮಯತೇ ನ ಕಞ್ಚನ ಸ್ವಪ್ನಂ ಪಶ್ಯತಿ[1] । ನ ಹಿ ಸುಷುಪ್ತೇ ಪೂರ್ವಯೋರಿವ ಅನ್ಯಥಾಗ್ರಹಣಲಕ್ಷಣಂ ಸ್ವಪ್ನದರ್ಶನಂ ಕಾಮೋ ವಾ ಕಶ್ಚನ ವಿದ್ಯತೇ । (ತತ್ ಸುಷುಪ್ತಮ್)[2] ॥

(ಭಾಷ್ಯಾರ್ಥ)

ನೋಡುವದು, ನೋಡದೆ ಇರುವದು-ಎಂಬ ವೃತ್ತಿಗಳಿರದರಲ್ಲಿಯೂ[3] ತತ್ತ್ವವನ್ನು ತಿಳಿಯದೆ ಇರುವದೆಂಬ ನಿದ್ರೆಯು[4] ಸಮಾನವಾಗಿರುವದರಿಂದ ಸುಷುಪ್ತವನ್ನೇ ತೆಗೆದುಕೊಳ್ಳಬೇಕೆಂದು (ತಿಳಿಸುವದಕ್ಕೆ) "ಯತ್ರ ಸುಪ್ತಃ" (ಎಲ್ಲಿ ನಿದ್ರಿಸುವವನು) ಎಂದು ಮುಂತಾದ ವಿಶೇಷಣ(ವನ್ನು) ಕೊಟ್ಟಿರುತ್ತದೆ. ಅಥವಾ ಮೂರು ಸ್ಥಾನ

---

1. ಈ ವಾ ॥ ಮೈ ॥ ಪಾಠವು ಉಪನಿಷತ್ತಿನ ಮೂಲಕ್ಕನುಗುಣವಾಗಿರುವದರಿಂದ ಇದನ್ನೇ ಅನುಸರಿಸಿದೆ.

2. ಈ ಎರಡು ಮಾತುಗಳು ಇಲ್ಲಿಯೋ ಅಥವಾ "ಪಶ್ಯತಿ" ಎಂಬ ಮಾತಾದ ಬಳಿಕವೋ ಇರಬೇಕಾಗಿದ್ದು ಬಿಟ್ಟುಹೋಗಿವೆ.

3. ದರ್ಶನವೃತ್ತಿ ಎಂದರೆ ಸ್ವಪ್ನವು ; ಅದರ್ಶನವೃತ್ತಿ ಎಂದರೆ ತಸಿನಿದ್ರೆ. ದರ್ಶನವೃತ್ತಿ ಎಂದರೆ ಎಚ್ಚರವೆಂಬ ವ್ಯಾಖ್ಯಾನವು ಸರಿಯಲ್ಲ. ಬೃ. ಭಾ. ೪-೩-೧೨, ಛಾಂ. ಭಾ. ೬-೪-೧ ನೋಡಿ. ವೃತ್ತಿ ಎಂದರೆ ಸ್ಥಾನವು, ಅವಸ್ಥೆ ; ೨-೯ ನ್ನು ನೋಡಿ. ಕನಸಿನಲ್ಲಿಯೂ, ತಸಿನಿದ್ರೆಯಲ್ಲಿಯೂ ಎಚ್ಚರದ ವಸ್ತುಗಳ ಅರಿವಿಲ್ಲ ; ಆದರೆ ಕನಸಿನಲ್ಲಿ ಹುಸಿತೋರಿಕೆಗಳ ದರ್ಶನವಿದೆ.

4 ತತ್ತ್ವಾಪ್ರತಿಬೋಧವೆಂದರೆ ಪ್ಯಾಸಹಾರಿಕವಸ್ತುತತ್ತ್ವವನ್ನರಿಯಬರುವದು ಎಂದು ಭಾವ.

ಗಳಲ್ಲಿಯೂ ತತ್ತ್ವವನ್ನು ತಿಳಿಯದಿರುವದೆಂಬ ನಿದ್ರೆಯು[1] ಸಮಾನವಾಗಿದೆಯಾದ್ದರಿಂದ ಮೊದಲನೆಯ ಎರಡು (ಸ್ಥಾನಗಳಿಂದ) ಸುಷುಪ್ತವನ್ನು ವಿಂಗಡಿಸಿ (ಶ್ರುತಿಯು) ಹೇಳುತ್ತಿದೆ :-

ಎಲ್ಲಿ ಎಂದರೆ ಯಾವ ಸ್ಥಾನದಲ್ಲಿ ಅಥವಾ (ಯಾವ) ಕಾಲದಲ್ಲಿ ನಿದ್ರೆ ಮಾಡುತ್ತಿರುವವನು ಯಾವ ಕಾಮವನ್ನೂ ಬಯಸುವದಿಲ್ಲವೋ ಯಾವ ಕನಸನ್ನೂ ಕಾಣುವದಿಲ್ಲವೋ (ಅದು ಸುಷುಪ್ತವು ಎಂದರ್ಥ). ಏಕೆಂದರೆ ಸುಷುಪ್ತದಲ್ಲಿ ಮೊದಲನೆಯ ಎರಡು (ಅವಸ್ಥೆಗಳಲ್ಲಿರುವಂತೆ) ತಪ್ಪಾಗಿ ತಿಳಿಯುವದೆಂಬ ಕನಸು ಕಾಣುವದಾಗಲಿ ಬಯಕೆಯಾಗಲಿ ಯಾವದೂ ಇರುವದಿಲ್ಲ.

(ಭಾಷ್ಯ)

೧೬. ತದೇತತ್ ಸುಷುಪ್ತಂ ಸ್ಥಾನಮ್ ಅಸ್ಯ ಇತಿ ಸುಷುಪ್ತಸ್ಥಾನಃ । ಸ್ಥಾನದ್ವಯ ಪ್ರವಿಭಕ್ತಂ ಮನಃಸ್ಪನ್ದಿತಂ ದ್ವೈತಚಾತಂ ತಥಾರೂಪಾಪರಿತ್ಯಾಗೇನ ಅವಿವೇಕಾಪನ್ನಂ ನೈಶತಮೋಗ್ರಸ್ತಮಿವ ಅಹಃಪ್ರಪಞ್ಚಕಮ್[2] ಏಕೀಭೂತಮ್ ಇತ್ಯುಚ್ಯತೇ । ಅತ ಏವ ಸ್ವಪ್ನಜಾಗ್ರನ್ಮನಃಸ್ಪನ್ದನಾನಿ ಪ್ರಜ್ಞಾನಾನಿ ಘನೀಭೂತಾನೀವ । ಸೇಯಮ್ ಅವಸ್ಥಾ ಅವಿವೇಕರೂಪತ್ವಾತ್ ಪ್ರಜ್ಞಾನಘನಃ ಉಚ್ಯತೇ । ಯಥಾ ರಾತ್ರೌ ನೈಶೇನ ತಮಸಾ ಅವಿಭಜ್ಯಮಾನಂ ಸರ್ವಂ ಘನಮಿವ ತದ್ವತ್ ಪ್ರಜ್ಞಾನಘನ ಏವ । ವಿವಶಬ್ದಾತ್ ನ ಜಾತ್ಯನ್ತರಮ್ ಪ್ರಜ್ಞಾನವ್ಯತಿರೇಕೇಣ ಅಸ್ತಿ ಇತ್ಯರ್ಥಃ ಮನಸಃ ವಿಷಯವಿಷಯ್ಯಾಕಾರಸ್ಪನ್ದನಾಯಾಸದುಃಖಾಭಾವಾತ್ ಆನನ್ದಮಯಃ, ಆನನ್ದಪ್ರಾಯಃ, ನಾನನ್ದ ಏವ । ಅನಾತ್ಮನ್ತಿಕತ್ವಾತ್ । ಯಥಾ ಲೋಕೇ ನಿರಾಯಾಸಸ್ಥಿತಃ ಸುಖೀ ಆನನ್ದಭುಕ್ ಉಚ್ಯತೇ, ಅತ್ಯನ್ತಾನಾಯಾಸರೂಪಾ ಹಿ ಇಯಂ ಸ್ಥಿತಿಃ ಅನೇನ ಅನುಭೂಯತೇ ಇತಿ ಆನನ್ದಭುಕ್ । "ಏಷೋಽಸ್ಯ ಪರಮ ಆನನ್ದಃ" (ಬೃ. ೪-೩-೩೨) ಇತಿ ಶ್ರುತೇಃ । ಸ್ವಪ್ನಾದಿಪ್ರತಿಬೋಧಚೇತಃ[3]ಪ್ರತಿ ದ್ವಾರೀಭೂತತ್ವಾತ್ ಚೇತೋಮುಖಿಃ । ಬೋಧ ಲಕ್ಷಣಂ ವಾ ಚೇತಃ ದ್ವಾರಂ ಮುಖಮ್ ಅಸ್ಯ ಸ್ವಪ್ನಾದ್ಯಾಗಮನಂ ಪ್ರತಿ ಇತಿ ಚೇತೋಮುಖಿಃ । ಭೂತಭವಿಷ್ಯದ್ವರ್ತ್ಮತೃತ್ವಂ ಸರ್ವವಿಷಯದರ್ಶಿತೃತ್ವಮ್ ಅಸ್ಯೈವ ಇತಿ ಪ್ರಾಜ್ಞಃ । ಸುಷುಪ್ತೋಽಪಿ ಹಿ ಭೂತಪೂರ್ವಗತ್ಯಾ ಪ್ರಾಜ್ಞ ಉಚ್ಯತೇ । ಅಥವಾ ಪ್ರಜ್ಞಪ್ತಿ

1. ಇಲ್ಲಿ ತತ್ತ್ವಪ್ರತಿಬೋಧವೆಂದರೆ ಪರಮಾರ್ಥವಾದ ಆತ್ಮತತ್ತ್ವವನ್ನು ತಿಳಿಯುವದು ; ಇದು ಮೂರು ಅವಸ್ಥೆಗಳಿಗೂ ಸಮಾನವಾದ ನಿದ್ರೆ.

2. "ಅಹಃ ಸಪ್ರಪಞ್ಚಕಮ್" ಆ॥, "ಅಹಃ, ಸಪ್ರಪಞ್ಚಮ್" ಪಾ ॥-ಎಂಬ ಪಾಠಗಳಿಗಿಂತ ಈ ಪಾಠವೇ ಉತ್ತಮವೆಂದು ಕಲ್ಪಿಸಿದೆ. 3 "ಪ್ರತಿಬೋಧಂ ಚೇತ" ಪಾ ॥

ಮಾತ್ರಮ್ ಅಸ್ಯೈವ ಅಸಾಧಾರಣಂ ರೂಪಮ್ ಇತಿ ಪ್ರಾಜ್ಞಃ । ಇತರಯೋಃ ವಿಶಿಷ್ಟ ಮಪಿ ವಿಜ್ಞಾನಮ್ ಅಸ್ತಿ । ಸೋಽಯಂ ಪ್ರಾಜ್ಞಃ ತೃತೀಯಃ ಪಾದಃ ।।

(ಭಾಷ್ಯಾರ್ಥ)

ಅಂಥ ಈ ಸುಷುಪ್ತವೇ ಈತನಿಗೆ ಸ್ಥಾನವಾದ್ದರಿಂದ ಇವನು ಸುಷುಪ್ತ ಸ್ಥಾನನು. ಎರಡು ಸ್ಥಾನಗಳಾಗಿ ವಿಂಗಡವಾಗಿರುವ[1] ಮನಸ್ಸಿನ ಅಲುಗಾಟವಾದ ದ್ವೈತ ಸಮೂಹವು ಆ (ತನ್ನ) ರೂಪವನ್ನು ಬಿಡದೆ[2] ರಾತ್ರಿಯ ಕತ್ತಲೆಯಲ್ಲಿ ಸಿಕ್ಕಿಕೊಂಡಿರುವ ಹಗಲಿನ ಪ್ರಪಂಚದಂತೆ ಬಿಡಿಸಿ ಅರಿಯುವದಕ್ಕೆ ಆಗದಂತೆ ಆಗುವದರಿಂದ ಏಕೀಭೂತ ಒಂದಾಯಿತೆಂದು ಹೇಳಿಸಿಕೊಳ್ಳುತ್ತದೆ[3]. ಆದ್ದರಿಂದಲೇ ಕನಸು ಮತ್ತು ಎಚ್ಚರ - ಇವುಗಳಲ್ಲಿರುವ ಮನಸ್ಸಿನ ಅಲುಗಾಟಗಳಾದ ಅರಿವುಗಳು (ಒಂದು) ಗಟ್ಟಿಯಾದಂತೆ ಆಗಿಬಿಡುತ್ತವೆ. ಅಂಥ ಈ ಅವಸ್ಥೆಯು ಬಿಡಿಸಿ ಅರಿಯುವದಲ್ಲವಾದ್ದರಿಂದ ಪ್ರಜ್ಞಾನ ಘನ ಎಂದು ಹೇಳಲ್ಪಟ್ಟಿರುತ್ತದೆ[4] ಹೇಗೆ ರಾತ್ರಿಯಲ್ಲಿ ಕಗ್ಗತ್ತಲೆಯಲ್ಲಿ ಇಂಥಿಂಥದ್ದೆಂದು ಬಿಡಿಸಿ ಅರಿಯುವದಕ್ಕಾಗದೆ ಒಂದೇ ಗಟ್ಟಿಯಾದಂತೆ ಇರುವದೋ ಅದರಂತೆ (ಇವನು) ಪ್ರಜ್ಞಾನಘನನೇ ಆಗಿರುತ್ತಾನೆ. (ಏವ (ಏ) ಎಂಬ ಶಬ್ದವಿರುವದರಿಂದ ಪ್ರಜ್ಞಾನವನ್ನು ಬಿಟ್ಟು ಮತ್ತೊಂದು ಜಾತಿಯ (ವಸ್ತು ಯಾವದೂ) ಇರುವದಿಲ್ಲ ಎಂದರ್ಥ[5]. ಮನಸ್ಸು ವಿಷಯವಿಷಯಿಗಳ ಆಕಾರವಾಗಿ ಅಲುಗಾಡುವ ಆಯಾಸದ ದುಃಖವು ಇಲ್ಲದಿರುವ ದರಿಂದ (ಇವನು) ಆನಂದಮಯನು, ಆನಂದಪ್ರಚುರನಾಗಿರುವವನು (ಎಂದರ್ಥ). ಆನಂದಸ್ವರೂಪವೇ (ಎಂದರ್ಥವಲ್ಲ) ; ಏಕೆಂದರೆ ಕೊನೆಯವರೆಗೂ (ಈ ಆನಂದವು

1. ಕನಸು, ಎಚ್ಚರ-ಎಂದು ಮನಸ್ಸಿನ ಅಲುಗಾಟವು ಎರಡು ಬಗೆಯಾಗಿ ವಿಂಗಡವಾಗಿರುತ್ತದೆ. ಆದ್ದರಿಂದ ಅದರಿಂದ ತೋರುವ ದ್ವೈತವೂ ಎರಡು ಬಗೆಯಾಗಿರುತ್ತದೆ.

2. ಮತ್ತೆ ಎಚ್ಚರವಾಗುತ್ತಲೂ ತನ್ನ ರೂಪದಲ್ಲಿಯೇ ತೋರಿಕೊಳ್ಳುವದರಿಂದ ಸುಷುಪ್ತಿಯಲ್ಲಿಯೂ ತನ್ನ ರೂಪವನ್ನು ಬಿಡಲಿಲ್ಲವೆಂದು ಊಹಿಸಬೇಕು.

3. ಪ್ರಪಂಚವು ವಿಂಗಡವಾಗಿಯೇ ಇದ್ದರೂ ಕತ್ತಲೆಯಲ್ಲಿ ಒಂದಾಗಿ ಕಾಣುತ್ತದೆ ; ಆದರೆ ತನಿನಿದ್ರೆಯಲ್ಲಿ ದ್ವೈತವು ವಿಂಗಡವಾಗಿಲ್ಲದಿದ್ದರೂ ವಿಂಗಡವಾಗಿ ತೋರುವ ಸ್ವಭಾವವನ್ನು ಬಿಟ್ಟಿರುವದಿಲ್ಲ. ಇದೆಲ್ಲವೂ ಅಜ್ಞರ ವ್ಯಾವಹಾರಿಕದೃಷ್ಟಿಯಿಂದ ಆಡಿದ ಮಾತು. ದ್ವೈತವು ಒಂದಾಗಿರುವದರಿಂದ ಪ್ರಾಜ್ಞನು ಏಕೀಭೂತನು ಎನಿಸುವನೆಂದು ಅಭಿಪ್ರಾಯ.

4. ದ್ವೈತದ ವಿಷಯಗಳು ಒಂದಾಗುವದರಿಂದ ಅವುಗಳ ಜ್ಞಾನಗಳೂ ಒಂದಾಗಿಬಿಡುತ್ತವೆ.

5. ಸುಷುಪ್ತಿಯಲ್ಲಿ ಆತ್ಮಚೈತನ್ಯವೊಂದು ಹೊರತು ಅದಕ್ಕಿಂತ ಬೇರೆಯಾದ ವಿಷಯವಾಗಲಿ, ಅದನ್ನು ಬೆಳಗುವ ಜ್ಞಾನವಾಗಲಿ ಬಿಡಿಯಾಗಿರುವದಿಲ್ಲ. ಆದ್ದರಿಂದಲೇ ಪ್ರಾಜ್ಞನು ಏಕೀಭೂತನು, ಪ್ರಜ್ಞಾನಘನನು (ಬೃ. ಭಾ. ೪-೩-೨೩).

ಇರುವದಿಲ್ಲ)[1]. ಹೇಗೆ ಲೋಕದಲ್ಲಿ ಯಾವ ಆಯಾಸವೂ ಇಲ್ಲದ ಸುಖಿಯು "ಆನಂದ ಭುಕ್" (ಆನಂದಾನುಭವಿ) ಎನಿಸುವನೋ, (ಹಾಗೆಯೇ) ಸ್ವಲ್ಪವೂ ಆಯಾಸವಿಲ್ಲದ ಈ ಸ್ಥಿತಿಯನ್ನು ಇವನು ಅನುಭವಿಸುತ್ತಾನಾದ್ದರಿಂದ ಇವನು "ಆನಂದಭುಕ್" (ಆನಂದಾನುಭವಿ)[2]. "ಇದು ಇವನಿಗೆ ಪರಮಾನಂದವು" (ಬೃ. ೪-೩-೩೨) ಎಂಬ ಶ್ರುತಿ ಇದಕ್ಕೆ ಪ್ರಮಾಣವು[3]. ಕನಸು ಮುಂತಾದವುಗಳಲ್ಲಿರುವ[4] ಅರಿವೆಂಬ ಚೇತಸ್ಸಿಗೆ ದ್ವಾರವಾಗಿರುವದರಿಂದ ಚೇತೋಮುಖನು[5]. ಅಥವಾ ಅರಿವೆಂಬ ಚೇತಸ್ಸೇ ಇವನಿಗೆ ಕನಸು ಮುಂತಾದವುಗಳನ್ನು ಪಡೆಯುವದಕ್ಕೆ ದ್ವಾರವಾಗಿರುವದರಿಂದ (ಇವನು) ಚೇತೋಮುಖನು[6] (ಎಂದಾದರೂ ಅರ್ಥವನ್ನು ಮಾಡಬಹುದು). ಹಿಂದೆ ಆದದ್ದನ್ನೂ ಮುಂದೆ ಆಗುವದನ್ನೂ ಅರಿಯುವ ಸರ್ವವಿಷಯಗಳ ಜ್ಞಾತೃತ್ವವು ಈತನದೇ ಆಗಿರುವದರಿಂದ (ಇವನು) ಪ್ರಾಜ್ಞನು[7]. ಸುಷುಪ್ತಾತ್ಮನು ಕೂಡ ಭೂತಪೂರ್ವಗತಿಯಿಂದ[8] ಪ್ರಾಜ್ಞನು ಎನಿಸಿರುತ್ತಾನೆ. ಅಥವಾ ಪ್ರಜ್ಞಪ್ತಿ[9] ಯೊಂದೇ (ಇರುವದು) ಇವನದೇ ವಿಶೇಷರೂಪವು. ಆದ್ದರಿಂದ (ಇವನು) ಪ್ರಾಜ್ಞನು[10] (ಎಂದಾದರೂ ಅರ್ಥ

---

1. ಆತ್ಮನು ಸುಷುಪ್ತಿಯಲ್ಲಿ ಏಕೀಭೂತನಾಗಿ ಪ್ರಜ್ಞಾನಘನನಾಗಿರುವದೂ ಅವನ ಸುಖದಂತೆ ಎಚ್ಚರವಾಗುತ್ತಲೂ ಕೊನೆಗಾಣುತ್ತದೆ.

2. ಸುಷುಪ್ತಿಯಲ್ಲಿ ಆತ್ಮನು ಆನಂದವನ್ನು ಅನುಭವಿಸುತ್ತಾನೆಂಬುದು ಉಪಚಾರದ ಮಾತು ; ಏಕೆಂದರೆ ಆನಂದಕ್ಕಿಂತ ಬೇರೆಯಾದ ಅನುಭವವೇನೂ ಅಲ್ಲಿರುವದಿಲ್ಲ.

3. ಸುಷುಪ್ತಿಯಲ್ಲಿ ದೊರೆಯುವ ಆನಂದವೇ ವಿಜ್ಞಾನಮಯನಿಗೆ ದೊರೆಯುವ ಪರಮಾನಂದ ಎಂದು ಶ್ರುತಿಯ ಅರ್ಥ.

4. ಎಚ್ಚರಕನಸುಗಳಲ್ಲಿರುವ.

5. ಮರಹಿಲ್ಲದೆ ತಪ್ಪುತಿಳಿವಳಿಕೆಯುಂಟಾಗದು, ನಿದ್ರೆಯಿಲ್ಲದವನಿಗೆ ಎಚ್ಚರಕನಸುಗಳೂ ಆಗಲಾರವು. ಆದ್ದರಿಂದ ಪ್ರಾಜ್ಞನು ಎಚ್ಚರಕನಸುಗಳ ಅರಿವಿಗೆ ದ್ವಾರ.

6. ವಿಶೇಷರೂಪವಾದ ಅರಿವೆಂಬ ಚೇತಸ್ಸಿನ ಮೂಲಕ ಪ್ರಾಜ್ಞನು ಎಚ್ಚರಕನಸುಗಳನ್ನು ಪಡೆಯುತ್ತಾನೆ.

7. ಪ್ರಕರ್ಷೇಣ ಜಾನಾತಿ ಇತಿ ಪ್ರಜ್ಞಃ । ಪ್ರಜ್ಞ ಏವ ಪ್ರಾಜ್ಞಃ । ಕರ್ತ್ರರ್ಥದಲ್ಲಿ ಪ್ರಜ್ಞ ಎಂಬ ರೂಪವನ್ನುಪಯೋಗಿಸಿದೆ (ಪಾ. ಸೂ ೩-೧-೧೩೧). ಚೆನ್ನಾಗಿ ಅರಿಯುವವನು, ಬಿಡಿಬಿಡಿಯಾಗಿ ವಿಷಯಗಳನ್ನು ಅರಿಯುವವನು ಎಂದರ್ಥ

8. ಪೂರ್ವದಲ್ಲಿ ಎಂದರೆ ಎಚ್ಚರಕನಸುಗಳಲ್ಲಿ ಉಂಟಾಗಿದ್ದ ಜ್ಞಾತೃತ್ವವೆಂಬುದನ್ನು ಇಟ್ಟುಕೊಂಡು ಚೈತನ್ಯಮಾತ್ರನಾದ ಸುಷುಪ್ತನನ್ನೂ ಪ್ರಾಜ್ಞ ಎಂದಿದೆ ಎಂದರ್ಥ.

9. ಬರಿಯ ಚೈತನ್ಯವು.

10. ಪ್ರಜ್ಞಾ ಅಸ್ಯ ಅಸ್ತಿ ಇತಿ ಪ್ರಾಜ್ಞಃ (ಪಾ. ಸೂ. ೫-೨-೧೦೧) ಬರಿಯರಿವಿನ ಸ್ವರೂಪವುಳ್ಳವನು

ಮಾಡಬಹುದು) ; ಏಕೆಂದರೆ ಮಿಕ್ಕ ಇಬ್ಬರಿಗೂ ವಿಶೇಷರೂಪವಾದ ವಿಜ್ಞಾನವೂ[1] ಇರುತ್ತದೆ. ಇಂಥ ಈ ಪ್ರಾಜ್ಞನು ಮೂರನೆಯ ಪಾದವು.

## (ಉಪನಿಷತ್ತು)

ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋಽನ್ತರ್ಯಾಮ್ಯೇಷ
ಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಮ್ ॥೬॥

೬. ಈತನೇ ಸರ್ವೇಶ್ವರನು, ಈತನೇ ಸರ್ವಜ್ಞನು, ಈತನೇ ಅನ್ತರ್ಯಾಮಿಯು. ಈತನೇ ಎಲ್ಲಕ್ಕೂ ಕಾರಣನು, ಭೂತಗಳಿಗೆ ಉತ್ಪತ್ತಿ ಪ್ರಲಯಗಳು (ಈತನೇ).

### (ಭಾಷ್ಯ)

೧೭. ಏಷ ಹಿ ಸ್ವರೂಪಾವಸ್ಥಃ ಸರ್ವೇಶ್ವರಃ । ಸಾಧಿದೈವಿಕಸ್ಯ ಭೇದಜಾತಸ್ಯ ಸರ್ವಸ್ಯ ಈಶಿತಾ ನೈತಸ್ಮಾತ್ ಜಾತ್ಯನ್ತರಭೂತಃ ಅನ್ಯೇಷಾಮಿವ । "ಪ್ರಾಣಬನ್ಧನಂ ಹಿ ಸೋಮ್ಯ ಮನಃ" (ಛಾಂ. ೬-೮-೨) ಇತಿ ಶ್ರುತೇಃ । ಅಯಮೇವ ಹಿ ಸರ್ವಸ್ಯ ಸರ್ವಭೇದಾವಸ್ಥೋ ಜ್ಞಾತಾ ಇತಿ ಏಷ ಸರ್ವಜ್ಞಃ । ಏಷಃ ಅನ್ತರ್ಯಾಮೀ ಅನ್ತರನುಪ್ರವಿಶ್ಯ ಸರ್ವೇಷಾಂ ಭೂತಾನಾಂ ನಿಯನ್ತಾಪಿ ಏಷ ಏವ । ಅತ ಏವ ಯಥೋಕ್ತಂ ಸಭೇದಂ ಜಗತ್ ಪ್ರಸೂಯತೇ ಇತಿ ಏಷ ಯೋನಿಃ ಸರ್ವಸ್ಯ । ಯತ ಏವಂ ಪ್ರಭವಶ್ಚ ಅಪ್ಯಯಶ್ಚ ಪ್ರಭವಾಪ್ಯಯೌ ಹಿ ಭೂತಾನಾಮ್ ಏಷ ಏವ ॥

### (ಭಾಷ್ಯಾರ್ಥ)

ಸ್ವರೂಪದಲ್ಲಿ ನಿಂತಿರುವ[2] ಈತನೇ ಸರ್ವೇಶ್ವರನು. ಅಧಿದೈವದಿಂದೊಡಗೂಡಿರುವ ಭೇದಸಮೂಹವೆಲ್ಲವನ್ನೂ[3] ಆಳುವಾತನು, ಇತರ ಮತಗಳಲ್ಲಿ (ತಿಳಿಸಿ)ರುವಂತೆ ಇವನಿಗಿಂತ ಬೇರೆಯ ಜಾತಿಯವನಲ್ಲ[4]. "ಸೋಮ್ಯನೆ, ಮನಸ್ಸು ಪ್ರಾಣಕ್ಕೆ

1. ಬರಿಯರಿವಲ್ಲದೆ ಬಿಡಿಯ ಅರಿವೂ ಅವರಿಗೆ ಉಂಟು.

2. ತೈಜಸವಿಶ್ವರೂ ಸ್ವರೂಪದಲ್ಲಿ ನಿಂತಿರುತ್ತಾರಾದರೂ ಉಪಾಧಿಸಂಪರ್ಕದಿಂದ ಬೇರೆಯ ರೂಪದಲ್ಲಿರುವಂತೆ ಇರುವರು. ಆದ್ದರಿಂದ ಪ್ರಾಜ್ಞನೇ ಸ್ವರೂಪದಲ್ಲಿರುವವನು ಎಂದಿದೆ. ಸೂ. ಭಾ. ೩-೨-೮. 3. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ-ಎಂಬ ಭೇದವುಳ್ಳ ದ್ವೈತವನ್ನೆಲ್ಲ.

4. ಜೀವನಿಗಿಂತ ಈಶ್ವರನು ಬೇರೆಯ ಜಾತಿಯವನು, ಅವನು ಜಗತ್ತಿಗಿಂತ ಬೇರೆಯಾಗಿರುತ್ತಾನೆ-ಎಂಬ ತಟಸ್ಥೇಶ್ವರವಾದದಲ್ಲಿ ಈಶ್ವರನಿಗೆ ಸೃಷ್ಟಿಮಾಡುವದಕ್ಕೆ ಸಾಮಗ್ರಿಯಿಲ್ಲದಿರುವದು, ಪರಿಚ್ಛಿನ್ನತ್ವ, ಅಸರ್ವಜ್ಞತ್ವ, ರಾಗದ್ವೇಷಾದಿಗಳು-ಮುಂತಾದ ದೋಷಗಳುಂಟು ಸೂ ಭಾ. ೨-೨-೩೭ ರಿಂದ ೪೧ ರವರೆಗೆ ಇರುವ ಭಾಷ್ಯಗ್ರಂಥವನ್ನು ನೋಡಿ

ಕಟ್ಟುಬಿದ್ದಿರುತ್ತದೆಯಲ್ಲವೆ ?'' (ಛಾಂ. ೬-೮-೧) ಎಂಬ ಶ್ರುತಿಯು[1] ಇದಕ್ಕೆ ಪ್ರಮಾಣವು. ಈತನೇ[2] ಎಲ್ಲಾ ಭೇದಾವಸ್ಥೆಗಳಲ್ಲಿಯೂ, ಎಲ್ಲವನ್ನೂ ಅರಿಯುವವನು[3] ; ಆದ್ದರಿಂದ ಇವನು ಸರ್ವಜ್ಞನು. ಈತನೇ ಅಂತರ್ಯಾಮಿ, ಎಂದರೆ ಎಲ್ಲಾ ಪ್ರಾಣಿಗಳನ್ನೂ ಒಳಹೊಕ್ಕು ಹಿಡಿತದಲ್ಲಿಟ್ಟುಕೊಂಡಿರುವವನೂ[4] ಈತನೇ. ಈತನಿಂದಲೇ ಮೇಲೆ ಹೇಳಿದ ಭೇದಸಹಿತವಾದ[5] ಜಗತ್ತು ಹುಟ್ಟುತ್ತದೆಯಾದ್ದರಿಂದ ಈತನೇ ಎಲ್ಲಕ್ಕೂ ಯೋನಿಯು. ಹೀಗಿರುವದರಿಂದ ಭೂತಗಳಿಗೆ ಪ್ರಭವಾಪ್ಯಯಗಳು ಎಂದರೆ ಉತ್ಪತ್ತಿಗೆ ಮೂಲವೂ ಪ್ರಲಯವಾಗುವ ನೆಲೆಯೂ (ಈತನೇ)[6].

******

1. ಸುಷುಪ್ತಿಯಲ್ಲಿ ಜೀವನು ಪರಮೇಶ್ವರಸ್ವರೂಪವನ್ನು ಪಡೆದು ಪರಮೇಶ್ವರನನ್ನೇ ಸೇರಿಕೊಂಡಿರುತ್ತಾನೆ ಎಂದು ಶ್ರುತಿಯ ಒಟ್ಟಿರ್ಥ. ಮುಂದೆ ಭಾಷ್ಯದಲ್ಲಿಯೇ ಇದು ಸ್ಪಷ್ಟವಾಗುವದು.

2. ಸ್ವರೂಪದಲ್ಲಿದ್ದುಕೊಂಡಿರುವ ಎಂಬ ವಿಶೇಷಣವನ್ನು ಇಲ್ಲಿರುವ ಎಲ್ಲಾ ವಿಶೇಷ್ಯಗಳಿಗೂ ಸೇರಿಸಿಕೊಳ್ಳಬೇಕು. ಇದರಿಂದ ಈಶ್ವರನು ನಮ್ಮಗಳಂತೆ ಒಬ್ಬ ವ್ಯಕ್ತಿ ಎಂಬ ತಪ್ಪು ತಿಳಿವಳಿಕೆಯು ಹೋಗುತ್ತದೆ.

3. ಭೇದಾವಸ್ಥೆಗಳೆಂದರೆ ಎಚ್ಚರಕನಸುಗಳು. ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳಲ್ಲಿ ಜ್ಞಾತೃತ್ವಕ್ಕೆ ಈತನ ಸ್ವರೂಪಚೈತನ್ಯವೇ ಆಧಾರವು. ಆದ್ದರಿಂದ ಇವನು ಅರಿಯದೆ ಇರುವದೇ ಇಲ್ಲ.

4. ಪ್ರಾಣಿಗಳನ್ನು ಸೃಷ್ಟಿಸಿ ಅವರೊಳಗೆ ಹೊಕ್ಕಿರುತ್ತಾನೆಂದು (ಐ. ೧-೩-೧೨, ತೈ. ೨-೬-೬) ಶ್ರುತಿ ; ಅವನೇ ಎಲ್ಲರನ್ನೂ ಹಿಡಿತದಲ್ಲಿಟ್ಟುಕೊಂಡಿರುವ ಅಂತರ್ಯಾಮಿ ಎಂದೂ (ಬೃ. ೩-೭-೨೩) ಶ್ರುತಿ.

5. ಆಧ್ಯಾತ್ಮಿಕಾದಿಭೇದಸಹಿತವಾದ.

6. ಜಗತ್ತಿಗೆ ನಿಮಿತ್ತವೂ ಉಪಾದಾನವೂ ಈತನೇ. ಪರಮೇಶ್ವರನು ಬರಿಯ ನಿಮಿತ್ತಕಾರಣನಲ್ಲ ; ಏಕೆಂದರೆ ಜಗತ್ತೆಲ್ಲವೂ ಅವನಲ್ಲಿಯೇ ಸುಷುಪ್ತಿಪ್ರಲಯಗಳಲ್ಲಿ ಅಡಗಿ ಒಂದಾಗುತ್ತದೆ. ಸೂ. ಭಾ. ೧-೪-೨೩ ರಿಂದ ೨೭ರ ವರೆಗಿನ ಗ್ರಂಥದಲ್ಲಿ ಬ್ರಹ್ಮವು ಜಗತ್ತಿನ ನಿಮಿತ್ತವು ಉಪಾದಾನವೂ ಆಗಿರುತ್ತದೆಯೆಂದು ನಿರ್ಣಯಿಸಿದೆ.

॥ ಓಂ ॥

# ಆಗಮಪ್ರಕರಣ

## ಕಾರಿಕಾಪ್ರಾರಂಭ

ಅತ್ರೈತೇ ಶ್ಲೋಕಾ ಭವನ್ತಿ -

(ಕಾರಿಕಾವಾಕ್ಯಾರ್ಥ)

ಇಲ್ಲಿ ಈ ಶ್ಲೋಕಗಳು ಬಂದಿರುತ್ತವೆ :-

(ಭಾಷ್ಯ)

೧೮. ಅತ್ರ ಏತಸ್ಮಿನ್ ಯಥೋಕ್ತೇ ಅರ್ಥೇ ಏತೇ ಶ್ಲೋಕಾ ಭವನ್ತಿ -

(ಭಾಷ್ಯಾರ್ಥ)

ಇಲ್ಲಿ ಎಂದರೆ ಹಿಂದೆ (ಶ್ರುತಿಯಲ್ಲಿ) ಹೇಳಿರುವ ಈ ಅರ್ಥವನ್ನು ತಿಳಿಸುವ ವಿಷಯದಲ್ಲಿ ಈ (ಮುಂದಿನ) ಶ್ಲೋಕಗಳು[1] ಬಂದಿರುತ್ತವೆ ; -

## ವಿಶ್ವಾದಿಗಳು ಮೂವರಲ್ಲ, ಒಬ್ಬನೇ

ಬಹಿಷ್ಪ್ರಜ್ಞೋ[2] ವಿಭುರ್ವಿಶ್ವೋ ಹ್ಯನ್ತಃಪ್ರಜ್ಞಸ್ತು ತೈಜಸಃ ।
ಘನಪ್ರಜ್ಞಸ್ತಥಾ ಪ್ರಾಜ್ಞ ಏಕ ಏವ ತ್ರಿಧಾ ಸ್ಮೃತಃ[3] ॥೧॥

೧. ಹೊರಗಿನ (ವಿಷಯ)ಗಳ ಅರಿವುಳ್ಳ ವಿಭುವು ವಿಶ್ವನು ; ಒಳಗಿನ ಅರಿವುಳ್ಳವನು ತೈಜಸನು ; ಅದರಂತೆ ಗಟ್ಟಿಯಾದ ಅರಿವುಳ್ಳವನು ಪ್ರಾಜ್ಞನು. (ಹೀಗೆ) ಒಬ್ಬನೇ ಮೂರು ಬಗೆ ಎನಿಸಿರುತ್ತಾನೆ.

(ಭಾಷ್ಯ)

೧೯. ಪರ್ಯಾಯೇಣ ತ್ರಿಸ್ಥಾನತ್ವಾತ್ ಸೋಽಪಮ್ ಇತಿ ಸ್ಮೃತ್ಯಾ ಪ್ರತಿ

1. ಇಲ್ಲಿ ಆಗಮಪ್ರಕರಣವು ಮುಗಿಯುವವರೆಗಿನ ಶ್ಲೋಕಗಳೆಲ್ಲ ಉಪನಿಷತ್ತಿಗೇ ಸೇರಿದ ಮಂತ್ರಗಳೇ ಎಂಬ ಮತವನ್ನು ಪೀಠಿಕೆಯಲ್ಲಿ ವಿಮರ್ಶಿಸಿದೆ.

2. "ಬಹಿಃಪ್ರಜ್ಞಃ" ಎಂದೇ ಉಪನಿಷತ್ತಿನಲ್ಲಿಯೂ ಕಾರಿಕೆಯಲ್ಲಿಯೂ ಮಾ ॥ ಕಾ ॥ ಮೈ ॥ ಪಾಠ.

3. 'ಮತಃ', 'ಸ್ಥಿತಃ' ಎಂದೂ ಪಾಠಾಂತರಗಳುಂಟು.

ಸನ್ಧಾನಾಚ್ಚ ಸ್ಥಾನತ್ರಯವ್ಯತಿರಿಕ್ತತ್ವಮ್, ಏಕತ್ವಮ್, ಶುದ್ಧತ್ವಮ್, ಅಸಙ್ಗತ್ವಂ ಚ ಸಿದ್ಧಮ್ ಇತ್ಯಭಿಪ್ರಾಯಃ । ಮಹಾಮತ್ಸ್ಯಾದಿದೃಷ್ಟಾನ್ತಶ್ರುತೇಃ ।।

(ಭಾಷ್ಯಾರ್ಥ)

ಒಂದಾಗುತ್ತಲೊಂದರಂತೆ[1] ಮೂರು ಅವಸ್ಥೆಗಳಲ್ಲಿಯೂ (ಇರುವ)ದರಿಂದಲೂ "ಅವನೇ ನಾನು" ಎಂದು ನೆನಪಿನಿಂದ ಗುರುತುಹಿಡಿದುಕೊಳ್ಳುವದರಿಂದಲೂ[2] ಆತ್ಮನು ಮೂರು ಸ್ಥಾನಗಳಿಗಿಂತಲೂ ಬೇರೆ ಎಂತಲೂ ಒಬ್ಬನೇ ಎಂತಲೂ ಶುದ್ಧನೆಂತಲೂ, ಅಸಂಗನೆಂತಲೂ ಸಿದ್ಧವಾಗುತ್ತದೆ ಎಂದು ಅಭಿಪ್ರಾಯ. ದೊಡ್ಡಮೀನು-ಮುಂತಾದ ದೃಷ್ಟಾಂತಗಳನ್ನು (ಕೊಟ್ಟಿರುವ) ಶ್ರುತಿಯು[3] ಇದಕ್ಕೆ ಪ್ರಮಾಣವು.

## ಎಚ್ಚರದಲ್ಲಿಯೇ ವಿಶ್ವಾದಿಗಳ ಅನುಭವ

(ಭಾಷ್ಯ)

೨೦. ಜಾಗರಿತಾವಸ್ಥಾಯಾಮೇವ ವಿಶ್ವಾದೀನಾಂ ತ್ರಯಾಣಾಮ್ ಅನುಭವ ಪ್ರದರ್ಶನಾರ್ಥೋಽಯಂ ಶ್ಲೋಕಃ -

(ಭಾಷ್ಯಾರ್ಥ)

ಎಚ್ಚರದ ಅವಸ್ಥೆಯಲ್ಲಿಯೇ ವಿಶ್ವನೇ ಮೊದಲಾದ ಮೂವರ ಅನುಭವವನ್ನು ತೋರಿಸುವದಕ್ಕೆ ಈ (ಮುಂದಿನ) ಶ್ಲೋಕವು (ಬಂದಿದೆ) :-

---

1. ಅವಸ್ಥೆಗಳು ಕಾಲದಲ್ಲಿ ಒಂದಾಗುತ್ತಲೊಂದು ತೋರಿಕೊಳ್ಳುವವೆಂಬ ಅಭಿಪ್ರಾಯವೇನೂ ಸರಿಯಲ್ಲ ; ಏಕೆಂದರೆ ಅವಸ್ಥೆಗಳೊಳಗೆ ಕಾಲವು ತೋರುವದೇ ಹೊರತು ಕಾಲದಲ್ಲಿ ಅವಸ್ಥೆಗಳು ತೋರುವದಿಲ್ಲ. ಒಂದವಸ್ಥೆಯ ಅನುಭವವಿರುವಾಗ ಮಿಕ್ಕೆರಡೂ ಇರುವದೇ ಇಲ್ಲ-ಎಂಬುದು ಮಾತ್ರ ಇಲ್ಲಿ ವಿವಕ್ಷಿತ.

2. 'ಅವನು' ಎಂದು ಕಾಲದಲ್ಲಿ ಆ ದೇಶದಲ್ಲಿದ್ದವನನ್ನು ಈಗ ನೆನಪಿಸಿಕೊಳ್ಳುವದು ಸ್ಮೃತಿ. 'ಅವನೇ ಇವನು' ಎಂದು ಆಗ ಅಲ್ಲಿ ತೋರಿ, ನಡುವೆ ತೋರದೆ ಇದ್ದು, ಈಗ ಇಲ್ಲಿ ತೋರುವವನನ್ನು ಗುರುತಿಸಿ ಅರಿಯುವದು ಪ್ರತ್ಯಭಿಜ್ಞೆ. ಆತ್ಮನು ತೋರದೆ ಇರುವ ಕಾಲದೇಶಗಳೇ ಇಲ್ಲದ್ದರಿಂದ ಅವನು ಸ್ಮೃತಿಗಾಗಲಿ ಪ್ರತ್ಯಭಿಜ್ಞೆಗಾಗಲಿ ವಿಷಯನಲ್ಲವಾದರೂ 'ನಿದ್ರಿಸಿದ ನಾನೇ ಎಚ್ಚತ್ತಿರುವೆನು' ಎಂಬ ರೂಪದ ಅರಿವು ಆತ್ಮತತ್ತ್ವವನ್ನು ಗೊತ್ತುಪಡಿಸುವದಕ್ಕೆ ಸಹಾಯಕವಾಗುತ್ತದೆ ಎಂಬುದರ ಮೇಲೆ ಅದನ್ನು ಸ್ಮರಣೆ ಎಂದೂ ಪ್ರತ್ಯಭಿಜ್ಞೆ ಎಂದೂ ಕರೆದಿದೆ.

3. ಬೃ. ೪-೩-೧೮, ೧೯ ರಲ್ಲಿ ಎರಡು ದಡಗಳನ್ನೂ ಮುಟ್ಟಿ ನದಿಯಲ್ಲಿ ಈಜಾಡುತ್ತಿರುವ ದೊಡ್ಡ ಮೀನಿನ ಹೋಲಿಕೆಯನ್ನು ಎಚ್ಚರಕನಸುಗಳನ್ನನುಭವಿಸುವ ಆತ್ಮನಿಗೂ ಆಕಾಶದಲ್ಲಿ ಹಾರಾಡಿ ವಿಶ್ರಾಂತಿಗಾಗಿ ಗೂಡನ್ನು ಸೇರುವ ಗಿಡುಗನ ಹೋಲಿಕೆಯನ್ನು ಸುಷುಪ್ತಿಗೆ ಹೋಗುವ ಆತ್ಮನಿಗೂ ಕೊಟ್ಟಿರುತ್ತದೆ.

ದಕ್ಷಿಣಾಕ್ಷಿಮುಖೇ ವಿಶ್ವೋ ಮನಸ್ಯನ್ತಸ್ತು ತೈಜಸಃ ।
ಆಕಾಶೇ ಚ ಹೃದಿ ಪ್ರಾಜ್ಞಸ್ತ್ರಿಧಾ ದೇಹೇ ವ್ಯವಸ್ಥಿತಃ ॥೨॥

೨. ಬಲಗಣ್ಣಿನ ದ್ವಾರದಲ್ಲಿ ವಿಶ್ವನು, ಮನಸ್ಸಿನ ಒಳಗಾದರೆ ತೈಜಸನು, ಹೃದಯದ ಆಕಾಶದಲ್ಲಿ ಪ್ರಾಜ್ಞನು. (ಹೀಗೆ) ದೇಹದಲ್ಲಿ ಮೂರು ಬಗೆಯಾಗಿ ಇದ್ದುಕೊಂಡಿರುವನು.

(ಭಾಷ್ಯ)

೨೧. ದಕ್ಷಿಣಮ್ ಅಕ್ಷ್ಣೋವ ಮುಖಂ ತಸ್ಮಿನ್ ಪ್ರಾಧಾನ್ಯೇನ ದ್ರಷ್ಟಾ, ಸ್ಥೂಲಾನಾಂ ವಿಶ್ವಃ ಅನುಭೂಯತೇ । "ಇನ್ಧೋ ಹ ವೈ ನಾಮೈಷ ಯೋಽಯಂ ದಕ್ಷಿಣೇಽಕ್ಷನ್ ಪುರುಷಃ" (ಬೃ. ೪-೨-೨) ಇತಿ ಶ್ರುತೇಃ । ಇನ್ಧಃ ದೀಪ್ತಿಗುಣಃ ವೈಶ್ವಾನರಃ ಆದಿತ್ಯಾನ್ತರ್ಗತೋ ವೈರಾಜ ಆತ್ಮಾ ಚಕ್ಷುಷಿ ಚ ದ್ರಷ್ಟಾ ಏಕಃ । ನನ್ವನ್ಯೋ ಹಿರಣ್ಯಗರ್ಭಃ, ಕ್ಷೇತ್ರಜ್ಞೋ ದಕ್ಷಿಣೇಽಕ್ಷಿಣಿ ಅಕ್ಷ್ಣೋರ್ನಿಯನ್ತಾ ದ್ರಷ್ಟಾ ಚ ಅನ್ಯೋ ದೇಹಸ್ವಾಮೀ । ನ । ಸ್ಮೃತೋ ಭೇದಾನಭ್ಯುಪಗಮಾತ್ । "ಏಕೋ ದೇವಃ ಸರ್ವಭೂತೇಷು ಗೂಢಃ" (ಶ್ವೇ. ೬-೧೧) ಇತಿ ಶ್ರುತೇಃ । "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ" (ಗೀ. ೧೩-೨), "ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್" (ಗೀ. ೧೩-೧೬) ಇತಿ ಸ್ಮೃತೇಃ । ಸರ್ವೇಷು ಕರಣೇಷು ಅವಿಶೇಷೇಽಪಿ ದಕ್ಷಿಣಾಕ್ಷಿಣ್ಯುಪಲಬ್ಧಿಪಾಟವ ದರ್ಶನಾತ್ ತತ್ರ ವಿಶೇಷೇಣ ನಿರ್ದೇಶೋ ವಿಶ್ವಸ್ಯ ॥

(ಭಾಷ್ಯಾರ್ಥ)

ಬಲಗಡೆಯ ಕಣ್ಣೆಂಬ ದ್ವಾರವಿದೆಯಲ್ಲ, ಅದರಲ್ಲಿ ಪ್ರಧಾನ[1]ವಾಗಿ ಸ್ಥೂಲ (ವಿಷಯ)ಗಳನ್ನು ಕಾಣುವವನೆಂದು ವಿಶ್ವನ ಅನುಭವವಾಗುತ್ತದೆ. "ಈ ಬಲದ ಕಣ್ಣಿನಲ್ಲಿರುವ ಪುರುಷನಿದಾನಲ್ಲ, ಇವನು ಇಂಧನೆಂಬ ಹೆಸರಿನವನು" (ಬೃ. ೪-೨-೨) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು[2]. 'ಇಂಧನು' ಎಂದರೆ ಪ್ರಕಾಶಗುಣವುಳ್ಳ ವೈಶ್ವಾನರನು, ಆದಿತ್ಯಾಂತರ್ಗತನಾದ ವಿರಾಡಾತ್ಮನು ; ಕಣ್ಣಿನಲ್ಲಿಯೂ ದ್ರಷ್ಟುವಾಗಿರುವವನೂ (ಇವನೂ) ಒಬ್ಬನೇ (ಎಂದರ್ಥ).

---

1. ಇಂದ್ರಿಯಗಳಲ್ಲಿಯೇ ಮುಖ್ಯವಾಗಿ ವಿಶ್ವನ ಅನುಭವವಾಗುತ್ತದೆ. ಬಲಗಣ್ಣನ್ನು ಇಂದ್ರಿಯಗಳಿಗೆ ಬದಲಾಗಿ ಹೇಳಿರುವದೇಕೆಂಬುದು ಮುಂದೆ ಸ್ಫುಟವಾಗುತ್ತದೆ.

2. ಹಿಂದೆ ಚಕ್ಷುಸ್ಸೇ ಬ್ರಹ್ಮವು-ಎಂದು ಹೇಳಿದ ಈ ಆದಿತ್ಯಾಂತರ್ಗತಪುರುಷನು ಬಲಗಣ್ಣಿನಲ್ಲಿರುತ್ತಾನಲ್ಲ, ಇವನಿಗೆ ಇಂಧ ಎಂದು ಹೆಸರು-ಎಂದು ಶ್ರುತಿಯ ಭಾವ.

(ಆಕ್ಷೇಪ) :- (ಸೂರ್ಯನಲ್ಲಿರುವ) ಹಿರಣ್ಯಗರ್ಭನೇ[1] ಬೇರೆ, ಬಲಗಣ್ಣಿನಲ್ಲಿದ್ದು ಎರಡು ಕಣ್ಣುಗಳನ್ನೂ ಹಿಡಿತದಲ್ಲಿಟ್ಟುಕೊಂಡಿರುವ ಕ್ಷೇತ್ರಜ್ಞನಾದ ದೃಷ್ಟುವಾದ ದೇಹದೊಡೆಯನೇ ಬೇರೆ. ಅಲ್ಲವೆ ?[2]

(ಸಮಾಧಾನ) :- ಹಾಗಲ್ಲ. ಏಕೆಂದರೆ (ಆತ್ಮನಲ್ಲಿ) ಸ್ವತಃ[3] ಭೇದವನ್ನು (ನಾವು) ಒಪ್ಪುವದಿಲ್ಲ. ''ಎಲ್ಲಾ ಭೂತಗಳಲ್ಲಿಯೂ ಅಡಗಿರುವ ದೇವನು ಒಬ್ಬನೇ'' (ಶ್ವೇ. ೬-೧೧) ಎಂಬ ಶ್ರುತಿಯೂ ''ಎಲ್ಲಿ ಭರತವಂಶೋತ್ಪನ್ನನೆ, ಸರ್ವಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನನ್ನು ನಾನೆಂದೇ ತಿಳಿ'' (ಗೀ. ೧೩-೨) ''ಭೂತಗಳಲ್ಲಿ ವಿಂಗಡವಾಗಿರುವದಿಲ್ಲವಾದರೂ ವಿಂಗಡವಾಗಿರುವಂತೆ ಇರುತ್ತದೆ'' (ಗೀ. ೧೩-೧೬) ಎಂಬ ಸ್ಮೃತಿಯೂ ಇದಕ್ಕೆ ಪ್ರಮಾಣವು. (ವಿಶ್ವನಿರುವದು) ಎಲ್ಲಾ ಕರಣಗಳಿಗೂ ಸಮಾನವಾದರೂ, ಬಲಗಣ್ಣಿನಲ್ಲಿ ಅರಿವು ಚೆನ್ನಾಗಿರುವದು ಕಂಡುಬರುವದರಿಂದ[4] ಅಲ್ಲಿಯೇ ವಿಶ್ವನಿದಾನೆಂದು (ಕಾರಿಕೆಯಲ್ಲಿ) ಹೇಳಿದೆ.

(ಭಾಷ್ಯ)

೨೨. ದಕ್ಷಿಣಾಕ್ಷಿಗತೋ ರೂಪಂ ದೃಷ್ಟ್ವಾ ನಿಮೀಲಿತಾಕ್ಷಃ ತದೇವ ಸ್ಮರನ್ ಮನಸಿ ಅನ್ತಃ ಸ್ವಪ್ನೇ ಇವ ತದೇವ ವಾಸನಾರೂಪಾಭಿವ್ಯಕ್ತಂ ಪಶ್ಯತಿ । ಯಥಾ ಅತ್ರ[5] ತಥಾ ಸ್ವಪ್ನೇ । ಅತಃ ಮನಸ್ಯನ್ತಸ್ತು ತೈಜಸೋಽಪಿ ವಿಶ್ವ ಏವ । ಆಕಾಶೇ ಚ ಹೃದಿ ಸ್ಮರಣಾಖ್ಯವ್ಯಾಪಾರೋಪರಮೇ ಪ್ರಾಜ್ಞಃ ಏಕೀಭೂತೋ ಘನಪ್ರಜ್ಞ ಏವ ಭವತಿ । ಮನೋವ್ಯಾಪಾರಾಭಾವಾತ್ । ದರ್ಶನಸ್ಮರಣೇ ಏವ ಹಿ ಮನಃಸ್ಪನ್ದಿತೇ । ತದಭಾವೇ ಹೃದ್ಯೇವ ಅವಿಶೇಷೇಣ ಪ್ರಾಣಾತ್ಮನಾ ಅವಸ್ಥಾನಮ್ । ''ಪ್ರಾಣೋ ಹ್ಯೇವೈತಾನ್

1. ಇಲ್ಲಿ ವಿರಾಡಾತ್ಮನಿಗೂ ಶಾರೀರಾತ್ಮನಿಗೂ ಏಕತ್ವವನ್ನು ಹೇಳುವದು ಪ್ರಕೃತವಾಗಿರುವದರಿಂದ ಹಿರಣ್ಯಗರ್ಭನೆಂದರೆ ವಿರಾಡಾತ್ಮನೆಂದೇ ಅರ್ಥ.

2. ''ಸಪ್ತಾಂಗಃ'' ಎಂಬ ಮಾತನ್ನು ವಿವರಿಸುವಾಗ ನಮ್ಮ ಪ್ರತ್ಯಗಾತ್ಮನಿಗೇ ಸಮಷ್ಟಿ ಸ್ಥೂಲವೆಲ್ಲವೂ ಉಪಾಧಿಯಾಗಿರುವದರಿಂದ ಇವನೇ ವೈಶ್ವಾನರನು ಎಂದು ಅಭೇದವನ್ನು ಹೇಳಿತ್ತು. ಉಪಾಧಿಯ ಮೂಲಕ ಹೇಳಿದ ಐಕ್ಯವನ್ನೇ ಉಪಹಿತದ ಐಕ್ಯವೆಂದು ಹೇಳಿ ಗಟ್ಟಿಗೊಳಿಸುವದಕ್ಕಾಗಿ ಮತ್ತೆ ಆಕ್ಷೇಪಿಸಿದೆ

3. ಆತ್ಮನಲ್ಲಿ ಆತ್ಮರೂಪದಿಂದ ಯಾವ ಭೇದವೂ ಇಲ್ಲ. ಉಪಾಧಿಭೇದದಿಂದಲೇ ಭೇದ- ಎಂದು ಅರ್ಥ.

4. ಜನರಿಗೆ ಬಲಭಾಗವು ಬಲುಮಟ್ಟಿಗೆ ವೀರ್ಯವತ್ತರವಾಗಿರುತ್ತದೆ. ಆದ್ದರಿಂದ ಬಲಗಣ್ಣನ್ನೇ ಹೇಳಿದೆ ಇದಕ್ಕೆ ಶ್ರುತಿಯ ಆಧಾರವೂ ಇದೆ. 5. 'ತತ್ರ' ವಾ ॥

ಸರ್ವಾನ್ ಸಂವೃಜ್ಯ್ಕೀ'' (ಛಾಂ. ೪-೩-೩) ಇತಿ ಶ್ರುತೇಃ । ತೈಜಸೋ ಹಿರಣ್ಯಗರ್ಭಃ ಮನಃಸ್ಥತ್ವಾತ್ । ''ಲಿಙ್ಗಂ ಮನಃ'' (ಬೃ. ೪-೪-೬), ''ಮನೋಮಯೋಽಯಂ ಪುರುಷಃ'' (ಬೃ. ೫-೬-೧) ಇತ್ಯಾದಿಶ್ರುತಿಭ್ಯಃ ॥

(ಭಾಷ್ಯಾರ್ಥ)

ಬಲಗಣ್ಣಿನಲ್ಲಿರುವ (ವಿಶ್ವನು) ರೂಪವನ್ನು ನೋಡಿ ಕಣ್ಣುಮುಚ್ಚಿಕೊಂಡು[1] ಅದನ್ನೇ ನೆನೆಸಿಕೊಂಡು ಮನಸ್ಸಿನೊಳಗೇ, ಕನಸಿನಲ್ಲಿ ಕಾಣುವಂತೆ, ವಾಸನಾರೂಪದಿಂದ ತೋರಿಕೊಂಡ ಅದನ್ನೇ ಕಾಣುತ್ತಾನೆ. ಇಲ್ಲಿ ಹೇಗೋ ಕನಸಿನಲ್ಲಿಯೂ ಹಾಗೆಯೇ[2]. ಆದ್ದರಿಂದ ಮನಸ್ಸಿನೊಳಗಿರುವ **ತೈಜಸನೂ ವಿಶ್ವನೇ**. ಮತ್ತು ಹೃದಯದಲ್ಲಿರುವ ಆಕಾಶದಲ್ಲಿ ಸ್ಮೃತಿ ಎಂಬ ವ್ಯಾಪಾರವು ನಿಲ್ಲಲಾಗಿ, ಪ್ರಾಜ್ಞನು ; ಏಕೀಭೂತನಾಗಿ ಘನ ಪ್ರಜ್ಞನೇ ಆಗುತ್ತಾನೆ. ಏಕೆಂದರೆ ಮನಸ್ಸಿನ (ಯಾವ) ವ್ಯಾಪಾರವೂ ಇರುವದಿಲ್ಲ. ದರ್ಶನ, ಸ್ಮರಣ[3]-ಎಂಬೆರಡೇ ಅಲ್ಲವೆ, **ಮನಸ್ಸಿನ ವ್ಯಾಪಾರಗಳು** ? ಅವುಗಳಿಲ್ಲವಾದರೆ ಯಾವ ವಿಶೇಷವೂ ಇಲ್ಲದೆ ಹೃದಯದಲ್ಲಿಯೇ ಪ್ರಾಣರೂಪದಿಂದಲೇ[4] ನಿಲ್ಲಬೇಕು. ''ಈ (ಇಂದ್ರಿಯ) ಕಾರ್ಯಗಳನ್ನೆಲ್ಲ ಪ್ರಾಣನೇ[5] ತನ್ನಲ್ಲಿ ಅಡಗಿಸಿಕೊಳ್ಳುತ್ತಾನೆ.'' (ಛಾಂ. ೪-೩-೩) ಎಂಬ ಶ್ರುತಿ ಇದಕ್ಕೆ ಪ್ರಮಾಣವಾಗಿದೆ. (ಇಲ್ಲಿ) **ತೈಜಸ** ನೆಂದರೆ ಹಿರಣ್ಯಗರ್ಭನು[6]. ಏಕೆಂದರೆ (ಅವನು) ಮನಸ್ಸಿನಲ್ಲಿರುತ್ತಾನೆ. ''(ಇವನ) ಲಿಂಗವಾದ ಮನಸ್ಸು (ಎಲ್ಲಿ ಆಸಕ್ತವಾಗಿರುವದೋ ಅದನ್ನೇ ಕರ್ಮದೊಡನೆ

---

1. ಇಂದ್ರಿಯಗಳ ವ್ಯಾಪಾರವನ್ನೆಲ್ಲ ಬಿಟ್ಟು ಎಂದರ್ಥ ; ಏಕೆಂದರೆ ಬಲಗಣ್ಣು ಇಂದ್ರಿಯವೆಂಬರ್ಥದಲ್ಲಿಯೇ ಇಲ್ಲಿ ಪ್ರಯುಕ್ತವಾಗಿದೆ.

2. ಮನಸ್ಸಿನಲ್ಲಿ ಸುಮ್ಮನೆ ನೆನಸಿಕೊಂಡರೆ ವಿಷಯವು ಎದುರಿಗಿರುವದಿಲ್ಲ, ಕನಸಿನಲ್ಲಿರುತ್ತದೆ. ಆದ್ದರಿಂದ ಇವೆರಡಕ್ಕೂ ಹೆಚ್ಚಕಡಿಮೆ ಇದೆ. ಆದರೂ ಎಚ್ಚರದ ವಾಸನೆಯಿಂದ ಕನಸಾಗುವದು-ಎಂಬ ವ್ಯವಹಾರದೃಷ್ಟಿಯನ್ನಿಟ್ಟುಕೊಂಡು ಈ ಹೋಲಿಕೆಯನ್ನು ಹೇಳಿದೆ.

3. ಅನುಭವಿಸುವದನ್ನು ಬಿಟ್ಟು ಮಿಕ್ಕ ಮನಸ್ಸಿನ ವ್ಯಾಪಾರವನ್ನೆಲ್ಲ ಇಲ್ಲಿ ಸ್ಮರಣ ಎಂಬ ಮಾತಿನಿಂದ ತಿಳಿಯಬೇಕು.

4. ಪ್ರಾಜ್ಞನೆಂಬ ಕಾರಣಾತ್ಮನ ರೂಪದಿಂದಲೇ.

5. ಶ್ರುತಿಯಲ್ಲಿ ಮುಖ್ಯಪ್ರಾಣನಲ್ಲಿಯೇ ವಾಗಾದಿಗಳ ಲಯವನ್ನು ಹೇಳಿದೆಯಾದರೂ ಪ್ರಾಣೋಪಲಕ್ಷಿತನಾದ ಆತ್ಮನೇ ಸರ್ವವೂ ಲಯವಾಗುವ ಸ್ಥಾನವೆಂಬುದೂ ಆ ಶ್ರುತಿಯಲ್ಲಿ ಅಡಕವಾಗಿದೆ ಎಂಬ ದೃಷ್ಟಿಯಿಂದ ಇಲ್ಲಿ ಅದನ್ನು ಉದಾಹರಿಸಿದೆ.

6. ಹಿಂದೆ ವಿಶ್ವನೆಂದರೆ ವಿರಾಟ್ಪುರುಷನನ್ನು ಗ್ರಹಿಸಿದಂತೆ ಇಲ್ಲಿಯೂ ಸಮಷ್ಟ್ಯಭಿಮಾನಿಯನ್ನೇ ಗ್ರಹಿಸಬೇಕೆಂದು ಭಾವ.

ಪಡೆಯುತ್ತಾನೆ.)[1]'' (ಬೃ. ೪-೪-೬), ''ಈ ಪುರುಷನು ಮನೋಮಯನು'' (ಬೃ. ೫-೬-೧)[2] ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು.

## ಪ್ರಾಜ್ಞನೂ ಅವ್ಯಾಕೃತನೂ ಒಬ್ಬನೇ

(ಭಾಷ್ಯ)

೨೩. ನನು ವ್ಯಾಕೃತಃ ಪ್ರಾಣಃ । ಸುಷುಪ್ತೇ ತದಾತ್ಮಕಾನಿ ಕರಣಾನಿ ಭವನ್ತಿ । ಕಥಮ್ ಅವ್ಯಾಕೃತತಾ ? ನೈಷ ದೋಷಃ । ಅವ್ಯಾಕೃತಸ್ಯ ದೇಶಕಾಲವಿಶೇಷಾಭಾವಾತ್ । ಯದ್ಯಪಿ ಪ್ರಾಣಾಭಿಮಾನೇ ಸತಿ ವ್ಯಾಕೃತತೈವ ಪ್ರಾಣಸ್ಯ, ತಥಾಪಿ ಪಿಣ್ಡಪರಿಚ್ಛಿನ್ನ ವಿಶೇಷಾಭಿಮಾನನಿರೋಧಃ ಪ್ರಾಣೇ ಭವತಿ ಇತ್ಯವ್ಯಾಕೃತ ಏವ ಪ್ರಾಣಃ ಸುಷುಪ್ತೇ ಪರಿಚ್ಛಿನ್ನಾಭಿಮಾನವತಾಮ್ । ಯಥಾ ಪ್ರಾಣಲಯೇ ಪರಿಚ್ಛಿನ್ನಾಭಿಮಾನಿನಾಂ ಪ್ರಾಣಃ ಅವ್ಯಾಕೃತಃ, ತಥಾ ಪ್ರಾಣಾಭಿಮಾನಿನೋಽಪಿ ಅವಿಶೇಷಾಪತ್ತೌ ಅವ್ಯಾಕೃತತಾ ಸಮಾನಾ । ಪ್ರಸವಬೀಜಾತ್ಮಕತ್ವಂ ಚ । ತದಧ್ಯಕ್ಷಶ್ಚ ಏಕೋಽವ್ಯಾಕೃತಾವಸ್ಥಃ । ಪರಿಚ್ಛಿನ್ನಾಭಿಮಾನಿನಾಂ ಅಧ್ಯಕ್ಷಾಣಾಂ ಚ ತೇನ ಏಕತ್ವಮ್ ಇತಿ ಪೂರ್ವೋಕ್ತಂ ವಿಶೇಷಣಂ ಏಕೀಭೂತಃ ಪ್ರಜ್ಞಾನಘನಃ ಇತ್ಯಾದ್ಯುಪಪನ್ನಮ್ ತಸ್ಮಿನ್ । ಉಕ್ತಹೇತುತ್ವಾಚ್ಚ[3] ॥

(ಭಾಷ್ಯಾರ್ಥ)

(ಆಕ್ಷೇಪ) :- ಪ್ರಾಣವು ವ್ಯಾಕೃತವಾಗಿರುತ್ತದೆ. ಸುಷುಪ್ತಿಯಲ್ಲಿ ಕರಣಗಳು ಅದರ ಸ್ವರೂಪವನ್ನು (ಪಡೆದವು)ಗಳಾಗಿರುತ್ತವೆ. ಹೀಗಿರುವಲ್ಲಿ ಅದು ಅವ್ಯಾಕೃತವೆಂಬುದು ಹೇಗೆ ?[4]

(ಸಮಾಧಾನ) :- ಇದರಲ್ಲಿ ತಪ್ಪೇನೂ ಇಲ್ಲ. ಏಕೆಂದರೆ ಅವ್ಯಾಕೃತಕ್ಕೆ ದೇಶಕಾಲಗಳ ವಿಶೇಷವಿರುವದಿಲ್ಲ[5]. ಪ್ರಾಣದಲ್ಲಿ ಅಭಿಮಾನವಿರುವಾಗ ಪ್ರಾಣವು

1. ಮನಸ್ಸು ಲಿಂಗಶರೀರದಲ್ಲಿ ಮುಖ್ಯವಾಗಿರುವದರಿಂದಲೂ, ಆತ್ಮನನ್ನು ತಿಳಿಯುವದಕ್ಕೆ ಲಿಂಗ (ಗುರುತು) ಆಗಿರುವದರಿಂದಲೂ, ಅದನ್ನು ಲಿಂಗವೆಂದಿದೆ. ಜೀವನು ಮನಉಪಾಧಿಕ ನೆಂಬುದಕ್ಕೆ ಶ್ರುತಿಯನ್ನು ಉದಾಹರಿಸಿದೆ.

2. ಹಿರಣ್ಯಗರ್ಭನಿಗೆ ಸಮಷ್ಟಿಮನಸ್ಸು ಉಪಾಧಿಯೆಂಬುದಕ್ಕೆ ಶ್ರುತಿ.

3. ತಸ್ಮಿನ್ ಆದಬಳಿಕ ಪತಸ್ಮಿನ್ ಎಂದು ವಾ ॥ ಕಾ ॥ ಮೈ ॥

4. ಮತ್ತೊಬ್ಬನು ನಿದ್ರಿಸುತ್ತಿರುವಾಗ ಅವನ ಪ್ರಾಣವು ವ್ಯಾಕೃತವಾಗಿರುತ್ತದೆ ಎಂಬ ದೃಷ್ಟಿಯಿಂದ ಆಕ್ಷೇಪವನ್ನು ಮಾಡಿದೆ. ವ್ಯಾಕೃತವೆಂದರೆ ನಾಮರೂಪಗಳಿಂದ ಬಿಡಿಯಾಗಿರುವದು.

5. ಹಾಗೆಯೇ ಸುಷುಪ್ತನಿಗೂ ವಿಶೇಷವಿರುವದಿಲ್ಲ. ಸುಷುಪ್ತನ ದೃಷ್ಟಿಯಿಂದ ಕೇಳಿದ ಸಮಾಧಾನವಿದು.

ವ್ಯಾಕೃತವಾಗಿಯೇ ಇರುವದು ನಿಜ. ಆದರೆ ಪರಿಚ್ಛಿನ್ನವಾದ (ಶರೀರದ) ಅಭಿಮಾನವಿರುವವರಿಗೆ ತನಿನಿದ್ರೆಯಲ್ಲಿ ಶರೀರಪರಿಚ್ಛಿನ್ನವಾದ ವಸ್ತುವಿಶೇಷವಿದೆಂಬ ಅಭಿಮಾನವು ಹೋಗಿಬಿಟ್ಟಿರುವದರಿಂದ[1] ಪ್ರಾಣವು ಅವ್ಯಾಕೃತವಾಗಿಯೇ ಇರುತ್ತದೆ. ಪರಿಚ್ಛಿನ್ನವಾದ (ಶರೀರದಲ್ಲಿ) ಅಭಿಮಾನವಿರುವವರಿಗೆ ಪ್ರಾಣವು ಲಯವಾದರೆ[2] ಹೇಗೆ ಪ್ರಾಣವು ಅವ್ಯಾಕೃತವಾಗುವದೋ ಹಾಗೆಯೇ ಪ್ರಾಣದ ಅಭಿಮಾನವಿರುವ ವರಿಗೆ (ಸುಷುಪ್ತಿಯಲ್ಲಿ ಅದು) ಸಾಮಾನ್ಯಾಕಾರವನ್ನು ತಳೆಯುವಾಗಲೂ ಅವ್ಯಾಕೃತ ವಾಗಿರುವದೆಂಬುದು ಸಮಾನವಾಗಿರುತ್ತದೆ. (ಮತ್ತೆ) ಹುಟ್ಟುವದಕ್ಕೆ ಕಾರಣವಾಗಿ ರುವ ರೂಪದಲ್ಲಿರುವದೆಂಬುದೂ (ಸಮಾನವಾಗಿರುತ್ತದೆ). ಅದರ[3] ಅಧ್ಯಕ್ಷನಾದ (ಆತ್ಮನು) ಒಬ್ಬನಾಗಿಯೂ ಅವ್ಯಾಕೃತಾವಸ್ಥೆಯಲ್ಲಿರುವವನಾಗಿಯೂ ಇರುತ್ತಾನೆ.[4] ಪರಿಚ್ಛಿನ್ನವಾದ (ಶರೀರಗಳಲ್ಲಿ) ಅಭಿಮಾನವುಳ್ಳ ಅಧ್ಯಕ್ಷರಾದವರೆಲ್ಲರೂ ಅವನಲ್ಲಿ ಒಂದಾಗಿರುತ್ತಾರೆ[5]. ಆದ್ದರಿಂದ[6] (ಅವನು) ಏಕೀಭೂತನು, ಪ್ರಜ್ಞಾನಘನನು-ಮುಂತಾದ ಹಿಂದೆ ಹೇಳಿದ ವಿಶೇಷಣವು[7] ಅವನಿಗೆ ಹೊಂದುತ್ತದೆ. ಮೇಲೆ ಹೇಳಿದ ಕಾರಣವಿರುವದರಿಂದಲೂ[8] (ಹೊಂದುತ್ತದೆ.)

1. ಪ್ರಾಣವು ಶರೀರದಲ್ಲಿಯೇ ಕೆಲಸಮಾಡುತ್ತಿರುವದೆಂಬ ಅರಿವು ಇಲ್ಲದಿರುವದರಿಂದ.

2. ಪ್ರಲಯವಾದರೆ ಎಂದರ್ಥ. ಸತ್ತರೆ ಎಂಬ ಆ ।। ವ್ಯಾಖ್ಯಾನವು ಅಪ್ರಕೃತವಿಚಾರ. ಆ ಪಕ್ಷದಲ್ಲಿ ದೃಷ್ಟಾಂತವು ಪರೋಕ್ಷವಾಗಿರುವದೆಂಬ ಅನಿಷ್ಟವೂ ಉಂಟು.

3. ಸುಷುಪ್ತಿಯ.

4. ಆದ್ದರಿಂದ ಒಬ್ಬನಾಗಿ ಅವ್ಯಾಕೃತಾವಸ್ಥೆಯಲ್ಲಿರುವ ಈಶ್ವರನೂ ಅವನೂ ಒಂದೆನ್ನ ಬಹುದು.

5. ಆದ್ದರಿಂದಲೂ ಸುಷುಪ್ತನೂ ಅವ್ಯಾಕೃತಾತ್ಮನೂ ಒಬ್ಬನೇ.

6. ಸುಷುಪ್ತಾತ್ಮನೂ ಅವ್ಯಾಕೃತಾತ್ಮನೂ ಒಬ್ಬನೇ ಆಗಿರುವದರಿಂದಲೂ ಅದ್ವಿತೀಯ ನಾಗಿರುವದರಿಂದಲೂ

7. ಆನಂದಮಯನು, ಸರ್ವೇಶ್ವರನು, ಸರ್ವಜ್ಞನು-ಎಂದು ಮುಂತಾಗಿ ಸುಷುಪ್ತಾತ್ಮನಿಗೆ ಮಂತ್ರದಲ್ಲಿ ಕೊಟ್ಟಿರುವ ವಿಶೇಷಣವು.

8. ದೇಶಕಾಲಗಳ ವಿಶೇಷವಿರುವಬಲ್ಲವೆಂಬ ಹೇತುವಿರುವದರಿಂದಲೂ ಈ ವಿಶೇಷಣವು ಒಪ್ಪುತ್ತದೆ ಎಂದು ಅರ್ಥ. ಅಧ್ಯಾತ್ಮ, ಅಧಿದೈವ-ಎರಡೂ ಒಂದೆಂದು ಹೇಳಿರುವ ಯುಕ್ತಿಯು ಇರುವದರಿಂದಲೂ-ಎಂಬ ಆ ।। ವ್ಯಾಖ್ಯಾನವು ಸರಿಯಲ್ಲ. ಏಕೆಂದರೆ ಪಿಶ್ಚತ್ಯೈಜಸರ ಪಕ್ಷದಲ್ಲಿರುವಂತೆ ಇಲ್ಲಿ ಅಧ್ಯಾತ್ಮಾಧಿದೈವಗಳಾಗಲಿ ವ್ಯಷ್ಟಿಸಮಷ್ಟಿಗಳಾಗಲಿ ಇರುವಬಲ್ಲ

# ಅವ್ಯಾಕೃತನಿಗೆ ಪ್ರಾಣನೆಂಬ ಹೆಸರು ಹೇಗೆ ?

(ಭಾಷ್ಯ)

೨೪. ಕಥಂ ಪ್ರಾಣಶಬ್ದತ್ವಮ್ ಅವ್ಯಾಕೃತಸ್ಯ ? ''ಪ್ರಾಣಬನ್ಧನಂ ಹಿ ಸೋಮ್ಯ ಮನಃ'' (ಛಾಂ. ೬-೮-೧) ಇತಿ ಶ್ರುತೇಃ । ನನು ತತ್ರ ''ಸದೇವ ಸೋಮ್ಯ'' (ಛಾಂ. ೬-೨-೧) ಇತಿ ಪ್ರಕೃತಂ ಸದ್ಬ್ರಹ್ಮ ಪ್ರಾಣಶಬ್ದವಾಚ್ಯಮ್ । ನೈಷ ದೋಷಃ । ಬೀಜಾತ್ಮಕತ್ವಾಭ್ಯುಪಗಮಾತ್ ಸತಃ । ಯದ್ಯಪಿ ಸದ್ಬ್ರಹ್ಮ ಪ್ರಾಣಶಬ್ದವಾಚ್ಯಂ ತತ್ರ ತಥಾಪಿ ಜೀವ ಪ್ರಸವಬೀಜಾತ್ಮಕತ್ವಮ್ ಅಪರಿತ್ಯಜ್ಯೈವ ಪ್ರಾಣಶಬ್ದತ್ವಂ ಸತಃ ಸಚ್ಛಬ್ದವಾಚ್ಯತಾ ಚ । ಯದಿ ಹಿ ನಿರ್ಬೀಜರೂಪಂ ವಿವಕ್ಷಿತಂ ಬ್ರಹ್ಮ ಅಭವಿಷ್ಯತ್ ''ನೇತಿ ನೇತಿ'' (ಬೃ. ೪-೪-೨೨) ''ಯತೋ ವಾಚೋ ನಿವರ್ತನ್ತೇ'' (ತೈ. ೨-೯) ''ಅನ್ಯದೇವ ತದ್ವಿದಿತಾದಥೋ ಅವಿದಿತಾತ್'' (ಕೇ. ೧-೩) ಇತಿ ಅವಕ್ಷ್ಯತ್ । ''ನ ಸತ್ತನ್ನಾಸದುಚ್ಯತೇ'' (ಗೀ. ೧೩-೧೨) ಇತಿ ಸ್ಮೃತೇಃ । ನಿರ್ಬೀಜತಯೈವ ಚೇತ್ ಸತಿ ಲೀನಾನಾಂ[1] ಸಂಪನ್ನಾನಾಂ ಸುಷುಪ್ತ ಪ್ರಲಯಯೋಃ ಪುನರುತ್ಥಾನಾನುಪಪತ್ತಿಃ ಸ್ಯಾತ್ । ಮುಕ್ತಾನಾಂ ಚ ಪುನರುತ್ಪತ್ತಿ ಪ್ರಸಙ್ಗಃ । ಬೀಜಾಭಾವಾವಿಶೇಷಾತ್ । ಜ್ಞಾನದಾಹ್ಯಬೀಜಾಭಾವೇ ಚ ಜ್ಞಾನಾನರ್ಥಕ್ಯ ಪ್ರಸಙ್ಗಃ । ತಸ್ಮಾತ್ ಸಬೀಜತ್ವಾಭ್ಯುಪಗಮೇನೈವ ಸತಃ ಪ್ರಾಣತ್ವವ್ಯಪದೇಶಃ ಸರ್ವ ಶ್ರುತಿಷು ಚ ಕಾರಣತ್ವವ್ಯಪದೇಶಃ ॥

(ಭಾಷ್ಯಾರ್ಥ)

(ಆಕ್ಷೇಪ) :- ಅವ್ಯಾಕೃತಾತ್ಮನಿಗೆ ಪ್ರಾಣ ಎಂಬ ಹೆಸರು ಕೊಟ್ಟಿದ್ದು ಹೇಗೆ (ಸರಿ)[2] ?

(ಪರಿಹಾರ) :- ''ಪ್ರಾಣಬನ್ಧನಂ ಹಿ ಸೋಮ್ಯ ಮನಃ'' (ಸೋಮ್ಯನೆ, ಮನಸ್ಸು ಪ್ರಾಣಕ್ಕೆ ಕಟ್ಟುಬಿದ್ದಿರುತ್ತದೆಯಲ್ಲವೆ ? (ಛಾಂ. ೬-೮-೧) ಎಂಬ ಶ್ರುತಿಯು[3] ಇದಕ್ಕೆ ಆಧಾರವು.

1. 'ಪ್ರಲೀನಾನಾಂ' ವಾ ॥ ಕಾ॥ ಗೋ ॥ ಪಾಠದಲ್ಲಿ ಈ ಮಾತು ಬಿಟ್ಟುಹೋಗಿದೆ.

2. ಮಾಂಡೂಕ್ಯಕಾರಿಕಾಕಾರರು ಈ ಪ್ರಕರಣದ ೬ನೆಯ ಕಾರಿಕೆಯಲ್ಲಿ ಅವ್ಯಾಕೃತಾತ್ಮನನ್ನು ''ಪ್ರಾಣ'' ಎಂಬ ಹೆಸರಿನಿಂದ ಕರೆದಿದ್ದಾರೆ. ಪ್ರಾಣವು ವ್ಯಾಕೃತವಾದ್ದರಿಂದ ಅದು ಸರಿಯಲ್ಲವೆಂದು ಆಕ್ಷೇಪಿಸಿ ಅದಕ್ಕೆ ಉತ್ತರವಾಗಿ ಹಿಂದೆ ಪ್ರಾಣವು ಸುಷುಪ್ತಿಯಲ್ಲಿ ಅವ್ಯಾಕೃತವೇ ಎಂದು ಹೇಳ ಲಾಗಿತ್ತು. ಈಗ ಪ್ರಾಣನೆಂದು ಕರೆಯುವದಕ್ಕೆ ಶ್ರುತಿಯಲ್ಲಿ ಆಧಾರವಿಲ್ಲವೆಂದು ಆಕ್ಷೇಪಿಸಿ ಸಮಾಧಾನ ವನ್ನು ಹೇಳುತ್ತಾರೆ.

3. ಈ ಶ್ರುತಿಯಲ್ಲಿ ಮನಸ್ಸೆಂಬ ಉಪಾಧಿಯ ಜೀವನನ್ನು ಮನಸ್ಸೆಂದೂ ಪ್ರಾಣೋಪ ಲಕ್ಷಿತವಾದ ಕಾರಣಬ್ರಹ್ಮವನ್ನು ಪ್ರಾಣವೆಂದೂ ಕರೆದಿದೆ. ಜೀವನು ಈ ಬ್ರಹ್ಮವನ್ನು ಆಶ್ರಯಿಸಿ ಕೊಂಡೇ ಇರುತ್ತಾನೆಂದು ಪಾಕ್ಯದ ಅರ್ಥ

(ಆಕ್ಷೇಪ) :- ಆ ಶ್ರುತಿಯಲ್ಲಿ "ಸೋಮ್ಯನೆ, ಇದು ಮೊದಲು ಸತ್ತೇ ಆಗಿತ್ತು" (ಛಾಂ. ೬-೨-೧) ಎಂದು ಪ್ರಕೃತವಾಗಿರುವ ಸತ್ತೆಂಬ ಬ್ರಹ್ಮವನ್ನಲ್ಲವೆ[1], ಪ್ರಾಣ ಶಬ್ದದಿಂದ ಕರೆದಿರುವದು ?

(ಪರಿಹಾರ) :- ಇದೇನೂ ತಪ್ಪಲ್ಲ. ಏಕೆಂದರೆ ಸತ್ತು ಬೀಜಾತ್ಮಕವಾಗಿರುತ್ತದ ಎಂದು (ಅಲ್ಲಿ) ಒಪ್ಪಿರುತ್ತದೆ. ಆ (ಶ್ರುತಿಯಲ್ಲಿ) ಸತ್ತೆಂಬ ಬ್ರಹ್ಮವನ್ನೇ ಪ್ರಾಣಶಬ್ದದಿಂದ ಕರೆದಿದೆಯೆಂಬುದು ನಿಜ ; ಆದರೂ ಜೀವನು ಹುಟ್ಟುವ ಬೀಜರೂಪವನ್ನು ಬಿಡದೆಯೇ[2] ಸತ್ತನ್ನು ಪ್ರಾಣವೆಂದು ಕರೆದಿದೆ. (ಅದನ್ನು) ಸತ್ತೆಂಬ ಹೆಸರಿನಿಂದ ಕರೆದಿರುವದೂ ಹಾಗೆಯೇ[3]. ನಿರ್ಬೀಜರೂಪವಾದ[4] ಬ್ರಹ್ಮವನ್ನು ಹೇಳಬೇಕೆಂಬ ಅಭಿಪ್ರಾಯವು (ಶ್ರುತಿ)ಗಿದ್ದರೆ "ಇದಲ್ಲ, ಇದಲ್ಲ" (ಬೃ. ೪-೪-೨೨), "ಯಾವದರಿಂದ ವಾಕ್ಕುಗಳು ಹಿಂದಿರುಗುತ್ತವೆಯೋ" (ತೈ. ೨-೯), "ಅದು ತಿಳಿದದ್ದಕ್ಕಿಂತಲೂ ಬೇರೆಯೇ, ಮತ್ತು ತಿಳಿಯದ್ದಕ್ಕಿಂತಲೂ ಬೇರೆಯೇ"[5] (ಕೇ. ೧-೩) ಎಂದು ಹೇಳುತ್ತಿತ್ತು. "ಅದು ಸತ್ತೂ ಅಲ್ಲ, ಅಸತ್ತೆಂದೂ ಹೇಳಲ್ಪಡುವದಲ್ಲ."[6] (ಗೀ. ೧೩-೨) ಎಂದು ಸ್ಮೃತಿಯೂ ಇದೆ. ನಿರ್ಬೀಜವಾಗಿಯೇ (ಇರುವ ಬ್ರಹ್ಮವನ್ನು ಹೇಳಿದ್ದರೆ) ತನಿನಿದ್ರೆಯಲ್ಲಿಯೂ, ಪ್ರಲಯದಲ್ಲಿಯೂ[7] ಸತ್ತಿನಲ್ಲಿ ಲಯವಾಗಿ ಒಂದಾದವರು[8] ಮತ್ತೆ (ಅಲ್ಲಿಂದ) ಏಳಬಾರದಾಗುವದು, ಅಥವಾ ಮುಕ್ತರಾದವರೂ ಮತ್ತೆ ಹುಟ್ಟಿಬಹುದಾಗುವದು ; ಏಕೆಂದರೆ ಬೀಜವಿಲ್ಲವೆಂಬುದು[9] (ಇಬ್ಬರಿಗೂ) ಸಮಾನವಾಗಿರುತ್ತದೆ.

1. ತನಗೆರಡನೆಯದಿಲ್ಲದ ಒಂದೇ ಒಂದಾಗಿದ್ದ ಬ್ರಹ್ಮವನ್ನೇ ಸತ್ತೆಂದೂ ಪ್ರಾಣವೆಂದೂ ಶ್ರುತಿಯಲ್ಲಿ ಕರೆದಿದೆ ; ಅದನ್ನು ಅವ್ಯಾಕೃತಾತ್ಮನೆಂದು ಕರೆದದ್ದು ಹೇಗೆ ? - ಎಂದು ಆಕ್ಷೇಪ.

2. ಜಗತ್ತನ್ನು ಸೃಷ್ಟಿಸಿ ಜೀವರೂಪದಿಂದ ಸತ್ತು ಸೃಷ್ಟವಾದ ದೇಹಗಳಲ್ಲಿ ಪ್ರವೇಶಿಸಿತು (ಛಾಂ. ಭಾ. ೬-೩-೩) ಎಂದು ಈ ಶ್ರುತಿಯಲ್ಲಿದೆ.

3. ನಿರುಪಾಧಿಕವಾದ ಬ್ರಹ್ಮವು ಆತ್ಮಾದಿಶಬ್ದಗಳಿಂದಲೂ ವಾಚ್ಯವಲ್ಲ. ಛಾಂ. ಭಾ. ೭-೧-೩.

4. ಕಾರಣತ್ವವೆಂಬ ಧರ್ಮವಿಲ್ಲದ.

5. ತಿಳಿದದ್ದು ಎಂದರೆ ವ್ಯಾಕೃತ, ತಿಳಿಯದ್ದು ಎಂದರೆ ಅವ್ಯಾಕೃತ.

6. ಸತ್ತೆಂದರೆ ವ್ಯಾಕೃತ, ಅಸತ್ತೆಂದರೆ ಅವ್ಯಾಕೃತ.

7. ಮರಣದಲ್ಲಿಯೂ ಹೀಗೆಯೇ ಕಾರಣಬ್ರಹ್ಮದಲ್ಲಿ ಲಯವಾಗುತ್ತದೆ (ಛಾಂ. ಭಾ. ೬-೯-೨)

8. ಮಡಕೆ, ಕುಡಿಕೆ-ಮುಂತಾದವು ಮಣ್ಣಾಗುವಂತೆ ಕಾರಣಬ್ರಹ್ಮಸ್ವರೂಪವನ್ನು ಪಡೆದವರು ಎಂದರ್ಥ.

9. ಅಜ್ಞಾನಕಲ್ಪಿತವಾದ ಕಾರಣತ್ವವಿಲ್ಲವೆಂಬುದು.

ಜ್ಞಾನದಿಂದ ಸುಟ್ಟುಹಾಕಬೇಕಾದ ಬೀಜವೇ ಇಲ್ಲದಿದ್ದರೆ ಜ್ಞಾನವೇ[1] ವ್ಯರ್ಥವಾದೀತು. ಆದ್ದರಿಂದ ಬೀಜತ್ವದಿಂದ ಕೂಡಿರುವದೆಂದು ಇಟ್ಟುಕೊಂಡೇ ಸತ್ತಿಗೆ (ಶ್ರುತಿಯಲ್ಲಿ) ಪ್ರಾಣನೆಂಬ ಹೆಸರನ್ನು ಕೊಟ್ಟಿದೆ ; ಎಲ್ಲಾ ಶ್ರುತಿಗಳಲ್ಲಿಯೂ (ಬ್ರಹ್ಮವು ಜಗತ್ತಿಗೆ) ಕಾರಣವೆಂದು ಹೇಳಿರುವದು ಹೀಗೆಯೇ[2].

## ಶುದ್ಧಬ್ರಹ್ಮವನ್ನು ಶ್ರುತಿಯಲ್ಲಿಯೂ ಕಾರಿಕೆಯಲ್ಲಿಯೂ ಹೇಳಿದೆ

(ಭಾಷ್ಯ)

೨೫. ಅತ ಏವ 'ಅಕ್ಷರಾತ್ ಪರತಃ ಪರಃ'' (ಮುಂ. ೨-೧-೨) ''ಸಬಾಹ್ಯಾಭ್ಯನ್ತರೋ ಹ್ಯಜಃ'' (ಮುಂ. ೨-೧-೨) ''ಯತೋ ವಾಚೋ ನಿವರ್ತನ್ತೇ'' (ತೈ. ೨-೯) ''ನೇತಿ ನೇತಿ'' (ಬೃ. ೨-೩-೬). ಇತ್ಯಾದಿ ಸಬೀಜಮತ್ಯಾಪನಯನೇನ[3] ವ್ಯಪದೇಶಃ । ತಾಮ್ ಅಬೀಜಾವಸ್ಥಾಂ ತಸ್ಯೈವ ಪ್ರಾಜ್ಞಶಬ್ದವಾಚ್ಯಸ್ಯ ತುರೀಯತ್ವೇನ ದೇಹಾದಿಸಮ್ಬನ್ಧರಹಿತಾಂ ಪಾರಮಾರ್ಥಿಕೀಂ ಪೃಥಗ್ ವಕ್ಷ್ಯತಿ ॥

(ಭಾಷ್ಯಾರ್ಥ)

ಆದ್ದರಿಂದಲೇ ''ಹೆಚ್ಚಿನ ಅಕ್ಷರಕ್ಕಿಂತಲೂ ಹೆಚ್ಚಿನವನು''[4] (ಮುಂ. ೨-೧-೨) ''ಒಳಗೂ ಹೊರಗೂ ಜನ್ಮವಿಲ್ಲದವನು''[5] (ಮುಂ. ೨-೧-೨) ''ಯಾವದನ್ನು ತಿಳಿಸಲಾರದೆ ಮಾತ್ಕುಗಳು ಹಿಂದಿರುಗುತ್ತವೆಯೋ''[6] (ತೈ. ೨-೯), ''ಇದಲ್ಲ ಇದಲ್ಲ''[7]

1. ಕಾರಣತ್ವವು ಅಜ್ಞಾನಕಲ್ಪಿತವಲ್ಲವೆಂದೂ ಕಾರಣಕಾರ್ಯರೂಪಗಳೆರಡೂ ಸತ್ಯವೇ ಎಂದೂ ಹೇಳುವ ಭರ್ತೃಪ್ರಪಂಚಾದಿಗಳ ಮತವನ್ನು ಇಲ್ಲಿ ಖಂಡಿಸಿದೆ. ''ಅನಾದ್ಯನಿರ್ವಾಚ್ಯವಾದ ಅಜ್ಞಾನವು ಸಂಸಾರಕಾರಣವೆಂದು ಇಲ್ಲಿ ಸಾಧಿಸಿರುತ್ತದೆ'' ಎಂಬ ೪ ॥ ವ್ಯಾಖ್ಯಾನವು ಭಾಷ್ಯಾಕ್ಷರಕ್ಕೆ ಅನನುಗುಣವಾಗಿಯೂ, ಭಾಷ್ಯಬಹಿರ್ಭೂತವಾದ ಪ್ರಸ್ಥಾನವನ್ನು ಬಲಾತ್ಕಾರದಿಂದ ಎಳೆತಂದಿರುವದೂ ಆಗಿದೆ. ಪೀಠಿಕೆಯನ್ನು ನೋಡು.

2. ಏಕೆಂದರೆ ಸೃಷ್ಟಿಯು ಪರಮಾರ್ಥವಲ್ಲ.

3. ''ಬೀಜತ್ಯಾಪನಯನೇನ'' ಮಾ ॥

4. ಕಾರ್ಯಪ್ರಪಂಚಕ್ಕೆಲ್ಲ ಕಾರಣವಾಗಿರುವದರಿಂದ ಹೆಚ್ಚಿನದಾಗಿರುವ ಅಕ್ಷರವೆಂಬ ಅವ್ಯಾಕೃತಕ್ಕಿಂತಲೂ ಹೆಚ್ಚಿನವನು-ಎಂದು ಶ್ರುತಿಗೆ ಅರ್ಥ.

5. ಒಳಗೆ ಎಂದರೆ ತನ್ನ ಸ್ವರೂಪದಿಂದಲೇ ಆಗಲಿ, ಹೊರಗೆ ಎಂದರೆ ಹೊರಗಿನ ನಿಮಿತ್ತದಿಂದಲೇ ಆಗಲಿ ಜನ್ಮವಿಲ್ಲದವನು ಎಂದು ಶ್ರುತ್ಯರ್ಥ. ಜನ್ಮವಿಲ್ಲದವನು ಎಂದದ್ದರಿಂದ ಸಬೀಜತ್ವವನ್ನು ಬಲ್ಲಗಳೆದಂತಾಯಿತು

6 ಬೀಜತ್ವವಿದ್ದರೆ ಜಗತ್ಕಾರಣವೆಂಬ ಮಾತಿನಿಂದ ಬ್ರಹ್ಮವನ್ನು ತಿಳಿಸಬಹುದಾಗುತ್ತಿತ್ತು.

7. ಮೂರ್ತ, ಅಮೂರ್ತ, ಅವುಗಳ ಮಾಸನೆ-ಯಾವದೂ ಇಲ್ಲದ್ದು ಎಂದದ್ದರಿಂದ ಬ್ರಹ್ಮದಲ್ಲಿ ಕಾರಣತ್ವವನ್ನೂ ಬಲ್ಲಗಳೆದಂತೆ ಆಯಿತು.

(ಬೃ. ೨-೩-೬) ಎಂದು ಮುಂತಾಗಿ (ಶ್ರುತಿಯಲ್ಲಿ ಬ್ರಹ್ಮದ) ಸಬೀಜತ್ವವನ್ನು ತೆಗೆದುಹಾಕಿ[1] ಹೇಳಿರುತ್ತದೆ. ದೇಹವೇ ಮುಂತಾದವುಗಳ ಸಂಬಂಧವಿಲ್ಲದ[2] ಪಾರಮಾರ್ಥಿಕವಾದ ಆ ನಿರ್ಬೀಜವಾದ ಅವಸ್ಥೆಯನ್ನು[3] ಪ್ರಾಜ್ಞಶಬ್ದವಾಚ್ಯನಾದ ಅದೇ (ಆತ್ಮನಿಗೇ) ಬೇರೆಯಾಗಿ ತುರೀಯನೆಂದು ಮುಂದೆ[4] ಹೇಳಿರುತ್ತದೆ.

## ಎಚ್ಚರದಲ್ಲಿಯೇ ಪ್ರಾಜ್ಞನ ಅನುಭವವೂ ಇದೆ

(ಭಾಷ್ಯ)

೨೬. ಬೀಜಾವಸ್ಥಾಪಿ "ನ ಕಿಂಚಿದವೇದಿಷಮ್" ಇತಿ ಉತ್ಥಿತಸ್ಯ ಪ್ರತ್ಯಯ ದರ್ಶನಾತ್ ದೇಹೇ ಅನುಭೂಯತ ಏವ ಇತಿ "ತ್ರಿಧಾ ದೇಹೇ ವ್ಯವಸ್ಥಿತಃ" ಇತ್ಯುಚ್ಯತೇ ॥

(ಭಾಷ್ಯಾರ್ಥ)

ಬೀಜಾವಸ್ಥೆಯೂ "ನನಗೆ ಏನೂ ತಿಳಿಯಬರಲಿಲ್ಲ" ಎಂದು ಎಚ್ಚೆತ್ತವನಿಗೆ ಪ್ರತ್ಯಯವುಂಟಾಗುವದರಿಂದ ದೇಹದಲ್ಲಿ ಅನುಭವಕ್ಕೆ ಬಂದೇ ಬರುತ್ತದೆ[5]. ಆದ್ದರಿಂದ "ದೇಹದಲ್ಲಿ ಮೂರು ಬಗೆಯಾಗಿ ಇದ್ದುಕೊಂಡಿರುವನು." ಎಂದು (ಕಾರಿಕೆಯಲ್ಲಿ) ಹೇಳಿರುತ್ತದೆ.

1. ಅಜ್ಞರ ದೃಷ್ಟಿಯಿಂದ ಒಪ್ಪಿಕೊಂಡಿದ್ದ ಕಾರಣತ್ವವೆಂಬ ಅಧ್ಯಾರೋಪವನ್ನು ಅಲ್ಲಗಳೆದು ನಂದರ್ಥ.

2. ಪ್ರಾಜ್ಞನಿಗೂ ದೇಹಾದಿಗಳ ಸಂಬಂಧವಿಲ್ಲವಾದರೂ ಅಜ್ಞರು 'ದೇಹಸಹಿತವಾಗಿ ಮಲಗಿಕೊಂಡು ನಿದ್ರಿಸಿದೆನು' ಎಂದು ಕಲ್ಪಿಸುತ್ತಾರೆ. ಆ ದೃಷ್ಟಿಯಿಂದ ಪ್ರಾಜ್ಞನಿಗೆ ದೇಹಾದಿಗಳ ಸಂಬಂಧವುಂಟು.

3. ಮಿಕ್ಕ ಮೂರೂ ಅಜ್ಞಾನಕಲ್ಪಿತವಾದ ಅವಸ್ಥೆಗಳು ; ತುರೀಯವು ಆತ್ಮನು ಸ್ವರೂಪದಲ್ಲಿರುವ ಪಾರಮಾರ್ಥಿಕವಾದ ಅವಸ್ಥೆ. ಇದನ್ನು ಅವಸ್ಥೆಯೆಂದು ಕರೆದಿರುವದು ಅಜ್ಞಾನಿಗಳು ಕಲ್ಪಿಸಿರುವ ಅವಸ್ಥಾದೃಷ್ಟಿಯಿಂದ. "ಬ್ರಹ್ಮಾತ್ಮಭಾವಸ್ಯ ಅನವಸ್ಥಾವಿಶೇಷನಿಬನ್ಧನತ್ವಾತ್" ಎಂದು ಸೂ. ಭಾ. ೨-೧-೧೪ ರಲ್ಲಿ ಬರೆದಿರುವದನ್ನು ನೋಡಿ.

4. ಉಪನಿಷತ್ತಿನ ೭ನೆಯ ಮಂತ್ರದಲ್ಲಿಯೂ ಅದರ ಮೇಲೆ ಬರೆದಿರುವ ಕಾರಿಕೆಗಳಲ್ಲಿಯೂ.

5. ಸುಷುಪ್ತಿಯ ಪ್ರತ್ಯಯವು ಉಂಟಾಗುವ ಮುಂಚೆ ಆ ಅವಸ್ಥೆಯ ಅನುಭವವನ್ನು ತಂದುಕೊಳ್ಳಲೇಬೇಕು. ಇದರಂತೆ ಕನಸಿನ ಪ್ರತ್ಯಯವನ್ನೂ ಅರಿಯಬೇಕು. ಕಾರಿಕೆಯಲ್ಲಿ 'ದೇಹೇ' ಎಂದರೆ ಎಚ್ಚರದ ದೇಹದಲ್ಲಿ, ಎಚ್ಚರದವಸ್ಥೆಯಲ್ಲಿ, ಎಂದರ್ಥ.

## ಭೋಕ್ತೃ ಒಬ್ಬನೇ, ಭೋಜ್ಯವೂ ಒಂದೇ

ವಿಶ್ವೋ ಹಿ ಸ್ಥೂಲಭುಜ್ನಿತ್ಯಂ ತೈಜಸಃ ಪ್ರವಿವಿಕ್ತಭುಕ್ ।
ಆನನ್ದಭುಕ್ತಥಾ ಪ್ರಾಜ್ಞಸ್ತ್ರಿಧಾ ಭೋಗಂ ನಿಬೋಧತ ॥೩॥
ಸ್ಥೂಲಂ ತರ್ಪಯತೇ ವಿಶ್ವಂ ಪ್ರವಿವಿಕ್ತಂ ತು ತೈಜಸಮ್ ।
ಆನನ್ದಶ್ಚ ತಥಾ ಪ್ರಾಜ್ಞಂ ತ್ರಿಧಾ ತೃಪ್ತಿಂ ನಿಬೋಧತ ॥೪॥

೩-೪. ವಿಶ್ವನು ನಿತ್ಯವಾಗಿ ಸ್ಥೂಲಭೋಗಿಯೇ ಆಗಿರುವನು ; ತೈಜಸನು ಪ್ರವಿವಿಕ್ತಭೋಗಿಯು, ಪ್ರಾಜ್ಞನು ಆನಂದಭೋಗಿಯು. ಹೀಗೆ ಭೋಗವು ಮೂರು ಬಗೆಯೆಂದು ತಿಳಿಯಿರಿ. ಸ್ಥೂಲವು ವಿಶ್ವನಿಗೆ ತೃಪ್ತಿಯನ್ನು ಉಂಟು ಮಾಡುವದು ; ಪ್ರವಿವಿಕ್ತವಾದದ್ದು ತೈಜಸನಿಗೆ ತೃಪ್ತಿಯನ್ನುಂಟುಮಾಡುವದು. ಆನಂದವು ಪ್ರಾಜ್ಞನಿಗೆ ತೃಪ್ತಿಯನ್ನುಂಟುಮಾಡುವದು. ಹೀಗೆ ತೃಪ್ತಿಯು ಮೂರು ಬಗೆ ಎಂದು ತಿಳಿಯಿರಿ.

(ಭಾಷ್ಯ)

೨೭. ಉಕ್ತಾರ್ಥೌ[1] ಶ್ಲೋಕೌ ॥

(ಭಾಷ್ಯಾರ್ಥ)

ಇವೆರಡೂ ಶ್ಲೋಕಗಳಿಗೆ ಒಂದೆ[2] ಅರ್ಥವನ್ನು ಹೇಳಿರುತ್ತದೆ.

ತ್ರಿಷು ಧಾಮಸು ಯದ್ಭೋಜ್ಯಂ[3] ಭೋಕ್ತಾ ಯಶ್ಚ ಪ್ರಕೀರ್ತಿತಃ ।
ವೇದೈತದುಭಯಂ ಯಸ್ತು ಸ ಭುಞ್ಜಾನೋ ನ ಲಿಪ್ಯತೇ ॥೫॥

೫. ಮೂರು ಸ್ಥಲಗಳಲ್ಲಿಯೂ ಯಾವದು ಭೋಜ್ಯವೋ ಮತ್ತು ಯಾವನು ಭೋಕ್ತೃವೆನಿಸಿರುವನೋ ಇವೆರಡನ್ನೂ ಯಾವನು ಅರಿತುಕೊಳ್ಳುತ್ತಾನೋ ಅವನು ಭೋಗಿಸಿದರೂ ಲೇಪವನ್ನು ಹೊಂದುವದಿಲ್ಲ.

(ಭಾಷ್ಯ)

೨೮. ತ್ರಿಷು ಧಾಮಸು ಯತ್[4] ಜಾಗ್ರದಾದಿಷು ಸ್ಥೂಲಪ್ರವಿವಿಕ್ತಾನನ್ದಾಖ್ಯಂ

---

1. 'ಅರ್ಥೌ ಓ' ವಾ ॥
2. ಉಪನಿಷತ್ತಿನ ಭಾಷ್ಯದಲ್ಲಿ.
3. "ಭೋಗ್ಯಮ್" ಎಂದು ಪಾಠಾಂತರ
4. ಈ ಮಾತು ಕೈಬಿಟ್ಟುಹೋಗಿದೆ

ಭೋಜ್ಯಮ್ ಏಕಂ ತ್ರಿಧಾಭೂತಂ ಯಶ್ಚ ವಿಶ್ವತೈಜಸಪ್ರಾಜ್ಞೋ ಭೋಕ್ತಾ ಏಕಃ "ಸೋಽಹಮ್' ಇತ್ಯೇಕತ್ವೇನ ಪ್ರತಿಸನ್ಧಾನಾತ್ ದ್ರಷ್ಟೃತ್ವಾವಿಶೇಷಾಚ್ಚ ಪ್ರಕೀರ್ತಿತಃ । ಯೋ ವೇದ ಏತದುಭಯಂ ಭೋಜ್ಯಭೋಕ್ತೃತಯಾ ಅನೇಕಧಾ ಭಿನ್ನಂ ಸಃ ಭುಞ್ಜಾನಃ ನ ಲಿಪ್ಯತೇ ಭೋಜ್ಯಸ್ಯ ಸರ್ವಸ್ಯ ಏಕಸ್ಯ ಭೋಕ್ತುಃ ಭೋಜ್ಯತ್ವಾತ್ । ನ ಹಿ ಯಸ್ಯ ಯೋ ವಿಷಯಃ ಸ ತೇನ ಹೀಯತೇ ವರ್ಧತೇ ವಾ । ನ ಹಿ ಅಗ್ನಿಃ ಸ್ವವಿಷಯಂ ದಗ್ಧ್ವಾ ಕಾಷ್ಠಾದಿ । ತದ್ವತ್ ॥

(ಭಾಷ್ಯಾರ್ಥ)

ಮೂರು ಸ್ಥಳಗಳಲ್ಲಿಯೂ ಎಂದರೆ ಎಚ್ಚರ ಮುಂತಾದ (ಮೂರು ಅವಸ್ಥೆಗಳಲ್ಲಿಯೂ) ಸ್ಥೂಲ, ಪ್ರವಿವಿಕ್ತ, ಆನಂದ-ಎಂದು ಮೂರು ಬಗೆಯಾಗಿರುವ ಒಂದೇ ಭೋಜ್ಯವಿದೆಯಲ್ಲ (ಅದು) ; ಮತ್ತು ವಿಶ್ವ, ತೈಜಸ, ಪ್ರಾಜ್ಞ-ಎಂಬ (ಮೂರು ಬಗೆಯಾಗಿರುವ) ಭೋಕ್ತನು ಒಬ್ಬನೇ ಇರುವನಲ್ಲ-'ಅವನೇ ನಾನು' ಎಂದು ಒಬ್ಬನನ್ನೇ ಪ್ರತ್ಯಭಿಜ್ಞೆಯಿಂದ ಅರಿಯುವದರಿಂದಲೂ (ಎಲ್ಲರೂ) ಸಮಾನವಾಗಿ ದ್ರಷ್ಟೃವೇ ಆಗಿರುವದರಿಂದಲೂ (ಒಬ್ಬನೇ ಆಗಿರುವನೆಂದು ಗೊತ್ತಾಗುವದಲ್ಲ)-(ಅವನು), ಈ ಎರಡನ್ನೂ ಭೋಕ್ತೃಗಳಿಂದೂ ಭೋಜ್ಯಗಳಿಂದೂ ಹಲವು ಬಗೆಯಾಗಿ ಭಿನ್ನವಾಗಿರುವ (ಈ ಎರಡನ್ನೂ) ಯಾವನು ಅರಿತುಕೊಳ್ಳುತ್ತಾನೋ ಅವನು ಅನುಭವಿಸಿದರೂ ಲಿಪ್ತನಾಗುವದಿಲ್ಲ. ಏಕೆಂದರೆ ಭೋಜ್ಯವೆಲ್ಲವೂ ಒಬ್ಬ ಭೋಕ್ತೃವಿಗೇ ಭೋಜ್ಯವಾಗಿರುತ್ತದೆ[1]. ಯಾವನಿಗೆ ಯಾವದು ವಿಷಯವೋ ಅವನು ಅದರಿಂದ ಕುಂದುವದೂ ಇಲ್ಲ, ಹೆಚ್ಚುವದೂ ಇಲ್ಲ. ಉದಾಹರಣೆಗೆ ಬೆಂಕಿಯು ತನ್ನ ವಿಷಯವಾದ ಕಟ್ಟಿಗೆಯೇ ಮುಂತಾದದ್ದನ್ನು ಸುಟ್ಟರೆ (ಅದರಿಂದ ಹೆಚ್ಚುವದಾಗಲಿ ಕುಂದುವದಾಗಲಿ ಇರುವದಿಲ್ಲ). ಅದರಂತೆಯೇ (ಇದನ್ನು ತಿಳಿಯಬೇಕು)[2]

1. ಒಬ್ಬನೇ ಆತ್ಮನು ವಿಶ್ವತೈಜಸಪ್ರಾಜ್ಞರಾಗಿ ಕಾಣುತ್ತಿರುವನೆಂದು ಅರಿತುಕೊಂಡರೆ ಆ ದೃಷ್ಟಿಯಿಂದ ವಿಶ್ವತ್ವಾದಿಗಳು ಆತ್ಮನ ಸ್ವಭಾವವಲ್ಲವೆಂದಾಗುವದರಿಂದ ವಿಶ್ವಾದಿಗಳ ಭೋಗಗಳೂ ಆತ್ಮನಿಗೆ ನಿಜವಾಗಿಲ್ಲವೆಂದೇ ಏರ್ಪಡುತ್ತದೆ. ಈ ಯುಕ್ತಿಯನ್ನು ಕೈಬಿಟ್ಟೇ ವಿಷಯವಾದ ಭೋಜ್ಯದಿಂದ ವಿಷಯಿಯಾದ ಭೋಕ್ತೃವಿಗೆ ಲೇಪವಿಲ್ಲವೆಂದು ಇಲ್ಲಿ ವಾದಿಸಿರುತ್ತದೆ.

2. ಬೆಂಕಿಯು ಕಟ್ಟಿಗೆಯ ಸಂಬಂಧದಿಂದ ಮಾರ್ಪಟ್ಟಂತೆ ತೋರಿದರೂ ಬಿಸಿ ಬೆಳಕುಗಳ ಸ್ವಭಾವದಿಂದಲೇ ಮೊದಲಿನಂತೆಯೇ ಇರುವಂತೆ ಆತ್ಮನು ಮಾರ್ಪಡುವದಿಲ್ಲ-ಎಂದು ಅಭಿಪ್ರಾಯ. ಭೋಕ್ತೃವು ಒಬ್ಬನೇ ಆದರೆ ಭೋಜ್ಯಾಭೋಜ್ಯವಿಭಾಗವೂ, ಇಲ್ಲವಾದ್ದರಿಂದ ಭೋಜ್ಯಕೃತದೋಷವಿಲ್ಲ-ಎಂದೂ ವ್ಯಾವಹಾರಿಕದೃಷ್ಟಿಯಿಂದ ಯುಕ್ತಿಯನ್ನು ಕೊಡಬಹುದು.

## ಪ್ರಾಣಾತ್ಮನಿಂದ ಸೃಷ್ಟಿ, ಸತ್ಕಾರ್ಯವಾದ

ಪ್ರಭವಃ ಸರ್ವಭಾವಾನಾಂ ಸತಾಮಿತಿ ವಿನಿಶ್ಚಯಃ ।
ಸರ್ವಂ ಜನಯತಿ ಪ್ರಾಣಶ್ಚೇತೋಽಂಶೂನ್ ಪುರುಷಃ ಪೃಥಕ್ ॥೬॥

೬. ಸತ್ತಾಗಿರುವ ಸರ್ವಭಾವಗಳಿಗೇ ಉತ್ಪತ್ತಿಯು ಎಂದು ನಿಶ್ಚಯವು. ಪ್ರಾಣನೆಂಬ ಪುರುಷನು ಎಲ್ಲವನ್ನೂ ಹುಟ್ಟಿಸುತ್ತಾನೆ, ಚೇತಸ್ಸಿನ ಕಿರಣಗಳನ್ನೂ ಬೇರೆಯಾಗಿ (ಹುಟ್ಟಿಸುತ್ತಾನೆ).

(ಭಾಷ್ಯ)

೨೯. ಸತಾಂ ವಿದ್ಯಮಾನಾನಾಂ ಸ್ವೇನ ಅವಿದ್ಯಾಕೃತನಾಮರೂಪಮಾಯಾ ಸ್ವರೂಪೇಣ ಸರ್ವಭಾವಾನಾಂ ವಿಶ್ವತೈಜಸಪ್ರಾಜ್ಞಭೇದಾನಾಂ ಪ್ರಭವಃ ಉತ್ಪತ್ತಿಃ[1]। ವಕ್ಷ್ಯತಿ ಚ - "ವನ್ಧ್ಯಾಪುತ್ರೋ ನ ತತ್ತ್ವೇನ ಮಾಯಯಾ ವಾಪಿ ಜಾಯತೇ" (ಕಾ. ೨-೨೮) ಇತಿ । ಯದಿ ಹಿ ಅಸತಾಮೇವ ಜನ್ಮ ಸ್ಯಾತ್ ಬ್ರಹ್ಮಣಃ ಅವ್ಯವಹಾರ್ಯಸ್ಯ ಗ್ರಹಣದ್ವಾರಾಭಾವಾತ್ ಅಸತ್ತ್ವಪ್ರಸಙ್ಗಃ । ದೃಷ್ಟಂ ಚ ರಜ್ಜುಸರ್ಪಾದೀನಾಮ್ ಅವಿದ್ಯಾಕೃತಮಾಯಾಬೀಜೋತ್ಪನ್ನಾನಾಂ ರಜ್ಜ್ವಾದ್ಯಾತ್ಮನಾ ಸತ್ತ್ವಮ್ । ನ ಹಿ ನಿರಾಸ್ಪದಾ ರಜ್ಜುಸರ್ಪಮೃಗತೃಷ್ಣಿಕಾದಯಃ ಕ್ವಚಿತ್ ಉಪಲಭ್ಯನ್ತೇ ಕೇನಚಿತ್ । ಯಥಾ ರಜ್ಜ್ವಾದಂ ಪ್ರಾಕ್ ಸರ್ಪೋತ್ಪತ್ತೇಃ ರಜ್ಜ್ವಾತ್ಮನಾ ಸರ್ಪಃ ಸನ್ನೇವ ಆಸೀತ್, ಏವಂ ಸರ್ವಭಾವಾನಾಮ್ ಉತ್ಪತ್ತೇಃ ಪ್ರಾಕ್ ಪ್ರಾಣಬೀಜಾತ್ಮನ್ಯೇವ ಸತ್ತ್ವಮ್ । ಇತ್ಯತಃ ಶ್ರುತಿರಪಿ ವಕ್ತಿ-"ಬ್ರಹ್ಮೈವೇದಮ್" (ಮುಂ. ೨-೨-೧೧), "ಆತ್ಮೈವೇದಮಗ್ರ ಆಸೀತ್"[2] (ಬೃ. ೧-೪-೧) ಇತಿ ॥

(ಭಾಷ್ಯಾರ್ಥ)

ಸತ್ತಾಗಿರುವ ಎಂದರೆ ಇದ್ದೇ ಇರುವ ತನ್ನ ಅವಿದ್ಯಾಕಲ್ಪಿತನಾಮರೂಪವೆಂಬ ಮಾಯಾಸ್ವರೂಪದಿಂದಲೇ ಸರ್ವಭಾವಗಳಿಗೂ ಎಂದರೆ ವಿಶ್ವ, ತೈಜಸ, ಪ್ರಾಜ್ಞ-ಎಂದು ಭಿನ್ನಭಿನ್ನವಾಗಿರುವ (ಎಲ್ಲಾ ಜೀವರುಗಳಿಗೂ) ಪ್ರಭವವು ಎಂದರೆ ಉತ್ಪತ್ತಿಯು (ಎಂದು ನಿಶ್ಚಯವು). "ವಂಧ್ಯಾಪುತ್ರನು ತತ್ತ್ವದಿಂದಲಾಗಲಿ, ಮಾಯೆಯಿಂದಲಾಗಲಿ ಹುಟ್ಟುವದಿಲ್ಲ" (೨-೨೮) ಎಂದು ಮುಂದೆ (ಕಾರಿಕಾಕಾರರು) ಹೇಳಿಯೂ ಇರುತ್ತಾರೆ.

1. "ಇತಿ ವಿನಿಶ್ಚಯಃ" ಎಂಬ ಮಾತುಗಳನ್ನು ಭಾಷ್ಯದಲ್ಲಿ ಬಿಟ್ಟುಬಿಟ್ಟಿದೆ.
2. ಈ ಶ್ರುತಿಯ ವಿಷಯಕ್ಕೆ ಅನುವಾದವನ್ನೂ ಟಿಪ್ಪಣಿಯನ್ನೂ ನೋಡಿ.

ಅಸತ್ತಾದ (ವಿಶ್ವಾದಿಗಳೇ) ಹುಟ್ಟುವದಾಗಿದ್ದರೆ ಯಾವ ವ್ಯವಹಾರಕ್ಕೂ ಸಿಕ್ಕದ ಬ್ರಹ್ಮವನ್ನು ಅರಿಯುವದಕ್ಕೆ ದ್ವಾರವೇ ಇಲ್ಲದೆ (ಅದು) ಇಲ್ಲವೆಂದೇ ಆಗ ಬೇಕಾಗುವದು[1]. ಹಗ್ಗದ ಹಾವೇ ಮುಂತಾದ ಅವಿದ್ಯಾಕೃತಮಾಯಾಬೀಜದಿಂದ ಹುಟ್ಟಿದ[2] (ಪದಾರ್ಥಗಳು) ಹಗ್ಗವೇ ಮುಂತಾದ ರೂಪದಿಂದ (ಇರುವದು) ಕಂಡುಬರುತ್ತಲೂ ಇದೆ. ಹಗ್ಗದ ಹಾವು, ಬಿಸಿಲುಕುದುರೆ-ಮುಂತಾದವುಗಳು ಯಾವ ಅಸ್ಪದವೂ[3] ಇಲ್ಲದೆ ಇರುವದನ್ನು ಯಾರೂ ಕಂಡಿದ್ದಿಲ್ಲ. ಹಗ್ಗದಲ್ಲಿ ಹಾವು ಹುಟ್ಟುವ ಮುಂಚೆ ಹಾವು ಹಗ್ಗದ ರೂಪದಿಂದ ಸತ್ತಾಗಿಯೇ ಹೇಗೆ ಇದ್ದುಕೊಂಡಿರುವದೋ, ಹಾಗೆಯೇ ಎಲ್ಲಾ ಭಾವಗಳೂ ಹುಟ್ಟುವ ಮೊದಲು ಪ್ರಾಣನೆಂಬ ಬೀಜರೂಪದಿಂದಲೇ ಸತ್ತಾಗಿರುವವು. ಆದ್ದರಿಂದಲೇ ಶ್ರುತಿಯೂ "ಇದು ಬ್ರಹ್ಮವೇ" (ಮುಂ. ೨-೨-೧೧) ಇದು ಮೊದಲು ಆತ್ಮನೇ ಆಗಿತ್ತು"[4] (ಬೃ. ೧-೪-೧ ?) ಎಂದು ಹೇಳುತ್ತಿದೆ.

(ಭಾಷ್ಯ)

೩೦. ಸರ್ವಂ ಜನಯತಿ ಪ್ರಾಣಃ । ಚೇತೋಽಂಶೂನ್ ಅಂಶವ ಇವ ರವೇಃ ಚಿದಾತ್ಮಕಸ್ಯ ಪುರುಷಸ್ಯ ಚೇತೋರೂಪಾ (ಅಂಶವಃ ?) ಜಲಾರ್ಕಸಮಾಃ ಪ್ರಾಜ್ಞ ತೈಜಸವಿಶ್ವಭೇದೇನ ದೇವಮನುಷ್ಯತಿರ್ಯಗಾದಿ[5]ದೇಹಭೇದೇಷು ವಿಭಾವ್ಯಮಾನಾಃ

1. ಕಾರ್ಯವು ಮೊದಲೂ ಈಗಲೂ ಅಸತ್ತೇ ಎಂಬ ಶೂನ್ಯವಾದಿಗಳ ಮತವನ್ನು ಹಿಂದಿನ ವಾಕ್ಯದಲ್ಲಿಯೇ ತಿರಸ್ಕರಿಸಿದ್ದಾಯಿತು. ಮೊದಲು ಅಸತ್ತಾಗಿರುವ ಕಾರ್ಯವು ಈಗ ಸತ್ತಾಗಿ ಉಂಟಾಗಿದೆ ಎಂಬ ವೈಶೇಷಿಕರ ಮತದಲ್ಲಿ ಬ್ರಹ್ಮವು ಸ್ವತಃ ಅವ್ಯವಹಾರ್ಯವಾಗಿರುವದರಿಂದಲೂ, ಈಗ ಇರುವ ಕಾರ್ಯಕ್ಕೂ ಬ್ರಹ್ಮಕ್ಕೂ ಯಾವ ಸಂಬಂಧವೂ ಇಲ್ಲದ್ದರಿಂದಲೂ, ಬ್ರಹ್ಮವನ್ನು ತಿಳಿಯುವದಕ್ಕೆ ಶ್ರುತಿಯು ಜ್ಞಾನೋಪದೇಶವನ್ನು ಮಾಡಿದ್ದು ವ್ಯರ್ಥವಾಗುವದು-ಎಂದು ಈಗ ಹೇಳಿದೆ (ಗೀ.ಭಾ. ೧೮-೪೮ ನೋಡಿ).

2. "ಅವಿದ್ಯೆಯಿಂದ ಎಂದರೆ ಅನಿರ್ವಾಚ್ಯವಾದ ಅನಾದ್ಯಜ್ಞಾನದಿಂದ ಕೃತವಾಗಿರುವ ಮತ್ತು ಮಾಯಾಬೀಜದಿಂದ ಹುಟ್ಟಿರುವ" ಎಂಬ ಆ ।। ವ್ಯಾಖ್ಯಾನವು ದೃಷ್ಟಾಂತವನ್ನೇ ಪಾದಗ್ರಸ್ತವನ್ನಾಗಿ ಮಾಡುವದರಿಂದ ಒಪ್ಪತಕ್ಕದ್ದಲ್ಲ. ಹಗ್ಗದಲ್ಲಿ ತಪ್ಪುತಿಳಿವಳಿಕೆಯಿಂದ ಕಲ್ಪಿತವಾದ ಹಾವಿನ ಅವಯವಗಳಿರುವವೆಂದು ಭಾಂ. ಭಾ. ೬-೨-೨ ರಲ್ಲಿ ಹೇಳಿರುವದನ್ನು ನೋಡಿರಿ.

3. ಈಗಿನ ವೇದಾಂತಿಗಳು ಇದನ್ನು ಅಧಿಷ್ಠಾನವೆನ್ನುವರು.

4. ಈ ಶ್ರುತಿಯು ಪ್ರಜಾಪತಿವಾಕ್ಯವೆಂದು ಬೃಹದಾರಣ್ಯಕಭಾಷ್ಯದಲ್ಲಿದೆ. ಆದ್ದರಿಂದ "ಆತ್ಮಾ ವಾ ಇದಮೇಕ ಏವಾಗ್ರ ಆಸೀತ್" ಎಂಬ ಐತರೇಯಶ್ರುತಿಯನ್ನು ಲೇಖಕರು ಹೀಗೆ ತಪ್ಪಾಗಿ ಬರೆದುಕೊಂಡಿದ್ದಾರೆಂದೋ ಅಥವಾ ಭಾಷ್ಯದಲ್ಲಿ ಶ್ರುತ್ಯರ್ಥವು ಮಾತ್ರ ಇದೆಯೆಂದೋ ಕಲ್ಪಿಸಬೇಕು.

5. ವಾ ।। ಕಾ ।। ಪಾಠ ; ಆ ।। ಪಾಠದಲ್ಲಿ "ಮನುಷ್ಯ" ಇಲ್ಲ.

ಚೇತೋಽಂಶವಃ ಯೇ, ತಾನ್ ಪುರುಷಃ ಪೃಥಕ್ ವಿಷಯಭಾವವಿಲಕ್ಷಣಾನ್ ಅಗ್ನಿ ವಿಸ್ಫುಲಿಙ್ಗವತ್ ಸಲಕ್ಷಣಾನ್ ಜಲಾರ್ಕವಚ್ಚ, ಜೀವಲಕ್ಷಣಾಂಸ್ತು ಇತರಾನ್ ಸರ್ವ ಭಾವಾನ್ ಪ್ರಾಣಃ ಬೀಜಾತ್ಮಾ ಜನಯತಿ । ''ಯಥೋರ್ಣನಾಭಿಃ.....ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಙ್ಗಾಃ (ಬೃ. ೨-೧-೨೦) ಇತ್ಯಾದಿಶ್ರುತೇಃ ॥[1]

(ಭಾಷ್ಯಾರ್ಥ)

''ಪ್ರಾಣನೆಂಬ (ಪುರುಷನು) ಎಲ್ಲವನ್ನೂ ಹುಟ್ಟಿಸುತ್ತಾನೆ.'' ಚೇತೋಽಂಶು ಗಳನ್ನು-ಎಂದರೆ ಸೂರ್ಯನ ಕಿರಣಗಳಂತೆ ಚಿಪ್ರೂಪನಾಗಿರುವ ಪುರುಷನ ಚೈತನ್ಯರೂಪ ವಾದ ಕಿರಣಗಳು, ಪ್ರಾಜ್ಞ[2], ತೈಜಸ, ವಿಶ್ವ-ಎಂಬ ಭೇದದಿಂದ ದೇವತೆಗಳು, ಮನುಷ್ಯರು, ಪಶುಗಳು-ಮುಂತಾದ ಬೇರೆಬೇರೆಯ ದೇಹಗಳಲ್ಲಿ ತಿಳಿಯಬರುವ ನೀರಿ ನಲ್ಲಿ ಕಾಣುವ ಸೂರ್ಯಪ್ರತಿಬಿಂಬಗಳಂತಿರುವ ಚೈತನ್ಯದ ಕಿರಣಗಳಿರುವವಲ್ಲ, ಅವನ್ನು-ಬೇರೆಯಾಗಿ ಎಂದರೆ ವಿಷಯರೂಪವಾದ ಭಾವಗಳಿಗಿಂತ ವಿಲಕ್ಷಣವಾಗಿ ಬೆಂಕಿಯ ಕಿಡಿಗಳಂತೆಯೂ, ನೀರಿನ ಸೂರ್ಯಪ್ರತಿಬಿಂಬಗಳಂತೆಯೂ[3] ತನ್ನ ಸ್ವಭಾವ ದವರೇ ಆಗಿರುವ ಜೀವರೂಪವಾಗಿರುವ (ಭಾವಗಳನ್ನೂ) ಮಿಕ್ಕ ಎಲ್ಲಾ ಭಾವಗಳನ್ನೂ ಪ್ರಾಣನು ಎಂದರೆ ಬೀಜಾತ್ಮನು ಹುಟ್ಟಿಸುತ್ತಾನೆ. ''ಜೇಡರ ಹುಳು ಹೇಗೆ (ನೂಲಿನಿಂದ ಮುಂದಕ್ಕೆ ಬರುತ್ತದೆಯೋ)...ಬೆಂಕಿಯಿಂದ ಸಣ್ಣಕಿಡಿಗಳು (ಹೇಗೆ ಹೊರಟುಬರು ವವೋ)'' (ಬೃ. ೨-೧-೨೦)-ಮುಂತಾದ ಶ್ರುತಿಯು[4] ಇದಕ್ಕೆ ಪ್ರಮಾಣವು.

## ಸೃಷ್ಟಿ ಪರಮಾರ್ಥವಲ್ಲ

ವಿಭೂತಿಂ ಪ್ರಸವಂ ತ್ವನ್ಯೇ ಮನ್ಯನ್ತೇ ಸೃಷ್ಟಿಚಿನ್ತಕಾಃ ।
ಸ್ವಪ್ನಮಾಯಾಸರೂಪೇತಿ ಸೃಷ್ಟಿರನ್ಯೈರ್ವಿಕಲ್ಪಿತಾ ॥೭॥

1. ಮೊದಲನೆಯ ಶ್ರುತಿಯ ಭಾಗವು ಮುಂ ೧-೧-೭ ರಲ್ಲಿಯೂ ಇದೆ ; ಆದರೆ ಇವೆರಡೂ ಬೃಹದಾರಣ್ಯಕವಚನದಲ್ಲಿಯೇ ಇರುವವರಿಂದಲೂ ''ಶ್ರುತೇಃ'' ಎಂದು ಏಕವಚನವಿರುವದ ರಿಂದಲೂ ಒಂದೇ ವಾಕ್ಯವೆಂದು ಕಲ್ಪಿಸಲಾಗಿದೆ

2 ಪ್ರಾಜ್ಞನಲ್ಲಿ ವಿಶೇಷವಿಲ್ಲದಿರುವದರಿಂದಲೂ, ಪ್ರಾಜ್ಞನೇ ಪ್ರಾಣನಾಗಿರುವದರಿಂದಲೂ ಇಲ್ಲಿ ತೈಜಸವಿಶ್ವರಂದಿಷ್ಟೇ ಇದ್ದರೆ ಸಾಲದೆ ? - ಎಂದು ಶಂಕಿಸಬೇಕಾದಲ್ಲಿಲ್ಲ. ಏಕೆಂದರೆ ಆಯಾ ಜೀವನ ದೃಷ್ಟಿಯಿಂದ ಅವನವನ ಸುಷುಪ್ತಿಯು ಬೇರೆಯೇ ಆಗಿರುತ್ತದೆ.

3. ಜೀವರುಗಳು ಬ್ರಹ್ಮವೇ ಅಲ್ಲ, ಬ್ರಹ್ಮಕ್ಕಿಂತ ತೀರ ಭಿನ್ನರೂ ಅಲ್ಲ, ಜಲಾರ್ಕಗಳಂತೆ ಆಭಾಸಮಾತ್ರರಾಗಿರುತ್ತಾರೆಂದು ಸೂ ಭಾ ೨-೩-೫೦ ರಲ್ಲಿ ಹೇಳಿದೆ

4 ಈ ಜೀವಾತ್ಮನಿಂದ ಪ್ರಾಣಗಳು, ಲೋಕಗಳು, ದೇವತೆಗಳು, ಭೂತಗಳು-ಹುಟ್ಟುತ್ತವೆ ಎಂದು ಶ್ರುತಿಯ ಅರ್ಥ ಮಾಧ್ವಭಾಷ್ಯಾನುವಾದದಲ್ಲಿ, ಆತ್ಮರುಗಳೂ (ವಿಶ್ವಾದಿಗಳೂ) ಹುಟ್ಟು ತ್ತಾರೆಂದಿದೆ

೭. ಕೆಲವರು ಸೃಷ್ಟಿಚಿಂತಕರು ಸೃಷ್ಟಿಯು ವಿಭೂತಿ ಎಂದು ಬಗೆಯುವರು. ಅದು ಸ್ವಪ್ನಮಾಯಾಸರೂಪವೆಂದು ಮತ್ತೆ ಕೆಲವರು ವಿಕಲ್ಪಿಸಿರುವರು.

(ಭಾಷ್ಯ)

೩೧. ವಿಭೂತಿಃ ವಿಸ್ತಾರಃ ಈಶ್ವರಸ್ಯ ಸೃಷ್ಟಿಃ ಇತಿ ಸೃಷ್ಟಿಚಿನ್ತಕಾಃ ಮನ್ಯನ್ತೇ । ನ ತು ಪರಮಾರ್ಥಚಿನ್ತಕಾನಾಂ ಸೃಷ್ಟೌ ಆದರಃ ಇತ್ಯರ್ಥಃ । ''ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ'' (ಬೃ. ೨-೫-೧೯) ಇತಿ ಶ್ರುತೇಃ । ನ ಹಿ ಮಾಯಾವಿನಂ ಸೂತ್ರಮ್ ಆಕಾಶೇ ನಿಕ್ಷಿಪ್ಯ ತೇನ ಸಾಯುಧಮ್ ಆರುಹ್ಯ ಚಕ್ಷುರ್ಗೋಚರತಾಮ್ ಅತೀತ್ಯ ಯುದ್ಧೇನ ಖಿಣ್ಡಶಶ್ಚಿನ್ನಂ ಪತಿತಂ ಪುನರುತ್ಥಿತಂ ಚ ಪಶ್ಯತಾಂ ತತ್ಪ್ರತಮಾಯಾ[1] ಸತತ್ತ್ವಚಿನ್ತಾಯಾಮ್ ಆದರಃ ಭವತಿ । ತದ್ವೈವ ಅಯಂ ಮಾಯಾವಿನಃ ಸೂತ್ರಪ್ರಸಾರಣ ಸಮಃ ಸುಷುಪ್ತಸ್ವಪ್ನಾದಿವಿಕಾಸಃ । ತದಾರೂಢಮಾಯಾವಿಸಮಶ್ಚ ತತ್ಸೃಷ್ಟಃ ಪ್ರಾಜ್ಞ ತೈಜಸಾದಿಃ । ಸೂತ್ರತದಾರೂಢಾಭ್ಯಾಮ್ ಅನ್ಯಃ ಪರಮಾರ್ಥಮಾಯಾವೀ ಸ ಏವ ಭೂಮಿಷ್ಠಃ ಮಾಯಾಚ್ಛನ್ನಃ ಅದೃಶ್ಯಮಾನ ಏವ ಸ್ಥಿತಃ ಯಥಾ, ತಥಾ ತುರೀಯಾಖ್ಯಂ ಪರಮಾರ್ಥತತ್ತ್ವಮ್ । ಅತಃ ತಚ್ಚಿನ್ತಾಯಾಮೇವ ಆದರೋ ಮುಮುಕ್ಷೂಣಾಮ್ ಆರ್ಯಾಣಾಂ ನ ನಿಷ್ಪ್ರಯೋಜನಾಯಾಂ ಸೃಷ್ಟೌ ಆದರಃ ಇತ್ಯತಃ ಸೃಷ್ಟಿಚಿನ್ತಕಾನಾಮೇವ ಏತೇ ವಿಕಲ್ಪಾ ಇತ್ಯಾಹ[2] । ಸ್ವಪ್ನಮಾಯಾಸರೂಪೇತಿ । ಸ್ವಪ್ನಸರೂಪಾ[3] ಮಾಯಾಸರೂಪಾ ಚ ಇತಿ ॥

(ಭಾಷ್ಯಾರ್ಥ)

ಸೃಷ್ಟಿಯು ಈಶ್ವರನ ವಿಭೂತಿಯು ಎಂದರೆ ವಿಸ್ತಾರವು[4]-ಎಂದು ಕೆಲವರು ಸೃಷ್ಟಿಚಿಂತಕರು ಬಗೆಯುವರು ; ಇಷ್ಟೇ ಹೊರತು ಪರಮಾರ್ಥಚಿಂತಕರಿಗೆ ಸೃಷ್ಟಿಯಲ್ಲಿ ಆದರವಿಲ್ಲ[5] ಎಂದರ್ಥ. ''ಇಂದ್ರನು ಮಾಯೆಗಳಿಂದ ಬಹುರೂಪನಾಗಿ ಕಾಣುತ್ತಾನೆ''

1. ''ಮಾಯಾದಿ'' ಎಂಬ ಪಾಠದಲ್ಲಿ 'ಆದಿ' ಹೆಚ್ಚು.

2. 'ಇತ್ಯತ ಆಹ' ಎಂಬ ಬೇರೆಯ ಪಾಠವನ್ನು ಕೆಲವರು ತೆಗೆದುಕೊಂಡಿದ್ದಾರೆ. ಅದೂ ಆಗ ಬಹುದು. ಆದರೆ ಟೀಕೆಯ ಈ ಪಾಠವು ಮುಂದಿನ ವಾಕ್ಯದ ಅಭಿಪ್ರಾಯಕ್ಕೆ ವಿರುದ್ಧವಾಗಿದೆ.

3. 'ಸ್ವಪ್ನರೂಪಾ' ಎಂಬುದು 'ಸ್ವಪ್ನಸರೂಪಾ' ಎಂಬುದರ ಬದಲು ಬಿದ್ದಿದೆ ಎಂದು ತೋರುವದು.

4. ಈಶ್ವರನೇ ಸೃಷ್ಟಿಯ ರೂಪದಲ್ಲಿ ಹರಡಿಕೊಂಡಿರುತ್ತಾನೆ. ಈ ಕಾರಿಕೆಯ ವಿಷಯವಾಗಿ ಪೀಠಿಕೆಯನ್ನು ನೋಡಿ.

5. ಏಕೆಂದರೆ ಸೃಷ್ಟಿಯು ಪರಮಾರ್ಥವಲ್ಲ ; ಆತ್ಮನೇ ಪರಮಾರ್ಥ. ಈಶ್ವರನಾದ ಆತ್ಮನೊಬ್ಬನೇ ಅವಿದ್ಯಾಕೃತವಾದ ತಪ್ಪುತಿಳಿವಳಿಕೆಗಳಿಂದ ಬೇರೆಬೇರೆಯಾಗಿ ಕಾಣಿಸುತ್ತಿರುವನು-ಎಂಬರ್ಥದ ಬೃಹದಾರಣ್ಯಕಶ್ರುತಿಯನ್ನು ಇದಕ್ಕೆ ಆಧಾರವಾಗಿ ಉದಾಹರಿಸಿದೆ.

(ಬೃ. ೨-೫-೧೯) ಎಂಬ ಶ್ರುತಿ ಇದಕ್ಕೆ ಪ್ರಮಾಣವು. ಆಕಾಶದಲ್ಲಿ ನೂಲೇಣಿಯನ್ನು ಹಾಕಿ, ಆಯುಧಗಳೊಡನೆ ಅದನ್ನು ಹತ್ತಿ, ಕಣ್ಣಿಗೆ ಕಾಣದಂತಾಗಿ (ಅಲ್ಲಿ) ಯುದ್ಧದಲ್ಲಿ ತುಂಡುತುಂಡಾಗಿ ಕತ್ತರಿಸಿಕೊಂಡು ಬಿದ್ದು ಮತ್ತೆ ಏಳುವ ಮಾಯಾವಿಯನ್ನು ನೋಡುವವರಿಗೆ ಆತನು ಮಾಡಿದ ಮಾಯೆಯ ನಿಜವನ್ನು ವಿಚಾರಿಸಿ (ಅರಿತುಕೊಳ್ಳು)ವದರಲ್ಲಿ ಆದರವೇನೂ ಉಂಟಾಗುವದಿಲ್ಲವಷ್ಟೆ[1]. ಹಾಗೆಯೇ ತನಿನಿದ್ರೆ, ಕನಸು-ಮುಂತಾದ (ರೂಪದಿಂದ) ಹರಡಿಕೊಂಡಿರುವ (ಈ ಜಗತ್ತು) ಮಾಯಾವಿಯು ನೂಲೇಣಿಯನ್ನು ಹಾಕಿದಂತೆ ಇರುವದು. ಅದರಲ್ಲಿರುವ ಪ್ರಾಜ್ಞ, ತೈಜಸ-ಮೊದಲಾದವರು ಆ (ನೂಲೇಣಿಯನ್ನು) ಹತ್ತಿದ ಮಾಯಾವಿಗಳಂತೆ. ನೂಲೇಣಿ, ಅದನ್ನೇರಿದ ಮಾಯಾವಿ - ಈ ಎರಡಕ್ಕೂ ಬೇರೆಯಾಗಿ ನಿಜವಾದ ಮಾಯಾವಿಯು ಮಾಯೆಯಿಂದ ತನ್ನನ್ನು ಮರೆಮಾಡಿಕೊಂಡು ತಾನೇ (ಯಾರಿಗೂ) ಕಾಣಿಸದೆ ನೆಲದ ಮೇಲೆ ಹೇಗೆ ಇದ್ದುಕೊಂಡಿರುವನೋ ಅದರಂತೆ ಪರಮಾರ್ಥವಾದ ತುರೀಯವು (ಇರುವದು)[2]. ಆದ್ದರಿಂದ ಆರ್ಯರಾದ ಮುಮುಕ್ಷುಗಳಿಗೆ ಅದರ ವಿಚಾರದಲ್ಲಿಯೇ ಆದರವಿರುವದೇ ಹೊರತು ನಿಷ್ಪ್ರಯೋಜನವಾದ[3] ಸೃಷ್ಟಿಯಲ್ಲಿ ಆದರವಿರುವದಿಲ್ಲ ಆದ್ದರಿಂದ ಸೃಷ್ಟಿಚಿಂತಕರವೇ ಈ ವಿಕಲ್ಪಗಳು ಎಂದು[4] ಹೇಳಿದೆ. ''ಸ್ವಪ್ನಮಾಯಾಸರೂಪವೆಂದು'' ಎಂದರೆ ಕನಸಿಗೆ ಸಮಾನವಾದ ರೂಪವುಳ್ಳದ್ದು, ಮಾಯೆಗೆ ಸಮಾನವಾದ ರೂಪವುಳ್ಳದ್ದು[5] (ಎಂದರ್ಥ.)

1. ಮಾಯೆಯು ಎಂದರೆ ಮಾಯಾವಿಯು ಸೃಷ್ಟಿಸಿದ ಹುಸಿತೋರಿಕೆಯ ಪದಾರ್ಥವು ಏತರಿಂದಾಗಿದೆ, ಎಲ್ಲಿಂದ ಬರುತ್ತದೆ, ಎಲ್ಲಿಗೆ ಹೋಗುತ್ತದೆ,-ಎಂದು ಮುಂತಾಗಿ ವಿಚಾರಿಸುವ ಗೋಜಿಗೆ ಹೋಗುವದಿಲ್ಲ. ಅದೆಲ್ಲ ಮಾಯೆ ಎಂದು ಉದಾಸೀನರಾಗಿರುತ್ತಾರೆ.

2. ತುರೀಯವೊಂದೇ ಅವಸ್ಥೆಗಳಾಗಿಯೂ, ಪ್ರಾಜ್ಞಾದಿಗಳಾಗಿಯೂ ಅವಿದ್ಯೆಯಿಂದ ತೋರುತ್ತಿರುವದು. ಈ ಮಾಯಾವಿಯ ದೃಷ್ಟಾಂತವನ್ನು ಸೂ. ಭಾ. ೧-೧-೧೭. ಭಾ. ಭಾ. ೬೧ ಇವುಗಳಲ್ಲಿಯೂ ಕೊಟ್ಟಿದೆ.

3. ಸೃಷ್ಟಿಗೆ ಫಲವನ್ನು ಎಲ್ಲಿಯೂ ಹೇಳಿಲ್ಲವಾದ್ದರಿಂದ ಅದರಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲ.

4. 'ಇತ್ಯತಃ' ಎಂಬ ಪಾಠಕ್ಕೆ 'ಎಂಬ ಕಾರಣದಿಂದ' ಎಂದು ಅರ್ಥ. ಈ ಪಾಠದಲ್ಲಿ ''ಸ್ವಪ್ನ ಮಾಯಾಸರೂಪಾ'' ಎಂಬುದು ಸಿದ್ಧಾಂತವೆಂಬುದು ಸ್ಪಷ್ಟವಾಗಿದೆ.

5. ಕನಸಿನ ಪದಾರ್ಥಗಳೂ ಮಾಯೆಯೂ ಸತ್ಯವೆಂಬವರ ಮತವನ್ನು ಉತ್ತರಾರ್ಧದಲ್ಲಿ ಹೇಳಿದೆ-ಎಂಬುದು ಆ ।। ಟೀಕಾಕಾರನ ಮತ ; ಆದರೆ ಇಲ್ಲಿಯೇ ಆಚಾರ್ಯರು ಮಾಯಾದೃಷ್ಟಾಂತವನ್ನು ಉದಾಹರಿಸಿರುವದರಿಂದಲೂ ವೈತಥ್ಯಪ್ರಕರಣದಲ್ಲಿ (೨-೩೧) ಕಾರಿಕೆಯಲ್ಲಿಯೇ ಈ ಎರಡು ಮತಗಳೂ ವೈದಿಕವೆಂದು ಹೇಳಿರುವದರಿಂದಲೂ ಟೀಕೆಯನ್ನು ಒಪ್ಪಬೇಕಾದದ್ದಿಲ್ಲ. 'ಏತೇ ವಿಕಲ್ಪಾಃ' ಎಂಬ ಬಹುವಚನಪ್ರಯೋಗವನ್ನು ಮುಂದಿನ ಕಾರಿಕೆಯ ಇಚ್ಛೆ, ಕಾಲ-ಎಂಬ ಪಕ್ಷಗಳನ್ನು ಸೇರಿಸಿ ಹೊಂದಿಸಬೇಕು

ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿರಿತಿ ಸೃಷ್ಟೌ ವಿನಿಶ್ಚಿತಾಃ ।
ಕಾಲಾತ್ ಪ್ರಸೂತಿಂ ಭೂತಾನಾಂ ಮನ್ಯನ್ತೇ ಕಾಲಚಿನ್ತಕಾಃ ॥೮॥

೮. ಸೃಷ್ಟಿಯು ಪ್ರಭುವಿನ ಇಚ್ಛಾಮಾತ್ರವು ಎಂದು ಸೃಷ್ಟಿಯಲ್ಲಿ ನಿಶ್ಚಯ ಬುದ್ಧಿಯುಳ್ಳವರೆನ್ನುವರು. ಕಾಲಚಿಂತಕರು ಭೂತಗಳ ಸೃಷ್ಟಿಯು ಕಾಲದಿಂದ ಎಂದು ಬಗೆಯುವರು.

(ಭಾಷ್ಯ)

೩೨. ಇಚ್ಛಾಮಾತ್ರಂ ಪ್ರಭೋಃ ಸತ್ಯಸಙ್ಕಲ್ಪತ್ವಾತ್ । ಸೃಷ್ಟಿಃ ಘಟಾದಿಃ ಸಙ್ಕಲ್ಪನಾಮಾತ್ರಂ ನ ಸಙ್ಕಲ್ಪನಾತಿರಿಕ್ತಮ್ । ಕಾಲಾದೇವ ಸೃಷ್ಟಿರಿತಿ ಕೇಚಿತ್ ॥

(ಭಾಷ್ಯಾರ್ಥ)

ಪ್ರಭುವು ಸತ್ಯಸಂಕಲ್ಪನಾದ್ದರಿಂದ ಇಚ್ಛಾಮಾತ್ರವು. ಸೃಷ್ಟಿಯು ಎಂದರೆ ಘಟವೇ ಮುಂತಾದದ್ದು ಬರಿಯ ಸಂಕಲ್ಪವೇ, ಸಂಕಲ್ಪಕ್ಕಿಂತ ಬೇರೆಯಿಲ್ಲ[1] (ಎಂದು ಕೆಲವರು). ಕಾಲದಿಂದಲೇ ಸೃಷ್ಟಿಯೆಂದು ಕೆಲವರು[2].

ಭೋಗಾರ್ಥಂ ಸೃಷ್ಟಿರಿತ್ಯನ್ಯೇ ಕ್ರೀಡಾರ್ಥಮಿತಿ ಚಾಪರೇ ।
ದೇವಸ್ಯೈಷ ಸ್ವಭಾವೋಽಯಮಾಪ್ತಕಾಮಸ್ಯ ಕಾ ಸ್ಪೃಹಾ ॥೯॥

೯. ಭೋಗಕ್ಕಾಗಿ ಸೃಷ್ಟಿಯಾಗಿರುವದೆಂದು ಕೆಲವರು ; ಕ್ರೀಡೆಗಾಗಿ ಎಂದು ಕೆಲವರು ; ಆ ಇದು ದೇವನ ಸ್ವಭಾವವು ; ಆಪ್ತಕಾಮನಿಗೆ ಇಚ್ಛೆಯೇನು ?

(ಭಾಷ್ಯ)

೩೩. ಭೋಗಾರ್ಥಂ ಕ್ರೀಡಾರ್ಥಮ್ ಇತಿ ಚ ಅನ್ಯೇ ಸೃಷ್ಟಿಂ ಮನ್ಯನ್ತೇ । ಅನಯೋಃ ಪಕ್ಷಯೋಃ ದೂಷಣಮ್ ದೇವಸ್ಯೈಷ ಸ್ವಭಾವೋಽಯಮ್ ಇತಿ । ದೇವಸ್ಯ ಸ್ವಭಾವಪಕ್ಷಮ್ ಆಶ್ರಿತ್ಯ ಸರ್ವೇಷಾಂ ವಾ ಪಕ್ಷಾಣಾಮ್ "ಆಪ್ತಕಾಮಸ್ಯ ಕಾ ಸ್ಪೃಹಾ" ಇತಿ । ನ ಹಿ ರಜ್ಜ್ವಾದೀನಾಮ್ ಅವಿದ್ಯಾಸ್ವಭಾವವ್ಯತಿರೇಕೇಣ ಸರ್ಪಾದ್ಯಾಭಾಸತ್ವೇ ಕಾರಣಂ ಶಕ್ಯಂ ವಕ್ತುಮ್ ॥

1. ಇದಕ್ಕೆ ಈಶ್ವರನ ಸಂಕಲ್ಪಕ್ಕಿಂತ ಬೇರೆಯ ಉಪಾದಾನವಿಲ್ಲ ಎಂದರ್ಥ

2. ವಸ್ತುಗಳ ಸೃಷ್ಟಿಸ್ಥಿತಿಲಯಗಳು ಕಾಲದಲ್ಲಿಯೇ ಆಗುವದು ಕಂಡಿದೆ. ಆದರೆ ಕಾಲದ ಜನ್ಮನಾಶಗಳನ್ನು ಕಲ್ಪಿಸುವದಕ್ಕೂ ಆಗುವದಿಲ್ಲ. ಆದ್ದರಿಂದ ಕಾಲವೇ ಜಗತ್ಕಾರಣವು ಎಂದರ್ಥ.

(ಭಾಷ್ಯಾರ್ಥ)

ಸೃಷ್ಟಿಯು (ಈಶ್ವರನ) ಭೋಗಕ್ಕಾಗಿ (ಆದದ್ದೆಂದೂ) ಆಟಕ್ಕಾಗಿ ಆದದ್ದೆಂದೂ ಕೆಲವರು ಬಗೆಯುವರು. ಈ ಎರಡು ಪಕ್ಷಗಳಲ್ಲಿಯೂ ದೋಷವನ್ನು ಹೇಳುವದಕ್ಕೆ "ಇದು ದೇವನ ಸ್ವಭಾವವು" ಎಂದಿದೆ. ಅಥವಾ ದೇವನ ಸ್ವಭಾವವಿದೆಂಬ ಪಕ್ಷವನ್ನು ಆಶ್ರಯಿಸಿ[1] (ಮೇಲೆ ಹೇಳಿರುವ ಮಿಕ್ಕ) ಎಲ್ಲಾ ಪಕ್ಷಗಳನ್ನೂ "ಆಪ್ತಕಾಮನಿಗೆ ಇಚ್ಛೆಯೇನು ?"-ಎಂದು ಖಂಡಿಸಿದೆ (ಎಂದಾದರೂ ತಿಳಿಯಬಹುದು) ಹಗ್ಗವೇ ಮುಂತಾದವುಗಳು ಹಾವು ಮುಂತಾದ ರೂಪದಲ್ಲಿ ತೋರುವದಕ್ಕೆ ಅವಿದ್ಯಾಸ್ವಭಾವವನ್ನು ಬಿಟ್ಟರೆ[2] (ಬೇರೆ ಯಾವ) ಕಾರಣವನ್ನೂ ಹೇಳುವದಕ್ಕೆ ಆಗುವದೇ ಇಲ್ಲ.

******

---

1. ಶ್ವೇತಾಶ್ವತರೋಪನಿಷತ್ತಿನಲ್ಲಿ (೬-೧) ಪ್ರಪಂಚವು ಸ್ವಭಾವದಿಂದಲೇ ಸೃಷ್ಟವಾಗುತ್ತದೆ-ಎಂಬ ಪಕ್ಷವನ್ನು ನಿರಾಕರಿಸಿದೆ, ಸೃಷ್ಟವಿನ ಸ್ವಭಾವದ ಪಕ್ಷವನ್ನಲ್ಲ. ಹೀಗೆಯೇ ಬ್ರ. ಸೂ. ೨-೧-೩೩ ರಲ್ಲಿ ಪ್ರಯೋಜನವನ್ನೇನೂ ಬಯಸದೆ ಸೃಷ್ಟಿಸುವದು ಈಶ್ವರನ ಸ್ವಭಾವವೆಂದಿದೆಯಾದ್ದರಿಂದ ಈ ಕಾರಿಕೆಗೂ ಅದಕ್ಕೂ ವಿರೋಧವಿಲ್ಲ.

2. ಅವಿದ್ಯೆಯನ್ನೇ ಇಲ್ಲಿ ಸ್ವಭಾವವೆಂದಿರುವದರಿಂದ ಈಶ್ವರನಿಗೆ ಸೃಷ್ಟಿಮಾಡುವದೇ ಸ್ವಭಾವವಾದರೆ ಯಾವಾಗಲೂ ಏಕೆ ಸೃಷ್ಟಿಸುವದಿಲ್ಲ ? - ಎಂಬ ಶಂಕೆಗೆ ಅವಕಾಶವಿಲ್ಲ.

# ೨. ಉಪನಿಷತ್ತು

## ತುರೀಯಮಂತ್ರದ ಅವತರಣಿಕೆ

(ಭಾಷ್ಯ)

೩೪. ಚತುರ್ಥಃ ಪಾದಃ ಕ್ರಮಪ್ರಾಪ್ತೋ ವಕ್ತವ್ಯಃ ಇತ್ಯಾಹ-"ನಾನ್ತಃ ಪ್ರಜ್ಞಮ್" ಇತ್ಯಾದಿನಾ । ಸರ್ವಶಬ್ದಪ್ರವೃತ್ತಿನಿಮಿತ್ತಶೂನ್ಯತ್ವಾತ್ ತಸ್ಯ ಶಬ್ದಾನಭಿಧೇಯತ್ವಮ್ ಇತಿ ವಿಶೇಷಪ್ರತಿಷೇಧೇನೈವ[1] ತುರೀಯಂ ನಿರ್ದಿದಿಕ್ಷತಿ ॥

(ಭಾಷ್ಯಾರ್ಥ)

ಸರದಿಯ ಪ್ರಕಾರ ಬಂದೊದಗಿರುವ ನಾಲ್ಕನೆಯ[2] ಪಾದವನ್ನು ಹೇಳಬೇಕೆಂದು "ನಾನ್ತಃಪ್ರಜ್ಞಮ್" ಎಂದು ಮುಂತಾದ (ವಾಕ್ಯ)ದಿಂದ (ಮಂತ್ರವು) ಹೇಳುತ್ತದೆ. ಮಾತುಗಳು (ತಿಳಿಸುವದಕ್ಕೆ) ಹೊರಡುವ ನಿಮಿತ್ತವು ಯಾವದೂ ಅದರಲ್ಲಿಲ್ಲದ್ದರಿಂದ ಅದು ಶಬ್ದದಿಂದ ಹೇಳುವದಕ್ಕೆ ತಕ್ಕದ್ದಲ್ಲವೆಂಬ (ಕಾರಣದಿಂದ)[3] ಇಂಥಿಂಥದ್ದು ಅಲ್ಲ ವೆಂದು ತಿಳಿಸುವದರಿಂದಲೇ ತುರೀಯವನ್ನು ತಿಳಿಸುವದಕ್ಕೆ ಪ್ರಯತ್ನಮಾಡಿರುತ್ತದೆ.

## ತುರೀಯವು ನಿರ್ವಿಶೇಷವಾದರೂ ಶೂನ್ಯವಲ್ಲ

(ಭಾಷ್ಯ)

೩೫. ಶೂನ್ಯಮೇವ ತರ್ಹಿ ತತ್ । ನ । ಮಿಥ್ಯಾವಿಕಲ್ಪಸ್ಯ ನಿರ್ನಿಮಿತ್ತತ್ವಾನುಪಪತ್ತೇಃ । ನ ಹಿ ರಜತಸರ್ಪಪುರುಷಮೃಗತೃಷ್ಣಿಕಾದಿವಿಕಲ್ಪಾಃ ಶುಕ್ತಿಕಾರಜ್ಜುಸ್ಥಾಣೂಷರಾದಿವ್ಯತಿರೇಕೇಣ ಅವಸ್ತ್ವಾಸ್ಪದಾಃ ಶಕ್ಯಾಃ ಕಲ್ಪಯಿತುಮ್ । ಏವಂ ತರ್ಹಿ ಪ್ರಾಣಾದಿ ಸರ್ವವಿಕಲ್ಪಾಸ್ಪದತ್ವಾತ್ ತುರೀಯಸ್ಯ ಶಬ್ದವಾಚ್ಯತ್ವಮ್ ಇತಿ ನ ಪ್ರತಿಷೇಧ್ಯೈಃ ಪ್ರತ್ಯಾಯ್ಯತ್ವಮ್ ಉದಕಾದ್ಯಾಧಾರಸ್ಯೇವ[4] ಘಟಾದೇಃ । ನ । ಪ್ರಾಣಾದಿವಿಕಲ್ಪಸ್ಯ ಅಸತ್ತ್ವಾತ್ ಶುಕ್ತಿಕಾದಿಷ್ವಿವ ರಜತಾದೇಃ । ನ ಹಿ ಸದಸತೋಃ ಸಂಬನ್ಧಃ ಶಬ್ದ

---

1. ಇಲ್ಲಿ ಮುದ್ರಿತಪುಸ್ತಕಗಳಲ್ಲಿ ಚ ಎಂದು ಹೆಚ್ಚಾಗಿದೆ.

2. ವಿಶ್ವ, ತೈಜಸ, ಪ್ರಾಜ್ಞ-ಎಂಬ ಮೂರು ಪಾದಗಳನ್ನು ಹೇಳಿದ್ದಾಯಿತು. ಈಗ ನಾಲ್ಕನೆಯ ಪಾದವನ್ನು ಹೇಳಬೇಕಾಗಿದೆ.

3. ಇಂಥದ್ದು ಎಂದು ವಿಶ್ವಾದಿಗಳನ್ನು ಆಯಾ ಅವಸ್ಥೆ, ಸ್ವಭಾವ-ಮುಂತಾದ ವಿಶೇಷಗಳಿಂದ ತಿಳಿಸಿತ್ತು ; ತುರೀಯವನ್ನು ಹಾಗೆ ಹೇಳುವದಕ್ಕೆ ಬೇಕಾದ ಸಂಬಂಧ ಜಾತಿ-ಮುಂತಾದ ಯಾವದೂ ಅದರಲ್ಲಿಲ್ಲ. ಇದು ಮುಂದೆ ಭಾಷ್ಯದಲ್ಲಿ ವಿಶದವಾಗುವದು.

4. "ಉದಕಾಧಾರಾದೇಃ" ಎಂಬ ಪಾಠಕ್ಕಿಂತ ಇದು ಉತ್ತಮ.

ಪ್ರವೃತ್ತಿನಿಮಿತ್ತಭಾಕ್ ಅವಸ್ತುತ್ವಾತ್ ನಾಪಿ ಪ್ರಮಾಣಾನ್ತರವಿಷಯತ್ವಂ ಸ್ವರೂಪೇಣ[1] । ಆತ್ಮನೋ ನಿರುಪಾಧಿಕತ್ವಾತ್ । ಗವಾದಿವತ್ ನಾಪಿ ಜಾತಿಮತ್ತ್ವಮ್ । ಅದ್ವಿತೀಯತ್ವೇನ ಸಾಮಾನ್ಯವಿಶೇಷಾಭಾವಾತ್ । ನಾಪಿ ಕ್ರಿಯಾವತ್ತ್ವಂ ಪಾಚಕಾದಿವತ್ । ಅವಿಕ್ರಿಯತ್ವಾತ್ । ನಾಪಿ ಗುಣವತ್ತ್ವಂ ನೀಲಾದಿವತ್ । ನಿರ್ಗುಣತ್ವಾತ್ । ಅತೋ ನಾಭಿಧಾನೇನ ನಿರ್ದೇಶಮರ್ಹತಿ ॥

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ಅದು ಶೂನ್ಯವೆಂದೇ ಆಯಿತಲ್ಲ ?

(ಪರಿಹಾರ) :- ಹಾಗಲ್ಲ. ಏಕೆಂದರೆ ಹುಸಿಯಾದ ವಿಕಲ್ಪವು[2] ನಿಮಿತ್ತ[3]ವಿಲ್ಲದೆ ಇರಲಾರದು. ಬೆಳ್ಳಿ, ಹಾವು, ಮನುಷ್ಯ, ಬಿಸಿಲುಕುದುರೆಯ (ನೀರು) ಮುಂತಾದ ವಿಕಲ್ಪಗಳು ಕಪ್ಪೆಯ ಚಿಪ್ಪು, ಹಗ್ಗ, ಮೋಟುಮರ, ಮರುಭೂಮಿ-ಮುಂತಾದವುಗಳಿಲ್ಲದೆ ಯಾವ ವಸ್ತುವೂ ಆಸ್ಪದವಾಗಿಲ್ಲದೆ ಇರುವವೆಂದು ಕಲ್ಪಿಸುವದಕ್ಕೆ ಆಗುವದಿಲ್ಲವಷ್ಟೆ.

(ಆಕ್ಷೇಪ) :- ಹಾಗಾದರೆ ಪ್ರಾಣನೇ ಮುಂತಾದ ಎಲ್ಲಾ ವಿಕಲ್ಪಗಳಿಗೂ ಆಸ್ಪದವಾಗಿರುವದರಿಂದ ತುರೀಯನನ್ನು ಶಬ್ದದಿಂದ ಹೇಳಬಹುದು (ಎಂದಾಯಿತು). ಆದ್ದರಿಂದ ನೀರು ಮುಂತಾದವಕ್ಕೆ ಆಧಾರವಾಗಿರುವ ಘಟಾದಿಗಳಂತೆ (ಶಬ್ದವಾಚ್ಯನಾಗಿರುವ ತುರೀಯನನ್ನು ವಿಶೇಷಗಳನ್ನು) ಅಲ್ಲಗಳೆಯುವದರಿಂದಲೇ ತಿಳಿಸಬೇಕೆಂಬುದೇನೂ ಇರುವದಿಲ್ಲ[4].

(ಪರಿಹಾರ) :- ಹಾಗಲ್ಲ. ಏಕೆಂದರೆ ಕಪ್ಪೆಯಚಿಪ್ಪು ಮುಂತಾದವರಲ್ಲಿ (ತೋರುವ) ಬೆಳ್ಳಿ ಮುಂತಾದವುಗಳಂತೆ ಪ್ರಾಣನೇ ಮುಂತಾದ ವಿಕಲ್ಪವು ಅಸತ್ತಾಗಿರುತ್ತದೆ. ಸತ್ತು ಮತ್ತು ಅಸತ್ತು-ಇವುಗಳ ಸಂಬಂಧವು ಶಬ್ದಪ್ರವೃತ್ತಿಗೆ ಬೇಕಾದ ನಿಮಿತ್ತವುಳ್ಳದ್ದಲ್ಲ ; ಏಕೆಂದರೆ ಅದು (ನಿಜವಾದ) ವಸ್ತುವಲ್ಲ[5]. (ತುರೀಯನು) ತನ್ನ

---

1. ಇದಾದಮೇಲೆ ''ಗವಾದಿವತ್'' ಎಂಬ ಮಾತು ಅಚ್ಚಿನ ಪುಸ್ತಕಗಳಲ್ಲಿದೆ. ಅದನ್ನು ಬೇಕಿಲ್ಲವೆಂದು ಬಿಟ್ಟುಬಿಟ್ಟಿದೆ

2. ವಸ್ತುಶೂನ್ಯವಾದ ಬರಿಯ ತೋರಿಕೆಯು.

3. ನಿಮಿತ್ತ, ಆಸ್ಪದ-ಎಂಬ ಮಾತುಗಳನ್ನು ಆರೋಪಿತವಸ್ತುವಿಗೆ ಎಡೆಯಾಗಿರುವ ಅಧಿಷ್ಠಾನ ಎಂಬರ್ಥದಲ್ಲಿ ಭಾಷ್ಯಕಾರರು ಉಪಯೋಗಿಸಿರುತ್ತಾರೆ.

4 ನೀರಿನ ಆಧಾರವನ್ನು ಆಧಾರವಾಗಿದೆ ಎಂದು ಸಂಬಂಧದಿಂದಲೂ ಗಡಿಗೆ ಎಂಬ ಮಾತಿನಿಂದಲೂ ತಿಳಿಸಬಹುದು ಇದರಂತೆ ತುರೀಯವನ್ನು ಅನಾತ್ಮದ ಸಂಬಂಧದಿಂದಲೂ ಅದನ್ನು ತಿಳಿಸುವ ವಾಚಕಶಬ್ದದಿಂದಲೂ ತಿಳಿಸಬಹುದಲ್ಲ ! - ಎಂದು ಭಾವ.

5 ಅದೂ ಏಕಲ್ಪವೇ ಆಗಿರುತ್ತದೆ

ರೂಪದಿಂದ ಪ್ರಮಾಣಾಂತರಕ್ಕೆ[1] ವಿಷಯನೂ ಅಲ್ಲ. ಏಕೆಂದರೆ ಆತ್ಮನಲ್ಲಿ ಯಾವ ಉಪಾಧಿಯೂ[2] ಇರುವದಿಲ್ಲ. ಗೋವು ಮುಂತಾದವುಗಳಂತೆ (ಅವನಲ್ಲಿರುವ) ಜಾತಿಯೂ (ನಿಮಿತ್ತವಲ್ಲ) ; ಏಕೆಂದರೆ (ಅವನು) ಅದ್ವಿತೀಯನಾಗಿರುವದರಿಂದ (ಅವನಲ್ಲಿ) ಸಾಮಾನ್ಯವಿಶೇಷಗಳು[3] ಇರುವದಿಲ್ಲ. ಅಡಿಗೆಯವನೇ ಮುಂತಾದವರಂತೆ ಕ್ರಿಯೆಯಿರುವದೂ (ಶಬ್ದಕ್ಕೆ ನಿಮಿತ್ತವಲ್ಲ) ; ಏಕೆಂದರೆ (ತುರೀಯನು) ವಿಕಾರ ರಹಿತನಾಗಿರುತ್ತಾನೆ[4]. ಕರಿಯ (ನೈದಿಲೆ) ಮುಂತಾದವುಗಳಂತೆ ಗುಣದಿಂದ ಕೂಡಿರುವದೂ (ನಿಮಿತ್ತ)ವಾಗಲಾರದು ; ಏಕೆಂದರೆ ಅವನು ನಿರ್ಗುಣನಾಗಿರುತ್ತಾನೆ. ಆದ್ದರಿಂದ ಮಾತಿನಿಂದ ತಿಳಿಸುವದಕ್ಕೆ ತಕ್ಕವನಲ್ಲ[5].

## ತುರೀಯವು ನಿಷ್ಪ್ರಯೋಜನವಸ್ತುವಲ್ಲ

(ಭಾಷ್ಯ)

೩೬. ಶಶವಿಷಾಣಾದಿಸಮತ್ವಾತ್ ನಿರರ್ಥಕತ್ವಂ ತರ್ಹಿ । ನ । ಆತ್ಮತ್ವಾವಗಮೇ ತುರೀಯಸ್ಯ ಅನಾತ್ಮತೃಷ್ಣಾವ್ಯಾವೃತ್ತಿಹೇತುತ್ವಾತ್ ಶುಕ್ತಿಕಾವಗಮೇ ಇವ ರಜತ ತೃಷ್ಣಾಯಾಃ । ನ ಹಿ ತುರೀಯಸ್ಯ ಆತ್ಮತ್ವಾವಗಮೇ ಸತಿ ಅವಿದ್ಯಾತೃಷ್ಣಾದಿದೋಷಾಣಾಂ ಸಂಭವಃ ಅಸ್ತಿ । ನ ಚ ತುರೀಯಸ್ಯ ಆತ್ಮತ್ವಾನವಗಮೇ ಕಾರಣಮ್ ಅಸ್ತಿ । ಸರ್ವೋಪನಿಷದಾಂ ತಾದರ್ಥ್ಯೇನ ಉಪಕ್ಷಯಾತ್ । "ತತ್ತ್ವಮಸಿ" (ಛಾಂ. ೬-೮-೭), "ಅಯಮಾತ್ಮಾ ಬ್ರಹ್ಮ" (ಬೃ. ೨-೫-೧೯), "ತತ್ಸತ್ಯಂ ಸ ಆತ್ಮಾ" (ಛಾ. ೬-೮-೭), "ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ" (ಬೃ. ೩-೪-೧), "ಸ ಬಾಹ್ಯಾಭ್ಯನ್ತರೋ ಹ್ಯಜಃ" (ಮು೦. ೨-೧-೨), "ಆತ್ಮೈವೇದಗ್ಂ ಸರ್ವಮ್ " (ಛಾಂ. ೮-೨೫-೨) ಇತ್ಯಾದೀನಾಮ್ ।।

1. ನಿಷೇಧಪ್ರಮಾಣವನ್ನು ಬಿಟ್ಟರೆ ಪ್ರತ್ಯಕ್ಷಾದಿಗಳಿಂದ ತಿಳಿಸುವದಕ್ಕೆ ಆಗಲಾರದು.

2. ಉಪಾಧಿಯೆಂದರೆ ಪ್ರಮಾಣಾಂತರಕ್ಕೆ ವಿಷಯವಾಗುವ ರೂಪಾದಿಗಳು, ಲಿಂಗಾದಿಗಳು. ಬ್ರಹ್ಮವು ಪ್ರಮಾಣಾಂತರವಿಷಯವಲ್ಲವೆಂಬದಕ್ಕೆ ಸೂ. ಭಾ. ೨-೧-೬ ನೋಡಿ.

3. ಗೋವೆಂಬ ವ್ಯಕ್ತಿಯಲ್ಲಿ ಗೋತ್ವವೆಂಬ ಸಾಮಾನ್ಯವಿರುತ್ತದೆ. ಸಾಮಾನ್ಯಕ್ಕೇ ಜಾತಿ ಎಂಬ ಮತ್ತೊಂದು ಹೆಸರು.

4. ವಿಕಾರವುಳ್ಳ ಅಡಿಗೆಯವನಲ್ಲಿ ಅಡುವದೆಂಬ ಕ್ರಿಯೆಯುಂಟಾಗಬಹುದು. ನಿರ್ವಿಕಾರವಾದ ಬ್ರಹ್ಮದಲ್ಲಿ ಆಗಲಾರದು.

5. ಈ ಅರ್ಥದ ಭಾಷ್ಯವು ಕೇ. ಭಾ. ೧-೩, ಗೀ. ಭಾ. ೧೩-೧೨, ತೈ. ಭಾ. ೨-೧. (ಭಾ. ಭಾ. ೧೦೭) ಇವುಗಳಲ್ಲಿದೆ.

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ಹೊಲದ ಕೊಂಬು ಮುಂತಾದವುಗಳಂತೆ (ತುರೀಯನು) ನಿಷ್ಪ್ರಯೋಜನವೆಂದಾಯಿತು.

(ಪರಿಹಾರ) :- ಹಾಗಲ್ಲ (ಇದು) ಕಪ್ಪೆಯಚಿಪ್ಪು ಎಂದು ನಿಶ್ಚಯಿಸಿಕೊಂಡರೆ ಬೆಳ್ಳಿಯ ಆಸೆ ಹೋಗಿಬಿಡುವಂತೆ (ಇವನು) ಆತ್ಮನೇ ಎಂದು ತುರೀಯನನ್ನು ನಿಶ್ಚಯಿಸಿಕೊಂಡರೆ ಅನಾತ್ಮದ ಆಸೆಯು ಹೋಗುವದಕ್ಕೆ ಕಾರಣವಾಗುತ್ತಾನೆ. ತುರೀಯನು ಆತ್ಮನೆಂದು ನಿಶ್ಚಯಿಸಿದರೆ ಅವಿದ್ಯೆ, ಕಾಮ ಮುಂತಾದ ದೋಷಗಳು ಇರುವಹಾಗಿಲ್ಲವಷ್ಟೆ[1] ತುರೀಯನು ಆತ್ಮನೆಂದು ನಿಶ್ಚಯವಾಗುವದಿಲ್ಲವೆಂಬುದಕ್ಕೆ ಕಾರಣವೂ ಇಲ್ಲ ; ಏಕೆಂದರೆ ಎಲ್ಲಾ ಉಪನಿಷತ್ತುಗಳೂ ಅದನ್ನು ಹೇಳುವದರಲ್ಲಿಯೇ ಕೊನೆಗೊಂಡಿರುತ್ತವೆ[2]. "ಅದೇ ನೀನಾಗಿರುವೆ" (ಛಾಂ. ೬-೮-೭), "ಈ ಆತ್ಮನು ಬ್ರಹ್ಮವು" (ಬೃ. ೨-೫-೧೯), "ಅದು ಸತ್ಯವು, ಅವನೇ ಆತ್ಮನು"[3] (ಛಾಂ. ೬-೮-೭) "ಯಾವದು ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವೋ, ಯಾವನು ಸರ್ವಾಂತರನಾದ ಆತ್ಮನೋ" (ಬೃ. ೩-೪-೧) "ಅವನು ಒಳಗೂ ಹೊರಗೂ ಅಜನು" (ಮುಂ. ೨-೧-೨) "ಇದೆಲ್ಲವೂ ಆತ್ಮನೇ" (ಛಾಂ. ೭-೨೫-೨) ಮುಂತಾದವುಗಳೆಲ್ಲವೂ[4] ಇದನ್ನೇ ಹೇಳುವದಕ್ಕೆ ಹೊರಟಿವೆ.

1. ತುರೀಯನನ್ನು ಅನಾತ್ಮವೆಂದು ತಪ್ಪಾಗಿ ತಿಳಿದುಕೊಂಡಿರುವದೇ ಅವಿದ್ಯೆ ; ಈ ಅವಿದ್ಯೆಯಿಂದ ಅನಾತ್ಮದ ವಿಷಯದಲ್ಲಿ ಕಾಮವೂ ಆ ಕಾಮದಿಂದ ಕರ್ಮವೂ ಆಗಿರುತ್ತದೆ. ತುರೀಯನು ಅದ್ವಿತೀಯನಾದ ಆತ್ಮನು ಎಂದು ನಿಶ್ಚಯವಾದರೆ ಇವು ಇರಲಾರವು.

2. ಸೂ. ಭಾ ೧-೧-೪, ಗೀ. ಭಾ. ೨-೨೦ (ಭಾ. ಭಾ. ೪೦) ಇವುಗಳಲ್ಲಿ ಬ್ರಹ್ಮವು ಶಾಸ್ತ್ರಪ್ರಮಾಣಕವೆಂಬುದನ್ನು ತಿಳಿಸಿದೆ ಈ ಉಪನಿಷತ್ತಿನಂತೆಯೇ ಎಲ್ಲಾ ಉಪನಿಷತ್ತುಗಳೂ ಆತ್ಮೈಕತ್ವವನ್ನು ತಿಳಿಸುವದರಿಂದ ವಿರುದ್ಧಾರ್ಥಬೋಧಕತ್ವವಿಲ್ಲ. ಸೂ. ಭಾ. ೩-೩-೧೮ರ ಅವತರಣಿಕೆ 'ನ್ನು ನೋಡಿ

3 ಸ ಆತ್ಮಾ ಎಂಬ ಮಾತು ಪ್ರಕೃತಮಂತ್ರದಲ್ಲಿಯೇ ಇದೆ. ಇದೇ ಅರ್ಥವನ್ನು ಶ್ರುತ್ಯಂತರದಲ್ಲಿ ಹೇಳಿದೆ ಎಂದು ತಿಳಿಸುವದಕ್ಕೆ ಇಲ್ಲಿ ಭಾಂದೋಗ್ಯವನ್ನು ಉದಾಹರಿಸಿದೆ.

4. ಒಳಗುಹೊರಗುಗಳು ಜೀವಾತ್ಮನಿಗೆ ಮಾತ್ರ ಸಂಭವಿಸುತ್ತವೆ. ಅಪ್ರಾಣ, ಅಮನ-ಎಂಬ ವಿಶೇಷಣಗಳು ಪ್ರಾಣಮನಸ್ಸುಗಳ ಸಂಬಂಧವನ್ನು ಅಲ್ಲಗಳೆಯುವದರಿಂದ ಜೀವನಿಗೆ ಹೊಂದುವದಿಲ್ಲ ಆದ್ದರಿಂದ ಈ ಶ್ರುತಿಯಲ್ಲಿ ಬ್ರಹ್ಮಾತ್ಮೈಕ್ಯವನ್ನೇ ಹೇಳಿದೆ ಎಂದು ಭಾವ.

## ತುರೀಯನು ಅಂತಃಪ್ರಜ್ಞಾದಿಗಳಿಗಿಂತ ಬೇರೆ ಎಂದಿರುವದರ ಪ್ರಯೋಜನ

(ಭಾಷ್ಯ)

೫೭. ಸೋಽಯಮ್ ಆತ್ಮಾ ಪರಮಾರ್ಥಾಪರಮಾರ್ಥರೂಪಃ ಚತುಷ್ಪಾತ್ ಇತ್ಯುಕ್ತಃ ತಸ್ಯ ಅಪರಮಾರ್ಥರೂಪಮ್ ಅವಿದ್ಯಾಕೃತಂ ರಜ್ಜುಸರ್ಪಾದಿಸಮಮ್ ಉಕ್ತಂ ಪಾದತ್ರಯಲಕ್ಷಣಂ ಬೀಜಾಙ್ಕುರಸ್ಥಾನೀಯಮ್ । ಅಥ ಇದಾನೀಮ್ ಅಬೀಜಾತ್ಮಕಂ ಪರಮಾರ್ಥಸ್ವರೂಪಂ ರಜ್ಜುಸ್ಥಾನೀಯಂ ಸರ್ಪಾದಿಸ್ಥಾನೀಯೋಕ್ತ ಸ್ಥಾನತ್ರಯನಿರಾಕರಣೇನ ಆಹ-"ನಾನ್ತಃಪ್ರಜ್ಞಮ್" ಇತ್ಯಾದಿ ॥

(ಭಾಷ್ಯಾರ್ಥ)

ಅಂಥ ಈ ಆತ್ಮನು ನಿಜವಾದ ಮತ್ತು ನಿಜವಲ್ಲದ ರೂಪಗಳಿಂದ ಕೂಡಿರುವದರಿಂದ ಚತುಷ್ಪಾದನು ಎಂದು ಹೇಳಿರುತ್ತದೆಯಷ್ಟೆ[1]. ಅವನಿಗೆ ಅವಿದ್ಯಾಕೃತವಾದ ಹಗ್ಗದ ಹಾವೇ ಮುಂತಾದವುಗಳಂತೆ ಇರುವ ಬೀಜಮೊಳಕೆಗಳ ಸ್ಥಾನದಲ್ಲಿರುವ ಪಾದತ್ರಯವೆಂಬ ನಿಜವಲ್ಲದ ರೂಪವನ್ನು ಹೇಳಿದ್ದಾಯಿತು. ಇನ್ನು ಈಗ ಬೀಜರೂಪವಲ್ಲದ[2] ಹಗ್ಗದಂತಿರುವ ನಿಜವಾದ ರೂಪವನ್ನು ಹಾವೇ ಮುಂತಾದವುಗಳಂತಿರುವ ಮೇಲೆ ಹೇಳಿದ ಮೂರುಸ್ಥಾನಗಳನ್ನೂ ಅಲ್ಲಗಳೆಯುವ-ಮೂಲಕವಾಗಿ "ನಾನ್ತಃಪ್ರಜ್ಞಮ್"-ಎಂದು ಮುಂತಾದ ವಾಕ್ಯದಿಂದ (ಶ್ರುತಿಯು) ತಿಳಿಸುತ್ತದೆ.

(ಭಾಷ್ಯ)

೫೮. ನನು ಆತ್ಮನಃ ಚತುಷ್ಪಾತ್ತ್ವಂ ಪ್ರತಿಜ್ಞಾಯ ಪಾದತ್ರಯಕಥನೇನೈವ ಚತುರ್ಥಸ್ಯ ಅನ್ತಃಪ್ರಜ್ಞಾದಿಭ್ಯೋಽನ್ಯತ್ವೇ ಸಿದ್ಧೇ "ನಾನ್ತಃಪ್ರಜ್ಞಮ್" ಇತ್ಯಾದಿ ಪ್ರತಿಷೇಧಃ ಅನರ್ಥಕಃ । ನ । ಸರ್ಪಾದಿವಿಕಲ್ಪಪ್ರತಿಷೇಧೇನೈವ ರಜ್ಜುಸ್ವರೂಪಪ್ರತಿಪತ್ತಿವತ್ ತ್ರ್ಯವಸ್ಥಸ್ಯೈವ ಆತ್ಮನಃ ತುರೀಯತ್ವೇನ ಪ್ರತಿಪಿಪಾದಯಿಷಿತತ್ವಾತ್ । "ತತ್ತ್ವಮಸಿ" ಇತಿವತ್ । ಯದಿ ಹಿ ತ್ರ್ಯವಸ್ಥಾತ್ಮವಿಲಕ್ಷಣಂ ತುರೀಯಮ್ ಅನ್ಯತ್, ತತ್ಪ್ರತಿಪತ್ತಿದ್ವಾರಾಭಾವಾತ್ ಶಾಸ್ತ್ರೋಪದೇಶಾನರ್ಥಕ್ಯಂ ಶೂನ್ಯತಾಪತ್ತಿರ್ವಾ ॥

---

1. ಆತ್ಮನು ಪರಮಾರ್ಥಾಪರಮಾರ್ಥರೂಪಗಳುಳ್ಳವನೆಂಬ ವಾಕ್ಯವು ಶ್ರುತಿಯಲ್ಲಿಲ್ಲ. ಆದರೂ ಪ್ರಕೃತಮಂತ್ರದಿಂದ ಇದು ಏರ್ಪಡುತ್ತದೆ ಎಂದು ಭಾವ.

2. ಪ್ರಾಜ್ಞನಿಗೆ ಅಬೀಜಾವಸ್ಥೆಯನ್ನು ಮುಂದೆ ಹೇಳಲಾಗುತ್ತದೆ ಎಂದು ೨೫ನೆಯ ಕಾರಿಕೆಯ ಭಾಷ್ಯದ ಕೊನೆಯಲ್ಲಿ ಹೇಳಿದ್ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

(ಭಾಷ್ಯಾರ್ಥ)

(ಆಕ್ಷೇಪ) :- ಆತ್ಮನಿಗೆ ನಾಲ್ಕುಪಾದಗಳಿವೆ ಎಂದು ಹೇಳಿ ಮೂರು ಪಾದಗಳನ್ನು ಹೇಳಿದ್ದರಿಂದಲೇ ನಾಲ್ಕನೆಯದು ಅಂತಃಪ್ರಜ್ಞಾದಿಗಳಿಗಿಂತ ಬೇರೆ ಎಂದು ಸಿದ್ಧವಾಗಿರುವಾಗ (ಮತ್ತೆ) 'ನಾನ್ತಃಪ್ರಜ್ಞಮ್' (ಅಂತಃಪ್ರಜ್ಞನಲ್ಲದ) ಎಂದು ಮುಂತಾಗಿರುವ ಪ್ರತಿಷೇಧವು ವ್ಯರ್ಥವಲ್ಲವೆ ?

(ಪರಿಹಾರ) :- ಹಾಗಲ್ಲ. ಏಕೆಂದರೆ ಹಾವು ಮುಂತಾದ ವಿಕಲ್ಪಗಳನ್ನು ಅಲ್ಲಗಳೆಯುವದರಿಂದಲೇ ಹಗ್ಗದ ಸ್ವರೂಪದ ಅರಿವನ್ನು (ಮಾಡಿಕೊಡುವಂತೆ) ಮೂರವಸ್ಥೆಗಳ ಆತ್ಮನನ್ನೇ "ನೀನು ಅದಾಗಿರುತ್ತೀಯೆ"[1] (ಛಾಂ. ೬-೮-೭) ಎಂಬಂತೆ ತುರೀಯನೆಂದು ಹೇಳುವದಕ್ಕೆ ಹೊರಟಿರುತ್ತದೆ[2]. ತುರೀಯವು ಮೂರವಸ್ಥೆಯ ಆತ್ಮನಿಗಿಂತ ಬೇರೆಯ ಸ್ವಭಾವದ್ದಾಗಿದ್ದರೆ[3] ಅದನ್ನು ಅರಿಯುವದಕ್ಕೆ ದ್ವಾರವೇ ಇಲ್ಲದ್ದರಿಂದ ಶಾಸ್ತ್ರವನ್ನು ಉಪದೇಶಮಾಡಿರುವದು ವ್ಯರ್ಥವಾಗುತ್ತಿತ್ತು. ಅಥವಾ (ತುರೀಯವು) ಶೂನ್ಯವೆಂದಾಗುತ್ತಿತ್ತು[4].

## ಪ್ರತಿಷೇಧವಾಕ್ಯದ ಪ್ರಾಮಾಣ್ಯ

(ಭಾಷ್ಯ)

೩೯. ರಜ್ಜುರಿವ ಸರ್ಪಾದಿಭಿಃ ವಿಕಲ್ಪ್ಯಮಾನಾ ಸ್ಥಾನತ್ರಯೇಽಪಿ ಆತ್ಮಾ ವಿಕ ಏವ ಅನ್ತಃಪ್ರಜ್ಞಾದಿತ್ವೇನ ವಿಕಲ್ಪ್ಯತೇ ಯದಾ, ತದಾ ಅನ್ತಃಪ್ರಜ್ಞಾದಿತ್ವಪ್ರತಿಷೇಧ ವಿಜ್ಞಾನಪ್ರಮಾಣಸಮಕಾಲಮೇವ ಆತ್ಮನಿ ಅನರ್ಥಪ್ರಪಞ್ಚನಿವೃತ್ತಿಲಕ್ಷಣಫಲಂ ಪರಿಸಮಾಪ್ತಮ್ ಇತಿ ತುರೀಯಾಧಿಗಮೇ ಪ್ರಮಾಣಾನ್ತರಂ ಸಾಧನಾನ್ತರಂ ವಾ ನ ಮೃಗ್ಯಮ್ । ರಜ್ಜುಸರ್ಪವಿವೇಕಸಮಕಾಲೇ ಇವ ರಜ್ಜ್ವಾದಿ ಸರ್ಪನಿವೃತ್ತಿಫಲೇ ಸತಿ

1. ಇಲ್ಲಿ ಸಂಸಾರಿತ್ವವನ್ನು ತ್ವಂ (ನೀನು ಎಂಬ) ಪದದಿಂದ ಹೇಳಿ ಅದನ್ನು ಅಲ್ಲಗಳೆದು ತತ್ (ಅದು ಎಂಬ ಪದದಿಂದ) ಬ್ರಹ್ಮಸ್ವರೂಪವನ್ನು ತಿಳಿಸಿರುತ್ತದೆ-ಎಂದು ಭಾವ. ವ್ಯಾಖ್ಯಾನದಲ್ಲಿ ಈ ವಾಕ್ಯವು ವಿಧಿಮುಖವಾದ ಉಪದೇಶವೆಂದಿರುವದು ಬಾಧಸಾಮಾನಾಧಿಕರಣ್ಯವನ್ನು ಇಟ್ಟುಕೊಳ್ಳದೆ ಆಡಿದ ಮಾತು ಪ್ರಕೃತಕ್ಕೆ ನಮ್ಮ ವಿವರಣೆಯೇ ಹೆಚ್ಚು ಹೊಂದುತ್ತದೆ.

2. ವಿಶ್ವಾದಿಗಳ ವಿಶ್ವತ್ವಾದಿಯನ್ನು ಕಳೆದರೆ ಉಳಿಯುವದೇ ತುರೀಯವು ಎಂದು ಭಾವ.

3. ಒಂದೊಂದು ಅವಸ್ಥೆಯಲ್ಲಿರುವ ಆತ್ಮನೇ ಪರಮಾರ್ಥವಾಗಿ ತುರೀಯವಲ್ಲದಿದ್ದರೆ.

4. ಶಾಸ್ತ್ರವು ಅಬೋಧಕವೆಂದೋ ವಿಪರೀತಬೋಧಕವೆಂದೋ ಆಗಿ ಅಪ್ರಮಾಣವಾಗುತ್ತಿತ್ತು ಎಂದು ಭಾವ

ರಜ್ಜ್ವಧಿಗಮಸ್ಯ । ಯೇಷಾಂ ಪುನಃ ತಮೋಽಪನಯವ್ಯತಿರೇಕೇಣ ಘಟಾಧಿಗಮೇ ಪ್ರಮಾಣಂ ವ್ಯಾಪ್ರಿಯತೇ ತೇಷಾಂ ಛೇದ್ಯಾವಯವಸಂಬನ್ಧವಿಯೋಗವ್ಯತಿರೇಕೇಣ ಅನ್ಯತರಾವಯವೇಽಪಿ ಛಿದಿರ್ವ್ಯಾಪ್ರಿಯತೇ ಇತಿ ಉಕ್ತಂ ಸ್ಯಾತ್ । ಯದಾ ಪುನಃ ಘಟಿತಮಸೋರ್ವಿವೇಕಕರಣೇ ಪ್ರವೃತ್ತಂ ಪ್ರಮಾಣಮ್ ಅನುಪಾದಿತ್ಸಿತತಮೋ ನಿವೃತ್ತಿಫಲಾವಸಾನಂ ಛಿದಿರಿವ ಛೇದ್ಯಾವಯವಸಂಬನ್ಧವಿವೇಕಕರಣೇ[1] ಪ್ರವೃತ್ತಾ ತದವಯವದ್ವ್ಯೂಢೀಭಾವಫಲಾವಸಾನಾ ತದಾ ನಾನ್ತರೀಯಕಂ ಘಟವಿಜ್ಞಾನಮ್ ನ ತತ್[2] ಪ್ರಮಾಣಫಲಮ್ । ನ ಚ ತದ್ವತ್ ಅತ್ರಾಪಿ[3] ಆತ್ಮನ್ಯಧ್ಯಾರೋಪಿತಾನ್ತಃಪ್ರಜ್ಞತ್ವಾದಿವಿವೇಕಕರಣೇ ಪ್ರವೃತ್ತಸ್ಯ ಪ್ರತಿಷೇಧವಿಜ್ಞಾನಪ್ರಮಾಣಸ್ಯ ಅನುಪಾದಿತ್ಸಿತಾನ್ತಃಪ್ರಜ್ಞತ್ವಾದಿನಿವೃತ್ತಿವ್ಯತಿರೇಕೇಣ ತುರೀಯೇ ವ್ಯಾಪಾರೋಪಪತ್ತಿಃ । ಅನ್ತಃಪ್ರಜ್ಞತ್ವಾದಿನಿವೃತ್ತಿಸಮಕಾಲಮೇವ ಪ್ರಮಾತೃತ್ವಾದಿಭೇದನಿವೃತ್ತೇಃ । ತಥಾ ಚ ವಕ್ಷ್ಯತಿ-"ಜ್ಞಾತೇ ದ್ವೈತಂ ನ ವಿದ್ಯತೇ" (೧-೧೮) ಇತಿ । ಜ್ಞಾನಸ್ಯ ದ್ವೈತ ನಿವೃತ್ತಿಕ್ಷಣವ್ಯತಿರೇಕೇಣ ಕ್ಷಣಾನ್ತರಾನವಸ್ಥಾನಾತ್ । ಅವಸ್ಥಾನೇ ಚ ಅನವಸ್ಥಾ ಪ್ರಸಜ್ಯಾತ್ ದ್ವೈತಾನಿವೃತ್ತಿಃ । ತಸ್ಮಾತ್ ಪ್ರತಿಷೇಧವಿಜ್ಞಾನಪ್ರಮಾಣವ್ಯಾಪಾರಸಮಕಾಲ ಮೇವ ಆತ್ಮನ್ಯಧ್ಯಾರೋಪಿತಾನ್ತಃಪ್ರಜ್ಞತ್ವಾದ್ಯನರ್ಥನಿವೃತ್ತಿರಿತಿ ಸಿದ್ಧಮ್ ॥

(ಭಾಷ್ಯಾರ್ಥ)

ಹಾವು ಮುಂತಾದವುಗಳ ರೂಪದಿಂದ ವಿಕಲ್ಪಿಸಿರುವ ಹಗ್ಗದಂತೆ ಮೂರು ಅವಸ್ಥೆಯಲ್ಲಿಯೂ ಒಬ್ಬನೇ ಆತ್ಮನು ಅಂತಃಪ್ರಜ್ಞನು ಎಂದು ಮುಂತಾಗಿ ವಿಕಲ್ಪಿಸಿರುತ್ತದೆ - ಎಂದು ಯಾವಾಗ (ಒಪ್ಪುತ್ತೀವೋ) ಆಗ ಅನ್ತಃಪ್ರಜ್ಞತ್ವವೇ ಮುಂತಾದವನ್ನು ಅಲ್ಲಗಳೆಯುವ ವಿಜ್ಞಾನವೆಂಬ ಪ್ರಮಾಣವುಂಟಾದ ಸಮಕಾಲ ದಲ್ಲಿಯೇ ಆತ್ಮನಲ್ಲಿ ಅನರ್ಥಗಳ ಪ್ರಪಂಚವು ತೊಲಗುವದೆಂಬ ಫಲವು ಆಗಿ ಬಿಡುವದು. ಆದ್ದರಿಂದ ತುರೀಯನನ್ನು ಅರಿತುಕೊಳ್ಳುವದಕ್ಕೆ ಇನ್ನೊಂದು ಪ್ರಮಾಣ

1. "ವಿಭೇದಕರಣೇ" ಎಂದು ಪಾಠಾಂತರ.

2. ಈ ಮಾತು ವಾ ॥ ಪಾಠದಲ್ಲಿಲ್ಲ.

3. "ತದ್ವದಪಿ" ಎಂದೇ ಬಹಳ ಪುಸ್ತಕಗಳಲ್ಲಿದೆ ; ಅತ್ರಾಪಿ ಎಂಬ ಪಾಠವು ಸ್ಪಷ್ಟವಾದ ಅರ್ಥವನ್ನು ಕೊಡುತ್ತದೆ.

ವನ್ನಾಗಲಿ ಇನ್ನೊಂದು ಸಾಧನವನ್ನಾಗಲಿ ಹುಡುಕಬೇಕಾದದ್ದಿರುವದಿಲ್ಲ[1]. ಹಗ್ಗ, ಹಾವು-ಇವುಗಳನ್ನು ವಿಂಗಡಿಸಿ ಅರಿಯುವ[2] ಸಮಕಾಲದಲ್ಲಿಯೇ ಹಗ್ಗದಲ್ಲಿ ಹಾವು ಹೋಗುವ ದೆಂಬ ಫಲವು ಆಗಿಬಿಡುವದರಿಂದ ಹಗ್ಗವನ್ನು ಅರಿಯುವದಕ್ಕೆ (ಬೇರೊಂದು ಹೇಗೆ ಬೇಕಾಗುವದಿಲ್ಲವೋ ಹಾಗೆಯೇ ಇದು).

ಆದರೆ ಯಾರ (ಮತದಲ್ಲಿ) ಅಜ್ಞಾನವನ್ನು ಕಳೆಯುವದೇ ಅಲ್ಲದೆ ಘಟವನ್ನು ಅರಿಯುವದರಲ್ಲಿಯೂ, ಪ್ರಮಾಣವು ವ್ಯಾಪಾರಮಾಡಬೇಕಾಗಿರವದೋ[3] ಅವರು ಕಡಿಯುವ (ವಸ್ತುವಿನ) ಅವಯವಗಳ ಸಂಬಂಧವನ್ನು ತಪ್ಪಿಸುವದೇ ಅಲ್ಲದೆ (ಅದರ) ಒಂದೊಂದು ಅವಯವದಲ್ಲಿಯೂ ಕಡಿಯೋಣ (ಎಂಬ ಕ್ರಿಯೆಯು) ಕೆಲಸಮಾಡುತ್ತದೆ ಎಂದು ಹೇಳಿದಂತೆ ಆಗುವದು. ಹಾಗಲ್ಲದೆ ಗಡಿಗೆ, ಅಜ್ಞಾನ-ಇವೆರಡನ್ನೂ ವಿಂಗಡಿಸುವದಕ್ಕೆ[4] ಹೊರಟಿರುವ ಪ್ರಮಾಣವು-ಕಡಿಯಬೇಕಾದ (ವಸ್ತುವಿನ) ಅವಯವಗಳ ಸಂಬಂಧವನ್ನು ತಪ್ಪಿಸುವದಕ್ಕೆ ಹೊರಟಿದ್ದ ಕಡಿಯೋಣ (ಎಂಬ ಕ್ರಿಯೆಯು) ಆ (ವಸ್ತುವಿನ) ಅವಯವಗಳನ್ನು ಎರಡುಪಾಲು ಮಾಡುವದೆಂಬ ಫಲದಲ್ಲಿ ಕೊನೆಗಾಣುವಂತೆ-ಬೇಕಿಲ್ಲದ ಅಜ್ಞಾನವನ್ನು ಕಳೆಯುವದೆಂಬ ಫಲದಲ್ಲಿಯೇ ಕೊನೆಗಾಣುವದೆಂದು ಯಾವಾಗ (ಒಪ್ಪುವೆವೋ), ಆಗ ಘಟದ ಅರಿವು (ಅಜ್ಞಾನವು ಹೋದ ಒಡನೆ) ತಾನೇ ಆಗಿಬಿಡುವದು ; ಅದು ಪ್ರಮಾಣದ ಫಲವಲ್ಲ[5]. ಅದರಂತೆಯೇ ಇಲ್ಲಿಯೂ ಆತ್ಮನಲ್ಲಿ ಕಲ್ಪಿಸಿರುವ ಅಂತಃಪ್ರಜ್ಞತ್ವವೇ ಮುಂತಾದದ್ದನ್ನು ಬಿಡಿಸುವದಕ್ಕೆ ಹೊರಟಿರುವ ಪ್ರತಿಷೇಧ ವಿಜ್ಞಾನವೆಂಬ ಪ್ರಮಾಣವು ಬೇಕಿಲ್ಲದ ಅಂತಃಪ್ರಜ್ಞತ್ವವೇ ಮುಂತಾದದ್ದರ ನಿವೃತ್ತಿಯೇ

---

1. ಆತ್ಮನನ್ನು ತಿಳಿಸುವ ವೇದಾಂತವಾಕ್ಯವು ಸ್ವತಃ ಪ್ರಮಾಣವಲ್ಲವೆಂದೂ ಆ ವಾಕ್ಯದಿಂದ ಉಂಟಾಗಬೇಕಾದ ಮತ್ತೊಂದು ಜ್ಞಾನವೇ ಆತ್ಮಸಾಕ್ಷಾತ್ಕಾರವನ್ನುಂಟುಮಾಡುವ ಪ್ರಮಾಣವೆಂದೂ ಕೆಲವರು ವೇದಾಂತಿಗಳು ಅನ್ನುತ್ತಿದ್ದರು. ವಾಕ್ಯಜನ್ಯಜ್ಞಾನವನ್ನು ಮತ್ತೆ ಮತ್ತೆ ಬಿಡಿಸುವದರಿಂದಲೇ ಅಜ್ಞಾನವು ದೂರ ತೊಲಗುವದರಿಂದ ಪ್ರಸಂಖ್ಯಾನವೆಂಬ ಸಾಧನವು ಅವಶ್ಯವೆಂದು ಮತ್ತೆ ಕೆಲವರು ಹೇಳುತ್ತಿದ್ದರು. ಅವರಿಬ್ಬರ ಮತವನ್ನೂ ಇಲ್ಲಿ ಖಂಡಿಸಿದೆ.

2. ಹಾವು ಅಸತ್ಯವೆಂದೂ ಹಗ್ಗವೊಂದೇ ಸತ್ಯವೆಂದೂ ಅರಿಯುವದೇ ಈ ವಿವೇಕವು. ಗೀ. ಭಾ. ೧೩-೨೬ ರಲ್ಲಿ ಹೇಳಿರುವ ಕ್ಷೇತ್ರಕ್ಷೇತ್ರಜ್ಞವಿವೇಕವನ್ನೂ ಗೀ ಭಾ. ೨-೧೪ ರಲ್ಲಿ ವರ್ಣಿಸಿರುವ ಸದಸದ್ವಿವೇಕಜ್ಞಾನವನ್ನೂ ನೋಡಿರಿ

3. ಗಡಿಗೆಯನ್ನು ಅರಿಯುವದೆಂದರೆ ಅದರ ಅಜ್ಞಾನವನ್ನು ಕಳೆಯುವದೇ ಅಲ್ಲದೆ ಅದರಲ್ಲಿ ಜ್ಞಾತತ್ವವನ್ನುಂಟುಮಾಡುವದೆಂಬುದೂ ಬೇರೆ ಇದೆ ಎಂಬ ಮೀಮಾಂಸಕರ ಖಂಡನೆ ಇದು.

4. ಅಜ್ಞಾನವನ್ನು ಕಳೆದು ಗಡಿಗೆಯನ್ನು ಉಳಿಸುವದಕ್ಕೆ

5. ಕತ್ತಲೆಯನ್ನು ಕಳೆದ ಬಳಿಕ ಗಡಿಗೆಯನ್ನು ತೋರುಸಿಕೊಡುವದೆಂಬ ವ್ಯಾಪಾರವು ಬೇರೆಯಾಗಿ ದೀಪಕ್ಕೆ ಇರುವಬಲ್ಲ. ಇದರಂತೆಯೇ ಪ್ರಮಾಣವ್ಯಾಪಾರವನ್ನೂ ತಿಳಿಯಬೇಕು.

ಅಲ್ಲದೆ ತುರೀಯವಿಷಯದಲ್ಲಿಯೂ ಕೆಲಸಮಾಡುತ್ತದೆ ಎಂಬುದು ಯುಕ್ತವಾಗುವದಿಲ್ಲ. ಏಕೆಂದರೆ ಅಂತಃಪ್ರಜ್ಞತ್ವಾದಿಗಳು ತೊಲಗುವ ಸಮಕಾಲದಲ್ಲಿಯೇ ಪ್ರಮಾತೃತ್ವವೇ ಮುಂತಾದ ಭೇದವು ಹೋಗಿಬಿಡುತ್ತದೆ[1]. ಆದ್ದರಿಂದಲೇ ಮುಂದ "(ತತ್ತ್ವವನ್ನು) ಅರಿತ ಬಳಿಕ ದ್ವೈತವು ಇರುವದಿಲ್ಲ." (ಕಾ. ೧-೧೮) ಎಂದು (ಕಾರಿಕಾಕಾರರು) ಹೇಳಿರುತ್ತಾರೆ. ಜ್ಞಾನವು ದ್ವೈತನಿವೃತ್ತಿಯಾದ ಕ್ಷಣವನ್ನು ಬಿಟ್ಟು ಇನ್ನೊಂದು ಕ್ಷಣವೂ ನಿಲ್ಲುವಂತಿಲ್ಲ[2]. ನಿಲ್ಲುತ್ತದೆ ಎಂದರೆ ಅನವಸ್ಥಾದೋಷವು ಉಂಟಾಗಬೇಕಾಗುವದರಿಂದ[3] ದ್ವೈತವೇ ಹೋಗುವದಿಲ್ಲವೆಂದಾಗುವದು. ಆದ್ದರಿಂದ ಪ್ರತಿಷೇಧವಿಜ್ಞಾನವೆಂಬ ಪ್ರಮಾಣವು ಕೆಲಸಮಾಡುವ ಸಮಕಾಲದಲ್ಲಿಯೇ ಆತ್ಮನಲ್ಲಿ ಹುಟ್ಟುಗಟ್ಟಿರುವ ಅಂತಃಪ್ರಜ್ಞತ್ವವೇ ಮುಂತಾದ ಅನರ್ಥವು ಹೋಗಿಬಿಡುವದು ಎಂದು ಸಿದ್ಧವಾಯಿತು.

## (ಉಪನಿಷತ್ತು)

ನಾನ್ತಃಪ್ರಜ್ಞಂ ನ ಬಹಿಷ್ಪ್ರಜ್ಞಂ ನೋಭಯತಃಪ್ರಜ್ಞಂ ನ
ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಮ್ । ಅದೃಷ್ಟ[4]ಮವ್ಯವ-
ಹಾರ್ಯಮಗ್ರಾಹ್ಯಮಲಕ್ಷಣಮಚಿನ್ತ್ಯಮವ್ಯಪದೇಶ್ಯ-
ಮೇಕಾತ್ಮಪ್ರತ್ಯಯಸಾರಂ ಪ್ರಪಞ್ಚೋಪಶಮಂ ಶಾನ್ತಂ ಶಿವ-
ಮದ್ವೈತಂ ಚತುರ್ಥಂ ಮನ್ಯನ್ತೇ ಸ ಆತ್ಮಾ ಸ ವಿಜ್ಞೇಯಃ ॥೭॥

೭. ಅಂತಃಪ್ರಜ್ಞನಲ್ಲದ, ಬಹಿಷ್ಪ್ರಜ್ಞನಲ್ಲದ, ಎರಡೂ ಪ್ರಜ್ಞೆಗಳುಳ್ಳವನಲ್ಲದ, ಪ್ರಜ್ಞಾನಘನನಲ್ಲದ, ಪ್ರಜ್ಞನಲ್ಲದ, ಅಪ್ರಜ್ಞನಲ್ಲದ, ಕಾಣಲ್ಪಡದ, ವ್ಯವಹಾರಕ್ಕೆ ಸಿಕ್ಕದ, ಹಿಡಿಯುವದಕ್ಕೆ ಆಗದ, ಹೆಗ್ಗುರುತಿಲ್ಲದ, ಯೋಚಿಸುವ

---

1. ಇಂದ್ರಿಯಾದಿಪ್ರಮಾಣಗಳನ್ನು ಉಪಯೋಗಿಸುವವನೇ ಪ್ರಮಾತೃ. ಇಂದ್ರಿಯಾದಿಗಳು ವಿಶ್ವಾದಿಗಳಿಗೆ ಮಾತ್ರ ಇವೆ. ಆದ್ದರಿಂದ ವಿಶ್ವತ್ವಾದಿಗಳು ಹೋದ ಬಳಿಕವೂ ಪ್ರಮಾತೃ, ಪ್ರಮಾಣ, ಪ್ರಮೇಯ-ಎಂಬ ದ್ವೈತವು ಇರಲಾರದು.

2. ಏಕೆಂದರೆ ಜ್ಞಾನವು ಜ್ಞಾತೃತ್ವವನ್ನು ಆಶ್ರಯಿಸಿಕೊಂಡಿರುತ್ತದೆ. ಜ್ಞಾತ್ರಾದಿದ್ವೈತವು ಹೋದರೆ ಜ್ಞಾನವು ತಾನೊಂದೇ ಉಳಿಯಲಾರದು.

3. ಉಳಿದರೆ ಅದನ್ನು ಕಳೆಯಲು ಮತ್ತೊಂದು ಜ್ಞಾನವೂ, ಅದನ್ನು ಕಳೆಯುವದಕ್ಕೆ ಮತ್ತೊಂದು ಜ್ಞಾನವೂ, ಬೇಕಾಗುವದು, ಇತ್ಯಾದಿ. ಜ್ಞಾನಕ್ಕೆ ಜ್ಞಾತ್ರಾದಿಭೇದವೂ ಬೇಕಾದದ್ದರಿಂದ ದ್ವೈತನಿವೃತ್ತಿಯೂ ಆಗಲೇ ಆರದು.

4. "ಅದೃಶ್ಯಮ್" ಎಂದು ಮಾ ॥ ಕಾ ॥

ದಕ್ಕಾಗದ, ಹೇಳುವದಕ್ಕೆ ಬರದ, ಏಕಾತ್ಮಪ್ರತ್ಯಯಸಾರನಾದ, ಪ್ರಪ್ರಂಚವು ನಾಶವಾಗಿರುವ, ಶಾಂತನಾದ, ಶಿವನಾದ, ಅದ್ವೈತನನ್ನು ನಾಲ್ಕನೆಯವನೆಂದು ತಿಳಿಯುವರು. ಅವನು ಆತ್ಮನು, ಅವನನ್ನು ಅರಿತುಕೊಳ್ಳಬೇಕು.

(ಭಾಷ್ಯ)

೪೦. ನಾನ್ತಃಪ್ರಜ್ಞಮ್ ಇತಿ ತೈಜಸಪ್ರತಿಷೇಧಃ । ನ ಬಹಿಷ್ಪ್ರಜ್ಞಮ್ ಇತಿ ವಿಶ್ವಪ್ರತಿಷೇಧಃ । ನೋಭಯತಃಪ್ರಜ್ಞಮ್ ಇತಿ ಬಾಗ್ರತ್ಸ್ವಪ್ನಯೋಃ ಅನ್ತರಾಲಾವಸ್ಥಾ ಪ್ರತಿಷೇಧಃ । ನ ಪ್ರಜ್ಞಾನಘನಮ್ ಇತಿ ಸುಷುಪ್ತಾವಸ್ಥಾಪ್ರತಿಷೇಧಃ । ಬೀಜಭಾವಾ-ವಿವೇಕರೂಪತ್ವಾತ್ । ನ ಪ್ರಜ್ಞಮ್ ಇತಿ ಯುಗಪತ್ ಸರ್ವವಿಷಯಪ್ರಜ್ಞಾತೃತ್ವ ಪ್ರತಿಷೇಧಃ । ನಾಪ್ರಜ್ಞಮ್ ಇತಿ ಅಚೈತನ್ಯಪ್ರತಿಷೇಧಃ ॥

(ಭಾಷ್ಯಾರ್ಥ)

ಅಂತಃಪ್ರಜ್ಞನಲ್ಲದ ಎಂದು ತೈಜಸನನ್ನು ಅಲ್ಲಗಳೆದಿದೆ. ಬಹಿಷ್ಪ್ರಜ್ಞನಲ್ಲದ ಎಂದು ವಿಶ್ವನನ್ನು ಅಲ್ಲಗಳೆದಿದೆ. ಎರಡೂ ಪ್ರಜ್ಞೆಗಳುಳ್ಳವನಲ್ಲ ಎಂದು ಎಚ್ಚರ ಕನಸುಗಳ ನಡುವಿನ ಅವಸ್ಥೆಯನ್ನು[1] ಅಲ್ಲಗಳೆದಿದೆ. ಪ್ರಜ್ಞಾನಘನನಲ್ಲದ ಎಂದು ಸುಷುಪ್ತಾವಸ್ಥೆಯನ್ನು ಅಲ್ಲಗಳೆದಿದೆ ; ಏಕೆಂದರೆ ಬೀಜರೂಪವಾಗಿರುವ ಅವಿವೇಕ ಸ್ವರೂಪವಾಗಿರುವದೇ[2] (ನಿದ್ರೆಯಾಗಿರುತ್ತದೆ). ಪ್ರಜ್ಞನಲ್ಲದ ಎಂದು ಯಾವ ವಿಷಯದ ಪ್ರಜ್ಞಾತೃತ್ವವೂ[3] ಇಲ್ಲವೆಂದು ಒಟ್ಟಿಗೆ ಅಲ್ಲಗಳೆದಿದೆ. ಅಪ್ರಜ್ಞನಲ್ಲದ ಎಂದು ಚೈತನ್ಯವಲ್ಲವೆಂಬುದನ್ನು ಅಲ್ಲಗಳೆದಿದೆ.

(ಭಾಷ್ಯ)

೪೧. ಕಥಂ ಪುನಃ ಅನ್ತಃಪ್ರಜ್ಞತ್ವಾದೀನಾಮ್ ಆತ್ಮನಿ ಗಮ್ಯಮಾನಾನಾಂ ರಜ್ಜ್ವಾದೌ ಸರ್ಪಾದಿವತ್ ಪ್ರತಿಷೇಧಾತ್ ಅಸತ್ತ್ವಂ ಗಮ್ಯತೇ ಇತಿ ? ಉಚ್ಯತೇ । ಜ್ಞಸ್ವರೂಪಾವಿಶೇಷೇಽಪಿ ಇತರೇತರವ್ಯಭಿಚಾರಾತ್[4] ರಜ್ಜ್ವಾದಾವಿವ ಸರ್ಪಧಾರಾದಿ ವಿಕಲ್ಪಭೇದವತ್ । ಸರ್ವತ್ರ ಅವ್ಯಭಿಚಾರಾತ್ ಜ್ಞಸ್ವರೂಪಸ್ಯ ಸತ್ಯತ್ವಮ್ । ಸುಷುಪ್ತೇ

1. ಇಲ್ಲಿ ಅವಸ್ಥೆಯು ಆತ್ಮನ ಧರ್ಮವಲ್ಲವೆಂದು ಹೇಳಿದೆ ಎಂದು ಅರ್ಥವನ್ನು ಮಾಡಬೇಕು ; ಮುಂದಿನ ವಾಕ್ಯದಲ್ಲಿಯೂ ಹೀಗೆಯೇ

2. ವಿವೇಕಾಭಾವವೇ

3. ಜ್ಞಾತೃತ್ವವೆಂಬುದು ತಪ್ಪುತಿಳಿವಳಿಕೆಯ ಫಲ ; ಆತ್ಮನು ಜ್ಞಾನಸ್ವರೂಪನೇ.

4. 'ಅಸತ್ಯತ್ವಂ' ಎಂದು ಈ ಮಾತಿನ ಮುಂದೆ ಹೆಚ್ಚಾಗಿ ಪಾ ॥

ವ್ಯಭಿಚರತಿ ಇತಿ ಚೇತ್ । ನ । ಸುಷುಪ್ತಸ್ಯ ಅನುಭೂಯಮಾನತ್ವಾತ್ । "ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇ" (ಬೃ. ೪-೩-೩೦) ಇತಿ ಶ್ರುತೇಃ ॥

(ಭಾಷ್ಯಾರ್ಥ)

(ಆಕ್ಷೇಪ) :- ಅಂತಃಪ್ರಜ್ಞತ್ವಾದಿಗಳು ಆತ್ಮನಲ್ಲಿ ಕಾಣಬರುತ್ತಿರುವಲ್ಲಿ ಹಗ್ಗವೇ ಮುಂತಾದದ್ದರಲ್ಲಿ ಹಾವು ಮುಂತಾದವುಗಳನ್ನು (ಅಲ್ಲಗಳೆಯುವಂತೆ) ಅಲ್ಲಗಳೆಯುವ ದರಿಂದ(ಲೇ ಅವು) ನಿಜವಾಗಿಲ್ಲವೆಂದು ನಿಶ್ಚಯಿಸುವದು ಹೇಗೆ ?[1]

(ಪರಿಹಾರ) :- (ಇದಕ್ಕೆ) ಹೇಳುತ್ತೇವೆ. ಚೈತನ್ಯರೂಪವು ಸಮಾನವಾಗಿದ್ದರೂ ಹಗ್ಗವೇ ಮುಂತಾದದ್ದರಲ್ಲಿ ಹಾವು, (ಉದಕ) ಧಾರೆ-ಮುಂತಾದ ಬೇರೆ ಬೇರೆಯ ವಿಕಲ್ಪ ಗಳಂತೆ (ಈ ಅಂತಃಪ್ರಜ್ಞತ್ವಾದಿಗಳು) ಒಂದನ್ನೊಂದು ಬಿಟ್ಟುಹೋಗುತ್ತವೆ[2]. ಆದ್ದ ರಿಂದ (ಅವು ಅಸತ್ಯ) ; ಚೈತನ್ಯಸ್ವರೂಪವು ಎಲ್ಲಿಯೂ ತಪ್ಪುವದಿಲ್ಲವಾದ್ದರಿಂದ (ಅದು) ಸತ್ಯ.

(ಆಕ್ಷೇಪ) :- ತನಿನಿದ್ರೆಯಲ್ಲಿ (ಚೈತನ್ಯವೂ) ತಪ್ಪಿಹೋಗುವದಿಲ್ಲವೆ ?

(ಪರಿಹಾರ) :- ಇಲ್ಲ. ಏಕೆಂದರೆ ತನಿನಿದ್ರೆಯು (ಕೂಡ) ಅನುಭವಕ್ಕೆ ಬರುತ್ತದೆ[3]. "ಅರಿಯುವಾತನ ಅರಿವಿಗೆ ಲೋಪವು ಇರುವದಿಲ್ಲ" (ಬೃ. ೪-೩-೩೦) ಎಂಬ ಶ್ರುತಿ ಇದಕ್ಕೆ ಪ್ರಮಾಣವು.

(ಭಾಷ್ಯ)

೪೨. ಅತ ಏವ ಅದೃಷ್ಟಮ್[4] । ಯಸ್ಮಾತ್ ಅದೃಷ್ಟಮ್[4] ತಸ್ಮಾತ್ ಅವ್ಯವಹಾರ್ಯಮ್ । ಅಗ್ರಾಹ್ಯಂ ಕರ್ಮೇಂದ್ರಿಯೈಃ । ಅಲಕ್ಷಣಮ್ ಅಲಿಙ್ಗಮ್ ಇತ್ಯೇತತ್ । ಅನನುಮೇಯಮ್ ಇತ್ಯರ್ಥಃ । ಅತ ಏವ ಅಚಿನ್ತ್ಯಮ್ । ಅತ ಏವ ಅವ್ಯಪದೇಶ್ಯಂ ಶಬ್ದೈಃ । ಏಕಾತ್ಮಪ್ರತ್ಯಯಸಾರಂ ಜಾಗ್ರದಾದಿಸ್ಥಾನೇಷು ಏಕ ಏವ[5]

1. ಆತ್ಮನಲ್ಲಿ ಈ ಧರ್ಮಗಳು ಕಾಣುತ್ತಲೇ ಇರುವವಲ್ಲ ! ಅವುಗಳು ಹಾವು ಮುಂತಾದವು ಗಳಂತೆ ಸುಳ್ಳೆಂದು ಯಾವಾಗ ತೋರುತ್ತವೆ ? - ಎಂದು ಆಕ್ಷೇಪ.

2. ಹಗ್ಗವು ಯಾವಾಗಲೂ ಹಗ್ಗವೇ ಆಗಿರುವಲ್ಲಿ ಹಾವು ಮುಂತಾದವುಗಳು ಒಂದೊಂದು ಕಾಲದಲ್ಲಿ ಮಾತ್ರ ತೋರುತ್ತವೆ ; ಆಗ ಮಿಕ್ಕ ನೀರಿನ ಕೋಡಿಯೇ ಮುಂತಾದವು ಕಾಣಿಸುವದಿಲ್ಲ. ಇದರಂತೆಯೇ ಅಂತಃಪ್ರಜ್ಞಾದಿಗಳಲ್ಲಿ ಒಂದು ತೋರುವಾಗ ಮಿಕ್ಕವು ಯಾವವೂ ತೋರುವದಿಲ್ಲ. ಆದ್ದರಿಂದ ಅವು ಅಸತ್ಯ.

3. ಅನುಭವವೇ ಚೈತನ್ಯವಾದ್ದರಿಂದ ಅದಕ್ಕೆ ಅಭಾವವಿಲ್ಲವೆಂದಾಯಿತು.

4. ಎರಡು ವಾಕ್ಯಗಳಲ್ಲಿಯೂ "ಅದೃಶ್ಯಮ್" ಎಂದೇ ವಾ ॥ ಕಾ ॥ ಪಾಠ.

5. ಆ ॥ ಪಾಠದಲ್ಲಿಲ್ಲ.

ಅಯಮ್ ಆತ್ಮಾ ಇತಿ ಅವ್ಯಭಿಚಾರೀ ಯಃ ಪ್ರತ್ಯಯಃ ತೇನ ಅನುಸರಣೀಯಮ್ । ಅಥವಾ ಏಕಃ ಆತ್ಮಪ್ರತ್ಯಯಃ ಸಾರಃ[1] ಪ್ರಮಾಣಂ ಯಸ್ಯ ತುರೀಯಸ್ಯ ಅಧಿಗಮೇ ತತ್ ತುರೀಯಮ್ ಏಕಾತ್ಮಪ್ರತ್ಯಯಸಾರಮ್ ''ಆತ್ಮೈತ್ಯೇವೋಪಾಸೀತ'' (ಬೃ. ೧-೪-೭) ಇತಿ ಶ್ರುತೇಃ । ಅನ್ತಃಪ್ರಜ್ಞತ್ವಾದಿಸ್ಥಾನಿಧರ್ಮಪ್ರತಿಷೇಧಃ ಕೃತಃ । ಪ್ರಪಞ್ಚೋಪಶಮಮ್ ಇತಿ ಚಾಗ್ರದಾದಿಸ್ಥಾನಧರ್ಮಾಭಾವಃ ಉಚ್ಯತೇ । ಅತ ಏವ ಶಾನ್ತಂ[2] ಶಿವಮ್ । ಯತಃ ಅದ್ವೈತಮ್ ಭೇದವಿಕಲ್ಪರಹಿತಮ್ । ಚತುರ್ಥಂ ತುರೀಯಂ ಮನ್ಯನ್ತೇ ಪ್ರತೀಯಮಾನಪಾದತ್ರಯರೂಪವೈಲಕ್ಷಣ್ಯಾತ್ । ಸ ಆತ್ಮಾ ಸ ವಿಜ್ಞೇಯಃ ಇತಿ । ಪ್ರತೀಯಮಾನಸರ್ಪಭೂಚ್ಛಿದ್ರದಣ್ಡಾದಿವ್ಯತಿರಿಕ್ತಾ[3] ಯಥಾ ರಜ್ಜುಃ ತಥಾ 'ತತ್ತ್ವಮಸಿ' ಇತ್ಯಾದಿವಾಕ್ಯಾರ್ಥಃ ಆತ್ಮಾ ''ಅದೃಷ್ಟೋ ದ್ರಷ್ಟಾ'' (ಬೃ. ೩-೭-೨೩). ''ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇ'' (ಬೃ. ೪-೩-೨೩) ಇತ್ಯಾದಿಭಿರುಕ್ತೋ ಯಃ ಸ 'ವಿಜ್ಞೇಯಃ' ಇತಿ ಭೂತಪೂರ್ವಗತ್ಯಾ । ಜ್ಞಾತೇ ದ್ವೈತಾಭಾವಃ ॥

(ಭಾಷ್ಯಾರ್ಥ)

ಆದ್ದರಿಂದಲೇ[4] (ಅದು) ಕಾಣಲ್ಪಡದ್ದು. ಕಾಣಬರುವದಲ್ಲವಾದ್ದರಿಂದಲೇ ವ್ಯವಹಾರಕ್ಕೆ ಸಿಕ್ಕದ್ದು, ಕರ್ಮೇಂದ್ರಿಯಗಳಿಂದ ಹಿಡಿಯುವದಕ್ಕೆ ಆಗದ್ದು ; ಹೆಗ್ಗುರುತಿಲ್ಲದ್ದು, ಎಂದರೆ ಲಿಂಗವಿಲ್ಲದ್ದು[5], ಅನುಮಾನ (ಪ್ರಮಾಣ)ದಿಂದ ಅರಿಯುವದಕ್ಕಾಗದ್ದು ಎಂದರ್ಥ. ಆದ್ದರಿಂದಲೇ[6] ಯೋಚಿಸುವದಕ್ಕಾಗದ್ದು ; ಆದ್ದರಿಂದಲೇ[7] ಶಬ್ದಗಳಿಂದ ಹೇಳುವದಕ್ಕೆ ಬಾರದ್ದು. ಏಕಾತ್ಮಪ್ರತ್ಯಯಸಾರವಾದದ್ದು ; ಎಚ್ಚರವೇ ಮುಂತಾದ ಅವಸ್ಥೆಗಳಲ್ಲಿ ಈ ಆತ್ಮನು ಒಬ್ಬನೇ ಎಂಬ ತಪ್ಪದೆ ಇರುತ್ತಿರುವ

1. 'ಸಾರಮ್' ಆ ॥
2. ''ಶಾನ್ತಮ್ ಅವಿಕ್ರಿಯಮ್'' ಮಾ ॥
3. ''ಸರ್ಪದಣ್ಡಭೂಚ್ಛಿದ್ರಾದಿವ್ಯತಿರಿಕ್ತಾ'' ಮಾ ॥
4. ಯಾವ ವಿಶೇಷವೂ ಇಲ್ಲದೆ ನಿಷೇಧಗಮ್ಯವಾಗಿರುವದರಿಂದಲೇ.
5. ಹೊಗೆ ಎಂಬ ಲಿಂಗದಿಂದ ಎಂದರೆ ಹೆಗ್ಗುರುತಿನಿಂದ ಬೆಂಕಿಯಿದೆ ಎಂದು ನಿಶ್ಚಯಿಸುವ ರೀತಿಯ ಪ್ರಮಾಣವು ಅನುಮಾನವು . ಆದರೆ ಆತ್ಮನಿಗೆ ಯಾವ ಲಿಂಗವೂ ಇಲ್ಲವಾದ್ದರಿಂದ ಅವನು ಅನುಮಾನಗಮ್ಯನಲ್ಲ.
6. ಪ್ರತ್ಯಕ್ಷಕ್ಕಾಗಲಿ, ಅನುಮಾನಕ್ಕಾಗಲಿ, ಗೋಚರವಲ್ಲದ್ದರಿಂದಲೇ.
7. ಮನಸ್ಸಿಗೆ ವಿಷಯವಲ್ಲದ ರಿಂದಲೇ

ಪ್ರತ್ಯಯವುಂಟಲ್ಲ, ಅದರಿಂದ ಅನುಸರಿಸಿ (ತಿಳಿಯ)ಬೇಕಾದದ್ದು[1]. ಅಥವಾ ಆತ್ಮನೆಂಬ ಪ್ರತ್ಯಯವೊಂದೇ ಯಾವ ತುರೀಯವನ್ನು ಅರಿಯುವದಕ್ಕೆ ಸಾರವೋ ಎಂದರೆ ಪ್ರಮಾಣವೋ ಆ ತುರೀಯವು ಏಕಾತ್ಮಪ್ರತ್ಯಯಸಾರವು (ಎಂದಾದರೂ ಅರ್ಥವನ್ನು ಮಾಡಬಹುದು). ''ಆತ್ಮನೆಂದೇ ಅರಿತುಕೊಳ್ಳಬೇಕು'' (ಬೃ. ೧-೪-೭) ಎಂಬ ಶ್ರುತಿ ಇದಕ್ಕೆ ಪ್ರಮಾಣವು[2]. ಅಂತಃಪ್ರಜ್ಞತ್ವವೇ ಮುಂತಾದ ಸ್ಥಾನಿಧರ್ಮಗಳನ್ನು[3] (ಹಿಂದೆ) ಅಲ್ಲಗಳೆದದ್ದಾಯಿತು. ಪ್ರಪಂಚೋಪಶಮವಾದ (ಪ್ರಪಂಚವು ನಾಶವಾಗಿರುವ) ಎಂಬ (ವಿಶೇಷಣದಿಂದ) ಎಚ್ಚರವೇ ಮುಂತಾದ ಸ್ಥಾನಧರ್ಮಗಳು ಇಲ್ಲವೆಂದು (ಈಗ) ಹೇಳಿರುತ್ತದೆ[4]. ಆದ್ದರಿಂದಲೇ[5] (ಇದು) ಶಾಂತವೂ ಶಿವವೂ ಆಗಿರುತ್ತದೆ ; ಏಕೆಂದರೆ (ಇದು) ಅದ್ವೈತವು, ಭೇದಗಳೆಂಬ ವಿಕಲ್ಪಗಳು ಇಲ್ಲದ್ದು. ಚತುರ್ಥನೆಂದು, ನಾಲ್ಕನೆಯವನೆಂದು (ಬಲ್ಲವರು) ಭಾವಿಸುವರು. ಏಕೆಂದರೆ (ಈ ಆತ್ಮನು) ತೋರುತ್ತಿರುವ ಮೂರು ಪಾದಗಳಿಗಿಂತ ಬೇರೆಯ ಸ್ವರೂಪದವನಾಗಿರುತ್ತಾನೆ[6].

''ಅವನೇ ಆತ್ಮನು, ಅವನನ್ನೇ ಅರಿತುಕೊಳ್ಳಬೇಕು'' ಎಂದರೆ ಕಾಣುವ ಹಾವು, ನೆಲದ ಬಿರುಕು, ಕೋಲು-ಮುಂತಾದವುಗಳಿಗಿಂತ ಬೇರೆಯಾದ ಹಗ್ಗವನ್ನು

---

1. ಏಕಾತ್ಮ, ಒಬ್ಬನೇ. ಆತ್ಮನು-ಎಂಬ ಪ್ರತ್ಯಯದಿಂದ ಸಾರ ಅನುಸರಿಸಿ ಅರಿತುಕೊಳ್ಳ ತಕ್ಕವನು-ಎಂದು ವಿಶೇಷಣಕ್ಕೆ ಅರ್ಥವನ್ನು ಮಾಡಿರುತ್ತದೆ. ಒಂದೊಂದು ಅವಸ್ಥೆಗೆ ಒಬ್ಬೊಬ್ಬ ಆತ್ಮನಿರಲಾರನಾದ್ದರಿಂದ ಒಂದೇ ರೂಪದಿಂದ ಇರುವ ಚೈತನ್ಯವೇ ಆತ್ಮನು ಎಂದರಿಯಬೇಕು ಎಂದು ಭಾವ.

2. ಏಕ ಎಂದರೆ ಮುಖ್ಯವಾದ, ಅಥವಾ ಕೇವಲವಾದ, ಆತ್ಮಪ್ರತ್ಯಯವೇ, ಸಾರವು ಎಂದರೆ ತುರೀಯನನ್ನರಿಯುವ ಪ್ರಮಾಣವು-ಎಂದು ವಿಶೇಷಣಕ್ಕೆ ಅರ್ಥವನ್ನು ಕಲ್ಪಿಸಿರುತ್ತದೆ. ನಾನು ಎಂದುಕೊಳ್ಳುವದಕ್ಕೆ ಅರ್ಹವಾದದ್ದು ಆತ್ಮವು ಎಂದು ಆತ್ಮಪ್ರತ್ಯಯದಿಂದಲೇ ತುರೀಯನನ್ನು ಅರಿತುಕೊಳ್ಳಬೇಕು ಎಂದರ್ಥ. ಅಚಿಂತ್ಯ, ಅವ್ಯಪದೇಶ್ಯ-ಎಂಬ ವಿಶೇಷಣಗಳಿಂದ ಆತ್ಮನೆಂಬ ಪ್ರತ್ಯಯಶಬ್ದಗಳೂ ಆತ್ಮಸ್ವರೂಪವನ್ನು ತಿಳಿಸಲಾರವೆಂದು ಸಿದ್ಧವಾಗಿದ್ದರೂ ಆ ಸ್ವರೂಪವನ್ನು ತಿಳಿದುಕೊಳ್ಳುವದಕ್ಕೆ ಈ ಪ್ರತ್ಯಯವೊಂದೇ ಸಾಧಕವಾಗಿರುತ್ತದೆ ಎಂದು ಭಾವ.

3. ಅವಸ್ಥಾವಂತರ, ವಿಶ್ವ ಮೊದಲಾದವರ, ಧರ್ಮಗಳನ್ನು.

4. ಅವಸ್ಥೆಗಳು ಇದ್ದೂ ಅವುಗಳ ಸೋಂಕು ಆತ್ಮನಿಗಿಲ್ಲವೆಂದೂ ಸ್ಥಾನಿಧರ್ಮನಿಷೇಧದಿಂದ ಭಾವಿಸಬಹುದು ; ಆದ್ದರಿಂದ ಈಗ ಸ್ಥಾನಗಳೇ, ಅವಸ್ಥೆಗಳೇ, ಇಲ್ಲವೆಂದು ಹೇಳಿದೆ ಎಂದರ್ಥ.

5. ಸ್ಥಾನಿಧರ್ಮವಾಗಲಿ, ಸ್ಥಾನಧರ್ಮವಾಗಲಿ, ಇಲ್ಲದೆ ನಿಷ್ಪ್ರಪಂಚವಾಗಿರುವದರಿಂದಲೇ.

6. ವಿಶ್ವಾದಿಗಳ ಸ್ವಭಾವಕ್ಕಿಂತ ಬೇರೆಯ ಸ್ವಭಾವದವನು ಎಂದು ತಿಳಿಸುವದಕ್ಕೇ ನಾಲ್ಕನೆಯವನು ಎಂದು ಕರೆದಿದೆ. ನಾಲ್ಕನೆಯವನೆಂಬ ಸಂಖ್ಯಾವಿಶಿಷ್ಟತ್ವವುಳ್ಳವನೆಂಬ ಅಭಿಪ್ರಾಯದಿಂದಲ್ಲ.

ಹೇಗೆ[1] (ಅರಿಯುವರೋ) ಹಾಗೆ ''ಅದೇ ನೀನಾಗಿರುವೆ'' (ಛಾಂ.) ಮುಂತಾದ ವಾಕ್ಯಗಳ ಅರ್ಥವಾಗಿರುವ ''ಕಾಣಲ್ಪಡದೆ ಕಾಣುವವನಾದ'' (ಬೃ. ೩-೭-೨೩) ''ನೋಡುವಾತನ ನೋಟಕ್ಕೆ ಲೋಪವೇ ಇಲ್ಲ'' (ಬೃ. ೪-೩-೨೩) ಎಂದು ಮುಂತಾಗಿರುವ (ಶ್ರುತಿವಚನಗಳಿಂದ) ಉಕ್ತನಾಗಿರುವನಲ್ಲ, ಅವನನ್ನು ''ತಿಳಿದು ಕೊಳ್ಳಬೇಕು'' ಎಂಬುದು ಭೂತಪೂರ್ವಗತಿಯಿಂದ[2] ; ತಿಳಿದುಕೊಂಡಮೇಲೆ ದ್ವೈತ ವಿರುವದಿಲ್ಲ[3].

******

1. ಅದರ ಅವಿಕಲ್ಪಿತವಾದ ವಿಲಕ್ಷಣಸ್ವರೂಪವನ್ನು ಕಲ್ಪಿತವಾದದ್ದನ್ನೆಲ್ಲ ಅಲ್ಲಗಳೆಯುವ ಪ್ರಮಾಣದಿಂದ ಹೇಗೆ ಅರಿತಿರುವರೋ ಎಂದರ್ಥ.

2. ಅರಿತುಕೊಳ್ಳುವದಕ್ಕಿಂತ ಮೊದಲಿನ ಅವಿದ್ಯಾಸ್ಥಿತಿಯಿಂದ ಎಂದರ್ಥ.

3. ಅರಿತುಕೊಂಡ ಬಳಿಕವೂ ಉಪಾಸನೆಮಾಡುವದೇ ಮುಂತಾದ ವಿಭಾಗವು ಉಳಿದಿರುವದಿಲ್ಲ ಎಂದರ್ಥ

# ಕಾರಿಕೆ

## ತುರೀಯ ಸ್ವರೂಪ

(ಕಾರಿಕಾವಾಕ್ಯ)

ಅತ್ರೈತೇ ಶ್ಲೋಕಾ ಭವನ್ತಿ -

(ಕಾರಿಕಾವಾಕ್ಯಾರ್ಥ)

ಈ ವಿಷಯದಲ್ಲಿ (ಮುಂದಿನ) ಶ್ಲೋಕಗಳು ಆಗಿರುತ್ತವೆ -

ನಿವೃತ್ತೇಃ ಸರ್ವದುಃಖಾನಾಮೀಶಾನಃ ಪ್ರಭುರವ್ಯಯಃ ।
ಅದ್ವೈತಃ ಸರ್ವಭಾವಾನಾಂ ದೇವಸ್ತುರ್ಯೋ ವಿಭುಃ ಸ್ಮೃತಃ ॥೧॥

೧೦. ತುರ್ಯನು ಸರ್ವದುಃಖಿಗಳ ನಿವೃತ್ತಿಗೆ ಈಶಾನನು, ಪ್ರಭು, ಅವ್ಯಯನು, ಸರ್ವಭಾವಗಳಿಗೂ ಅದ್ವೈತನು, ದೇವನು, ವಿಭು-ಎನಿಸಿರುವನು.

(ಭಾಷ್ಯ)

೪೩. ಪ್ರಾಜ್ಞತೈಜಸವಿಶ್ವಲಕ್ಷಣಾನಾಂ[1] ಸರ್ವದುಃಖಾನಾಂ ನಿವೃತ್ತೇಃ ಈಶಾನಃ ತುರೀಯ ಆತ್ಮಾ । ಈಶಾನಃ ಇತ್ಯಸ್ಯ ವ್ಯಾಖ್ಯಾ ಪ್ರಭುಃ ಇತಿ । ದುಃಖನಿವೃತ್ತಿಂ ಪ್ರತಿ ಪ್ರಭವತಿ[2] ಇತ್ಯರ್ಥಃ । ತದ್ವಿಜ್ಞಾನನಿಮಿತ್ತತ್ವಾತ್ ದುಃಖನಿವೃತ್ತೇಃ । ಅವ್ಯಯಃ ನ ವ್ಯೇತಿ । ಸ್ವರೂಪಾತ್ ನ ವ್ಯಭಿಚರತಿ ಇತಿ ಯಾವತ್[3] । ಕುತಃ ? ಯಸ್ಮಾತ್ ಅದ್ವೈತಃ ಸರ್ವಭಾವಾನಾಮ್[4] । ರಜ್ಜುಸರ್ಪವತ್ ಮೃಷಾತ್ವಾತ್ । ಸ ಏಷ ದೇವಃ ದ್ಯೋತನಾತ್ । ತುರ್ಯಃ[5] ಚತುರ್ಥಃ ವಿಭುಃ ವ್ಯಾಪೀ ಸ್ಮೃತಃ ॥

1. "ಅತ್ರೈತೇ ಶ್ಲೋಕಾ ಭವನ್ತಿ" ಎಂಬ ವಾಕ್ಯವು ಈ ವಾಕ್ಯದ ಹಿಂದೆ ವಾ ॥ ದಲ್ಲಿದೆ.

2. 'ಪ್ರಭುರ್ಭವತಿ' ಎಂಬ ಪಾಠಕ್ಕಿಂತ ಮೂರು ಕೋಶಗಳಲ್ಲಿರುವ ಈ ಪಾಠವು ಮೇಲು.

3. 'ನ ವ್ಯಭಿಚರತಿ ನ ಚ್ಯವತೇ ಇತ್ಯೇತತ್' ವಾ ॥

4. ಇದರ ಮುಂದೆ "ಸರ್ಪಾದೀನಾಂ ರಜ್ಜುಃ ಅದ್ವಯಾ ಸತ್ಯಾ ಚ । ಏವಂ ತುರೀಯಃ । "ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇ" ಇತಿ ಶ್ರುತೇಃ । ಅತಃ" ಎಂದು ಹೆಚ್ಚಾಗಿ ವಾ ॥

5. "ತುರೀಯಃ" ಎಂಬ ಪಾಠಕ್ಕಿಂತ ಈ ವಾ ॥ ಪಾಠವು ಮೇಲು.

(ಭಾಷ್ಯಾರ್ಥ)

ಪ್ರಾಜ್ಞ, ತೈಜಸ, ವಿಶ್ವ-ಎಂಬ ಸರ್ವದುಃಖಿಗಳ[1] ನಿವೃತ್ತಿಗೆ ಈಶಾನನು ತುರೀಯನಾದ ಆತ್ಮನು. ''ಈಶಾನನು'' ಎಂಬ ಈ (ಮಾತಿ)ಗೇ ಪ್ರಭುವು ಎಂಬುದು ವ್ಯಾಖ್ಯಾನವು. ದುಃಖನಿವೃತ್ತಿಯ ವಿಷಯಕ್ಕೆ ಶಕ್ತನಾಗಿರುತ್ತಾನೆ ಎಂದರ್ಥ. ಏಕೆಂದರೆ ಆ (ತುರೀಯನನ್ನು) ಅರಿತುಕೊಳ್ಳುವದರಿಂದಲೇ ದುಃಖವು ತೊಲಗುತ್ತದೆ[2]. ಅವ್ಯಯನು ಎಂದರೆ ಸವೆಯುವದಿಲ್ಲ, ಸ್ವರೂಪವನ್ನು ಬಿಟ್ಟು ಹೋಗುವದಿಲ್ಲ ಎಂದು ಅಭಿಪ್ರಾಯ. ಇದು ಹೇಗೆ ?[3] ಎಂದರೆ (ಇವನು) ಸರ್ವಭಾವಗಳಿಗೂ ಅದ್ವೈತನಾಗಿರುವದರಿಂದ[4] ಏಕೆಂದರೆ (ಆ ಭಾವಗಳು) ಹಗ್ಗದ ಹಾವಿನಂತೆ ಹುಸಿತೋರಿಕೆಯಾಗಿರುತ್ತವೆ. ಅಂಥ ಈ ದೇವನು (ಚೈತನ್ಯರೂಪವಾಗಿ) ಹೊಳೆಯುತ್ತಿರುವದರಿಂದ[5] (ದೇವನೆನಿಸಿರುವ) ತುರ್ಯನು ನಾಲ್ಕನೆಯವನು, ವಿಭು ವ್ಯಾಪಿಯು, ಎನಿಸಿರುವನು[6].

## ವಿಶ್ವಾದಿಗಳಿಗೂ ತುರೀಯನಿಗೂ ತಾರತಮ್ಯ

(ಭಾಷ್ಯ)

೪೪. ವಿಶ್ವಾದೀನಾಂ ಸಾಮಾನ್ಯವಿಶೇಷಭಾವೋ ನಿರೂಪ್ಯತೇ ತುರ್ಯ ಯಾಥಾತ್ಮ್ಯಾವಧಾರಣಾರ್ಥಮ್ ।।

(ಭಾಷ್ಯಾರ್ಥ)

ತುರ್ಯನ ನಿಜವಾದ ಸ್ವರೂಪವನ್ನು ಗೊತ್ತುಪಡಿಸುವದಕ್ಕಾಗಿ ವಿಶ್ವನೇ ಮೊದಲಾದವರಲ್ಲಿ ಸಾಮಾನ್ಯವಿಶೇಷಭಾವವನ್ನು[7] ಈಗ ತಿಳಿಸಲಾಗುತ್ತದೆ :-

1. ವಿಶ್ವತೈಜಸರು ದ್ವಿತೀಯವಸ್ತುವಿನ ಅನುಭವರೂಪವಾದ ದುಃಖವುಳ್ಳವರಾದ್ದರಿಂದ ದುಃಖಿರೂಪರು ; ಪ್ರಾಜ್ಞನು ಆ ದುಃಖಿಕ್ಕೆ ಬೀಜನಾಗಿರುವದರಿಂದ ದುಃಖಿರೂಪನು.

2. ದುಃಖವು ಭ್ರಾಂತಿಸಿದ್ಧವಾಗಿರುವದರಿಂದ ಜ್ಞಾನಮಾತ್ರದಿಂದ ಹೋಗಿಬಿಡುತ್ತದೆ.

3. ಆತ್ಮನು ದುಃಖಿರಹಿತನು, ಅವನ ಜ್ಞಾನದಿಂದ ದುಃಖವು ಹೋಗುತ್ತದೆ ; ಅವನು ಏತರಿಂದಲೂ ಸವೆಯುವದಿಲ್ಲ -ಎಂಬುದು ಹೇಗೆ ?

4. ಮಿಕ್ಕ ವಿಶ್ವಾದಿರೂಪಗಳಿದ್ದರೂ ತನಗೆರಡನೆಯದಿಲ್ಲದವನೇ ಆಗಿರುವದರಿಂದ.

5. ಮತ್ತೊಂದರ ಬಯಕೆಯಿಲ್ಲದೆ ತಾನೇ ಹೊಳೆಯುತ್ತಿರುವದರಿಂದ.

6. ಕಾಲಾಕಾಶಾದಿಗಳ ಕಟ್ಟಿಗೂ ಒಳಪಡದೆ ಇರುವ ಅನಂತನು.

7. ಸಾಮಾನ್ಯವೆಂದರೆ ಸಮಾನವಾಗಿ ಎಲ್ಲಕ್ಕೂ ಇರುವದು ; ವಿಶೇಷವೆಂದರೆ ಒಂದರಲ್ಲಿ ಮಾತ್ರವೇ ಇರುವ ಧರ್ಮವು.

ಕಾರ್ಯಕಾರಣಬದ್ಧೌ ತಾವಿಷ್ಯೇತೇ ವಿಶ್ವತೈಜಸೌ ।
ಪ್ರಾಜ್ಞಃ ಕಾರಣಬದ್ಧಸ್ತು ದ್ವೌ ತೌ ತುರ್ಯೇ ನ ಸಿಧ್ಯತಃ ॥೧೧॥

೧೧. ಆ ವಿಶ್ವತೈಜಸರುಗಳು ಕಾರ್ಯಕಾರಣಬದ್ಧರೆನಿಸಿಕೊಂಡಿರುತ್ತಾರೆ. ಆದರೆ ಪ್ರಾಜ್ಞನು ಕಾರಣಬದ್ಧನು. ಇವೆರಡೂ ತುರ್ಯನಲ್ಲಿ ಸಿದ್ಧಿಸುವದಿಲ್ಲ.

(ಭಾಷ್ಯ)

೪೫. ಕಾರ್ಯಂ ಕ್ರಿಯತೇ ಇತಿ ಫಲಭಾವಃ । ಕಾರಣಂ ಕರೋತಿ ಇತಿ ಬೀಜ ಭಾವಃ । ತತ್ತ್ವಾಗ್ರಹಣಾನ್ಯಥಾಗ್ರಹಣಾಭ್ಯಾಂ ಬೀಜಫಲಭಾವಾಭ್ಯಾಂ ತೌ ಯಥೋಕ್ತೌ ವಿಶ್ವ ತೈಜಸೌ ಬದ್ಧೌ ಸಂಗೃಹೀತೌ ಇಷ್ಯೇತೇ । ಪ್ರಾಜ್ಞಸ್ತು ಬೀಜಭಾವೇನೈವ ಬದ್ಧಃ । ತತ್ತ್ವಾಪ್ರತಿಬೋಧಮಾತ್ರಮೇವ ಹಿ ಬೀಜಂ ಪ್ರಾಜ್ಞತ್ವೇ ನಿಮಿತ್ತಮ್ । ತತಃ ದ್ವೌ ತೌ ಬೀಜಫಲಭಾವೌ ತತ್ತ್ವಾಗ್ರಹಣಾನ್ಯಥಾಗ್ರಹಣೇ ತುರ್ಯೇ ನ ಸಿಧ್ಯತಃ । ನ ವಿದ್ಯೇತೇ । ನ ಸಂಭವತಃ ಇತ್ಯರ್ಥಃ ॥

(ಭಾಷ್ಯಾರ್ಥ)

ಕಾರ್ಯವು ಎಂದರೆ-ಮಾಡಲ್ಪಡುವದಾಗಿರುವದು, ಫಲತ್ವವು ; ಕಾರಣವೆಂದರೆ ಮಾಡುವದು, ಬೀಜತ್ವವು. ತತ್ತ್ವವನ್ನು ಅರಿಯದಿರುವದು, ಬೇರೆಯಾಗಿ ತಿಳಿದು ಕೊಂಡಿರುವದು-ಎಂಬ ಬೀಜಫಲರೂಪಗಳಿಂದ ಆ ಹಿಂದೆ ಹೇಳಿದ ವಿಶ್ವತೈಜಸರು ಗಳು ಕಟ್ಟುಬಿದ್ದವರು, ಸಿಕ್ಕಿಬಿದ್ದಿರುವವರು ಎನಿಸಿರುತ್ತಾರೆ. ಪ್ರಾಜ್ಞನು (ಬರಿಯ) ಬೀಜರೂಪ (ವೊಂದ)ರಿಂದಲೇ ಕಟ್ಟುವಡೆದಿರುತ್ತಾನೆ ; ಏಕೆಂದರೆ ತತ್ತ್ವವನ್ನು ಅರಿಯದಿರುವದೆಂಬ[1] ಬೀಜವೊಂದೇ ಪ್ರಾಜ್ಞನಾಗಿರುವದಕ್ಕೆ ನಿಮಿತ್ತವಾಗಿರುತ್ತದೆ[2]. ಆದ್ದರಿಂದ ಆವೆರಡೂ ಎಂದರೆ (ಆ) ಬೀಜಫಲಭಾವಗಳೆರಡೂ, ತತ್ತ್ವವನ್ನರಿಯದಿರು ವದು, ಬೇರೆಯಾಗಿ ತಿಳಿದುಕೊಂಡಿರುವದು- (ಎಂಬಿವು) ತುರ್ಯನಲ್ಲಿ ಸಿದ್ಧಿಸು ವದಿಲ್ಲ ; ಇರುವದಿಲ್ಲ. (ಅವುಗಳು) ಇರುವ ಹಾಗಿಲ್ಲ ಎಂದರ್ಥ.

1. ಪರಮಾರ್ಥವಾದ ಆತ್ಮಸ್ವರೂಪವನ್ನು, ತುರೀಯನನ್ನು.

2. ತತ್ತ್ವವನ್ನರಿಯನೆಂಬುದನ್ನು ಬಿಟ್ಟರೆ ಪ್ರಾಜ್ಞನಿಗೂ ತುರ್ಯನಿಗೂ ಮತ್ತೇನೂ ಭೇದ ವಿಲ್ಲ. ಇದು ಮುಂದಿನ ಕಾರಿಕೆಯಲ್ಲಿ ಸ್ಪಷ್ಟವಾಗುತ್ತದೆ. ತತ್ತ್ವವನ್ನರಿಯದಿರುವದಲ್ಲದೆ ಮತ್ತೊಂದು ಕಾರಣಾವಿದ್ಯೆಯಿರುವದೆಂಬ ಪ್ರಕ್ರಿಯೆಗೆ ಕಾರಿಕೆಯಲ್ಲಾಗಲಿ ಭಾಷ್ಯದಲ್ಲಾಗಲಿ ಆಧಾರವಿಲ್ಲ. ಪೀಠಿಕೆ ಯನ್ನು ನೋಡಿ.

## ಪ್ರಾಜ್ಞನಿಗೂ ತುರ್ಯನಿಗೂ ತಾರತಮ್ಯ

(ಭಾಷ್ಯ)

೪೬. ಕಥಂ ಪುನಃ ಕಾರಣಬದ್ಧತ್ವಂ ಪ್ರಾಜ್ಞಸ್ಯ ? ತುರೀಯೇ ವಾ ತತ್ತ್ವಾಗ್ರಹಣಾನ್ಯಥಾಗ್ರಹಣಲಕ್ಷಣೌ ಬನ್ಧೌ ನ ಸಿದ್ಧ್ಯತಃ ಇತಿ ? ಯಸ್ಮಾತ್-

(ಭಾಷ್ಯಾರ್ಥ)

(ಪ್ರಶ್ನೆ) :- ಪ್ರಾಜ್ಞನು ಕಾರಣಕ್ಕೆ ಕಟ್ಟುಬಿದ್ದಿರುತ್ತಾನೆಂಬುದು ಹೇಗೆ ? ತುರೀಯನಲ್ಲಿ ತತ್ತ್ವವನ್ನು ಅರಿಯದಿರುವದು, ಬೇರೆಯಾಗಿ ಅರಿತುಕೊಳ್ಳುವದು-ಎಂಬ ಬಂಧಗಳು ಇರುವದಿಲ್ಲವೆಂಬುದಾದರೂ ಹೇಗೆ ?

(ಉತ್ತರ) :- ಹೇಗೆಂದರೆ :-

ನಾತ್ಮಾನಂ ನ ಪರಾಂಶ್ಚೈವ ನ ಸತ್ಯಂ ನಾಪಿ ಚಾನೃತಮ್ ।
ಪ್ರಾಜ್ಞಃ ಕಿಂಚನ ಸಂವೇತ್ತಿ ತುರ್ಯಂ ತತ್ ಸರ್ವದೃಕ್ಸದಾ ॥೧೨॥

೧೨. ಪ್ರಾಜ್ಞನು ತನ್ನನ್ನಾಗಲಿ ಮತ್ತೊಬ್ಬರನ್ನಾಗಲಿ, ಸತ್ಯವನ್ನಾಗಲಿ ಅನೃತ ವನ್ನಾಗಲಿ, ಯಾವದನ್ನೂ ಅರಿಯನು. (ಆದರೆ) ಆ ತುರ್ಯವು ಯಾವಾಗಲೂ ಸರ್ವದೃಕ್ಕಾಗಿರುವದು.

(ಭಾಷ್ಯ)

೪೭. ಆತ್ಮಾನಮ್[1] ವಿಲಕ್ಷಣಮ್ ಅವಿದ್ಯಾಬೀಜಪ್ರಸೂತಂ[2] ಬಾಹ್ಯಂ ದ್ವೈತಂ ಪ್ರಾಜ್ಞಃ ನ ಕಿಂಚನ ಸಂವೇತ್ತಿ ಯಥಾ ವಿಶ್ವತೈಜಸೌ । ತತಶ್ಚ ಅಸೌ ತತ್ತ್ವಾಗ್ರಹಣೇನ ತಮಸಾ ಅನ್ಯಥಾಗ್ರಹಣಬೀಜಭೂತೇನ ಬದ್ಧೋ ಭವತಿ । ಯಸ್ಮಾತ್ ತುರೀಯಂ ತತ್ ಸರ್ವದೃಕ್ ಸದಾ । ತುರೀಯಾದನ್ಯಸ್ಯ ಅಭಾವಾತ್ ಸರ್ವದಾ ಸದ್ಯೈವ ಭವತಿ[3] ಸರ್ವಂ ಚ ತತ್ ದೃಷ್ಟ ಇತಿ ಸರ್ವದೃಕ್ । ತಸ್ಮಾತ್ ನ ತತ್ತ್ವಾಗ್ರಹಣಲಕ್ಷಣಂ ಬೀಜಮ್ । ತತ್ರ ತತ್ಪ್ರಸೂತಸ್ಯ ಅನ್ಯಥಾಗ್ರಹಣಸ್ಯಾಪಿ ಅತ ಏವ ಅಭಾವಃ । ನ ಹಿ ಸವಿತರಿ ಸದಾ ಪ್ರಕಾಶಾತ್ಮಕೇ ತದ್ವಿರುದ್ಧಮ್ ಅಪ್ರಕಾಶನಮ್ ಅನ್ಯಥಾಪ್ರಕಾಶನಂ ವಾ ಸಂಭವತಿ । ''ನ ಹಿ ದ್ರಷ್ಟು

---

1. 'ಆತ್ಮವಿಲಕ್ಷಣಮ್' ಎಂದು ಆ ॥ ಮೈ ॥ ಇಲ್ಲಿ ''ನಾತ್ಮಾನಂ ನ ಪರಾನ್ ನ ಸತ್ಯಮ್ ಆತ್ಮಾನಂ ನಾನೃತಮ್ ಆತ್ಮವಿಲಕ್ಷಣಮ್ ಅವಿದ್ಯಾಬೀಜಪ್ರಸೂತಮ್'' ಎಂದಿದ್ದು ಗ್ರಂಥವು ತ್ರುಟಿತವಾಗಿದೆಯೋ ಭಾಷ್ಯವಿರುವದೇ ಇಷ್ಟೋ ತಿಳಿಯದು.

2. ಇದರ ಮುಂದೆ ''ವೇದ್ಯಂ'' ಎಂದು ಹೆಚ್ಚಾಗಿ ವಾ ॥ ಕಾ ॥

3. ''ಸದ್ಯೈವ ಇತಿ'' ಆ ॥ ; ''ಸದ್ಯೈವ ಇತಿ ಭವತಿ'' ಕಾ ॥

ರ್ದೃಷ್ಟೇರ್ವಿಪರಿಲೋಪೋ ವಿದ್ಯತೇ'' (ಬೃ. ೪-೩-೨೩) ಇತಿ ಶ್ರುತೇಃ । ಅಥವಾ ಜಾಗ್ರತ್ಸ್ವಪ್ನಯೋಃ ಸರ್ವಭೂತಾವಸ್ಥಃ ಸರ್ವವಸ್ತುದೃಗಾಭಾಸಃ ತುರೀಯ ಏವ ಇತಿ ಸರ್ವದೃಕ್ ಸದಾ । ''ನಾನ್ಯದತೋಽಸ್ತಿ ದ್ರಷ್ಟೃ'' (ಬೃ. ೩-೮-೧೧) ಇತಿ ಶ್ರುತೇಃ ॥

(ಭಾಷ್ಯಾರ್ಥ)

ತನ್ನನ್ನಾಗಲಿ, (ಮತ್ತೊಬ್ಬರನ್ನಾಗಲಿ ಸತ್ಯವನ್ನಾಗಲಿ ಅನೃತವನ್ನಾಗಲಿ)[1] ವಿಲಕ್ಷಣವಾದ ಅವಿದ್ಯಾಬೀಜದಿಂದ ಹುಟ್ಟಿರುವ ಹೊರಗಿನ ದ್ವೈತವನ್ನಾಗಲಿ ವಿಶ್ವತೈಜಸರುಗಳು (ಅರಿಯು)ವಂತೆ ಪ್ರಾಜ್ಞನು ಸ್ವಲ್ಪವೂ ಅರಿಯುವದಿಲ್ಲ. ಆದ್ದರಿಂದಲೇ ಇವನು ತತ್ತ್ವವನ್ನು ಅರಿಯದೆ ಇರುವದೆಂಬ ಅನ್ಯಥಾಗ್ರಹಣಕ್ಕೆ ಬೀಜವಾಗಿರುವ ತಮಸ್ಸಿನಿಂದ ಕಟ್ಟುವಡೆದಿರುತ್ತಾನೆ. (ತುರ್ಯದಲ್ಲಿ ಈ ಎರಡು ಬಂಧಗಳೂ ಇರುವದಿಲ್ಲ). ಹೇಗೆಂದರೆ ಆ ತುರ್ಯವು ಯಾವಾಗಲೂ ಸರ್ವದೃಕ್ಕಾಗಿರುವದು. ತುರೀಯಕ್ಕಿಂತ ಬೇರೆಯಾದದ್ದು ಇಲ್ಲದಿರುವದರಿಂದ[2] ಯಾವಾಗಲೂ ಎಂದೆಂದಿಗೂ ಅದು ಸರ್ವವೂ ದೃಕ್ಕೂ ಆಗಿರುತ್ತದೆಯಾಗಿ ಸರ್ವದೃಕ್ಕಾಗಿರುತ್ತದೆ. ಆದ್ದರಿಂದ ತತ್ತ್ವವನ್ನು ಅರಿಯದೆ ಇರುವದೆಂಬ ಬೀಜವು (ಅದರಲ್ಲಿ) ಇರುವದಿಲ್ಲ. ಅದರಲ್ಲಿ ಆ (ತತ್ತ್ವಾಗ್ರಹಣ)ದಿಂದ ಹುಟ್ಟುವ ಅನ್ಯಥಾಗ್ರಹಣವೂ ಆದ್ದರಿಂದಲೇ ಇರುವದಿಲ್ಲ. ಯಾವಾಗಲೂ ಬೆಳಕಿನ ಸ್ವರೂಪವೇ ಆಗಿರುವ ಸೂರ್ಯನಲ್ಲಿ ಆ (ಬೆಳಕಿಗೆ) ವಿರುದ್ಧವಾದ ಬೆಳಗದಿರುವಿಕೆಯಾಗಲಿ ಬೇರೆಯ ಬಗೆಯಿಂದ (ತಪ್ಪಾಗಿ) ಬೆಳಗುವದೆಂಬುದಾಗಲಿ ಇರಲಾರದಷ್ಟೆ. ''ನೋಡುವಾತನ ನೋಟಕ್ಕೆ ಲೋಪವಿರುವದೇ ಇಲ್ಲ'' (ಬೃ. ೪-೩-೨೩) ಎಂಬ ಶ್ರುತಿ ಇದಕ್ಕೆ ಪ್ರಮಾಣವು. ಅಥವಾ ಜಾಗ್ರತ್ಸ್ವಪ್ನಗಳಲ್ಲಿ ಎಲ್ಲಾ ಪ್ರಾಣಿಗಳಲ್ಲಿಯೂ ಇದ್ದುಕೊಂಡು ಎಲ್ಲಾ ವಸ್ತುಗಳನ್ನೂ ನೋಡುವಂತೆ ತೋರುತ್ತಿರುವವನು ತುರೀಯನೇ. ಆದ್ದರಿಂದ ಅವನು ಯಾವಾಗಲೂ ಸರ್ವದೃಕ್ಕಾಗಿರುವನು ಎಂದಿದೆ[3] (ಎಂದಾದರೂ ಅರ್ಥವನ್ನು ಮಾಡಬಹುದು). ''ಈ (ಅಕ್ಷರಕ್ಕಿಂತ) ಬೇರೆಯಾದ ನೋಡುವ (ತತ್ತ್ವವು) ಇರುವದಿಲ್ಲ.'' (ಬೃ. ೩-೮-೧೧)[4] ಎಂಬ ಶ್ರುತಿಯು ಇದಕ್ಕೆ ಸಾಧನವು.

---

1. ಇಷ್ಟು ಭಾಗವು ಭಾಷ್ಯಕ್ಕೆ ಅವಶ್ಯ.

2. ಹೊರಗೆ ತೋರುವ ವಸ್ತುವೆಲ್ಲವೂ ತುರೀಯದಲ್ಲಿ ಕಲ್ಪಿತವಾಗಿರುವದರಿಂದ ಪರಮಾರ್ಥವಾಗಿ ಅದೊಂದೇ ಎಲ್ಲವೂ ಆಗಿರುತ್ತದೆ ಎಂದರ್ಥ.

3. ವಿಶ್ವ, ತೈಜಸ-ಎಂಬ ರೂಪಗಳಿಂದ ಬಾಹ್ಯವಸ್ತುಗಳನ್ನು ನೋಡುತ್ತಿರುವಂತೆ ಕಾಣುವವನೂ ನಿಜವಾಗಿ ತುರೀಯನೇ, ತುರೀಯನಾದ ಆತ್ಮನನ್ನೇ ನಾವು ವಿಶ್ವನೆಂದೂ, ತೈಜಸನೆಂದೂ ವ್ಯವಹರಿಸುತ್ತಿರುವೆವು ಎಂದರ್ಥ.

4. ಅಕ್ಷರವೆಂಬ ಬ್ರಹ್ಮವೇ ಚೈತನ್ಯವಾಗಿರುವದರಿಂದ ದ್ರಷ್ಟೃ-ನೋಡತಕ್ಕದ್ದು. ಅದಕ್ಕಿಂತ ಬೇರೆಯಾಗಿ ನೋಡುವವರೆಂಬ ಜೀವರುಗಳು ಸ್ವತಂತ್ರವಾಗಿರುವದಿಲ್ಲ, ಎಂದು ಶ್ರುತಿಯ ಅರ್ಥ.

(ಭಾಷ್ಯ)

೪೮. ನಿಮಿತ್ತಾನ್ತರಪ್ರಾಪ್ತಾಶಙ್ಕಾನಿವೃತ್ತ್ಯರ್ಥಃ ಅಯಮಂ ಶ್ಲೋಕಃ । ಕಥಂ ದ್ವೈತಾಗ್ರಹಣಸ್ಯ ತುಲ್ಯತ್ವಾತ್ ಕಾರಣಬದ್ಧತ್ವಂ ಪ್ರಾಜ್ಞಸ್ಯೈವ ನ ತುರೀಯಸ್ಯ ?-ಇತಿ ಪ್ರಾಪ್ತಾ ಆಶಙ್ಕಾ ನಿವರ್ತ್ಯತೇ । ಯಸ್ಮಾತ್ ॥

(ಭಾಷ್ಯಾರ್ಥ)

ಬೇರೆ ಒಂದು ಕಾರಣದಿಂದ ಬರಬಹುದಾದ ಸಂಶಯವನ್ನು ತೊಲಗಿಸುವದಕ್ಕಾಗಿ ಈ ಶ್ಲೋಕವು (ಬಂದಿರುತ್ತದೆ). ದ್ವೈತವನ್ನು ಅರಿಯದೆ ಇರುವದೆಂಬುದು (ಇಬ್ಬರಿಗೂ) ಸಮಾನವಾಗಿರುವದರಿಂದ ಪ್ರಾಜ್ಞನಿಗೆ ಕಾರಣಾಬದ್ಧನಾಗಿರುತ್ತಾನೆ, ತುರೀಯನು (ಬದ್ಧ)ನಾಗಿಲ್ಲ ಎಂಬುದು ಹೇಗೆ ?- ಎಂದು ಆಶಂಕೆಯು ಬಂದೊದಗುತ್ತದೆ. (ಅದನ್ನು) ಪರಿಹರಿಸುತ್ತಾರೆ. ಏಕೆಂದರೆ :-

ದ್ವೈತಸ್ಯಾಗ್ರಹಣಂ ತುಲ್ಯಮುಭಯೋಃ ಪ್ರಾಜ್ಞತುರ್ಯಯೋಃ ।
ಬೀಜನಿದ್ರಾಯುತಃ ಪ್ರಾಜ್ಞಃ ಸಾ ಚ ತುರ್ಯೇ ನ ವಿದ್ಯತೇ ॥೧೩॥

೧೩. ದ್ವೈತವನ್ನು ಅರಿಯದಿರುವದು ಪ್ರಾಜ್ಞ, ತುರ್ಯ-ಇಬ್ಬರಿಗೂ ಸಮಾನವಾಗಿರುತ್ತದೆ. ಪ್ರಾಜ್ಞನು ಬೀಜನಿದ್ರಾಯುತನು, ಆದರೆ ಅದು ತುರ್ಯನಲ್ಲಿ ಇರುವದಿಲ್ಲ.

(ಭಾಷ್ಯ)

೪೯. ಬೀಜನಿದ್ರಾಯುತಃ । ತತ್ತ್ವಪ್ರತಿಬೋಧೋ ನಿದ್ರಾ । ಸೈವ ಚ ವಿಶೇಷಪ್ರತಿಬೋಧಪ್ರಸವಸ್ಯ ಬೀಜಮ್ । ಸಾ ಬೀಜನಿದ್ರಾ । ತಯಾ ಯುತಃ ಪ್ರಾಜ್ಞಃ । ಸದಾ ಸರ್ವದೃಕ್ತ್ವಭಾವತ್ವಾತ್ ತತ್ತ್ವಪ್ರತಿಬೋಧಲಕ್ಷಣಾ ಬೀಜನಿದ್ರಾ ತುರ್ಯೇ ನ ವಿದ್ಯತೇ । ಅತಃ ನ ಕಾರಣಬನ್ಧಸ್ತಸ್ಮಿನ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಬೀಜನಿದ್ರೆಯಿಂದ ಕೂಡಿದವನು (ಪ್ರಾಜ್ಞನು). ತತ್ತ್ವವನ್ನು ಅರಿಯದಿರುವದು ನಿದ್ರೆಯು ; ಅದೇ ಬಿಡಿಯ ಅರಿವು ಉಂಟಾಗುವದಕ್ಕೆ ಬೀಜವು[1]. ಅದೇ ಬೀಜನಿದ್ರೆ. ಪ್ರಾಜ್ಞನು ಆ (ಬೀಜನಿದ್ರೆಯಿಂದ) ಕೂಡಿರುತ್ತಾನೆ. ಯಾವಾಗಲೂ ನೋಡುವ ಸ್ವಭಾವ

1. ತತ್ತ್ವವನ್ನು ಅರಿಯದೆ ಇರುವದಲ್ಲದೆ ಮತ್ತೊಂದು ಅಜ್ಞಾನವನ್ನು ಕಾರಿಕೆಯಲ್ಲಾಗಲಿ ಭಾಷ್ಯದಲ್ಲಾಗಲಿ ಒಪ್ಪಿಲ್ಲ. ಪೀಠಿಕೆಯನ್ನು ನೋಡಿ

ದವನಾಗಿರುವದರಿಂದ ತುರೀಯನಲ್ಲಿ (ಆ. ಬೀಜನಿದ್ರೆಯು ಇರುವದಿಲ್ಲ[1].) ಆದ್ದರಿಂದ ಅವನಲ್ಲಿ ಕಾರಣಬಂಧವು ಇರುವದಿಲ್ಲ ಎಂದು ಅಭಿಪ್ರಾಯ.

ಸ್ವಪ್ನನಿದ್ರಾಯುತಾವಾದ್ಯೌ ಪ್ರಾಜ್ಞಸ್ತ್ವಸ್ವಪ್ನನಿದ್ರಯಾ ।
ನ ನಿದ್ರಾಂ ನೈವ ಚ ಸ್ವಪ್ನಂ ತುರ್ಯೇ ಪಶ್ಯನ್ತಿ ನಿಶ್ಚಿತಾಃ ॥೧೪॥

೧೪. ಮೊದಲನೆಯ ಇಬ್ಬರು ಕನಸುನಿದ್ರೆಗಳಿಂದ ಕೂಡಿದವರು ; ಆದರೆ ಪ್ರಾಜ್ಞನು ಕನಸಿಲ್ಲದ ನಿದ್ರೆಯಿಂದ (ಕೂಡಿರುವನು). ನಿಶ್ಚಯವುಳ್ಳವರಿಗೆ ತುರ್ಯನಲ್ಲಿ ನಿದ್ರೆಯಾಗಲಿ ಕನಸಾಗಲಿ ಕಾಣಿಸುವದಿಲ್ಲ.

(ಭಾಷ್ಯ)

ಋಂ. ಸ್ವಪ್ನಃ ಅನ್ಯಥಾಗ್ರಹಣಮ್ ಸರ್ಪ ಇವ ರಜ್ಜ್ವಾಮ್ ನಿದ್ರಾ ಉಕ್ತಾ ತತ್ತ್ವಾಪ್ರತಿಬೋಧಲಕ್ಷಣಂ ತಮಃ ಇತಿ । ತಾಭ್ಯಾಂ ಸ್ವಪ್ನನಿದ್ರಾಭ್ಯಾಂ ಯುತೌ[2] (ಆದ್ಯೌ)[3] ವಿಶ್ವತೈಜಸೌ । ಅತಃ ತೌ ಕಾರ್ಯಕಾರಣಬದ್ಧೌ ಇತ್ಯುಕ್ತೌ । ಪ್ರಾಜ್ಞಸ್ತು ಸ್ವಪ್ನವರ್ಜಿತಯಾ ಕೇವಲಯೈವ ನಿದ್ರಯಾ ಯುತಃ ಇತಿ ಕಾರಣಬದ್ಧಃ ಇತ್ಯುಕ್ತಮ್ । ನ ಉಭಯಂ ಪಶ್ಯನ್ತಿ ತುರೀಯೇ ನಿಶ್ಚಿತಾಃ ಬ್ರಹ್ಮವಿದಃ ವಿರುದ್ಧತ್ವಾತ್ ಸವಿತರಿ ಇವ ತಮಃ । ಅತಃ ನ ಕಾರ್ಯಕಾರಣಬದ್ಧಃ ಇತ್ಯುಕ್ತಸ್ತುರೀಯಃ ॥

(ಭಾಷ್ಯಾರ್ಥ)

ಕನಸೆಂದರೆ ಹಗ್ಗದಲ್ಲಿ ಹಾವನ್ನು (ಕಾಣುವಂತೆ)[4] ಬೇರೆಯಾಗಿಯೇ ಅರಿಯುವದು. ನಿದ್ರೆಯೆಂದರೆ ತತ್ತ್ವವನ್ನು ಅರಿಯದ್ದೆಂಬ ತಮಸ್ಸು ಎಂದು ಹಿಂದೆ ಹೇಳಿರುವದು. (ಮೊದಲನೆಯವರಾದ) ವಿಶ್ವತೈಜಸರಿಬ್ಬರೂ ಆ ಕನಸುನಿದ್ರೆಗಳಿಂದ ಕೂಡಿರುತ್ತಾರೆ. ಆದ್ದರಿಂದ ಅವರು ಕಾರ್ಯಕಾರಣಬದ್ಧರಾಗಿರುತ್ತಾರೆ ಎಂದು ಹೇಳಲಾಯಿತು. ಆದರೆ

1. ತುರೀಯಾತ್ಮನು ನಿತ್ಯಪ್ರಕಾಶನಾದ್ದರಿಂದ ತನ್ನನ್ನು ತಾನು ಅರಿಯಲಿಲ್ಲವೆಂಬ ನಿದ್ರೆಯಿಲ್ಲ ; ಸೂರ್ಯನು ಸೂರ್ಯನಿಗೆ ಮರೆ ಎಂಬುದು ಹೇಗೆ ಅಸಂಭವವೋ ಹಾಗೆ ಅದ್ವಿತೀಯನಾದ್ದರಿಂದ ಅವನೂ ದ್ವೈತವನ್ನು ಕಾಣನು ಎಂದು ಹೇಳಿದ್ದು ಸೂರ್ಯನು ಕತ್ತಲೆಯನ್ನು ಕಾಣನು ಎಂಬಂತೆ.

2. "ಯುಕ್ತೌ" ಆ ॥

3. "ಇತ್ಯರ್ಥಃ" ಎಂದು ಹೆಚ್ಚಾಗಿ ವಾ ॥

4. "ಸರ್ಪ ಇವ" ಎಂಬುದನ್ನು "ಸರ್ಪದರ್ಶನಮಿವ" ಎಂಬರ್ಥದಲ್ಲಿ ತೆಗೆದು ಕೊಳ್ಳಬೇಕು.

ಪ್ರಾಜ್ಞನು ಕನಸಿಲ್ಲದ ಬರಿಯ ನಿದ್ರೆಯಿಂದಲೇ ಕೂಡಿರುತ್ತಾನೆ ; ಆದ್ದರಿಂದ (ಅವನು) ಕಾರಣಕ್ಕೆ ಕಟ್ಟುಬಿದ್ದಿರುತ್ತಾನೆಂದು ಹೇಳಿರುತ್ತದೆ. ನಿಶ್ಚಯವುಳ್ಳವರಿಗೆ, ಬ್ರಹ್ಮಜ್ಞಾನಿಗಳಿಗೆ, ತುರೀಯನಲ್ಲಿ (ಈ) ಎರಡೂ ಕಾಣಿಸುವುದಿಲ್ಲ , ಏಕೆಂದರೆ ಸೂರ್ಯನಲ್ಲಿ ಕತ್ತಲೆ (ಇರುವದು) ಹೇಗೋ ಹಾಗೆ (ಇವು ತುರೀಯನಲ್ಲಿರುವದು) ವಿರುದ್ಧವಾಗಿರುತ್ತದೆ. ಆದ್ದರಿಂದ ತುರೀಯನು ಕಾರ್ಯಕ್ಕಾಗಲಿ, ಕಾರಣಕ್ಕಾಗಲಿ ಕಟ್ಟುಬಿದ್ದಿಲ್ಲವೆಂದು ಹೇಳಲಾಗಿದೆ.

## ತುರೀಯನ ಜ್ಞಾನ

(ಭಾಷ್ಯ)

೫೧. ಕದಾ ತುರೀಯೇ ನಿಶ್ಚಿತೋ ಭವತಿ ಇತಿ ? ಉಚ್ಯತೇ -

(ಭಾಷ್ಯಾರ್ಥ)

ಯಾವಾಗ ತುರೀಯನ ವಿಷಯದಲ್ಲಿ ನಿಶ್ಚಯವುಳ್ಳವನಾಗುವನು ? ಎಂದರೆ (ಈ ಶ್ಲೋಕದಲ್ಲಿ) ಹೇಳಲಾಗುತ್ತದೆ.

ಅನ್ಯಥಾ ಗೃಹ್ಣತಃ ಸ್ವಪ್ನೋ ನಿದ್ರಾ ತತ್ತ್ವಮಜಾನತಃ ।
ವಿಪರ್ಯಾಸೇ ತಯೋಃ ಕ್ಷೀಣೇ ತುರೀಯಂ ಪದಮಶ್ನುತೇ ॥೧೫॥

೧೫. ಬೇರೆಯಾಗಿ ಅರಿತುಕೊಳ್ಳುವವನಿಗೆ ಕನಸು ; ತತ್ತ್ವವನ್ನು ಅರಿತುಕೊಳ್ಳದೆ ಇರುವದು ನಿದ್ರೆ. ಇವೆರಡರ ತಪ್ಪುಕಲ್ಪನೆಯು ನಾಶವಾದರೆ ತುರೀಯ ಸ್ಥಾನವನ್ನು ಪಡೆದುಕೊಳ್ಳುತ್ತಾನೆ.

(ಭಾಷ್ಯ)

೫೨. ಸ್ವಪ್ನಜಾಗರಿತಯೋಃ ಅನ್ಯಥಾ ರಜ್ಜ್ವಾಂ ಸರ್ಪಮಿವ[1] ಗೃಹ್ಣತಃ ತತ್ತ್ವಂ ಸ್ವಪ್ನಃ ಭವತಿ । ನಿದ್ರಾ ತತ್ತ್ವಮ್ ಅಜಾನತಃ ಶಿಶ್ನಮ ಇವಸ್ಥಾಸು ತುಲ್ಯಾ । ಸ್ವಪ್ನ ನಿದ್ರಯೋಃ ತುಲ್ಯತ್ವಾತ್ ವಿಶ್ವತೈಜಸಯೋಃ ವಿಕರಾಶಿತ್ವಮ್ । ಅನ್ಯಥಾಗ್ರಹಣ ಪ್ರಾಧಾನ್ಯಾತ್ ಗುಣಭೂತಾ ನಿದ್ರಾ ಇತಿ ತಸ್ಮಿನ್ ವಿಪರ್ಯಾಸಃ ಸ್ವಪ್ನಃ । ತೃತೀಯೇ ತು ಸ್ಥಾನೇ ತತ್ತ್ವಾಜ್ಞಾನಲಕ್ಷಣಾ, ನಿದ್ರೈವ ಕೇವಲಾ, ವಿಪರ್ಯಾಸಃ ಉಭಯೋಃ ಕಾರ್ಯ ಕಾರಣಸ್ಥಾನಯೋಃ ಅನ್ಯಥಾಗ್ರಹಣಾಗ್ರಹಣಲಕ್ಷಣವಿಪರ್ಯಾಸೇ[2] ಕಾರ್ಯಕಾರಣಬಂಧ

---

1. "ಸರ್ಪ ಇವ" ಆ ॥ ಕಾ ॥ "ಸರ್ಪವತ್" ಮಾ ॥
2. "ತತ್ತ್ವಾಗ್ರಹಣಲಕ್ಷಣಾ" ಮಾ ॥ ೩ "ಅನ್ಯಥಾಗ್ರಹಣತತ್ತ್ವಾಗ್ರಹ ..." ಮಾ ॥

ರೂಪೇ ಪರಮಾರ್ಥತತ್ತ್ವಪ್ರತಿಬೋಧತಃ ಕ್ಷೀಣೇ ತುರೀಯಂ ಪದಮ್ ಅಶ್ನುತೇ । ತದಾ ಉಭಯಲಕ್ಷಣಂ ಬನ್ಧನಂ[1] ತತ್ರ ಅಪಶ್ಯನ್ ತುರೀಯೇ ನಿಶ್ಚಿತೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಕನಸು, ಎಚ್ಚರ-ಇವುಗಳಲ್ಲಿ ಹಗ್ಗದಲ್ಲಿ ಹಾವನ್ನು ಕಾಣುವಂತೆ ತತ್ತ್ವವನ್ನು ಬೇರೆಯ ರೂಪದಿಂದ ಅರಿಯುತ್ತಿರುವವನಿಗೆ ಕನಸಾಗಿರುತ್ತದೆ. ತತ್ತ್ವವನ್ನು ಅರಿಯದವನಿಗೆ ನಿದ್ರೆಯಾ(ಗಿರುತ್ತದೆ. ಅದು) ಮೂರು ಅವಸ್ಥೆಗಳಲ್ಲಿಯೂ ಸಮವಾಗಿರುತ್ತದೆ. ಕನಸುನಿದ್ರೆಗಳು (ಇಬ್ಬರಿಗೂ) ಸಮಾನವಾಗಿರುವದರಿಂದ ವಿಶ್ವತೈಜಸರಿಬ್ಬರನ್ನೂ ಒಂದು ರಾಶಿ(ಯಾಗಿ ಮಾಡಿ ಹೇಳಿದೆ)[2] ಮತ್ತು (ಅವರಿಗೆ) ಬೇರೆಯಾಗಿ ತಿಳಿಯುವದೆಂಬುದೇ ಮುಖ್ಯವಾಗಿರುವದರಿಂದ ನಿದ್ರೆಯು ಅಮುಖ್ಯವಾಗಿರುತ್ತದೆಯಾಗಿ ಆ (ರಾಶಿಯಲ್ಲಿ) ಕನಸೇ ತಪ್ಪು ಕಲ್ಪನೆ. ಆದರೆ ಮೂರನೆಯ (ನಿದ್ರೆ ಎಂಬ) ಅವಸ್ಥೆಯಲ್ಲಿ ತತ್ತ್ವವನ್ನು ಅರಿಯದಿರುವದೆಂಬ ನಿದ್ರೆಯೊಂದೇ ತಪ್ಪುಕಲ್ಪನೆ. ಆದ್ದರಿಂದ ಆ ಕಾರ್ಯ ಕಾರಣಸ್ಥಾನಗಳಲ್ಲಿರುವ[3] ಬೇರೆಯಾಗಿ ಅರಿಯುವದು, ತತ್ತ್ವವನ್ನು ಅರಿಯದಿರುವದು-ಎಂಬ ತಪ್ಪುಕಲ್ಪನೆಯು ಪರಮಾರ್ಥವಾದ ತತ್ತ್ವವನ್ನು ತಿಳಿದುಕೊಳ್ಳುವದರಿಂದ ಹೋದರೆ ತುರೀಯಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಆಗ (ಈ) ಎರಡು ವಿಧವಾದ ಬಂಧವನ್ನೂ ಅದರಲ್ಲಿ ಕಾಣದೆ ತುರೀಯನಲ್ಲಿ ನಿಶ್ಚಯವಳ್ಳವನಾಗುತ್ತಾನೆ ಎಂದರ್ಥ[4].

ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ ।
ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ ॥೧೬॥

೧೬. ಅನಾದಿಮಾಯೆಯಿಂದ ನಿದ್ರೆಮಾಡುತ್ತಿರುವ ಜೀವನು ಯಾವಾಗ ಎಚ್ಚರದಿಂದಿರುವನೋ ಆಗ ಅಜನೂ ಅನಿದ್ರನೂ ಅಸ್ವಪ್ನನೂ (ಆಗಿರುವ) ಅದ್ವೈತನನ್ನು ಅರಿತುಕೊಳ್ಳುವನು.

---

1. "ಬನ್ಧರೂಪಮ್" ಆ॥ ಆ॥ 2. ತಪ್ಪಾಗಿ ದ್ವೈತವನ್ನು ಅರಿಯುವದೆಂಬ ಕಾರ್ಯಾಜ್ಞಾನದ ಸ್ಥಾನ, ಸರಿಯಾಗಿ ಅದ್ವೈತವನ್ನು ಅರಿಯದಿರುವದೆಂಬ ಕಾರಣಾಜ್ಞಾನದ ಸ್ಥಾನ-ಎಂಬ ಎರಡೇ ಅವಸ್ಥೆಗಳನ್ನು ಇಟ್ಟುಕೊಂಡರೆ ಸಾಕಾಗಿದೆ ಎಂದರ್ಥ.

3. ನಿದ್ರೆಯು ಎಚ್ಚರಕನಸುಗಳಿಗೆ ಕಾರಣವೆಂದಾಗಲಿ ಅವು ನಿದ್ರೆಯ ಕಾರ್ಯವೆಂದಾಗಲಿ ಅರ್ಥವನ್ನು ಮಾಡಬಾರದು. ಕಾರ್ಯವೆಂದರೆ ತಪ್ಪುತಿಳಿವಳಿಕೆ, ಕಾರಣವೆಂದರೆ ಸರಿಯಾಗಿ ತಿಳಿಯದಿರುವದು. ಈ ಅಜ್ಞಾನಗಳಿರುವ ಅವಸ್ಥೆಗಳಾದ್ದರಿಂದ ಇವನ್ನು ಕಾರ್ಯಕಾರಣಸ್ಥಾನಗಳೆಂದು ಕರೆದಿದೆ.

4. ಜ್ಞಾನವೇ ತುರೀಯನ ಪ್ರಾಪ್ತಿ. ಸ್ವರ್ಗಾದಿಗಳಂತೆ ಈ ಪ್ರಾಪ್ತಿಗೆ ಎಲ್ಲಿಗೂ ಹೋಗ ಬೇಕಾದದ್ದಿಲ್ಲ-ಎಂದು ಭಾವ.

(ಭಾಷ್ಯ)

೫೩. ಯೋಽಯಂ ಸಂಸಾರೀ ಜೀವಃ ಸ ಉಭಯಲಕ್ಷಣೇನ-ತತ್ತ್ವಪ್ರತಿಬೋಧರೂಪೇಣ ಬೀಜಾತ್ಮನಾ ಅನ್ಯಥಾಗ್ರಹಣಲಕ್ಷಣೇನ ಚ ಅನಾದಿಕಾಲಪ್ರವೃತ್ತೇನ ಮಾಯಾಲಕ್ಷಣೇನ ಸ್ವಾಪೇನ[1] ಮಮ ಅಯಂ ಪಿತಾ, ಪುತ್ರೋಽಯಮ್, ನಪ್ತಾ, ಕ್ಷೇತ್ರಮ್, ಗೃಹಮ್, ಪಶವಃ, ಅಹಮ್ ಏಷಾಂ ಸ್ವಾಮೀ, ಸುಖೀ, ದುಃಖೀ, ಕೃಶಿತೋಽಹಮ್ ಅನೇನ, ವರ್ಧಿತಶ್ಚ ಅನೇನ ಇತಿ ಏವಂಪ್ರಕಾರಾನ್ ಸ್ವಪ್ನಾನ್ ಸ್ವಾನದ್ವಯೋಽಪಿ ಪಶ್ಯನ್ ಸುಪ್ತಃ, ಯದಾ ವೇದಾನ್ತಾರ್ಥತತ್ತ್ವಾಭಿಜ್ಞೇನ ಪರಮಕಾರುಣಿಕೇನ ಗುರುಣಾ "ನಾಸಿ ಏವಂ ತ್ವಂ ಹೇತುಫಲಾತ್ಮಕಃ ಕಿಂತು ತತ್ ತ್ವಮಸಿ" ಇತಿ ಪ್ರತಿಬೋಧ್ಯಮಾನಃ[2], ತದಾ ಏವಂ ಪ್ರತಿಬುಧ್ಯತೇ । ಕಥಮ್ ? ನಾಸ್ಮಿನ್ ಬಾಹ್ಯಮ್ ಆಭ್ಯನ್ತರಂ ವಾ ಜನ್ಮಾದಿ ಭಾವವಿಕಾರಃ ಅಸ್ತಿ । ಅತಃ ಅಜಮ್ 'ಸಬಾಹ್ಯಾಭ್ಯನ್ತರೋ ಹ್ಯಜಃ' (ಮುಂ. ೨-೧-೨) ಇತಿ ಶ್ರುತೇಃ[3] । ಸರ್ವಭಾವವಿಕಾರವರ್ಜಿತಮ್ ಇತ್ಯರ್ಥಃ । ಯಸ್ಮಾತ್ ಜನ್ಮಾದಿ ಕಾರಣಭೂತಂ ನ ಅಸ್ಮಿನ್ ಅವಿದ್ಯಾತಮೋಬೀಜಂ ನಿದ್ರಾ ವಿದ್ಯತೇ ಇತಿ ಅನಿದ್ರಮ್ । ಅನಿದ್ರಂ ಹಿ ತತ್ ತುರೀಯಮ್ । ಅತ ಏವ ಅಸ್ವಪ್ನಮ್ । ತನ್ನಿಮಿತ್ತತ್ವಾತ್ ಅನ್ಯಥಾಗ್ರಹಣಸ್ಯ । ಯಸ್ಮಾಚ್ಚ ಅನಿದ್ರಮ್ ಅಸ್ವಪ್ನಮ್ ತಸ್ಮಾತ್ ಅಜಮ್ ಅದ್ವೈತಂ ತುರೀಯಮ್ ಆತ್ಮಾನಂ ಬುಧ್ಯತೇ ತದಾ ॥

(ಭಾಷ್ಯಾರ್ಥ)

ಈ ಸಂಸಾರಿಯಾದ ಜೀವನೆಂದಾನಲ್ಲ, ಇವನು ತತ್ತ್ವವನ್ನು ಅರಿಯದ್ದೆಂಬ ರೂಪದ ಬೀಜರೂಪವಾದ (ನಿದ್ರೆ), ತಪ್ಪಾಗಿ ತಿಳಿಯುವದೆಂಬ (ನಿದ್ರೆ)-ಈ ಎರಡು ಬಗೆಯ ಅನಾದಿಕಾಲದಿಂದ ಸಾಗಿಬಂದಿರುವ ಮಾಯಾರೂಪವಾದ[4] ನಿದ್ರೆಯಿಂದ "ಇವನು ನನ್ನ ತಂದೆ, ಇವನು ಮಗನು, (ಇವನು) ಮುಮ್ಮಗನು, (ಇದು) ಹೊಲವು, ಮನೆ, (ಇವು) ದನಕರುಗಳು, ನಾನು ಅವುಗಳ ಒಡೆಯನು, ಸುಖಿಯಾಗಿರುವೆನು, ದುಃಖಿಯಾಗಿರುವೆನು, ಇವನಿಂದ ನಾನು ಹಾಳಾದೆನು, ಇವನಿಂದ ಬಾಳಿದೆನು"-ಎಂದೀ

---

1. 'ಸ್ವಪ್ನೇನ' ಆ।। , ಮೈ।। ಕಾ।। ಪಾಠದಲ್ಲಿ ಈ ಮಾತೇ ಇಲ್ಲ.

2. ಇಲ್ಲಿ 'ಯದಾ' ಎಂಬ ಮಾತು ಆ।। ಮೈ।। ಗಳಲ್ಲಿ ಹೆಚ್ಚಾಗಿದೆ ; ಮೊದಲಿರುವ ಯದಾ ದೂರವಾಯಿತೆಂದು ಮತ್ತೆ ಸಂಬಂಧವನ್ನು ತೋರಿಸುವದಕ್ಕೆ ಪ್ರಯೋಗಿಸಿದೆ- ಎಂದು ಭಾವಿಸಬೇಕು.

3. 'ಸಬಾಹ್ಯಾಭ್ಯನ್ತರಸರ್ವವಿಕಾರವರ್ಜಿತಮ್ ಇತ್ಯರ್ಥಃ' ಆ।। ಮೈ।।

4. ಆತ್ಮನಿಗೆ ತತ್ತ್ವವನ್ನು ಅರಿಯದ್ದೆಂಬ 'ಅಜ್ಞಾನನಿದ್ರೆಯು ಅನಾದಿಕಾಲದಿಂದ ಇದ್ದು ಕೊಂಡಿದ್ದರೂ ಅದು ಅವನ ಸ್ವರೂಪಕ್ಕೆ ಸೇರಿರುವ ಧರ್ಮವಲ್ಲ, ಬರಿಯ ಮಾಯೆ, ಹುಸಿತೋರಿಕೆ.

ಪರಿಯಾದ ಕನಸುಗಳನ್ನು ಎರಡು ಅವಸ್ಥೆಗಳಲ್ಲಿಯೂ[1] ಕಾಣುತ್ತಾ ನಿದ್ರೆಮಾಡು ತ್ತಿದ್ದವನು, ಯಾವಾಗ ವೇದಾಂತಗಳ ಅರ್ಥದ ನಿಜವನ್ನು ತಿಳಿದಿರುವ ಪರಮ ಕಾರುಣಿಕನಾದ ಗುರುವು ''ನೀನು ಹೀಗೆ ಹೇತುಫಲರೂಪನಾಗಿರುವದಿಲ್ಲ. ಮತ್ತೇನೆಂದರೆ ಅದೇ ನೀನಾಗಿರುವೆ'' ಎಂದು ಎಚ್ಚರಿಸುವನೋ ಆಗ ಹೀಗೆಂದು ಅರಿತುಕೊಳ್ಳು ವನು. ಹೇಗೆ ? ಎಂದರೆ : ಈ (ಆತ್ಮನಲ್ಲಿ) ಹೊರಗಾಗಲಿ ಒಳಗಾಗಲಿ ಜನ್ಮವೆಂಬ[2] ಭಾವವಿಕಾರವು ಇರುವದಿಲ್ಲ ; ಆದ್ದರಿಂದ (ಈತನು) ಅಜನು. ''ಒಳಗೂ ಹೊರಗೂ ಹುಟ್ಟಿಲ್ಲದವನು'' (ಮುಂ. ೨-೧-೨) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಯಾವ ಭಾವವಿಕಾರಗಳೂ ಇಲ್ಲದವನು ಎಂದರ್ಥ[3]. ಏಕೆಂದರೆ ಹುಟ್ಟು ಮುಂತಾದದ್ದಕ್ಕೆ ಕಾರಣವಾಗಿರುವ ಅವಿದ್ಯೆ ಎಂಬ ಮಬ್ಬಿನ ಬೀಜವಾದ ನಿದ್ರೆಯು ಇವನಲ್ಲಿರುವದಿಲ್ಲ[4] ; ಆದ್ದರಿಂದ ಇದು ಅನಿದ್ರವು. ಆ ತುರೀಯವು (ಯಾವ) ನಿದ್ರೆಯೂ ಇಲ್ಲದ್ದಷ್ಟೆ. ಆದ್ದರಿಂದಲೇ ಅದು ಅಸ್ವಪ್ನವು ; ಏಕೆಂದರೆ ಆ (ನಿದ್ರೆಯೇ) ಅನ್ಯಥಾಗ್ರಹಣವೆಂಬ (ಕನಸಿಗೆ) ಕಾರಣವು. (ಹೀಗೆ) ನಿದ್ರೆಯಿಲ್ಲದೆ ಕನಸಿಲ್ಲದೆ ಇರುವದರಿಂದ ಆತನು ಹುಟ್ಟಿಲ್ಲದ ಅದ್ವೈತನೂ (ಆಗಿರುತ್ತಾನೆ. ಅಂಥ ಅದ್ವೈತನಾದ) ತುರೀಯನನ್ನು (ತನ್ನ) ಆತ್ಮನೆಂದು ಆಗ ಅರಿತುಕೊಳ್ಳುತ್ತಾನೆ.

## ದ್ವೈತವು ನಿಜವಾಗಿರುವದೂ ಇಲ್ಲ, ಹೋಗುವದೂ ಇಲ್ಲ

(ಭಾಷ್ಯ)

೫೪. ಪ್ರಪಞ್ಚನಿವೃತ್ತ್ಯಾ ಚೇತ್ ಪ್ರತಿಬುಧ್ಯತೇ, ಅನಿವೃತ್ತೌ ಪ್ರಪಞ್ಚೇ ಕಥಮ್ ಅದ್ವೈತಮ್ ಇತಿ ? ಉಚ್ಯತೇ-

1. ಎಚ್ಚರಿನಲ್ಲಾಗಲಿ ಕನಸಿನಲ್ಲಾಗಲಿ ದ್ವೈತವನ್ನು ಕಾಣುವದೆಂಬುದು ಅನ್ಯಥಾಜ್ಞಾನರೂಪ ವಾದ ಕನಸೇ.

2. ಜನ್ಮಾದಿ ಎಂದು ಮೂಲದಲ್ಲಿದೆಯಾದರೂ 'ಆದಿ' ಎಂಬ ಮಾತನ್ನು ಬರೆದವರು ಹೆಚ್ಚಾಗಿ ಸೇರಿಸಿಕೊಂಡಿರುವರೆಂದು ಕಾಣುತ್ತದೆ.

3. ಆತ್ಮನಿಗೆ ಜನ್ಮವಿಲ್ಲವೆಂದು ಹೇಳಿರುವದು ಇರುವದು, ಬೆಳೆಯುವದು, ಮಾರ್ಪಡು ವದು, ಕುಂದುವದು, ಸಾಯುವದು-ಎಂಬ ವಿಕಾರಗಳೂ ಇಲ್ಲವೆಂದು ಹೇಳುವದಕ್ಕೆ ಎಂದು ಅಭಿಪ್ರಾಯ. ಮುಂ. ಭಾ. ಭಾ. ೫೩ ; ಗೀ. ಭಾ. ಭಾ. ೬೪.

4. ಅನ್ಯಥಾಜ್ಞಾನವು ಜನ್ಮಾದಿಗಳಿಗೆ ಕಾರಣ ; ಅಜ್ಞಾನನಿದ್ರೆಯು ಅನ್ಯಥಾಜ್ಞಾನಕ್ಕೆ ಕಾರಣ.

(ಭಾಷ್ಯಾರ್ಥ)

(ಆಕ್ಷೇಪ) :- ಪ್ರಪಂಚವು ತೊಲಗುವದರಿಂದ ಅರಿತುಕೊಳ್ಳುತ್ತಾನಾದರೆ, ಪ್ರಪಂಚವು ಹೋಗದೆ ಇರುವಾಗ ಅದ್ವೈತವು ಹೇಗೆ ?[1]

(ಪರಿಹಾರ) :- ಹೇಳುತ್ತೇವೆ :-

ಪ್ರಪಞ್ಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ।
ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ  ॥೧೭॥

೧೭. ಪ್ರಪಂಚವು ಇರುವದಾದರೆ ಹೋದೀತು, ಸಂಶಯವಿಲ್ಲ. ಈ ದ್ವೈತವು ಮಾಯಾಮಾತ್ರವು, ಪರಮಾರ್ಥವಾಗಿ ಅದ್ವೈತವು.

(ಭಾಷ್ಯ)

೫೫. ಸತ್ಯಮ್ ಏವಂ ಸ್ಯಾತ್ ಪ್ರಪಞ್ಚೋ ಯದಿ ವಿದ್ಯೇತ । ರಜ್ಜ್ವಾಂ ಸರ್ಪ ಇವ ಕಲ್ಪಿತತ್ವಾತ್ ನ ತು ಸ ವಿದ್ಯತೇ । ವಿದ್ಯಮಾನಶ್ಚೇತ್ ನಿವರ್ತೇತ ನ ಸಂಶಯಃ । ನ ಹಿ ರಜ್ಜ್ವಾಂ ಭ್ರಾನ್ತಿಬುದ್ಧ್ಯಾ ಕಲ್ಪಿತಃ ಸರ್ಪಃ ವಿದ್ಯಮಾನಃ ಸನ್ ವಿವೇಕತೋ ನಿವೃತ್ತಃ । ನ ಚ[2] ಮಾಯಾ ಮಾಯಾವಿನಾ ಪ್ರಯುಕ್ತಾ ತದ್ದರ್ಶಿನಾಂ ಚಕ್ಷುರ್ಬನ್ಧಾಪಗಮೇ ವಿದ್ಯಮಾನಾ ಸತೀ ನಿವೃತ್ತಾ । ತಥಾ ಇದಂ ಪ್ರಪಞ್ಚಾಖ್ಯಂ ಮಾಯಾಮಾತ್ರಂ ದ್ವೈತಮ್ । ರಜ್ಜುವತ್ ಮಾಯಾವಿವಚ್ಚ ಅದ್ವೈತಂ ಪರಮಾರ್ಥತಃ । ತಸ್ಮಾತ್ ನ ಕಶ್ಚಿತ್ ಪ್ರಪಞ್ಚಃ ಪ್ರವೃತ್ತಃ ನಿವೃತ್ತೋ ವಾ ಅಸ್ತಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ನಿಜ, ಪ್ರಪಂಚವು ಇರುವದಾದರೆ ಹೀಗೆ ಆದೀತು[3]. ಆದರೆ ಹಗ್ಗದಲ್ಲಿ ಹಾವಿನಂತೆ ಅದು ಕಲ್ಪಿತವಾಗಿರುವದರಿಂದ ಅದು ಇರುವದಿಲ್ಲ[4]. ಇರುವದಾದರೆ ಹೋದೀತು,

1. ಮಾಯಾನಿದ್ರೆಯು ಹೋಗಬೇಕು ಎಂದದ್ದರಿಂದ ಪ್ರಪಂಚವು ತೊಲಗಿದ ಬಳಿಕ ಅದ್ವೈತ ಜ್ಞಾನವಾಗುತ್ತದೆ ಎಂದು ಪೂರ್ವಪಕ್ಷಿ ಭಾವಿಸಿರುತ್ತಾನೆ.

2. 'ನೈವ' ಆ॥ ಕಾ॥ ಮೈ॥

3. ಪ್ರಪಂಚವು ಇರುವಾಗ ಅದ್ವೈತವೆಂಬುದು ಹೊಂದುವದಿಲ್ಲ ಎಂಬ ಆಕ್ಷೇಪವು ಯುಕ್ತವಾದೀತು ಎಂದು ಭಾವ. ಕಾರಣಾಧೀನವಾಗಿ ಪ್ರಪಂಚವು ಇರುವಾಗ ಅದು ಲಯವಾದರೂ ಕಾರಣವಿದ್ದರೆ ನಿವೃತ್ತಿಯು ತೀರ ಆಯಿತೆಂದು ಹೇಳಲಾಗುವದಿಲ್ಲ ಎಂಬ ಶಂಕೆಯು ಹುಟ್ಟುತ್ತಿತ್ತು- ಎಂದು ಆ॥ ವ್ಯಾಖ್ಯಾನದಲ್ಲಿ ಕಲ್ಪಿಸಿರುವ ಶ್ಲೋಕಾರ್ಥವು ಸರಿಯಲ್ಲ.

4. ಅದು ತೋರುತ್ತಿದ್ದರೂ ನಿಜವಾಗಿಲ್ಲ ; ಆದ್ದರಿಂದ ಅದ್ವೈತಕ್ಕೆ ಹಾನಿಯಿಲ್ಲ.

(ಇದಕ್ಕೆ) ಸಂಶಯವಿಲ್ಲ[1]. ಹಗ್ಗದಲ್ಲಿ ಭ್ರಾಂತಿಬುದ್ಧಿಯಿಂದ ಕಲ್ಪಿತವಾಗಿರುವ ಹಾವು[2] (ನಿಜವಾಗಿ) ಇದ್ದುಕೊಂಡು ವಿವೇಕದಿಂದ ಹೋಗುವದಿಲ್ಲವಷ್ಟೆ. (ಹಾಗೆಯೇ) ಮಾಯಾವಿಯು ಹಾಕಿದ ಮಾಯೆಯು ಅದನ್ನು ನೋಡುತ್ತಿರುವವರ ಕಣ್ಣುಕಟ್ಟು ಹೋಗುತ್ತಲೂ (ಮೊದಲು) ಇದ್ದದ್ದು (ಆಗ) ಹೋಗುವದೂ ಇಲ್ಲ. ಅದರಂತೆಯೇ ಈ ಪ್ರಪಂಚವೆಂಬ ದ್ವೈತವು ಬರಿಯ ಮಾಯೆ ; (ದೃಷ್ಟಾಂತದ) ಹಗ್ಗದಂತೆಯೂ ಮಾಯಾವಿಯಂತೆಯೂ ನಿಜವಾಗಿ ಅದ್ವೈತವೇ (ಇರುವದು.) ಆದ್ದರಿಂದ ಯಾವ ಪ್ರಪಂಚವೂ ಬಂದದ್ದೂ ಇಲ್ಲ, ಹೋದದ್ದೂ ಇಲ್ಲ[3]-ಎಂದು ಅಭಿಪ್ರಾಯವು.

(ಭಾಷ್ಯ)

೫೬. ನನು ಶಾಸ್ತಾ ಶಾಸ್ತ್ರಂ ಶಿಷ್ಯಃ ಇತಿ ಅಯಂ ವಿಕಲ್ಪಃ ಕಥಂ ನಿವೃತ್ತಃ ಇತಿ ? ಉಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಗುರು, ಶಾಸ್ತ್ರ, ಶಿಷ್ಯ-ಎಂಬ ಈ ವಿಕಲ್ಪವಾದರೂ ಹೇಗೆ ಹೋಗುವದು ?

(ಪರಿಹಾರ) :- ಹೇಳುತ್ತೇವೆ.

**ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ ।**
**ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ ॥೧೮॥**

೧೮. ವಿಕಲ್ಪವು ಯಾರಿಂದಲಾದರೂ ಕಲ್ಪಿತವಾಗಿದ್ದಿದ್ದರೆ ಹೋಗಬಹುದಾಗಿತ್ತು. ಉಪದೇಶಕ್ಕಾಗಿ ಈ ವಾದವು, ತಿಳಿದರೆ ದ್ವೈತವಿರುವದಿಲ್ಲ.

(ಭಾಷ್ಯ)

೫೭. ವಿಕಲ್ಪಃ ವಿನಿವರ್ತೇತ ಯದಿ ಕೇನಚಿತ್ ಕಲ್ಪಿತಃ ಸ್ಯಾತ್ । ಯಥಾ ಅಯಂ ಪ್ರಪಞ್ಚಃ ಮಾಯಾರಜ್ಜುಸರ್ಪವತ್, ತಥಾ ಅಯಂ ಶಿಷ್ಯಾದಿಭೇದವಿಕಲ್ಪೋಽಪಿ ಪ್ರಾಕ್ ಪ್ರತಿಬೋಧಾದೇವ ಉಪದೇಶನಿಮಿತ್ತಃ । ಅತಃ ಉಪದೇಶಾತ್ ಅಯಂ ವಾದಃ

1. ಇರುವದು ಹೋಗಬೇಕು-ಎಂಬುದು ಇಲ್ಲಿ ವಿವಕ್ಷಿತವಲ್ಲ ; ದ್ವೈತವು ನಿಜವಾಗಿದ್ದರೆ ಅದು ಹೋಗದೆ ಅದ್ವೈತವು ಹೇಗೆ ಎಂದು ಶಂಕಿಸಬಹುದಾಗಿತ್ತು ಎಂದು ಭಾವ.

2. ಹಗ್ಗದ ಹಾವೇ ಮುಂತಾದ ತೋರಿಕೆಗಳು ಅವಿದ್ಯಾಪರಿಣಾಮವಾಗಿ ತತ್ಕಾಲಕ್ಕೆ ಹುಟ್ಟುವವು ಎಂಬ ಈಚಿನ ಕೆಲವರು ವೇದಾಂತಿಗಳ ಪ್ರಕ್ರಿಯೆಯು ಭಾಷ್ಯದಲ್ಲಿ ಕಾಣುವದಿಲ್ಲ.

3. ಅದ್ವೈತವನ್ನು ಅರಿತುಕೊಳ್ಳುವದೇ ಪ್ರಪಂಚನಿವೃತ್ತಿ.

ಶಿಷ್ಯಃ ಶಾಸ್ತಾ ಶಾಸ್ತ್ರಮ್ ಇತಿ । ಉಪದೇಶಕಾರ್ಯೇ ತು ಜ್ಞಾನೇ ನಿರ್ವೃತ್ತೇ ಜ್ಞಾತೇ ಪರಮಾರ್ಥತತ್ತ್ವೇ ದ್ವೈತಂ ನ ವಿದ್ಯತೇ ॥

(ಭಾಷ್ಯಾರ್ಥ)

ಯಾರಾದರೂ[1] ಕಲ್ಪಿಸಿದ್ದಾದರೆ ವಿಕಲ್ಪವು ಹೋಗಿತು[2]. ಹೇಗೆ ಈ ಪ್ರಪಂಚವು ಮಾಯೆಯಂತೆಯೂ, ಹಗ್ಗದ ಹಾವಿನಂತೆಯೂ (ಭ್ರಾಂತಿಯಾಗಿರುವದೋ) ಹಾಗೆಯೇ ಶಿಷ್ಯನೇ ಮುಂತಾದ ಭೇದ(ರೂಪವಾದ) ವಿಕಲ್ಪವೂ ಜ್ಞಾನವಾಗುವ ಮೊದಲೇ ಉಪದೇಶವೆಂಬ ಕಾರಣದಿಂದ (ಆಗಿರುತ್ತದೆ)[3]. ಆದ್ದರಿಂದ ಶಿಷ್ಯ, ಗುರು, ಶಾಸ್ತ್ರ-ಎಂಬ ಈ ವಾದವೂ ಉಪದೇಶಕ್ಕಾಗಿ. ಆದರೆ ಉಪದೇಶದ ಫಲವಾದ ಜ್ಞಾನವು ಉಂಟಾದರೆ, ಪರಮಾರ್ಥತತ್ತ್ವವನ್ನು ಅರಿತುಕೊಂಡರೆ, ದ್ವೈತವು ಇರುವದಿಲ್ಲ[4].

******

1. 'ಯಾವದಾದರೂ (ಕಾರಣವು)' ಎಂದೂ ಕನ್ನಡಿಸಬಹುದು. ವಿಕಲ್ಪವೆಂಬುದು ನಿಜವಾಗಿ ಯಾವದಾದರೂ ಕಾರಣದಿಂದ ಆಗಿದ್ದಿದ್ದರೆ ಆ ಕಾರಣವಿರುವವರೆಗೆ ಹೋಗುವದಿಲ್ಲ ; ಅದು ಹೋಗದೆ ಅದ್ವೈತವು ಹೇಗೆ ಎಂದು ಶಂಕಿಸಬಹುದು.

2. ಇಲ್ಲಿಯೂ ವಿಕಲ್ಪವು ನಿಜವಾಗಿಲ್ಲ ಎಂಬ ಅಭಿಪ್ರಾಯವೇ ಹೊರತು ಅದು ಹೋಗುವ ದೆಂಬುದೇನೂ ವಿವಕ್ಷಿತವಲ್ಲ.

3. ಶಿಷ್ಯಾದಿಭೇದವೂ ಪ್ರಪಂಚದಲ್ಲಿಯೇ ಸೇರಿರುತ್ತದೆ ; ಅದರಂತೆಯೇ ಹುಸಿತೋರಿಕೆಯೇ ಆಗಿರುತ್ತದೆ.

4. ಶಾಸ್ತ್ರಾದಿಭೇದವು ಅಪರಮಾರ್ಥವು, ಅದ್ವೈತವೇ ಪರಮಾರ್ಥ-ಎಂದು ಅರಿತುಕೊಳ್ಳುವದೇ ಜ್ಞಾನವು. ಈ ಜ್ಞಾನವಾದಾಗ ಜ್ಞಾನಜ್ಞಾನವಿಕಲ್ಪವೂ ಅಪರಮಾರ್ಥವಾಗಿ ಬಿಡುತ್ತದೆ.

## ೩. ಉಪನಿಷತ್ತು

### ಆತ್ಮನ ಪಾದಗಳಿಗೂ ಓಂಕಾರದ ಮಾತ್ರೆಗಳಿಗೂ ತಾದಾತ್ಮ್ಯ

ಸೋಽಯಮಾತ್ಮಾಧ್ಯಕ್ಷರಮೋಙ್ಕಾರೋಽಧಿಮಾತ್ರಂ ಪಾದಾ
ಮಾತ್ರಾ ಮಾತ್ರಾಶ್ಚ ಪಾದಾ ಅಕಾರ ಉಕಾರೋ ಮಕಾರ ಇತಿ ॥೮॥

೮. ಆ ಈ ಆತ್ಮನು ಅಧ್ಯಕ್ಷರವಾಗಿ (ನೋಡಿದರೆ) ಅಧಿಮಾತ್ರವಾದ ಓಂಕಾರವು. ಪಾದಗಳು ಮಾತ್ರೆಗಳು, ಮತ್ತು ಮಾತ್ರೆಗಳು ಪಾದಗಳು. ಅಕಾರ, ಉಕಾರ, ಮಕಾರ-ಎಂಬಿವು (ಮಾತ್ರೆಗಳು).

(ಭಾಷ್ಯ)

೫೮. ಅಭಿಧೇಯಪ್ರಾಧಾನ್ಯೇನ[1] ಓಂಕಾರಃ ಚತುಷ್ಪಾತ್ ಆತ್ಮಾ ಇತಿ ವ್ಯಾಖ್ಯಾತೋ ಯಃ, ಸೋಽಯಮ್ ಆತ್ಮಾ ಅಧ್ಯಕ್ಷರಮ್ ಅಕ್ಷರಮ್ ಅಧಿಕೃತ್ಯ ಅಭಿಧಾನಪ್ರಾಧಾನ್ಯೇನ ವರ್ಣ್ಯಮಾನಃ ಅಧ್ಯಕ್ಷರಮ್ । ಕಿಂ ಪುನಸ್ತತ್ ಅಕ್ಷರಮ್ ಇತಿ ? ಆಹ-ಓಂಕಾರಃ । ಸೋಽಯಮ್ ಓಂಕಾರಃ ಪಾದಶಃ ಪ್ರವಿಭಜ್ಯಮಾನಃ ಅಧಿಮಾತ್ರಂ ಮಾತ್ರಾಮ್ ಅಧಿಕೃತ್ಯ ವರ್ತತೇ ಇತಿ ಅಧಿಮಾತ್ರಮ್ । ಕಥಮ್ ? ಆತ್ಮನೋ ಯೇ ಪಾದಾಃ ತೇ ಓಂಕಾರಸ್ಯ ಮಾತ್ರಾಃ । ಕಾಸ್ತಾಃ ? ಅಕಾರ ಉಕಾರೋ ಮಕಾರಃ ಇತಿ ।।[2]

(ಭಾಷ್ಯಾರ್ಥ)

ಅಭಿಧೇಯವನ್ನು ಮುಖ್ಯವಾಗಿಟ್ಟುಕೊಂಡು ಓಂಕಾರವು ನಾಲ್ಕು ಪಾದಗಳುಳ್ಳ ಆತ್ಮನು ಎಂದು ಯಾವನನ್ನು (ಹಿಂದೆ) ವಿವರಿಸಿತ್ತೋ[3] ಆ ಈ ಆತ್ಮನು ಅಧ್ಯಕ್ಷರವಾಗಿ-ಅಕ್ಷರವನ್ನು ಅಧಿಕರಿಸಿ[4] ಅಭಿಧಾನವನ್ನು ಮುಖ್ಯವಾಗಿಟ್ಟುಕೊಂಡು ವರ್ಣಿಸುವದರಿಂದ ಅಧ್ಯಕ್ಷರವು (ಎಂದರ್ಥ.) ಆ ಅಕ್ಷರವು ಯಾವದು ? ಎಂದರೆ (ಶ್ರುತಿ) ಹೇಳುತ್ತದೆ :

---

1. "ಅಭಿಧೇಯಪ್ರಧಾನಃ" ಆ।। ಕಾ।। ಮೈ।।

2. ಇಲ್ಲಿ 'ಮಾತ್ರಾಶ್ಚ ಪಾದಾಃ' ಎಂಬ ಉಪನಿಷದ್ವಾಕ್ಯದ ಭಾಷ್ಯವು ಬಿಟ್ಟಿದೆ ; ಅಥವಾ ಎರಡನೆಯ ಮಂತ್ರದ ಭಾಷ್ಯದಲ್ಲಿ ಇದರ ಅರ್ಥವನ್ನು ಹೇಳಿರುವದರಿಂದ ಸ್ಪಷ್ಟವೆಂದು ಉಪೇಕ್ಷ ಮಾಡಿರುತ್ತದೆ. 3. ಪರಬ್ರಹ್ಮವು ಅಭಿಧಾನಾಭಿಧೇಯವಿಭಾಗರಹಿತವಾದ ಓಂಕಾರವೆಂದು ಸಂಬಂಧಭಾಷ್ಯ ದಲ್ಲಿ ಹೇಳಿತ್ತಷ್ಟೆ ; ಅದನ್ನು ಅರಿಯುವದಕ್ಕೆ ಸಾಧನವಾಗಿ ಅಭಿಧೇಯವನ್ನು ಮುಖ್ಯವಾಗಿಟ್ಟು ಕೊಂಡು ಹೇಳಿದ ಆತ್ಮನನ್ನೇ ಈಗ ಅಭಿಧಾನಪ್ರಧಾನವಾಗಿ ವರ್ಣಿಸಿರುತ್ತದೆ.

4. ಆಶ್ರಯಿಸಿಕೊಂಡು.

ಓಂಕಾರವು. ಆ ಈ[1] ಓಂಕಾರವು ಪಾದಪಾದವಾಗಿ ವಿಂಗಡಿಸಿದರೆ (ಇಲ್ಲಿ)ಅಧಿಮಾತ್ರವು[2]-ಮಾತ್ರೆಯನ್ನು ಅಧಿಕರಿಸಿ ಇರುತ್ತೆಯಾದ್ದರಿಂದ ಅಧಿಮಾತ್ರವು[2]- ಹೇಗೆಂದರೆ ಆತ್ಮನಿಗೆ ಪಾದಗಳು ಯಾವವೋ ಅವೇ ಓಂಕಾರಕ್ಕೆ ಪಾದಗಳು[3]. ಅವು ಯಾವವು ? ಎಂದರೆ ಅಕಾರ, ಉಕಾರ, ಮಕಾರ (ಇವೇ.)

## ವೈಶ್ವಾನರನಿಗೂ ಅಕಾರಕ್ಕೂ ತಾದಾತ್ಮ್ಯ

(ಭಾಷ್ಯ)

೫೯. ತತ್ರ ವಿಶೇಷನಿಯಮಃ ಕ್ರಿಯತೇ-

(ಭಾಷ್ಯಾರ್ಥ)

ಇವುಗಳಲ್ಲಿ (ಇದು ಇಂಥದ್ದೆಂದು) ವಿಶೇಷವನ್ನು[4] (ಈಗ ಶ್ರುತಿಯಲ್ಲಿ) ಗೊತ್ತುಪಡಿಸಲಾಗುತ್ತದೆ :-

ಜಾಗರಿತಸ್ಥಾನೋ ವೈಶ್ವಾನರೋಽಕಾರಃ ಪ್ರಥಮಾ
ಮಾತ್ರಾಽಽಪ್ತೇರಾದಿಮತ್ತ್ವಾದ್ವಾಽಽಪ್ನೋತಿ ಹ ವೈ
ಸರ್ವಾನ್ ಕಾಮಾನಾದಿಶ್ಚ ಭವತಿ ಯ ಏವಂ ವೇದ ॥೯॥

೯. ಎಚ್ಚರವೆಂಬ ಅವಸ್ಥೆಯಲ್ಲಿರುವ ವೈಶ್ವಾನರನು ಅಕಾರವೆಂಬ ಪ್ರಥಮ ಮಾತ್ರೆಯು ; ಆಪ್ತಿಯಿಂದ ಅಥವಾ ಆದಿಮತ್ತ್ವದಿಂದ (ಹೀಗೆಂದು ತಿಳಿಯಬೇಕು.) ಯಾವನು ಹೀಗೆಂದು ತಿಳಿಯುವನೋ ಅವನು ಎಲ್ಲಾ ಕಾಮಗಳನ್ನೂ ಪಡೆದುಕೊಳ್ಳುವನು, ಆದಿಯೂ ಆಗುವನು.

---

1. ಆ ಎಂದರೆ ಅಭಿಧೇಯ (ವಸ್ತು) ಪ್ರಧಾನವಾಗಿ ವರ್ಣಿಸಿದ ಎಂದರ್ಥ ; ಈ ಎಂದರೆ ಅಭಿಧಾನ (ಹೆಸರಿಸುವ ಶಬ್ದ) ಪ್ರಧಾನವಾಗಿ ಈಗ ವರ್ಣಿಸುವ ಎಂದರ್ಥ. ಒಂದೇ ತತ್ತ್ವವನ್ನೇ ಹೀಗೆ ಎರಡು ಬಗೆಯಿಂದ ಹೇಳಿರುತ್ತದೆ.

2. ಹಿಂದೆ ವಿಶ್ವತೈಜಸಪ್ರಾಜ್ಞರೆಂಬ ಪಾದಗಳಾಗಿ ವಿಂಗಡಿಸಿದ್ದ ತತ್ತ್ವವನ್ನೇ ಈಗ ಅಕಾರ, ಉಕಾರ, ಮಕಾರಗಳೆಂಬ ಮಾತ್ರೆಗಳಾಗಿ ವಿಂಗಡಿಸಿ ಹೇಳಲಾಗುತ್ತದೆ ಎಂದರ್ಥ.

3. ಹಿಂದಿನ ಗ್ರಂಥಭಾಗದಲ್ಲಿ ಉತ್ತಮಮಧ್ಯಮಾಧಿಕಾರಿಗಳಿಗಾಗಿ ಅಧ್ಯಾರೋಪಾಪವಾದಗಳಿಂದ ಪರಮಾರ್ಥತತ್ತ್ವವನ್ನು ಹೇಳಿದೆಯೆಂದೂ ಈಗ ಅಧಮಾಧಿಕಾರಿಗಳಿಗೆ ಉಪಾಸನೆಯನ್ನು ಹೇಳುವದಕ್ಕಾಗಿ ಓಂಕಾರ ಮಾತ್ರಾದಿಗಳನ್ನು ಹೇಳಿದೆಯೆಂದೂ ೪೫ ವ್ಯಾಖ್ಯಾನದಲ್ಲಿದೆ. ಆ ವ್ಯಾಖ್ಯಾನವು ಶ್ರುತಿಯ ಉಪಕ್ರಮೋಪಸಂಹಾರಗಳಿಗೂ ಅಭಿಧಾನಾಭಿಧೇಯಗಳಿಗೆ ತತ್ತ್ವದ್ವಾರದಿಂದ ಮುಖ್ಯೈಕ್ಯವನ್ನು ಹೇಳುವ ಭಾಷ್ಯಕ್ಕೂ ವಿರುದ್ಧ. ಪೀಠಿಕೆಯನ್ನು ನೋಡಿ.

4. ಇಂಥ ಪಾದವು ಇಂಥ ಮಾತ್ರೆ ಎಂಬ ವಿಶೇಷವನ್ನು.

(ಭಾಷ್ಯ)

೬೦. ವೈಶ್ವಾನರಃ ಯಃ ಸಃ ಓಂಕಾರಸ್ಯ ಅಕಾರಃ ಪ್ರಥಮಾ ಮಾತ್ರಾ ಕೇನ ಸಾಮಾನ್ಯೇನ ಇತಿ ? ಆಹ-ಆಪ್ತೇಃ । ಆಪ್ತಿಃ ವ್ಯಾಪ್ತಿಃ । ಅಕಾರೇಣ ಸರ್ವಾ ವಾಗ್ ವ್ಯಾಪ್ತಾ । ''ಅಕಾರೋ ವೈ ಸರ್ವಾ ವಾಕ್'' (ಐ. ಆ. ೨-೩-೧೯) ಇತಿ ಶ್ರುತೇಃ । ತಥಾ ವೈಶ್ವಾನರೇಣ ಜಗತ್ ''ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಃ'' (ಛಾಂ. ೫-೧೮-೨) ಇತ್ಯಾದಿಶ್ರುತೇಃ । ಅಭಿಧಾನಾಭಿಧೇಯಯೋಃ ಏಕತ್ವಂ ಚ ಅವೋಚಾಮ । ಆದಿಃ ಅಸ್ಯ ವಿದ್ಯತೇ ಇತಿ ಆದಿಮತ್ । ಯಥೈವ ಆದಿಮತ್ ಅಕಾರಾಖ್ಯಮ್ ಅಕ್ಷರಮ್, ತಥಾ[1] ವೈಶ್ವಾನರಃ । ತಸ್ಮಾತ್ ವಾ ಸಾಮಾನ್ಯಾತ್ ಅಕಾರತ್ವಂ ವೈಶ್ವಾನರಸ್ಯ । ತದೇಕತ್ವವಿದಃ ಫಲಮ್ ಆಹ-ಆಪ್ನೋತಿ ಹ ವೈ ಸರ್ವಾನ್ ಕಾಮಾನ್ ಆದಿಃ ಪ್ರಥಮಶ್ಚ ಭವತಿ ಮಹತಾಮ್ ಯ ಏವಂ ವೇದ ಯಥೋಕ್ತಮ್ ಏಕತ್ವಂ ವೇದ ಇತ್ಯರ್ಥಃ ॥

(ಭಾಷ್ಯಾರ್ಥ)

ಎಚ್ಚರವೆಂಬ ಅವಸ್ಥೆಯಲ್ಲಿರುವ ವೈಶ್ವಾನರನಿರುವನಲ್ಲ, ಅವನು ಓಂಕಾರದ ಮೊದಲನೆಯ ಮಾತ್ರೆಯಾದ ಅಕಾರವು[2]. ಯಾವ ಹೋಲಿಕೆಯಿಂದ ?[3] ಎಂದರೆ (ಶ್ರುತಿ) ಹೇಳುತ್ತದೆ : ಆಪ್ತಿಯಿಂದ ; ಆಪ್ತಿ ಎಂದರೆ ವ್ಯಾಪ್ತಿಯು (ಅದರಿಂದ ಎಂದರ್ಥ.) ಅಕಾರದಿಂದ ವಾಕ್ಕೆಲ್ಲವೂ ವ್ಯಾಪ್ತವಾಗಿರುತ್ತದೆ. ''ಅಕಾರವೇ ಎಲ್ಲಾ ವಾಕ್ಕೂ ಆಗಿರುವದು''[4] (ಐ. ಆ. ೨-೩-೧೯) ಎಂಬ ಶ್ರುತಿ ಇದಕ್ಕೆ ಪ್ರಮಾಣವು. ಇದರಂತೆ ವೈಶ್ವಾನರನಿಂದ ಜಗತ್ತು (ಎಲ್ಲವೂ ವ್ಯಾಪ್ತವಾಗಿರುತ್ತದೆ). ''ಆ ಈ ವೈಶ್ವಾನರನೆಂಬ ಆತ್ಮನಿರುವನಲ್ಲ, ಇವನಿಗೆ ಸುತೇಜವೇ ತಲೆ'' (ಛಾಂ. ೫-೧೮-೨) ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣವು. ಅಭಿಧಾನ, ಅಭಿಧೇಯ-ಇವೆರಡಕ್ಕೂ ಐಕ್ಯವಿದೆಯೆಂದೂ (ಹಿಂದೆ) ಹೇಳಿರುತ್ತೇವೆ[5]. ಇದಕ್ಕೆ ಆದಿ[6]ಯಿರುತ್ತದೆಯಾದ್ದರಿಂದ (ಇದು)

1. 'ತಥೈವ' ಆ॥ ಕಾ॥

2. ವೈಶ್ವಾನರನೆಂಬ ಮೊದಲನೆಯ ಪಾದದ ವಿಷಯಕ್ಕೆ ಹೇಳಿದ್ದೆಲ್ಲವನ್ನೂ ಅಧ್ಯಕ್ಷರವಾಗಿರುವ ಓಂಕಾರದ ಮೊದಲನೆಯ ಮಾತ್ರೆಯಾದ ಅಕಾರಕ್ಕೆ ಅನ್ವಯಿಸಿಕೊಳ್ಳಬೇಕು.

3. ವೈಶ್ವಾನರನು ಅಕಾರವೆಂದು ಹೇಳುವದರಲ್ಲಿ ಇವೆರಡಕ್ಕೂ ಯಾವ ಹೋಲಿಕೆ ಇದೆ ?- ಎಂದು ಪ್ರಶ್ನೆ. ಈ ಪ್ರಶ್ನೆಯು ಉಪಾಸಕರಿಗೂ ಪ್ರಯೋಜನವಾಗುತ್ತದೆ.

4. ಅಕಾರವು ಸ್ಥಾನಕರಣಧರ್ಮಗಳಿಂದ ಸ್ಪರ್ಶಗಳಾಗಿಯೂ ಊಷ್ಮಗಳಾಗಿಯೂ ತೋರಿಕೊಂಡು ಬೇರೆಬೇರೆಯ ರೂಪವನ್ನು ಹೊಂದುತ್ತದೆ ಎಂದರ್ಥ.

5. ಆದ್ದರಿಂದ ಬರಿಯ ಹೋಲಿಕೆಯಿಂದಲೇ ಪರಮಾರ್ಥತತ್ತ್ವರೂಪದಿಂದ ಇವೆರಡಕ್ಕೂ ಮುಖ್ಯೈಕತ್ವವೇ ಇದೆ ಎಂದು ತಿಳಿಯಬೇಕು ಎಂದು ಭಾವ. 6. ಆದಿತ್ವವು.

ಆದಿಮತ್ತು (ಎನಿಸಿರುತ್ತದೆ)[1] ; ಅಕಾರವೆಂಬ ಅಕ್ಷರವು ಹೇಗೆ ಆದಿತ್ವವುಳ್ಳದ್ದೋ ಇದರಂತೆಯೇ ವೈಶ್ವಾನರನೂ (ಆದಿಮಂತನಾಗಿರುತ್ತಾನೆ)[2]. ಆ ಹೋಲಿಕೆಯಿಂದಲಾದರೂ ವೈಶ್ವಾನರನು ಅಕಾರವು (ಎಂದು ತಿಳಿಯಬೇಕು.)

ಇವು ಒಂದೇ ಎಂದು ತಿಳಿಯುವಾತನಿಗೆ (ಶ್ರುತಿಯು) ಫಲವನ್ನು ಹೇಳುತ್ತದೆ : (ಆತನು) ಕಾಮಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ ; ದೊಡ್ಡವರಿಗೆ ಅವನು ಆದಿ ಎಂದರೆ ಮೊದಲನೆಯವನೂ ಆಗುವನು. ಯಾವನು ಹೀಗೆ ಮೇಲೆ ಹೇಳಿದಂತೆ (ವೈಶ್ವಾನರನಿಗೂ ಅಕಾರಕ್ಕೂ) ಏಕತ್ವವನ್ನು ತಿಳಿದುಕೊಳ್ಳುವನೋ (ಅವನಿಗೆ ಈ ಫಲವು ಆಗುವದು)[3] ಎಂದರ್ಥ.

## ತೈಜಸನಿಗೂ ಉಕಾರಕ್ಕೂ ತಾದಾತ್ಮ್ಯ

ಸ್ವಪ್ನಸ್ಥಾನಸ್ತೈಜಸ ಉಕಾರೋ ದ್ವಿತೀಯಾ ಮಾತ್ರೋತ್ಕರ್ಷಾ-
ದುಭಯತ್ವಾದ್ವೋತ್ಕರ್ಷತಿ ಹ ವೈ ಜ್ಞಾನಸನ್ತತಿಂ ಸಮಾನಶ್ಚ
ಭವತಿ ನಾಸ್ಯಾಬ್ರಹ್ಮವಿತ್ ಕುಲೇ ಭವತಿ ಯ ಏವಂ ವೇದ ॥೧೦॥

೧೦. ಕನಸೆಂಬ ಅವಸ್ಥೆಯಲ್ಲಿರುವ ತೈಜಸನು ಉಕಾರವೆಂಬ ಎರಡನೆಯ ಮಾತ್ರೆ. ಉತ್ಕರ್ಷದಿಂದ ಅಥವಾ ಉಭಯತ್ವದಿಂದ (ಹೀಗೆಂದು ತಿಳಿಯಬೇಕು.) ಯಾವನು ಹೀಗೆಂದು ತಿಳಿಯುವನೋ (ಅವನು) ಜ್ಞಾನಸಂತತಿಯನ್ನು ಹೆಚ್ಚಿಸಿಕೊಳ್ಳುವನು, ಸಮಾನನೂ ಆಗುವನು, ಅವನ ಕುಲದಲ್ಲಿ ಬ್ರಹ್ಮವನ್ನರಿಯದವನು ಹುಟ್ಟುವದಿಲ್ಲ.

(ಭಾಷ್ಯ)

೬೧. ಸ್ವಪ್ನಸ್ಥಾನಃ ತೈಜಸಃ ಯಃ ಸ ಓಂಕಾರಸ್ಯ ಉಕಾರಃ ದ್ವಿತೀಯಾ ಮಾತ್ರಾ । ಕೇನ ಸಾಮಾನ್ಯೇನ ಇತಿ ? ಆಹ-ಉತ್ಕರ್ಷಾತ್ । ಅಕಾರಾತ್ ಉತ್ಕೃಷ್ಟ ಇವ ಹಿ ಉಕಾರಃ । ತಥಾ ತೈಜಸೋ ವಿಶ್ವಾತ್ । ಉಭಯತ್ವಾದ್ ವಾ । ಅಕಾರಮಕಾರಯೋಃ

---

1. ಮೂರು ಮಾತ್ರೆಗಳಲ್ಲಿ ಅಕಾರವು ಮೊದಲನೆಯದು.

2. ತತ್ತ್ವವನ್ನು ತಿಳಿದುಕೊಳ್ಳುವ ಕ್ರಮದಲ್ಲಿ ಮೊದಲು ವೈಶ್ವಾನರನನ್ನು ತಿಳಿದುಕೊಳ್ಳಬೇಕು.

3. ಇಲ್ಲಿ ಅಕಾರವೈಶ್ವಾನರರ ಐಕ್ಯವನ್ನು ಹೊಗಳಿ ಫಲವನ್ನು ಹೇಳಿರುವದು ಓಂಕಾರವೂ ಆತ್ಮನೂ ಒಂದೇ ಎಂಬ ಮುಖ್ಯಜ್ಞಾನವನ್ನು ಹೊಗಳುವದಕ್ಕೆ. ಹೋಲಿಕೆಯಿಂದ ಅಕಾರವೈಶ್ವಾನರರನ್ನು ಒಂದೆಂದು ಉಪಾಸನೆಮಾಡುವವರು ಓಂಕಾರೋಪಾಸನೆಯನ್ನು ಮಾಡಿ ಬ್ರಹ್ಮವನ್ನು ಕ್ರಮ ಕ್ರಮವಾಗಿ ಪಡೆಯಬಹುದು ಎಂಬುದೂ ಅವಾಂತರವಾಕ್ಯದ ಅರ್ಥವಾಗಬಹುದು.

ಮಧ್ಯಸ್ಥಃ ಉಕಾರಃ । ತಥಾ ವಿಶ್ವತೈಜಸಯೋಃ ಮಧ್ಯೇ ತೈಜಸಃ । ಅತಃ ಉಭಯ ಭಾಕ್ತ್ವಸಾಮಾನ್ಯಾತ್ । ವಿದ್ವತ್ಫಲಮ್ ಉಚ್ಯತೇ । ಉತ್ಕರ್ಷತಿ ಹ ವೈ ಜ್ಞಾನಸನ್ತತಿಂ ವಿಜ್ಞಾನಸಂತತಿಂ ವರ್ಧಯತಿ ಇತ್ಯರ್ಥಃ । ಸಮಾನಃ ತುಲ್ಯಶ್ಚ ಮಿತ್ರಪಕ್ಷಸ್ಯೇವ ಶತ್ರುಪಕ್ಷಾಣಾಮಪಿ ಅಪ್ರದ್ವೇಷ್ಯೋ ಭವತಿ । ಅಬ್ರಹ್ಮವಿತ್[1] ಅಸ್ಯ ಕುಲೇ ನ ಭವತಿ ಯ ಏವಂ ವೇದ ॥

(ಭಾಷ್ಯಾರ್ಥ)

ಕನಸೆಂಬ ಅವಸ್ಥೆಯಲ್ಲಿರುವ ತೈಜಸನಿರುವನಲ್ಲ, ಅವನು ಓಂಕಾರದ ಎರಡನೆಯ ಮಾತ್ರೆಯಾದ ಉಕಾರವು. ಯಾವ ಹೋಲಿಕೆ (ಇರುವದ)ರಿಂದ ?-ಎಂದರೆ (ಶ್ರುತಿಯು) ಹೇಳುತ್ತದೆ : ಉತ್ಕರ್ಷದಿಂದ. ಉಕಾರವು ಅಕಾರದಿಂದ ಉತ್ಕೃಷ್ಟವಾಗಿರುವಂತೆ[2] (ಇದೆ)ಯಲ್ಲವೆ ? ಹಾಗೆಯೇ ತೈಜಸನು ವಿಶ್ವದಿಂದ (ಉತ್ಕೃಷ್ಟನಾದಂತೆ ಇರುವನು)[3]. ಅಥವಾ ಉಭಯ (ಸಮಾನವಾಗಿರುವದರಿಂದ) ಎಂದಾದರೂ (ಹೇಳಬಹುದು), ಅಕಾರಮಕಾರಗಳೆರಡಕ್ಕೂ ಉಕಾರವು ಮಧ್ಯಸ್ಥವಾಗಿರುತ್ತದೆ[4]. ಹಾಗೆಯೇ ವಿಶ್ವತೈಜ್ಞರಿಬ್ಬರಿಗೂ ತೈಜಸನು (ಮಧ್ಯಸ್ಥನಾಗಿರುತ್ತಾನೆ). ಆದ್ದರಿಂದ ಉಭಯ (ಸಂಬಂಧವನ್ನು) ಪಡೆದಿರುವದೆಂಬ ಹೋಲಿಕೆಯಿಂದ (ತೈಜಸನು ಉಕಾರವು)[5].

(ಇದನ್ನು) ತಿಳಿದವನಿಗೆ ಫಲವನ್ನು (ಶ್ರುತಿ) ಹೇಳುತ್ತದೆ : ಯಾವನು ಹೀಗೆಂದು[6] ತಿಳಿಯುತ್ತಾನೋ (ಅವನು) ಜ್ಞಾನಸಂತತಿಯನ್ನು ಅರಿವಿನ ಪ್ರವಾಹವನ್ನು ಉತ್ಕರ್ಷಗೊಳಿಸಿಕೊಳ್ಳುತ್ತಾನೆ ಎಂದರ್ಥ[7]. ಸಮಾನನೂ[8] ತುಲ್ಯನೂ, ಮಿತ್ರಪಕ್ಷಕ್ಕೆ

---

1. 'ಅಬ್ರಹ್ಮವಿಚ್ಚ' ವಾ॥

2. ಎಳೆದುಕೊಂಡಿರುವಂತೆ ; ಉಕಾರದ ಉಚ್ಚಾರಣೆಯನ್ನು ಮಾಡುವಾಗ ಕಂಠದಲ್ಲಿ ಹುಟ್ಟುವ ಅಕಾರವನ್ನು ಎಳೆದುಕೊಂಡು ತುಟಿಯ ಮೂಲಕ ಉಚ್ಚರಿಸಿದಂತೆ ಕಾಣುತ್ತದೆ.

3. ಏಕೆಂದರೆ ತೈಜಸನ ಅನುಭವಗಳು ವಿಶ್ವನ ಅನುಭವಗಳ ಪಾಸನೆಗಳನ್ನು ಎಳೆದುಕೊಂಡು ಉಂಟಾಗಿರುವಂತೆ ತೋರುತ್ತವೆ.

4. ಮಕಾರವು ತುಟಿಯನ್ನು ಪೂರ ಮುಚ್ಚಿ ಉಚ್ಚಾರಣೆಮಾಡತಕ್ಕದ್ದು ; ಅಕಾರವು ಪೂರ ಬಾಯಿತೆರೆದು ಉಚ್ಚಾರಣೆಮಾಡತಕ್ಕದ್ದು. ಉಕಾರದ ಉಚ್ಚಾರಣೆಯಲ್ಲಿ ಎರಡರ ಸಂಬಂಧವೂ ಒಂದಿಷ್ಟಿದೆ. 5. ಆದಿ, ಆಪ್ತಿ-ಎಂಬ ಮಾತುಗಳಲ್ಲಿ ಅಕಾರದ ಸಂಬಂಧವಿರುವಂತೆ ಉತ್ಕರ್ಷ, ಉಭಯತ್ವ-ಇವುಗಳಲ್ಲಿ ಉಕಾರಸಂಬಂಧವಿರುವದನ್ನು ಲಕ್ಷಿಸಬೇಕು.

6. ಉತ್ಕರ್ಷ, ಉಭಯತ್ವ-ಎಂಬ ಹೋಲಿಕೆಗಳಿಂದ ತೈಜಸನು ಉಕಾರವೆಂದು.

7. ಅವನ ಜ್ಞಾನಕ್ಕೆ ವಿಚ್ಛೇದವು ಬರುವದಿಲ್ಲ, ಅದು ಹೆಚ್ಚುತ್ತಲೇ ಇರುತ್ತದೆ.

8. ಎರಡು ಪಕ್ಷದವರಿಗೂ ಬೇಕಾಗುವದೆಂಬ ಉಭಯತ್ವವುಳ್ಳವನು.

ಹೇಗೋ ಹಾಗೆ ಶತ್ರುಪಕ್ಷಕ್ಕೂ ದ್ವೇಷಪಾತ್ರನಲ್ಲದವನೂ, ಆಗುತ್ತಾನೆ. ಅವನ ಕುಲದಲ್ಲಿ ಬ್ರಹ್ಮವನ್ನು ಅರಿಯದವನು[1] ಇರುವುದಿಲ್ಲ.

## ಪ್ರಾಜ್ಞನಿಗೂ ಮಕಾರಕ್ಕೂ ತಾದಾತ್ಮ್ಯ

ಸುಷುಪ್ತಸ್ಥಾನಃ ಪ್ರಾಜ್ಞೋ ಮಕಾರಸ್ತೃತೀಯಾ ಮಾತ್ರಾ
ಮಿತೇರಪೀತೇರ್ವಾ ಮಿನೋತಿ ಹ ವಾ ಇದಗ್ಂ ಸರ್ವ
ಮಪೀತಿಶ್ಚ ಭವತಿ ಯ ಏವಂ ವೇದ ॥೧೧॥

೧೧. ತನಿನಿದ್ರೆಯೆಂಬ ಅವಸ್ಥೆಯಲ್ಲಿರುವ ಪ್ರಾಜ್ಞನು ಮಕಾರವೆಂಬ ಮೂರನೆಯ ಮಾತ್ರೆ. ಮಿತಿಯಿಂದ, ಅಥವಾ ಅಪೀತಿಯಿಂದ (ಹೀಗೆಂದು ತಿಳಿಯಬೇಕು.) ಯಾವನು ಹೀಗೆಂದು ತಿಳಿಯುವನೋ ಅವನು ಇದನ್ನೆಲ್ಲವನ್ನೂ ನಿಜವಾಗಿ ಅಳೆಯುವನು, ಮತ್ತು ಅಪೀತಿಯಾಗುವನು.

(ಭಾಷ್ಯ)

೬೨. ಸುಷುಪ್ತಸ್ಥಾನಃ ಪ್ರಾಜ್ಞಃ ಯಃ ಸ ಓಂಕಾರಸ್ಯ ಮಕಾರಃ ತೃತೀಯಾ ಮಾತ್ರಾ । ಕೇನ ಸಾಮಾನ್ಯೇನ ಇತಿ ? ಆಹ-ಸಾಮಾನ್ಯಮಿದಮತ್ರ । ಮಿತೇಃ । ಮಿತಿಃ ಮಾನಮ್ । ಮಿಯೇತೇ ಇವ ಓ ವಿಶ್ವತೈಜಸೌ ಪ್ರಾಜ್ಞೇನ ಪ್ರಲಯೋತ್ಪತ್ತ್ಯೋಃ ಪ್ರವೇಶನಿರ್ಗಮಾಭ್ಯಾಂ ಪ್ರಸ್ಥೇನೇವ ಯವಾಃ । ತಥಾ ಓಂಕಾರಸಮಾಪ್ತೌ ಪುನಃ ಪ್ರಯೋಗೇ ಚ ಪ್ರವಿಶ್ಯ ನಿರ್ಗಚ್ಛತ ಇವ ಅಕಾರೋಕಾರೌ ಮಕಾರೇ । ಅಪೀತೇರ್ವಾ । ಅಪೀತಿಃ ಅಪ್ಯಯಃ, ಏಕೀಭಾವಃ । ಓಂಕಾರೋಚ್ಚಾರಣೇ[2] ಅನ್ಯೋ ಅಕ್ಷರೇ ಏಕೀಭೂತಾ ಏವ ಅಕಾರೋಕಾರೌ । ತಥಾ ವಿಶ್ವತೈಜಸೌ ಸುಷುಪ್ತಕಾಲೇ ಪ್ರಾಜ್ಞೇ । ಅತೋ ವಾ ಸಾಮಾನ್ಯಾತ್ ಏಕತ್ವಂ ಪ್ರಾಜ್ಞಮಕಾರಯೋಃ । ವಿದ್ವತ್ಫಲಮಾಹ । ಮಿನೋತಿ ಹ ವೈ ಇದಂ ಸರ್ವಮ್ । ಜಗದ್ಯಾಥಾತ್ಮ್ಯಂ ಚಾನಾತಿ ಇತ್ಯರ್ಥಃ । ಅಪೀತಿಶ್ಚ ?[3] ಜಗತ್ಕಾರಣಾತ್ಮಾ ಚ ಭವತಿ ಇತ್ಯರ್ಥಃ । ಅತ್ರ ಅವಾನ್ತರಫಲವಚನಂ ಪ್ರಧಾನ ಸಾಧನಸ್ತುತ್ಯರ್ಥಮ್ ॥

(ಭಾಷ್ಯಾರ್ಥ)

ತನಿನಿದ್ರೆ ಎಂಬ ಅವಸ್ಥೆಯಲ್ಲಿರುವ ಪ್ರಾಜ್ಞನಿದಾನಲ್ಲ, ಅವನು ಓಂಕಾರದ ಮೂರನೆಯ ಮಾತ್ರೆಯಾದ ಮಕಾರವು, ಯಾವ ಹೋಲಿಕೆ(ಯಿರುವದ)ರಿಂದ ? ಎಂದರೆ (ಶ್ರುತಿಯು) ಹೇಳುತ್ತದೆ : ಇದು ಇಲ್ಲಿ ಹೋಲಿಕೆ. ಮಿತಿಯಿಂದ ; ಮಿತಿಯೆಂದರೆ

1. ಇಲ್ಲಿ ತೈಜಸನ ವಿಚಾರವಾದ್ದರಿಂದ ಬ್ರಹ್ಮವೆಂದರೆ ಹಿರಣ್ಯಗರ್ಭನೆಂದು ಅರ್ಥ.

2. ಇಲ್ಲಿ 'ಓ' ಎಂದು ಹೆಚ್ಚಾಗಿ ಪಾ॥ 3. 'ಭವತಿ' ಎಂಬ ಮಾತು ಬಿಟ್ಟುಹೋಗಿದೆ.

ಮಾನವು (ಅಳೆಯುವದು.)[1] ವಿಶ್ವತೈಜಸರುಗಳು ಅಡಗುವಾಗಲೂ ಹುಟ್ಟುವಾಗಲೂ ಒಳಕ್ಕೆ .ಹೋಗುವದು, ಹೊರಕ್ಕೆ ಬರುವದು-ಇವುಗಳಿಂದ-ಬಳ್ಳದಿಂದ ಜವೆಯಕಾಳು (ಅಳೆಯಲ್ಪಡುವಂತೆ)-ಪ್ರಾಜ್ಞನಿಂದ ಅಳೆಯಲ್ಪಟ್ಟವರಂತೆ (ಆಗುತ್ತಿರುತ್ತಾರೆ). ಹೀಗೆಯೇ ಓಂಕಾರವು ಮುಗಿಯುವಾಗಲೂ ಮತ್ತೆ (ಅದನ್ನು) ಉಚ್ಚರಿಸುವಾಗಲೂ ಅಕಾರ, ಉಕಾರ-ಇವುಗಳು ಮಕಾರದಲ್ಲಿ ಹೊಕ್ಕು ಹೊರಕ್ಕೆ ಬಂದಂತೆ (ಆಗುತ್ತಿರುವವು). ಅಥವಾ ಅಪೀತಿಯಿಂದ (ಪ್ರಾಜ್ಞನು ಮಕಾರವು ಎಂದು ಹೇಳಬಹುದು.) ಅಪೀತಿ ಎಂದರೆ ಲಯವು, ಒಂದಾಗುವದು[2]. ಓಂಕಾರವನ್ನು ಉಚ್ಚರಿಸುವಾಗ ಕೊನೆಯ (ಮಕಾರವೆಂಬ) ಅಕ್ಷರದಲ್ಲಿ ಅಕಾರ, ಉಕಾರ-(ಇವು)ಗಳು ಒಂದಾದಂತೆ (ಆಗುವವು)[3]. ಇದರಂತೆ ವಿಶ್ವತೈಜಸರುಗಳೂ ತನಿನಿದ್ರೆಯ ಕಾಲದಲ್ಲಿ ಪ್ರಾಜ್ಞನಲ್ಲಿ (ಒಂದಾದಂತೆ ಆಗುವರು)[4]. ಈ ಹೋಲಿಕೆಯಿಂದಲಾದರೂ ಪ್ರಾಜ್ಞಮಕಾರಗಳು ಒಂದು.

(ಇದನ್ನು) ತಿಳಿದುಕೊಂಡವನಿಗೆ (ಆಗುವ) ಫಲವನ್ನು (ಶ್ರುತಿಯು) ಹೇಳುತ್ತದೆ. ಇದೆಲ್ಲವನ್ನೂ ನಿಜವಾಗಿ ಅಳೆಯುತ್ತಾನೆ. ಜಗತ್ತಿನ ನಿಜವನ್ನು ಅರಿತುಕೊಳ್ಳುತ್ತಾನೆ. ಮತ್ತು ಅಪೀತಿಯೂ (ಆಗುವನು) ; ಜಗತ್ಕಾರಣವಾದ-(ಬ್ರಹ್ಮದ) ಸ್ವರೂಪವುಳ್ಳವನಾಗುವನು ಎಂದರ್ಥ. ಇಲ್ಲಿ ಒಳಫಲಗಳನ್ನು ಹೇಳಿರುವದು, ಪ್ರಧಾನವಾದ ಸಾಧನವನ್ನು ಹೊಗಳುವದಕ್ಕೆ .

******

1. ಮಾಙ್-ಮಾನೇ ಎಂಬ ಧಾತುವನ್ನು ಇಲ್ಲಿ ಸೂಚಿಸಿದೆ.

2. ತನಿನಿದ್ರೆಯಲ್ಲಿ ವಿಶ್ವತೈಜಸರು ಹೊಕ್ಕು ಹೊರಕ್ಕೆ ಬಂದಂತೆ ಆಗುವ ಅನುಭವವು ಓಮ್ ! ಓಮ್ ! ಎಂದು ಉಚ್ಚರಿಸುವಾಗ ಅಕಾರೋಕಾರಗಳು ಮಕಾರದಲ್ಲಿ ಹೊಕ್ಕು ಹೊರಕ್ಕೆ ಬಂದಂತೆ ತೋರುವ ಅನುಭವಕ್ಕೆ ಸಮಾನ.

3. ಮಿಙ್-ಹಿಂಸಾಯಾಮ್ ಎಂಬ ಧಾತು, ಮಿಾ-ಗತೌ ಎಂಬ ಧಾತು-ಇವುಗಳೆರಡರಲ್ಲಿ ಒಂದು ಸೂಚಿತವಾಗಿದೆ. ಗತಿ ಎಂದರೆ ಹೋಗಿ ಸೇರು ಎಂಬರ್ಥವಾಗಬಹುದಾದ್ದರಿಂದ ಎರಡನೆಯದನ್ನೇ ತೆಗೆದುಕೊಳ್ಳಬಹುದೆಂದು ಕಾಣುತ್ತದೆ. ಇಲ್ಲಿ ಕೊಟ್ಟಿರುವ ಮಾ, ಮಿಾ-ಎಂಬ ಧಾತುಗಳಲ್ಲಿ ಮಕಾರಸಂಬಂಧವಿರುವದನ್ನು ಲಕ್ಷಿಸಬೇಕು.

4. ಮತ್ತೆ ಹೊರಕ್ಕೆ ಬರುವದರಿಂದ ಪೂರ್ತಿಯಾಗಿ ಒಂದಾಗಲಿಲ್ಲ, ಆದ್ದರಿಂದ ಒಂದಾದಂತೆ ಎಂದಿದೆ. 5. ಮುಖ್ಯವಾದ ಸಾಧನವು ಓಂಕಾರದ ತತ್ತ್ವಜ್ಞಾನವು ; ಅದನ್ನು ೧೨ನೆಯ ಮಂತ್ರದಲ್ಲಿ ಹೇಳಲಾಗುವದು. ಒಂದೊಂದು ಮಾತ್ರೆಯ ಜ್ಞಾನಕ್ಕೇ ಈ ಫಲವಿರುವಾಗ ಓಂಕಾರದ ಪೂರ್ಣ ಜ್ಞಾನದ ವಿಷಯಕ್ಕೆ ಹೇಳುವದೇನು ?-ಎಂದರ್ಥ.

# ಕಾರಿಕೆ

## ಓಂಕಾರದ ಮೂರು ಮಾತ್ರೆಗಳು

(ಕಾರಿಕಾವಾಕ್ಯ)

ಅತ್ರೈತೇ ಶ್ಲೋಕಾ ಭವನ್ತಿ-

(ಕಾರಿಕಾವಾಕ್ಯಾರ್ಥ)

ಈ (ವಿಷಯ) ದಲ್ಲಿ ರೀ ಶ್ಲೋಕಗಳು ಬಂಟರುತ್ತವೆ :-

ವಿಶ್ವಸ್ಯಾತ್ವವಿವಕ್ಷಾಯಾಮಾದಿಸಾಮಾನ್ಯಮುತ್ಕಟಮ್ ।
ಮಾತ್ರಾಸಂಪ್ರತಿಪತ್ತೌ ಸ್ಯಾದಾಪ್ತಿಸಾಮಾನ್ಯಮೇವ ಚ ॥೧೯॥

೧೯. ವಿಶ್ವನಿಗೆ ಅತ್ವವನ್ನು ಹೇಳುವ ಇಚ್ಛೆಯಿರುವಲ್ಲಿ, ಮಾತ್ರೆಯೆಂದು ಇಟ್ಟುಕೊಳ್ಳುವಾಗ, ಆದಿತ್ವಸಾಮಾನ್ಯವು ಉತ್ಕಟ(ವಾಗಿರುತ್ತದೆ), ಆಪ್ತಿ ಸಾಮಾನ್ಯವೂ (ಉತ್ಕಟವಾಗಿರುತ್ತದೆ.)

(ಭಾಷ್ಯ)

೬೩. ವಿಶ್ವಸ್ಯ ಅತ್ವಮ್ ಅಕಾರಮಾತ್ರತ್ವಂ ಯದಾ ವಿವಕ್ಷ್ಯತೇ ತದಾ ಆದಿತ್ವಸಾಮಾನ್ಯಮ್ ಉಕ್ತನ್ಯಾಯೇನ ಉತ್ಕಟಮ್ । ಉದ್ಭೂತಂ ದೃಶ್ಯತೇ ಇತ್ಯರ್ಥಃ । ಅತ್ವವಿವಕ್ಷಾಯಾಮ್ ಇತ್ಯಸ್ಯ ವ್ಯಾಖ್ಯಾನಮ್ ಮಾತ್ರಾಸಂಪ್ರತಿಪತ್ತೌ ಇತಿ । ವಿಶ್ವಸ್ಯ ಅಕಾರಮಾತ್ರತ್ವಂ ಯದಾ ಸಂಪ್ರತಿಪದ್ಯತೇ ಇತ್ಯರ್ಥಃ । ಆಪ್ತಿಸಾಮಾನ್ಯಮೇವ ಚ । 'ಉತ್ಕಟಮ್' ಇತಿ ಅನುವರ್ತತೇ । ಚಶಬ್ದಾತ್ ॥

(ಭಾಷ್ಯಾರ್ಥ)

ವಿಶ್ವನಿಗೆ ಅತ್ವವನ್ನು (ಆವನು) ಅಕಾರ(ವೆಂಬ) ಮಾತ್ರೆ ಎಂಬುದನ್ನು ಯಾವಾಗ ಹೇಳಲೆಳಸುವೆವೋ ಆಗ ಆದಿತ್ವವು ಎಂಬ ಸಾಮಾನ್ಯವು ಹಿಂದೆ ಹೇಳಿರುವ ರೀತಿಯಿಂದ ಉತ್ಕಟ(ವಾಗಿರುತ್ತದೆ), ಎದ್ದು ಕಾಣುತ್ತದೆ ಎಂದರ್ಥ. 'ಅತ್ವವನ್ನು ಹೇಳುವ ಇಚ್ಛೆಯಿರುವಲ್ಲಿ' ಎಂಬುದಕ್ಕೆ 'ಮಾತ್ರೆಯೆಂದು ಇಟ್ಟುಕೊಳ್ಳುವಾಗ' ಎಂಬುದು ವ್ಯಾಖ್ಯಾನವು. ''ವಿಶ್ವನನ್ನು ಅಕಾರವೆಂಬ ಮಾತ್ರೆಯೆಂದು ಯಾವಾಗ ಇಟ್ಟುಕೊಳ್ಳುವೆವೋ (ಆಗ)'' ಎಂದರ್ಥ. ಆಪ್ತಿಸಾಮಾನ್ಯವೂ 'ಉತ್ಕಟ' (ವಾಗಿರುತ್ತದೆ)-ಎಂದು (ಇಲ್ಲಿಯೇ) ಸೇರಿಕೊಳ್ಳುತ್ತದೆ ; ಏಕೆಂದರೆ (ಇಲ್ಲಿ) ಚ (ಊ) ಎಂಬ ಮಾತು ಇದೆ.

ತೈಜಸಸ್ಯೋತ್ಕವಿಜ್ಞಾನೇ ಉತ್ಕರ್ಷೋ ದೃಶ್ಯತೇ ಸ್ಫುಟಮ್ ।
ಮಾತ್ರಾಸಂಪ್ರತಿಪತ್ತೌ ಸ್ಯಾದುಭಯತ್ವಂ ತಥಾವಿಧಮ್ ॥೨೦॥

೨೦. ತೈಜಸನನ್ನು ಉತ್ಕವೆಂದು ಅರಿಯುವಲ್ಲಿ, ಮಾತ್ರೆಯೆಂದು ಇಟ್ಟು ಕೊಳ್ಳುವಾಗ, ಉತ್ಕರ್ಷವು ಸ್ಫುಟವಾಗಿ ಕಾಣುತ್ತದೆ ; ಉಭಯತ್ವವೂ ಹಾಗೆಯೇ.

(ಭಾಷ್ಯ)

೬೪. ತೈಜಸಸ್ಯ ಉತ್ಕವಿಜ್ಞಾನೇ ಉಕಾರತ್ವವಿವಕ್ಷಾಯಾಮ್ ಉತ್ಕರ್ಷಃ ದೃಶ್ಯತೇ ಸ್ಫುಟಮ್ ಸ್ಪಷ್ಟಮ್[1] ಇತ್ಯರ್ಥಃ । ಉಭಯತ್ವಂ ಚ ಸ್ಫುಟಮೇವ ಇತಿ । ಪೂರ್ವವತ್ ಸರ್ವಮ್ ॥

(ಭಾಷ್ಯಾರ್ಥ)

ತೈಜಸನನ್ನು ಉತ್ಕವೆಂದು ಅರಿಯುವಲ್ಲಿ (ಅವನು) ಉಕಾರವೆಂದು ಹೇಳುವ ಇಚ್ಛೆಯಿರುವಲ್ಲಿ ಉತ್ಕರ್ಷವು ಸ್ಫುಟವಾಗಿ ಎಂದರೆ ಸ್ಪಷ್ಟವಾಗಿ ಕಾಣುತ್ತದೆ ಎಂದರ್ಥ. ಉಭಯತ್ವವೂ ಸ್ಫುಟವಾಗಿಯೇ (ಕಾಣುತ್ತದೆ). ಎಲ್ಲವನ್ನೂ ಹಿಂದಿನ (ಶ್ಲೋಕ) ದಂತೆಯೇ (ಅರ್ಥಮಾಡಿಕೊಳ್ಳಬೇಕು).

ಮಕಾರಭಾವೇ ಪ್ರಾಜ್ಞಸ್ಯ ಮಾನಸಾಮಾನ್ಯಮುತ್ಕಟಮ್ ।
ಮಾತ್ರಾಸಂಪ್ರತಿಪತ್ತೌ ತು ಲಯಸಾಮಾನ್ಯಮೇವ ಚ ॥೨೧॥

೨೧. ಪ್ರಾಜ್ಞನು ಮಕಾರವಾಗುವಲ್ಲಿ, (ಅವನು) ಮಾತ್ರೆಯೆಂದು ಇಟ್ಟು ಕೊಳ್ಳುವಲ್ಲಿಯಾದರೋ, ಮಾನ ಎಂಬ ಹೋಲಿಕೆಯು ಉತ್ಕಟವಾಗಿರುವದು, ಲಯವೆಂಬ ಹೋಲಿಕೆಯೂ (ಉತ್ಕಟವಾಗಿರುವದು).

(ಭಾಷ್ಯ)

೬೫. ಮಕಾರತ್ವೇ ಪ್ರಾಜ್ಞಸ್ಯ ಮಿತಿಲಯೌ ಉತ್ಕೃಷ್ಟೌ[2] ಸಾಮಾನ್ಯೇ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಾಜ್ಞನಿಗೆ ಮಕಾರಸ್ವರೂಪ(ವನ್ನು ಹೇಳು)ವಲ್ಲಿ ಮಿತಿ, ಲಯ-ಎಂಬ ಹೋಲಿಕೆಗಳು ಉತ್ಕೃಷ್ಟವಾಗಿರುವವು-ಎಂದರ್ಥ.[3]

1. 'ಸ್ಪಷ್ಟಃ' ಆ॥ 2. ಇಲ್ಲಿ 'ಉತ್ಕಟೇ' ಎಂದಿದ್ದು ಬರೆದವರು ಹೀಗೆ ಮಾರ್ಪಡಿಸಿಕೊಂಡಿರಬೇಕೆಂದು ತೋರುತ್ತದೆ.

3. ಉಪನಿಷತ್ತಿನ ಭಾಷ್ಯದಲ್ಲಿ ವಿವರಿಸಿರುವದರಿಂದ ಇಲ್ಲಿ ಪ್ರತಿಪದದ ಅರ್ಥವನ್ನೂ ಬೇರೆಯಾಗಿ ಕೊಟ್ಟಿಲ್ಲ.

## ಪಾದಮಾತ್ರೆಗಳ ಹೋಲಿಕೆಯ ಜ್ಞಾನಕ್ಕೆ ಫಲ

ತ್ರಿಷು ಧಾಮಸು ಯಸ್ತುಲ್ಯಂ[1] ಸಾಮಾನ್ಯಂ ವೇತ್ತಿ ನಿಶ್ಚಿತಃ ।
ಸ ಪೂಜ್ಯಃ ಸರ್ವಭೂತಾನಾಂ ವನ್ದ್ಯಶ್ಚೈಷ ಮಹಾಮುನಿಃ ॥೨೨॥

೨೨. ಮೂರು ಸ್ಥಳಗಳಲ್ಲಿಯೂ ಯಾವನು ಸಮಾನವಾಗಿರುವ ಹೋಲಿಕೆಯನ್ನು ನಿಶ್ಚಿತವಾಗಿ ತಿಳಿದುಕೊಂಡಿರುವನೋ ಅವನು ಸರ್ವಭೂತಗಳಿಗೂ ಪೂಜ್ಯನು, ಮತ್ತು ಈ ಮಹಾಮುನಿಯೇ ವಂದ್ಯನು.[2]

(ಭಾಷ್ಯ)

೨೨. ಯಥೋಕ್ತಸ್ಥಾನತ್ರಯೇ ಯಃ[3] ತುಲ್ಯಮ್ ಉಕ್ತಂ ಸಾಮಾನ್ಯಂ ವೇತ್ತಿ ಏವಮೇವ ಏತತ್ ಇತಿ ನಿಶ್ಚಿತಃ ಸನ್ ಸಃ ಪೂಜ್ಯಃ ವನ್ದ್ಯಶ್ಚ ಬ್ರಹ್ಮವಿತ್ ಲೋಕೇ ಭವತಿ ॥

(ಭಾಷ್ಯಾರ್ಥ)

ಮೇಲೆ ಹೇಳಿದ ಅವಸ್ಥಾತ್ರಯದಲ್ಲಿಯೂ (ಎರಡಕ್ಕೂ) ಸಮಾನವಾಗಿರುವ[4] (ನಾವು) ಹೇಳಿರುವ ಹೋಲಿಕೆಯನ್ನು ಹೀಗೆಯೇ ಸರಿ ಎಂದು ನಿಶ್ಚಯವನ್ನು ಮಾಡಿಕೊಂಡವನಾಗಿ ಯಾವನು ಅರಿತುಕೊಂಡಿರುವನೋ ಆ ಬ್ರಹ್ಮಜ್ಞಾನಿಯು ಲೋಕದಲ್ಲಿ ಪೂಜ್ಯನೂ ನಮಸ್ಕಾರಕ್ಕೆ ಅರ್ಹನೂ ಆಗಿರುವನು.[5]

ಅಕಾರೋ ನಯತೇ ವಿಶ್ವಮುಕಾರಶ್ಚಾಪಿ ತೈಜಸಮ್ ।
ಮಕಾರಶ್ಚ ಪುನಃ ಪ್ರಾಜ್ಞಂ ನಾಮಾತ್ರೇ ವಿದ್ಯತೇ ಗತಿಃ ॥೨೩॥

೨೩. ಅಕಾರವು ವಿಶ್ವನಲ್ಲಿಗೆ ಒಯ್ಯುತ್ತದೆ ; ಉಕಾರವೂ ತೈಜಸನಲ್ಲಿಗೆ ಒಯ್ಯುವದು ; ಮತ್ತು ಮಕಾರವಾದರೋ ಪ್ರಾಜ್ಞನಲ್ಲಿಗೆ ಒಯ್ಯುವದು. ಅಮಾತ್ರದಲ್ಲಿ ಗತಿಯಿರುವದಿಲ್ಲ.

---

1. 'ಯತ್ತುಲ್ಯಂ' ಆ॥ ಮೈ॥

2. ಈತನೇ ಮಹಾಮುನಿಯು ಎಂದು ಕನ್ನಡಿಸುವದಕ್ಕಿಂತ ಹೀಗೆ ಕನ್ನಡಿಸುವದು ಒಳ್ಳೆಯದು ; ಏಕೆಂದರೆ ಇಂಥ ಮಹಾಮನಸ್ಸವುಳ್ಳವನಾದ್ದರಿಂದ ಪೂಜ್ಯನೂ ವಂದ್ಯನೂ ಆಗಿರುತ್ತಾನೆ ಎಂದು ಈ ಜ್ಞಾನವನ್ನು ಹೊಗಳಿದಂತಾಗುತ್ತದೆ

3 ಆ॥ ಮೈ॥ ಗಳಲ್ಲಿಲ್ಲ , ಮುಂದೆ 'ನಿಶ್ಚಿತಃ ಯಃ' ಎಂದಿದೆ.

4. ಪಾದಗಳಿಗೂ ಮಾತ್ರೆಗಳಿಗೂ ಇರುವ

5. ಏಕೆಂದರೆ ಈ ಜ್ಞಾನದಿಂದ ಪರಮಾರ್ಥಸ್ವರೂಪವಾದ ಬ್ರಹ್ಮರೂಪವಾದ ಓಂಕಾರವನ್ನು ತಿಳಿದುಕೊಳ್ಳುತ್ತಾನೆ

(ಭಾಷ್ಯ)

೬೭. ಯಥೋಕ್ತೈಃ ಸಾಮಾನ್ಯೈಃ ಆತ್ಮಪಾದಾನಾಂ ಮಾತ್ರಾಭಿಃ ಸಹ ವಿಕಲ್ಪಂ ಕೃತ್ವಾ ಯಥೋಕ್ತೋಙ್ಕಾರಂ ಪ್ರತಿಪದ್ಯ ಯೋ ಧ್ಯಾಯತಿ[1] ತಮ್ ಅಕಾರಃ ನಯತೇ ವಿಶ್ವಂ ಪ್ರಾಪಯತಿ । ಅಕಾರಾಲಮ್ಬನಮ್ ಓಂಕಾರಂ ವಿದ್ವಾನ್ ವೈಶ್ವಾನರೋ ಭವತಿ ಇತ್ಯರ್ಥಃ । ತಥಾ ಉಕಾರಃ ತೈಜಸಮ್ । ಮಕಾರಶ್ಚಾಪಿ ಪುನಃ ಪ್ರಾಜ್ಞಮ್ । ಚಶಬ್ದಾತ್ 'ನಯತೇ' ಇತಿ ಅನುವರ್ತತೇ । ಕ್ಷೀಣೇ ತು ಮಕಾರೇ ಬೀಜಭಾವಕ್ಷಯಾತ್ ಅಮಾತ್ರೇ ಓಂಕಾರೇ ಗತಿಃ ನ ವಿದ್ಯತೇ ಕ್ವಚಿತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹಿಂದೆ ಹೇಳಿರುವ ಹೋಲಿಕೆಗಳಿಂದ ಆತ್ಮನ ಪಾದಗಳನ್ನು ಮಾತ್ರೆಗಳೊಡನೆ ಒಂದುಗೂಡಿಸಿಕೊಂಡು[2] ಹಿಂದೆ ಹೇಳಿರುವ ಓಂಕಾರವನ್ನು ಅರಿತುಕೊಂಡು[3] ಯಾವನು ಧ್ಯಾನಮಾಡುವನೋ, ಅವನನ್ನು ಅಕಾರವು ವಿಶ್ವನಲ್ಲಿಗೆ ಒಯ್ಯುತ್ತದೆ, ವಿಶ್ವವನ್ನು ಸೇರಿಸುತ್ತದೆ ; ಅಕಾರಾಲಂಬನವಾಗಿ ಓಂಕಾರವನ್ನು ಅರಿತುಕೊಂಡವನು ವೈಶ್ವಾನರನಾಗುತ್ತಾನೆ ಎಂದರ್ಥ.[4] ಇದರಂತೆ ಉಕಾರವು ತೈಜಸನಲ್ಲಿಗೆ ಒಯ್ಯುತ್ತದೆ ; ಮತ್ತು ಮಕಾರವಾದರೋ ಪ್ರಾಜ್ಞನಲ್ಲಿಗೆ ಸೇರಿಸುತ್ತದೆ. (ಇಲ್ಲಿ) ಚ (ಊ ಎಂಬ) ಶಬ್ದವು ಇರುವದರಿಂದ 'ನಯತೇ' (ಒಯ್ಯುತ್ತದೆ) ಎಂಬ (ಮಾತು ಇಲ್ಲಿಗೂ) ಸೇರಿಕೊಳ್ಳುತ್ತದೆ. ಆದರೆ ಮಕಾರವು ಇಲ್ಲವಾದರೆ ಬೀಜರೂಪವು ಹೋಗಿಬಿಡುವದರಿಂದ[5] ಅಮಾತ್ರವಾದ ಓಂಕಾರದಲ್ಲಿ ಎಲ್ಲಿಗೂ ಹೋಗಬೇಕಾದದ್ದು ಇರುವದಿಲ್ಲ ಎಂದರ್ಥ.

---

1. 'ಪ್ರತಿಪದ್ಯತೇ ಯೋ ಧ್ಯಾಯಿ' ಎಂಬ ವಾ॥ ಪಾಠಕ್ಕಿಂತ ಈ ಆ॥ ಕಾ॥ ಪಾಠವೇ ಉತ್ತಮ.

2. ಆಕಾರವು ವಾಚಕ, ವಿಶ್ವನು ವಾಚ್ಯ-ಎಂಬ ಭೇದವಿಲ್ಲ. ವಾಚ್ಯವಾಚಕರೂಪವಾಗಿರುವದೆಲ್ಲವೂ ವಿಶ್ವನು ಅಥವಾ ಆಕಾರವು ಎಂದು ಯಾವನು ಅರಿತುಕೊಳ್ಳುವನೋ ಅವನಿಗೆ ವಿಶ್ವನೆಂಬ ಪಾದವೂ ಆಕಾರವೂ ಒಂದಾಗಿರುವವು. ಉಕಾರಮಕಾರಗಳನ್ನೂ ಹೀಗೆಯೇ ಅರಿಯಬೇಕು.

3. ವಾಚ್ಯವಾಚಕಭೇದರಹಿತವಾಗಿರುವ ಪರಮಾರ್ಥತತ್ತ್ವವೆಂಬ ಓಂಕಾರವೇ ಇದು ಎಂದರಿತು ಎಂದರ್ಥ.

4. ಅಕಾರವೇ ಓಂಕಾರವು, ತತ್ತ್ವವು-ಎಂದರಿತವನು, ವೈಶ್ವಾನರನಾಗುತ್ತಾನೆ. ''ಆಕಾರ ಪ್ರಧಾನವಾಗಿರುವ ಓಂಕಾರವು'' ಎಂಬ ಆ॥ ವ್ಯಾಖ್ಯಾನವು ಸರಿಯಲ್ಲ.

5. ತೈಜಸನನ್ನು ಅಥವಾ ಉಕಾರವನ್ನು ಅರಿತಾಗ ವಿಶ್ವ ಅಥವಾ ಅಕಾರವು ಇರುವದಿಲ್ಲ ; ಹೀಗೆ ಪ್ರಾಜ್ಞನನ್ನು ಅಥವಾ ಮಕಾರವನ್ನು ಅರಿತಾಗ ತೈಜಸ ಅಥವಾ ಉಕಾರವು ಇರುವದಿಲ್ಲ ; ನಿಜವಾದ ಓಂಕಾರವನ್ನು ಅಥವಾ ತುರೀಯಾತ್ಮನನ್ನು ಅರಿತಾಗ ಮಕಾರವೂ ಇಲ್ಲ, ಮತ್ತೆಲ್ಲಿಗೂ ಹೋಗುವದೂ ಇಲ್ಲ, ಎಂದರೆ ಇನ್ನೊಂದು ಅರಿಯತಕ್ಕದ್ದು ಇರುವದಿಲ್ಲ.

## ೪. ಉಪನಿಷತ್ತು

### ಅಮಾತ್ರವಾದ ಓಂಕಾರ

ಅಮಾತ್ರಶ್ಚತುರ್ಥೋಽವ್ಯವಹಾರ್ಯಃ ಪ್ರಪಞ್ಚೋಪಶಮಃ
ಶಿವೋಽದ್ವೈತ ಏವಮೋಙ್ಕಾರ ಆತ್ಮೈವ ಸಂವಿಶತ್ಯಾತ್ಮನಾ-
ತ್ಮಾನಂ ಯ ಏವಂ ವೇದ ಯ ಏವಂ ವೇದ ॥೧೨॥

೧೨. ಅಮಾತ್ರವಾದ ಚತುರ್ಥವು ಅವ್ಯವಹಾರ್ಯವಾದ, ಪ್ರಪಂಚೋಪಶಮವಾದ, ಶಿವವಾದ, ಅದ್ವೈತವು. ಓಗೆ ಓಂಕಾರವು ಆತ್ಮನೇ. ಯಾವನು ಹೀಗೆಂದು ಅರಿಯುವನೋ ಅವನು ತನ್ನಿಂದ ತನ್ನನ್ನು ಸೇರುವನು ; ಯಾವನು ಹೀಗೆಂದು ಅರಿಯುವನೋ (ಅವನು ತನ್ನಿಂದ ತನ್ನನ್ನು ಸೇರುವನು).

(ಭಾಷ್ಯ)

೬೮. ಅಮಾತ್ರಃ ಮಾತ್ರಾಃ ಯಸ್ಯ ನ ಸನ್ತಿ ಸಃ ಅಮಾತ್ರಃ ಓಂಕಾರಃ ಚತುರ್ಥಃ ತುರೀಯಃ ಆತ್ಮೈವ ಕೇವಲಃ ಅಭಿಧಾನಾಭಿಧೇಯರೂಪಯೋಃ ವಾಙ್ಮನಸಯೋಃ ಕ್ಷೀಣತ್ವಾತ್ ಅವ್ಯವಹಾರ್ಯಃ । ಪ್ರಪಞ್ಚೋಪಶಮಃ ಶಿವಃ ಅದ್ವೈತಃ ಸಂವೃತ್ತಃ । ಏವಂ ಯಥೋಕ್ತವಿಜ್ಞಾನವತಾ ಪ್ರಯುಕ್ತಃ ಓಂಕಾರಃ ತ್ರಿಮಾತ್ರಃ ತ್ರಿಪಾದಃ ಆತ್ಮೈವ । ಸಂವಿಶತಿ ಆತ್ಮನಾ ಸ್ವೇನೈವ ಸ್ವಂ ಪಾರಮಾರ್ಥಿಕಮ್ ಆತ್ಮಾನಂ ಯ ಏವಂ ವೇದ । ಪರಮಾರ್ಥದರ್ಶೀ ಬ್ರಹ್ಮವಿತ್[1] ತೃತೀಯಂ ಬೀಜಭಾವಂ ದಗ್ಧ್ವಾ ಆತ್ಮಾನಂ ಪ್ರವಿಷ್ಟಃ ಇತಿ ನ ಪುನಃ ಜಾಯತೇ । ತುರೀಯಸ್ಯ ಅಬೀಜತ್ವಾತ್ । ನ ಹಿ ರಜ್ಜುಸರ್ಪಯೋಃ ವಿವೇಕೇ ರಜ್ಜ್ವಾಂ ಪ್ರವಿಷ್ಟಃ ಸರ್ಪಃ ಬುದ್ಧಿಸಂಸ್ಕಾರಾತ್ ಪುನಃ ಪೂರ್ವವತ್ ತದ್ವಿವೇಕಿನಾಮ್ ಉತ್ಪದ್ಯತೇ । ಮನ್ದಮಧ್ಯಮಧಿಯಾಂ ತು ಪ್ರತಿಪನ್ನಸಾಧಕಭಾವಾನಾಂ ಸನ್ಮಾರ್ಗಗಾಮಿನಾಂ ಸಂನ್ಯಾಸಿನಾಂ ಮಾತ್ರಾಣಾಂ ಪಾದಾನಾಂ ಚ ಕ್ಲಪ್ತಸಾಮಾನ್ಯವಿದಾಂ ಯಥಾವತ್ ಉಪಾಸ್ಯಮಾನಃ ಓಙ್ಕಾರಃ ಬ್ರಹ್ಮಪ್ರತಿಪತ್ತಯೇ ಆಲಮ್ಬನೀಭವತಿ । ತಥಾ ಚ ವಕ್ಷ್ಯತಿ "ಆಶ್ರಮಾಸ್ತ್ರಿವಿಧಾಃ"[2] (೩-೧೬) ಇತ್ಯಾದಿ ॥

(ಭಾಷ್ಯಾರ್ಥ)

ಅಮಾತ್ರವಾದ ಮಾತ್ರೆಗಳು ಯಾವದಕ್ಕೆ ಇಲ್ಲವೋ ಆ ಅಮಾತ್ರವಾದ

---

1. 'ಪರಮಾರ್ಥದರ್ಶಿನಾಂ ಬ್ರಹ್ಮವಿದಾಮ್' ಆ॥ ಮೈ॥ "ಪರಮಾರ್ಥದರ್ಶನಾತ್ ಬ್ರಹ್ಮವಿತ್" ವಾ॥ ಕಾ॥ ಎಂಬ ಪಾಠಗಳಿಗಿಂತ ಈ ಪಾಠವು ಮೇಲು.

2. "ಆಶ್ರಮಾಸ್ತ್ರಿವಿಧಾ ಹೀನಾಃ" ಇತ್ಯಾದಿ ಆ॥ ಕಾ॥ , ಇಲ್ಲಿ 'ಹೀನಾ' ಎಂಬುದು ತಪ್ಪೇ.

ಓಂಕಾರವು[1] ಚತುರ್ಥವು, ನಾಲ್ಕನೆಯವನಾದ ಬರಿಯ ಆತ್ಮನೇ[2]. (ಅದು) ಅಭಿಧಾನ, ಅಭಿಧೇಯ-ಇವುಗಳ ರೂಪದಲ್ಲಿರುವ ವಾಕ್ಯು, ಮನಸ್ಸು-(ಈ) ಎರಡೂ ನಾಶವಾಗಿ ಬಿಟ್ಟಿರುವದರಿಂದ[3] ಅವ್ಯವಹಾರ್ಯ, ಪ್ರಪಂಚೋಪಶಮವಾದ,[4] ಶಿವನಾದ, ಅದ್ವೈತ ನಾದ (ಆತ್ಮನೇ) ಆಗಿ ಬಿಟ್ಟಿರುವದು. ಹೀಗೆ ಮೇಲೆ ಹೇಳಿರುವ ಅರಿವನ್ನುಳ್ಳಾತನು ಉಚ್ಚರಿಸಿದ ಓಂಕಾರವು ಮೂರುಮಾತ್ರೆಗಳೂ ಮೂರುಪಾದಗಳೂ ಇರುವ(ದಾದರೂ) ಆತ್ಮನೇ[5]. ಯಾವನು ಹೀಗೆಂದು ತಿಳಿಯುವನೋ (ಅವನು) 'ಆತ್ಮನಾ' ಎಂದರೆ ತನ್ನಿಂದಲೇ 'ಆತ್ಮಾನಂ' ಎಂದರೆ ಪಾರಮಾರ್ಥಿಕವಾಗಿರುವ ತನ್ನ ಸ್ವರೂಪವನ್ನೇ ಚೆನ್ನಾಗಿ ಸೇರಿಕೊಳ್ಳುವನು. ಪರಮಾರ್ಥವನ್ನು ಕಂಡುಕೊಂಡಿರುವ ಬ್ರಹ್ಮಜ್ಞಾನಿಯು ಮೂರನೆಯ ದಾದ ಬೀಜರೂಪವನ್ನು ಸುಟ್ಟು ಆತ್ಮ(ಸ್ವರೂಪವನ್ನು) ಪ್ರವೇಶಿಸಿರುವದರಿಂದ ಮತ್ತೆ ಹುಟ್ಟುವದಿಲ್ಲ. ಏಕೆಂದರೆ ತುರೀಯನಲ್ಲಿ ಬೀಜವು ಇರುವದಿಲ್ಲ[6]. ಹಗ್ಗಹಾವುಗಳನ್ನು ವಿಂಗಡಿಸಿ ಅರಿತುಕೊಳ್ಳಲಾಗಿ ಹಗ್ಗದಲ್ಲಿ ಹೊಕ್ಕ ಹಾವು[7] ಬುದ್ಧಿಯ ಸಂಸ್ಕಾರದಿಂದ ಮತ್ತೂ ಮೊದಲಿನಂತೆ ಅವುಗಳನ್ನು ವಿಂಗಡಿಸಿ ಅರಿತವರಿಗೆ ಹುಟ್ಟಿಕೊಳ್ಳುವದಿಲ್ಲವಷ್ಟೆ[8]. ಆದರೆ ಸಾಧಕಭಾವವನ್ನು ಹೊಂದಿ ಸನ್ಮಾರ್ಗದಲ್ಲಿ ನಡೆಯುವ ಅಲ್ಪಬುದ್ಧಿಯವರಿಗೂ ನಡುತರದ ಬುದ್ಧಿಯವರಿಗೂ[9] ಮಾತ್ರೆಗಳಿಗೂ ಪಾದಗಳಿಗೂ (ಹಿಂದೆ) ಕಲ್ಪಿಸಿರುವ ಹೋಲಿಕೆಯನ್ನು ಅರಿತು ಅದರಂತೆ ಓಂಕಾರವನ್ನು ಉಪಾಸನೆಮಾಡಿದರೆ (ಅದು) ಬ್ರಹ್ಮ ವನ್ನು ಪಡೆಯುವದಕ್ಕೆ ಆಲಂಬನವಾಗುತ್ತದೆ. ಆದ್ದರಿಂದಲೇ ಮುಂದೆ "ಆಶ್ರಮ (ದಲ್ಲಿರು)ವವರು ಮೂರು ಬಗೆ" (೩-೧೬) ಎಂದು ಮುಂತಾಗಿ (ಕಾರಿಕೆಯಲ್ಲಿ) ಹೇಳಿರುತ್ತಾರೆ.

1. ಓಂಕಾರವೆಂದರೆ ಪರಮಾರ್ಥತತ್ತ್ವವು ; ಇದು ಶಬ್ದವಲ್ಲವಾದ್ದರಿಂದ ಇದಕ್ಕೆ ಮಾತ್ರೆ ಗಳಿರುವದಿಲ್ಲ. 2. ಹಿಂದೆ ಆತ್ಮನ ನಾಲ್ಕನೆಯ ಪಾದವೆಂದು ಹೇಳಿದ ಸ್ವರೂಪವೇ.

3. ಜ್ಞಾನದಿಂದ ಹುಸಿಕೋರಿಕೆಯಾಗಿ ಅವುಗಳ ತಿರುಳು ಓಂಕಾರವೇ ಆಗಿಬಿಟ್ಟಿರುವದರಿಂದ.

4. 'ಅಮಾತ್ರಃ' ಎಂದು ವಿಶ್ವಾದಿವಾಚಕಗಳನ್ನು ಅಲ್ಲಗಳೆದಿರುವಂತೆ ಪ್ರಪಂಚೋಪಶಮಃ ಎಂದು ಅವಸ್ಥಾವಾಚಕಗಳನ್ನು ಅಲ್ಲಗಳೆದಿದೆ.

5. ಮಾತ್ರೆಗಳೂ ಪಾದಗಳೂ ಒಂದಾಗಿ ಪರಮಾರ್ಥವಾದ ಓಂಕಾರವೆಂಬ ತತ್ತ್ವವೇ ಆಗಿವೆ.

6. ಸುಷುಪ್ತಾತ್ಮನಲ್ಲಿರುವಂತೆ ಕಾರಣತ್ವವು ಇರುವದಿಲ್ಲ'.

7. ಹಗ್ಗವೆಂದು ನಿಶ್ಚಿತವಾಗಿ ತಿಳಿದುಬಂದ ತೋರಿಕೆಯ ಹಾವು.

8. ಹಾವಿನಂತೆ ತೋರಿದರೂ ನಿಜವಾಗಿ ಹಗ್ಗವೇ' ಎಂಬ ನಿಶ್ಚಯವೇ ಇರುವದಲ್ಲವೆ ?

9. ಮಂದಬುದ್ಧಿಯವರಿಗೆ ಪ್ರತೀಕವಾಗಿ ಮಧ್ಯಮಬುದ್ಧಿಯವರಿಗೆ ವಾಚಕವಾಗಿ ಉಪಾಸ್ಯ ವೆಂದು ತಿಳಿಯಬೇಕು. ಗೀ. ಭಾ. ೮-೧೨, ಭಾ. ಭಾ. ೫೦೮ ನೋಡಿ.

# ಕಾರಿಕೆ

## ಪರಮಾರ್ಥವಾದ ಓಂಕಾರ

(ಕಾರಿಕಾವಾಕ್ಯ)

ಅತ್ರೈತೇ ಶ್ಲೋಕಾ ಭವನ್ತಿ-

(ಕಾರಿಕಾವಾಕ್ಯಾರ್ಥ)

ಇಲ್ಲಿ ಈ ಶ್ಲೋಕಗಳು ಬರುತ್ತವೆ.

ಓಙ್ಕಾರಂ ಪಾದಶೋ ವಿದ್ಯಾತ್ ಪಾದಾ ಮಾತ್ರಾ ನ ಸಂಶಯಃ ।
ಓಙ್ಕಾರಂ ಪಾದಶೋ ಜ್ಞಾತ್ವಾ ನ ಕಿಂಚಿದಪಿ ಚಿನ್ತಯೇತ್ ॥೨೪॥

೨೪. ಓಂಕಾರವನ್ನು ಪಾದ (ಪಾದ)ವಾಗಿ ಅರಿತುಕೊಳ್ಳಬೇಕು. ಪಾದಗಳೇ ಮಾತ್ರೆಗಳು, ಸಂಶಯವಿಲ್ಲ. ಓಂಕಾರವನ್ನು ಪಾದ (ಪಾದ)ವಾಗಿ ಅರಿತು ಕೊಂಡು ಏನನ್ನೂ ಚಿಂತಿಸದಿರಬೇಕು.

(ಭಾಷ್ಯ)

೬೪. ಪೂರ್ವವತ್ ಅತ್ರ ಏತೇ ಶ್ಲೋಕಾ ಭವನ್ತಿ[1] । ಯಥೋಕ್ತೈಃ ಸಾಮಾನ್ಯೈಃ ಪಾದಾ ಏವ ಮಾತ್ರಾಃ ಮಾತ್ರಾಶ್ಚ ಪಾದಾಃ । ತಸ್ಮಾತ್ ಓಂಕಾರಂ ಪಾದಶಃ ವಿದ್ಯಾತ್ ಇತ್ಯರ್ಥಃ । ಏವಮ್ ಓಂಕಾರೇ ಜ್ಞಾತೇ ದೃಷ್ಟಾರ್ಥಮ್ ಅದೃಷ್ಟಾರ್ಥಂ ವಾ ನ ಕಿಂಚಿತ್[2] ಪ್ರಯೋಜನಂ ಚಿನ್ತಯೇತ್ ಕೃತಾರ್ಥತ್ವಾತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಮೊದಲಿನಂತೆ ಈ (ವಿಷಯದಲ್ಲಿ) ಈ (ಮುಂದಿನ) ಶ್ಲೋಕಗಳು ಬಂದಿರುತ್ತವೆ. ಹಿಂದೆ ಹೇಳಿದ ಹೋಲಿಕೆಗಳಿರುವದರಿಂದ ಪಾದಗಳೇ ಮಾತ್ರೆಗಳು, ಮತ್ತು ಮಾತ್ರೆಗಳು ಪಾದಗಳು. ಆದ್ದರಿಂದ ಓಂಕಾರವನ್ನು ಪಾದ (ಪಾದ)ವಾಗಿ ಅರಿತು ಕೊಳ್ಳಬೇಕು ಎಂದರ್ಥ. ಓಗೆ ಓಂಕಾರವನ್ನು ಅರಿತುಕೊಂಡಮೇಲೆ ದೃಷ್ಟ

1. 'ಭಾಷ್ಯದಲ್ಲಿ ಅತ್ರೈತೇ ಭವನ್ತಿ' ಎಂಬ ವಾಕ್ಯವು ಆ॥ದಲ್ಲಿ ಬಿಟ್ಟಿದೆ ; ಕಾ॥ದಲ್ಲಿ "ಪೂರ್ವವತ್" ಬಿಟ್ಟಿದೆ

2. 'ಕಿಂಚಿದಪಿ' ಕಾ॥ ಮಾ॥

ಪ್ರಯೋಜನವನ್ನಾಗಲಿ, ಅದೃಷ್ಟಪ್ರಯೋಜನವನ್ನಾಗಲಿ ಯಾವದನ್ನೂ ಯೋಚಿಸದೆ ಇರಬೇಕು. ಏಕೆಂದರೆ ಕೃತಾರ್ಥನಾಗಿರುತ್ತಾನೆ ಎಂದರ್ಥ.[1]

ಯುಞ್ಜೀತ ಪ್ರಣವೇ ಚೇತಃ ಪ್ರಣವೋ ಬ್ರಹ್ಮ ನಿರ್ಭಯಮ್ ।
ಪ್ರಣವೇ ನಿತ್ಯಯುಕ್ತಸ್ಯ ನ ಭಯಂ ವಿದ್ಯತೇ ಕ್ವಚಿತ್ ॥೨೫॥

೨೫. ಪ್ರಣವದಲ್ಲಿ ಚೇತಸ್ಸನ್ನು ಯೋಜಿಸಬೇಕು. ಪ್ರಣವವು ನಿರ್ಭಯವಾದ ಬ್ರಹ್ಮವು. ಪ್ರಣವದಲ್ಲಿ ನಿತ್ಯಯುಕ್ತನಾಗಿರುವವನಿಗೆ ಎತ್ತಲೂ ಭಯವಿಲ್ಲ.

(ಭಾಷ್ಯ)

೨೦. ಯುಞ್ಜೀತ ಸಮಾದಧ್ಯಾತ್ ಯಥಾವ್ಯಾಖ್ಯಾತೇ ಪರಮಾರ್ಥರೂಪೇ ಪ್ರಣವೇ ಚೇತಃ ಮನಃ । ಯಸ್ಮಾತ್ ಪ್ರಣವಃ ಬ್ರಹ್ಮ ನಿರ್ಭಯಮ್ । ನ ಹಿ ತತ್ರ ಸದಾ ಯುಕ್ತಸ್ಯ ಭಯಂ ವಿದ್ಯತೇ ಕ್ವಚಿತ್ । "ವಿದ್ವಾನ್ ನ ಬಿಭೇತಿ ಕುತಶ್ಚನ" (ತೈ. ೨-೯) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಮೇಲೆ ವಿವರಿಸಿರುವ ಪರಮಾರ್ಥರೂಪವಾದ ಓಂಕಾರದಲ್ಲಿ ಚೇತಸ್ಸನ್ನು ಮನಸ್ಸನ್ನು ಯೋಚಿಸಬೇಕು, ಸಮಾಧಾನಗೊಳಿಸಬೇಕು. ಏಕೆಂದರೆ ಪ್ರಣವವು ನಿರ್ಭಯವಾದ ಬ್ರಹ್ಮವು. ಅದರಲ್ಲಿ ಯಾವಾಗಲೂ (ಮನಸ್ಸನ್ನು) ನಿಲ್ಲಿಸಿಕೊಂಡವರಿಗೆ[2] ಎತ್ತಲೂ ಅಂಜಿಕೆಯು ಇರುವದೇ ಇಲ್ಲ. "ಅರಿತುಕೊಂಡಾತನು ಏತಕ್ಕೂ ಅಂಜುವದಿಲ್ಲ" (ತೈ. ೨-೯) ಎಂಬ ಶ್ರುತಿ ಇದಕ್ಕೆ ಪ್ರಮಾಣವು.

ಪ್ರಣವೋ ಹ್ಯಪರಂ ಬ್ರಹ್ಮ ಪ್ರಣವಶ್ಚ ಪರಂ ಸ್ಮೃತಃ ।
ಪೂರ್ವೋಽನನ್ತರೋಽಬಾಹ್ಯೋಽನಪರಃ ಪ್ರಣವೋಽವ್ಯಯಃ ॥೨೬॥

೨೬. ಪ್ರಣವವೇ ಕಡಿಮೆಯ ಬ್ರಹ್ಮವು, ಮತ್ತು ಪ್ರಣವವೇ ಹೆಚ್ಚಿನ ಬ್ರಹ್ಮವು. ಪ್ರಣವವು ಹಿಂದಿಲ್ಲದ್ದು, ಒಳಗಿಲ್ಲದ್ದು, ಹೊರಗಿಲ್ಲದ್ದು, ಮುಂದಿಲ್ಲದ್ದು, ಅವ್ಯಯವಾದದ್ದು.

---

1. ಯಾವದನ್ನೂ ಯೋಚಿಸದೆ ಇರಬೇಕು ಎಂದು ವಿಧಿಯಿಲ್ಲ. ಪರಮಾರ್ಥತತ್ತ್ವವಾದ ಪ್ರಣವವನ್ನು ಅರಿತರೆ ಮತ್ತೆ ಯಾವದರ ಬಯಕೆಯೂ ಇರುವದಿಲ್ಲ. ಆದ್ದರಿಂದ ಅರಿತುಕೊಳ್ಳಬೇಕು ಎಂದರ್ಥ. 2. ಜ್ಞಾನದಿಂದ ಅದರ ಸ್ವರೂಪವನ್ನೇ ಹೊಂದಿ ನಿಂತವರಿಗೆ.

(ಭಾಷ್ಯ)

೭೧. ಪರಾಪರೇ ಬ್ರಹ್ಮಣೇ ಪ್ರಣವಃ । ಪರಮಾರ್ಥತಃ ಕ್ಷೀಣೇಷು ಮಾತ್ರಾ ಪಾದೇಷು ಪರ ಏವ ಆತ್ಮಾ ಬ್ರಹ್ಮ ಇತಿ ನ ಪೂರ್ವಂ ಕಾರಣಮ್ ಅಸ್ಯ ವಿದ್ಯತೇ ಇತಿ ಅಪೂರ್ವಃ । ನಾಸ್ಯ ಅನ್ತರಂ ಭಿನ್ನಜಾತೀಯಂ ಕಿಂಚಿತ್ ವಿದ್ಯತೇ ಇತಿ ಅನನ್ತರಃ । ತಥಾ ಬಾಹ್ಯಮ್ ಅನ್ಯತ್ ನ ವಿದ್ಯತೇ ಇತಿ ಅಬಾಹ್ಯಃ । ಅಪರಂ ಕಾರ್ಯಮ್ ಅಸ್ಯ ನ ವಿದ್ಯತೇ ಇತಿ ಅನಪರಃ । ಸಬಾಹ್ಯಾಭ್ಯನ್ತರೋ ಹ್ಯಜಃ ಸೈನ್ಧವಘನವತ್ ಪ್ರಜ್ಞಾನ ಘನಃ ಇತ್ಯರ್ಥಃ ॥

(ಭಾಷ್ಯಾರ್ಥ)

ಹೆಚ್ಚಿನ ಮತ್ತು ಕಡಿಮೆಯ ಬ್ರಹ್ಮಗಳು ಪ್ರಣವವೇ.[1] ನಿಜವಾಗಿ (ನೋಡಿದರೆ) ಮಾತ್ರೆಗಳೂ ಪಾದಗಳೂ ಇಲ್ಲವಾಗಲು (ಪ್ರಣವವು) ಪರಮಾತ್ಮನಾದ ಬ್ರಹ್ಮವೇ ಆಗಿರುವದರಿಂದ ಇದಕ್ಕೆ ಪೂರ್ವವು ಎಂದರೆ ಕಾರಣವು ಇರುವದಿಲ್ಲವಾಗಿ ಅಪೂರ್ವವು. ಇದಕ್ಕೆ ಅಂತರವು ಎಂದರೆ ಬೇರೆಯ ಜಾತಿಯದು (ಯಾವದೂ ಒಳಗೆ) ಇರುವದಿಲ್ಲ ; ಆದ್ದರಿಂದ ಇದು ಅನಂತರವು. ಹೀಗೆಯೇ ಹೊರಗೆ ಮತ್ತೊಂದು ಇಲ್ಲದ್ದರಿಂದ ಅಬಾಹ್ಯವಾದದ್ದು. ಅಪರವು ಎಂದರೆ (ಇದರ ಮುಂದೆ ಇರಬೇಕಾದ) ಕಾರ್ಯವು ಇದಕ್ಕೆ ಇರುವದಿಲ್ಲವಾಗಿ ಅನುಪರವು[2]. (ಇದು) "ಹೊರಗೂ ಒಳಗೂ ಹುಟ್ಟಿಲ್ಲದೆ[3] "ಉಪ್ಪಿನ ಹರಳಿನಂತೆ ಅರಿವಿನ ಗಟ್ಟಿಯಾಗಿರುವದು"[4] ಎಂದು ಅರ್ಥ.

ಸರ್ವಸ್ಯ ಪ್ರಣವೋ ಹ್ಯಾದಿರ್ಮಧ್ಯಮನ್ತಸ್ತಥೈವ ಚ ।
ಏವಂ ಹಿ ಪ್ರಣವಂ ಜ್ಞಾತ್ವಾ ವ್ಯಶ್ನುತೇ ತದನನ್ತರಮ್ ॥೭೭॥

೭೭. ಎಲ್ಲಕ್ಕೂ ಪ್ರಣವವೇ ಮೊದಲು, ನಡುವೆ, ಮತ್ತು ಕೊನೆ. ಹೀಗೆಂದೇ ಪ್ರಣವವನ್ನು ಅರಿತುಕೊಂಡರೆ ತದನಂತರವೇ ಪಡೆದು ಕೊಳ್ಳುತ್ತಾನೆ.

1. ಉಪಾಧಿಯಿಂದ ಅಪರಬ್ರಹ್ಮ. ಉಪಾಧಿಯಿಲ್ಲದ ಪರಬ್ರಹ್ಮ. ಪ್ರಣವದ ಮೂಲಕ ಉಪಾಸನೆಮಾಡಿ ಅಥವಾ ಓಂಕಾರವಾಗಿ ತೀರಿಯುವ ತತ್ತ್ವವಾದ್ದರಿಂದ ಅದನ್ನೂ ಪ್ರಣವವೆಂದಿದೆ.

2. ಬೃ. ೨-೫-೧೯ ಕಾರ್ಯಕಾರಣಭಾವವು ಇಲ್ಲದ್ದರಿಂದ ಬ್ರಹ್ಮವು ಪ್ರಣವಶಬ್ದವಾಚ್ಯವಲ್ಲ ; ಪ್ರಣವವೆಂದಿಟ್ಟುಕೊಂಡದ್ದರ ಪರಮಾರ್ಥರೂಪವಾದ್ದರಿಂದ ಅದನ್ನೂ ಪ್ರಣವವೆಂದು ಕರೆದಿರುತ್ತದೆ, ಅಷ್ಟೆ.

3 ಮುಂ ೨-೧-೨

4. ಬೃ. ೪-೫-೧೩

(ಭಾಷ್ಯ)

೭೨. ಆದಿಮಧ್ಯಾನ್ತಾಃ ಉತ್ಪತ್ತಿಸ್ಥಿತಿಪ್ರಲಯಾಃ ಸರ್ವಸ್ಯ ಪ್ರಣವ[1] ಏವ । ಮಾಯಾಹಸ್ತಿರಜ್ಜುಸರ್ಪಮೃಗತೃಷ್ಣಿಕಾಸ್ವಪ್ನಾದಿವತ್ ಉತ್ಪದ್ಯಮಾನಸ್ಯ ವಿಯದಾದಿ ಪ್ರಪಞ್ಚಸ್ಯ ಯಥಾ ಮಾಯಾವ್ಯಾದಯಃ । ಏವಂ ಹಿ ಪ್ರಣವಮ್ ಆತ್ಮಾನಂ ಮಾಯಾ ವ್ಯಾದಿಸ್ಥಾನೀಯಂ ಜ್ಞಾತ್ವಾ ತತ್ಕ್ಷಣಾದೇವ ತದಾತ್ಮಭಾವಂ ವ್ಯಶ್ನುತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಮಾಯೆಯ ಆನೆ, ಹಗ್ಗದ ಹಾವು, ಬಿಸಿಲುಕುದುರೆ, ಕನಸು-ಮುಂತಾದವುಗಳಂತೆ ಹುಟ್ಟುತ್ತಿರುವ[2] ಆಕಾಶಾದಿಪ್ರಪಂಚಕ್ಕೆ ಮಾಯಾವಿ ಮೊದಲಾದವರಂತೆ[3] ಪ್ರಣವವೇ ಮೊದಲುನಡುವೆಕೊನೆಗಳು, ಎಂದರೆ ಹುಟ್ಟು, ಇರವು, ನಾಶ-ಇವುಗಳು. ಹೀಗೆಂದು ಪ್ರಣವವನ್ನು ಮಾಯಾವಿಯೇ ಮೊದಲಾದವರಂತೆ ಇರುವ ಆತ್ಮನನ್ನು ಅರಿತುಕೊಂಡರೆ ಆ ಕ್ಷಣದಲ್ಲಿಯೇ[4] ಅದರ ಸ್ವರೂಪವನ್ನು ಹೊಂದಿಬಿಡುತ್ತಾನೆ ಎಂದರ್ಥ.

**ಪ್ರಣವಂ ಹೀಶ್ವರಂ ವಿದ್ಯಾತ್ ಸರ್ವಸ್ಯ ಹೃದಯೇ ಸ್ಥಿತಮ್ ।**
**ಸರ್ವವ್ಯಾಪಿನಮೋಙ್ಕಾರಂ ಮತ್ವಾ ಧೀರೋ ನ ಶೋಚತಿ ॥೨೮॥**

೨೮. ಪ್ರಣವವನ್ನು ಪ್ರತಿಯೊಬ್ಬನ ಹೃದಯದಲ್ಲಿಯೂ ಇರುವ ಈಶ್ವರನೆಂದು ತಿಳಿಯಬೇಕು. ಸರ್ವವ್ಯಾಪಿಯಾದ ಓಂಕಾರವನ್ನು ಅರಿತುಕೊಂಡ ಧೀರನು ಶೋಕಿಸುವದಿಲ್ಲ.

(ಭಾಷ್ಯ)

೭೩. ಸರ್ವಸ್ಯ ಪ್ರಾಣಿಜಾತಸ್ಯ ಸ್ಮೃತಿಪ್ರತ್ಯಯಾಸ್ಪದೇ ಹೃದಯೇ ಸ್ಥಿತಮ್ ಈಶ್ವರಂ ಪ್ರಣವಂ ವಿದ್ಯಾತ್ । ಸರ್ವವ್ಯಾಪಿನಂ ವ್ಯೋಮವತ್ ಓಂಕಾರಮ್ ಆತ್ಮಾನಮ್ ಅಸಂಸಾರಿಣಮ್ ಧೀರಃ[5] ಬುದ್ಧಿಮಾನ್[6] ಮತ್ವಾ ಜ್ಞಾತ್ವಾ[7] ನ ಶೋಚತಿ । ಶೋಕನಿಮಿತ್ತಾನುಪಪತ್ತೇಃ । "ತರತಿ ಶೋಕಮಾತ್ಮವಿತ್" (ಛಾಂ. ೭-೧-೩) ಇತ್ಯಾದಿಶ್ರುತಿಭ್ಯಃ ॥

---

1. ಆ॥ ಪಾಠದಲ್ಲಿಲ್ಲ. 2. ಹುಟ್ಟುವಂತೆ ತೋರುವ, ಹುಸಿ ತೋರಿಕೆಯಾದ.
3. ಹಗ್ಗ, ಮರುಭೂಮಿ, ಕನಸನ್ನು ಕಾಣುವವ-ಇವರಂತೆ.
4. ಅರಿತ ಕ್ಷಣದಲ್ಲಿಯೇ, ಕಾಲಾಂತರದಲ್ಲಿ ಅಲ್ಲ.
5. 'ಧೀಮಾನ್' ಎಂದು ವಾ॥ ದಲ್ಲಿ ಹೆಚ್ಚು.
6. ಇದಾದ ಬಳಿಕ 'ಆತ್ಮತತ್ತ್ವಮ್' ಎಂದು ಹೆಚ್ಚಾಗಿ ವಾ॥ ಕಾ॥
7. ಈ ಮಾತು ವಾ॥ ದಲ್ಲಿದೆ.

(ಭಾಷ್ಯಾರ್ಥ)

ಪ್ರಾಣಿಸಮೂಹಕ್ಕೆಲ್ಲ ನೆನಪು, ಅರಿವು-ಇವುಗಳಿಗೆ ಆಧಾರವಾಗಿರುವ ಹೃದಯದಲ್ಲಿರುವ[1] ಈಶ್ವರನೇ ಪ್ರಣವ ಎಂದು ಅರಿಯಬೇಕು. ಆಕಾಶದಂತೆ ಎಲ್ಲವನ್ನೂ ವ್ಯಾಪಿಸಿಕೊಂಡು ಇರುವ ಓಂಕಾರವನ್ನು ಎಂದರೆ ಸಂಸಾರಿಯಲ್ಲದ ಆತ್ಮನನ್ನು ಅರಿತುಕೊಂಡರೆ, ಮನವರಿಕೆಮಾಡಿಕೊಂಡರೆ (ಆ) ಧೀರನು ಬುದ್ಧಿವಂತನು ಶೋಕಿಸುವದಿಲ್ಲ, ಏಕೆಂದರೆ ಶೋಕನಿಮಿತ್ತವು (ಆಗ) ಇರುವದಿಲ್ಲ. "ಆತ್ಮನನ್ನು ಅರಿತುಕೊಂಡವನು ಶೋಕವನ್ನು ದಾಟುತ್ತಾನೆ" (ಛಾಂ. ೭-೧-೩) ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು.

ಅಮಾತ್ರೋಽನನ್ತಮಾತ್ರಶ್ಚ ದ್ವೈತಸ್ಯೋಪಶಮಃ ಶಿವಃ ।
ಓಙ್ಕಾರೋ ವಿದಿತೋ ಯೇನ ಸ ಮುನಿರ್ನೇತರೋ ಜನಃ ॥೨೯॥

೨೯. ಅಮಾತ್ರವಾದ, ಅನಂತಮಾತ್ರವಾದ ದ್ವೈತದ ಉಪಶಮವಾದ, ಶಿವವಾದ ಓಂಕಾರವು ಯಾವನಿಂದ ಅರಿಯಲ್ಪಟ್ಟಿರುವದೋ ಅವನೇ ಮುನಿಯು, ಮಿಕ್ಕ ಜನವಲ್ಲ.

(ಭಾಷ್ಯ)

೨೪. ಅಮಾತ್ರಃ ತುರೀಯಃ ಓಂಕಾರಃ । ಮಾಯತೇ ಅನಯಾ ಇತಿ ಮಾತ್ರಾ ಪರಿಚ್ಛಿತ್ತಿಃ । ಸಾ ಅನಸ್ತಾ ಯಸ್ಯ ಸಃ ಅನನ್ತಮಾತ್ರಃ । ನ ಪರಿತಾವತ್ತ್ವಮ್ ಅಸ್ಯ ಪರಿಚ್ಛೇತ್ತುಂ ಶಕ್ಯತೇ ಇತ್ಯರ್ಥಃ । ಸರ್ವದ್ವೈತೋಪಶಮತ್ವಾದೇವ[2] ಶಿವಃ ಓಂಕಾರಃ ಯಥಾವ್ಯಾಖ್ಯಾತಃ ಪರಿತಃ ಯೇನ ಸಃ ಪರಮಾರ್ಥತತ್ತ್ವಸ್ಯ ಮನನಾತ್ ಮುನಿಃ । ನೇತರೋ ಜನಃ ಶಾಸ್ತ್ರವಿದಪಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮಾತ್ರೆಗಳಿಲ್ಲದ, ತುರೀಯನಾದ ಓಂಕಾರವು.[3] ಇದರಿಂದ ಅಳೆಯುತ್ತಾರೆ. ಆದ್ದರಿಂದ ಮಾತ್ರೆ ; ಎಂದರೆ (ಇಷ್ಟೆಂಬ) ಅಳತೆ . ಅದು ಯಾವದಕ್ಕೆ ಕೊನೆಯಿಲ್ಲದೆ ಇರುವದೋ[4] ಅದು ಅನಂತಮಾತ್ರವು. ಅದನ್ನು ಇಷ್ಟೆಂದು ಗೊತ್ತುಪಡಿಸುವದಕ್ಕೆ

---

1. ಬುದ್ಧಿಗೆ ಸಾಕ್ಷಿಯಾಗಿರುವ ಕೇ ಭಾ ೨-೪, ಭಾ ಭಾ ೫೨

2. ಇದರ ಮುಂದೆ 'ದ್ವೈತಸ್ಯ ಉಪಶಮಃ' ಎಂಬ ಮಾತುಗಳು ಬಿಟ್ಟಿರಬೇಕೆಂದು ಕಾಣುತ್ತದೆ

3. ಪರಮಾರ್ಥತತ್ತ್ವವು

4. ಯಾವ ತತ್ತ್ವಕ್ಕೆ ದೇಶಕಾಲಗಳ ಕಟ್ಟು, ಇಲ್ಲವೋ ಎಂದರ್ಥ

ಆಗುವಹಾಗಿಲ್ಲ ಎಂದರ್ಥ. (ದ್ವೈತದ ಉಪಶಮನವು ಅಭಾವವು).[1] ಯಾವ ದ್ವೈತವೂ ಇಲ್ಲದಿರುವದರಿಂದಲೇ ಶಿವ (ರೂಪವು). ಮೇಲೆ ವಿವರಿಸಿದಂಥ ಓಂಕಾರವು ಯಾವನಿಂದ ಅರಿಯಲ್ಪಟ್ಟಿರುವದೋ ಅವನು ಪರಮಾರ್ಥತತ್ತ್ವವನ್ನು ಮನನಮಾಡಿಕೊಂಡಿರುವದರಿಂದ ಮುನಿಯು ; ಮಿಕ್ಕ ಮನುಷ್ಯನು ಶಾಸ್ತ್ರವನ್ನು ಬಲ್ಲವನಾದರೂ (ಮುನಿ)ಯಲ್ಲ[2] ಎಂದು ಅರ್ಥ.

******

1. ಈ ಅರ್ಥದ ಮಾತು ಭಾಷ್ಯದಲ್ಲಿರಬೇಕು.

2. ಮುಖ್ಯಾರ್ಥದಲ್ಲಿ ಮುನಿಯಲ್ಲ. ಬೃ. ೩-೫-೧ ರ ಮುನಿಃ ಎಂಬುದರ ಭಾಷ್ಯವನ್ನು ನೋಡಿ.

# ೨. ವೈತಥ್ಯಪ್ರಕರಣ

## ಈ ಪ್ರಕರಣದ ಸಂಬಂಧ

(ಭಾಷ್ಯ)

೭೫. ಓಂ[1] ''ಜ್ಞಾತೇ ದ್ವೈತಂ ನ ವಿದ್ಯತೇ'' (೧-೧೮) ಇತ್ಯುಕ್ತಮ್ । ''ಏಕ ಮೇವಾದ್ವಿತೀಯಮ್'' (ಛಾಂ. ೬-೨-೧) ಇತ್ಯಾದಿಶ್ರುತಿಭ್ಯಃ । ಅಗಮಮಾತ್ರಂ ತತ್ । ತತ್ರ ಉಪಪತ್ತ್ಯಾಪಿ ದ್ವೈತಸ್ಯ ವೈತಥ್ಯಂ ಶಕ್ಯತೇ ಅವಧಾರಯಿತುಮ್ ಇತಿ ದ್ವಿತೀಯಂ ಪ್ರಕರಣಮ್ ಆರಭ್ಯತೇ । ವೈತಥ್ಯಮ್ ಇತ್ಯಾದಿನಾ-

(ಭಾಷ್ಯಾರ್ಥ)

ಓಂ ! ''ಅರಿತುಕೊಂಡರೆ ದ್ವೈತವಿರುವದಿಲ್ಲ'' (೧-೧೮) ಎಂದು ಹಿಂದೆ ಹೇಳಿರುತ್ತದೆ. (ತನಗೆ) ಎರಡನೆಯದಿಲ್ಲದ ಒಂದೇ (ಆದ ಸತ್ತೇ ಆಗಿತ್ತು ಮೊದಲು, ಇದು) (ಛಾಂ. ೬-೨-೧) ಮುಂತಾದ ಶ್ರುತಿಗಳ ಪ್ರಮಾಣದಿಂದ (ಹೀಗೆಂದು ಹೇಳಿತ್ತು). ಅದು ಬರಿಯ ಆಗಮವು[2]. ಇಲ್ಲಿ[3] ಯುಕ್ತಿಯಿಂದಲೂ ದ್ವೈತವು ಸಟೆ ಯೆಂಬುದನ್ನು ಗೊತ್ತುಪಡಿಸುವದಕ್ಕೆ ಆಗುತ್ತದೆ[4]. ಎಂದು (ತಿಳಿಸುವದಕ್ಕಾಗಿ) 'ವೈತಥ್ಯಂ' ಮುಂತಾದ (ಈ) ಎರಡನೆಯ ಪ್ರಕರಣವನ್ನು ಆರಂಭಿಸಿರುತ್ತದೆ.

## ಕನಸಿನ ಪದಾರ್ಥಗಳು ಹುಸಿತೋರಿಕೆ

ವೈತಥ್ಯಂ ಸರ್ವಭಾವಾನಾಂ ಸ್ವಪ್ನ ಆಹುರ್ಮನೀಷಿಣಃ ।
ಅನ್ತಃಸ್ಥಾನಾತ್ತು ಭಾವಾನಾಂ ಸಂವೃತತ್ವೇನ ಹೇತುನಾ ॥೧॥

೧. ಪಂಡಿತರು, ಕನಸಿನಲ್ಲಿರುವ ಎಲ್ಲಾ ಭಾವಗಳಿಗೂ ವೈತಥ್ಯವನ್ನು ಹೇಳುವರು. ಭಾವಗಳು ಒಳಗೆ ಸಂವೃತವಾಗಿರುವವೆಂಬ ಕಾರಣದಿಂದ (ಹಾಗೆಂದು ಹೇಳುವರು).

1. ಓಂ ! ಎಂಬ ಮಾತು ವಾ॥ ಪಾಠದಲ್ಲಿಲ್ಲ. ಆದರೆ ಆಚಾರ್ಯರು ಮಂಗಲಕ್ಕಾಗಿಯೂ ಓಂಕಾರವನ್ನು ವಿವರಿಸುವ ಮಾಂಡೂಕ್ಯದ ಅಂಗವಾದ ವಿಚಾರವಿದೆಂಬುದನ್ನು ನೆನಪುಕೊಡುವದ ಕ್ಕಾಗಿಯೂ ಓಂಕಾರವನ್ನು ಉಪಯೋಗಿಸಿರಬೇಕೆಂದು ತೋರುತ್ತದೆ. 2. ಶ್ರುತ್ಯರ್ಥವನ್ನು ತಿಳಿಸುವ ಉಪದೇಶವು. 3. ಈ ಆತ್ಮವಿಚಾರದಲ್ಲಿ. 4. ಶ್ರುತ್ಯರ್ಥವನ್ನು ದೃಢಪಡಿಸುವದಕ್ಕೆ ಬೇಕಾಗುವ ಯುಕ್ತಿಯಿಂದ, ಸ್ವತಂತ್ರಯುಕ್ತಿಯಿಂದಲ್ಲ. ಪೀಠಿಕೆಯನ್ನು ನೋಡಿ.

(ಭಾಷ್ಯ)

೭೬. ವಿತಥಸ್ಯ ಭಾವಃ ವೈತಥ್ಯಮ್ । ಅಸತ್ಯತ್ವಮ್ ಇತ್ಯರ್ಥಃ । ಕಸ್ಯ ? ಸರ್ವೇಷಾಂ ಬಾಹ್ಯಾಧ್ಯಾತ್ಮಿಕಾನಾಂ ಭಾವಾನಾಂ ಪದಾರ್ಥಾನಾಂ ಸ್ವಪ್ನೇ ಉಪಲಭ್ಯಮಾನಾನಾಮ್ । ಆಹುಃ ಕಥಯನ್ತಿ, ಮನೀಷಿಣಃ ಪ್ರಮಾಣಕುಶಲಾಃ । ವೈತಥ್ಯೇ ಹೇತುಮಾಹ-ಅನ್ತಃಸ್ಥಾನಾತ್ । ಅನ್ತಃ ಶರೀರಸ್ಯ ಮಧ್ಯೇ ಸ್ಥಾನಂ ಯೇಷಾಮ್ । ತತ್ರ ಹಿ ಭಾವಾಃ ಉಪಲಭ್ಯನ್ತೇ ಪರ್ವತಹಸ್ತ್ಯಾದಯಃ ನ ಬಹಿಃ ಶರೀರಾತ್ । ತಸ್ಮಾತ್ ತೇ ವಿತಥಾ ಭವಿತುಮ್ ಅರ್ಹನ್ತಿ । ನನು ಅಪವರಕಾದ್ಯನ್ತರುಪಲಭ್ಯಮಾನೈಃ ಘಟಾದಿಭಿಃ ಅನೈಕಾನ್ತಿಕೋ ಹೇತುಃ ಇತ್ಯಾಶಙ್ಕ್ಯ ಆಹ-ಸಂವೃತತ್ವೇನ ಹೇತುನಾ ಇತಿ । ಅನ್ತಃ ಸಂವೃತೇ ಸ್ಥಾನಾತ್ ಇತ್ಯರ್ಥಃ । ನ ಹಿ ಅನ್ತಃ ಸಂವೃತೇ ದೇಹಾನ್ತರ್ನಾಡೀಷು ಪರ್ವತ ಹಸ್ತ್ಯಾದೀನಾಂ ಸಂಭವಃ ಅಸ್ತಿ । ನ ಹಿ ದೇಹೇ ಪರ್ವತಃ ಅಸ್ತಿ ।।

(ಭಾಷ್ಯಾರ್ಥ)

ವಿತಥದ (ಹಾಗಿಲ್ಲದ) ಭಾವವು ವೈತಥ್ಯವು ; ಅಸತ್ಯವಾಗಿರುವದು[1] ಎಂದರ್ಥ. ಯಾವದಕ್ಕೆ (ವೈತಥ್ಯವನ್ನು ಹೇಳುವರು) ? ಎಂದರೆ ಸರ್ವಭಾವಗಳಿಗೂ ಹೊರಗಿನ ಮತ್ತು ನಮ್ಮೊಳಗಿನ ಕನಸಿನಲ್ಲಿ ಕಾಣುವ (ಎಲ್ಲಾ) ಪದಾರ್ಥಗಳಿಗೂ (ವೈತಥ್ಯವನ್ನು) ಹೇಳುತ್ತಾರೆ, ಮನೀಷಿಗಳು ಎಂದರೆ ಪ್ರಮಾಣವನ್ನು (ಸರಿಯಾಗಿ ಅರಿತಿರುವ) ಜಾಣರು[2] ತಿಳಿಸುತ್ತಾರೆ. (ಅವುಗಳ) ವೈತಥ್ಯಕ್ಕೆ ಕಾರಣವನ್ನು ಹೇಳುತ್ತಾರೆ : ಒಳಗೆ ಇರುವದರಿಂದ ; ಒಳಗೆ ಎಂದರೆ ಶರೀರದ ಒಳಗಡೆಯಲ್ಲಿ ಇರವು ಯಾವ (ಪದಾರ್ಥ)ಗಳಿಗೆ ಇರುವವೋ (ಆ ಭಾವಗಳು ಅಂತಃಸ್ಥಾನಗಳು) ಪರ್ವತ, ಆನೆ-ಮುಂತಾದ ಭಾವಗಳು ಅಲ್ಲಿಯೇ ತೋರುವವೇ ಹೊರತು ಶರೀರದ ಹೊರಗೆ (ತೋರುವ)ದಿಲ್ಲ. ಆದ್ದರಿಂದ ಅವು ವಿತಥವಾಗಿರಬೇಕು. ಕೋಣೆಯೇ ಮುಂತಾದವುಗಳ ಒಳಗೆ ತೋರಿಬರುವ

1. ವಿತಥ, ಅಸತ್ಯ, ಮಿಥ್ಯಾ-ಎಂಬ ಮಾತುಗಳಿಗೆ ಒಂದೇ ಅರ್ಥ ; ಹುಸಿತೋರಿಕೆ, ನಿಜವಾಗಿ ಇಲ್ಲದೆ ತೋರುವ 'ಪದಾರ್ಥ-ಎಂದು ಈ ಶಬ್ದಗಳಿಗೆ ಅರ್ಥವೇ ಹೊರತು ಅತ್ಯಂತವಾಗಿ ಇಲ್ಲದ, ಎಂದರೆ ತೋರಿಕೊಳ್ಳುವದೂ ಇಲ್ಲದ ಬಂಜೆಯ ಮಗ, ಮೊಲದ ಕೊಂಬು-ಮುಂತಾದವುಗಳಂಥವೆಂದಲ್ಲ. 2. ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ, ಆಗಮ-ಎಂಬುವು ಪ್ರಮಾಣಗಳು ; ಚಾರ್ವಾಕರು ಮೊದಲನೆಯದನ್ನೂ, ವೈಶೇಷಿಕರು ಮೊದಲನೆಯ ಎರಡನ್ನೂ, ನೈಯಾಯಿಕರು ಮೊದಲನೆಯ ಮೂರು ಕೊನೆಯದೊಂದು-ಹೀಗೆ ನಾಲ್ಕನ್ನೂ, ಸಾಂಖ್ಯರು ಮೊದಲನೆಯದು ಎರಡು ಕೊನೆಯದೊಂದು-ಹೀಗೆ ಮೂರನ್ನೂ ಮಿಮಾಂಸಕರು ಎಲ್ಲವನ್ನೂ ಒಪ್ಪುತ್ತಿದ್ದರು. ಇಲ್ಲಿ ಮುಖ್ಯವಾಗಿ ಅನುಮಾನಪ್ರಮಾಣವನ್ನೇ ತೆಗೆದುಕೊಳ್ಳಬೇಕು.

ಗಡಿಗೆಯೇ ಮುಂತಾದವುಗಳು (ಸತ್ಯವಾಗಿರುವದರಿಂದ ಅವು)ಗಳಿಗೆ (ಅನ್ವಯಿಸಿದರೆ) ಹೇತುವು ಅನೈಕಾಂತಿಕವಾಗುವದಿಲ್ಲವೆ ?[1] ಎಂದು ಶಂಕಿಸಿದರೆ (ಅದಕ್ಕೆ) ಹೇಳುತ್ತಾರೆ : ಸಂವೃತವಾಗಿರುವ ಕಾರಣದಿಂದ ಎಂದರೆ ಒಳಗಡೆ ಸಂವೃತವಾಗಿರುವಲ್ಲಿ[2] ಇರುವದರಿಂದ ಎಂದರ್ಥ. ಒಳಗಡೆಯಲ್ಲಿ ಇಕ್ಕಟ್ಟಾಗಿರುವ ದೇಹದೊಳಗಿನ ನಾಡಿಗಳಲ್ಲಿ[3] ಪರ್ವತ, ಆನೆ ಮುಂತಾದವು (ಇರುವ ಸಂಭವವೇ) ಇಲ್ಲ ; ಶರೀರದಲ್ಲಿಯೇ ಪರ್ವತವಿರುವದಿಲ್ಲ[4].

(ಭಾಷ್ಯ)

೭೭. ಸ್ವಪ್ನದೃಶ್ಯಾನಾಂ ಭಾವಾನಾಮ್ ಅನ್ತಃ ಸಂವೃತೇ[5] ಸ್ಥಾನಮ್ ಇತ್ಯೇತತ್ ಅಸಿದ್ಧಮ್ । ಯಸ್ಮಾತ್ ಪ್ರಾಚ್ಯೇಷು ಸುಪ್ತಃ । ಉದಕ್ಸು ಸ್ವಪ್ನಾನ್ ಪಶ್ಯನ್ ಇವ ದೃಶ್ಯತೇ ಇತ್ಯೇತತ್ ಆಶಙ್ಕ್ಯ ಆಹ....

(ಭಾಷ್ಯಾರ್ಥ)

(ಆಕ್ಷೇಪ) :- ಕನಸಿನಲ್ಲಿ ಕಾಣುವ, ಭಾವಗಳು ಒಳಗೆ ಸಂವೃತವಾದ (ಕಡೆ) ಯಲ್ಲಿ ಇರುವವೆಂಬುದು ಅಸಿದ್ಧ[6]. ಏಕೆಂದರೆ ಪೂರ್ವ(ದೇಶ)ದಲ್ಲಿ ನಿದ್ರಿಸಿದವನಿಗೆ ಉತ್ತರ (ದೇಶ)ದಲ್ಲಿ ಕನಸುಗಳನ್ನು ಕಂಡಂತೆ ತೋರಿಬರುತ್ತದೆ.

1. ಸಾಧ್ಯವು ಇಲ್ಲದೆಡೆಯಲ್ಲಿಯೂ ಇರುವ ಹೇತು ಅನೈಕಾಂತಿಕವು ; ಪ್ರಕೃತದಲ್ಲಿ ಸಾಧ್ಯವು ವೈತಥ್ಯ, ಅದಿಲ್ಲದ ಸತ್ಯತ್ವವಿರುವ ಗಡಿಗೆಯೇ ಮುಂತಾದವುಗಳಲ್ಲಿಯೂ ಅಂತಃಸ್ಥಾನತ್ವ (ಒಳಗೆ ಇರುವದು) ಎಂಬ ಹೇತುವಿದೆ. ಆದ್ದರಿಂದ ಇದು ಅನೈಕಾಂತಿಕವಾದ ನಿಶ್ಚಿತವಾಗಿ ಸಾಧ್ಯದಲ್ಲಿಯೇ ಇರುವದೆಂಬ ನಿಯಮವಿಲ್ಲದ, ಹೇತು-ಎಂದು ಭಾವ. 2. ಇಕ್ಕಟ್ಟಾದ ಸ್ಥಲದಲ್ಲಿ ಎಂದರ್ಥ. ಒಳಗಡೆ ಇರುವದೆಲ್ಲ ಹುಸಿಯೆಂದು ನಮ್ಮ ಅಭಿಪ್ರಾಯವಲ್ಲ ; ತಾನಿರುವದಕ್ಕೆ ತಕ್ಕಷ್ಟು ದೇಶವಿಲ್ಲದೆಡೆಯಲ್ಲಿ ಇರುವಂತೆ ತೋರುವದೆಲ್ಲ ಹುಸಿಯೆನ್ನುತ್ತೇವೆ. ಈ ಹೇತು ಅನೈಕಾಂತಿಕವಲ್ಲ ಎಂದು ಅಭಿಪ್ರಾಯ. 3. ಕನಸು ನಾಡಿಗಳಲ್ಲಿರುವ ಜೀವನಿಗೆ ತೋರುವದೆಂದು ಶ್ರುತಿಪ್ರಸಿದ್ಧಿ ಬೃ. ೪-೨-೩. 4. ಇನ್ನು ಅದಕ್ಕಿಂತಲೂ ಇಕ್ಕಟ್ಟಾದ ನಾಡಿಯಲ್ಲಿ ಎಲ್ಲಿ ಬಂತು ?

5. 'ಸಂವೃತಸ್ಥಾನಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

6. ಒಳಗಿರುವದೆಂಬುದೇ ಸುಳ್ಳು ಎಂದಭಿಪ್ರಾಯ. ಹೇತುವೇ ಇಲ್ಲ, ಸಾಧ್ಯವೆಲ್ಲಿ ಬಂತು ?- ಎಂದು ಆಕ್ಷೇಪ. ಬೆಟ್ಟದಲ್ಲಿ ಬೆಂಕಿಯಿರಬೇಕು ಏಕೆಂದರೆ ಅಲ್ಲಿ ಹೊಗೆಯಿದೆ-ಎಂಬಲ್ಲಿ ಬೆಟ್ಟವು ಪಕ್ಷವು, ಬೆಂಕಿಯು ಸಾಧ್ಯವು, ಹೊಗೆಯೆಂಬುದು ಹೇತು. ಹೀಗೆ ಹೇತುವಿನಿಂದ ಸಾಧ್ಯವನ್ನು ಗೊತ್ತು ಪಡಿಸುವದು ಅನುಮಾನವು ಪ್ರಕೃತದಲ್ಲಿ 'ಕನಸಿನ ಭಾವಗಳು ವಿತಥ ; ಏಕೆಂದರೆ ಅವು ಒಳಗೆ ಇಕ್ಕಟ್ಟಾದ ಸ್ಥಲದಲ್ಲಿವೆ' ಎಂಬ ಅನುಮಾನವನ್ನು ಹೊಡೆದುಹಾಕುವದಕ್ಕೆ ಪೂರ್ವಪಕ್ಷಿಯು ಹೇತುವಿದ್ದರೂ ಸಾಧ್ಯವಿರಬೇಕಾಗಿಲ್ಲ ಎಂದು ಮೊದಲು ಆಕ್ಷೇಪಿಸಿದ್ದನ್ನು, ಈಗ ಹೇತುವೇ ಇಲ್ಲ ಎಂದಿರುತ್ತಾನೆ.

ಈ ಆಕ್ಷೇಪವನ್ನು ಒಡ್ಡಿದರೆ (ಸಮಾಧಾನವನ್ನು) ಹೇಳುತ್ತಾರೆ :-

ಅದೀರ್ಘತ್ವಾಚ್ಚ ಕಾಲಸ್ಯ ಗತ್ವಾ ದೇಶಾನ್ನ ಪಶ್ಯತಿ ।
ಪ್ರತಿಬುದ್ಧಶ್ಚ ವೈ ಸರ್ವಸ್ತಸ್ಮಿನ್ ದೇಶೇ ನ ವಿದ್ಯತೇ ॥೨॥

೨. ಕಾಲವು ಹೆಚ್ಚಾಗಿಲ್ಲದ್ದರಿಂದ ದೇಶಗಳಿಗೆ ಹೋಗಿ ನೋಡುವನೆಂಬುದಿಲ್ಲ. ಮತ್ತು ಎಚ್ಚತ್ತವನು ಯಾವನೂ ಆ ದೇಶದಲ್ಲಿ ಇರುವದೂ ಇಲ್ಲ.

(ಭಾಷ್ಯ)

೨೮. ನ ದೇಹಾತ್ ಬಹಿಃ ದೇಶಾನ್ತರಂ ಗತ್ವಾ ಸ್ವಪ್ನಾನ್ ಪಶ್ಯತಿ । ಯಸ್ಮಾತ್ ಸುಪ್ತಮಾತ್ರ ಏವ ದೇಹದೇಶಾತ್ ಯೋಜನಶತಾನ್ತರಿತೇ ಮಾಸಮಾತ್ರಪ್ರಾಪ್ಯೇ ದೇಶೇ ಸ್ವಪ್ನಾನ್ ಪಶ್ಯನ್ನಿವ ದೃಶ್ಯತೇ । ನ ಚ ತದ್ದೇಶಪ್ರಾಪ್ತೇಃ ಆಗಮನಸ್ಯ ಚ ದೀರ್ಘಃ ಕಾಲಃ ಅಸ್ತಿ । ಅತಃ ಅದೀರ್ಘತ್ವಾಚ್ಚ ಕಾಲಸ್ಯ ನ ಸ್ವಪ್ನದೃಕ್ ದೇಶಾನ್ತರಂ ಗಚ್ಛತಿ । ಕಿಂ ಚ ಪ್ರತಿಬುದ್ಧಶ್ಚ ವೈ ಸರ್ವಃ ಸ್ವಪ್ನದೃಕ್ ಸ್ವಪ್ನದರ್ಶನದೇಶೇ ನ ವಿದ್ಯತೇ । ಯದಿ ಚ ಸ್ವಪ್ನೇ ದೇಶಾನ್ತರಂ ಗಚ್ಛೇತ್ ಯಸ್ಮಿನ್ ದೇಶೇ ಸ್ವಪ್ನಾನ್ ಪಶ್ಯೇತ್ ತತ್ರೈವ ಪ್ರತಿಬುಧ್ಯೇತ । ನ ಚ ಏತತ್ ಅಸ್ತಿ । ರಾತ್ರೌ ಸುಪ್ತಃ ಅಹನೀವ ಭಾವಾನ್ ಪಶ್ಯತಿ । ಬಹುಭಿಃ ಸಜ್ಗತೋ ಭವತಿ । ಯೈಶ್ಚ ಸಜ್ಗತಃ[1] ತೈಃ[2] ಗೃಹ್ಯೇತ । ನ ಚ ಗೃಹ್ಯತೇ । ಗೃಹೀತಶ್ಚೇತ್ 'ತ್ವಾಮ್ ಅದ್ಯ ತತ್ರ ಉಪಲಬ್ಧವನ್ತೋ ವಯಮ್' ಇತಿ ಬ್ರೂಯುಃ । ನ ಚ ಏತತ್ ಅಸ್ತಿ, ತಸ್ಮಾತ್ ನ ದೇಶಾನ್ತರಂ ಗಚ್ಛತಿ ಸ್ವಪ್ನೇ ॥

(ಭಾಷ್ಯಾರ್ಥ)

ಶರೀರದಿಂದ ಹೊರಗೆ (ಇರುವ) ಮತ್ತೊಂದು ಸ್ಥಲಕ್ಕೆ ಹೋಗಿ ಕನಸುಗಳನ್ನು ಕಾಣುವದಿಲ್ಲ. ಏಕೆಂದರೆ ನಿದ್ರಿಸಿದನೋ ಇಲ್ಲವೋ, ಶರೀರವಿರುವ ಸ್ಥಲದಿಂದ ನೂರು ಯೋಜನಗಳ ದೂರವಿರುವ ತಿಂಗಳು (ನಡೆದ)ರೇ ಸಿಕ್ಕುವ ಸ್ಥಲದಲ್ಲಿ ಕನಸುಗಳನ್ನು ಕಂಡಂತೆ[3] ತೋರಿಬರುತ್ತದೆ. ಆದರೆ ಆ ಸ್ಥಲವನ್ನು ಸೇರುವದಕ್ಕೂ (ಮತ್ತೆ) ಬರುವದಕ್ಕೂ (ತಕ್ಕಷ್ಟು) ದೀರ್ಘವಾದ ಕಾಲವು ಇರುವದಿಲ್ಲ. ಆದ್ದರಿಂದ ಕಾಲವು

---

1. "ಬಹುಭಿಃ ಸಜ್ಗತಃ ಯೈಶ್ಚ ಸಜ್ಗತೋ ಭವತಿ" ಆ॥
2. "ಸ ತೈಃ" ವಾ॥
3. ಇಲ್ಲಿ ಕಾಣುವದು ಸಟೆಯೆಂಬುದೇನೂ ಮುಖ್ಯವಲ್ಲ, ಕಾಣುವ ವಸ್ತುಗಳು ಮಿಥ್ಯೆಯೆಂಬುದನ್ನು ಸೂಚಿಸುವದಕ್ಕೆ 'ಕಂಡಂತೆ' ಎಂದು ಅಂತೆ ಶಬ್ದವನ್ನು ಪ್ರಯೋಗಿಸಿದೆ. ಆಕ್ಷೇಪದಲ್ಲಿ ಸಿದ್ಧಾಂತಿಯ ದೃಷ್ಟಿಯನ್ನು ಅವಲಂಬಿಸಿಯೇ "ಅಂತೆ" ಎಂದಿದೆ.

ದೀರ್ಘವಾಗಿಲ್ಲದ್ದರಿಂದ ಸ್ವಪ್ನವನ್ನು ನೋಡುವಾತನು ಮತ್ತೊಂದು ಸ್ಥಲಕ್ಕೆ ಹೋಗಿರುವದಿಲ್ಲ(ವೆಂದಾಯಿತು)[1] ಮತ್ತು ಕನಸುಕಾಣುವ ಯಾವನೂ ಎಚ್ಚತ್ತ (ಬಳಿಕ) ಆ ಸ್ಥಲದಲ್ಲಿ ಇರುವದೂ ಇಲ್ಲ. ಆದರೆ ಕನಸಿನಲ್ಲಿ ಬೇರೆ ಸ್ಥಲಕ್ಕೆ ಹೋಗಿದ್ದರೆ ಯಾವ ಸ್ಥಳದಲ್ಲಿ ಕನಸುಗಳನ್ನು ಕಾಣುವನೋ ಅಲ್ಲಿಯೇ ಎಚ್ಚರಬೇಕಾಗಿತ್ತು-ಇದು (ಹೀಗಿ)ಲ್ಲವೂ ಇಲ್ಲ.[2] ರಾತ್ರಿಯಲ್ಲಿ ನಿದ್ರಿಸಿದವನು ಹಗಲು ಹೊತ್ತಿನಲ್ಲಿ ಭಾವಗಳನ್ನು ಕಂಡಂತೆ ಆಗುವದು ; (ಆಗ) ಅನೇಕರೊಡನೆ ಸೇರಿರುತ್ತಾನೆ. (ಆಗ) ಯಾರೊಡನೆ ಸೇರಿದ್ದನೋ ಅವರಿಗೆ (ಅವನು ಅಲ್ಲಿಗೆ ಬಂದದ್ದು) ತಿಳಿದಿರಬೇಕು ; ಆದರೆ ತಿಳಿದಿರುವದಿಲ್ಲ. (ಹಾಗೆ) ತಿಳಿದಿದ್ದರೆ "ನಿನ್ನನ್ನು ನಾವು ಇಂದು ಅಲ್ಲಿ ಕಂಡೆವು" ಎಂದು ಹೇಳಬೇಕಾಗಿತ್ತು ಇದು (ಹೀಗೂ) ಇಲ್ಲ. ಆದ್ದರಿಂದ ಸ್ವಪ್ನದಲ್ಲಿ ಮತ್ತೊಂದು ಸ್ಥಲಕ್ಕೆ ಹೋಗಿರುವದಿಲ್ಲ (ಎಂದು ನಿಶ್ಚಯವಾಗುತ್ತದೆ).

(ಭಾಷ್ಯ)

೭೯. ಇತಶ್ಚ ಸ್ವಪ್ನದೃಶ್ಯಾ ಭಾವಾ ವಿತಥಾಃ । ಯತಃ-

(ಭಾಷ್ಯಾರ್ಥ)

ಕನಸಿನಲ್ಲಿ ಕಾಣುವ ಭಾವಗಳು ಈ (ಕಾರಣ)ದಿಂದಲೂ ವಿತಥವಾಗಿರುತ್ತವೆ. ಏಕೆಂದರೆ :-

ಅಭಾವಶ್ಚ ರಥಾದೀನಾಂ ಶ್ರೂಯತೇ ನ್ಯಾಯಪೂರ್ವಕಮ್ ।
ವೈತಥ್ಯಂ ತೇನ ವೈ ಪ್ರಾಪ್ತಂ ಸ್ವಪ್ನ ಆಹುಃ ಪ್ರಕಾಶಿತಮ್ ॥೩॥

೩. (ಕನಸಿನ) ರಥಾದಿಗಳು ಇಲ್ಲವೆಂದೂ ನ್ಯಾಯಪೂರ್ವಕವಾಗಿ ಶ್ರುತಿಯಲ್ಲಿ (ಹೇಳಿಯೂ ಇರುತ್ತದೆ). ಅದರಿಂದ ಸ್ವಪ್ನದಲ್ಲಿ ಪ್ರಾಪ್ತವಾದ ವೈತಥ್ಯವನ್ನು ಪ್ರಕಾಶಮಾಡಿರುತ್ತದೆ ಎಂದು ಹೇಳುವರು.

1. ನಿಜವಾಗಿ ಮತ್ತೊಂದು ಸ್ಥಲಕ್ಕೆ ಹೋಗಿರಬೇಕು. ಸ್ವಪ್ನದ ಪದಾರ್ಥಗಳೂ ಎಚ್ಚರದ ಪದಾರ್ಥಗಳಂತೆ ನಿಜವಾದವುಗಳಾದರೆ ಅವು ಲೋಕಾಂತರಕ್ಕೆ ಸೇರಿದವು ಎಂದು ಪೂರ್ವಪಕ್ಷಿಯ ಭಾವ. ಈ ಅಭಿಪ್ರಾಯವನ್ನು ಸೂ. ಭಾ. ೩-೨-೩ ರಲ್ಲಿಯೂ ಹೀಗೆಯೇ ಖಂಡಿಸಿದೆ.

2. ಎಚ್ಚರದವಸ್ಥೆಯಲ್ಲಿ ಕಾಣುವ ಕಾಶಿಗೆ ಹೋಗಿದ್ದಂತೆ ಕಾಣುವ ಕನಸಿನ ಕಾಶಿಯು ಅದೇ ಕಾಶಿಯಲ್ಲ ; ಹೀಗೆಯೇ ಅಲ್ಲಿರುವ ಕಾಲವು ಎಚ್ಚರದ ಕಾಲವಲ್ಲ ; ಜನರು ಎಚ್ಚರದ ಜನರಲ್ಲ. ಆದ್ದರಿಂದ ಇವನ್ನು ಕಂಡಂತೆ ಆದದ್ದು ಭ್ರಾಂತಿಯೇ. ಬೇರೆಯ ಕಾಶಿ ಮುಂತಾದವು ಕನಸಿನಲ್ಲಿ ನಿಜವಾಗಿರುವವೆನ್ನುವದಕ್ಕೆ ಯಾವ ಪ್ರಮಾಣವೂ ಇಲ್ಲ-ಎಂದು ಭಾವ.

(ಭಾಷ್ಯ)

೮೦. ಅಭಾವಶ್ಚ[1] ರಥಾದೀನಾಂ ಸ್ವಪ್ನದೃಶ್ಯಾನಾಂ ಶ್ರೂಯತೇ ನ್ಯಾಯ ಪೂರ್ವಕಂ ಯುಕ್ತಿತಃ ಶ್ರುತೌ "ನ ತತ್ರ ರಥಾಃ" (ಬೃ. ೪-೩-೧೦) ಇತ್ಯತ್ರ । ತೇನ ಅನ್ತಃಸ್ಥಾನಸಂವೃತತ್ವಾದಿಹೇತುನಾ[2] ಪ್ರಾಪ್ತಂ ವೈತಥ್ಯಂ ತದನುವಾದಿನ್ಯಾ ಶ್ರುತ್ಯಾ ಸ್ವಪ್ನೇ ಸ್ವಯಂಜ್ಯೋತಿಷ್ಟ್ವಪ್ರತಿಪಾದನಪರಯಾ ಪ್ರಕಾಶಿತಮ್ ಆಹುಃ ಬ್ರಹ್ಮವಿದಃ ॥

(ಭಾಷ್ಯಾರ್ಥ)

"ಅಲ್ಲಿ ರಥಗಳಿರುವದಿಲ್ಲ" (ಬೃ. ೪-೩-೧೦) ಎಂಬಲ್ಲಿ ಕನಸಿನಲ್ಲಿ ಕಾಣುವ ರಥ ಮುಂತಾದವು ಇಲ್ಲವೆಂದು ನ್ಯಾಯಪೂರ್ವಕವಾಗಿ[3] ಯುಕ್ತಿಯಿಂದ ಶ್ರುತಿಯಲ್ಲಿ ಹೇಳಿಯೂ ಇರುತ್ತದೆ. ಅದರಿಂದ ಒಳಗೆ ಇಕ್ಕಟ್ಟಾದ ಸ್ಥಲದಲ್ಲಿರುವದೇ ಮುಂತಾದ ಹೇತುವಿನಿಂದ ಸಿದ್ಧವಾಗಿರುವ ವೈತಥ್ಯವನ್ನು, ಅದನ್ನು ಅನುವಾದಮಾಡಿಕೊಂಡು[4] ಕನಸಿನಲ್ಲಿ (ಆತ್ಮನು) ಸ್ವಯಂಜ್ಯೋತಿಯಾಗಿರುವನೆಂಬುದನ್ನು ತಾತ್ಪರ್ಯದಿಂದ ತಿಳಿಸುವದಕ್ಕೆ ಬಂದಿರುವ ಶ್ರುತಿಯು[5] (ಇದನ್ನು) ಪ್ರಕಾಶಪಡಿಸಿರುತ್ತದೆ ಎಂದು ಬ್ರಹ್ಮ ಜ್ಞಾನಿಗಳು[6] ಹೇಳುವರು.

---

1. "ಅಭಾವಶ್ಚೈವ" ಎಂದು ಮುದ್ರಿತಪಾಠಕ್ಕಿಂತ ಇದೇ ಮೇಲು.

2. "ದೇಹಾನ್ತಃಸ್ಥಾನ...." ಆ॥

3. "ಅಲ್ಲಿ ಗಾಡಿಗಳಿರುವದಿಲ್ಲ, ಗಾಡಿಗೆ ಕಟ್ಟುವ ಕುದುರೆ ಮುಂತಾದವುಗಳಿರುವದಿಲ್ಲ. ದಾರಿಗಳೂ ಇರುವದಿಲ್ಲ ; ಆದರೂ ಗಾಡಿಗಳನ್ನೂ, ಕುದುರೆಗಳನ್ನೂ, ದಾರಿಗಳನ್ನೂ, ಸೃಷ್ಟಿಮಾಡಿ ಕೊಳ್ಳುತ್ತಾನೆ" ಎಂಬ ಶ್ರುತಿಯಲ್ಲಿ ಕನಸಿನಲ್ಲಿಯೇ ಸೃಷ್ಟವಾಗುವದರಿಂದ ಗಾಡಿಗಳು ಮುಂತಾದವು ನಿಜವಾಗಿ ಇರುವದಿಲ್ಲ ಎಂದು ಯುಕ್ತಿಯನ್ನು ಹೇಳಿದೆ. ಗಾಡಿ ಮುಂತಾದವು ನಿಜವಾಗಿದ್ದರೆ ಸೃಷ್ಟಿಸುತ್ತಾನೆ ಎಂಬ ಯುಕ್ತಿಯು ಹೊಂದುತ್ತಿರಲಿಲ್ಲ.

4. ಹೊಸ ವಿಷಯವನ್ನು ತಿಳಿಸುವದು ಪ್ರತಿಪಾದನೆ, ತಿಳಿದ ವಿಷಯವನ್ನು ಪ್ರತಿಪಾದನೆಗೆಂದು ಹೇಳಿಕೊಳ್ಳುವದು ಅನುವಾದ. ಇಲ್ಲಿ ಯುಕ್ತಿಸಿದ್ಧವಾದ ವೈತಥ್ಯವನ್ನೇ ಶ್ರುತಿಯು ಅನುವಾದ ಮಾಡಿಕೊಂಡಿದೆ.

5. ಸ್ವಯಂಜ್ಯೋತಿಷ್ಟ್ವವನ್ನು-ಆತ್ಮನು ಮತ್ತೊಂದರ ನೆರವನ್ನು ಕೋರದೆ ತಾನೇ ಬೆಳಗುವನೆಂಬುದನ್ನು-ಪ್ರತಿಪಾದನೆಮಾಡುವದಕ್ಕೆ ಶ್ರುತಿಯು ಕನಸಿನಲ್ಲಿ ಕಾಣುವ ಭಾವಗಳೆಲ್ಲವೂ ಮಿಥ್ಯೆಯೆಂದು ಅನುವಾದಮಾಡಿಕೊಂಡಿದೆ. ಕನಸಿನಲ್ಲಿ ಸೂರ್ಯಚಂದ್ರಾದಿಗಳು ಯಾರೂ ಇಲ್ಲವಾದರೂ ಹುಸಿತೋರಿಕೆಯಾದ ಎಲ್ಲವನ್ನೂ ಜ್ಞಾನಪ್ರಕಾಶದಿಂದಲೇ ಆತ್ಮನು ಬೆಳಗಿತೋರಿಸುತ್ತಾನೆ ; ಆದ್ದರಿಂದ ಅವನು ಸ್ವಯಂಪ್ರಕಾಶನು-ಎಂದು ತಿಳಿಸುವದಕ್ಕೆ ಅನುವಾದವು ಅವಶ್ಯವಾಗಿದೆ. ಕನಸಿನ ಆತ್ಮನು ವಸ್ತುಗಳು ಸತ್ಯವಾದರೆ ಈ ಶ್ರುತಿಯು ಅಪ್ರಮಾಣವಾಗಬೇಕಾಗುತ್ತದೆ

6. ವೇದಾರ್ಥವನ್ನು ಬಲ್ಲವರು.

## ಎಚ್ಚರದ ಭಾವಗಳು ಕನಸಿನವುಗಳಂತೆ ಹುಸಿಯೇ

ಅನ್ತಃಸ್ಥಾನಾತ್ತು ಭೇದಾನಾಂ ತಸ್ಮಾಜ್ಜಾಗರಿತೇ ಸ್ಮೃತಮ್ ।
ಯಥಾ ತತ್ರ ತಥಾ ಸ್ವಪ್ನೇ ಸಂವೃತತ್ವೇನ ಭಿದ್ಯತೇ ॥೪॥

೪. ಆದ್ದರಿಂದ ಎಚ್ಚರದಲ್ಲಿರುವ ಭೇದಗಳಿಗೂ (ವೈತಥ್ಯವನ್ನು) ಹೇಳುವರು. ಅಲ್ಲಿ ಕನಸಿನಲ್ಲಿ ಹೇಗೋ ಇಲ್ಲಿಯೂ ಹಾಗೆಯೇ. (ಕನಸಿನ ಭಾವಗಳು) ಒಳಗೆ ಇಕ್ಕಟ್ಟಿನಲ್ಲಿರುವದರಿಂದ (ಕನಸು) ಭಿನ್ನವಾಗಿರುತ್ತದೆ.

(ಭಾಷ್ಯ)

೪೧. ಜಾಗ್ರದ್ದೃಶ್ಯಾನಾಂ ಭಾವಾನಾಂ ವೈತಥ್ಯಮ್ ಇತಿ ಪ್ರತಿಜ್ಞಾ । ದೃಶ್ಯತ್ವಾತ್ ಇತಿ ಹೇತುಃ । ಸ್ವಪ್ನದೃಶ್ಯಭಾವವತ್ ಇತಿ ದೃಷ್ಟಾನ್ತಃ । ಯಥಾ ತತ್ರ ಸ್ವಪ್ನೇ ದೃಶ್ಯಾನಾಂ ಭಾವಾನಾಂ ವೈತಥ್ಯಂ ತಥಾ ಜಾಗರಿತೇಽಪಿ ದೃಶ್ಯತ್ವಮ್ ಅವಿಶಿಷ್ಟಮ್ ಇತಿ ಹೇತೂಪನಯಃ । ತಸ್ಮಾತ್ ಜಾಗರಿತೇಽಪಿ ವೈತಥ್ಯಂ ಸ್ಮೃತಮ್ ಇತಿ ನಿಗಮನಮ್ । ಅನ್ತಃಸ್ಥಾನಾತ್ ಸಂವೃತತ್ವೇನ ಚ ಸ್ವಪ್ನದೃಶ್ಯಾನಾಂ ಭಾವಾನಾಂ ಜಾಗ್ರದ್ದೃಶ್ಯೇಭ್ಯೋ ಭೇದಃ । ದೃಶ್ಯತ್ವಮ್ ಅಸತ್ಯತ್ವಂ ಚ ಅವಿಶಿಷ್ಟಮ್ ಉಭಯತ್ರ ॥

(ಭಾಷ್ಯಾರ್ಥ)

ಎಚ್ಚರದಲ್ಲಿ ಕಾಣುವ ಭಾವಗಳಿಗೆ ವೈತಥ್ಯ(ವಿದೆ) ಎಂಬುದು ಪ್ರತಿಜ್ಞೆಯು[1]. ಏಕೆಂದರೆ (ಅವು) ದೃಶ್ಯವಾಗಿವೆ ಎಂಬುದು ಹೇತು. ಕನಸಿನಲ್ಲಿ ಕಾಣುವ ಭಾವಗಳಂತೆಯೇ (ಅವು ದೃಶ್ಯವಾಗಿವೆ) ಎಂಬುದು ದೃಷ್ಟಾಂತವು. ಅಲ್ಲಿ ಕನಸಿನಲ್ಲಿ ಕಾಣಬರುವ ಭಾವಗಳಿಗೆ ಹೇಗೆ ವೈತಥ್ಯ(ವಿದೆಯೋ)[2] ಹಾಗೆಯೇ ಎಚ್ಚರದಲ್ಲಿಯೂ

---

1. ಎಚ್ಚರದಲ್ಲಿರುವ ಭಾವಗಳು ಮಿಥ್ಯೆಯೆಂಬುದನ್ನು ತಾರ್ಕಿಕರು ಒಪ್ಪುವದಿಲ್ಲ ; ಆದರೆ ಕನಸಿನ ಭಾವಗಳು ಮಿಥ್ಯೆಯೆಂದು ಅವರು ಒಪ್ಪಿರುತ್ತಾರೆ. ಅವುಗಳನ್ನೂ ಸತ್ಯವೆನ್ನುವವರ ಪಕ್ಷವನ್ನು ಖಂಡಿಸಿಯೂ ಆಗಿದೆ. ಆದ್ದರಿಂದ ತಾರ್ಕಿಕರಿಗೆ ಒಪ್ಪಾವ ನ್ಯಾಯವೆಂಬ ಐದು ಅವಯವಗಳ ವಾಕ್ಯವನ್ನು ಪ್ರಯೋಗಿಸಿ ಅನುಮಾನಪ್ರಮಾಣದಿಂದ ಎಚ್ಚರದ ಮಿಥ್ಯಾತ್ವವನ್ನು ಸಾಧಿಸುತ್ತಾರೆ. ಸಾಧ್ಯವಾದದ್ದನ್ನು ಅದರ ಧರ್ಮಿಯಾದ ಪಕ್ಷದಲ್ಲಿರುವದೆಂದು ತಿಳಿಸುವದು ಪ್ರತಿಜ್ಞೆ. ದೃಷ್ಟಾಂತದಂತೆಯೇ ಪಕ್ಷದಲ್ಲಿಯೂ ಇರುವ ಸಮಾನಧರ್ಮವನ್ನು ಹೇಳಿ ಅದರಿಂದ ಸಾಧ್ಯವನ್ನು ಸಾಧಿಸುವದಕ್ಕೆ ಜೀಳುವ ವಾಕ್ಯವು ಹೇತು. ಸಾಧನವಿದ್ದರೆ ಸಾಧ್ಯವೂ ಇರುತ್ತದೆ ಎಂದು ಒಪ್ಪಿಸುವದಕ್ಕೆ ಕೊಡುವ ಹೋಲಿಕೆಯು ದೃಷ್ಟಾಂತವು. ದೃಷ್ಟಾಂತದಲ್ಲಿ ಹೇಗೆ ಸಾಧಕಧರ್ಮವಿದೆಯೋ ಪಕ್ಷದಲ್ಲಿಯೂ ಹಾಗೆಯೇ ಇದೆ ಎಂದು ಹೇಳುವದು ಉಪನಯವು. ಹೇತುವಿರುವದರಿಂದ ಪ್ರತಿಜ್ಞೆಯು ಸರಿ ಎಂದು ನಿಶ್ಚಯಿಸುವದು ನಿಗಮನವು. ಈ ಅವಯವಗಳ ವಿಚಾರದ ವಿವರವನ್ನು ತರ್ಕಶಾಸ್ತ್ರದಿಂದ ತಿಳಿಯಬೇಕು 2. ಇಲ್ಲಿ ದೃಶ್ಯತ್ವವೇ ಸಾಧನವಾದ್ದರಿಂದ "ಯಥಾ ತತ್ರ ಸ್ವಪ್ನ ಭಾವಾನಾಂ ದೃಶ್ಯತ್ವಂ ತಥಾ ಜಾಗರಿತಭಾವಾನಾಮಪಿ" ಎಂದಿದ್ದರೆ ಸಾಕಾಗಿದೆ.

ದೃಶ್ಯತ್ವವು ಸಮಾನ (ವಾಗಿರುತ್ತದೆ) ಎಂಬುದು ಹೇತುವಿನ ಉಪನಯವು. ಆದ್ದರಿಂದ ಎಚ್ಚರದಲ್ಲಿಯೂ (ಭಾವಗಳಿಗೆ) ವೈತಥ್ಯ(ವುಂಟು)-ಎಂದು ಹೇಳುವರು ಎಂಬುದು ನಿಗಮನವು. ಒಳಗೆ ಇರುವದರಿಂದಲೂ ಇಕ್ಕಟ್ಟಾದ (ಸ್ಥಲದಲ್ಲಿರು)ವದರಿಂದಲೂ ಕನಸಿನಲ್ಲಿ ಕಾಣಬರುವ ಭಾವಗಳು ಎಚ್ಚರದಲ್ಲಿ ಕಾಣಬರುವ (ಭಾವ)ಗಳಿಗಿಂತ ಬೇರೆ (ಯಾಗಿರುತ್ತವೆ)[1]. ದೃಶ್ಯವಾಗಿರುವದೂ ಅಸತ್ಯವಾಗಿರುವದೂ ಎರಡಕ್ಕೂ ಸಮಾನವು.

## ಕನಸಿಗೂ ಎಚ್ಚರಕ್ಕೂ ಭೇದವಿಲ್ಲ

ಸ್ವಪ್ನಜಾಗರಿತಸ್ಥಾನೇ ಹ್ಯೇಕಮಾಹುರ್ಮನೀಷಿಣಃ ।
ಭೇದಾನಾಂ ಹಿ ಸಮತ್ವೇನ ಪ್ರಸಿದ್ಧೇನೈವ ಹೇತುನಾ ॥೫॥

೫. ಕನಸು ಎಚ್ಚರ-ಎಂಬ ಸ್ಥಾನಗಳು (ಅವುಗಳಲ್ಲಿರುವ) ಭೇದಗಳು ಪ್ರಸಿದ್ಧವೇ ಆಗಿರುವ ಹೇತುವಿನಿಂದ ಸಮವಾಗಿರುವದರಿಂದ (ಎರಡೂ) ಒಂದೇ ಎಂದು ತಿಳಿದವರು ಹೇಳುತ್ತಾರೆ.

(ಭಾಷ್ಯ)

೫೨. ಪ್ರಸಿದ್ಧೇನೈವ ಭೇದಾನಾಂ ಗ್ರಾಹ್ಯತ್ವೇನ[2] ಹೇತುನಾ ಸಮತ್ವೇನ ಸ್ವಪ್ನ ಜಾಗರಿತಸ್ಥಾನಯೋಃ ಏಕತ್ವಮ್ ಆಹುಃ ವಿವೇಕಿನಃ ಇತಿ ಪೂರ್ವಪ್ರಮಾಣ ಸಿದ್ಧಸ್ಯೈವ ಫಲಮ್ ॥

(ಭಾಷ್ಯಾರ್ಥ)

ಪ್ರಸಿದ್ಧವೇ ಆಗಿರುವ, ಭೇದಗಳು ಅರಿಯಲ್ಪಡತಕ್ಕವುಗಳಾಗಿರುವವೆಂಬ ಹೇತುವಿನಿಂದ ಸಮವಾಗಿರುವದರಿಂದ[3] ಕನಸು ಎಚ್ಚರ-ಎಂಬ ಎರಡು ಸ್ಥಾನಗಳೂ ಒಂದೇ ಎಂದು ವಿವೇಕಿಗಳು ಹೇಳುತ್ತಾರೆ. ಹೀಗೆಂಬುದು ಹಿಂದಿನ ಪ್ರಮಾಣದಿಂದ ಸಿದ್ಧವಾಗಿರುವ (ವೈತಥ್ಯದ್ದೇ) ಫಲವು[4].

1. ಎಚ್ಚರದ ಶರೀರವನ್ನು ಮನಸ್ಸಿನಲ್ಲಿಟ್ಟುಕೊಂಡು ಒಳಗೆ ಹೊರಗೆ ಎಂಬ ಮಾತುಗಳನ್ನು ಆಡಿರುತ್ತದೆ. 2. "ಗ್ರಾಹ್ಯಗ್ರಾಹಕತ್ವೇನ" ಎಂಬ ಪಾಠಕ್ಕಿಂತ ಈ ॥ ವಾ ॥ ಪಾಠವು ಉತ್ತಮ.

3. ಎಚ್ಚರಕನಸುಗಳೆರಡರಲ್ಲಿರುವ ಭಾವಗಳೂ ದೃಶ್ಯ (ಅರಿಯಲ್ಪಡತಕ್ಕವು)ಗಳಾಗಿವೆ. ಆದ್ದರಿಂದ ಅವುಗಳಲ್ಲಿ ವೈತಥ್ಯಕ್ಕೆ ಬೇಕಾದ ಹೇತು ಸಮಾನವಾಗಿದೆ.

4. ಹಿಂದಿನ ಪ್ರಮಾಣವು ಅನುಮಾನವು : ಅದರಿಂದ ಸಿದ್ಧವಾಗಿರುವದು ವೈತಥ್ಯವು ; ಅದರ ಫಲವೆಂದರೆ ಎಚ್ಚರ, ಕನಸು-ಎಂಬ ಎರಡೂ ಬೇರೆಬೇರೆಯ ಪ್ರಕಾರವ ಅವಸ್ಥೆಗಳಲ್ಲವೆಂಬುದು. ಆದ್ದರಿಂದಲೇ ಆಗಮಪ್ರಕರಣದಲ್ಲಿ ಈ ಎರಡನ್ನೂ ಸ್ವಪ್ನ ಎಂದು ಕರೆದಿದೆ.

(ಭಾಷ್ಯ)

೮೩. ಇತಶ್ಚ ವೈತಥ್ಯಂ ಜಾಗ್ರದ್ದೃಶ್ಯಾನಾಂ ಭೇದಾನಾಮ್ । ಆದ್ಯನ್ತಯೋಃ ಅಭಾವಾತ್ ।

(ಭಾಷ್ಯಾರ್ಥ)

ಎಚ್ಚರದಲ್ಲಿ ಕಾಣಬರುವ ಬೇರೆ ಬೇರೆಯ (ವಸ್ತು)ಗಳು ವಿತಥವೆಂಬುದಕ್ಕೆ ಇದೂ ಒಂದು ಕಾರಣವು. (ಅದೇನೆಂದರೆ ಅವುಗಳು) ಮೊದಲುಕೊನೆಗಳಲ್ಲಿ ಇಲ್ಲದಿರುವದಿಲ್ಲವಾದ್ದರಿಂದ (ಎಂಬುದು. ಅದು ಹೇಗೆಂದರೆ) :-

ಆದಾವನ್ತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ।
ವಿತಥೈಃ ಸದೃಶಾಃ ಸನ್ನೋಽವಿತಥಾ ಇವ ಲಕ್ಷಿತಾಃ ॥೬॥

೬. ಮೊದಲೂ ಕೊನೆಯಲ್ಲಿಯೂ ಯಾವದು ಇಲ್ಲವೋ ಅದು ಈಗಲೂ ಹಾಗೆಯೇ. ವಿತಥಗಳಿಗೆ ಸಮಾನವಾಗಿದ್ದುಕೊಂಡು ಅವಿತಥವಾಗಿರುವಂತೆ ಕಾಣುತ್ತಿರುವವು.

(ಭಾಷ್ಯ)

೮೪. ಯತ್ ಆದೌ ಅನ್ತೇ ಚ ನಾಸ್ತಿ ವಸ್ತು ಮೃಗತೃಷ್ಣಿಕಾದಿ ತತ್ ಮಧ್ಯೇಽಪಿ ನಾಸ್ತಿ ಇತಿ ನಿಶ್ಚಿತಂ ಲೋಕೇ । ತಥಾ ಇಮೇ ಜಾಗ್ರದ್ದೃಶ್ಯಾ ಭೇದಾಃ ಆದ್ಯನ್ತಯೋಃ ಅಭಾವಾತ್ ವಿತಥೈರೇವ ಮೃಗತೃಷ್ಣಿಕಾದಿಭಿಃ ಸದೃಶತ್ವಾತ್ ವಿತಥಾ ಏವ । ತಥಾಪಿ ಅವಿತಥಾ ಇವ ಲಕ್ಷಿತಾ ಮೂಢೈಃ ಅನಾತ್ಮವಿದ್ಭಿಃ ॥

(ಭಾಷ್ಯಾರ್ಥ)

ಯಾವದು ಬಿಸಿಲುಕುದುರೆಯೇ ಮುಂತಾದ ವಸ್ತುವು ಮೊದಲೂ ಕೊನೆಯಲ್ಲಿಯೂ ಇರುವದಿಲ್ಲವೋ ಅದು ನಡುವಣ ಕಾಲದಲ್ಲಿಯೂ ಇರುವದಿಲ್ಲವೆಂದು ಲೋಕದಲ್ಲಿ ಗೊತ್ತಾಗಿರುತ್ತದೆ. ಈ ಎಚ್ಚರದಲ್ಲಿ ಕಾಣುವ ಭೇದಗಳು ಹಾಗೆಯೇ ಮೊದಲೂ ಕೊನೆಯಲ್ಲಿಯೂ ಇಲ್ಲದ್ದರಿಂದ ವಿತಥವೇ ಆಗಿರುವ ಬಿಸಿಲುಕುದುರೆಯೇ ಮುಂತಾದವುಗಳಿಗೆ ಸಮಾನವಾಗಿಯೇ ಇರುವದರಿಂದ (ಇವೂ) ಸುಳ್ಳೇ ಆದರೂ ಆತ್ಮನನ್ನರಿತುಕೊಳ್ಳದೆ ಇರುವ ಮೂಢರಿಗೆ ಅವು ವಿತಥವಲ್ಲದಂತೆ ಕಾಣುತ್ತಿರುವವು.

(ಭಾಷ್ಯ)

೮೫. ಸ್ವಪ್ನದೃಶ್ಯವತ್ ಜಾಗರಿತದೃಶ್ಯಾನಾಮಪಿ ಅಸತ್ತ್ವಮ್ ಇತಿ ಯತ್ ಉಕ್ತಮ್, ತತ್ ಅಯುಕ್ತಮ್ । ಯಸ್ಮಾತ್ ಜಾಗ್ರದ್ದೃಶ್ಯಾಃ ಅನ್ನಪಾನವಾಹನಾದಯಃ

ಕ್ಷುತ್ಪಿಪಾಸಾದಿನಿವೃತ್ತಿಂ ಕುರ್ವನ್ತಃ ಗಮನಾಗಮನಾದಿಕಾರ್ಯಂ ಚ ಸಪ್ರಯೋಜನಾ ದೃಷ್ಟಾಃ । ನ ತು ಸ್ವಪ್ನದೃಶ್ಯಾನಾಂ ತತ್ ಅಸ್ತಿ । ತಸ್ಮಾತ್ ಸ್ವಪ್ನದೃಶ್ಯವತ್ ಜಾಗ್ರದ್ದೃಶ್ಯಾನಾಮ್ ಅಸತ್ತ್ವಂ ಮನೋರಥಮಾತ್ರಮ್ ಇತಿ । ತನ್ನ । ಕಸ್ಮಾತ್ ?

(ಭಾಷ್ಯಾರ್ಥ)

(ಆಕ್ಷೇಪ) :- ಕನಸಿನ ದೃಶ್ಯಗಳಂತೆ ಎಚ್ಚರದ ದೃಶ್ಯಗಳೂ ಅಸತ್ತಾ(ಗಿವೆ) ಎಂದು ಹೇಳಿದಿರಲ್ಲ, ಅದು ಸರಿಯಲ್ಲ. ಏಕೆಂದರೆ ಎಚ್ಚರದ ದೃಶ್ಯಗಳಾದ ಅನ್ನ, ಪಾನ, ವಾಹನ-ಮುಂತಾದವು ಹಸಿವು, ಬಾಯಾರಿಕೆ-ಮುಂತಾದವನ್ನು ತೊಲಗಿಸುತ್ತಲೂ ಹೋಗುವದು, ಬರುವದು-ಮುಂತಾದ ಕೆಲಸವನ್ನು (ಮಾಡುತ್ತಲೂ) ಸಪ್ರಯೋಜನ ವಾಗಿರುವದು ಕಂಡುಬಂದಿದೆ. ಆದರೆ ಕನಸಿನ ದೃಶ್ಯಗಳಿಗೆ ಅದು ಇಲ್ಲ. ಆದ್ದರಿಂದ ಕನಸಿನ ದೃಶ್ಯಗಳಂತೆ ಎಚ್ಚರದ ದೃಶ್ಯಗಳೂ ಅಸತ್ತೆಂಬುದು ಬರಿಯ ಮನಸ್ಸಿನ ಕಲ್ಪನೆ.

(ಸಮಾಧಾನ) :- ಹಾಗಲ್ಲ.

(ಆಕ್ಷೇಪ) :- ಅದೇಕೆ ?

ಸಪ್ರಯೋಜನತಾ ತೇಷಾಂ ಸ್ವಪ್ನೇ ವಿಪ್ರತಿಪದ್ಯತೇ ।
ದಾದ್ಯನ್ತವತ್ತ್ವೇನ ಮಿಥ್ಯೈವ ಖಲು ತೇ ಸ್ಮೃತಾಃ ॥೭॥

೭. ಅವುಗಳಿಗೆ (ಇರುವ) ಸಪ್ರಯೋಜನತ್ವವು ಕನಸಿನಲ್ಲಿ ವಿರುದ್ಧ ವಾದ ಅಭಿಪ್ರಾಯಕ್ಕೀಡಾಗುತ್ತದೆ. ಆದ್ದರಿಂದ ಆದ್ಯಂತಗಳಿರುವದರಿಂದ ಅವು ಮಿಥ್ಯೆಯೇ ಎನಿಸುವವು.

(ಭಾಷ್ಯ)

೭. ಯಸ್ಮಾತ್ ಸಪ್ರಯೋಜನತಾ ದೃಷ್ಟಾ, ಯಾ[1] ಅನ್ನಪಾನಾದೀನಾಂ ಸಾ ಸ್ವಪ್ನೇ ವಿಪ್ರತಿಪದ್ಯತೇ । ಜಾಗರಿತೇ ಹಿ ಭುಕ್ತ್ವಾ ಪೀತ್ವಾ ಚ ತೃಪ್ತಃ ವಿನಿವರ್ತಿತತೃಟ್ ಸುಪ್ತಮಾತ್ರ ಏವ ಕ್ಷುತ್ಪಿಪಾಸಾದ್ಯಾರ್ತಮ್ ಅಹೋರಾತ್ರೋಪೋಷಿತಮ್[2] ಅಭುಕ್ತವನ್ತಮ್ ಆತ್ಮಾನಂ ಮನ್ಯತೇ । ಯಥಾ ಸ್ವಪ್ನೇ ಭುಕ್ತ್ವಾ ಪೀತ್ವಾ ಚ ತೃಪ್ತ್ಯುತ್ಥಿತಃ[3] ತಥಾ । ತಸ್ಮಾತ್ ಜಾಗ್ರದ್ದೃಶ್ಯಾನಾಂ ಸ್ವಪ್ನೇ ವಿಪ್ರತಿಪತ್ತಿಃ ದೃಷ್ಟಾ । ಅತಃ ಮನ್ಯಾಮಹೇ ತೇಷಾಮಪಿ ಅಸತ್ತ್ವಂ ಸ್ವಪ್ನದೃಶ್ಯವತ್ ಅನಾಶಙ್ಕನೀಯಮ್ ಇತಿ । ತಸ್ಮಾತ್ ಆದ್ಯನ್ತವತ್ತ್ವಮ್ ಉಭಯತ್ರ ಸಮಾನಮ್ ಇತಿ ಮಿಥ್ಯೈವ ಖಲು ತೇ ಸ್ಮೃತಾಃ ॥

1. "ಯಾ ದೃಷ್ಟಾ" ಪಾ॥
2. "ಅಹೋರಾತ್ರೋಷಿತಮ್" ಆ॥
3. "ಅತೃಪ್ತ್ಯುತ್ಥಿತಃ" ಎಂಬ ಮುದ್ರಿತಪಾಠವನ್ನು ಹೀಗೆ ತಿದ್ದಿಕೊಂಡಿದೆ

(ಭಾಷ್ಯಾರ್ಥ)

ಏಕೆಂದರೆ ಅನ್ನ, ಪಾನ-ಮುಂತಾದವುಗಳಿಗೆ ಯಾವ ಸಪ್ರಯೋಜನತ್ವವು (ಎಚ್ಚರದಲ್ಲಿ) ಕಂಡು(ಬರುವ)ದೋ ಅದು ಕನಸಿನಲ್ಲಿ ವಿರುದ್ಧವಾದ ಅಭಿಪ್ರಾಯಕ್ಕೀಡಾಗುತ್ತದೆ. ಹೇಗೆಂದರೆ, ಎಚ್ಚರದಲ್ಲಿ ಉಂಡು (ನೀರು) ಕುಡಿದು ತೃಪ್ತನಾಗಿ ಬಾಯಾರಿಕೆಯನ್ನು ಹಿಂಗಿಸಿಕೊಂಡವನು ನಿದ್ರೆಹೋದನೋ ಇಲ್ಲವೋ, ಹಸಿವುಬಾಯಾರಿಕೆಗಳಿಂದ ತಾನು ಸಂಕಟಪಡುತ್ತಿರುವಂತೆಯೂ ಹಗಲೂರಾತ್ರೆ ಉಪವಾಸಮಾಡಿ ಏನೂ ತಿನ್ನದೆ (ಕುಡಿಯದೆ) ಇರುವಂತೆಯೂ ಭಾವಿಸಿಕೊಳ್ಳುತ್ತಾನೆ. ಕನಸಿನಲ್ಲಿ ಉಂಡು (ನೀರು) ಕುಡಿದು ತೃಪ್ತಿಹೊಂದಿ ಎಚ್ಚತ್ತವನು ಹೇಗೆ (ಅತೃಪ್ತನಾಗಿಯೇ ನೀರಡಿಕೆಯಿಂದೊಡಗೂಡಿಯೇ ಇರುವನೋ) ಹಾಗೆಯೇ (ಇದು). ಆದ್ದರಿಂದ ಎಚ್ಚರದ ದೃಶ್ಯಗಳ ವಿಷಯಕ್ಕೆ ಕನಸಿನಲ್ಲಿ ವಿರುದ್ಧಾಭಿಪ್ರಾಯ(ವಾಗುವದು) ಕಂಡಿರುತ್ತದೆ. ಆದ್ದರಿಂದ ಕನಸಿನ ದೃಶ್ಯಗಳಂತೆಯೇ ಅವುಗಳೂ ಅಸತ್ತಾಗಿರುವವೆಂಬುದಕ್ಕೆ (ಯಾವ) ಶಂಕೆಯನ್ನೂ ಎತ್ತುವಹಾಗಿಲ್ಲವೆಂದು ನಮ್ಮ ಮತವು. ಆದ್ದರಿಂದ[1] ಮೊದಲುಕೊನೆಗಳಿರುವವೆಂಬುದು ಎರಡರಲ್ಲಿಯೂ ಸಮಾನವಾಗಿರುವದರಿಂದ ಅವು ಮಿಥ್ಯೆಯೇ ಎಂದೆನಿಸುವವು.

(ಭಾಷ್ಯ)

೮೭. ಸ್ವಪ್ನಜಾಗ್ರದ್ಭೇದಯೋಃ ಸಮತ್ವಾತ್ ಜಾಗ್ರದ್ಭೇದಾನಾಮ್ ಅಸತ್ತ್ವಮ್ ಇತಿ ಯದುಕ್ತಂ ತತ್ ಅಸತ್ । ಕಸ್ಮಾತ್ ? ದೃಷ್ಟಾನ್ತಸ್ಯ ಅಸಿದ್ಧತ್ವಾತ್ । ಕಥಮ್ । ನ ಹಿ ಜಾಗ್ರದ್ದೃಷ್ಟಾ ಏವ ಏತೇ[2] ಭೇದಾಃ ಸ್ವಪ್ನೇ ದೃಶ್ಯನ್ತೇ । ಕಿಂ ತರ್ಹಿ ? ಅಪೂರ್ವಂ

1. ನಿಷ್ಪ್ರಯೋಜನತ್ವವು ಸ್ವಪ್ನದೃಶ್ಯಗಳಿಗಿರುವದರಿಂದ ಅವು ಮಿಥ್ಯೆಯಾಗಲಿ ; ಆದರೆ ಜಾಗ್ರದ್ದೃಶ್ಯಗಳಿಗೆ ಅದಿಲ್ಲದ್ದರಿಂದ ಅವು ಮಿಥ್ಯೆಯಲ್ಲ-ಎಂದು ಆಕ್ಷೇಪಕನು ಹಿಂದೆ ಹೇಳಿದ ಅನುಮಾನದಲ್ಲಿ ದೋಷವನ್ನು ತೋರಿಸಿದ್ದಾನೆ. ಸಾಧ್ಯವ್ಯಾಪಕವಾಗಿ ಸಾಧನವ್ಯಾಪಕವಲ್ಲದೆ ಹೋದದ್ದು ಉಪಾಧಿ ಎನಿಸುವದು ; ಸೋಪಾಧಿಕವಾದ ಅನುಮಾನವು ಸರಿಯಾದ ಅನುಮಾನವಲ್ಲ-ಎಂದು ತಾರ್ಕಿಕರ ಮತ. ಪ್ರಕೃತದಲ್ಲಿ ಸಾಧ್ಯವು ಮಿಥ್ಯಾತ್ವ, ಸಾಧನವು ಆದ್ಯಂತವತ್ತ್ವ. ನಿಷ್ಪ್ರಯೋಜನತ್ತ್ವವು ಸಾಧ್ಯವಾದ ಮಿಥ್ಯಾತ್ವವಿರುವ ಸ್ವಪ್ನಾದಿಗಳಲ್ಲೆಲ್ಲ ಕಂಡಿದೆಯಾಗಿ ಸಾಧ್ಯ ವ್ಯಾಪಕ ; ಆದರೆ ಸಾಧನವಾದ ಆದ್ಯಂತವತ್ತ್ವವಿರುವ ಜಾಗ್ರದ್ದೃಶ್ಯಗಳಲ್ಲಿ ನಿಷ್ಪ್ರಯೋಜನತ್ತ್ವವಿಲ್ಲವಾಗಿ ಅದು ಸಾಧನ ವ್ಯಾಪಕವಲ್ಲ. ಹೀಗೆ ನಿಷ್ಪ್ರಯೋಜನತ್ವವೆಂಬ ಉಪಾಧಿಯಿರುವದರಿಂದ ಅನುಮಾನವು ಸರಿಯಲ್ಲ ಎಂದು ಆಕ್ಷೇಪಕನ ಅಭಿಪ್ರಾಯ. ಜಾಗ್ರದ್ದೃಶ್ಯಗಳ ಸಪ್ರಯೋಜನತ್ತ್ವವು ಕನಸಿನಲ್ಲಿ ತಪ್ಪುವದರಿಂದ ಆ ದೃಶ್ಯಗಳಲ್ಲಿಯೂ ನಿಷ್ಪ್ರಯೋಜನತ್ತ್ವವಿದೆ. ಆದ್ದರಿಂದ ನಿಷ್ಪ್ರಯೋಜನತ್ತ್ವವು ಸಾಧನವ್ಯಾಪಕವೂ ಆಗಿದೆ. ಆದಕಾರಣ ಅನುಮಾನವು ಸೋಪಾಧಿಕವಲ್ಲ, ಸರಿಯಾದ ಅನುಮಾನವೇ-ಎಂಬುದು ಸಮಾಧಾನವು.

2. "ನ ಹಿ ಜಾಗ್ರದ್ದೃಶ್ಯಾ ಯೇ ತೇ" ಪಾ॥ ಕಾ॥

ಸ್ವಪ್ನೇ ಪಶ್ಯತಿ । ಚತುರ್ದನ್ತಗಜಮ್[1] ಆರೂಢಮ್, ಅಷ್ಟಭುಜಮ್ ಆತ್ಮಾನಂ ಮನ್ಯತೇ[2] । ಅನ್ಯದಪಿ ಏವಂಪ್ರಕಾರಮ್ ಅಪೂರ್ವಂ ಪಶ್ಯತಿ ಸ್ವಪ್ನೇ । ತತ್ ನಾನ್ಯೇನ ಅಸತಾ ಸಮಮ್ ಇತಿ ಸದೇವ । ಅತೋ ದೃಷ್ಟಾನ್ತೋಽಸಿದ್ಧಃ । ತಸ್ಮಾತ್ ಸ್ವಪ್ನವತ್ ಜಾಗರಿತಸ್ಯ ಅಸತ್ತ್ವಮ್ ಇತಿ ಅಯುಕ್ತಮ್ । ತನ್ನ । ಸ್ವಪ್ನೇ ದೃಷ್ಟಮ್ ಅಪೂರ್ವಂ ಯತ್ ಮನ್ಯಸೇ ನ ತತ್ ಸ್ವತಃಸಿದ್ಧಮ್ । ಕಂ ತರ್ಹಿ ?

(ಭಾಷ್ಯಾರ್ಥ)

(ಆಕ್ಷೇಪ) :- ಕನಸು, ಎಚ್ಚರ-(ಇವುಗಳಲ್ಲಿರುವ) ಬೇರೆಬೇರೆಯ (ಪದಾರ್ಥ)ಗಳು (ಒಂದೇ) ಸಮವಾಗಿರುವದರಿಂದ ಎಚ್ಚರದ ಭೇದಗಳು[3] ಅಸತ್ತಾಗಿರುತ್ತವ-ಎಂದು ಹೇಳಿತ್ತಲ್ಲ, ಅದು ಸರಿಯಲ್ಲ. ಏಕೆ ? ಎಂದರೆ ದೃಷ್ಟಾಂತವೇ ಸಿದ್ಧವಾಗುವದಿಲ್ಲವಾದ್ದರಿಂದ. (ಅದು) ಹೇಗೆ ? ಎಂದರೆ ಎಚ್ಚರದಲ್ಲಿ ಕಂಡ ಈ ಭೇದಗಳನ್ನೇ ಕನಸಿನಲ್ಲಿ (ಮನುಷ್ಯನು) ಕಾಣುವದಿಲ್ಲ, ಮತ್ತೇನೆಂದರೆ ಅಪೂರ್ವವಾದದ್ದನ್ನೂ ಕನಸಿನಲ್ಲಿ ಕಾಣುತ್ತಾನೆ. ನಾಲ್ಕುದಂತದ ಆನೆಯ ಮೇಲೆ ತಾನು ಹತ್ತಿ (ಕುಳಿತಿ)ರುವಂತೆಯೂ (ತನಗೆ) ಎಂಟುಭುಜಗಳಿರುವಂತೆಯೂ ಎಣಿಸುತ್ತಾನೆ. (ಇನ್ನೂ) ಬೇರೆಯ ಈ ಬಗೆಯ ಅಪೂರ್ವವನ್ನೂ ಕನಸಿನಲ್ಲಿ ಕಾಣುತ್ತಾನೆ. ಅದು ಮಿಕ್ಕ ಅಸತ್ತಾದ (ವಸ್ತುವಿಗೆ) ಸಮನಲ್ಲವಾದ್ದರಿಂದ ಸತ್ತೇ. ಆದ್ದರಿಂದ ದೃಷ್ಟಾಂತವು ಸಿದ್ಧವಾಗಲಿಲ್ಲ. ಆದ್ದರಿಂದ ಕನಸಿನಂತೆ ಎಚ್ಚರವು ಅಸತ್ತು ಎಂಬುದು ಸರಿಯಲ್ಲ.

(ಪರಿಹಾರ) :- ಇದು (ಸರಿ)ಯಲ್ಲ. ಕನಸಿನಲ್ಲಿ ಕಂಡದ್ದು ಅಪೂರ್ವವು ಎಂದು ಭಾವಿಸಿರುವೆಯಲ್ಲ, ಅದು ತಾನೇ ಇರುವದಲ್ಲ. ಮತ್ತೇನೆಂದರೆ :-

**ಅಪೂರ್ವಂ ಸ್ಥಾನಿಧರ್ಮೋ ಹಿ ಯಥಾ ಸ್ವರ್ಗನಿವಾಸಿನಾಮ್ ।**
**ತಾನಯಂ ಪ್ರೇಕ್ಷತೇ ಗತ್ವಾ ಯಥೈವೇಹ ಸುಶಿಕ್ಷಿತಃ ॥೮॥**

೮. ಅಪೂರ್ವವು ಸ್ಥಾನಿಧರ್ಮವೇ ಸ್ವರ್ಗನಿವಾಸಿಗಳಿಗೆ ಹೇಗೆ (ಅಪೂರ್ವ ಧರ್ಮವಿರುವದೋ ಹಾಗೆ). ಇಲ್ಲಿ ಸುಶಿಕ್ಷಿತನಾದವನು ಹೇಗೋ (ಹಾಗೆ) ಇವನು ಅವುಗಳನ್ನು (ಅಲ್ಲಿಗೆ) ಹೋಗಿ ಕಾಣುತ್ತಾನೆ.

---

1. "ಚತುರ್ದನ್ತಂ ಗಜಮ್" ವಾ॥

2. ಕಾ॥ ದಲ್ಲಿಲ್ಲ.

3. ಭೇದ, ದೃಶ್ಯ, ಭಾವ-ಇವು ಪರ್ಯಾಯಶಬ್ದಗಳು ; ವಿತಥ, ಅಸತ್, ಮಿಥ್ಯಾ-ಇವೂ ಪರ್ಯಾಯಗಳು.

(ಭಾಷ್ಯ)

೮೮. ಅಪೂರ್ವಂ ಸ್ಥಾನಿಧರ್ಮೋ ಹಿ ಸ್ಥಾನಿನಃ ದ್ರಷ್ಟುರೇವ ಹಿ ಸ್ವಪ್ನಸ್ಥಾನವತಃ ಧರ್ಮಃ । ಯಥಾ ಸ್ವರ್ಗನಿವಾಸಿನಾಮ್ ಇನ್ದ್ರಾದೀನಾಂ ಸಹಸ್ರಾಕ್ಷತ್ವಾದಿ ತಥಾ ಸ್ವಪ್ನದೃಶಃ ಅಪೂರ್ವೋಽಯಂ ಧರ್ಮಃ । ನ ಸ್ವತಃಸಿದ್ಧಃ ದ್ರಷ್ಟುಃ ಸ್ವರೂಪವತ್ । ತಾನ್ ಏವಂಪ್ರಕಾರಾನ್ ಅಪೂರ್ವಾನ್ ಸ್ವಚಿತ್ತವಿಕಲ್ಪಾನ್ ಅಯಂ ಸ್ಥಾನೀ[1] ಸ್ವಪ್ನದೃಕ್ ಸ್ವಪ್ನ ಸ್ಥಾನಂ ಗತ್ವಾ ಪ್ರೇಕ್ಷತೇ । ಯಥೈವ ಇಹಲೋಕೇ ಸುಶಿಕ್ಷಿತಃ ಸುಶಿಕ್ಷಿತದೇಶಾನ್ತರ ಮಾರ್ಗಃ[2] ತೇನ ಮಾರ್ಗೇಣ ದೇಶಾನ್ತರಂ ಗತ್ವಾ ತಾನ್ ಪದಾರ್ಥಾನ್ ಪಶ್ಯತಿ, ತದ್ವತ್ । ತಸ್ಮಾತ್ ಯಥಾ ಸ್ಥಾನಿಧರ್ಮಾಣಾಂ ರಜ್ಜುಸರ್ಪಮೃಗತೃಷ್ಣಿಕಾದೀನಾಮ್ ಅಸತ್ತ್ವಮ್, ತಥಾ ಸ್ವಪ್ನದೃಶ್ಯಾನಾಮಪಿ[3] ಅಪೂರ್ವಾಣಾಂ ಸ್ಥಾನಿಧರ್ಮತ್ವಮೇವ ಇತಿ ಅಸತ್ತ್ವಮ್ । ಅತಃ ನ ಸ್ವಪ್ನದೃಷ್ಟಾನ್ತಸ್ಯ ಅಸಿದ್ಧತ್ವಮ್ ॥

(ಭಾಷ್ಯಾರ್ಥ)

ಅಪೂರ್ವವಾದದ್ದು ಸ್ಥಾನಿಧರ್ಮವೇ, ಸ್ಥಾನಿಯಾದ ಕನಸೆಂಬ ಸ್ಥಾನವುಳ್ಳ ನೋಡುವಾತನದ್ದೇ ಧರ್ಮವು.[4] ಹೇಗೆ ಸ್ವರ್ಗದಲ್ಲಿರುವ ಇಂದ್ರಾದಿಗಳಿಗೆ ಸಾವಿರ ಕಣ್ಣಿರುವದು ಮುಂತಾದ (ಆಯಾ ಸ್ಥಾನಗಳದ್ದೇ ಧರ್ಮವೋ) ಹಾಗೆ ಕನಸನ್ನು ಕಾಣುವಾತನಿಗೆ ಇದು ಅಪೂರ್ವವಾಗಿ ಉಂಟಾಗುವ ಧರ್ಮವು,[5] ನೋಡುವಾತನ ಸ್ವರೂಪದಂತೆ ತಾನೇ ಇದ್ದುಕೊಂಡಿರುವದಲ್ಲ[6]. ಅವನ್ನು ಈ ಬಗೆಯ ಅಪೂರ್ವಗಳನ್ನು ತನ್ನ ಚಿತ್ತದ ವಿಕಲ್ಪಗಳನ್ನು[7] ಈ ಕನಸುಕಾಣುವ ಸ್ಥಾನಿಯು ಕನಸೆಂಬ ಸ್ಥಾನವನ್ನು

---

1. "ಸ್ಥಾನೀ ಯಃ" ವಾ॥ ಕಾ॥

2. "ಸುಶಿಕ್ಷಿತೋ ದೇಶಾನ್ತರಮಾರ್ಗಃ" ಆ॥, "ಸುಶಿಕ್ಷಿತದೇಶಾನ್ತರಮಾರ್ಗಃ" ವಾ॥

3. "ಅಪಿ" ಎಂಬುದು ಆ॥ ಮೈ॥ ಗಳಲ್ಲಿಲ್ಲ.

4. ತಾನೇ ಯಾವಾಗಲೂ ಹಾಗೆಯೇ ಅಲ್ಲಿ ಇದ್ದುಕೊಂಡಿರುವದಲ್ಲ.

5. ಕರ್ಮದ ಫಲವಾಗಿ ಇಂದ್ರನಾಗುವವನಿಗೇ ಹೊಸದಾಗಿ ಸಾವಿರಕಣ್ಣುಗಳುಂಟಾಗುವಂತೆ ಕನಸುಕಾಣುವಾಗ ಆದೇ ಜೀವನಿಗೇ ಹೊಸದಾಗಿ ಉಂಟಾಗುವ ಧರ್ಮವು.

6. ಆತ್ಮಸ್ವರೂಪವಾದ ಚೈತನ್ಯವು ಸ್ವತಃಸಿದ್ಧವಾದದ್ದು, ಮತ್ತೊಂದು ಉಪಾಧಿಯಿಂದ ಬಂದಿರುವ ಧರ್ಮವಲ್ಲ ; ಆದರೆ ಎಂಟುಭುಜಗಳೇ ಮುಂತಾದದ್ದು ಸ್ವಪ್ನಸ್ಥಾನವೆಂಬ ಉಪಾಧಿಯಿಂದ ಬಂದದ್ದು. ಆದ್ದರಿಂದ ಸತ್ಯವಾಗಲಾರದು.

7. ಚಿತ್ತವು ಹಾಗೆ ಕಲ್ಪಿಸಿಕೊಂಡಿರುವದೇ ಹೊರತು ನಿಜವಾಗಿ ಎಂಟು ಭುಜಗಳಾಗಿರುವದಿಲ್ಲ.

ಹೊಂದಿ ಕಾಣುತ್ತಾನೆ[1]. ಹೇಗೆ ಇಲ್ಲಿ (ಈ) ಲೋಕದಲ್ಲಿ ಸುಶಿಕ್ಷಿತನಾದವನು ಮತ್ತೊಂದು ದೇಶಕ್ಕೆ ಹೋಗುವ ದಾರಿಯನ್ನು (ಮತ್ತೊಬ್ಬರಿಂದ) ಚೆನ್ನಾಗಿ ತಿಳಿದುಕೊಂಡವನು ಆ ದಾರಿಯಿಂದ (ಅ) ಬೇರೆಯ ಸ್ಥಲಕ್ಕೆ ಹೋಗಿ ಅಲ್ಲಿರುವ ಪದಾರ್ಥಗಳನ್ನು ಕಾಣುತ್ತಾನೋ ಹಾಗೆಯೇ (ಇದು)[2]. ಆದ್ದರಿಂದ ಹೇಗೆ ಸ್ಥಾನಿಧರ್ಮಗಳಾಗಿರುವ ಹಗ್ಗದ ಹಾವು, ಬಿಸಿಲುಕುದುರೆ-ಮುಂತಾದವುಗಳು ಅಸತ್ತಾಗಿರುವವೋ ಹಾಗೆಯೇ ಕನಸಿನಲ್ಲಿ ಕಾಣುವ ಅಪೂರ್ವ (ದೃಶ್ಯ)ಗಳೂ ಸ್ಥಾನಿಧರ್ಮವೇ ಆಗಿರುವದರಿಂದ ಅಸತ್ತಾಗಿರುತ್ತವೆ. ಆದ್ದರಿಂದ ಸ್ವಪ್ನದ ದೃಷ್ಟಾಂತವು ಅಸಿದ್ಧವಲ್ಲ[3].

(ಭಾಷ್ಯ)

೮೯. ಅಪೂರ್ವತ್ವಾಶಙ್ಕಾಂ ನಿರಾಕೃತ್ಯ ಸ್ವಪ್ನದೃಷ್ಟಾನ್ತಸ್ಯ ಪುನಃ ಸ್ವಪ್ನತುಲ್ಯತಾಂ ಜಾಗ್ರದ್ಭೇದಾನಾಂ ಪ್ರಪಞ್ಚಯನ್ ಆಹ-

(ಭಾಷ್ಯಾರ್ಥ)

ಅಪೂರ್ವವಾದ (ದೃಶ್ಯಗಳನ್ನು ಕಾಣುವೆವೆಂಬ) ಆಶಂಕೆಯನ್ನು ಸ್ವಪ್ನದೃಷ್ಟಾಂತದಲ್ಲಿ ಪರಿಹರಿಸಿ ಎಚ್ಚರದ ಭೇದಗಳು ಕನಸಿನ (ಭೇದ)ಗಳಿಗೆ ಸಮಾನವೇ ಆಗಿರುವವೆಂಬುದನ್ನು ವಿಸ್ತರಿಸುವದಕ್ಕಾಗಿ ಮತ್ತೂ ಹೇಳುತ್ತಾರೆ :-

**ಸ್ವಪ್ನವೃತ್ತ್ಯಾವಪಿ ತ್ವನ್ತಶ್ಚೇತಸಾ ಕಲ್ಪಿತಂ ತ್ವಸತ್ ।**
**ಬಹಿಶ್ಚೇತೋ ಗೃಹೀತಂ ಸದ್ದೃಷ್ಟಂ ವೈತಥ್ಯಮೇತಯೋಃ ॥೯॥**

೯. ಸ್ವಪ್ನವೃತ್ತಿಯಲ್ಲಿಯೂ ಒಳಗೆ ಚಿತ್ತದಿಂದ ಕಲ್ಪಿತವಾದದ್ದಾದರೆ ಅಸತ್ತು, ಹೊರಗೆ ಚಿತ್ತದಿಂದ ಗ್ರಹಿಸಲ್ಪಟ್ಟದ್ದು ಸತ್ತು. ಇವೆರಡಕ್ಕೂ ವೈತಥ್ಯವು ಕಂಡಿದೆ.

---

1. ಹಗ್ಗದಲ್ಲಿ ಹಾವನ್ನು ಭ್ರಾಂತಿಯ ಅವಸ್ಥೆಯಲ್ಲಿ ಹೇಗೆ ಕಾಣುವರೋ ಹಾಗೆ ಈ ವಿಕಲ್ಪಗಳನ್ನೂ ಮಿಥ್ಯಾವಾಸನಾವಶದಿಂದ ಕನಸಿನಲ್ಲಿ ತಪ್ಪಾಗಿ ಕಲ್ಪಿಸಿಕೊಂಡು ಕಾಣುತ್ತಾರೆ. ಆದ್ದರಿಂದ ಇವೂ ಅಸತ್ಯವೇ.

2. ದೃಷ್ಟಾಂತದಲ್ಲಿ ಬೇರೆಯ ಸ್ಥಲದಲ್ಲಿ ನಿಜವಾಗಿರುವ ದೃಶ್ಯಗಳನ್ನು ಅಲ್ಲಿಗೆ ಹೋದವನು ಕಾಣುತ್ತಾನಾದರೂ ಅವು ನಿಜವಾಗಿರುವವೆಂಬ ಅಂಶವು ದೃಷ್ಟಾಂತದಲ್ಲಿ ವಿವಕ್ಷಿತವಲ್ಲ. ಹೊಸದಾಗಿ ಕಾಣುವ ದೃಶ್ಯಗಳಂತೆ ಈ ವಿಕಲ್ಪಗಳೂ ಹೊಸದಾಗಿ ಕಾಣುತ್ತವೆ, ಸ್ವಾಭಾವಿಕವಾದ ಧರ್ಮಗಳಲ್ಲ- ಎಂಬುದು ವಿವಕ್ಷಿತ.

3. ಹೊಸದಾಗಿ ಕಾಣುವನೆಂಬ ಕಾರಣದಿಂದ ಸ್ವಪ್ನದೃಶ್ಯಗಳು ಸತ್ಯವಾಗುವದಿಲ್ಲ ತಾನೇ ಕಲ್ಪಿಸಿಕೊಂಡವುಗಳಾದದ್ದರಿಂದ ಅಸತ್ಯವೇ ಆಗಿವೆ. ಆದ್ದರಿಂದ ಸ್ವಪ್ನವು ಅಸತ್ಯವೇ ಎಂದು ಭಾವ.

(ಭಾಷ್ಯ)

೯೦. ಸ್ವಪ್ನವೃತ್ತ್ಯಾವಪಿ ಸ್ವಪ್ನಸ್ಥಾನೇ ಅಪಿ ಅನ್ತಃ ಚೇತಸಾ (ಕಲ್ಪಿತಂ ತು)[1] ಮನೋರಥಸಙ್ಕಲ್ಪಿತಮ್ ಅಸತ್ । ಸಙ್ಕಲ್ಪಾನನ್ತರಸಮಕಾಲಮೇವ ಅದರ್ಶನಾತ್ । ತತ್ಕೈವ ಸ್ವಪ್ನೇ ಬಹಿಃ ಚೇತಸಾ ಗೃಹೀತಂ ಚಕ್ಷುರಾದಿದ್ವಾರೇಣ ಉಪಲಬ್ಧಂ ಘಟಾದಿ ಸತ್ । ಇತ್ಯೇವಮ್ ಅಸತ್ಯಮಿತಿ ನಿಶ್ಚಿತೇಽಪಿ ಸದಸದ್ವಿಭಾಗೋ ದೃಷ್ಟಃ । ಉಭಯೋರಪಿ ಅನ್ತರ್ಬಹಿಶ್ಚೇತಃಕಲ್ಪಿತಯೋಃ ವೈತಥ್ಯಮೇವ ದೃಷ್ಟಮ್ ॥

(ಭಾಷ್ಯಾರ್ಥ)

ಸ್ವಪ್ನವೃತ್ತಿಯಲ್ಲಿಯೂ[2] ಕನಸೆಂಬ ಸ್ಥಾನದಲ್ಲಿಯೂ ಒಳಗೆ ಚಿತ್ತದಿಂದ (ಕಲ್ಪಿತವಾದದ್ದಾದ) ಮನೋರಥ (ಮಾತ್ರದಿಂದ) ಸಂಕಲ್ಪಿತವಾದದ್ದು ಅಸತ್ತು ; ಏಕೆಂದರೆ ಸಂಕಲ್ಪಿಸಿದ ಬಳಿಕವಿರುವ ಕಾಲದಲ್ಲಿಯೇ (ಅದು) ಕಾಣದೆ ಹೋಗುತ್ತದೆ. ಅದೇ ಕನಸಿನಲ್ಲಿ ಹೊರಗೆ ಚಿತ್ತದಿಂದ ಗ್ರಹಿಸಲ್ಪಟ್ಟಿದ್ದು ಎಂದರೆ ಚಕ್ಷುರಿಂದ್ರಿಯವೇ ಮುಂತಾದವುಗಳ ಮೂಲಕ ಕಂಡ ಗಡಿಗೆಯೇ ಮುಂತಾದದ್ದು ಸತ್ತು. ಹೀಗೆಂದು ಅಸತ್ಯವೆಂದು ನಿಶ್ಚಯವಾಗಿರುವ (ಕನಸಿನಲ್ಲಿ)ಯೂ ಸತ್ತು, ಅಸತ್ತು-ಎಂಬ ವಿಂಗಡವು ಕಂಡುಬರುತ್ತದೆ. (ಆದರೂ) ಒಳಗೆ, ಹೊರಗೆ-ಚಿತ್ತಕಲ್ಪಿತವಾಗಿರುವ ಎರಡಕ್ಕೂ ವೈತಥ್ಯವೇ ಕಂಡುಬಂದಿದೆ.

ಜಾಗ್ರದ್ವೃತ್ತ್ಯಾವಪಿ ತ್ವನ್ತಶ್ಚೇತಸಾ ಕಲ್ಪಿತಂ ತ್ವಸತ್ ।
ಬಹಿಶ್ಚೇತೋ ಗೃಹೀತಂ ಸದ್ಯುಕ್ತಂ ವೈತಥ್ಯಮೇತಯೋಃ ॥೧೦॥

೧೦. ಜಾಗದ್ವೃತ್ತಿಯಲ್ಲಿಯೂ ಒಳಗೆ ಚಿತ್ತದಿಂದ ಕಲ್ಪಿತವಾದದ್ದಾದರೆ ಅಸತ್ತು, ಹೊರಗೆ ಚಿತ್ತದಿಂದ ಗ್ರಹಿಸಲ್ಪಟ್ಟಿದ್ದು ಸತ್ತು. (ಆದ್ದರಿಂದ) ಇವೆರಡಕ್ಕೂ ವೈತಥ್ಯವು ಯುಕ್ತವು.

(ಭಾಷ್ಯ)

೯೧. ಸದಸತೋಃ ವೈತಥ್ಯಂ ಯುಕ್ತಮ್ । ಅನ್ತಬಹಿಶ್ಚೇತಃಕಲ್ಪಿತತ್ವಾವಿಶೇಷಾತ್ ಇತಿ । ವ್ಯಾಖ್ಯಾತಮ್ ಅನ್ಯತ್ ॥

1. ಈ ಮಾತುಗಳು ಭಾಷ್ಯದಲ್ಲಿ ಬಿಟ್ಟುಹೋಗಿವೆ.
2. ವೃತ್ತಿ, ಸ್ಥಾನ, ಸ್ಥಿತಿ, ಅವಸ್ಥೆ-ಇವು ಪರ್ಯಾಯಶಬ್ದಗಳು.

(ಭಾಷ್ಯಾರ್ಥ)

(ಇಲ್ಲಿಯೂ) ಸತ್ತು, ಅಸತ್ತು-(ಈ ಎರಡಕ್ಕೂ) ವೈತಥ್ಯ (ವಿರಬೇಕಾದದ್ದು) ಯುಕ್ತ ; ಏಕೆಂದರೆ ಒಳಗೂ ಹೊರಗೂ ಚಿತ್ತಕಲ್ಪಿತವಾಗಿವೆ ಎಂಬುದು ಸಮಾನವಾಗಿದ (ಎಂದರ್ಥ)[1]. ಮಿಕ್ಕದ್ದನ್ನು ವ್ಯಾಖ್ಯಾನಮಾಡಿ(ದಂತ್ಲಾ)ಗಿದೆ[2].

## ಎಲ್ಲವೂ ಆತ್ಮನಲ್ಲಿ ಹುಟ್ಟುಗಟ್ಟಿದ ತೋರಿಕೆ

(ಭಾಷ್ಯ)

೯೨. ಚೋದಕ[3] ಆಹ-

(ಭಾಷ್ಯಾರ್ಥ)

(ಇಲ್ಲಿ) ಆಕ್ಷೇಪಕನು ಕೇಳುತ್ತಾನೆ :-

ಉಭಯೋರಪಿ ವೈತಥ್ಯಂ ಭೇದಾನಾಂ ಸ್ಥಾನಯೋರ್ಯದಿ ।
ಕ ಏತಾನ್ ಬುಧ್ಯತೇ ಭೇದಾನ್ ಕೋ ವೈ ತೇಷಾಂ ವಿಕಲ್ಪಕಃ ॥೧೧॥

೧೧. ಎರಡು ಸ್ಥಾನಗಳಲ್ಲಿಯೂ ಭೇದಗಳಿಗೆ ವೈತಥ್ಯವೇ ಆದರೆ ಈ ಭೇದಗಳನ್ನು ಯಾವಾತನು ಅರಿಯುತ್ತಾನೆ ? ಇವುಗಳನ್ನು ವಿಕಲ್ಪಿಸುವವನು ಯಾವನು ?

(ಭಾಷ್ಯ)

೯೩. ಸ್ವಪ್ನಜಾಗ್ರತ್ಸ್ಥಾನಯೋಃ ಭೇದಾನಾಂ ಯದಿ ವೈತಥ್ಯಂ ಕಃ ಏತಾನ್ ಅನ್ತರ್ಬಹಿಃ ಚೇತಃಕಲ್ಪಿತಾನ್ ಬುಧ್ಯತೇ ? ಕೋ ವೈ ತೇಷಾಂ ವಿಕಲ್ಪಕಃ ? ಸ್ಮೃತಿ ಜ್ಞಾನಯೋಃ ಕ ಆಲಮ್ಬನಮ್ ? ಇತಿ ಅಭಿಪ್ರಾಯಃ । ನ ಚೇತ್ ನಿರಾತ್ಮವಾದ ಇಷ್ಟಃ ॥

(ಭಾಷ್ಯಾರ್ಥ)

ಕನಸು, ಎಚ್ಚರ-ಎಂಬ ಎರಡು ಸ್ಥಾನಗಳಲ್ಲಿರುವ ಭೇದಗಳಿಗೂ ವೈತಥ್ಯವಾದರೆ, ಒಳಗೂ ಹೊರಗೂ ಚಿತ್ತಕಲ್ಪಿತವಾಗಿರುವ ಇವುಗಳನ್ನು ಅರಿಯುವವನು ಯಾರು ? ಇವುಗಳನ್ನು ವಿಕಲ್ಪಿಸುವವನು ಯಾವನು ? ಸ್ಮೃತಿಗೂ ಜ್ಞಾನಕ್ಕೂ ಯಾರು

1. ಕಲ್ಪಿತವಾದದ್ದು ಅಸತ್ಯ ಎಂಬುದು ಯುಕ್ತ.
2. ಶ್ಲೋಕಕ್ಕೆ ಅಕ್ಷರಾರ್ಥವನ್ನು ಮಾಡಬೇಕಾದದ್ದಿಲ್ಲ.
3. "ಚೋದಕಶ್ಚ" ಆ॥ ಕಾ॥

ಆಶ್ರಯನು ?-ಎಂದು ಅಭಿಪ್ರಾಯ. ಆತ್ಮನೇ ಇಲ್ಲವೆಂಬ ವಾದವು ಇಷ್ಟವಿಲ್ಲದಿದ್ದರೆ[1] (ಈ ಪ್ರಶ್ನೆಗೆ ಉತ್ತರವನ್ನು ಹೇಳಬೇಕು.)

ಕಲ್ಪಯತ್ಯಾತ್ಮನಾತ್ಮಾನಮಾತ್ಮಾ ದೇವಃ ಸ್ವಮಾಯಯಾ ।
ಸ ಏವ ಬುಧ್ಯತೇ ಭೇದಾನಿತಿ ವೇದಾನ್ತನಿಶ್ಚಯಃ　　॥೧೨॥

೧೨. ದೇವನಾದ ಆತ್ಮನು ತನ್ನ ಮಾಯೆಯಿಂದ ತನ್ನಿಂದ ತನ್ನನ್ನು ಕಲ್ಪಿಸಿಕೊಳ್ಳುತ್ತಾನೆ. ಆತನೇ ಪದಾರ್ಥಗಳನ್ನು ಅರಿಯುತ್ತಾನೆ. ಹೀಗೆಂಬುದು ವೇದಾಂತನಿಶ್ಚಯವು.

(ಭಾಷ್ಯ)

೯೪. ಸ್ವಯಂ ಸ್ವಮಾಯಯಾ ಸ್ವಮ್ ಆತ್ಮಾನಮ್ ಆತ್ಮಾ ದೇವಃ ಆತ್ಮನ್ಯೇವ ವಕ್ಷ್ಯಮಾಣಂ ಭೇದಾಕಾರಂ ಕಲ್ಪಯತಿ ರಜ್ಜ್ವಾದಾವಿವ ಸರ್ಪಾದೀನ್ । ಸ್ವಯಮೇವ ಚ ತಾನ್ ಬುಧ್ಯತೇ ಭೇದಾನ್ ತದ್ವದೇವ ಇತ್ಯೇವಂ ವೇದಾನ್ತನಿಶ್ಚಯಃ । ನಾನ್ಯೋಽಸ್ತಿ ಜ್ಞಾನಸ್ಯಾತ್ಯಾಶ್ರಯಃ । ನ ಚ ನಿರಾಸ್ಪದೇ ಏವ ಜ್ಞಾನಸ್ಯ ಪ್ರತೀ ವೈನಾಶಿಕಾನಾಮಿವ ಇತಿ ಅಭಿಪ್ರಾಯಃ ॥

(ಭಾಷ್ಯಾರ್ಥ)

ತಾನೇ[2] ತನ್ನ ಮಾಯೆಯಿಂದ ತನ್ನ ಆತ್ಮನನ್ನೇ ದೇವನಾದ ಆತ್ಮನು ತನ್ನಲ್ಲಿಯೇ ಈ ಮುಂದೆ[3] ಹೇಳುವ ಭೇದಗಳ ಆಕಾರವುಳ್ಳವನನ್ನಾಗಿ ಹಗ್ಗವೇ ಮುಂತಾದದ್ದರಲ್ಲಿ ಹಾವು ಮುಂತಾದವುಗಳನ್ನು (ಕಲ್ಪಿಸು)ವಂತೆ ಕಲ್ಪಿಸಿಕೊಳ್ಳುತ್ತಾನೆ. ಅವನೇ ಆ ಭೇದಗಳನ್ನು ಅದರಂತೆಯೇ[4] ಅರಿಯುತ್ತಾನೆ- ಎಂದು ಹೀಗೆಂದು

1. ಹಿಂದೆ ಅನುಭವಿಸಿದ್ದನ್ನು ಈಗ ನೆನಪಿಗೆ ತಂದುಕೊಳ್ಳುವವನು ಒಬ್ಬನೇ ಇರಬೇಕೆಂದು ಆತ್ಮವಾದಿಗಳೆಲ್ಲರೂ ಒಪ್ಪುತ್ತಾರೆ. ಬೌದ್ಧರು ಮಾತ್ರ ಇಂಥ ಒಂದೇ ಆಶ್ರಯವನ್ನು ಒಪ್ಪುವದಿಲ್ಲ. ಅವರಿಗೆ ಜ್ಞಾನವೆಲ್ಲ ಕ್ಷಣಿಕವೇ. ಆದರೆ ಆತ್ಮನನ್ನು ಒಪ್ಪುವದಿಲ್ಲವೆನ್ನುವದಕ್ಕೂ ಆತ್ಮನ ಆಶ್ರಯವೇ ಬೇಕಾದದ್ದರಿಂದ ಅವರ ಮತವು ಒಪ್ಪತಕ್ಕದ್ದಲ್ಲ. ಆದ್ದೃತಿಗೆ ಈ ಆಶ್ರಯವು ಯಾವದು ?- ಎಂದು ಪ್ರಶ್ನೆ.

2. 'ತಾನೇ' ಎಂದದ್ದರಿಂದ ಬೇರೆಯ ಕರ್ತೃವನ್ನೂ 'ತನ್ನನ್ನು' ಎಂದದ್ದರಿಂದ ಬೇರೆಯ ಕರ್ಮವನ್ನೂ 'ತನ್ನಿಂದ'' ಎಂದದ್ದರಿಂದ ಬೇರೊಂದು ಕರಣವನ್ನೂ ದೇವನೆಂದದ್ದರಿಂದ ಪ್ರಕಾಶವಾದ ಬೆಳಕನ್ನೂ ಅವಶ್ಯಕವಿಲ್ಲವೆಂದಾಯಿತು. ಮಾಯೆಯಿಂದ ಎಂಬುದು ಇವುಗಳು ಯಾವವೂ ಬೇಕಿಲ್ಲವೆಂಬುದಕ್ಕೆ ಕಾರಣವನ್ನು ತಿಳಿಸುತ್ತದೆ.

3. ಈ ಪ್ರಕರಣದ ೧೯ನೆಯ ಕಾರಿಕೆಯಿಂದ ಓದಿದು.

4. ಜ್ಞೇಯಗಳು ಹೇಗೆ ಮಾಯಿಕವೋ ಜ್ಞಾನಗಳೂ ಹಾಗೆಯೇ ಮಾಯಿಕ.

ವೇದಾಂತಗಳ[1] ನಿಶ್ಚಯವು. ಅರಿವುನೆನಪುಗಳಿಗೆ ಆಶ್ರಯನಾದವನು ಮತ್ತೊಬ್ಬನಿಲ್ಲ[2]. ವೈನಾಶಿಕರ (ಮತದಲ್ಲಿ ಹೇಳಿರುವಂತೆ) ಅರಿವುನೆನಹುಗಳಿಗೆ ಆಶ್ರಯವೇ ಇಲ್ಲವೆಂದೂ (ಇಲ್ಲಿ ಹೇಳುವ)ದಿಲ್ಲ[3] ಎಂದು ಅಭಿಪ್ರಾಯ.

## ಹುಟ್ಟುಗಟ್ಟುವ ಪ್ರಕಾರಗಳು

(ಭಾಷ್ಯ)

೯೫. ಸ ಕಲ್ಪಯನ್[4] ಕೇನ ಪ್ರಕಾರೇಣ ಕಲ್ಪಯತಿ ಇತಿ ?

(ಭಾಷ್ಯಾರ್ಥ)

ಅವನು ಕಲ್ಪನೆಮಾಡುವಾಗ ಯಾವ ಪ್ರಕಾರದಿಂದ ಕಲ್ಪಿಸುತ್ತಾನೆ ? ಎಂದರೆ ಹೇಳುತ್ತಾರೆ :-

ವಿಕರೋತ್ಯಪರಾನ್ ಭಾವಾನನ್ತಶ್ಚಿತ್ತೇ ವ್ಯವಸ್ಥಿತಾನ್ ।
ನಿಯತಾಂಶ್ಚ ಬಹಿಶ್ಚಿತ್ತ ಏವಂ ಕಲ್ಪಯತೇ ಪ್ರಭುಃ ॥೧೩॥

೧೩. ಒಳಗೆ ಚಿತ್ತದಲ್ಲಿ ಇದ್ದುಕೊಂಡಿರುವ ಅಪರಭಾವಗಳನ್ನೂ ನಿಯತವಾದ ಭಾವಗಳನ್ನೂ ಬಹಿಶ್ಚಿತ್ತನಾಗಿ[5] ಮಾರ್ಪಡಿಸುತ್ತಾನೆ. ಹೀಗೆ ಪ್ರಭುವು ಕಲ್ಪಿಸುತ್ತಾನೆ.

(ಭಾಷ್ಯ)

೯೬. ವಿಕರೋತಿ ನಾನಾ ಕರೋತಿ ಅಪರಾನ್ ಲೌಕಿಕಾನ್ ಭಾವಾನ್ ಪದಾರ್ಥಾನ್ ಶಬ್ದಾದೀನ್ ಅನ್ಯಾಂಶ್ಚ ಅನ್ತಶ್ಚಿತ್ತೇ ವಾಸನಾರೂಪೇಣ ವ್ಯವಸ್ಥಿತಾನ್ ಅವ್ಯಾಕೃತಾನ್ ನಿಯತಾಂಶ್ಚ ಪೃಥಿವ್ಯಾದೀನ್ ಅನಿಯತಾಂಶ್ಚ ಕಲ್ಪನಾಕಾಲಾನ್ ಬಹಿಶ್ಚಿತ್ತಃ ಸನ್ । ತಥಾ ಅನ್ತಶ್ಚಿತ್ತಃ ಮನೋರಥಾದಿಲಕ್ಷಣಾನ್ ಇತಿ ಏವಂ ಕಲ್ಪಯತಿ । ಪ್ರಭುಃ ಈಶ್ವರ ಆತ್ಮಾ ಇತ್ಯರ್ಥಃ ॥

1. ಉಪನಿಷತ್ತುಗಳ.

2. ತಾರ್ಕಿಕರು ಈಶ್ವರನಿಗಿಂತ ಬೇರೆಯಾಗಿ ಜೀವರೆಂಬ ಜ್ಞಾತೃಗಳನ್ನು ಒಪ್ಪುವಂತ ವೇದಾಂತಿಗಳು ಒಪ್ಪುವದಿಲ್ಲ.

3. ಬೌದ್ಧರು ಹೇಳುವಂತೆ ಜ್ಞಾನಗಳು ಸ್ಥಿರವಾದ ಜ್ಞಾತೃವನ್ನು ಬಯಸದೆ ಇರುವವೆಂದು ವೇದಾಂತಿಗಳು ಒಪ್ಪುವದಿಲ್ಲ.

4. ''ಸಂಕಲ್ಪಯನ್'' ಎಂಬ ಪಾಠಕ್ಕಿಂತ ಇದೇ ಮೇಲು.

5. 'ಬಹಿಶ್ಚಿತ್ತೇ' ಎಂಬ ಕಾರಿಕೆಯ ಪದವನ್ನು ಹಿಡಿದು ಚಿತ್ತದ ಹೊರಗೆ ಎಂದೂ ಅರ್ಥವನ್ನು ಮಾಡಬಹುದು ; ಆದರೆ ಈಗ ಮಾಡಿರುವ ಅರ್ಥವು ಭಾಷ್ಯಾನುಸಾರವಾದದ್ದು.

(ಭಾಷ್ಯಾರ್ಥ)

ಅಪರವಾದ ಎಂದರೆ ಲೌಕಿಕವಾದ (ಕೆಲವು) ಶಬ್ದವೇ ಮುಂತಾದ ಭಾವಗಳನ್ನೂ (ಲೌಕಿಕ) ಪದಾರ್ಥಗಳನ್ನೂ, ಮತ್ತು ಬೇರೆಯಾದ[1] (ಪದಾರ್ಥಗಳನ್ನೂ) ಚಿತ್ತದ ಒಳಗೆ ವಾಸನೆಯ ರೂಪದಿಂದ[2] ಇಮ್ಮುಕೊಂಡಿರುವ ಅವ್ಯಾಕೃತವಾದ (ಈ ಪದಾರ್ಥಗಳನ್ನೂ) ಮತ್ತು ನಿಯತವಾದ ಪೃಥಿವಿಯೇ ಮುಂತಾದವುಗಳನ್ನೂ ಕಲ್ಪನೆಯ ಕಾಲದಲ್ಲಿ ಮಾತ್ರ ಇರುವ ಅನಿಯತವಾದ (ಭಾವಗಳನ್ನೂ)[3] ಹೊರಬುದ್ಧಿಯುಳ್ಳವನಾಗಿ ಮಾರ್ಪಡಿಸುತ್ತಾನೆ, ಬೇರೆಬೇರೆಯಾಗಿ ಮಾಡುತ್ತಾನೆ. ಹಾಗೂ ಒಳಬುದ್ಧಿಯುಳ್ಳವನಾಗಿ ಮನೋರಥವೇ ಮುಂತಾದ ರೂಪದ (ಭಾವಗಳನ್ನೂ ಮಾರ್ಪಡಿಸುತ್ತಾನೆ). ಹೀಗೆ ಪ್ರಭು ಎಂದರೆ ಸಮರ್ಥನಾದ ಆತ್ಮನು ಕಲ್ಪಿಸುತ್ತಾನೆ ಎಂದರ್ಥ.

## ಒಳಗಿನ ಹೊರಗಿನ ವಸ್ತುಗಳಿರಡೂ ಕಲ್ಪಿತವೇ

(ಭಾಷ್ಯ)

೯೭. ಸ್ವಪ್ನವತ್ ಚಿತ್ತಪರಿಕಲ್ಪಿತಂ ಸರ್ವಮ್ ಇತ್ಯೇತತ್ ಆಶಙ್ಕ್ಯತೇ । ಯಸ್ಮಾತ್ ಚಿತ್ತಪರಿಕಲ್ಪಿತೈಃ ಮನೋರಥಾದಿಲಕ್ಷಣೈಃ ಚಿತ್ತಪರಿಚ್ಛೇದ್ಯೈಃ ವೈಲಕ್ಷಣ್ಯಂ ಬಾಹ್ಯಾನಾಮ್ ಅನ್ಯೋನ್ಯಪರಿಚ್ಛೇದ್ಯತ್ವಮ್ ಇತಿ । ಸಾ ನ ಯುಕ್ತಾ ಆಶಙ್ಕಾ ॥

(ಭಾಷ್ಯಾರ್ಥ)

ಕನಸಿ(ನಲ್ಲಿ ಹೇಗೋ) ಹಾಗೆ (ಎಚ್ಚರದಲ್ಲಿಯೂ) ಎಲ್ಲವೂ ಚಿತ್ತಪರಿಕಲ್ಪಿತ(ವಾಗಿದೆ)-ಎಂಬಿದರ (ಮೇಲೆ) ಶಂಕೆ ಬರುತ್ತದೆ. ಏಕೆಂದರೆ ಚಿತ್ತದಲ್ಲಿ ಕಲ್ಪಿಸಿದ ಮನೋರಥವೇ ಮುಂತಾದ ರೂಪದ ಚಿತ್ತಕ್ಕೆ ಕಟ್ಟುಬಿದ್ದಿರುವ (ಭಾವಗಳಿಗಿಂತ) ಹೊರಗಿನ (ಭಾವಗಳಲ್ಲಿ) ಒಂದರಿಂದೊಂದು ಪರಿಚ್ಛಿನ್ನವಾಗಿರುವ

1. ಶಾಸ್ತ್ರೀಯವಾದ (ಸ್ವರ್ಗಾದಿಗಳನ್ನು).

2. ಅನುಭವದಿಂದ ಅಂತಃಕರಣದಲ್ಲಿ ಉಂಟಾಗುವ ಸಂಸ್ಕಾರಗಳ ರೂಪದಿಂದ.

3. ನಿಯತವಾದ ಎಂಬುದು ಅನಿಯತವಾದದ್ದಕ್ಕೂ ಉಪಲಕ್ಷಣ ; ಬಹಿಶ್ಚಿತ್ತನಾಗಿ ಎಂಬುದು ಅಂತಶ್ಚಿತ್ತನಾಗಿ ಎಂಬುದಕ್ಕೂ ಉಪಲಕ್ಷಣ. ಚಿತ್ತದಲ್ಲಿ ಅವ್ಯಕ್ತವಾಗಿದ್ದು ಹೊರಗೆ ಸ್ಫುಟವಾಗಿ ತೋರುವ ಭಾವಗಳು ; ಚಿತ್ತದಲ್ಲಿ ಅನಿಯತವಾದ ಕಲ್ಪನಾರೂಪದ ಮತ್ತು ಹೊರಗೆ ನಿಯತವಾಗಿ ತೋರುವ ಪೃಥ್ವಿ ಮುಂತಾದವುಗಳು-ಎಂಬ ಅರ್ಥಗಳನ್ನು ಕ್ರಮವಾಗಿ ಪೂರ್ವಾರ್ಧದಲ್ಲಿಯೂ, ಉತ್ತರಾರ್ಧದಲ್ಲಿಯೂ ಭಾಷ್ಯಕಾರರು ತೋರಿಸಿರುತ್ತಾರೆ. ವ್ಯಾಖ್ಯಾನಕಾರರು ಕೊಟ್ಟಿರುವ ಕುಂಬಾರನ ದೃಷ್ಟಾಂತವು ಇಲ್ಲಿ ಅಷ್ಟು ಹೊಂದುಗೆಯಾಗಿಲ್ಲ.

ದೆಂಬ ವೈಲಕ್ಷಣ್ಯ(ವಿದೆ)[1]. ಆದ್ದರಿಂದ (ಶಂಕೆ ಬರುತ್ತದೆ). (ಆದರೆ) ಆ ಶಂಕೆಯು ಸರಿಯಲ್ಲ :-

ಚಿತ್ತಕಾಲಾ ಹಿ ಯೇಽನ್ತಸ್ತು ದ್ವಯಕಾಲಾಶ್ಚ ಯೇ ಬಹಿಃ ।
ಕಲ್ಪಿತಾ ಏವ ತೇ ಸರ್ವೇ ವಿಶೇಷೋ ನಾನ್ಯಹೇತುಕಃ ॥೧೪॥

೧೪. ಒಳಗೆ ಯಾವವು ಚಿತ್ತಕಾಲವುಳ್ಳವೇ (ಆಗಿರುವವೋ) ಮತ್ತು ಹೊರಗೆ ಯಾವವು ದ್ವಯಕಾಲವುಳ್ಳ(ವಾಗಿರುವ)ವೋ ಅವು ಎಲ್ಲವೂ ಕಲ್ಪಿತವಾದವುಗಳೇ. ವಿಶೇಷಕ್ಕೆ ಮತ್ತೊಂದು ಹೇತುವಿಲ್ಲ.

೯೮. ಚಿತ್ತಕಾಲಾ ಹಿ ಯೇ ಅನ್ತಸ್ತು । ಚಿತ್ತಪರಿಚ್ಛೇದ್ಯಾಃ ನಾನ್ಯಃ ಚಿತ್ತಕಾಲವ್ಯತಿರೇಕೇಣ ಪರಿಚ್ಛೇದಕಃ ಕಾಲೋ ಯೇಷಾಂ ತೇ ಚಿತ್ತಕಾಲಾಃ । ಕಲ್ಪನಾಕಾಲೇ ಏವ ಉಪಲಭ್ಯನ್ತೇ ಇತ್ಯರ್ಥಃ । ದ್ವಯಕಾಲಾಶ್ಚ ಭೇದಕಾಲಾಃ ಅನ್ಯೋನ್ಯಪರಿಚ್ಛೇದ್ಯಾಃ । ಯಥಾ "ಆ ಗೋದೋಹನಮ್ ಆಸ್ತೇ" । ಯಾವತ್ ಆಸ್ತೇ ತಾವತ್ ಗಾಂ ದೋಗ್ಧಿ ಯಾವತ್ ಗಾಂ ದೋಗ್ಧಿ ತಾವತ್ ಆಸ್ತೇ । ತಾವಾನ್ ಅಯಮ್ ಏತಾವಾನ್ ಸಃ । ಇತಿ ಪರಸ್ಪರಪರಿಚ್ಛೇದ್ಯಪರಿಚ್ಛೇದಕತ್ವಂ (ಯೇಷಾಂ) ಬಾಹ್ಯಾನಾಂ ಭೇದಾನಾಂ ತೇ ದ್ವಯಕಾಲಾಃ । ಅನ್ತಃ ಚಿತ್ತಕಾಲಾಃ ಬಾಹ್ಯಾಶ್ಚ ದ್ವಯಕಾಲಾಃ ಕಲ್ಪಿತಾ ಏವ ತೇ ಸರ್ವೇ । ನ ಬಾಹ್ಯಃ ದ್ವಯಕಾಲತ್ವವಿಶೇಷಃ ಕಲ್ಪಿತತತ್ವವ್ಯತಿರೇಕೇಣ ಅನ್ಯಹೇತುಕಃ । ಅತ್ರಾಪಿ ಹಿ ಸ್ವಪ್ನದೃಷ್ಟಾನ್ತೋ ಭವತ್ಯೇವ ॥

(ಭಾಷ್ಯಾರ್ಥ)

ಏಕೆಂದರೆ (ಯಾವವು) ಒಳಗೆ ಚಿತ್ತಕಾಲವುಳ್ಳವೇ (ಆಗಿರುವವೋ) ಚಿತ್ತಪರಿಚ್ಛಿನ್ನವಾಗಿರುವವೋ ಚಿತ್ತಕಾಲವನ್ನು ಬಿಟ್ಟು, ಮತ್ತೊಂದು ಪರಿಚ್ಛೇದಕವಾದ ಕಾಲವು ಯಾವ (ಭಾವ)ಗಳಿಗೆ ಇರುವದಿಲ್ಲವೋ, ಅವು ಚಿತ್ತಕಾಲಗಳು. (ಯಾವವು) ಕಲ್ಪನಾ ಕಾಲದಲ್ಲಿ ಮಟ್ಟಿಗೆ ಕಾಣಬರುವವೋ ಎಂದರ್ಥ. ಮತ್ತು ದ್ವಯಕಾಲಗಳು ಎಂದರೆ ಭೇದಗಳ ಕಾಲವುಳ್ಳವು ;[2] ಎಂದರೆ ಒಂದಕ್ಕೊಂದು ಕಟ್ಟುಬಿದ್ದಿರುವವು (ಎಂದರ್ಥ).

1. ಹಿಂದಿನ ಕಾರಿಕೆಯಲ್ಲಿ ಚಿತ್ತದ ಒಳಗಿನ ಭಾವಗಳೂ ಹೊರಗಿನ ಭಾವಗಳೂ ಕಲ್ಪಿತವೆಂದು ಹೇಳಿದ್ದರಮೇಲೆ ಆಕ್ಷೇಪವಿದು. 2. ಭೇದಕಾಲವೆಂದರೆ ಕಾಲಭೇದವೆಂದೂ ಮೊದಲಿನ ಕಾಲ, ಕೊನೆಯ ಕಾಲ-ಇವುಗಳಿಂದ ಕಟ್ಟುವಡೆದಿರುವ ವಸ್ತುಗಳನ್ನು ಇಲ್ಲಿ ದ್ವಯಕಾಲಗಳೆಂದು ಕರೆದಿದೆಯೆಂದೂ ವ್ಯಾಖ್ಯಾನಕಾರರು ವರ್ಣಿಸಿರುತ್ತಾರೆ. ಅದೇ ಇದು ಎಂಬ-ಪ್ರತ್ಯಭಿಜ್ಞೆಗೆ ವಿಷಯವಾಗಿರುವ ವಸ್ತುಗಳಿಗೂ ವ್ಯಾಖ್ಯಾನವನ್ನು ಹೊಂದಿಸಬಹುದು. ಅದನ್ನೆಲ್ಲ ಭಾಷ್ಯದ ತಾತ್ಪರ್ಯ ವರ್ಣನೆಯೆಂದು ಭಾವಿಸಬಹುದು. ದ್ವಯಕಾಲಗಳು ಭೇದಕಾಲಗಳು. ಭೇದಗಳ ಎಂದರೆ ಬೇರೆಯ ಪದಾರ್ಥಗಳ ಕಾಲವುಳ್ಳವು ಎಂಬುದು ಭಾಷ್ಯಾನುಸಾರಿಯಾದ ಸರಳವಾದ ಅರ್ಥ.

ಹೇಗೆಂದರೆ ''ಹಸುವನ್ನು ಕರೆಯುವವರೆಗೆ ಕುಳಿತಿರುತ್ತಾನೆ'' ಎಂಬಲ್ಲಿ ಎಲ್ಲಿಯವರೆಗೆ ಕುಳಿತಿರುತ್ತಾನೋ ಅಲ್ಲಿಯವರೆಗೆ ಹಸುವನ್ನು ಕರೆಯುತ್ತಿರುತ್ತಾನೆ ; ಎಲ್ಲಿಯವರೆಗೆ ಹಸುವನ್ನು ಕರೆಯುತ್ತಿರುತ್ತಾನೋ ಅಲ್ಲಿಯವರೆಗೆ ಕುಳಿತಿರುತ್ತಾನೆ. ಅದರಷ್ಟು ಇದು, ಇದರಷ್ಟು ಅದು.[1] ಹೀಗೆ ಒಂದೊಂದರ (ಕಾಲಕ್ಕೆ) ಕಟ್ಟುಬಿದ್ದಿರುವದು (ಯಾವ) ಹೊರಗಿನ ಭೇದಗಳಿಗೆ ಇರುವದೋ ಅವು ದ್ವಯಕಾಲಗಳು. ಒಳಗೆ ಚಿತ್ತಕಾಲ (ಗಳಾಗಿರುವವು), ಮತ್ತು ಹೊರಗೆ ದ್ವಯಕಾಲ(ಗಳಾಗಿರುವವು)-ಇವೆಲ್ಲವೂ ಕಲ್ಪಿತವಾದವುಗಳೇ. ಹೊರಗಿನ ದ್ವಯಕಾಲ(ಗಳಾಗಿರುವದೆಂಬ) ವಿಶೇಷಕ್ಕೆ ಕಲ್ಪಿತತ್ವವನ್ನು ಬಿಟ್ಟರೆ ಬೇರೆಯ ಹೇತುವಿಲ್ಲ. ಇಲ್ಲಿಯೂ ಕನಸಿನ ದೃಷ್ಟಾಂತವು ಇದ್ದೇ ಇರುತ್ತದೆ.

ಅವ್ಯಕ್ತಾ ಏವ ಯೇಽನ್ತಸ್ತು ಸ್ಫುಟಾ ಏವ ಚ ಯೇ ಬಹಿಃ ।
ಕಲ್ಪಿತಾ ಏವ ತೇ ಸರ್ವೇ ವಿಶೇಷಸ್ತ್ವಿನ್ದ್ರಿಯಾನ್ತರೇ ॥೧೫॥

೧೫. ಯಾವವು ಒಳಗೆ ಅವ್ಯಕ್ತವಾಗಿರುವವೋ ಮತ್ತು ಯಾವವು ಹೊರಗೆ ಸ್ಫುಟವಾಗಿಯೇ ಇರುವವೋ, ಅವೆಲ್ಲವೂ ಕಲ್ಪಿತವೇ. ವಿಶೇಷವಾದರೋ ಇಂದ್ರಿಯಾಂತರದಲ್ಲಿ(ರುವದು).

(ಭಾಷ್ಯ)

೯೯. ಯದಪಿ ಅನ್ತಃ ಅವ್ಯಕ್ತತ್ವಂ ಭಾವಾನಾಂ ಮನೋವಾಸನಾಮಾತ್ರಾಭಿವ್ಯಕ್ತಾನಾಂ, ಸ್ಫುಟತ್ವಂ ವಾ ಬಹಿಃ ಚಕ್ಷುರಾದೀನ್ದ್ರಿಯಾನ್ತರೇ ವಿಶೇಷಃ, ನಾಸೌ ಭೇದಾನಾಮ್ ಅಸ್ತಿತ್ವಕೃತಃ । ಸ್ವಪ್ನೇಽಪಿ ತಥಾ ದರ್ಶನಾತ್ । ಕಿಂ ತರ್ಹಿ ? ಇನ್ದ್ರಿಯಾನ್ತರಕೃತ ಏವ । ಅತಃ ಕಲ್ಪಿತಾ ಏವ ಚಾಗ್ರದ್ಭಾವಾ ಅಪಿ ಸ್ವಪ್ನಭಾವವತ್ ಇತಿ ಸಿದ್ಧಮ್ ॥

(ಭಾಷ್ಯಾರ್ಥ)

ಒಳಗೆ ಬರಿಯ ಮನೋವಾಸನೆಯಿಂದ ತೋರಿಕೊಳ್ಳುವ ಭಾವಗಳು ಅವ್ಯಕ್ತವಾಗಿರು ಸು, ಹೊರಗೆ ಚಕ್ಷುರಾದಿಯಾದ ಬೇರೊಂದು ಇಂದ್ರಿಯಕ್ಕೆ (ಗೋಚರವಾಗಿರುವ)ಲ್ಲಿ (ಅವು) ಸ್ಫುಟವಾಗಿರುವದು-ಎಂಬ ವಿಶೇಷವುಂಟಲ್ಲ, ಅದು ಭೇದಗಳು (ನಿಜವಾಗಿ) ಇರುವದರಿಂದ (ಆದದ್ದ)ಲ್ಲ ; ಏಕೆಂದರೆ ಕನಸಿನಲ್ಲಿಯೂ ಹಾಗೆಯೇ

1. ಭೇದಕಾಲಸಾಮಾನ್ಯವನ್ನು ವರ್ಣಿಸುವ ರೀತಿಯಿದು.

ವಿಶೇಷವು ಕಾಣುತ್ತದೆ.[1] (ಈ ವಿಶೇಷವು) ಮತ್ತೇತರಿಂದ (ಆದದ್ದು ? ಎಂದರೆ) ಮತ್ತೊಂದು ಇಂದ್ರಿಯವೆಂಬ (ನಿಮಿತ್ತದಿಂದ) ಆದದ್ದು[2]. ಆದ್ದರಿಂದ[3] ಎಚ್ಚರದ ಭಾವಗಳೂ ಕನಸಿನ ಭಾವಗಳಂತೆ ಕಲ್ಪಿತವಾದವುಗಳೇ ಎಂದು ಸಿದ್ಧವಾಯಿತು.

## ಕಲ್ಪನೆಗಳಿಗೆಲ್ಲ ಮೂಲ

(ಭಾಷ್ಯ)

೧೦೦. ಬಾಹ್ಯಾಧ್ಯಾತ್ಮಿಕಾನಾಂ ಭಾವಾನಾಮ್ ಇತರೇತರನಿಮಿತ್ತನೈಮಿತ್ತಿಕತಯಾ ಕಲ್ಪನಾಯಾಃ[4] ಕಿಂ ಮೂಲಮ್ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಹೊರಗಿನ ಮತ್ತು ಒಳಗಿನ ಭಾವಗಳನ್ನು ಒಂದಕ್ಕೊಂದು ನಿಮಿತ್ತವೆಂದೂ (ಒಂದರ) ನಿಮಿತ್ತದಿಂದ (ಒಂದು) ಆಗಿರುವವೆಂದೂ ಕಲ್ಪಿಸುವದಕ್ಕೆ ಯಾವದು ಬೇರು ?-ಎಂದು ಹೇಳುತ್ತಾರೆ :-

**ಜೀವಂ ಕಲ್ಪಯತೇ ಪೂರ್ವಂ ತತೋ ಭಾವಾನ್ ಪೃಥಗ್ವಿಧಾನ್ ।**
**ಬಾಹ್ಯಾನಾಧ್ಯಾತ್ಮಿಕಾಂಶ್ಚೈವ ಯಥಾವಿದ್ಯಸ್ತಥಾ ಸ್ಮೃತಿಃ ॥೧೬॥**

೧೬. ಮೊದಲು ಜೀವನನ್ನು ಕಲ್ಪಿಸುತ್ತಾನೆ. ಅಮೇಲೆ ಬೇರೆ ಬೇರೆಯ ವಿಧವಾದ ಹೊರಗಿನ ಮತ್ತು ಒಳಗಿನ ಭಾವಗಳನ್ನು (ಕಲ್ಪಿಸುತ್ತಾನೆ). ಎಂಥ ವಿದ್ಯೆಯುಳ್ಳವನೋ ಅಂಥ ಸ್ಮೃತಿಯವ(ನಾಗಿ ಕಲ್ಪಿಸುತ್ತಾನೆ).

(ಭಾಷ್ಯ)

೧೦೧. ಜೀವಂ ಹೇತುಫಲಾತ್ಮಕಮ್ ''ಅಹಂ ಕರೋಮಿ ಮಮ ಸುಖಿದುಃಖೀ'' ಇತ್ಯೇವಂಲಕ್ಷಣಮ್ । ಅನೇವಂಲಕ್ಷಣೇ ಏವ ಶುದ್ಧೇ ಆತ್ಮನಿ ರಜ್ಜ್ವಾಮಿವ ಸರ್ಪಂ

1. ಕನಸಿನಲ್ಲಿಯೂ ಒಳಗಿನ ಭಾವಗಳು ಅವ್ಯಕ್ತವಾಗಿಯೂ ಹೊರಗಿನ ಭಾವಗಳು ಸ್ಫುಟವಾಗಿಯೂ ಇರುತ್ತವೆ.

2. ಅಂತರಿಂದ್ರಿಯದಲ್ಲಿರುವವು ಅವ್ಯಕ್ತವಾಗಿರುವವು, ಬಹಿರಿಂದ್ರಿಯಕ್ಕೆ ಗೋಚರವಾದವು ಸ್ಫುಟವಾಗಿರುವವು.

3. ಚಿತ್ತಕಾಲತ್ವ, ದ್ವಯಕಾಲತ್ವ, ಅವ್ಯಕ್ತತ್ವ, ಸ್ಫುಟತ್ವ-ಎಂಬ ವಿಂಗಡವು ಕಲ್ಪಿತವಸ್ತುಗಳಲ್ಲಿಯೂ ಇರಬಹುದಾದ್ದರಿಂದ ಎಂದರ್ಥ.

4. ''ಕಲ್ಪನಾಯಾಂ'' ಆ।।

ಕಲ್ಪಯತೇ ಪೂರ್ವಮ್ । ತತಃ ತಾದರ್ಥ್ಯೇನ ಕ್ರಿಯಾಕಾರಕಫಲಭೇದೇನ ಪ್ರಾಣಾದೀನ್ (ಪೃಥಗ್ವಿಧಾನ್ ?) ನಾನಾವಿಧಾನ್ ಭಾವಾನ್ ಬಾಹ್ಯಾನ್ ಆಧ್ಯಾತ್ಮಿಕಾಂಶ್ಚೈವ ಕಲ್ಪಯತೇ । ತತ್ರ ಕಲ್ಪನಾಯಾಂ ಕೋ ಹೇತುಃ ಇತಿ ? ಉಚ್ಯತೇ । ಯೋಽಸೌ ಸ್ವಯಂ ಕಲ್ಪಿತೋ ಜೀವಃ ಸರ್ವಕಲ್ಪನಾಯಾಮ್ ಅಧಿಕೃತಃ ಸ ಯಥಾವಿದ್ಯಃ ಯಾದೃಶೀ ವಿದ್ಯಾ ವಿಜ್ಞಾನಮ್ ಅಸ್ಯ ಇತಿ ಯಥಾವಿದ್ಯಃ ತಥಾವಿಧೈವ ಸ್ಮೃತಿಃ ತಸ್ಯ ಇತಿ ತಥಾಸ್ಮೃತಿಃ, ಭವತಿ ಸಃ ಇತಿ । ಅತಃ ಹೇತುಕಲ್ಪನಾವಿಜ್ಞಾನಾತ್ ಫಲವಿಜ್ಞಾನಮ್, ತತೋ ಹೇತುಫಲಸ್ಮೃತಿಃ, ತತಃ ತದ್ವಿಜ್ಞಾನಮ್ ತದರ್ಥಕ್ರಿಯಾಕಾರಕತತ್ಫಲಭೇದ ವಿಜ್ಞಾನಾನಿ, ತೇಭ್ಯಃ ತತ್ಸ್ಮೃತಿಃ । ತತ್ಸ್ಮೃತೇಶ್ಚ ಪುನಸ್ತದ್ವಿಜ್ಞಾನಾನಿ ಇತ್ಯೇವಂ ಬಾಹ್ಯಾನ್ ಆಧ್ಯಾತ್ಮಿಕಾಂಶ್ಚ ಇತರೇತರನಿಮಿತ್ತನೈಮಿತ್ತಿಕಭಾವೇನ ಅನೇಕಧಾ ಕಲ್ಪಯತೇ ॥

(ಭಾಷ್ಯಾರ್ಥ)

ಹೇತುಫಲಗಳ ಸ್ವರೂಪನಾದ[1] ನಾನು ಮಾಡುತ್ತೇನೆ, ನನಗೆ ಸುಖದುಃಖಗಳು (ಆಗುವವು) ಎಂಬ ರೂಪದ-ಜೀವನನ್ನು ಇಂಥ ಸ್ವರೂಪದವನಲ್ಲದ ಶುದ್ಧನಾಗಿಯೇ ಇರುವ ಆತ್ಮನಲ್ಲಿ ಹಗ್ಗದಲ್ಲಿ ಹಾವನ್ನು (ಕಲ್ಪಿಸು)ವಂತೆ ಮೊದಲು[2] ಕಲ್ಪಿಸಿಕೊಳ್ಳುತ್ತಾನೆ. ಬಳಿಕ ಆ (ಜೀವನಿಗಾಗಿ) ಕ್ರಿಯೆ, ಕಾರಕ, ಫಲ-ಎಂಬ ಭೇದ ರೂಪದಿಂದ[3] ಪ್ರಾಣನೇ ಮುಂತಾದ (ಬೇರೆಬೇರೆಯ ವಿಧವಾದ) ನಾನಾವಿಧವಾದ ಹೊರಗಿನ ಮತ್ತು ಒಳಗಿನ ಭಾವಗಳನ್ನು ಕಲ್ಪಿಸುತ್ತಾನೆ. ಈ ಕಲ್ಪನೆಗೆ ಕಾರಣವೇನು ?[4] ಎಂದರೆ ಹೇಳುತ್ತಾರೆ ; ಎಲ್ಲಾ ಕಲ್ಪನೆಗೂ ಅಧಿಕಾರಿಯಾಗಿ[5] ತಾನೇ ಕಲ್ಪಿತನಾಗಿರುವ ಆ ಈ ಜೀವನಿದಾನಲ್ಲ, ಅವನು ಯಥಾವಿದ್ಯನೋ ಎಂಥ ವಿದ್ಯೆಯು ಎಂದರೆ ಅರಿವು ಇವನಿಗೆ ಇರುವದರಿಂದ (ಇವನು) ಯಥಾವಿದ್ಯನು ; (ಇವನು ಎಂಥ ಅರಿವುಳ್ಳವನೋ

1. ಕರ್ಮವು ಹೇತು, ಅದರಿಂದಾಗುವ ಭೋಗವು ಫಲ.

2. ಇಲ್ಲಿ ಜೀವತ್ವವು ಕಾಲದಲ್ಲಿ ಮೊದಲು ಆಗುವದೆಂದೂ ಬಳಿಕ ಕ್ರಿಯಾದಿಗಳು ಕಲ್ಪಿತವಾಗುವವೆಂದೂ ಅಭಿಪ್ರಾಯವಿಲ್ಲ ; ಕರ್ತೃತ್ವಭೋಕ್ತೃತ್ವವನ್ನು ಕಲ್ಪಿಸಿಕೊಂಡಲ್ಲದೆ ಕ್ರಿಯಾದಿಗಳ ಕಲ್ಪನೆಯಾಗುವದಿಲ್ಲವಾದ್ದರಿಂದ ತಿಳಿವಳಿಕೆಯ ಕ್ರಮದಲ್ಲಿ ಜೀವತ್ವವೇ ಮೊದಲು ಎಂದರ್ಥ.

3. ಕ್ರಿಯೆ (ಕೆಲಸ) ಕಾರಕ (ಕೆಲಸಕ್ಕೆ ಬೇಕಾದ ಸಾಮಗ್ರಿಗಳು) ಫಲ (ಕೆಲಸದಿಂದ ಉಂಟಾಗುವದು)-ಎಂಬ ರೂಪದ ಸಂಸಾರವು ಜೀವನಿಗೆ ಸಂಬಂಧಪಟ್ಟೇ ಕಲ್ಪಿತವಾಗಿರುತ್ತದೆ.

4. ಇಂಥ ಕಲ್ಪನೆಗೆ ಇಂಥದ್ದು ಕಾರಣವೆಂದು ಗೊತ್ತಾಗಿರಬೇಕಲ್ಲ ! ಅದು ಯಾವದು ?

5. ಜೀವನೇ ಕಲ್ಪಿಸುವವನು, ಕಲ್ಪನೆಗೆ ಕರ್ತೃ.

ಎಂದರ್ಥ). ಅಂಥ ನೆನಹೇ ಇವನಿಗೆ (ಆಗುವದು) ; ಆದ್ದರಿಂದ (ಇವನು) ತಥಾಸ್ಮೃತಿ ಯಾಗಿರುವನು. ಆದ್ದರಿಂದ ಹೇತುವನ್ನು ಕಲ್ಪಿಸುವ ಅರಿವಿನಿಂದ ಫಲದ ಅರಿವು (ಉಂಟಾಗುತ್ತದೆ) ; ಅದರಿಂದ ಹೇತುಫಲಗಳ ನೆನಹು, ಅದರಿಂದ ಅವುಗಳ ಅರಿವು, ಅದಕ್ಕಾಗಿ ಬೇಕಾದ ಕ್ರಿಯೆಗಳು, ಕಾರಕಗಳು, ಅವುಗಳ ಫಲಗಳು-ಇವುಗಳ ಅರಿವುಗಳು ; ಅವುಗಳಿಂದ ಆ (ಅರಿವುಗಳ) ಸ್ಮೃತಿ ಮತ್ತು ಅವುಗಳ ನೆನಹಿನಿಂದ ಮತ್ತೂ (ಒಮ್ಮೆ) ಅವುಗಳ ಅರಿವುಗಳು-ಎಂದೀ (ಕ್ರಮದಿಂದ) ಹೊರಗಿನ ಮತ್ತು ಒಳಗಿನ (ಭಾವ ಗಳನ್ನು) ಒಂದಕ್ಕೊಂದು ನಿಮಿತ್ತವೆಂದೂ ನೈಮಿತ್ತಿಕವೆಂದೂ ಹಲವು ಬಗೆಯಾಗಿ ಕಲ್ಪಿಸುತ್ತಾನೆ[1] (ಎಂದರ್ಥ).

## ಜೀವಕಲ್ಪನೆಗೆ ಹೇತು ಆತ್ಮನನ್ನು ಅರಿಯದಿರುವದೇ

(ಭಾಷ್ಯ)

೧೦೨. ತತ್ರ ಜೀವಕಲ್ಪನಾ ಸರ್ವಕಲ್ಪನಾಮೂಲಮ್ ಇತ್ಯುಕ್ತಮ್ । ಸೈವ ಜೀವಕಲ್ಪನಾ ಕಿಂನಿಮಿತ್ತಾ ಇತಿ ? ದೃಷ್ಟಾನ್ತೇನ ಪ್ರತಿಪಾದಯತಿ-

(ಭಾಷ್ಯಾರ್ಥ)

ಇಲ್ಲಿ ಜೀವ(ನೆಂದು) ಕಲ್ಪಿಸಿಕೊಂಡಿರುವದು ಎಲ್ಲ ಕಲ್ಪನೆಗಳಿಗೂ ಮೂಲವು ಎಂದು ಹೇಳಿದೆ (ಯಷ್ಟೆ) ; ಆ ಜೀವಕಲ್ಪನೆಯೇ (ಮೊದಲು) ಯಾವ ನಿಮಿತ್ತದಿಂದ (ಆಗಿರುತ್ತದೆ) ? ಎಂದರೆ (ಇದನ್ನು) ದೃಷ್ಟಾಂತದಿಂದ ತಿಳಿಸುತ್ತಾರೆ :-

**ಅನಿಶ್ಚಿತಾ ಯಥಾ ರಜ್ಜುರನ್ಧಕಾರೇ ವಿಕಲ್ಪಿತಾ ।**
**ಸರ್ಪಧಾರಾದಿಭಿರ್ಭಾವೈಸ್ತದ್ವದಾತ್ಮಾ ವಿಕಲ್ಪಿತಃ** ॥೧೭॥

೧೭. ಅನಿಶ್ಚಿತವಾದ ಹಗ್ಗವು ಹೇಗೆ ಕತ್ತಲೆಯಲ್ಲಿ ಹಾವು, (ನೀರಿನ) ಕೋಡಿ-ಮುಂತಾದ ಭಾವಗಳಿಂದು ವಿಕಲ್ಪಿತವಾಗುವದೋ ಅದರಂತೆ ಆತ್ಮನು ವಿಕಲ್ಪಿತ(ನಾಗಿರುತ್ತಾನೆ).

---

1. ಊಟದ ಅನುಭವ, ಅದರಿಂದ ತೃಪ್ತಿಯ ಅನುಭವ, ಬಳಿಕ ಊಟವು ತೃಪ್ತಿಗೆ ಹೇತು, ತೃಪ್ತಿಯು ಅದರ ಫಲ ಎಂಬ ನೆನಪು, ಆ ನೆನಪಿನಿಂದ ಊಟಕ್ಕೆ ಪ್ರಯತ್ನ ಮತ್ತೆ ಅರಿವುನೆನಹುಗಳು-ಎಲ್ಲವೂ ಕಲ್ಪಿತವಾಗಿಯೇ ಆಗುವವು. ಕನಸಿನ ನಿಮಿತ್ತನೈಮಿತ್ತಿಕಭಾವ ದಂತೆಯೇ ಇದು. ಸತ್ಯವಾದ ನಿಮಿತ್ತವು ಯಾವದೂ ಇರಬೇಕಾದದ್ದಿಲ್ಲ. ಜೀವನಿಂದ ಹಿಡಿದು ಎಲ್ಲವೂ ಕಲ್ಪಿತವೇ ಎಂದು ಭಾವ.

(ಭಾಷ್ಯ)

೧೦೩. ಯಥಾ ಲೋಕೇ ಸ್ವೇನ ರೂಪೇಣ ಅನಿಶ್ಚಿತಾ ಅನವಧಾರಿತಾ ಏವ ಮೇವ ಇತಿ ರಜ್ಜುಃ ಮನ್ವಾನ್ಧಕಾರೇ । ಕಿಮ್ ? ಸರ್ಪಃ, ಉದಕಧಾರಾ, ದಣ್ಡ ಇತಿ ವಾ ಅನೇಕಧಾ ವಿಕಲ್ಪಿತಾ ಭವತಿ ಪೂರ್ವಂ ಸ್ವರೂಪಾನಿಶ್ಚಯನಿಮಿತ್ತಮ್ । ಯದಿ ಹಿ ಪೂರ್ವಮೇವ ರಜ್ಜುಃ ಸ್ವರೂಪೇಣ ನಿಶ್ಚಿತಾ ಸ್ಯಾತ್ ನ ಸರ್ಪಾದಿವಿಕಲ್ಪಃ ಅಭವಿಷ್ಯತ್ । ಯಥಾ ಸ್ವಹಸ್ತಾಙ್ಗುಲ್ಯಾದಿಷು । (ಯಥಾ)[1] ಏಷ ದೃಷ್ಟಾನ್ತಃ ತದ್ವತ್ ಹೇತುಫಲಾದಿಸಂಸಾರಧರ್ಮಾನರ್ಥವಿಲಕ್ಷಣತಯಾ ಸ್ವೇನ ವಿಶುದ್ಧವಿಜ್ಞಪ್ತಿಮಾತ್ರ ಸತ್ತಾದ್ವಯರೂಪೇಣ ಅನಿಶ್ಚಿತತ್ವಾತ್ ಜೀವಪ್ರಾಣಾದ್ಯನನ್ತಭಾವಭೇದ್ಯೈಃ ಆತ್ಮಾ ವಿಕಲ್ಪಿತಃ ಇತ್ಯೇಷ ಸರ್ವೋಪನಿಷದಾಂ ಸಿದ್ಧಾನ್ತಃ ॥

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ತನ್ನರೂಪದಿಂದ ನಿಶ್ಚಯವಾಗದೆ ಇರುವ, ಹೀಗೆಯೇ (ಸರಿ) ಎಂದು ಗೊತ್ತಾಗದೆ ಇರುವ, ಹಗ್ಗವು ನಸುಗತ್ತಲೆಯಲ್ಲಿ-ಏನು ? (ಎಂದರೆ) ಹಾವು, ನೀರಿನ ಕೋಡಿ, ಅಥವಾ ಕೋಲು ಎಂದು (ಅದರ) ಸ್ವರೂಪವನ್ನು ಮೊದಲು ನಿಶ್ಚಯಿಸಿಕೊಳ್ಳದೆ ಇರುವ ನಿಮಿತ್ತದಿಂದ[2] ಬಲುಬಗೆಯಿಂದ ವಿಕಲ್ಪಿತವಾಗಿರುತ್ತದಯೋ. ಮೊದಲೇ ಹಗ್ಗವನ್ನು ಸ್ವರೂಪದಿಂದ ನಿಶ್ಚಯಿಸಿಕೊಂಡಿದ್ದರೆ, ಹಾವು (ಎಂದು) ಮುಂತಾದ ವಿಕಲ್ಪವು ಆಗುತ್ತಲೇ ಇರಲಿಲ್ಲ ; ಉದಾಹರಣೆಗೆ ತನ್ನ ಕೈಬೆರಳು ಮುಂತಾದ್ದರಲ್ಲಿ (ಈ ವಿಕಲ್ಪವಾಗುವದಿಲ್ಲ). ಅಲ್ಲವೆ ? ಈ ದೃಷ್ಟಾಂತವು (ಹೇಗೋ), ಅದರಂತೆ ಹೇತು, ಫಲ-ಮುಂತಾದ ಸಂಸಾರಧರ್ಮಗಳೆಂಬ ಅನರ್ಥಕ್ಕಿಂತ ವಿಲಕ್ಷಣವಾಗಿರುವ ಬಹುಶುದ್ಧವಾದ ಬರಿಯ ಚೈತನ್ಯವೂ ತನಗೆರಡನೆಯದಿಲ್ಲದ್ದೂ (ಆದ) ತನ್ನ ರೂಪದಿಂದ ನಿಶ್ಚಯವಾಗದೆ ಇರುವದರಿಂದ

1. ಈ ಮಾತು ಇಲ್ಲಿರಬೇಕೆಂದು ತೋರುತ್ತದೆ "ಯಥಾ" ಇಲ್ಲದಯೇ ವ್ಯಾಖ್ಯಾನ ಪಾಠ.

2. ಹಾವು ಮುಂತಾದವು ತೋರುವದಕ್ಕೆ ನಿಮಿತ್ತವೇನೆಂದು ಪ್ರಶ್ನೆ, ಹಗ್ಗದ ನಿಶ್ಚಯವಿಲ್ಲದಾಗಲೆಲ್ಲ ಹಾವು ತೋರಬೇಕೆಂಬ ಅಥವಾ ಹಾವೇ ತೋರಬೇಕೆಂಬ ನಿಯಮವೇನೂ ಇಲ್ಲ. ಈಚಿನ ವೇದಾಂತಿಗಳು ಕೆಲವರು ಹಾವೇ ಮುಂತಾದದ್ದಕ್ಕೆ ಹಗ್ಗದಲ್ಲಿರುವ ಚೈತನ್ಯವನ್ನಾಶ್ರಯಿಸಿರುವ ಅವಿದ್ಯೆಯೆಂಬುದು ಉಪಾದಾನಕಾರಣವೆಂದು ಕಲ್ಪಿಸಿರುತ್ತಾರೆ ; ಈ ಪ್ರಕ್ರಿಯೆಯು ವೇದಾಂತಸಿದ್ಧಾಂತಕ್ಕೆ ಅಪ್ರಕೃತವೂ ಭಾಷ್ಯಕಾರಿಕೆಗಳಿಗೆ ಹೊರಬ್ಬಾದದ್ದೂ ಆಗಿರುತ್ತದೆ. ಪೀಠಿಕೆಯನ್ನು ನೋಡಿ.

ಜೀವನು[1] ಪ್ರಾಣನು[2]-ಎಂದು ಮುಂತಾಗಿ ಲೆಕ್ಕವಿಲ್ಲದಷ್ಟು ಭಾವವಿಶೇಷಗಳ ರೂಪದಿಂದ ಆತ್ಮನು ವಿಕಲ್ಪಿತನಾಗಿರುತ್ತಾನೆ. ಹೀಗೆಂಬುದೇ ಎಲ್ಲಾ ಉಪನಿಷತ್ತುಗಳ ಸಿದ್ಧಾಂತವು[3].

## ಸರ್ವಕಲ್ಪನಾನಿವೃತ್ತಿಯು ಜ್ಞಾನದ ಫಲ

**ನಿಶ್ಚಿತಾಯಾಂ ಯಥಾ ರಜ್ವ್ಯಾಂ ವಿಕಲ್ಪೋ ವಿನಿವರ್ತತೇ ।**
**ರಜ್ಜುರೇವೇತಿ ಚಾದ್ವೈತಂ ತದ್ವದಾತ್ಮವಿನಿಶ್ಚಯಃ ॥೧೪॥**

೧೪. ಹಗ್ಗವು ನಿಶ್ಚಯವಾಗಲು ಹೇಗೆ ವಿಕಲ್ಪವು ಹೋಗಿಬಿಡುವದೋ, ಹಗ್ಗವೇ ಎಂದು ಅದ್ವೈತ(ವಾಗಿ) ಬಿಡುವದೋ, ಅದರಂತೆಯೇ ಆತ್ಮವಿನಿಶ್ಚಯವು.

(ಭಾಷ್ಯ)

೧೦೪. ರಜ್ಜುರೇವ ಇತಿ ನಿಶ್ಚಯೇ ಸರ್ವವಿಕಲ್ಪನಿವೃತ್ತೌ ರಜ್ಜುರೇವ ಇತಿ ಚ ಅದ್ವೈತಂ ಯಥಾ ತಥಾ "ನೇತಿ ನೇತಿ" (ಬೃ. ೪-೪-೨೨) ಇತಿ ಸರ್ವಸಂಸಾರ ಧರ್ಮಶೂನ್ಯಪ್ರತಿಪಾದಕಶಾಸ್ತ್ರಜನಿತವಿಜ್ಞಾನಸೂರ್ಯಾಲೋಕಕೃತಾತ್ಮವಿನಿಶ್ಚಯಃ । 'ಆತ್ಮೈವೇದಂ ಸರ್ವಮ್' (ಛಾಂ. ೭-೨೫-೨) "ಅಪೂರ್ವಮನಪರಮನನ್ತರಮ ಬಾಹ್ಯಮ್" (ಬೃ. ೨-೫-೧೯) "ಸಬಾಹ್ಯಾಭ್ಯನ್ತರೋ ಹ್ಯಜಃ" (ಮುಂ. ೨-೧-೨) "ಅಜರೋಽಮರೋಽಮೃತೋಽಭಯಃ" (ಬೃ. ೪-೪-೨೫) ಏಕ ಏವಾದ್ವಯಃ ಇತಿ ॥

(ಭಾಷ್ಯಾರ್ಥ)

ಇದು ಹಗ್ಗವೇ (ಸರಿ) ಎಂದು ನಿಶ್ಚಯವಾಗಲು ಎಲ್ಲಾ ವಿಕಲ್ಪಗಳೂ ತೊಲಗಲಾಗಿ ಹಗ್ಗ(ವೊಂ)ದೇ ಎಂದು ಹೇಗೆ ಅದ್ವೈತವಾಗುತ್ತದೆಯೋ ಹಾಗೆಯೇ[4] "ಇದಲ್ಲ, ಇದಲ್ಲ" (ಬೃ. ೪-೪-೨೨) ಎಂದು ಯಾವ ಸಂಸಾರಧರ್ಮವೂ (ಇಲ್ಲದ ಆತ್ಮನನ್ನು) ತಿಳಿಸಿಕೊಡುವ ಶಾಸ್ತ್ರದಿಂದ ಹುಟ್ಟಿದ ವಿಜ್ಞಾನವೆಂಬ ಸೂರ್ಯನ

1. ಕರ್ತೃಭೋಕ್ತೃರೂಪನಾದ ಪ್ರಾಣ.

2. ಪ್ರಾಜ್ಞನು.

3. ಅದ್ವಿತೀಯಚೈತನ್ಯರೂಪನಾದ ಆತ್ಮನಲ್ಲಿಯೇ ಜಗತ್ತೆಲ್ಲವೂ ಅಜ್ಞಾನದಿಂದ ತೋರುತ್ತಿರುವದೆಂಬುದೇ ವೇದಾಂತಸಿದ್ಧಾಂತವು ಎಂದರ್ಥ.

4. ಇಲ್ಲಿ ಹಾವು ತೋರದೆ ಹೋಗುವದೆಂಬುದು ದೃಷ್ಟಾಂತದಲ್ಲಿ ವಿವಕ್ಷಿತವಲ್ಲ. ಹಾವೆಂಬ ನಿಶ್ಚಯವು ತೊಲಗುವದೇ ಬೇಕಾದ ಹೋಲಿಕೆ.

ಬೆಳಕಿನಿಂದ ಆಗುವ ಆತ್ಮವಿನಿಶ್ಚಯವು[1]. "ಇದೆಲ್ಲವೂ ಆತ್ಮನೇ" (ಛಾಂ. ೭-೨೫-೨) "ಆ ಈ ಬ್ರಹ್ಮವು ಹಿಂದಿಲ್ಲದ, ಮುಂದಿಲ್ಲದ, ಒಳಗಿಲ್ಲದ, ಹೊರಗಿಲ್ಲದ (ತತ್ತ್ವವು)" (ಬೃ. ೨-೫-೧೯) "ಒಳಗೂ ಹೊರಗೂ ಅಜನಾದವನೇ" (ಮುಂ. ೨-೧-೨) "ಮುಪ್ಪಿಲ್ಲದ, ಸಾವಿಲ್ಲದ, ನಾಶವಾಗುವ ಸ್ವಭಾವವಿಲ್ಲದ, ಅಂಜಿಕೆಯಿಲ್ಲದ" (ಬೃ. ೪-೪-೨೫) ಎರಡನೆಯದಿಲ್ಲದ ಒಬ್ಬನೇ (ಆಗಿರುವನು) ಎಂದು (ಆಗುತ್ತದೆ).

## ಆತ್ಮನಲ್ಲಿ ತೋರುವ ವಿಕಲ್ಪಗಳು ಮಾಯಾಮಾತ್ರ

ಪ್ರಾಣಾದಿಭಿರನನ್ತೈಶ್ಚ ಭಾವೈರೇತೈರ್ವಿಕಲ್ಪಿತಃ ।
ಮಾಯೈಷಾ ತಸ್ಯ ದೇವಸ್ಯ ಯಯಾಽಯಂ[2] ಮೋಹಿತಃ ಸ್ವಯಮ್ ॥೧೯॥

೧೯. ಪ್ರಾಣನೇ ಮುಂತಾದ ಈ ಲೆಕ್ಕವಿಲ್ಲದಷ್ಟು ಭಾವಗಳಾಗಿ (ಆತ್ಮನು) ವಿಕಲ್ಪಿತನಾಗಿರುತ್ತಾನೆ. ಇದು ಆ ದೇವನ ಮಾಯೆ ; ಅದರಿಂದ ಇವನು ತಾನೇ ಮೋಹಿತನಾಗಿರುತ್ತಾನೆ.

(ಭಾಷ್ಯ)

೧೦೫. ಯದಿ ಆತ್ಮಾ ಏಕ ಏವ ಇತಿ ನಿಶ್ಚಯಃ, ಕಥಂ ಪ್ರಾಣಾದಿಭಿಃ ಅನನ್ತೈಃ ಭಾವೈಃ ಏತೈಃ ಸಂಸಾರಲಕ್ಷಣೈಃ ವಿಕಲ್ಪಿತಃ ಇತಿ ? ಉಚ್ಯತೇ । ಶೃಣು । ಮಾಯಾ ಏಷಾ ತಸ್ಯ ಆತ್ಮನಃ ದೇವಸ್ಯ । ಯಥಾ ಮಾಯಾವಿನಾ ವಿಹಿತಾ ಮಾಯಾ ಗಗನಮ್ ಅತಿವಿಮಲಂ ಕುಸುಮಿತೈಃ ಸಪಲಾಶೈಃ ತರುಭಿಃ ಆಕೀರ್ಣಮಿವ ಕರೋತಿ ತಥಾ ಇಯಮಪಿ ದೇವಸ್ಯ ಮಾಯಾ ಯಯಾ ಅಯಂ ಸ್ವಯಮಪಿ ಮೋಹಿತ ಇವ ಮೋಹಿತೋ ಭವತಿ । "ಮಮ ಮಯಾ ದುರತ್ಯಯಾ" (ಗೀ. ೭-೧೪) ಇತ್ಯುಕ್ತಮ್ ॥

(ಭಾಷ್ಯಾರ್ಥ)

(ಆಕ್ಷೇಪ) :- ಆತ್ಮನೊಬ್ಬನೇ ಸತ್ಯವು ಎಂಬುದೇ ನಿಶ್ಚಯವಾದರೆ ಪ್ರಾಣನೇ ಮೊದಲಾದ ಸಂಸಾರರೂಪವಾದ ಈ ಲೆಕ್ಕವಿಲ್ಲದಷ್ಟು ಭಾವಗಳಾಗಿ (ಅವನು) ವಿಕಲ್ಪಿತನಾಗಿರುವದು ಹೇಗೆ ?

(ಪರಿಹಾರ) :- ಹೇಳುತ್ತೇವೆ, ಕೇಳು ಇದು ಆ ಆತ್ಮನೆಂಬ ದೇವನ

1. ಈ ನಿಶ್ಚಯವಾಗುವಾಗ ಯಾವದೊಂದೂ ಹೊಸದಾಗಿ ಬರುವದಿಲ್ಲ, ಯಾವದೊಂದೂ ನಿಜವಾಗಿ ಹೋಗುವದಿಲ್ಲವೆಂಬುದನ್ನು ಮನಸ್ಸಿನಲ್ಲಿಡಬೇಕು.

2. ಈ ವಾ॥ ಮೈ॥ ಪಾಠವೇ ಭಾಷ್ಯಸಮ್ಮತವಾಗಿರುವಂತೆ ಕಾಣುತ್ತದೆ.

ಮಾಯೆಯು. ಹೇಗೆ ಮಾಯಾವಿಯು ಮಾಡಿದ ಮಾಯೆಯು ಬಹು ನಿರ್ಮಲವಾಗಿರುವ ಆಕಾಶವನ್ನು ಹೂಬಿಟ್ಟು, ಎಲೆಗಳಿಂದ ಕೂಡಿದ ಮರಗಳು ತುಂಬಿಕೊಂಡಿರುವಂತೆ (ಕಾಣುವ ಹಾಗೆ) ಮಾಡುವದೋ ಹಾಗೆ ದೇವನ ಈ ಮಾಯೆಯೂ (ಮಾಡಿರುತ್ತದೆ). ಇದರಿಂದ ಈ (ಆತ್ಮನು) ತಾನೂ ಮೋಹಿತನಾಗಿರುತ್ತಾನೆ, ಮೋಹಿತನಾದಂತೆ (ಕಾಣುತ್ತಾನೆ). "ನನ್ನ ಮಾಯೆಯು ದಾಟುವದಕ್ಕೆ ಕಷ್ಟವಾದದ್ದು" (ಗೀ. ೭-೧೪) ಎಂದು (ಭಗವಂತನಿಂದಲೂ) ಉಕ್ತವಾಗಿದೆ.

## ಆತ್ಮನಲ್ಲಿ ವಾದಿಗಳ ಕಲ್ಪನೆಗಳು

**ಪ್ರಾಣ ಇತಿ ಪ್ರಾಣವಿದೋ ಭೂತಾನೀತಿ ಚ ತದ್ವಿದಃ ।**
**ಗುಣಾ ಇತಿ ಗುಣವಿದಸ್ತತ್ತ್ವಾನೀತಿ ಚ ತದ್ವಿದಃ ॥೨೦॥**

೨೦. ಪ್ರಾಣನೆಂದು ಪ್ರಾಣನನ್ನು ಬಲ್ಲವರು[1] ; ಮತ್ತು ಭೂತಗಳಿಂದು ಅವನ್ನು ಬಲ್ಲವರು ; ಗುಣಗಳು ಎಂದು ಗುಣಗಳನ್ನು ಬಲ್ಲವರು ; ಮತ್ತು ತತ್ತ್ವಗಳು ಎಂದು ಅವನ್ನು ಬಲ್ಲವರು.

**ಪಾದಾ ಇತಿ ಪಾದವಿದೋ ವಿಷಯಾ ಇತಿ ತದ್ವಿದಃ ।**
**ಲೋಕಾ ಇತಿ ಲೋಕವಿದೋ ದೇವಾ ಇತಿ ಚ ತದ್ವಿದಃ ॥೨೧॥**

೨೧. ಪಾದಗಳೆಂದು ಪಾದಗಳನ್ನು ಬಲ್ಲವರು ; ವಿಷಯಗಳು ಎಂದು ಅವನ್ನು ಬಲ್ಲವರು ; ಲೋಕಗಳು ಎಂದು ಲೋಕಗಳನ್ನು ಬಲ್ಲವರು ; ಮತ್ತು ದೇವತೆಗಳು ಎಂದು ಅವರನ್ನು ಬಲ್ಲವರು.

**ವೇದಾ ಇತಿ ವೇದವಿದೋ ಯಜ್ಞಾ ಇತಿ ಚ ತದ್ವಿದಃ ।**
**ಭೋಕ್ತೇತಿ ಚ ಭೋಕ್ತೃವಿದೋ ಭೋಜ್ಯಮಿತಿ ಚ ತದ್ವಿದಃ ॥೨೨॥**

೨೨. ವೇದಗಳು ಎಂದು ವೇದಗಳನ್ನು ಬಲ್ಲವರು ; ಮತ್ತು ಯಜ್ಞಗಳು ಎಂದು ಅವನ್ನು ಬಲ್ಲವರು ; ಭೋಕ್ತೃ ಎಂದು ಭೋಕ್ತೃವನ್ನು ಬಲ್ಲವರು ; ಭೋಜ್ಯವು ಎಂದು ಅದನ್ನು ಬಲ್ಲವರು.

**ಸೂಕ್ಷ್ಮ ಇತಿ ಸೂಕ್ಷ್ಮವಿದಃ ಸ್ಥೂಲ ಇತಿ ಚ ತದ್ವಿದಃ ।**
**ಮೂರ್ತ ಇತಿ ಮೂರ್ತವಿದೋಽಮೂರ್ತ ಇತಿ ಚ ತದ್ವಿದಃ ॥೨೩॥**

1. "ಪ್ರಾಣನೆಂದರೆ ಹಿರಣ್ಯಗರ್ಭನು, ಅಥವಾ ತಟಸ್ಥೇಶ್ವರನು" ಎಂಬ ಆ॥ ವ್ಯಾಖ್ಯಾನವು ಭಾಷ್ಯವಿರುದ್ಧ ; ಪ್ರಾಣನೆಂದರೆ ಪ್ರಾಜ್ಞನು ಎಂದು ಮುಂದೆ ಭಾಷ್ಯದಲ್ಲಿಯೇ ಇದೆ.

೨೩. ಸೂಕ್ಷ್ಮನೆಂದು ಸೂಕ್ಷ್ಮವನ್ನು ಬಲ್ಲವರು, ಮತ್ತು ಸ್ಥೂಲನೆಂದು ಅದನ್ನು ಬಲ್ಲವರು. ಮೂರ್ತನೆಂದು ಮೂರ್ತವನ್ನು ಬಲ್ಲವರು, ಮತ್ತು ಅಮೂರ್ತನೆಂದು ಅದನ್ನು ಬಲ್ಲವರು.

**ಕಾಲ ಇತಿ ಕಾಲವಿದೋ ದಿಶ ಇತಿ ಚ ತದ್ವಿದಃ ।**
**ವಾದಾ ಇತಿ ವಾದವಿದೋ ಭುವನಾನೀತಿ ತದ್ವಿದಃ ॥೨೪॥**

೨೪. ಕಾಲವೆಂದು ಕಾಲವನ್ನು ಬಲ್ಲವರು, ಮತ್ತು ದಿಕ್ಕುಗಳಿಂದು ಅವನ್ನು ಬಲ್ಲವರು, ವಾದಗಳು ಎಂದು ವಾದವನ್ನು ಬಲ್ಲವರು, ಭುವನಗಳು ಎಂದು ಅವನ್ನು ಬಲ್ಲವರು.

**ಮನ ಇತಿ ಮನೋವಿದೋ ಬುದ್ಧಿರಿತಿ ಚ ತದ್ವಿದಃ ।**
**ಚಿತ್ತಮಿತಿ ಚಿತ್ತವಿದೋ ಧರ್ಮಾಧರ್ಮೌ ಚ ತದ್ವಿದಃ ॥೨೫॥**

೨೫. ಮನಸ್ಸೆಂದು ಮನಸ್ಸನ್ನು ಬಲ್ಲವರು, ಮತ್ತು ಬುದ್ಧಿ ಎಂದು ಅದನ್ನು ಬಲ್ಲವರು. ಚಿತ್ತವು ಎಂದು ಚಿತ್ತವನ್ನು ಬಲ್ಲವರು, ಮತ್ತು ಧರ್ಮಾಧರ್ಮಗಳು ಎಂದು ಅವನ್ನು ಬಲ್ಲವರು.

**ಪಞ್ಚವಿಂಶಕ ಇತ್ಯೇಕೇ ಷಡ್ವಿಂಶ ಇತಿ ಚಾಪರೇ ।**
**ಏಕತ್ರಿಂಶಕ ಇತ್ಯಾಹುರನನ್ತ ಇತಿ ಚಾಪರೇ ॥೨೬॥**

೨೬. ಇಪ್ಪತ್ತೈದನೆಯವನೆಂದು[1] ಕೆಲವರು ; ಇಪ್ಪತ್ತಾರನೆಯವನೆಂದು[2] ಮತ್ತೆ ಕೆಲವರು ; ಮೂವತ್ತೊಂದನೆಯವನೆಂದು[3] (ಕೆಲವರು) ಹೇಳುವರು ; ಅನಂತನು ಎಂದೂ ಕೆಲವರು.

1. ಮೂಲಪ್ರಕೃತಿ ; ಮಹತ್ತು ; ಅಹಂಕಾರ, ತನ್ಮಾತ್ರೆಗಳು ಐದು-ಎಂಬ ಏಳು ಪ್ರಕೃತಿ ವಿಕೃತಿಗಳು ; ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ವಿಷಯಗಳು, ಮನಸ್ಸು ಹೀಗೆ ಹದಿನಾರು ವಿಕಾರಗಳು. ಈ ಇಪ್ಪತ್ತುನಾಲ್ಕಕ್ಕಿಂತ ಬೇರೆಯಾದ್ದರಿಂದ ಪುರುಷನು ಇಪ್ಪತ್ತೈದನೆಯವನು-ಎಂದು ಸಾಂಖ್ಯರು. 2. ಸಾಂಖ್ಯರ ತತ್ತ್ವಗಳಿಗಿಂತ ಬೇರೆಯಾದ ಈಶ್ವರನು ಇಪ್ಪತ್ತಾರನೆಯವನು ಎಂದು ಪಾತಂಜಲಯೋಗಿಗಳು.

3. ಇದು ಪಾಶುಪತರ ಮತವು :- ಇವರ ಮತದಂತೆ ರಾಗ, ಅವಿದ್ಯೆ, ನಿಯತಿ, ಕಾಲ, ಕಲಾ, ಮಾಯಾ, ಇವು ಸೇರಿ ಮೂವತ್ತೊಂದು ಎಂದು ೪೫ ವ್ಯಾಖ್ಯಾನ. ಭೋಜದೇವ ಕೃತ ತತ್ತ್ವ ಪ್ರಕಾಶಿಕೆಯಲ್ಲಿ (೨೧-೨೩) ಹೇಳಿರುವ ತತ್ತ್ವಗಳೂ ಮೂವತ್ತೊಂದಿವೆ.

ಲೋಕಾಂಲ್ಲೋಕವಿದಃ ಪ್ರಾಹುರಾಶ್ರಯಾ ಇತಿ ತದ್ವಿದಃ ।
ಸ್ತ್ರೀಪುಂನಪುಂಸಕಂ ಲೈಙ್ಗಾಃ ಪರಾಪರಮಥಾಪರೇ ॥೨೭॥

೨೭. ಜನರೆಂದು ಜನವನ್ನು ಬಲ್ಲವರೂ, ಆಶ್ರಮಗಳು ಎಂದು ಅವನ್ನು ಬಲ್ಲವರೂ, ಹೆಣ್ಣು, ಗಂಡು, ನಪುಂಸಕ-ಎಂದು ಲಿಂಗವನ್ನು ಬಲ್ಲವರೂ, ಪರಾಪರವೆಂದು ಮತ್ತೆ ಕೆಲವರೂ (ಹೇಳುವರು).

ಸೃಷ್ಟಿರಿತಿ ಸೃಷ್ಟಿವಿದೋ ಲಯ ಇತಿ ಚ ತದ್ವಿದಃ ।
ಸ್ಥಿತಿರಿತಿ ಸ್ಥಿತಿವಿದಃ ಸರ್ವೇ ಚೇಹ ತು ಸರ್ವದಾ ॥೨೮॥

೨೮. ಸೃಷ್ಟಿ ಎಂದು ಸೃಷ್ಟಿಯನ್ನು ಬಲ್ಲವರೂ, ಲಯವೆಂದು ಅದನ್ನು ಬಲ್ಲವರೂ, ಸ್ಥಿತಿ ಎಂದು ಸ್ಥಿತಿಯನ್ನು ಬಲ್ಲವರೂ (ಹೇಳುವರು). ಆದರೆ (ಇವು) ಎಲ್ಲವೂ ಯಾವಾಗಲೂ ಈ (ಆತ್ಮ)ನಲ್ಲಿ ( ಕಲ್ಪಿತವಾಗಿರುತ್ತವೆ).

(ಭಾಷ್ಯ)

೧೦೬. ಪ್ರಾಣಃ ಪ್ರಾಜ್ಞಃ ಬೀಜಾತ್ಮಾ । ತತ್ಕಾರ್ಯಭೇದಾ ಹಿ ಇತರೇ ಸ್ಥಿತ್ಯನ್ತಾಃ, ಅನ್ಯೇ ಚ ಸರ್ವೇ ಲೌಕಿಕಾಃ । ಸರ್ವಪ್ರಾಣಿಪರಿಕಲ್ಪಿತಾ ಭೇದಾಃ ರಜ್ಜ್ವಾಮಿವ ಸರ್ಪಾದಯಃ ತಚ್ಚೂನ್ಯೇ ಆತ್ಮನಿ ಆತ್ಮಸ್ವರೂಪಾನಿಶ್ಚಯಹೇತೋಃ ಅವಿದ್ಯಯಾ ಕಲ್ಪಿತಾಃ ಇತಿ ಪಿಣ್ಡೀಕೃತೋ[1]ಽರ್ಥಃ । ಪ್ರಾಣಾದಿಶ್ಲೋಕಾನಾಂ ಪ್ರತ್ಯೇಕಂ ಪದಾರ್ಥ ವ್ಯಾಖ್ಯಾನೇ ಫಲ್ಗುಪ್ರಯೋಜನತ್ವಾತ್ ಸಿದ್ಧಪದಾರ್ಥತ್ವಾಚ್ಚ ಯತ್ನೋ ನ ಕೃತಃ ॥

(ಭಾಷ್ಯಾರ್ಥ)

ಪ್ರಾಣನು ಎಂದರೆ ಪ್ರಾಜ್ಞನು, ಬೀಜಾತ್ಮನು,[2] ಏಕೆಂದರೆ ಸ್ಥಿತಿ ಎಂಬವರೆಗೆ (ಹೇಳಿರುವ) ಉಳಿದ (ಭಾವಗಳೂ), ಮತ್ತೂ ಬೇರೆಯಾದ ಲೌಕಿಕಭಾವಗಳೂ,[3] ಎಲ್ಲವೂ ಅವನ ಕಾರ್ಯವಿಶೇಷಗಳೇ (ಆಗಿವೆ). ಸರ್ವಜೀವರೂ ಕಲ್ಪಿಸಿರುವ ಭೇದಗಳು ಹಗ್ಗದಲ್ಲಿ ಹಾವು ಮುಂತಾದವನ್ನು (ಕಲ್ಪಿಸುವಂತೆ) ಇವುಗಳಿಲ್ಲದ ಆತ್ಮನಲ್ಲಿ

1. "ಪಿಣ್ಡತೋ" ವಾ॥

2. ಆಗಮಪ್ರಕರಣದಲ್ಲಿ ಪ್ರಾಜ್ಞ, ಅವ್ಯಾಕೃತ-ಎರಡೂ ಒಂದೇ ಎಂದು ವರ್ಣಿಸಿದ ಆತ್ಮಸ್ವರೂಪವು.

3. ಶಾಸ್ತ್ರೀಯತತ್ತ್ವಗಳಂತೆ ಲೋಕದ ಜನರು ಕಲ್ಪಿಸಿರುವ ಪದಾರ್ಥಗಳೂ ಪ್ರಾಜ್ಞನ ಕಾರ್ಯಗಳೇ ; ಅವೂ ಹೀಗೆಯೇ ಕಲ್ಪಿತ.

ಆತ್ಮಸ್ವರೂಪವನ್ನು ನಿಶ್ಚಯಿಸದೆ ಇರುವದೆಂಬ ಹೇತುವಿನಿಂದ ಅವಿದ್ಯೆಯಿಂದ ಕಲ್ಪಿತವಾಗಿವೆ ಎಂಬುದು ಒಟ್ಟರ್ಥವು. 'ಪ್ರಾಣಃ' ಎಂದು ಮುಂತಾಗಿರುವ ಶ್ಲೋಕಗಳಿಗೆ ಒಂದೊಂದಾಗಿ ಪದಾರ್ಥವನ್ನು ವಿವರಿಸುವದರಿಂದ ಪ್ರಯೋಜನವು ಅತ್ಯಲ್ಪವಾಗಿರುವದರಿಂದಲೂ, (ಅವುಗಳಲ್ಲಿರುವ) ಪದಗಳ ಅರ್ಥಗಳು ತಿಳಿದೇ ಇರುವದರಿಂದಲೂ (ಆ ವ್ಯಾಖ್ಯಾನಕ್ಕಾಗಿ ನಾವು) ಪ್ರಯತ್ನವನ್ನು ಮಾಡಲಿಲ್ಲ.

ಯಂ ಭಾವಂ ದರ್ಶಯೇದ್ಯಸ್ಯ ತಂ ಭಾವಂ ಸ ತು ಪಶ್ಯತಿ ।
ತಂ ಚಾವತಿ ಸ ಭೂತ್ವಾಽಸೌ ತದ್ಗ್ರಹಃ ಸಮುಪೈತಿ ತಮ್ ॥೨೯॥

೨೯. ಯಾವನಿಗೆ ಯಾವ ಭಾವವನ್ನು ತೋರಿಸುತ್ತಾನೋ ಆ ಭಾವವನ್ನೇ ಅವನು ಕಾಣುತ್ತಾನೆ. ಮತ್ತು ಅದು ಈ (ಆತ್ಮ)ನಾಗಿ ಅವನನ್ನು ಕಾಪಾಡಿಕೊಳ್ಳುತ್ತದೆ ; ಅದರ ಗ್ರಹಣೆಯು ಅವನನ್ನು ಬಂದು ಸೇರಿಕೊಳ್ಳುತ್ತದೆ.

(ಭಾಷ್ಯ)

೧೦೭. ಕಿಂ ಬಹುನಾ ? ಪ್ರಾಣಾದೀನಾಮ್ ಅನ್ಯತಮಮ್ ಉಕ್ತಮ್ ಅನುಕ್ತಂ ವಾ ಅನ್ಯಂ ಯಂ[1] ಭಾವಂ ಪದಾರ್ಥಂ ದರ್ಶಯೇತ್ ಯಸ್ಯ ಆಚಾರ್ಯಃ ಅನ್ಯೋ ವಾ ಆಪ್ತಃ ಇದಮೇವ ತತ್ತ್ವಮ್ ಇತಿ ಸಃ ತಂ ಭಾವಮ್ ಆತ್ಮಭೂತಂ ಪಶ್ಯತಿ 'ಅಯಮ್ ಅಹಮ್' ಇತಿ ವಾ 'ಮಮ' ಇತಿ ವಾ । ತಂ ಚ ದ್ರಷ್ಟಾರಂ ಸ ಭಾವಃ ಅವತಿ । ಯೋ ದರ್ಶಿತೋ ಭಾವಃ ಅಸೌ (ಸ)[2] ಭೂತ್ವಾ ರಕ್ಷತಿ । ಸ್ವೇನ ಆತ್ಮನಾ ಸರ್ವತಃ ನಿರುಣದ್ಧಿ । ತಸ್ಮಿನ್ ಗ್ರಹಃ ತದ್ಗ್ರಹಃ, ತದಭಿನಿವೇಶಃ ಇದಮೇವ ತತ್ತ್ವಮ್ ಇತಿ । ಸಃ ತಂ ಗ್ರಹೀತಾರಂ ಸಮುಪೈತಿ[3] ತಸ್ಯ ಆತ್ಮಭಾವಂ ನಿಗಚ್ಛತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಹೆಚ್ಚು (ಹೇಳಿದ್ದರಿಂ)ದೇನು ? ಮೇಲೆ ಹೇಳಿರುವ ಪ್ರಾಣವೇ ಮುಂತಾದವುಗಳಲ್ಲಿ ಯಾವದಾದರೊಂದನ್ನು, ಅಥವಾ ಹೇಳದೆ ಇರುವ ಮತ್ತೊಂದನ್ನು, ಯಾವ ಭಾವವನ್ನು ಪದಾರ್ಥವನ್ನು 'ಇದೇ ತತ್ತ್ವವು' ಎಂದು ಯಾವನಿಗೆ

1. ಆ॥ ಪಾಠದಲ್ಲಿ ಬಿಟ್ಟುಹೋಗಿದೆ.

2. ಆ॥ ಪಾಠದಲ್ಲಿಲ್ಲ , ಇಲ್ಲದಿದ್ದರೂ ಸಾಗುತ್ತದೆ.

3. 'ಉಪೈತಿ' ಎಂದಿಷ್ಟೇ ಅಚ್ಚಿನ ಪುಸ್ತಕಗಳಲ್ಲಿದೆ ; ಮೂಲದಲ್ಲಿ ಸಮುಪೈತಿ ಎಂದೇ ಇದೆ ; ಇಲ್ಲಿಯೂ ಇತ್ತಂದೇ ತೋರುತ್ತದೆ

ಆಚಾರ್ಯನೋ[1] ಅಥವಾ ಮತ್ತೆ ಯಾವನಾದರೊಬ್ಬ ಆಪ್ತನೋ,[2] ತೋರಿಸಿಕೊಡುವನೋ ಅವನು ಆ ಭಾವವನ್ನು ಇದು ನಾನೆಂದೋ ನನ್ನದೆಂದೋ[3] (ತನ್ನ) ಆತ್ಮನಾಗಿ ಕಾಣುತ್ತಾನೆ. ಮತ್ತು ಆ ಕಂಡವನನ್ನು ಆ ಭಾವವು ಕಾಪಾಡಿಕೊಳ್ಳುತ್ತದೆ, ಯಾವ ಭಾವವನ್ನು ತೋರಿಸಿತ್ತೋ ಅದು ಈ (ಆತ್ಮ)ವಾಗಿ (ಅವನನ್ನು) ಭದ್ರವಾಗಿರಿಸಿಕೊಳ್ಳುತ್ತದೆ ; ತನ್ನ ರೂಪದಿಂದ (ಇವನನ್ನು) ಎಲ್ಲದರಿಂದ ತಡೆದಿಡುತ್ತದೆ[4]. ತದ್ಗ್ರಹವು ಎಂದರೆ ಅದರ ಗ್ರಹಣೆಯು 'ಇದೇ ತತ್ತ್ವವು' ಎಂದು ಅದರಲ್ಲಿರುವ ಅಭಿಮಾನವು ; ಅದು ಆ (ಹಾಗೆ) ಗ್ರಹಿಸಿದವನನ್ನು ಬಂದು ಸೇರಿಕೊಳ್ಳುತ್ತದೆ ; ಅವನ ಆತ್ಮಭಾವವನ್ನೇ ಹೊಂದಿಬಿಡುತ್ತದೆ[5] ಎಂದರ್ಥ.

## ಆತ್ಮಜ್ಞಾನಿಯೇ ವೇದಾರ್ಥವನ್ನು ಬಲ್ಲವನು

**ಏತೈರೇಷೋಽಪೃಥಗ್ಭಾವೈಃ ಪೃಥಗೇವೇತಿ ಲಕ್ಷಿತಃ ।**
**ಏವಂ ಯೋ ವೇದ ತತ್ತ್ವೇನ ಕಲ್ಪಯೇತ್ ಸೋಽವಿಶಙ್ಕಿತಃ ॥೩೦॥**

೩೦. ಈ ಬೇರೆಯಿಲ್ಲದ ಭಾವಗಳ ರೂಪದಿಂದ ಈ (ಆತ್ಮನು) ಬೇರೆಯೇ ಎಂದು ಕಾಣುತ್ತಿರುವನು. ಹೀಗೆಂದು ಯಾವನು ಇದ್ದದ್ದು ಇದ್ದಂತೆ ಅರಿತುಕೊಂಡಿರುವನೋ ಅವನು ಅಂಜಿಕೆಯಿಲ್ಲದೆ ಕಲ್ಪಿಸುವನು.

(ಭಾಷ್ಯ)

೧೦೮. ಏತೈಃ ಪ್ರಾಣಾದಿಭಿಃ ಆತ್ಮನಃ ಅಪೃಥಗ್ಭೂತೈಃ ಅಪೃಥಗ್ಭಾವೈಃ ಏಷಃ ಆತ್ಮಾ ರಜ್ಜುರಿವ ಸರ್ಪಾದಿವಿಕಲ್ಪನಾರೂಪೈಃ ಪೃಥಗೇವ ಇತಿ ಲಕ್ಷಿತಃ ಅಭಿಲಕ್ಷಿತಃ ನಿಶ್ಚಿತಃ ಮೂಢೈಃ ಇತ್ಯರ್ಥಃ । ವಿವೇಕಿನಾಂ ತು ರಜ್ಜ್ವಾಮಿವ ಕಲ್ಪಿತಾಃ ಸರ್ಪಾದಯಃ ನ ಆತ್ಮವ್ಯತಿರೇಕೇಣ ಪ್ರಾಣಾದಯಃ ಸನ್ತಿ ಇತ್ಯಭಿಪ್ರಾಯಃ । "ಇದಂ ಸರ್ವಂ ಯದಯಮಾತ್ಮಾ" (ಬೃ. ೨-೪-೬) ಇತಿ ಶ್ರುತೇಃ । ಏವಮ್ ಆತ್ಮವ್ಯತಿರೇಕೇಣ ಅಸತ್ತ್ವಂ ರಜ್ಜುಸರ್ಪವತ್

---

1. ತತ್ತ್ವವನ್ನು ತಿಳಿದು ಅದರಂತೆ ನಡೆಯುತ್ತ ಮಿಕ್ಕವರನ್ನೂ ಅದಕ್ಕೆ ಒಲಿಸುವವನು.

2. ತತ್ತ್ವವನ್ನು ಸರಿಯಾಗಿ ತಿಳಿದುಕೊಂಡು ಇತರರಿಗೆ ತಿಳಿಸಬಲ್ಲವನು.

3. ಕಲ್ಪನೆಗಳು ಎರಡು ಬಗೆ, ಇಲ್ಲದ್ದನ್ನು ಇದೆ ಎಂದು ಕಲ್ಪಿಸುವದೊಂದು, ಆ ವಸ್ತುವಿಗೂ ತನಗೂ ನಿಜವಾಗಿ ಇಲ್ಲದ ಸಂಬಂಧವನ್ನು ಕಲ್ಪಿಸುವದು ಒಂದು.

4. ಮತ್ತೊಂದು ಅಭಿಪ್ರಾಯವು ಸರಿಯಾಗಿರಬಹುದೆಂದು ಭಾವಿಸದಂತೆ ಮಾಡುತ್ತದೆ.

5. ಇದೇ ಸರಿಯೆಂಬ ಭಾವವು ನಿಶ್ಚಿತವಾಗಿಬಿಡುತ್ತದೆ.

ಆತ್ಮನಿ ಕಲ್ಪಿತಾನಾಮ್ ; ಆತ್ಮಾನಂ ಚ ಕೇವಲಂ ನಿರ್ವಿಕಲ್ಪಂ ಯೋ ವೇದ ತತ್ತ್ವೇನ ಶ್ರುತಿತಃ ಯುಕ್ತಿತಶ್ಚ, ಸಃ ಅವಿಶಙ್ಕಿತಃ ವೇದಾರ್ಥಂ ವಿಭಾಗತಃ ಕಲ್ಪಯೇತ್ ಕಲ್ಪಯತಿ ಇತ್ಯರ್ಥಃ, 'ಇದಮ್ ಏವಂಪರಂ ವಾಕ್ಯಮ್,' 'ಅದೋಽನ್ಯಪರಮ್' ಇತಿ । ನ ಹಿ ಅನಧ್ಯಾತ್ಮವಿತ್ ವೇದಾನ್ ಜ್ಞಾತುಂ ಶಕ್ನೋತಿ ತತ್ತ್ವತಃ, "ನ ಹ್ಯನಧ್ಯಾತ್ಮವಿತ್ ಕಶ್ಚಿತ್ ಕ್ರಿಯಾಫಲಮುಪಾಶ್ನುತೇ" (ಮನು ೬-೮೨) ಇತಿ ಹಿ ಮಾನವಂ ವಚನಮ್ ॥

(ಭಾಷ್ಯಾರ್ಥ)

ಈ ಪ್ರಾಣನೇ ಮುಂತಾದ, ಆತ್ಮನಿಗಿಂತ ಬೇರೆಯಲ್ಲದ ಬೇರೆಯಾಗಿ ಇಲ್ಲದಿರುವ ಭಾವಗಳ ರೂಪದಿಂದ ಈ ಆತ್ಮನು ಹಗ್ಗವು ಹಾವು ಮುಂತಾದ ಕಲ್ಪನೆಯ ರೂಪಗಳಿಂದ ಹೇಗೆ (ಕಾಣುತ್ತಿರುವದೋ) ಹಾಗೆ (ನಿಜವಾಗಿ) ಬೇರೆಯಾಗಿಯೇ (ಇರುವನು) ಎಂದು ಮೂಢರಿಗೆ ಕಾಣುತ್ತಿರುವನು, ತೋರುತ್ತಿರುವನು. (ಹಾಗೆಂದು ಅವರು) ನಿಶ್ಚಯಿಸಿರುವರು ಎಂದರ್ಥ. ಆದರೆ ವಿವೇಕಿಗಳ (ಮತದಲ್ಲಿಯೋ)[1] ಎಂದರೆ ಹಗ್ಗದಲ್ಲಿ ಕಲ್ಪಿತವಾಗಿರುವ ಹಾವು ಮುಂತಾದವುಗಳಂತೆ, ಪ್ರಾಣಾದಿಗಳು (ತಮಗೆ ಆಧಾರವಾಗಿರುವ) ಆತ್ಮನನ್ನು ಬಿಟ್ಟು ಇರುವದಿಲ್ಲ ಎಂದು ಅಭಿಪ್ರಾಯ. "ಇದೆಲ್ಲವೂ ಈ ಆತ್ಮನೆಂಬವನೇ" (ವೃ. ೨-೪-೬) ಎಂಬ ಶ್ರುತಿ (ಇದಕ್ಕೆ) ಪ್ರಮಾಣವು. ಈ ರೀತಿಯಲ್ಲಿ ಆತ್ಮನಲ್ಲಿ ಕಲ್ಪಿತವಾದ (ಪ್ರಾಣಾದಿಗಳು) ಹಗ್ಗದ ಹಾವಿನಂತೆ ಆತ್ಮನನ್ನು ಬಿಟ್ಟು, ಇಲ್ಲವೆಂದೂ ಆತ್ಮನೊಬ್ಬನೇ ಯಾವ ವಿಕಲ್ಪವೂ ಇಲ್ಲದವನೆಂದೂ ಯಾವನು ಇದ್ದದ್ದು ಇದ್ದಂತೆ, ಶ್ರುತಿಯಿಂದಲೂ ಯುಕ್ತಿಯಿಂದಲೂ[2], ಅರಿತುಕೊಂಡಿರುವನೋ ಅವನು ವೇದಾರ್ಥವನ್ನು (ಯಾವ) ಅಂಜಿಕೆಯೂ ಇಲ್ಲದೆ "ಇದು ಇದರಲ್ಲಿ ತಾತ್ಪರ್ಯವುಳ್ಳ ವಾಕ್ಯವು, ಅದು ಮತ್ತೊಂದರಲ್ಲಿ ತಾತ್ಪರ್ಯವುಳ್ಳದ್ದು" ಎಂದು ವಿಂಗಡಿಸಿ ಕಲ್ಪಿಸಿಯಾನು, ಕಲ್ಪಿಸುತ್ತಾನೆ ಎಂದರ್ಥ. ಅಧ್ಯಾತ್ಮಜ್ಞಾನಿಯಲ್ಲದವನು ಯಾವನೂ ನಿಜವಾದ ವೇದಾರ್ಥವನ್ನು ಅರಿತುಕೊಳ್ಳಲಾರನಷ್ಟೆ. "ಅಧ್ಯಾತ್ಮಜ್ಞಾನಿಯಲ್ಲದವನು ಯಾವನೂ ಕ್ರಿಯೆಯ

1. ಪರಮಾರ್ಥವನ್ನು ಅಪರಮಾರ್ಥದಿಂದ ವಿಂಗಡಿಸಿಕೊಂಡಿರುವವರು ವಿವೇಕಿಗಳು.

2. ವಸ್ತುತಂತ್ರವಾದ ಜ್ಞಾನವಿಷಯದಲ್ಲಿ ಕರ್ಮದ ವಿಷಯಕ್ಕಿರುವಂತೆ ಬರಿಯ ಶ್ರುತಿಯೇ ಪ್ರಮಾಣವಲ್ಲ, ಅನುಭವತರ್ಕಾದಿಗಳೂ ಬೇಕಾಗುತ್ತದೆ. ಸೂ. ಭಾ. ೧-೧-೨.

ಫಲವನ್ನು ಪಡೆದುಕೊಳ್ಳುವದಿಲ್ಲ (ಮನು. ೬-೮೨) ಎಂದಲ್ಲವೆ, ಮನುವಿನ ವಚನವು[1] ?

## ದ್ವೈತಮಿಥ್ಯಾತ್ವಕ್ಕೆ ವೇದಾಂತಪ್ರಮಾಣ

(ಭಾಷ್ಯ)

೧೦೯. ಯದೇತತ್ ದ್ವೈತಸ್ಯ ಅಸತ್ತ್ವಮ್ ಉಕ್ತಂ ಯುಕ್ತಿತಃ, ತದೇತತ್ ವೇದಾನ್ತಪ್ರಮಾಣಾವಗತಮ್ ಇತ್ಯಾಹ-

(ಭಾಷ್ಯಾರ್ಥ)

ದ್ವೈತವು ಹುಸಿ ಎಂದು ಯುಕ್ತಿಯಿಂದ ಹೇಳಿದೆಯಷ್ಟೆ, ಆ ಇದು ವೇದಾಂತವೆಂಬ ಪ್ರಮಾಣದಿಂದ ನಿಶ್ಚಿತವಾದದ್ದು ಎಂದು ಹೇಳುತ್ತಾರೆ[2].

ಸ್ವಪ್ನಮಾಯೇ ಯಥಾ ದೃಷ್ಟೇ ಗನ್ಧರ್ವನಗರಂ ಯಥಾ ।
ತಥಾ ವಿಶ್ವಮಿದಂ ದೃಷ್ಟಂ ವೇದಾನ್ತೇಷು ವಿಚಕ್ಷಣೈಃ ॥೩೧॥

೩೧. ಕನಸುಮಾಯೆಗಳು ಹೇಗೆ ಕಂಡುಬಂದಿರುವವೋ, ಗಂಧರ್ವ ನಗರವು ಹೇಗೆ (ಕಂಡುಬಂದಿರುವದೋ), ಹಾಗೆ ಈ ವಿಶ್ವವು ವಿಚಕ್ಷಣರಿಗೆ ವೇದಾಂತಗಳಲ್ಲಿ ಕಂಡುಬಂದಿರುವದು.

(ಭಾಷ್ಯ)

೧೧೦. ಸ್ವಪ್ನಶ್ಚ ಮಾಯಾ ಚ ಸ್ವಪ್ನಮಾಯೇ ಅಸದ್ವಸ್ತ್ವಾತ್ಮಿಕೇ ಸತ್ಯೌ[3] ಸದ್ವಸ್ತ್ವಾತ್ಮಿಕೇ ಇವ ಲಕ್ಷ್ಯೇತೇ ಅವಿವೇಕಿಭಿಃ । ಯಥಾ ಚ ಪ್ರಸಾರಿತಪಣ್ಯಾಪಣ ಗೃಹಪ್ರಾಸಾದಸ್ತ್ರೀಪುಂಜನಪದ (?) ವ್ಯವಹಾರಾಕೀರ್ಣಮಿವ ಗನ್ಧರ್ವನಗರಂ ದೃಶ್ಯಮಾನಮೇವ ಸತ್ ಅಕಸ್ಮಾತ್ ಅಭಾವತಾಂ ಗತಂ ದೃಷ್ಟಮ್ । ಯಥಾ ಚ ಸ್ವಪ್ನಮಾಯೇ ದೃಷ್ಟೇ ಅಸದ್ರೂಪೇ । ತಥಾ ವಿಶ್ವಮಿದಂ ದ್ವೈತಂ ಸಮಸ್ತಮ್ ಅಸತ್ ದೃಷ್ಟಮ್ ಕ್ವ ಇತಿ ? ಆಹ-ವೇದಾನ್ತೇಷು 'ನೇಹ ನಾನಾಸ್ತಿ ಕಿಂಚನ" (ಕ. ೨-೧-೧೧), "ಇನ್ದ್ರೋ ಮಾಯಾಭಿಃ" (ಬೃ. ೨-೫-೧೯), "ಆತ್ಮೈವೇದಮಗ್ರ

---

1. ಕ್ರಿಯೆ ಎಂದರೆ ಶಾಸ್ತ್ರೋಕ್ತಕರ್ಮವು ; ಅದಕ್ಕೆ ಪರಮಫಲವು ಜ್ಞಾನವೇ.

2. ಹಿಂದೆ ಹೇಳಿದ ಯುಕ್ತಿಯ ಪ್ರಮಾಣಕ್ಕೆ ಬೆಂಬಲವಾಗಿ, ತಾರ್ಕಿಕರಂತೆ ಬರಿಯ ಉತ್ಪ್ರೇಕ್ಷೆಯಲ್ಲ-ಎಂದು ತಿಳಿಸಿದಂತೆ ಆಯಿತು. ಪೀಠಿಕೆಯನ್ನು ನೋಡಿ.

3. "ಅಸತ್ಯೌ" ಆ॥ "ಅಸತ್ಯೌ ಸತ್ಯೌ" ಕಾ॥ ಎಂಬವುಗಳಿಗಿಂತ ಈ ಮಾ॥ ಪಾಠವೇ ಮೇಲು.

ಆಸೀತ್'' (ಬೃ), 'ಬ್ರಹ್ಮ[1] ವಾ ಇದಮಗ್ರ ಆಸೀತ್'' (ಬೃ. ೧-೪-೧೦), ''ದ್ವಿತೀಯಾದ್ ವೈ ಭಯಂ ಭವತಿ'' (ಬೃ. ೧-೪-೨), ''ನ ತು ತದ್ದ್ವಿತೀಯಮಸ್ತಿ'' (ಬೃ. ೪-೩-೨೩), ''ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್'' (ಬೃ. ೪-೫-೧೫) ಇತ್ಯಾದಿಷು । ವಿಚಕ್ಷಣೈಃ ನಿಪುಣತರವಸ್ತುದರ್ಶಿಭಿಃ ಪಣ್ಡಿತೈಃ ಇತ್ಯರ್ಥಃ ।

''ತಮಃಶ್ವಭ್ರನಿಭಂ ದೃಷ್ಟ್ವಾ[2] ವರ್ಷಬುದ್ಬುದಸಂನಿಭಮ್ ।
ನಾಶಪ್ರಾಯಂ ಸುಖಾದ್ಹೀನಂ ನಾಶೋತ್ತರಮಭಾವಗಮ್ ॥''

(ಮೋ. ಧ. ೩೦೧-೬೦) ಇತಿ ವ್ಯಾಸಸ್ಮೃತೇಃ ॥

(ಭಾಷ್ಯಾರ್ಥ)

ಸ್ವಪ್ನಮಾಯೆಗಳು- ಕನಸೂ ಮಾಯೆಯೂ ಅಸತ್ತಾದ ವಸ್ತುವಿನ ಸ್ವರೂಪವುಳ್ಳವು ಗಳಾಗಿದ್ದರೂ ಸತ್ತಾದ ವಸ್ತುವಿನ ಸ್ವರೂಪವುಳ್ಳವುಗಳಂತೆಯೇ, ವಿವೇಕವಿಲ್ಲದವರಿಗೆ ತೋರುತ್ತಿರುವವು. ಹೇಗೆ ಮಾರುವ ಸಾಮಾನುಗಳನ್ನು ಒಡ್ಡಿದ ಅಂಗಡಿಗಳು, ಮನೆಗಳು, ಉಪ್ಪರಿಗೆಗಳು, ಹೆಂಗಸರು, ಗಂಡಸರು-(ಮುಂತಾದ) ಜನರ ವ್ಯವಹಾರದಿಂದ ಕಿಕ್ಕಿರಿದಿರುವಂತೆ ಗಂಧರ್ವನಗರವು ಕಾಣುತ್ತಿದ್ದು ಇದ್ದಕ್ಕಿದ್ದಹಾಗೆಯೇ ಇಲ್ಲವಾಗುವದು ಕಂಡಿದೆಯೋ, ಮತ್ತು ಹೇಗೆ ಕನಸುಮಾಯೆಗಳು ಅಸದ್ರೂಪವಾಗಿರುವದು ಕಂಡಿದೆಯೋ, ಹಾಗೆಯೇ ಈ ದ್ವೈತವೆಲ್ಲವೂ ಸಮಸ್ತವೂ ಅಸತ್ತೆಂದು ಕಂಡುಬರುತ್ತದೆ. ಎಲ್ಲಿ ? ಎಂದರೆ ಹೇಳುತ್ತಾರೆ : ''ಇಲ್ಲಿ ಒಂದಿಷ್ಟೂ ನಾನಾತ್ವವಿರುವದಿಲ್ಲ'' (ಕ. ೨-೧-೧೧) ''ಇಂದ್ರನು ಮಾಯೆಗಳಿಂದ (ಬಹುರೂಪನಾಗಿ ಕಾಣುತ್ತಾನೆ)'' (ಬೃ. ೨-೫-೧೯), ''ಇದು ಮೊದಲು ಆತ್ಮನೇ ಆಗಿತ್ತು'' (?) ''ಇದು ಮೊದಲು ಬ್ರಹ್ಮವೇ ಆಗಿತ್ತು'' (ಬೃ. ೧-೪-೨), ''ಆದರೆ ಆ ಎರಡನೆಯದು ಇರುವದಿಲ್ಲ'' (ಬೃ. ೪-೩-೨೩), ''ಆದರೆ ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಯಿತೋ'' (ಬೃ. ೪-೫-೧೫),-ಇವೇ ಮುಂತಾದ ವೇದಾಂತ (ವಚನ)ಗಳಲ್ಲಿ (ಕಂಡುಬಂದಿರುತ್ತದೆ). ವಿಚಕ್ಷಣರಿಗೆ ಎಂದರೆ ವಸ್ತುವನ್ನು ಬಹಳ ಚೆನ್ನಾಗಿ ನೋಡುವರಾದ ಪಂಡಿತರಿಗೆ ಎಂದರ್ಥ. ''ಕತ್ತಲೆಯಲ್ಲಿರುವ ಗುಂಡಿಯಂತಿರುವದೆಂದೂ ಮಳೆಯಿಂದ ನೀರುಗುಳ್ಳೆಯಂತಿರುವದೆಂದೂ ನಾಶಪ್ರಚುರವಾಗಿರುವದೆಂದೂ ಸುಖವಿಲ್ಲದ್ದೆಂದೂ ನಾಶವಾದ ಬಳಿಕ ಇಲ್ಲದ್ದೆಂದೂ ಕಂಡುಕೊಂಡು'' (ಮೋ. ಧ. ೩೦೧-೬೦) ಎಂಬ ವ್ಯಾಸಸ್ಮೃತಿಯು (ಇದಕ್ಕೆ ಪ್ರಮಾಣವು).

1. ''ಬ್ರಹ್ಮೈವೇದಮಗ್ರ ಆಸೀತ್'' ಎಂಬ ಪಾಠವು ತಪ್ಪೆಂದು ತೋರುತ್ತದೆ.
2. ''ದೃಷ್ಟಂ'' ಎಂಬುದು 'ದೃಷ್ಟ್ವಾ'' ಎಂಬುದಕ್ಕೆ ಬದಲು ತಪ್ಪಾಗಿ ಬಿದ್ದಿದೆ.

## ವ್ಯವಹಾರವು ಯಾವದೂ ಪರಮಾರ್ಥವಲ್ಲ

(ಭಾಷ್ಯ)

೧೧೧. ಪ್ರಕರಣಾರ್ಥೋಪಸಂಹಾರಾರ್ಥೋಽಯಂ ಶ್ಲೋಕಃ । ಯದಾ ವಿತಥಮ್ ದ್ವೈತಮ್, ಆತ್ಮೈವೈಕಃ ಪರಮಾರ್ಥತಃ ಸನ್ ತದಾ ಇದಂ ನಿಷ್ಪನ್ನಂ ಭವತಿ ಸರ್ವೋಽಯಂ ಲೌಕಿಕೋ ವೈದಿಕಶ್ಚ ವ್ಯವಹಾರಃ ಅವಿದ್ಯಾವಿಷಯ ಏವ ಇತಿ । ತದಾ-

(ಭಾಷ್ಯಾರ್ಥ)

ಈ ಪ್ರಕರಣದ ಅರ್ಥವನ್ನು ಉಪಸಂಹಾರಮಾಡುವದಕ್ಕೆ ಈ ಶ್ಲೋಕವು (ಬಂದಿರುತ್ತದೆ). ಯಾವಾಗ ದ್ವೈತವು ವಿತಥವೆಂತಲೂ ಆತ್ಮನೊಬ್ಬನೇ ಪರಮಾರ್ಥವಾಗಿ ಇರುವವನೆಂತಲೂ (ಆಯಿತೋ) ಆಗ ಇದು ಸಿದ್ಧವಾಗುತ್ತದೆ : (ಏನೆಂದರೆ) ಈ ಲೌಕಿಕವೈದಿಕವ್ಯವಹಾರವೆಲ್ಲವೂ ಅವಿದ್ಯಾವಿಷಯವೇ[1]. ಆಗ :-

ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥೩೨॥

೩೨. ನಿರೋಧವಿಲ್ಲ, ಉತ್ಪತ್ತಿಯೂ ಇಲ್ಲ ; ಬದ್ಧನಿಲ್ಲ, ಸಾಧಕನಿಲ್ಲ ; ಮುಮುಕ್ಷುವಿಲ್ಲ, ಮುಕ್ತನೇ ಇಲ್ಲ. ಹೀಗೆಂಬುದು ಪರಮಾರ್ಥವು.

(ಭಾಷ್ಯ)

೧೧೨. ನ ನಿರೋಧಃ । ನಿರೋಧನಂ ನಿರೋಧಃ ಪ್ರಲಯಃ । ಉತ್ಪತ್ತಿಃ ಜನನಮ್ । ಬದ್ಧಃ ಸಂಸಾರೀ ಜೀವಃ । ಸಾಧಕಃ ಸಾಧನವಾನ್[2] ಮೋಕ್ಷಸ್ಯ । ಮುಮುಕ್ಷುಃ ಮೋಚನಾರ್ಥೀ । ಮುಕ್ತಃ ವಿಮುಕ್ತಬನ್ಧಃ । ಉತ್ಪತ್ತಿಪ್ರಲಯಯೋಃ ಅಭಾವಾತ್ ಬದ್ಧಾದಯೋ ನ ಸನ್ತಿ ಇತ್ಯೇಷಾ ಪರಮಾರ್ಥತಾ ॥

(ಭಾಷ್ಯಾರ್ಥ)

ನಿರೋಧವಿಲ್ಲ. ನಿರೋಧವೆಂದರೆ ನಾಶವಾಗತಕ್ಕದ್ದು, ಪ್ರಲಯವು, ಉತ್ಪತ್ತಿ ಎಂದರೆ ಹುಟ್ಟುವದು. ಬದ್ಧನು ಎಂದರೆ ಸಂಸಾರಿಯಾದ ಜೀವನು. ಸಾಧಕನು ಎಂದರೆ ಮೋಕ್ಷಕ್ಕೆ (ಬೇಕಾದ) ಸಾಧನಗಳುಳ್ಳವನು. ಮುಮುಕ್ಷು ಎಂದರೆ ಬಿಡುಗಡೆಯನ್ನು ಬಯಸುವವನು. ಮುಕ್ತನು ಎಂದರೆ ಬಂಧದಿಂದ ಬಿಡುಗಡೆಯನ್ನು ಹೊಂದಿರುವ

---

1. ವ್ಯವಹಾರವೆಲ್ಲವೂ ಅವಿದ್ಯಾವಿಷಯವು, ಅವಿದ್ಯೆಯಿಂದ (ತಪ್ಪುತಿಳಿವಳಿಕೆಯಿಂದ) ತೋರತಕ್ಕದ್ದು-ಎಂಬುದನ್ನು ಗೀ. ಭಾ. ೨-೬೯, ಸೂ. ಭಾ. ಉಪೋದ್ಘಾತ-ಮುಂತಾದ ಕಡೆಗಳಲ್ಲಿ ಭಾಷ್ಯಕಾರರು ಮತ್ತೆ ಮತ್ತೆ ಪ್ರತಿಪಾದಿಸಿರುತ್ತಾರೆ. 2. "ಸಾಧನಾತ್" ಆ॥

ವನು. ಉತ್ಪತ್ತಿಪ್ರಲಯಗಳು ಇಲ್ಲವಾದ್ದರಿಂದ ಬದ್ಧಾದಿಗಳು ಇಲ್ಲ-ಎಂಬಿದು ಪರಮಾರ್ಥವು.

## ಹುಟ್ಟುಹೊಂದುಗಳು ಇಲ್ಲವೆಂಬುದು ಹೇಗೆ ?

(ಭಾಷ್ಯ)

೧೧೩. ಕಥಮ್ ಉತ್ಪತ್ತಿಪ್ರಲಯಯೋಃ ಅಭಾವಃ ಇತಿ ? ಉಚ್ಯತೇ ದ್ವೈತಸ್ಯ ಅಸತ್ತ್ವಾತ್ । "ಯತ್ರ ಹಿ ದ್ವೈತಮಿವ ಭವತಿ" (ಬೃ. ೨-೪-೧೪), "ಯ ಇಹ ನಾನೇವ ಪಶ್ಯತಿ" (ಕ. ೨-೧-೧೦), "ಆತ್ಮೈವೇದಂ ಸರ್ವಮ್" (ಛಾಂ. ೭-೨೫-೨), "ಬ್ರಹ್ಮೈವೇದಂ ಸರ್ವಮ್" (?)[1], "ಏಕಮೇವಾದ್ವಿತೀಯಮ್" (ಛಾಂ. ೬-೨-೧), "ಇದಂ ಸರ್ವಂ ಯದಯಮಾತ್ಮಾ" (ಬೃ. ೨-೪-೬) ಇತ್ಯಾದಿನಾನಾಶ್ರುತಿಭ್ಯೋ ದ್ವೈತಸ್ಯ ಅಸತ್ತ್ವಂ ಸಿದ್ಧಮ್ । ಸತೋ ಹಿ ಉತ್ಪತ್ತಿಃ ಪ್ರಲಯೋ ವಾ ಸ್ಯಾತ್ ನ ಅಸತಃ ಶಶವಿಷಾಣಾದೇಃ । ನಾಪಿ ಅದ್ವೈತಮ್ ಉತ್ಪದ್ಯತೇ ಲೀಯತೇ ವಾ । ಅದ್ವಯಂ ಚ ಉತ್ಪತ್ತಿಪ್ರಲಯವಚ್ಚ ಇತಿ ವಿಪ್ರತಿಷಿದ್ಧಮ್ । ಯಸ್ತು ಪುನಃ ದ್ವೈತಸಂವ್ಯವಹಾರಃ ಸಃ ರಜ್ಜುಸರ್ಪವತ್ ಆತ್ಮನಿ ಪ್ರಾಣಾದಿಲಕ್ಷಣಃ ಕಲ್ಪಿತಃ ಇತ್ಯುಕ್ತಮ್ । ನ ಹಿ ಮನೋವಿಕಲ್ಪನಾಯಾಃ ರಜ್ಜುಸರ್ಪಾದಿಲಕ್ಷಣಾಯಾಃ ರಜ್ಜ್ವಾದೇಃ ಪ್ರಲಯಃ ಉತ್ಪತ್ತಿರ್ವಾ । ನ ಚ ಮನಸಿ ರಜ್ಜುಸರ್ಪಸ್ಯ ಉತ್ಪತ್ತಿಃ ಪ್ರಲಯೋ ವಾ । ನ ಚ ಉಭಯತೋ ವಾ । ತಥಾ ಮಾನಸತ್ವಾವಿಶೇಷಾತ್ ದ್ವೈತಸ್ಯ । ನ ಹಿ ನಿಯತೇ ಮನಸಿ ಸುಷುಪ್ತೇ ವಾ ದ್ವೈತಂ ಕ್ವಚಿತ್ । ಅತಃ ಮನೋವಿಕಲ್ಪನಾಮಾತ್ರಂ ದ್ವೈತಮ್ ಇತಿ ಸಿದ್ಧಮ್ । ತಸ್ಮಾತ್ ಸೂಕ್ತಂ ದ್ವೈತಸ್ಯ ಅಸತ್ತ್ವಾತ್ ನಿರೋಧಾದ್ಯಭಾವಃ ಪರಮಾರ್ಥತಾ ಇತಿ ॥

(ಭಾಷ್ಯಾರ್ಥ)

(ಪ್ರಶ್ನೆ) :- ಉತ್ಪತ್ತಿಪ್ರಲಯಗಳು ಇಲ್ಲವೆಂಬುದು ಹೇಗೆ ?

(ಉತ್ತರ) :- ಹೇಳುತ್ತೇವೆ. ಏಕೆಂದರೆ ದ್ವೈತವು ಅಸತ್ತಾಗಿರುತ್ತದೆ. "ಎಲ್ಲಿ ದ್ವೈತವಿದ್ದಂತೆ ಇರುವದೋ" (ಬೃ. ೨-೪-೧೪), "ಯಾವನು ಇಲ್ಲಿ ನಾನಾತ್ವ(ವಿರು)ವಂತೆ ಕಾಣುತ್ತಾನೋ" (ಕ. ೨-೧-೧೦), "ಇದೆಲ್ಲವೂ ಆತ್ಮನೇ" (ಛಾಂ. ೭-೨೫-

---

1. ಈ ಶ್ರುತಿ ಎಲ್ಲಿಯದೋ ತಿಳಿಯದು. ಮುಂಡಕದಲ್ಲಿ "ಬ್ರಹ್ಮೈವೇದಂ ವಿಶ್ವಮ್" ಎಂದಿದೆ. ತೈ. ಭಾ. ೧-೧೧ (ಭಾ. ಭಾ. ೭೭), ಸೂ. ಭಾ. ೧-೪-೨೨, ೨-೧-೧೪, ಗೀ. ಭಾ. ೧೩-೧೪ ರಲ್ಲಿಯೂ ಇದನ್ನು ಉದಾಹರಿಸಿದೆ.

೨), ''ಇದೆಲ್ಲವೂ ಬ್ರಹ್ಮವೇ'' (?), ''(ತನ)ಗೆರಡನೆಯದಿಲ್ಲದ ಒಂದೇ'' (ಛಾಂ. ೬-೨-೧), ''ಇದೆಲ್ಲವೂ ಈ ಆತ್ಮನೆಂಬುದೇ'' (ಬೃ. ೨-೪-೬) ಮುಂತಾದ ನಾನಾಶ್ರುತಿಗಳಿಂದ ದ್ವೈತವು ಅಸತ್ತೆಂಬುದು ಸಿದ್ಧವಾಗಿರುತ್ತದೆ. ಸತ್ತಾ(ಗಿರುವದ)ಕ್ಕೆ, ಉತ್ಪತ್ತಿಯಾಗಲಿ ಪ್ರಲಯವಾಗಲಿ ಆದೀತೇ ಹೊರತು ಅಸತ್ತಾಗಿರುವ ಮೊಲದ ಕೊಂಬು ಮುಂತಾದದ್ದಕ್ಕೆ[1] (ಆಗಲಾರದು). ಅದ್ವೈತವೂ ಹುಟ್ಟುವದಿಲ್ಲ, ನಾಶವಾಗುವದೂ ಇಲ್ಲ. (ತನಗೆ)ರಡನೆಯದಿಲ್ಲದ್ದೂ ಆಗಿದೆ, ಉತ್ಪತ್ತಿಪ್ರಲಯಗಳಿರುವದೂ ಆಗಿದೆ-ಎಂಬುದು (ಒಂದಕ್ಕೊಂದು) ವಿರುದ್ಧವಾದದ್ದು[2]. ಇನ್ನು ಪ್ರಾಣಾದಿರೂಪದ ದ್ವೈತದ ಸಂವ್ಯವಹಾರವುಂಟಲ್ಲ, ಅದು ಹಗ್ಗದ ಹಾವಿನಂತೆ ಆತ್ಮನಲ್ಲಿ ಕಲ್ಪಿತವಾಗಿರುತ್ತದೆ-ಎಂದು ಹಿಂದೆ ಹೇಳಿದೆ. ಹಗ್ಗದ ಹಾವೇ ಮುಂತಾದ ಮನಸ್ಸಿನ ವಿಕಲ್ಪವು[3] ಹಗ್ಗದಲ್ಲಿ ಅಡಗುವದೂ ಇಲ್ಲ, ಹುಟ್ಟುವದೂ ಇಲ್ಲ. ಅಲ್ಲವೆ ? ಹಗ್ಗದ ಹಾವಿಗೆ ಮನಸ್ಸಿನಲ್ಲಿಯೂ ಹುಟ್ಟುವದೆಂಬುದಾಗಲಿ ನಾಶವಾಗುವದೆಂಬುದಾಗಲಿ ಇರುವದಿಲ್ಲ. ಇವೆರಡರಿಂದಲೂ (ಹುಟ್ಟುಹೊಂದುಗಳು ಆಗುವ)ದಿಲ್ಲ. ಅದರಂತೆಯೇ ದ್ವೈತವು ಮಾನಸವಾಗಿದೆ ಎಂಬುದು ಸಮಾನವಾಗಿರುವದರಿಂದ (ಅದಕ್ಕೂ) ಹುಟ್ಟುಹೊಂದುಗಳಿಲ್ಲ. ಮನಸ್ಸನ್ನು ನಿರೋಧಮಾಡಿದಾಗಲಾಗಲಿ ತನ್ನಿದ್ರೆಯಲ್ಲಾಗಲಿ ದ್ವೈತವು ಕಾಣಬರುವದೇ ಇಲ್ಲ. ಅಲ್ಲವೆ ? ಆದ್ದರಿಂದ ದ್ವೈತವು ಮನಸ್ಸಿನ ವಿಕಲ್ಪನೆಯೇ ಎಂದು ಸಿದ್ಧವಾಯಿತು[4]. ಆದ್ದರಿಂದ ದ್ವೈತವು ಅಸತ್ತಾಗಿರುವದರಿಂದ ನಿರೋಧವೇ ಮುಂತಾದದ್ದು ಇಲ್ಲವೆಂಬುದು ಪರಮಾರ್ಥವು[5]-ಎಂದು ಹೇಳಿದ್ದು ಸರಿಯಾಗಿದೆ.

1. ಮೊಲದ ಕೊಂಬು ಮುಂತಾದದ್ದು ಇಲ್ಲವೆಂಬುದು ನಿರ್ವಿವಾದವು ; ಅದಕ್ಕೆ ಹುಟ್ಟುಹೊಂದುಗಳಿಲ್ಲವೆಂಬುದೂ ನಿರ್ವಿವಾದವು.

2. ಹುಟ್ಟುಹೊಂದುಗಳು ಸಾವಯವವಾದ ವಸ್ತುವಿಗೆ ತನ್ನಿಂದಲೋ ಮತ್ತೊಂದರಿಂದಲೋ ಆಗಬಹುದು ; ಅದ್ವಿತೀಯತತ್ತ್ವಕ್ಕೆ ಇವೆರಡೂ ಇಲ್ಲ.

3. ಹಗ್ಗದ ಹಾವು ಅವಿದ್ಯಾಶಕ್ತಿಯ ಪರಿಣಾಮವು ಎಂಬುದು ಭಾಷ್ಯಸಮ್ಮತವಲ್ಲವೆಂಬುದು ಇಲ್ಲಿ ಸ್ಪಷ್ಟವಾಗಿದೆ.

4. ದ್ವೈತವು ಮನೋವಿಕಲ್ಪನೆ ಎಂದು ಹೇಳಿದ ಮಾತ್ರದಿಂದ ವಿಜ್ಞಾನವಾದವಾಯಿತೆಂದು ಶಂಕಿಸಬಾರದು ; ಕ್ಷಣಿಕವಿಜ್ಞಾನವೇ ಮುಂತಾದವನ್ನು ಒಪ್ಪದೆ, ಮನಸ್ಸು ಮತ್ತು ಅದರಿಂದ ಕಲ್ಪಿತವಾದ ದ್ವೈತ-ಎರಡಕ್ಕೂ ಬೇರೆಯಾದ ಆತ್ಮನನ್ನು ಒಪ್ಪುವ ವೇದಾಂತವು ವಿಜ್ಞಾನವಾದವಲ್ಲ.

5. ದ್ವೈತಾಭಾವವು ಪರಮಾರ್ಥ-ಎಂದರೆ ಆತ್ಮನೊಬ್ಬನೇ ಸತ್ಯ ಎಂದರ್ಥ.

## ದ್ವೈತವು ಅಸತ್ತಾದರೂ ಶೂನ್ಯವಾದವು ಸಿದ್ಧಿಸುವದಿಲ್ಲ

(ಭಾಷ್ಯ)

೧೧೪. ಯದ್ಯೇವಂ ದ್ವೈತಾಭಾವೇ ಶಾಸ್ತ್ರವ್ಯಾಪಾರಃ, ನಾದ್ವೈತೇ । ವಿರೋಧಾತ್ । ತಥಾ ಚ ಸತಿ ಅದ್ವೈತಸ್ಯ ವಸ್ತುತ್ವೇ ಪ್ರಮಾಣಾಭಾವಾತ್ ಶೂನ್ಯವಾದ ಪ್ರಸಙ್ಗಃ । ದ್ವೈತಸ್ಯ ಚ ಅಭಾವಾತ್ । ನ । ರಜ್ಜುಸರ್ಪಾದಿವಿಕಲ್ಪನಾಯಾಃ ನಿರಾಸ್ಪದತ್ವಾನುಪಪತ್ತಿಃ[1] ಇತಿ ಪ್ರತ್ಯುಕ್ತಮೇತತ್ ಕಥಮ್ ಉಚ್ಚೀವಯಸೀತಿ ? ಆಹ-ರಜ್ಜುರಪಿ ಸರ್ಪವಿಕಲ್ಪಸ್ಯ ಆಸ್ಪದಭೂತಾ ವಿಕಲ್ಪಿತೈವ[2] ಇತಿ ದೃಷ್ಟಾಂತಾನುಪಪತ್ತಿಃ । ನ । ವಿಕಲ್ಪನಾಕ್ಷಯೇ ಅವಿಕಲ್ಪಿತಸ್ಯ ಅವಿಕಲ್ಪಿತತ್ವಾದೇವ ಸತ್ತ್ವೋಪಪತ್ತೇಃ । ರಜ್ಜು ಸರ್ಪವತ್ ಅಸತ್ತ್ವಮ್ ಇತಿ ಚೇತ್ । ನ । ಏಕಾನ್ತೇನ ಅವಿಕಲ್ಪಿತತ್ವಾತ್, ಅವಿಕಲ್ಪಿತರಜ್ಜ್ವಂಶವತ್ ಪ್ರಾಕ್ ಸರ್ಪಾಭಾವವಿಜ್ಞಾನಾತ್ । ವಿಕಲ್ಪಯಿತುಶ್ಚ ಪ್ರಾಗ್ವಿಕಲ್ಪನೋತ್ಪತ್ತೇಃ ಸಿದ್ಧತ್ವಾಭ್ಯುಪಗಮಾತ್[3] ಅಸತ್ತ್ವಾನುಪಪತ್ತಿಃ ॥

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ದ್ವೈತವು ಇಲ್ಲವೆಂಬುದನ್ನು (ತಿಳಿಸುವ)ದರಲ್ಲಿ ಶಾಸ್ತ್ರವು ಕೆಲಸ(ಮಾಡುವದೇ) ಹೊರತು ಅದ್ವೈತ(ವನ್ನು ತಿಳಿಸುವದರ)ಲ್ಲಲ್ಲ. ಏಕೆಂದರೆ (ಅದ್ವೈತವನ್ನು ತಿಳಿಸುವದೆಂದರೆ) ವಿರೋಧವಾಗುತ್ತದೆ[4]. ಹಾಗಾದಮೇಲೆ ಅದ್ವೈತವು (ನಿಜವಾಗಿ) ಇರುವದೆಂಬುದಕ್ಕೆ ಪ್ರಮಾಣವಿಲ್ಲದ್ದರಿಂದಲೂ ದ್ವೈತವೂ ಇಲ್ಲದ್ದರಿಂದಲೂ ಶೂನ್ಯವಾದವು ಬಂದೊದಗುತ್ತದೆ.

(ಸಮಾಧಾನ) :- ಹಾಗಲ್ಲ. ಹಗ್ಗದ ಹಾವು ಮುಂತಾದ ವಿಕಲ್ಪನೆಗೆ ಆಧಾರವು ಇಲ್ಲವೆಂಬುದು ಯುಕ್ತವಾಗುವದಿಲ್ಲ ಎಂದು ಒಂದೆಯೇ ಇದನ್ನು ತಿರಸ್ಕರಿಸಿದ್ದಾಗಿದೆಯಲ್ಲ[5] ! (ಹೀಗಿರುವಲ್ಲಿ ಮತ್ತೆ) ಹೇಗೆ ಇದನ್ನು ಬದುಕಿಸುವೆ ?

---

1. 'ನಿರಾಸ್ಪದತ್ವೇ ಅನುಪಪತ್ತಿಃ' ಪಾ॥ ; "ರಜ್ಜುವತ್ ಸರ್ಪಾದಿ" ಎಂಬ ಪಾ॥ ಪಾಠವು ಸರಿಯಲ್ಲ.

2. 'ಕಲ್ಪಿತೈವ' ಪಾ॥ ಕಾ॥

3. "ಸಿದ್ಧತ್ವಾಭ್ಯುಪಗಮಾದೇವ" ಪಾ॥ ಕಾ॥

4. ಅದ್ವೈತದಲ್ಲಿ ಹೇಳುವ ಶಾಸ್ತ್ರ, ಹೇಳಲ್ಪಡುವ ವಿಷಯ-ಎಂಬ ದ್ವೈತವಿದೆ ಎಂಬುದು ವಿರೋಧವು.

5. ಉಪನಿಷತ್ತಿನ ಎರಡನೆಯ ಮಂತ್ರದ ಭಾಷ್ಯ (ಭಾ ಭಾ. ೩೫)ದಲ್ಲಿ ಇದನ್ನು ಹೇಳಿದೆ.

(ಆಕ್ಷೇಪ) :- (ಆಕ್ಷೇಪಕನು) ಹೇಳುತ್ತಾನೇನೆಂದರೆ ಹಾವೆಂಬ ವಿಕಲ್ಪಕ್ಕೆ ಆಧಾರ(ವಾಗಿರುವ) ಹಗ್ಗವುಕೂಡ ವಿಕಲ್ಪಿತವಾಗಿಯೇ ಇರುತ್ತದೆ ; ಆದ್ದರಿಂದ (ಅದ್ವೈತವು ಸತ್ಯವಾಗಿರುವದೆಂಬುದಕ್ಕೆ ಅದು) ದೃಷ್ಟಾಂತವೆಂಬುದು ಹೊಂದುವದಿಲ್ಲ[1].

(ಸಮಾಧಾನ) :- ಹಾಗಲ್ಲ. ಏಕೆಂದರೆ ವಿಕಲ್ಪನೆಯು ಹೋದರೆ ಅವಿಕಲ್ಪಿತವಾದದ್ದು ಅವಿಕಲ್ಪಿತವಾಗಿರುವದರಿಂದಲೇ (ಅದು ನಿಜವಾಗಿ) ಇರುವದೆಂಬುದು[2] ಯುಕ್ತವಾಗಿರುತ್ತದೆ.

(ಆಕ್ಷೇಪ) :- (ಅದೂ) ಹಗ್ಗದ ಹಾವಿನಂತೆ ಅಸತ್ತೇ (ಆಗಲಿ) !

(ಪರಿಹಾರ) :- ಹಾಗಲ್ಲ. ಏಕೆಂದರೆ (ಅದು) ನಿಯಮವಾಗಿ ಅವಿಕಲ್ಪಿತವಾಗಿಯೇ ಇದೆ[3]. ಇದು ಹಾವಲ್ಲವೆಂಬ ಅರಿವು ಉಂಟಾಗುವ ಮುಂಚೇ ಇರುವ ಅವಿಕಲ್ಪಿತವಾದ ಹಗ್ಗದ ಅಂಶದಂತೆಯೇ[4] (ಅವಿಕಲ್ಪಿತವಾಗಿದೆ). ವಿಕಲ್ಪನೆಯು ಉಂಟಾಗುವ ಮುಂಚೆ ವಿಕಲ್ಪನೆಮಾಡುವವನು ಇರುತ್ತಾನೆಂದು (ನೀವೂ) ಒಪ್ಪುವದರಿಂದಲೂ (ಅದು) ಅಸತ್ತೆಂಬುದು ಸರಿಯಾಗುವದಿಲ್ಲ[5].

## ಶಾಸ್ತ್ರವು ದ್ವೈತದ ಅರಿವನ್ನು ಹೇಗೆ ಬಾಧಿಸುತ್ತದೆ ?

(ಭಾಷ್ಯ)

೧೧೫. ಕಥಂ ಪುನಃ ಸ್ವರೂಪೇ ವ್ಯಾಪಾರಾಭಾವೇ ಶಾಸ್ತ್ರಸ್ಯ ದ್ವೈತವಿಜ್ಞಾನ ನಿವರ್ತಕತ್ವಮ್ ? ನೈಷ ದೋಷಃ । ರಜ್ಜ್ವಾದಿ ಸರ್ಪಾದಿವತ್ ಆತ್ಮನಿ ದ್ವೈತಸ್ಯ

1. ಹಾವು ಹೇಗೆ ಕಲ್ಪಿತವೋ ಹಗ್ಗವೂ ಹಾಗೆಯೇ ಕಲ್ಪಿತವೆಂದು ನೀವೂ ಒಪ್ಪುತ್ತೀರಲ್ಲವೆ ? ಆಗ ಕಲ್ಪಿತವಲ್ಲದ ದೃಷ್ಟಾಂತವೆಲ್ಲಿದೆ ?-ಎಂದು ಆಕ್ಷೇಪ.

2. ಹಗ್ಗ, ಹಾವು-ಮುಂತಾದವುಗಳಲ್ಲಿಲ್ಲ, 'ಇದು', 'ಇರವು'-ಎಂಬುದು ಸೇರಿಕೊಂಡೇ ಇರುತ್ತದೆ. 'ಇರವು' ಅವಿಕಲ್ಪಿತವಾದ ಅಂಶವಾಗಬಹುದು ; ಅದನ್ನು ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು-ಎಂದು ಭಾವ.

3. ಅದ್ವೈತವೂ ಅಸತ್ತೇ, ಸತ್ಯವಾಗಿ ತೋರಿದ ಹಗ್ಗದ ಹಾವಿನಂತೆ-ಎಂದೇಕೆ ಯುಕ್ತಿಯನ್ನು ಮಾಡಬಾರದು ?-ಎಂಬ ಆಕ್ಷೇಪಕ್ಕೆ ಉತ್ತರವಿದು.

4. ಒಂದು ಸಲ ಸತ್ಯವೆಂದು ತೋರಿ, ಆ ಬಳಿಕ ಹಾಗಲ್ಲವೆಂದು ತೋರಿದರೆ ಅಸತ್ಯವೆನ್ನಬಹುದು. ಆದರೆ ಹಗ್ಗದಲ್ಲಿ ತೋರುವ ಇರವಿನಂತೆ ಮೊದಲೂ ಆಮೇಲೂ ಒಂದೇ ರೂಪದಿಂದ ಇರುವದು ಹಾಗಾಗಲಾರದು-ಎಂದರ್ಥ.

5. ಎಚ್ಚರದಲ್ಲಿ ತೋರುವ ಹಗ್ಗದ ಇರವಿನ ಅಂಶವು ಕನಸಿನಲ್ಲಿ ಕಾಣುವದಿಲ್ಲವಾದರೂ ವಿಕಲ್ಪಿಸುವ ನಾನು ಎಂಬ ಅಂಶವು ಭ್ರಾಂತಿಕಾಲದಲ್ಲಿಯೂ ಬಾಧೆಯಕಾಲದಲ್ಲಿಯೂ ಒಂದೇ ಆಗಿರುತ್ತದೆ ಎಂಬುದು ನಿರ್ವಿವಾದ.

ಅವಿದ್ಯಾಧ್ಯಸ್ತತ್ವಾತ್ । ಕಥಮ್ ? ಸುಖ್ಯಹಮ್, ದುಃಖೀ, ಮೂಢಃ, ಜಾತಃ, ಮೃತಃ, ಜೀರ್ಣಃ, ದೇಹವಾನ್, ಪಶ್ಯಾಮಿ, ವ್ಯಕ್ತಃ, ಅವ್ಯಕ್ತಃ[1], ಕರ್ತಾ, ಫಲೀ, ಸಂಯುಕ್ತಃ, ವಿಯುಕ್ತಃ, ಕ್ಷೀಣಃ, ವೃದ್ಧಃ, ಅಹಮ್, ಮಮ ಏತೇ ಇತ್ಯೇವಮಾದಯಃ ಸರ್ವೇ ಆತ್ಮನಿ ಅಧ್ಯಾರೋಪ್ಯನ್ತೇ । ಆತ್ಮಾ ಏತೇಷು ಅನುಗತಃ । ಸರ್ವತ್ರ ಅವ್ಯಭಿಚಾರಾತ್ । ಯಥಾ ಸರ್ಪಧಾರಾದಿಭೇದೇಷು ರಜ್ಜುಃ । ಯದಾ ಚ ಏವಂ ವಿಶೇಷ್ಯಸ್ವರೂಪ ಪ್ರತ್ಯಯಸ್ಯ ಸಿದ್ಧತ್ವಾತ್ ನ ಕರ್ತವ್ಯತ್ವಂ ಶಾಸ್ತ್ರೇಣ । ಅಕೃತಕರ್ತೃ ಚ ಶಾಸ್ತ್ರಮ್ । ಕೃತಾನುಕಾರಿತ್ವೇ ಅಪ್ರಮಾಣಮ್ । ಯತಃ ಅವಿದ್ಯಾರೋಪಿತಸುಖಿತ್ವಾದಿವಿಶೇಷಪ್ರತಿ ಬನ್ಧಾದೇವ ಆತ್ಮನಃ ಸ್ವರೂಪೇಣ ಅನವಸ್ಥಾನಮ್ । ಸ್ವರೂಪಾವಸ್ಥಾನಂ ಚ ಶ್ರೇಯಃ ಇತಿ ಸುಖಿತ್ವಾದಿನಿವರ್ತಕಂ ಶಾಸ್ತ್ರಮ್ ಆತ್ಮನಿ ಅಸುಖಿತ್ವಾದಿಪ್ರತ್ಯಯಕರಣೇನ ನೇತಿನೇತ್ಯಸ್ಥೂಲಾದಿವಾಕ್ಯೈಃ । ಆತ್ಮಸ್ವರೂಪವತ್ ಅಸುಖಿತ್ವಾದಿರಪಿ ಸುಖಿತ್ವಾದಿ ಭೇದೇಷು ನಾನುವೃತ್ತೋಽಸ್ತಿ ಧರ್ಮಃ । ಯದಿ ಅನುವೃತ್ತಃ ಸ್ಯಾತ್ ನಾಧ್ಯಾರೋಪ್ಯೇತ[2] ಸುಖಿತ್ವಾದಿಲಕ್ಷಣೋ ವಿಶೇಷಃ । ಯಥಾ ಉಷ್ಣತ್ವಗುಣವಿಶೇಷವತಿ ಅಗ್ನೌ ಶೀತತಾ । ತಸ್ಮಾತ್ ನಿರ್ವಿಶೇಷೇ ಏವ ಆತ್ಮನಿ ಸುಖಿತ್ವಾದಯೋ ವಿಶೇಷಾಃ ಕಲ್ಪಿತಾಃ । ಯತ್ತು ಅಸುಖಿತ್ವಾದಿಶಾಸ್ತ್ರಮ್ ಆತ್ಮನಃ ತತ್ ಸುಖಿತ್ವಾದಿವಿಶೇಷನಿವೃತ್ತ್ಯರ್ಥಮೇವ ಇತಿ ಸಿದ್ಧಮ್ । "ಸಿದ್ಧಂ ತು ನಿವರ್ತಕತ್ವಾತ್" ಇತ್ಯಾಗಮವಿದಾಂ ಸೂತ್ರಮ್ ॥

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ (ಆತ್ಮ) ಸ್ವರೂಪ (ದ ವಿಷಯ) : ದಲ್ಲಿ ಶಾಸ್ತ್ರಕ್ಕೆ ವ್ಯಾಪಾರವಿಲ್ಲದಿದ್ದರೆ (ಅದು) ದ್ವೈತದ ಅರಿವನ್ನು ತೊಲಗಿಸುವದು ಹೇಗೆ ?[3]

(ಪರಿಹಾರ) :- ಇದೇನೂ ತಪ್ಪಲ್ಲ. ಏಕೆಂದರೆ ಹಗ್ಗದಲ್ಲಿ ಹಾವು ಮುಂತಾದವು ಗಳಂತೆ ಆತ್ಮನಲ್ಲಿ ದ್ವೈತವು ಅವಿದ್ಯೆಯಿಂದ ಅಧ್ಯಸ್ತವಾಗಿರುತ್ತದೆ. ಹೇಗೆ ? (ಎಂದರೆ) : ನಾನು ಸುಖಿಯು, ದುಃಖಿಯು, ಮೂಢನು, ಹುಟ್ಟಿದೆನು, ಸತ್ತೆನು, ಮುದುಕನಾದೆನು, ದೇಹವುಳ್ಳವನು, ನೋಡುತ್ತೇನೆ, ವ್ಯಕ್ತನು, ಅವ್ಯಕ್ತನು,[4] ಮಾಡುವವನು, ಫಲವನ್ನು (ಅನುಭವಿಸುವ)ವನು, (ಇದಕ್ಕೆ) ಸೇರಿಕೊಂಡೆನು, (ಇದನ್ನು) ಅಗಲಿದೆನು, ಸೊರಗಿ

1. "ವ್ಯಕ್ತಾವ್ಯಕ್ತಃ" ವಾ॥

2. "ಅಧ್ಯಾರೋಪಿತಸುಖಿತ್ವಾದಿ" ಎಂಬ ಪಾಠಕ್ಕಿಂತ ಈ ವಾ॥ ಪಾಠವೇ ಮೇಲು.

3. ಹಗ್ಗವೆಂಬ ಆಧಾರವನ್ನು ತಿಳಿಸಿದ ಜ್ಞಾನವೇ ಹಾವನ್ನು ತೊಲಗಿಸುತ್ತದೆ ; ಆತ್ಮನನ್ನು ತಿಳಿಸದೆ ಶಾಸ್ತ್ರವು ದ್ವೈತವನ್ನು ಕಳೆಯುವದು ಹೇಗೆ ?-ಎಂದು ಆಕ್ಷೇಪ.

4. ನಿದ್ರೆ ಮುಂತಾದವುಗಳಲ್ಲಿ ವಿಶೇಷರೂಪದಿಂದ ತೋರಿಕೊಳ್ಳದೆ ಇರುವೆನು.

ದೆನು, ಮೈದುಂಬಿಕೊಂಡೆನು, ನಾನು ನನ್ನವರು ಇವರು-ಎಂಬಿವೇ ಮುಂತಾದವುಗಳೆಲ್ಲ ಆತ್ಮನಲ್ಲಿ ಆರೋಪಿತವಾಗುತ್ತವೆ. ಹಾವು, ನೀರಿನ ಕೋಡಿ-ಮುಂತಾದ (ಕಲ್ಪಿತ) ಭೇದಗಳಲ್ಲಿ ಹಗ್ಗವು (ಸೇರಿಕೊಂಡೇ ಇರುವಂತೆ)[1], ಆತ್ಮನು ಇವುಗಳಲ್ಲಿ ಸೇರಿಕೊಂಡೇ ಇರುತ್ತಾನೆ ; ಏಕೆಂದರೆ (ಇವುಗಳಲ್ಲಿ) ಯಾವದರಲ್ಲಿಯೂ (ಅವನು) ತೋರದ ಹೋಗುವದಿಲ್ಲ. ಹೀಗಿರುವದೆಂದು ಯಾವಾಗ (ಆಯಿತೋ ಆಗ), ವಿಶೇಷ್ಯ(ವಾದ ಆತ್ಮನ) ಸ್ವರೂಪದ ಅರಿವು ಸಿದ್ಧವಾಗಿರುವದರಿಂದ (ಅದನ್ನು) ಶಾಸ್ತ್ರವು ಮಾಡಿಕೊಡ ಬೇಕಾದದ್ದಿಲ್ಲ[2]. ಶಾಸ್ತ್ರವು (ಮೊದಲೇ) ಆಗದೆ ಇರುವ (ಅರಿವನ್ನು) ಮಾಡಿಕೊಡ ತಕ್ಕದ್ದು. (ಮೊದಲೇ) ಆಗಿರುವ (ಅರಿವನ್ನೇ) ಅನುಸರಿಸಿ (ಹೇಳಿದರೆ) ಪ್ರಮಾಣ ವಾಗದೆ (ಹೋಗುವದು)[3]. ಆತ್ಮನು ತನ್ನ ಸ್ವರೂಪದಿಂದ ನೆಲೆನಿಂತುಕೊಳ್ಳದೆ ಇರುವ ದೆಂಬುದು ಅವಿದ್ಯೆಯಿಂದ ಹುಟ್ಟುಗಟ್ಟಿರುವ ಸುಖಿತ್ವವೇ ಮುಂತಾದ ಅಡ್ಡಿಯಿಂದಲೇ ಆಗಿರುವದರಿಂದಲೂ ಸ್ವರೂಪದಲ್ಲಿ ನೆಲೆನಿಲ್ಲುವದೇ ಶ್ರೇಯಸ್ಸಾಗಿರುವದರಿಂದಲೂ ಆತ್ಮನ (ವಿಷಯದ)ಲ್ಲಿ (ಅವನು) ಸುಖಿಯಲ್ಲ ಎಂದು ಮುಂತಾದ ಅರಿವನ್ನುಂಟು ಮಾಡುವ ಮೂಲಕ ಸುಖಿತ್ವವೇ ಮುಂತಾದ (ಅಡ್ಡಿಯನ್ನು) ಶಾಸ್ತ್ರವು ''ಇದಲ್ಲ, ಇದಲ್ಲ'' ''ಸ್ಥೂಲವಲ್ಲ''. ಮುಂತಾದ ವಾಕ್ಯಗಳಿಂದ ತೊಲಗಿಸುತ್ತದೆ. ಸುಖಿತ್ವವೇ ಮುಂತಾದ ಆಯಾ (ರೂಪ)ಗಳಲ್ಲಿ ಅಸುಖಿತ್ವಾದಿಯಾದ ಧರ್ಮವೂ ಆತ್ಮಸ್ವರೂಪ (ವಿರು)ವಂತೆ ಸೇರಿಕೊಂಡಿರುವದಿಲ್ಲ. ಒಂದು ವೇಳೆ (ಅದು) ಸೇರಿಕೊಂಡು ಇದ್ದಿದ್ದರೆ, ಸುಖಿತ್ವವೇ ಮುಂತಾದ (ಯಾವ) ವಿಶೇಷವೂ (ಆತ್ಮನಲ್ಲಿ)ಆರೋಪಿತವಾಗುತ್ತಿರ ಲಿಲ್ಲ. ಹೇಗೆ ಬಿಸಿಯಾಗಿರುವಿಕೆ ಎಂಬ ವಿಶೇಷಗುಣವುಳ್ಳ ಬೆಂಕಿಯಲ್ಲಿ ತಂಪು (ಎಂಬುದು ಆರೋಪಿತವಾಗಲಾರದೋ ಹಾಗೆಯೇ ಇದು). ಆದ್ದರಿಂದ ಯಾವ ವಿಶೇಷವೂ ಇಲ್ಲದ ಆತ್ಮನಲ್ಲಿ ಸುಖಿತ್ವವೇ ಮುಂತಾದ ವಿಶೇಷಗಳು ಕಲ್ಪಿತವಾಗಿರುತ್ತವೆ ; ಆದರೆ '(ಇವನು) ಸುಖಿಯಲ್ಲ' ಎಂದು ಮುಂತಾಗಿ (ಹೇಳುವ) ಶಾಸ್ತ್ರವೋ ಎಂದರೆ ಅದು (ಆತ್ಮನಲ್ಲಿ) ಸುಖಿತ್ವವೇ ಮುಂತಾದದ್ದನ್ನು ಅಲ್ಲಗಳೆಯುವದಕ್ಕಾಗಿಯೇ ಎಂದು ಸಿದ್ಧವಾಗುತ್ತದೆ. 'ಸಿದ್ಧಂ ತು ನಿವರ್ತಕತ್ವಾತ್' (ಹುಟ್ಟುಗಟ್ಟಿದ್ದನ್ನು ತೊಲಗಿಸುವದರಿಂದಲೇ ಶಾಸ್ತ್ರ ಪ್ರಾಮಾಣ್ಯವು ಸಿದ್ಧವಾಗಿರುತ್ತದೆ) ಎಂದು ಆಗಮವನ್ನು ಬಲ್ಲವರ ಸೂತ್ರವೂ[4] (ಇದೆ).

1. ಹಗ್ಗವೆಂಬ ರೂಪದಿಂದಲ್ಲ ; ಇದು ಎಂಬ ರೂಪದಿಂದ ಸೇರಿಕೊಂಡೇ ತೋರುತ್ತಿರು ತ್ತದೆ. ವ್ಯಕ್ತಿಗಳಲ್ಲಿ ಜಾತಿಯು ಸೇರಿಕೊಂಡಿರುವಂತೆ ಅಲ್ಲವೆಂದು ತಿಳಿಸುವದಕ್ಕಾಗಿ ಈ ದೃಷ್ಟಾಂತ ವನ್ನು ಕೊಟ್ಟಿದೆ.

2. ಗೀ. ಭಾ. ೧೮-೫೦ ; ಬೃ. ಭಾ. ೧-೪-೭. 3. ಅನುವಾದವಾಗುವದು.

4. ದ್ರವಿಡಾಚಾರ್ಯರ ಸೂತ್ರವು. ಪೀಠಿಕೆಯನ್ನು ನೋಡಿ.

# ಅದ್ವೈತವೇ ಮಂಗಲಕರವು

(ಭಾಷ್ಯ)

೧೧೬. ಪೂರ್ವಶ್ಲೋಕಾರ್ಥಸ್ಯ ಹೇತುಮ್ ಆಹ-

(ಭಾಷ್ಯಾರ್ಥ)

ಹಿಂದಿನ ಶ್ಲೋಕ(ದಲ್ಲಿ ಹೇಳಿರುವ) ವಿಷಯಕ್ಕೆ (ಇಲ್ಲಿ) ಕಾರಣವನ್ನು[1] ಹೇಳುತ್ತಾರೆ :-

ಭಾವೈರಸದ್ಭಿರೇವಾಯಮದ್ವಯೇನ ಚ ಕಲ್ಪಿತಃ ।
ಭಾವಾ ಅಪ್ಯದ್ವಯೇನೈವ ತಸ್ಮಾದದ್ವಯತಾ ಶಿವಾ ॥೩೩॥

೩೩. ಈತನು ಅಸತ್ತೇ ಆಗಿರುವ ಭಾವಗಳ (ರೂಪ)ದಿಂದಲೂ ಅದ್ವಯ (ರೂಪ)ದಿಂದಲೂ ಕಲ್ಪಿತವಾಗಿರುವನು. ಭಾವಗಳೂ ಅದ್ವಯದಿಂದಲೇ (ಕಲ್ಪಿತವಾಗಿರುವವು). ಆದ್ದರಿಂದ ಅದ್ವಯತ್ವವೇ ಶಿವವು.

(ಭಾಷ್ಯ)

೧೧೭. ಯಥಾ ರಜ್ಜ್ವಾಮ್ ಅಸದ್ಭಿಃ ಸರ್ಪಧಾರಾದಿಭಿಃ ಅದ್ವಯೇನ ಚ ರಜ್ಜುದ್ರವ್ಯೇಣ ಸತಾ 'ಅಯಂ ಸರ್ಪಃ,'[2] 'ಇಯಂ ಧಾರಾ,' 'ದಣ್ಡೋಽಯಮ್' ಇತಿ ವಾ ರಜ್ಜುದ್ರವ್ಯಮೇವ ಕಲ್ಪ್ಯತೇ, ಏವಂ ಪ್ರಾಣಾದಿಭಿಃ ಅನನ್ತೈಃ ಅಸದ್ಭಿರೇವ ಅವಿದ್ಯಮಾನೈಃ ನ ಪರಮಾರ್ಥತಃ ಓ ಅಪ್ರಚಲಿತೇ ಮನಸಿ ಕಶ್ಚಿತ್ ಭಾವಃ ಉಪಲಕ್ಷಯಿತುಂ ಶಕ್ಯತೇ ಕೇನಚಿತ್ । ನ ಚ ಆತ್ಮನಃ ಪ್ರಚಲನಮ್ ಅಸ್ತಿ । ಪ್ರಚಲಿತಸ್ಯೈವ ಉಪಲಭ್ಯಮಾನಾಃ ಭಾವಾಃ ನ ಪರಮಾರ್ಥತಃ ಸನ್ತಃ ಕಲ್ಪಯಿತುಂ ಶಕ್ಯಾಃ । ಅತಃ ಅಸದ್ಭಿರೇವ ಪ್ರಾಣಾದಿಭಾವೈಃ ಅದ್ವಯೇನ ಚ ಪರಮಾರ್ಥಸತಾ ಆತ್ಮನಾ ರಜ್ಜುವತ್ ಸರ್ವವಿಕಲ್ಪಾಸ್ಪದಭೂತೇನ ಅಯಂ ಸ್ವಯಮೇವ ಆತ್ಮಾ ಕಲ್ಪಿತಃ, ಸದಾ ಏಕಸ್ವಭಾವೋಽಪಿ ಸನ್ । ತೇ ಚ ಪ್ರಾಣಾದಿಭಾವಾಃ ಅಪಿ ಅದ್ವಯೇನೈವ ಸತಾ ಆತ್ಮನಾ ವಿಕಲ್ಪಿತಾಃ । ನ ಓ ನಿರಾಸ್ಪದಾ ಕಾಚಿತ್ ಕಲ್ಪನಾ

---

1. ಅದ್ವೈತವು ಕಲ್ಪನಾವಸ್ತುವಲ್ಲಿಯೂ ಇರುತ್ತದೆ ; ಕಲ್ಪಿತವಾದದ್ದು ಅದ್ವೈತತತ್ತ್ವವನ್ನು ಬಿಟ್ಟು ನಿಜವಾಗಿ ಇರುವದಲ್ಲ ಎಂಬ ಕಾರಣವನ್ನು ; ಇದನ್ನು ಭಾಷ್ಯದಲ್ಲಿ ಹಿಂದೆಯೇ ಹೇಳಿದೆ.

2. 'ಇತಿ' ಎಂದು ಹೆಚ್ಚಾಗಿ ವಾ।। ; ಹಾಗಾದರೆ 'ಧಾರಾ ಇತಿ' ಎಂದೂ ಬೇಕು.

ಉಪಲಭ್ಯತೇ[1] । ಅತಃ ಸರ್ವಕಲ್ಪನಾಸ್ಪದತ್ವಾತ್ ಸ್ವೇನ ಆತ್ಮನಾ ಅದ್ವಯಸ್ಯ ಅವ್ಯಭಿಚಾರಾತ್ ಕಲ್ಪನಾವಸ್ಥಾಯಾಮಪಿ ಅದ್ವಯತಾ ಶಿವಾ । ಕಲ್ಪನಾ ಏವ ತು ಅಶಿವಾಃ । ರಜ್ಜು ಸರ್ಪಾದಿವತ್ ತ್ರಾಸಾದಿಕಾರಿಣ್ಯೋ ಹಿ ತಾಃ । ಅದ್ವಯತಾ ಅಭಯಾ ಅತಃ ಸೈವ ಶಿವಾ ॥

(ಭಾಷ್ಯಾರ್ಥ)

ಹೇಗೆ ಹಗ್ಗದಲ್ಲಿಲ್ಲದ ಹಾವು, (ನೀರಿನ) ಕೋಡಿ-ಮುಂತಾದವುಗಳ (ರೂಪ) ದಿಂದಲೂ, ಅದ್ವಯವಾದ ಹಗ್ಗವೆಂಬ ನಿಜವಾಗಿರುವ ವಸ್ತುವಿನ ರೂಪದಿಂದಲೂ 'ಇದು ಹಾವು,' 'ಇದು (ನೀರಿನ) ಕೋಡಿ,' 'ಇದು ಕೋಲು' ಎಂದೋ, (ಇದು ಹಗ್ಗವು ಎಂದೋ)[2] ಹಗ್ಗವೆಂಬ ವಸ್ತುವೇ ಕಲ್ಪಿಸಲ್ಪಡುತ್ತದೆಯೋ[3] ಹೀಗೆಯೇ ಪ್ರಾಣನೇ ಮುಂತಾದ ಲೆಕ್ಕವಿಲ್ಲದಷ್ಟು ಅಸತ್ತಾಗಿಯೇ ಇರುವ ಇಲ್ಲದೆಯೇ ಇರುವ, ನಿಜವಾಗಿಯೂ (ಇರುವ ಭಾವಗಳ ರೂಪ)ದಿಂದಲ್ಲ-ಏಕೆಂದರೆ ಮನಸ್ಸು ಅಲುಗಾಡದ ಇರುವಾಗ ಯಾರಿಗೂ ಯಾವ ಭಾವವನ್ನೂ ಕಾಣುವದು ಆಗಲಾರದು[4]. ಆತ್ಮನಿಗಂತೂ ಅಲುಗಾಟವಿಲ್ಲ[5]. ಅಲುಗಾಡುವ (ಮನಸ್ಸಿಗೇ) ಕಾಣಬರುವ ಭಾವಗಳು ನಿಜವಾಗಿಯೂ ಇರುವವೆಂದು ಕಲ್ಪಿಸುವದು ಆಗಲಾರದು. ಆದ್ದರಿಂದ ಅಸತ್ತಾಗಿಯೇ ಇರುವ ಪ್ರಾಣಾದಿ ಭಾವಗಳ (ರೂಪ)ದಿಂದಲೂ ಮತ್ತು ಅದ್ವಯವಾದ, ಹಗ್ಗದಂತೆ ಎಲ್ಲಾ ವಿಕಲ್ಪಗಳಿಗೂ ಆಧಾರವಾಗಿರುವ, ಪರಮಾರ್ಥವಾಗಿಯೂ ಇದ್ದುಕೊಂಡಿರುವ ಆತ್ಮನಾಗಿಯೂ[6] ಈ ಆತ್ಮನು ಯಾವಾಗಲೂ ಒಂದೇ ರೂಪದವನಾಗಿದ್ದರೂ ತಾನೇ[7] ಕಲ್ಪಿತನಾಗಿರುವನು.

1. 'ಉಪಪದ್ಯತೇ' ವಾ।। ಮೈ।।

2. 'ರಜ್ಜುರಿಯಮ್ ಇತಿ ವಾ' ಎಂಬ ಮಾತು ಇಲ್ಲ. ಮೂಲದಲ್ಲಿರಬೇಕು.

3. ಹಗ್ಗವೆಂದೂ ಹಾವೆಂದೂ ಕಲ್ಪಿಸುವದು ಹಗ್ಗವನ್ನೇ, ಹಾವಿನಲ್ಲಿರುವ ಇದು ಎಂಬಂಶವು ಹಗ್ಗವೇ.

4. ಸುಷುಪ್ತಿ-ಮುಂತಾದ ಅವಸ್ಥೆಗಳಲ್ಲಿ ಭಾವಗಳು ಕಾಣುವದಿಲ್ಲ. ಅಲ್ಲಿ ಮನಸ್ಸಿನ ಅಲುಗಾಟವೂ ಇಲ್ಲ.

5. ಆತ್ಮನು ನಿಜವಾಗಿಯೇ ದೃಶ್ಯರೂಪನಾಗುವನು-ಎಂಬ ಪರಿಣಾಮವಾದವು ಯುಕ್ತಿವಿರುದ್ಧ ; ಮುಂದಿನ ಪ್ರಕರಣಗಳಲ್ಲಿ ಇದನ್ನು ತೋರಿಸಲಾಗುತ್ತದೆ.

6. ಹಗ್ಗವು ಸರ್ಪಾದಿಕಲ್ಪನೆಗಳಿಗೆ ವ್ಯಾವಹಾರಿಕವಾದ ಅಧಿಷ್ಠಾನವು ; ಆತ್ಮನು ಪರಮಾರ್ಥವಾಗಿ ಎಲ್ಲಾ ಕಲ್ಪನೆಗಳಿಗೂ ಆಧಾರವು.

7. 'ಇದು ಹಾವು' ಎಂಬಲ್ಲಿ ಇದು ಎಂಬ ರೂಪದಿಂದ ಹಗ್ಗವೂ ಹಾವು ಎಂಬ ರೂಪದಿಂದ ಹಾವೂ ಹಗ್ಗದಲ್ಲಿ ಕಲ್ಪಿತವಾಗಿರುತ್ತವೆ. ಹಗ್ಗದಲ್ಲಿಯೂ 'ಇದು' ಎಂಬಂಶವೂ ಇದ್ದರೂ ಹಾವಿಗೆ ಸಂಬಂಧಪಟ್ಟಂತೆ ತೋರುವ 'ಇದು' ಕಲ್ಪಿತವಾದದ್ದೇ. ಹೀಗೆಯೇ 'ನಾನು ಪ್ರಾಜ್ಞನು (ಸುಷುಪ್ತಿಯನ್ನನುಭವಿಸುವವನು)' ಎಂಬ ಕಲ್ಪನೆಯನ್ನೂ ತಿಳಿಯಬೇಕು. ಆತ್ಮನು ದೃಷ್ಟಾಂತದ ಹಗ್ಗದಂತೆ ತನ್ನ ಸ್ವರೂಪದಲ್ಲಿ ಯಾವಾಗಲೂ ಇದ್ದುಕೊಂಡೇ ಇರುತ್ತಾನೆ.

ಮತ್ತು ಆ ಪ್ರಾಣನೇ ಮುಂತಾದ ಭಾವಗಳುಕೂಡ ಅದ್ವಯನಿಂದಲೇ, (ಎಂದರೆ) ಇರುವ ಆತ್ಮನಿಂದಲೇ[1] ಕಲ್ಪಿತವಾಗಿರುತ್ತವೆ. ಏಕೆಂದರೆ (ಯಾವ) ಆಧಾರವೂ ಇಲ್ಲದ ಯಾವ ಕಲ್ಪನೆಯನ್ನೂ (ನಾವು) ಕಂಡಿಲ್ಲ[2]. ಆದ್ದರಿಂದ ಎಲ್ಲಾ ಕಲ್ಪನೆಗಳಿಗೂ ಆಧಾರವಾಗಿರುವ ದರಿಂದ, ಅದ್ವಯವು ತನ್ನ ರೂಪದಿಂದ (ಆಗಲೂ) ಬೇರ್ಪಡದೆಯೇ ಇರುವದರಿಂದ, ಕಲ್ಪನೆಯ(ನ್ನುಮಾಡುವ) ಅವಸ್ಥೆಯಲ್ಲಿಯೂ ಅದ್ವಯತ್ವವೇ ಮಂಗಲಕರವಾದದ್ದು[3] ; ಕಲ್ಪನೆಗಳೇ-ಅಮಂಗಲವಾಗಿರುತ್ತವೆ, ಏಕೆಂದರೆ ಹಗ್ಗದ ಹಾವೇ ಮುಂತಾದವುಗಳಂತೆ ಅವು ಅಂಜಿಕೆಯೇ ಮುಂತಾದವನ್ನು ಉಂಟುಮಾಡುತ್ತವೆ[4]. ಅದ್ವಯತ್ವವು (ಯಾವ) ಅಂಜಿಕೆಯೂ ಇಲ್ಲದ್ದು ; ಆದ್ದರಿಂದ ಅದೇ ಮಂಗಲಕರವಾದದ್ದು.

(ಭಾಷ್ಯ)

೧೧೮. ಕುತಶ್ಚ ಅದ್ವಯತಾ ಶಿವಾ ?

(ಭಾಷ್ಯಾರ್ಥ)

ಅದ್ವಯತ್ವವು ಮಂಗಲಕರವೆನ್ನುವದಕ್ಕೆ ಮತ್ತೂ ಯಾವ ಕಾರಣವಿದೆ ? ಎಂದರೆ :-

ನಾತ್ಮಭಾವೇನ ನಾನೇದಂ ನ ಸ್ವೇನಾಪಿ ಕಥಂಚನ ।
ಕ್ಕಂಚಿದಿತಿ ತತ್ತ್ವವಿದೋ ವಿದುಃ ॥೩೪॥

೩೪. ಇದು ಆತ್ಮಭಾವಾದಿಂದಲೂ ನಾನಾ (ರೂಪವಾಗಿ) ಇಲ್ಲ ; ತನ್ನ ರೂಪದಿಂದಲೂ ಹೇಗೂ ಇರುವದಿಲ್ಲ. ಯಾವದೂ ಬೇರೆಯಲ್ಲ, ಬೇರೆ ಯಲ್ಲದೆಯೂ ಅಲ್ಲ. ಓಗೆಂದು ತತ್ತ್ವವಿದರು ತಿಳಿದಿರುವರು.

(ಭಾಷ್ಯ)

೧೧೯. ನಾನಾಭೂತಂ ಪೃಥಕ್ತ್ವಮ್ ಅನ್ಯಸ್ಯ ಅನ್ಯಸ್ಮಾತ್ ಯತ್ರ ದೃಷ್ಟಮ್,

---

1. ಆತ್ಮನನ್ನೇ ಭಾವಗಳಿಂದು ಕಲ್ಪಿಸುತ್ತೇವೆ ; ಏನೂ ಇಲ್ಲದ ಶೂನ್ಯದಲ್ಲಿ ಅವನ್ನು ಕಲ್ಪಿಸಿಲ್ಲ.

2. 'ಉಪಪದ್ಯತೇ' ಎಂಬ ಪಾಠಕ್ಕೆ 'ಆಧಾರವಿಲ್ಲದ ಕಲ್ಪನೆಯೆಂಬುದೇ ಹೊಂದುವಹಾಗಿಲ್ಲ' ಎಂದು ಕನ್ನಡಿಸಬೇಕು.

3. ಭಾವಗಳಿಂದ ನಮಗೆ ಮಂಗಲವಾಗಿರುವದೆಂದು ನಾವು ತಿಳಿಯುವಾಗಲೂ ಆತ್ಮನಿಂದಲೇ ಆ ಮಂಗಲವಾಗಿರುತ್ತದೆ.

4. ಸ್ವರೂಪವಿಚ್ಯುತಿಯನ್ನು ಮಾಡುವ ಭಾವಗಳು ಮಂಗಲಕರವೆಂದೂ ಆಗಲಾರವು.

ತತ್ರ ಅಶಿವಂ ಭವೇತ್ । ನ ಹಿ ಅತ್ರ ಅದ್ವಯೇ ಪರಮಾರ್ಥಸತ್ಯಾತ್ಮನಿ ಪ್ರಾಣಾದಿ ಸಂಸಾರಜಾತಮ್ ಇದಂ ಜಗತ್ ಆತ್ಮಭಾವೇನ ಪರಮಾರ್ಥಸ್ವರೂಪೇಣ ನಿರೂಪ್ಯ ಮಾಣಂ ನಾನಾ ವಸ್ತ್ವನ್ತರಭೂತಂ ಭವತಿ । ಯಥಾ ರಜ್ಜುಸ್ವರೂಪೇಣ ಪ್ರಕಾಶೇನ ನಿರೂಪ್ಯಮಾಣೋ ನ ನಾನಾಭೂತಃ ಕಲ್ಪಿತಃ ಸರ್ಪೋಽಸ್ತಿ ತದ್ವತ್ । ನಾಪಿ ಸ್ವೇನ ಪ್ರಾಣಾದ್ಯಾತ್ಮನಾ ಇದಂ ವಿದ್ಯತೇ ಕದಾಚಿದಪಿ । ರಜ್ಜುಸರ್ಪವತ್ ಕಲ್ಪಿತತ್ವಾದೇವ । ತಥಾ ಅನ್ಯೋನ್ಯಂ ನ ಪೃಥಕ್ ಪ್ರಾಣಾದಿವಸ್ತು । ಯಥಾ ಅಶ್ವಾತ್ ಮಹಿಷಃ ಪೃಥಕ್ ವಿದ್ಯತೇ ಏವಮ್[1] । ಅತಃ ಅಸತ್ತ್ವಾತ್ ನ[2] ಅಪೃಥಕ್ ವಿದ್ಯತೇ ಅನ್ಯೋನ್ಯಂ ಪರೇಣ ವಾ ಕಿಂಚಿತ್ । ಇತಿ ಏವಂ ಪರಮಾರ್ಥಂ ತತ್ತ್ವವಿದಃ[3] ಬ್ರಾಹ್ಮಣಾಃ ವಿದುಃ । ಅತಃ ಅಶಿವಹೇತುತ್ವಾಭಾವಾತ್ ಅದ್ವಯತ್ವೈವ ಶಿವಾ ಇತ್ಯಭಿಪ್ರಾಯಃ ।

(ಭಾಷ್ಯಾರ್ಥ)

ನಾನಾ (ರೂಪ)ವಾಗಿರುವ, ಒಂದರಿಂದ ಮತ್ತೊಂದು ಬೇರೆಯಾಗಿ ಇರುವದು ಎಲ್ಲಿ ಕಾಣವದೋ ಅಲ್ಲಿ ಅಮಂಗಲವಾಗಬಹುದು. (ಆದರೆ) ತನಗೆರಡನೆಯದಿಲ್ಲದ ಜವಾಗಿಯೂ ಸತ್ಯವಾಗಿರುವ ಈ ಆತ್ಮನಲ್ಲಿ ಪ್ರಾಣಾದಿಸಂಸಾರಸಮೂಹವೆಂಬ ಈ ಜಗತ್ತು, ಆತ್ಮಭಾವದಿಂದ ಪರಮಾರ್ಥಸ್ವರೂಪದಿಂದ ಚೆನ್ನಾಗಿ ನೋಡಿದರೆ ನಾನಾ (ರೂಪ)ವಾಗಿ, (ಅದಕ್ಕಿಂತ) ಬೇರೆಯಾದ ವಸ್ತುವಾಗಿ ಇರುವದಿಲ್ಲ. ಹೇಗೆ ಹಗ್ಗದ ರೂಪದಿಂದ ಬೆಳಕಿನಲ್ಲಿ ಚೆನ್ನಾಗಿ ಕಂಡುಕೊಂಡ(ರೆ), ನಾನಾಭೂತವಾದ ಕಲ್ಪಿತವಾದ ಹಾವು ಇರುವದಿಲ್ಲವೋ, ಅದರಂತೆಯೇ (ಇದು). ಇದು ತನ್ನ ಪ್ರಾಣನೇ ಮುಂತಾದ ರೂಪದಿಂದಲೂ ಎಂದೂ ಇರುವದಿಲ್ಲ ; ಏಕೆಂದರೆ (ಇದು) ಹಗ್ಗದ ಹಾವಿನಂತೆ ಕಲ್ಪಿತವಾಗಿರುವದರಿಂದಲೇ (ಅಸತ್ತಾಗಿದೆ). ಮತ್ತು ಹೇಗೆ ಕುದುರೆಗಿಂತ ಕೋಣವು ಬೇರೆಯಾಗಿ ಇದ್ದುಕೊಂಡಿರುವದೋ ಹಾಗೆ ಪ್ರಾಣಾದಿವಸ್ತು(ಗಳು) ಒಂದಕ್ಕಿಂತ ಒಂದು ಬೇರೆಯಾಗಿ(ಯೂ ಇರುವ)ದಿಲ್ಲ. (ಹೀಗೆ) ಅಸತ್ತಾಗಿರುವ ದೆಂಬ ಈ (ಕಾರಣ)ದಿಂದ ಅವು ಒಂದಕ್ಕಿಂತ ಒಂದಾಗಲಿ (ತಮಗಿಂತ) ಬೇರೆ ಯಾಗಿರುವ (ಆತ್ಮನಿ)ಗಿಂತಲಾಗಲಿ ಬೇರೆಯಲ್ಲದೆಯೂ ಯಾವದೊಂದೂ ಇರುವದಿಲ್ಲ. ಹೀಗೆಂದು ಈ ರೀತಿಯಲ್ಲಿ ಪರಮಾರ್ಥವನ್ನು ತತ್ತ್ವವನ್ನು ಬಲ್ಲ

1. 'ಏವ' ಆ।। ಮೈ।।

2. 'ನಾಪಿ' ವಾ।।

3. ''ಪರಮಾರ್ಥತತ್ತ್ವಮ್ ಆತ್ಮವಿದಃ'' ಆ।। ಕಾ।।, ''ಪರಮಾರ್ಥತತ್ತ್ವವಿದಃ'' ವಾ।।-ಎಂಬ ಮುದ್ರಿತಪಾಠಗಳಿಂದ ನಾವು ಕೊಟ್ಟಿರುವ ಪಾಠವು ಮೇಲೆಂದು ತೋರುತ್ತದೆ.

ಬ್ರಾಹ್ಮಣರು[1] ತಿಳಿದಿರುವರು[2]. ಆದ್ದರಿಂದ ಅಮಂಗಲಕ್ಕೆ ಕಾರಣವಿಲ್ಲದ್ದಾದ್ದರಿಂದ ಅದ್ವಯತ್ವವೇ ಮಂಗಲವು ಎಂದು ಅಭಿಪ್ರಾಯ[3].

## ತತ್ತ್ವದರ್ಶನವನ್ನು ಯಾರು ಬಲ್ಲರು ?

(ಭಾಷ್ಯ)

೧೨೦. ತದೇತತ್ ಸಮ್ಯಗ್ದರ್ಶನಂ ಸ್ತೂಯತೇ-

(ಭಾಷ್ಯಾರ್ಥ)

ಅಂಥ ಈ ಸಮ್ಯಗ್ದರ್ಶನವನ್ನು (ಈಗ) ಹೊಗಳಲಾಗುತ್ತದೆ :-

ವೀತರಾಗಭಯಕ್ರೋಧೈರ್ಮುನಿಭಿರ್ವೇದಪಾರಗೈಃ ।
ನಿರ್ವಿಕಲ್ಪೋ ಹ್ಯಯಂ ದೃಷ್ಟಃ ಪ್ರಪಞ್ಚೋಪಶಮೋಽದ್ವಯಃ ॥೩೫॥

೩೫. ವೀತರಾಗಭಯಕ್ರೋಧರಾದ ವೇದಪಾರಗರಾದ ಮುನಿಗಳು ನಿರ್ವಿಕಲ್ಪನೂ ಪ್ರಪಂಚೋಪಶಮನೂ ಅದ್ವಯನೂ ಆದ ಈ (ಆತ್ಮನನ್ನು) ಕಂಡಿರುವರು.

(ಭಾಷ್ಯ)

೧೨೧. ವಿಗತರಾಗಭಯಕ್ರೋಧಾದಿಸರ್ವದೋಷೈಃ[4] ಸರ್ವದಾ ಮುನಿಭಿಃ ಮನನ ಶೀಲೈಃ ವಿವೇಕಿಭಿಃ ವೇದಪಾರಗೈಃ ಅವಗತವೇದಾರ್ಥತತ್ತ್ವೈ[5] ಜ್ಞಾನಿಭಿಃ ನಿರ್ವಿಕಲ್ಪಃ ಸರ್ವವಿಕಲ್ಪಶೂನ್ಯಃ ಅಯಮ್ ಆತ್ಮಾ ದೃಷ್ಟಃ ಉಪಲಬ್ಧಃ ವೇದಾನ್ತಾರ್ಥತತ್ಪರೈಃ । ಪ್ರಪಞ್ಚೋಪಶಮಃ । ಪ್ರಪಞ್ಚಃ ದ್ವೈತಭೇದವಿಸ್ತಾರಃ । ತಸ್ಯ ಉಪಶಮಃ ಅಭಾವಃ ಯಸ್ಮಿನ್ ಸ ಆತ್ಮಾ ಪ್ರಪಞ್ಚೋಪಶಮಃ । ಅತ ಏವ ಅದ್ವಯಃ । ವಿಗತದೋಷೈರೇವ

1. ಬ್ರಹ್ಮಜ್ಞಾನಿಗಳು.

2. ಪರಮಾರ್ಥಕ್ಕಿಂತ ಬೇರೆಯಾಗಿ ಅದರೊಡನೆ ಒಂದಾಗಿ ತಾವು ತಾವು ಭಿನ್ನವಾಗಿ ಅಥವಾ ಪರಮಾರ್ಥಕ್ಕಿಂತ ಅಭಿನ್ನವಾಗಿ ಇರುವ ದ್ವಿತೀಯವಸ್ತುಗಳೇ ಇಲ್ಲ. ಪ್ರಾಣಾದಿಗಳನ್ನು ಅದಕ್ಕಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳಿದರೆ ಅವುಗಳನ್ನು ಸತ್ತೆಂದು ಒಪ್ಪಿದಂತೆಯೇ, ಆಗುವುದು. ಹಾಗೆ ಒಪ್ಪುವದು ಅನುಭವವಿರುದ್ಧ.

3. ತನಗೆರಡನೆಯದಿಲ್ಲದ ವಸ್ತುವೇ ನಿಜವಾಗಿ ಮಂಗಲವು ; ಅದ್ವೈತವಲ್ಲದ ವಸ್ತು ತಾನು ಮಂಗಲವಾದರೂ ಮತ್ತೊಂದರಿಂದಲೂ ಅಮಂಗಲವಾಗಬಹುದೆಂಬ ಅಂಜಿಕೆಯುಂಟು-ಎಂದರ್ಥ.

4. "ವೀತರಾಗಭಯದ್ವೇಷಕ್ರೋಧಾದಿಸರ್ವದೋಷೈಃ" ಆ॥

5. "ಅವಗತವೇದಾನ್ತಾರ್ಥತತ್ತ್ವೈಃ" ಪಾ॥

ಪಣ್ಡಿತೈಃ ವೇದಾನ್ತಾರ್ಥತತ್ಪರೈಃ ಸಂನ್ಯಾಸಿಭಿಃ ಅಯಮಾತ್ಮಾ ದ್ರಷ್ಟುಂ ಶಕ್ಯಃ, ನಾನ್ಯೈಃ ರಾಗಾದಿಕಲುಷಿತಚೇತೋಭಿಃ ಸ್ವಪಕ್ಷಪಾತಿದರ್ಶನೈಃ, ತಾರ್ಕಿಕಾದಿಭಿಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಅನುರಾಗ, ಅಂಜಿಕೆ, ಸಿಟ್ಟು-ಮುಂತಾದ ಯಾವ ದೋಷವೂ ಇಲ್ಲದವರೂ, ಮುನಿಗಳೂ ಯಾವಾಗಲೂ (ತತ್ತ್ವ)ವನ್ನು ಮನನಮಾಡುವ ಸ್ವಭಾವದವರೂ ಎಂದರೆ ವಿವೇಕಿಗಳೂ ; ವೇದಪಾರಗರೂ ವೇದದ ಅರ್ಥವನ್ನು ಮನಗಂಡವರೂ-ಆಗಿರುವ ಜ್ಞಾನಿಗಳು ನಿರ್ವಿಕಲ್ಪನೂ ಯಾವ ಹುಟ್ಟುಗಟ್ಟಿದ (ಪದಾರ್ಥ)ವೂ ಇಲ್ಲದವನೂ, ಪ್ರಪಂಚೋಪಶಮನೂ-ಪ್ರಪಂಚವೆಂದರೆ ದ್ವೈತದ ಭೇದಗಳು ಹರಡಿಕೊಂಡಿರುವದು ; ಅದರ ಉಪಶಮವು, ಎಂದರೆ ಇಲ್ಲದಿರುವಿಕೆಯು ಯಾವನಲ್ಲಿರುವದೋ ಆ ಆತ್ಮನು ಪ್ರಪಂಚೋಪಶಮನು. (ಅಂಥವನೂ)-ಆದ್ವರಿಂದಲೇ ಅದ್ವಯನೂ ಆಗಿರುವ ಈ ಆತ್ಮನನ್ನು ಕಂಡಿರುವರು, ಅರಿತುಕೊಂಡಿರುತ್ತಾರೆ. ಯಾವ ದೋಷಗಳೂ ಇಲ್ಲದ, ವೇದಾಂತಾರ್ಥದಲ್ಲಿಯೇ ತತ್ಪರರಾಗಿರುವ ಸಂನ್ಯಾಸಿಗಳಿಗೇ ಈ ಆತ್ಮನನ್ನು ಕಾಣುವದು ಶಕ್ಯವೇ ಹೊರತು ರಾಗವೇ ಮುಂತಾದ (ದೋಷಗಳಿಂದ) ಚಿತ್ತವು ಕದಡಿರುವ, ತಮಗೆ ಬೇಕಾಗಿರುವ ದರ್ಶನಗಳನ್ನೇ (ಇಟ್ಟುಕೊಂಡಿರುವ) ತಾರ್ಕಿಕರೇ ಮುಂತಾದವರಿಗೆ ಆಗಲಾರದು-ಎಂದು ಅಭಿಪ್ರಾಯ[1].

## ಜ್ಞಾನಿಗಳ ವ್ಯವಹಾರ

(ಭಾಷ್ಯ)

೧೨೨. ಯಸ್ಮಾತ್ ಸರ್ವಾನರ್ಥೋಪಶಮರೂಪತ್ವಾತ್ ಅದ್ವಯಂ ಶಿವಮ್ ಅಭಯಮ್-

(ಭಾಷ್ಯಾರ್ಥ)

ಯಾವ ಅನರ್ಥವೂ ಇಲ್ಲದ ಸ್ವರೂಪವಾದ್ದರಿಂದ ಅದ್ವಯವೇ ಮಂಗಲವೂ ಅಂಜಿಕೆಯಿಲ್ಲದ್ದೂ ಆಗಿರುವದಷ್ಟೆ.

**ತಸ್ಮಾದೇವಂ ವಿದಿತ್ವೈನಮದ್ವೈತೇ ಯೋಜಯೇತ್ ಸ್ಮೃತಿಮ್ ।**
**ಅದ್ವೈತಂ ಸಮನುಪ್ರಾಪ್ಯ ಜಡವಲ್ಲೋಕಮಾಚರೇತ್ ॥೩೬॥**

---

1. ಅಂತಃಕರಣದೋಷವಿಲ್ಲದ ಜ್ಞಾನಿಗಳಿಗೇ ತಿಳಿಯುವದೇ ಹೊರತು ಮಿಕ್ಕವರಿಗೆ ತಿಳಿಯುವದಿಲ್ಲ-ಎಂದು ಜ್ಞಾನವನ್ನು ಹೊಗಳಿರುವದರಿಂದ ಮುಮುಕ್ಷುಗಳಾದವರು ಅಂತಃಕರಣ ದೋಷಗಳನ್ನು ಕಳೆದುಕೊಂಡು ಬ್ರಹ್ಮನಿಷ್ಠರಿಂದಲೇ ತತ್ತ್ವವನ್ನು ಅರಿತುಕೊಳ್ಳಬೇಕು ಎಂದು ಹೇಳಿದಂತೆ ಆಯಿತು.

೩೬. ಆದ್ದರಿಂದ ಹೀಗೆಂದು ಈತನನ್ನು ಅರಿತುಕೊಂಡು ಅದ್ವೈತದಲ್ಲಿ ಸ್ಮೃತಿಯನ್ನು ಯೋಜನೆಮಾಡಬೇಕು. ಅದ್ವೈತವನ್ನು ಪಡೆದುಕೊಂಡು ಜಡನಂತೆ ಲೋಕ (ವ್ಯವಹಾರವನ್ನು) ಮಾಡಬೇಕು.

(ಭಾಷ್ಯ)

೧೨೩. ಅತಃ ಏವಂ ವಿದಿತ್ವಾ ಏನಮ್ ಅದ್ವೈತೇ ಸ್ಮೃತಿಂ ಯೋಜಯೇತ್ । ಅದ್ವೈತಾವಗಮಾಯೈವ ಸ್ಮೃತಿಂ ಕುರ್ಯಾತ್ ಇತ್ಯರ್ಥಃ । ತಚ್ಚ ಅದ್ವೈತಮ್ (ಸಮನುಪ್ರಾಪ್ಯ) ಅವಗಮ್ಯ ಅಹಮಸ್ಮಿ ಪರಂ ಬ್ರಹ್ಮ' ಇತಿ ವಿದಿತ್ವಾ ಅಶನಾಯಾದ್ಯತೀತಂ ಸಾಕ್ಷಾದಪರೋಕ್ಷಾತ್ ಅಜಮ್ ಆತ್ಮಾನಂ ಸರ್ವಲೋಕವ್ಯವಹಾರಾತೀತಮ್, ಜಡವತ್ ಲೋಕಮ್ ಆಚರೇತ್ । ಅಪ್ರಖ್ಯಾಪಯನ್ ಆತ್ಮಾನಮ್ ಅಹಮ್ ಏವಂವಿಧಃ (ಇತಿ ?) ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಆದ್ದರಿಂದ ಈ (ಆತ್ಮನನ್ನು) ಹೀಗೆಂದು ತಿಳಿದುಕೊಂಡು ಅದ್ವೈತದಲ್ಲಿಯೇ ಸ್ಮೃತಿಯನ್ನು ಯೋಜನೆಮಾಡಬೇಕು, ಅದ್ವೈತವನ್ನು ಮನಗಾಣುವದಕ್ಕಾಗಿಯೇ ಸ್ಮೃತಿಯನ್ನು ಮಾಡಬೇಕು-ಎಂದರ್ಥ[1]. ಮತ್ತು ಅದ್ವೈತವನ್ನು (ಪಡೆದುಕೊಂಡು)[2], "ಮನಗಂಡು, ನಾನು ಪರಬ್ರಹ್ಮವೇ ಆಗಿರುತ್ತೇನೆ" ಎಂದು ಹಸಿವು ಮುಂತಾದವುಗಳನ್ನು ದಾಟಿರುವ ನೇರಾಗಿ ಅಪರೋಕ್ಷವಾಗಿರುವ ಜನ್ಮರಹಿತನಾದ ಲೋಕವ್ಯವಹಾರವನ್ನೆಲ್ಲ ಮೀರಿರುವ[3] ಆತ್ಮನನ್ನು (ಅರಿತುಕೊಂಡು) ಜಡನಂತೆ ಲೋಕ (ವ್ಯವಹಾರವನ್ನು) ಮಾಡುತ್ತಿರಬೇಕು. ನಾನು ಇಂಥವನು ಎಂದು (ಹೊರಕ್ಕೆ) ತೋರಿಸಿಕೊಳ್ಳದೆ (ವ್ಯವಹಾರ ಮಾಡುತ್ತಿರಬೇಕು)[4] ಎಂದರ್ಥ.

1. ಆತ್ಮನನ್ನು ತಿಳಿದುಕೊಂಡಬಳಿಕ ಅದ್ವೈತಸ್ಮೃತಿಸಂತಾನವನ್ನು ಮಾಡಬೇಕು, ಅದರಿಂದ ಜ್ಞಾನವು ಗಟ್ಟಿಯಾಗುತ್ತದೆ-ಎಂಬ ಆ॥ ವ್ಯಾಖ್ಯಾನವು ಸರಿಯಲ್ಲ ಏಕೆಂದರೆ ಜ್ಞಾನವು ಉತ್ಪನ್ನವಾದರೆ ಮತ್ತೇನೂ ಮಾಡಬೇಕಾದದ್ದು ಇರುವದೇ ಇಲ್ಲ ; ಅದ್ವೈತವು ಹೀಗೆ ಮಂಗಲರೂಪವಾದದ್ದೆಂದು ನಿಶ್ಚಯಿಸಿ ಅದನ್ನು ಅರಿತುಕೊಳ್ಳುವದಕ್ಕೆ ಶಮದಮಾದಿಗಳ ಅಭ್ಯಾಸಮಾಡುವದರ ಮೂಲಕ ಯತ್ನಿಸಬೇಕು ಎಂದರ್ಥ. ಬೃ. ಭಾ. ೪-೪-೨೧.

2. 'ಸಮನುಪ್ರಾಪ್ಯ' ಎಂಬ ಮಾತು ಭಾಷ್ಯಮೂಲದಲ್ಲಿ ಬಿಟ್ಟುಹೋಗಿದೆ.

3. ಬೃ. ೩-೫-೧ ರ ಸೂಚನೆಯಿದು.

4. "ಬಾಲ್ಯೇನ ತಿಷ್ಠಾಸೇತ್" ಬೃ. ೩-೫-೧ ಎಂಬ ಶ್ರುತಿಯನ್ನೂ ಸೂ. ಭಾ. ೩-೪-೫೦ ನ್ನೂ ನೋಡಿರಿ. ಇಲ್ಲಿಂದ ಓಡಿದು ಮೂರು ಶ್ಲೋಕಗಳಲ್ಲಿ ಹೇಳಿರುವವು ಕೃತಾರ್ಥನ ಲಕ್ಷಣಗಳು, ಮುಮುಕ್ಷುವಾದ ಸಂನ್ಯಾಸಿಗೆ ಸಾಧನಗಳು

(ಭಾಷ್ಯ)

೧೨೪. ಕಯಾ ಚರ್ಯಯಾ ಲೋಕಮ್ ಆಚರೇತ್ ಇತಿ ? ಆಹ-

(ಭಾಷ್ಯಾರ್ಥ)

ಯಾವ ನಡೆವಳಿಕೆಯಿಂದ ಲೋಕ (ವ್ಯವಹಾರವನ್ನು) ಮಾಡುತ್ತಿರಬೇಕು ? ಎಂದರೆ ಹೇಳುತ್ತಾರೆ :-

ನಿಸ್ತುತಿರ್ನಿರ್ನಮಸ್ಕಾರೋ ನಿಃಸ್ವಧಾಕಾರ ಏವ ಚ ।
ಚಲಾಚಲನಿಕೇತಶ್ಚ ಯತಿರ್ಯಾದೃಚ್ಛಿಕೋ ಭವೇತ್ ॥೩೭॥

೩೭. ಸ್ತೋತ್ರಮಾಡುವದಿಲ್ಲದೆ, ನಮಸ್ಕಾರಮಾಡುವದಿಲ್ಲದೆ, ಸ್ವಧಾಕಾರವಿಲ್ಲದೆ, ಚಲಾಚಲನಿಕೇತನಾಗಿ ಯತಿಯು ಯಾದೃಚ್ಛಿಕನಾಗಿರಬೇಕು.

(ಭಾಷ್ಯ)

೧೨೫. ಸ್ತುತಿನಮಸ್ಕಾರಾದಿಸರ್ವಕರ್ಮವಿವರ್ಜಿತಃ, ತ್ಯಕ್ತಸರ್ವಬಾಹ್ಯೈಷಣಃ ಪ್ರತಿಪನ್ನಪರಮಹಂಸಪಾರಿವ್ರಾಜ್ಯಃ ಇತ್ಯಭಿಪ್ರಾಯಃ । ''ಏತಂ ವೈ ತಮಾತ್ಮಾನಂ ವಿದಿತ್ವಾ'' (ಬೃ. ೩-೫-೧) ಇತ್ಯಾದಿಶ್ರುತೇಃ । ''ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ'' (ಗೀ. ೫-೧೭) ಇತ್ಯಾದಿಸ್ಮೃತೇಶ್ಚ । ಚಲಂ ಶರೀರಮ್ । ಪ್ರತಿಕ್ಷಣಮ್ ಅನ್ಯಥಾಭಾವಾತ್ । ಅಚಲಮ್ ಆತ್ಮತತ್ತ್ವಮ್ । ಯದಾಕದಾಚಿತ್ ಭೋಜನಾದಿವ್ಯವಹಾರನಿಮಿತ್ತಮ್ ಆಕಾಶವತ್ ಅಚಲಂ ಸ್ವರೂಪಮ್ ಆತ್ಮತತ್ತ್ವಮ್ ಆತ್ಮನಃ ನಿಕೇತಮ್ ಆಶ್ರಯಮ್ ಆತ್ಮಸ್ಥಿತಿಂ ವಿಸ್ಮೃತ್ಯ ''ಅಹಮ್' ಇತಿ ಮನ್ಯತೇ ಯದಾ ತದಾ ಚಲೋ ದೇಹಃ ನಿಕೇತಃ ಯಸ್ಯ ಸೋಽಯಮ್ (ಚಲನಿಕೇತಃ) । ಏವಂ ಚಲಾಚಲನಿಕೇತೋ ವಿದ್ವಾನ್ । ನ ಪುನರ್ಬಾಹ್ಯವಿಷಯಾಶ್ರಯಃ । ಸ ಚ ಯಾದೃಚ್ಛಿಕೋ ಭವೇತ್ । ಯದೃಚ್ಛಾಪ್ರಾಪ್ತಕೌಪೀನಾಚ್ಛಾದನಗ್ರಾಸಮಾತ್ರದೇಹಸ್ಥಿತಿಃ ಇತ್ಯರ್ಥಃ ॥

(ಭಾಷ್ಯಾರ್ಥ)

ಸ್ತುತಿಸುವದು, ನಮಸ್ಕರಿಸುವದು-ಮುಂತಾದ ಯಾವ ಕರ್ಮವೂ ಇಲ್ಲದವನಾಗಿ, ಹೊರಗಿನ ಏಷಣೆಗಳನ್ನೆಲ್ಲ ಬಿಟ್ಟು ಪರಮಹಂಸಪಾರಿವ್ರಾಜ್ಯವನ್ನು[1] ಹೊಂದಿದವನಾಗಿ

---

1. ಸಂನ್ಯಾಸಾಶ್ರಮವೆಂಬ ಸ್ಮಾರ್ತಸಂನ್ಯಾಸವೊಂದು, ಏಷಣಾತ್ಯಾಗರೂಪವಾದ ಪರಮಹಂಸ ಪಾರಿವ್ರಾಜ್ಯವೆಂಬ ಜ್ಞಾನಾಂಗಸಂನ್ಯಾಸವೊಂದು-ಹೀಗೆ ಎರಡು ಸಂನ್ಯಾಸಗಳಿರುವವು ಎಂದು ಬೃ. ಭಾ. ೩-೫-೧ ರಲ್ಲಿ ಹೇಳಿದೆ. ಇಲ್ಲಿ ಜ್ಞಾನಾಂಗವಾದ ಸಂನ್ಯಾಸವನ್ನು ಹೇಳಿದೆ. ಪೀಠಿಕೆಯನ್ನು ನೋಡಿ.

ಎಂದು ಅಭಿಪ್ರಾಯ. ''ಈ ಅಂಥ ಆತ್ಮನನ್ನೇ ಅರಿತುಕೊಂಡು (ಏಷಣೆಗಳನ್ನು ಬಿಟ್ಟಿದ್ದು ಭಿಕ್ಷಾಚರ್ಯವನ್ನು ಮಾಡುವರು.'' ಬೃ. ೩-೫-೧) ಎಂದು ಮುಂತಾಗಿರುವ ಶ್ರುತಿಯೂ ''ಅದರಲ್ಲಿಯೇ ಬುದ್ಧಿಯುಳ್ಳವರಾಗಿ ಅದನ್ನೇ ಆತ್ಮನನ್ನು ಮಾಡಿಕೊಂಡವರಾಗಿ, ಅದರಲ್ಲಿಯೇ ನಿಷ್ಠೆಯುಳ್ಳವರಾಗಿ, ಅದೇ ಪರಮಗತಿಯೆನ್ನುವವರಾಗಿ'' (ಗೀ. ೫-೧೭) ಎಂದು ಮುಂತಾಗಿರುವ ಸ್ಮೃತಿಯೂ ಇದಕ್ಕೆ ಪ್ರಮಾಣವು. ಚಲವೆಂದರೆ ಶರೀರವು, ಏಕೆಂದರೆ (ಇದು) ಪ್ರತಿಕ್ಷಣವೂ ಬೇರೆಯಾಗುತ್ತಿರುವದು, ಅಚಲವೆಂದರೆ ಆತ್ಮತತ್ತ್ವವು. ಯಾವಾಗಲಾದರೂ ಊಟವೇ ಮುಂತಾದ ವ್ಯವಹಾರದ ನಿಮಿತ್ತವಾಗಿ, ಆಕಾಶದಂತೆ ಅಚಲವಾಗಿರುವ ಸ್ವರೂಪವಾದ ಆತ್ಮತತ್ತ್ವವೆಂಬ ನಿಕೇತವನ್ನು ಆಶ್ರಯವಾದ ಆತ್ಮಸ್ಥಿತಿಯನ್ನು ಮರೆತು ಯಾವಾಗ 'ನಾನು' ಎಂದು ಎಣಿಸಿಕೊಳ್ಳುವನೋ ಆಗ, ಚಲವಾದ ದೇಹವೇ ಯಾವನಿಗೆ ನಿಕೇತವೋ ಅಂಥ ಇವನು (ಚಲನಿಕೇತನು)[1]. ಜ್ಞಾನಿಯು ಹೀಗೆ ಚಲಾಚಲನಿಕೇತನಾಗಿರುವನೇ ಹೊರತು ಹೊರಗಿನ ವಿಷಯಗಳನ್ನು ಆಶ್ರಯಿಸಿಕೊಂಡಿರುವದಿಲ್ಲ[2]. ಮತ್ತು ಅವನು ಯಾದೃಚ್ಛಿಕನಾಗಿರಬೇಕು, ತಾನೇ ದೊರಕಿದ ಕೌಪೀನವನ್ನು ಹಾಕಿಕೊಳ್ಳುವದು, (ಒಂದು) ಕವಳ ಅನ್ನದಿಂದಲೇ ದೇಹವನ್ನು ಕಾಪಾಡಿಕೊಳ್ಳುವದು[3]-(ಹೀಗಿರಬೇಕು) ಎಂದರ್ಥ[4].

ತತ್ತ್ವಮಾಧ್ಯಾತ್ಮಿಕಂ ದೃಷ್ಟ್ವಾ ತತ್ತ್ವಂ ದೃಷ್ಟ್ವಾ ತು ಬಾಹ್ಯತಃ ।
ತತ್ತ್ವೀಭೂತಸ್ತದಾರಾಮಸ್ತತ್ತ್ವಾದಪ್ರಚ್ಯುತೋ ಭವೇತ್ ॥೩೮॥

೩೮. ಒಳಗಿನ ತತ್ತ್ವವನ್ನು ಕಂಡುಕೊಂಡು, ಹೊರಗಿನ ತತ್ತ್ವವನ್ನೂ ಕಂಡುಕೊಂಡು ತತ್ತ್ವವೇ (ತಾನಾ)ಗಿ ಅದರಲ್ಲಿಯೇ ರತನಾಗಿ, ತತ್ತ್ವದಿಂದ ಜಾರಿಬೀಳದೆ ಇರಬೇಕು.

(ಭಾಷ್ಯ)

೧೨೬. ಬಾಹ್ಯಂ ಪೃಥಿವ್ಯಾದಿತತ್ತ್ವಮ್, ಆಧ್ಯಾತ್ಮಿಕಂ ಚ ದೇಹಾದಿಲಕ್ಷಣಂ ರಜ್ಜು

---

1. 'ಚಲನಿಕೇತಃ' ಎಂಬ ಮಾತು ಭಾಷ್ಯಮೂಲದಲ್ಲಿ ಬಿಟ್ಟುಹೋಗಿದೆ ಎಂದು ಕಲ್ಪಿಸಲಾಗಿದೆ.

2. ಹೊರಗಿನ ಮನೆ, ಮಠ-ಮುಂತಾದವುಗಳಿಲ್ಲದವನಾಗಿರುತ್ತಾನೆ ಎಂದರ್ಥ. ಆ. ಧ. ೧-೮-೨೨-೪ ರಲ್ಲಿರುವ ಆತ್ಮಸ್ವರೂಪವರ್ಣನೆಯನ್ನು ನೋಡಿ.

3. ಗೌ. ಧ. ೧-೩-೧೭, ೧೮ ನ್ನು ನೋಡಿ.

4. ಈ ಕಾರಿಕೆಯ ಮೊದಲನೆ ಅರ್ಧದ ಅಭಿಪ್ರಾಯವನ್ನು ಮೋ. ಧ. ೨೪೫-೨೪ ಮುಂತಾದ ಸ್ಮೃತಿವಾಕ್ಯಗಳಲ್ಲಿ ಕಾಣಬಹುದು.

ಸರ್ಪಾದಿವತ್ ಸ್ವಪ್ನಮಾಯಾದಿವಚ್ಚ ಅಸತ್ । "ವಾಚಾರಮ್ಭಣಂ ವಿಕಾರೋ ನಾಮ ಧೇಯಮ್" (ಛಾಂ. ೬-೧-೪) ಇತ್ಯಾದಿಶ್ರುತೇಃ । ಆತ್ಮಾ ಚ ಸಬಾಹ್ಯಾಭ್ಯನ್ತರೋ ಹ್ಯಜಃ, ಅಪೂರ್ವಃ, ಅನಪರಃ[1], ಅನನ್ತರಃ, ಅಬಾಹ್ಯಃ, ಕೃತ್ಸ್ನಃ, ತಥಾ ಆಕಾಶವತ್ ಸರ್ವಗತಃ, ಸೂಕ್ಷ್ಮಃ, ಅಚಲಃ, ನಿರ್ಗುಣಃ, ನಿಷ್ಕಲಃ, ನಿಷ್ಕ್ರಿಯಃ । "ತತ್ಸತ್ಯಂ ಸ ಆತ್ಮಾ ತತ್ತ್ವಮಸಿ" (ಛಾಂ. ೬-೮-೧೬) ಇತಿ ಶ್ರುತೇಃ । ಇತಿ ಏವಂ ತತ್ತ್ವಂ ದೃಷ್ಟ್ವಾ । ತತ್ಕ್ಷೀಭೂತಃ । ತದಾರಾಮಃ ನ ಬಾಹ್ಯರಮಣಃ । ಯಥಾ ಅತತ್ತ್ವದರ್ಶೀ ಕಶ್ಚಿತ್ ಚಿತ್ತಮ್ ಆತ್ಮತ್ವೇನ ಪ್ರತಿಪನ್ನಃ ಚಿತ್ತಚಲನಮ್ ಅನು ಚಲಿತಮ್ ಆತ್ಮಾನಂ ಮನ್ಯಮಾನಃ ತತ್ಕ್ಷತ್ ಚಲಿತಂ ದೇಹಾದಿಭೂತಮ್ ಆತ್ಮಾನಂ ಕದಾಚಿತ್ ಮನ್ಯತೇ "ಪ್ರಚ್ಯುತೋಽಹಮ್ ಆತ್ಮತತ್ತ್ವಾತ್ ಇದಾನೀಮ್" ಇತಿ । ಸಮಾಹಿತೇ ತು ಮನಸಿ ಕದಾಚಿತ್ ತತ್ಕ್ಷೀಭೂತಂ ಪ್ರಸನ್ನಮ್ ಆತ್ಮಾನಂ[2] ಮನ್ಯತೇ 'ಇದಾನೀಮ್ ಅಸ್ಮಿ ತತ್ಕ್ಷೀಭೂತಃ' ಇತಿ, ನ ತಥಾ ಆತ್ಮವಿದ್ಭವೇತ್ । ಆತ್ಮನಃ ಏಕರೂಪತ್ವಾತ್, ಸ್ವರೂಪ ಪ್ರಚ್ಯವನಾಸಂಭವಾಚ್ಚ । 'ಸದೈವ ಬ್ರಹ್ಮಾಸ್ಮಿ' ಇತಿ ಅಪ್ರಚ್ಯುತೋ ಭವೇತ್ ತತ್ತ್ವಾತ್ । ಸದಾ ಅಪ್ರಚ್ಯುತಾತ್ಮತತ್ತ್ವದರ್ಶನೋ ಭವೇತ್ ಇತ್ಯಭಿಪ್ರಾಯಃ । "ಶುನಿ ಚೈವ ಶ್ವಪಾಕೇ ಚ" (ಗೀ. ೫-೧೮), "ಸಮಂ ಸರ್ವೇಷು ಭೂತೇಷು" (ಗೀ. ೧೩-೨೭) ಇತ್ಯಾದಿಸ್ಮೃತೇಃ ॥

(ಭಾಷ್ಯಾರ್ಥ)

ಹೊರಗಿನ ಪೃಥಿವ್ಯಾದಿಗಳ ತತ್ತ್ವವೂ ಒಳಗಿನ ಶರೀರವೇ ಮುಂತಾದ ರೂಪದ (ವಸ್ತುಗಳ ತತ್ತ್ವವೂ) ಹಗ್ಗದ ಹಾವು ಮುಂತಾದವುಗಳಂತೆಯೂ ಕನಸು, ಮಾಯೆ-ಮುಂತಾದವುಗಳಂತೆಯೂ ಅಸತ್ತು, "ಕಾರ್ಯವು ಮಾತಿನಿಂದಾದ ಹೆಸರು ಮಾತ್ರ" (ಛಾಂ. ೬-೧-೪)-ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣವು. ಮತ್ತು ಆತ್ಮನು ಒಳಗೂ ಹೊರಗೂ ಜನ್ಮವಿಲ್ಲದವನೇ[3] ; ಹಿಂದಿಲ್ಲದವನು, ಮುಂದಿಲ್ಲದವನು, ಒಳಗಿಲ್ಲದವನು, ಹೊರಗಿಲ್ಲದವನು, ಪೂರ್ಣನು, ಮತ್ತು ಆಕಾಶದಂತೆ ಸರ್ವಗತನೂ ಸೂಕ್ಷ್ಮನೂ (ಆದವನು), ಅಲುಗಾಡದವನು, ಗುಣಗಳಿಲ್ಲದವನು, ಅವಯವಗಳಿಲ್ಲದ

1. ಈ ಮಾತುಗಳು ವಾ॥ ಪಾಠದಲ್ಲಿವೆ.

2. 'ತತ್ತ್ವಭೂತಂ' ಎಂಬದಕ್ಕಿಂತ ಇದೇ ಸರಿಯಾದ ಪಾಠವೆಂದು ತೋರುತ್ತದೆ. ಏಕೆಂದರೆ ಮೂಲದಲ್ಲಿ ಇದೇ ಇದೆ. 'ಪ್ರಸನ್ನಾತ್ಮಾನಂ' ಎಂಬುದಕ್ಕಿಂತ ಈ ವಾ॥ ಪಾಠವೇ ಮೇಲು.

3. ಇಲ್ಲಿರುವ ಆತ್ಮವಿಶೇಷಣಗಳನ್ನು ಮುಂಡಕ, ಬೃಹದಾರಣ್ಯಕ-ಮುಂತಾದ ಹಲವು ಶ್ರುತಿಗಳಿಂದ ಆರಿಸಿಕೊಂಡಿದೆ ಎಂಬುದು ಸ್ಪಷ್ಟ.

ವನು, ಕ್ರಿಯೆಯಿಲ್ಲದವನು, ''ಅದು ಸತ್ಯವು, ಅದು ಆತ್ಮನು ; ಅದೇ ನೀನಾಗಿರುವೆ'' (ಛಾಂ. ೬-೮-೭) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಹೀಗೆಂದು ತತ್ತ್ವವನ್ನು ಕಂಡುಕೊಂಡು[1] ತತ್ತ್ವವೇ ಆದವನಾಗಿ ಅದರಲ್ಲಿ ಆರಾಮನಾಗಿ, ಎಂದರೆ ಹೊರಗಿನ (ವಸ್ತುಗಳಲ್ಲಿ) ರತನಾಗದೆ (ಎಂದರ್ಥ). ಹೇಗೆ ತತ್ತ್ವವನ್ನು ಕಂಡುಕೊಳ್ಳದವನೊಬ್ಬನು ಚಿತ್ತವನ್ನೇ (ತನ್ನ) ಆತ್ಮನೆಂದು ತಿಳಿದುಕೊಂಡು ಚಿತ್ತವು ಚಲಿಸಿದ್ದನ್ನು ಅನುಸರಿಸಿ ತಾನೂ ಚಲಿತನಾದೆನೆಂದು ಭಾವಿಸಿಕೊಳ್ಳುತ್ತಾ, 'ನಾನು ಈಗ ಆತ್ಮತತ್ತ್ವದಿಂದ ಜಾರಿಬಿದ್ದೆನು' ಎಂದು ತತ್ತ್ವದಿಂದ ಚಲಿಸಿ ದೇಹಾದಿಗಳೇ ತಾನು ಆದೆನೆಂದು ಒಂದು ಸಲ ಎಣಿಸಿಕೊಳ್ಳುವನೋ, ಆದರೆ ಮತ್ತೊಮ್ಮೆ ಮನಸ್ಸು ಸಮಾಧಾನವನ್ನು ಹೊಂದಿದರೆ 'ಈಗ ತತ್ತ್ವವಾದೆನು' ಎಂದು ತಾನು ತತ್ತ್ವವೇ ಆಗಿ ಪ್ರಸನ್ನನಾದೆನೆಂದು ಎಣಿಸಿಕೊಳ್ಳುವನೋ, ಹಾಗೆ ಆತ್ಮಜ್ಞಾನಿಯು ಆಗಬಾರದು. ಏಕೆಂದರೆ ಆತ್ಮನು ಒಂದೇ ರೂಪದವನಾಗಿರುತ್ತಾನೆ, (ಅವನು ತನ್ನ) ಸ್ವರೂಪದಿಂದ ಜಾರಿಬೀಳುವದೆಂಬುದೂ ಆಗುವಂತಿಲ್ಲ[2]. (ಆದ್ದರಿಂದ) 'ಯಾವಾಗಲೂ ಬ್ರಹ್ಮವಾಗಿರುವೆನು' ಎಂದು ತತ್ತ್ವದಿಂದ ಜಾರಿಬೀಳದೆ ಇರಬೇಕು. ''ನಾಯಿಯಲ್ಲಿಯೂ ಚಂಡಾಲನಲ್ಲಿಯೂ (ಪಂಡಿತರು ಸಮದರ್ಶಿಗಳಾಗಿರುವರು.'' ಗೀ. ೫-೧೮) ''ಎಲ್ಲಾ ಪ್ರಾಣಿಗಳಲ್ಲಿಯೂ ಸಮವಾಗಿರುವ'' (ಅವು ನಾಶವಾದರೂ ನಾಶವಾಗದ ಪರಮೇಶ್ವರನನ್ನು ಕಂಡವನೇ ತತ್ತ್ವವನ್ನು ಕಂಡವನು. ಗೀ. ೧೩-೨೭) ಮುಂತಾದ ಸ್ಮೃತಿಯು ಇದಕ್ಕೆ ಪ್ರಮಾಣವು[3].

******

1. ಬಾಹ್ಯಾಧ್ಯಾತ್ಮಿಕವಾದ ಅನಾತ್ಮವು ಅಸತ್ತಾಗಿರುವದೆಂಬುದು ಅವುಗಳ ತತ್ತ್ವ ; ಆತ್ಮನು ಯಾವಾಗಲೂ ಸತ್ತೇ ಎಂಬುದು ಆತ್ಮನ ತತ್ತ್ವವು. ಗೀ. ಭಾ. ೧೩-೨೬.

2. ಇಲ್ಲಿ ಖಂಡಿಸಿರುವ ಪೂರ್ವಪಕ್ಷವನ್ನು ಧ್ಯಾನವಾದಿಗಳಾದ ಕೆಲವರು ವೇದಾಂತಿಗಳು ಅವಲಂಬಿಸಿದ್ದರು. ಈ ಕಾರಿಕೆಗೆ ಅವರು ಮಾಡುತ್ತಿದ್ದ ಅರ್ಥವನ್ನೇ ಇಲ್ಲಿ ಅನುವಾದ ಮಾಡಿಕೊಂಡಿದೆ. ವಿವರಕ್ಕಾಗಿ ನೋಡಿ.

3. ಈ ವಾಕ್ಯಗಳಲ್ಲಿ ತತ್ತ್ವಜ್ಞಾನವನ್ನೇ ಹೇಳದೆ ; ತತ್ತ್ವಭಾವನೆಯನ್ನಲ್ಲ.

# ೩. ಅದ್ವೈತಪ್ರಕರಣ

## ಗ್ರಂಥಸಂಬಂಧ

(ಭಾಷ್ಯ)

೧೨೭. ಓಙ್ಕಾರನಿರ್ಣಯೇ ಉಕ್ತಃ ಪ್ರಪಞ್ಚೋಪಶಮಃ ಶಿವಃ ಅದ್ವೈತಃ ಆತ್ಮಾ ಇತಿ ಪ್ರತಿಜ್ಞಾಮಾತ್ರೇಣ । "ಜ್ಞಾತೇ ದ್ವೈತಂ ನ ವಿದ್ಯತೇ" (೧-೧೮) ಇತಿ ಚ । ತತ್ರ ದ್ವೈತಾಭಾವಸ್ತು ವೈತಥ್ಯಪ್ರಕರಣೇನ ಸ್ವಪ್ನಮಾಯಾಗನ್ಧರ್ವನಗರಾದಿದೃಷ್ಟಾನ್ತೈಃ ದೃಶ್ಯತ್ವಾದ್ಯನ್ತವತ್ತ್ವಾದಿಹೇತುಭಿಃ ತರ್ಕೇಣ ಚ ಪ್ರತಿಪಾದಿತಃ । ಅದ್ವೈತಂ ಕಿಮ್ ಆಗಮ ಮಾತ್ರೇಣ ಪ್ರತಿಪತ್ತವ್ಯಮ್, ಆಹೋಸ್ವಿತ್ ತರ್ಕೇಣಾಪಿ ಇತಿ ? ಉತ ಆಹ-ಶಕ್ಯತೇ ತರ್ಕೇಣಾಪಿ ಜ್ಞಾತುಮ್ । ತತ್ ಕಥಮ್ ಇತಿ ಅದ್ವೈತಪ್ರಕರಣಮ್ ಆರಭ್ಯತೇ ॥

(ಭಾಷ್ಯಾರ್ಥ)

ಓಂಕಾರವನ್ನು ನಿರ್ಣಯಮಾಡುವಾಗ[1] ಆತ್ಮನು ಪ್ರಪಂಚೋಪಶಮನು, ಶಿವನು, ಅದ್ವೈತನು-ಎಂದು ಪ್ರತಿಜ್ಞಾಮಾತ್ರದಿಂದ[2] ಹೇಳಿತ್ತು. "ಅರಿತರೆ ದ್ವೈತ ವಿರುವದಿಲ್ಲ" (೧-೧೮) ಎಂದೂ ಹೇಳಿತ್ತು. ಇವೆ(ರಡ)ರಲ್ಲಿ[3] ದ್ವೈತವಿರುವದಿಲ್ಲ ವೆಂಬುದನ್ನು ಮಾತ್ರ ವೈತಥ್ಯಪ್ರಕರಣದಲ್ಲಿ ಕನಸು, ಮಾಯೆ, ಗಂಧರ್ವನಗರ ಮುಂತಾದ[4] ದೃಷ್ಟಾಂತಗಳಿಂದ ದೃಶ್ಯವಾಗಿರುವದು, ಮೊದಲು ಕೊನೆಗಳಿರುವದು-ಮುಂತಾದ[5] ಹೇತುಗಳ (ಆಧಾರ)ದಿಂದ ತರ್ಕದಿಂದಲೂ ತಿಳಿಸಿಕೊಟ್ಟಿದ್ದಾಯಿತು. (ಇನ್ನು) ಅದ್ವೈತವನ್ನು ಬರಿಯ ಆಗಮದಿಂದಲೇ ತಿಳಿದುಕೊಳ್ಳಬೇಕೊ, ಅಥವಾ ತರ್ಕದಿಂದಲೂ (ಅದನ್ನು ತಿಳಿದುಕೊಳ್ಳುವದಕ್ಕಾಗಿತೊ) ?-ಎಂದರೆ ಇದಕ್ಕೆ ಹೇಳುತ್ತಾರೆ : (ಇದನ್ನು) ತರ್ಕದಿಂದಲೂ ತಿಳಿದುಕೊಳ್ಳುವದಕ್ಕೆ ಆಗುತ್ತದೆ. ಅದು ಹೇಗೆ ಎಂಬುದನ್ನು (ತಿಳಿಸುವದಕ್ಕೆ) ಅದ್ವೈತಪ್ರಕರಣವನ್ನು ಪ್ರಾರಂಭಿಸಿರುತ್ತದೆ.

1. "ಓಙ್ಕಾರನಿರ್ಣಯಃ ಉಕ್ತಃ"-ಎಂದು ಭಾಷ್ಯಪಾಠವನ್ನು ಒಪ್ಪಿದರೆ ಓಂಕಾರವು ಪ್ರಪಂಚವಿಲ್ಲದ, ಶಿವ, ಅದ್ವೈತ, ಆತ್ಮನೇ ಎಂದು ಹೇಳಿತ್ತು ಎಂದೂ ಅರ್ಥಮಾಡಬಹುದು. ಉಪನಿಷತ್ತಿನ ೭, ೧೨ನೆಯ ಮಂತ್ರಗಳನ್ನು ನೋಡಿರಿ.

2. ಆಗಮಪ್ರಕರಣವು ಉಪದೇಶಪ್ರಧಾನವಾದದ್ದು ; ಅಲ್ಲಿ ಹೇಳಿರುವದಕ್ಕೆ ಅಲ್ಲಿ ಯುಕ್ತಿಯನ್ನು ಕೊಟ್ಟಿಲ್ಲ.

3. ಅದ್ವೈತ, ದ್ವೈತಮಿಥ್ಯಾತ್ವ-ಇವೆರಡರಲ್ಲಿ. 4. ೨-೩, ೨-೧೭ ಇವುಗಳಲ್ಲಿ ಈ ದೃಷ್ಟಾಂತಗಳಿವೆ. 5. ೨-೪, ೬ ಈ ಕಾರಿಕೆಗಳನ್ನು ನೋಡಿ.

ಉಪಾಸನಾಶ್ರಿತೋ ಧರ್ಮೋ ಜಾತೇ ಬ್ರಹ್ಮಣಿ ವರ್ತತೇ ।
ಪ್ರಾಗುತ್ಪತ್ತೇರಜಂ ಸರ್ವಂ ತೇನಾಸೌ ಕೃಪಣಃ ಸ್ಮೃತಃ ॥೧॥

೧. ಉಪಾಸನೆಯನ್ನಾಶ್ರಯಿಸಿರುವ ಧರ್ಮನು ಉತ್ಪತ್ತಿಗೆ ಮೊದಲು ಎಲ್ಲವೂ ಅಜವು (ಎಂದು) ಜಾತಬ್ರಹ್ಮದಲ್ಲಿ ಇದ್ದುಕೊಂಡಿರುತ್ತಾನೆ. ಅದರಿಂದ ಇವನು ಕೃಪಣನೆನಿಸುವನು.

(ಭಾಷ್ಯ)

೧೨೮. ಉಪಾಸ್ಯೋಪಾಸನಾದಿಭೇದಜಾತಂ ಸರ್ವಂ ವಿತಥಮ್, ಕೇವಲಶ್ಚ ಆತ್ಮಾ ಅದ್ವಯಃ ಪರಮಾರ್ಥಃ ಇತಿ ಸ್ಥಿತಮ್ ಅತೀತೇ ಪ್ರಕರಣೇ । ಯತಃ ಉಪಾಸನಾಶ್ರಿತಃ ಉಪಾಸನಮ್ ಆತ್ಮನಃ ಮೋಕ್ಷಸಾಧನತ್ವೇನ ಗತಃ "ಉಪಾಸಕೋಽಹಮ್, ಮಮ ಉಪಾಸ್ಯಂ ಬ್ರಹ್ಮ । ತದುಪಾಸನಂ ಕೃತ್ವಾ ಜಾತೇ ಬ್ರಹ್ಮಣಿ ಇದಾನೀಂ ವರ್ತಮಾನಃ ಅಜಂ ಬ್ರಹ್ಮ ಶರೀರಪಾತಾತ್ ಊರ್ಧ್ವಂ ಪ್ರತಿಪತ್ಸ್ಯೇ । ಪ್ರಾಗುತ್ಪತ್ತೇಶ್ಚ ಅಜಮಿದಂ ಸರ್ವಮ್ ಅಹಂ ಚ । ಯದಾತ್ಮಕೋಽಹಂ ಪ್ರಾಗುತ್ಪತ್ತೇಃ, ಇದಾನೀಂ ಜಾತೋ ಜಾತೇ ಬ್ರಹ್ಮಣಿ ಚ ವರ್ತಮಾನಃ ಉಪಾಸನಯಾ ಪುನಃ ತದೇವ ಪ್ರತಿಪತ್ಸ್ಯೇ" ಇತ್ಯೇವಮ್ ಉಪಾಸನಾಶ್ರಿತಃ [illegible]ಃ ಸಾಧಕಃ ಯೇನ ಏವಂ ಕ್ಷುದ್ರಬ್ರಹ್ಮವಿತ್ ತೇನ ಅಸೌ ಕಾರಣೇನ ಕೃಪಣಃ ದೀನಃ ಅಲ್ಪಕಃ ಸ್ಮೃತಃ ನಿತ್ಯಾಜಬ್ರಹ್ಮದರ್ಶಿಭಿಃ ಇತ್ಯಭಿಪ್ರಾಯಃ । [illegible]ಜಾನಭ್ಯುಪಿತಂ ಯೇನ ವಾಗಭ್ಯುದ್ಯತೇ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ (ಕೇ. ೧-೪) ಇತ್ಯಾದಿ ಶ್ರುತೇಸ್ತಲವಕಾರಾಣಾಮ್ ॥

(ಭಾಷ್ಯಾರ್ಥ)

ಉಪಾಸ್ಯ[1], ಉಪಾಸನೆ-ಮುಂತಾದ ಭೇದಸಮೂಹವೆಲ್ಲವೂ ವಿತಥವೇ, ತನಗೆರಡನೆಯದಿಲ್ಲದ ಆತ್ಮನೊಬ್ಬನೇ ಪರಮಾರ್ಥವು-ಎಂದು ಹಿಂದಿನ ಪ್ರಕರಣದಲ್ಲಿ ಸಿದ್ಧವಾಗಿರುತ್ತದೆ. ಯಾವ ಕಾರಣದಿಂದ, ಉಪಾಸನೆಯನ್ನಾಶ್ರಯಿಸಿರುವ ಉಪಾಸನೆಯು ತನಗೆ ಮೋಕ್ಷಸಾಧನವು ಎಂದುಕೊಂಡವನಾಗಿ "ನಾನು ಉಪಾಸಕನು, ನನಗೆ ಬ್ರಹ್ಮವು ಉಪಾಸ್ಯ(ವಾಗಿದೆ) ; ಅದರ ಉಪಾಸನೆಯನ್ನು ಮಾಡಿ ಹುಟ್ಟಿರುವ ಬ್ರಹ್ಮದಲ್ಲಿ[2] ಈಗ ಇರುವವನಾಗಿ ಜನ್ಮರಹಿತವಾದ ಬ್ರಹ್ಮವನ್ನು (ನಾ) ಶರೀರವು ಬಿದ್ದಬಳಿಕ

1. ಉಪಾಸನೆಗೆ ವಿಷಯ 2 ಜಗದ್ರೂಪವಾಗಿ ಪರಿಣಮಿಸಿರುವ ಬ್ರಹ್ಮದಲ್ಲಿ.

ಪಡೆದುಕೊಳ್ಳುವೆನು[1] ಸೃಷ್ಟಿಯಾಗುವದಕ್ಕೆ ಮೊದಲು ಇದೆಲ್ಲವೂ ನಾನೂ ಹುಟ್ಟಿಲ್ಲದ (ಬ್ರಹ್ಮವೇ ಆಗಿದ್ದೆವು). ಸೃಷ್ಟಿಗೆ ಮೊದಲು ನಾನು ಯಾವ ಸ್ವರೂಪವಾಗಿದ್ದು, ಈಗ ಹುಟ್ಟಿ ಹುಟ್ಟಿರುವ ಬ್ರಹ್ಮದಲ್ಲಿದ್ದುಕೊಂಡಿರುವೆನೋ, ಮತ್ತೆ ಉಪಾಸನೆಯಿಂದ ಅದೇ (ಬ್ರಹ್ಮವನ್ನು) ಪಡೆದುಕೊಳ್ಳುವೆನು'' ಎಂದೀ ಪರಿಯಲ್ಲಿ ಉಪಾಸನೆಯನ್ನು ಆಶ್ರಯಿಸಿಕೊಂಡಿರುವ ಧರ್ಮನು,[2] ಸಾಧಕನು, ಈ ರೀತಿಯಲ್ಲಿ ಯಾವ (ಕಾರಣ)ದಿಂದ ಕೀಳು ಬ್ರಹ್ಮವನ್ನು (ಮಟ್ಟಿಗೆ) ಅರಿತವನಾಗಿರುವನೋ, ಆ ಕಾರಣದಿಂದ ಅವನು ಕೃಪಣನು[3], ದೀನನು, ಅಲ್ಪನು-ಎಂದು ನಿತ್ಯವಾದ ಹುಟ್ಟಿಲ್ಲದ ಬ್ರಹ್ಮವನ್ನು ಕಂಡುಕೊಂಡವರಿಂದ ಅನ್ನಿಸಿಕೊಳ್ಳುತ್ತಾನೆ ಎಂದು ಅಭಿಪ್ರಾಯ. ''ಯಾವದು ಮಾತಿನಿಂದ ಹೇಳುವದಕ್ಕಾಗದೋ ಯಾವದರಿಂದ ಮಾತೇ ಹೇಳಲ್ಪಡುವದೋ ಅದೇ ಬ್ರಹ್ಮವೆಂದು ನೀನು ಅರಿತುಕೊ. ಇದು ಎಂದು ಉಪಾಸನೆ ಮಾಡುವರಲ್ಲ, ಇದಲ್ಲ'' (ಕೇ. ೧-೪) ಎಂದು ಮೊದಲಾಗಿರುವ ತಲವಕಾರಶ್ರುತಿ ಇದಕ್ಕೆ ಪ್ರಮಾಣವು.

## ಅಜಾತಬ್ರಹ್ಮವಾದಕ್ಕೆ ಅವತರಣಿಕೆ

(ಭಾಷ್ಯ)

೧೨೯. ಸಬಾಹ್ಯಾಭ್ಯನ್ತರಮ್, ಅಜಮ್ ಆತ್ಮಾನಂ ಪ್ರತಿಪತ್ತುಮ್ ಅಶಕ್ನುವನ್ ಅವಿದ್ಯಯಾ ದೀನಮ್ ಆತ್ಮಾನಂ ಮನ್ಯಮಾನಃ, ''ಜಾತೋಽಹಮ್, ಜಾತೇ ಬ್ರಹ್ಮಣಿ ವರ್ತೇ, ತದುಪಾಸನಾಶ್ರಿತಃ ಸನ್ ಬ್ರಹ್ಮ ಪ್ರತಿಪತ್ಸ್ಯೇ'' ಇತ್ಯೇವಂ ಪ್ರತಿಪನ್ನಃ ಕೃಪಣೋ ಭವತಿ ಯಸ್ಮಾತ್-

(ಭಾಷ್ಯಾರ್ಥ)

ಒಳಗೂ ಹೊರಗೂ ಹುಟ್ಟಿಲ್ಲದ ಆತ್ಮನನ್ನು ಅರಿಯಲಾರದೆ ಅವಿದ್ಯೆಯಿಂದ ತಾನು ದೀನನೆಂದು ಭಾವಿಸಿಕೊಂಡು ''ನಾನು ಹುಟ್ಟಿರುವೆನು, ಹುಟ್ಟಿದ ಬ್ರಹ್ಮದಲ್ಲಿ ಇರುತ್ತೇನೆ, ಅದರ ಉಪಾಸನೆಯನ್ನು ಆಶ್ರಯಿಸಿಕೊಂಡು ಬ್ರಹ್ಮವನ್ನು ಪಡೆಯುವೆನು'' ಎಂದೀ ಪರಿಯಲ್ಲಿ ತಿಳಿದುಕೊಂಡಿರುವವನು ಕೃಪಣನಾಗುವನಲ್ಲವೆ,-

1. ಉಪಾಸನೆಯನ್ನು ಮಾಡಿ ಸಾಕ್ಷಾತ್ಕಾರಮಾಡಿಕೊಂಡರೆ ಶರೀರವನ್ನು ಬಿಟ್ಟ ಬಳಿಕ ಅರ್ಚಿರಾದಿಮಾರ್ಗದಿಂದ ಹೋಗಿ ಬ್ರಹ್ಮಸಾಯುಜ್ಯವನ್ನು ಪಡೆಯುತ್ತಾನೆಂದು ಉಪನಿಷತ್ತುಗಳಲ್ಲಿ ಹೇಳಿದೆ.

2. ಧರ್ಮ ಎಂಬ ಮಾತನ್ನು ಜೀವ ಎಂಬ ಅರ್ಥದಲ್ಲಿ ಕಾರಿಕಾಕಾರರು ಅಲ್ಲಲ್ಲಿ ಉಪಯೋಗಿಸಿರುತ್ತಾರೆ. ದೇಹಧಾರಣಮಾಡಿರುವದರಿಂದ ಧರ್ಮನೆನಿಸುವನು ಎಂದು ಆಗಿ ವ್ಯಾಖ್ಯಾನದಲ್ಲಿ ಕಲ್ಪಿಸಿದೆ. ಈ ಪ್ರಯೋಗಕ್ಕೆ ಕ. ೨-೨-೧೪ ನೋಡಿ. 3. ಬೃ. ೩-೮-೧೦ರ ಸೂಚನೆ.

ಅತೋ ವಕ್ಷ್ಯಾಮ್ಯಕಾರ್ಪಣ್ಯಮಜಾತಿ ಸಮತಾಂ ಗತಮ್
ಯಥಾ ನ ಜಾಯತೇ ಕಿಂಚಿಜ್ಜಾಯಮಾನಂ ಸಮನ್ತತಃ ॥೨॥

೨. ಆದ್ದರಿಂದ ಅಕಾರ್ಪಣ್ಯವಾದ ಹುಟ್ಟಿಲ್ಲದ ಸಮತೆಯನ್ನು ಹೊಂದಿರುವ (ಬ್ರಹ್ಮವು) ಎಲ್ಲೆಲ್ಲಿಯೂ ಹುಟ್ಟುತ್ತಿದ್ದರೂ ಸ್ವಲ್ಪವೂ ಹುಟ್ಟುವದಿಲ್ಲವೆಂಬುದು ಹೇಗೆಂಬುದನ್ನು ಹೇಳುವೆನು.

(ಭಾಷ್ಯ)

೧೩೦. ಅತಃ ವಕ್ಷ್ಯಾಮಿ ಅಕಾರ್ಪಣ್ಯಮ್ ಅಕೃಪಣಭಾವಮ್ ಅಜಂ ಬ್ರಹ್ಮ । ತದ್ ಹಿ ಕಾರ್ಪಣ್ಯಾಸ್ಪದಮ್ ''ಯತ್ರಾನ್ಯೋಽನ್ಯತ್ ಪಶ್ಯತ್ಯನ್ಯಚ್ಛೃಣೋತ್ಯನ್ಯದ್ವಿಜಾನಾತಿ ತದಲ್ಪಮ್, ಮರ್ತ್ಯಮ್, ಅಸತ್''[1] (ಛಾಂ. ೭-೨೪-೧) ''ವಾಚಾರಂಭಣಂ ವಿಕಾರೋ ನಾಮಧೇಯಮ್'' (ಛಾಂ. ೬-೧-೪) ಇತ್ಯಾದಿಶ್ರುತಿಭ್ಯಃ । ತದ್ವಿಪರೀತಂ ಸಬಾಹ್ಯಾಭ್ಯನ್ತರಮಜಮ್ ಅಕಾರ್ಪಣ್ಯಂ ಭೂಮಾಖ್ಯಂ ಬ್ರಹ್ಮ । ಯತ್ ಪ್ರಾಪ್ಯ ಅವಿದ್ಯಾಕೃತಸರ್ವಕಾರ್ಪಣ್ಯನಿವೃತ್ತಿಃ ತತ್ ಅಕಾರ್ಪಣ್ಯಂ ವಕ್ಷ್ಯಾಮಿ ಇತ್ಯರ್ಥಃ । ತತ್ ಅಜಾತಿ ಅವಿದ್ಯಮಾನಾ ಜಾತಿಃ ಅಸ್ಯ । ಸಮತಾಂ ಗತಂ ಸರ್ವಸಾಮ್ಯಂ ಗತಮ್ । ಕಸ್ಮಾತ್ ? ಅವಯವವೈಷಮ್ಯಾಭಾವಾತ್ । ಯತ್ ಹಿ ಸಾವಯವಂ ವಸ್ತು ತತ್ ಅವಯವೈಃ ವೈಷಮ್ಯಂ[2] ಗಚ್ಛತ್ 'ಜಾಯತೇ' ಇತಿ ಉಚ್ಯತೇ । ಇದಂ ತು ನಿರವಯವತ್ವಾತ್ ಸಮತಾಂ ಗತಮ್ ಇತಿ ನ ಕೈಶ್ಚಿತ್ ಅವಯವೈಃ ಸ್ಫುಟತಿ । ಅತಃ ಅಜಾತಿ, ಅಕಾರ್ಪಣ್ಯಮ್ ಸಮನ್ತತಃ ಸಮನ್ತಾತ್ । ಯಥಾ ನ ಜಾಯತೇ ಕಿಂಚಿತ್ ಅಲ್ಪಮಪಿ ನ ಸ್ಫುಟತಿ । ರಜ್ಜುಸರ್ಪವತ್ ಅವಿದ್ಯಾಕೃತದೃಷ್ಟ್ಯಾ ಜಾಯಮಾನಂ ಯೇನ ಪ್ರಕಾರೇಣ ನ ಜಾಯತೇ ಸರ್ವತಃ ಅಜಮೇವ ಬ್ರಹ್ಮ ಭವತಿ । ತಂ ಪ್ರಕಾರಂ ಶೃಣು ಇತ್ಯರ್ಥಃ ॥

(ಭಾಷ್ಯಾರ್ಥ)

ಆದ್ದರಿಂದ ಅಕಾರ್ಪಣ್ಯವಾದ ಕೃಪಣತ್ವವಿಲ್ಲದ ಹುಟ್ಟಿಲ್ಲದ ಬ್ರಹ್ಮವನ್ನು ಹೇಳುವೆನು. ''ಎಲ್ಲಿ ಒಬ್ಬನು ಮತ್ತೊಂದನ್ನು ಕಾಣುತ್ತಾನೋ, ಮತ್ತೊಂದನ್ನು ಕೇಳುತ್ತಾನೋ, ಮತ್ತೊಂದನ್ನು ಅರಿಯುತ್ತಾನೋ ಅದಲ್ಲವೆ, ಕೃಪಣತ್ವಕ್ಕೆ ಎಡೆಯಾಗಿರುವದು ? ಅದು ಅಲ್ಪವು, ನಾಶವಾಗತಕ್ಕದ್ದು, ಅಸತ್ತು (ಛಾಂ. ೭-೨೪-೧)'' ''ವಿಕಾರ

---

1. ಇದು ಛಾಂದೋಗ್ಯವಾಕ್ಯದ ಅರ್ಧವು ; ಅದರಲ್ಲಿ 'ಅನ್ಯೋ' ಎಂಬ ಮಾತಿಲ್ಲ. ಅಸತ್ ಎಂಬುದೂ ಇಲ್ಲ. 'ಮರ್ತ್ಯಂ ತತ್' ಎಂದು ವಾ॥ ಮೈ॥

2. ''ತದವಯವವೈಷಮ್ಯಮ್'' ವಾ॥ ; ''ತದವಯವವೈಷಮ್ಯಾತ್ ವೈಷಮ್ಯಂ'' ಮೈ॥

ವೆಂಬುದು ಮಾತಿನಿಂದಾಗಿರುವ ಬರಿಯ ಹೆಸರು. (ಛಾಂ. ೬-೧-೪)'' ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು. ಇದಕ್ಕೆ ವಿರುದ್ಧವಾಗಿರುವ ಹೊರಗೂ ಒಳಗೂ ಹುಟ್ಟಿಲ್ಲದ ಭೂಮವೆಂಬ ಹೆಸರಿನ ಬ್ರಹ್ಮವು ಕಾರ್ಪಣ್ಯವಿಲ್ಲದ್ದು. ಯಾವದನ್ನು ಪಡೆದು ಕೊಂಡರೆ ಅವಿದ್ಯೆಯಿಂದಾಗಿರುವ ಕಾರ್ಪಣ್ಯವೆಲ್ಲವೂ ತೊಲಗುವದೋ ಆ ಅಕಾರ್ಪಣ್ಯವನ್ನು ಹೇಳುವೆನು ಎಂದರ್ಥ. ಅದು ಅಜಾತಿ ಎಂದರೆ ಹುಟ್ಟು ಅದಕ್ಕೆ ಇಲ್ಲವಾದ್ದರಿಂದ (ಅಜಾತಿ) ; ಸಮತೆಯನ್ನು ಹೊಂದಿರುವದು, ಸರ್ವಸಾಮ್ಯವನ್ನು ಹೊಂದಿರತಕ್ಕದ್ದು. (ಅದು ಹುಟ್ಟಿಲ್ಲದ್ದು ಎಂಬುದಕ್ಕೆ ಕಾರಣ)ವೇನು ? ಎಂದರೆ, ಅವಯವಗಳಿಂದಾದ ಹೆಚ್ಚುಕಡಿಮೆಯಿಲ್ಲದ್ದರಿಂದ. ಯಾವ ವಸ್ತು ಅವಯವಗಳಿಂದ ಕೂಡಿರುವದೋ ಅದು ಅವಯವಗಳಿಂದ ಹೆಚ್ಚುಕಡಿಮೆಯಾಗುವದಾ(ದ್ದರಿಂದ) ಹುಟ್ಟುತ್ತದೆ[1] ಎನಿಸುತ್ತದೆ. ಆದರೆ ಈ (ಬ್ರಹ್ಮ)ವಾದರೋ ಅವಯವಗಳಿಲ್ಲದ್ದಾದ್ದರಿಂದ ಸಮತೆಯನ್ನು ಹೊಂದಿರುವದಾದ್ದರಿಂದ ಯಾವ ಅವಯವಗಳಿಂದಲೂ ಸಿಡಿದುಕೊಳ್ಳುವದಿಲ್ಲ ; ಆದ್ದರಿಂದ ಹುಟ್ಟಿಲ್ಲದ ಅಕಾರ್ಪಣ್ಯವಾಗಿರುತ್ತದೆ. ಎಲ್ಲೆಲ್ಲಿಯೂ ಎಂದರೆ ಎಲ್ಲಾ ಕಡೆಯಲ್ಲಿಯೂ (ಹುಟ್ಟಿಲ್ಲದ್ದು ಎಂದರ್ಥ). ಹೇಗೆ (ಅದು) ಒಂದಿಷ್ಟೂ ಸ್ವಲ್ಪವಾದರೂ ಹುಟ್ಟುವದಿಲ್ಲವೋ ಸಿಡಿದುಕೊಳ್ಳದೆ ಇರುವದೋ, ಹಗ್ಗದ ಹಾವಿನಂತೆ ಅವಿದ್ಯೆಯಿಂದಾದ ದೃಷ್ಟಿಯಿಂದ ಹುಟ್ಟುತ್ತಲೇ ಇರುವದಾಗಿ, ಯಾವ ಪ್ರಕಾರದಿಂದ ಹುಟ್ಟುವದೇ ಇಲ್ಲವೋ ಎಲ್ಲೆಲ್ಲಿಯೂ ಹುಟ್ಟಿಲ್ಲದ ಬ್ರಹ್ಮವೇ ಆಗಿರುವದೋ ಅದನ್ನು (ಹೇಳುತ್ತೇನೆ). ಆ ಪ್ರಕಾರವನ್ನು ಕೇಳು ಎಂದರ್ಥ.

## ಜೀವನ ಹುಟ್ಟೂ ಸಾವೂ ಔಪಾಧಿಕ

(ಭಾಷ್ಯ)

೧೩೧. ಅಜಾತಿ ಬ್ರಹ್ಮ ಅಕಾರ್ಪಣ್ಯಂ ವಕ್ಷ್ಯಾಮಿ ಇತಿ ಪ್ರತಿಜ್ಞಾತಮ್ । ತತ್ಸಿದ್ಧ್ಯರ್ಥಂ ಹೇತುಂ ದೃಷ್ಟಾನ್ತಂ ಚ ವಕ್ಷ್ಯಾಮಿ ಇತ್ಯಾಹ-

(ಭಾಷ್ಯಾರ್ಥ)

ಹುಟ್ಟಿಲ್ಲದ ಅಕಾರ್ಪಣ್ಯವಾದ ಬ್ರಹ್ಮವನ್ನು ಹೇಳುವೆನು-ಎಂದು ತಿಳಿಸಿದ್ದಾಯಿತು ; ಅದನ್ನು ಸಾಧಿಸುವದಕ್ಕೆ ಹೇತುವನ್ನೂ ದೃಷ್ಟಾಂತವನ್ನೂ ಹೇಳೋಣವೆಂದು (ಹೀಗೆ)ನ್ನುತ್ತಾರೆ :-

1. ಅವಯವಗಳ ಹೆಚ್ಚುಕಡಿಮೆಯನ್ನು ಪಡೆಯುವದೇ ಹೊಸದೊಂದು ರೂಪದಿಂದ ಹುಟ್ಟುವದೆಂಬ ವಿಕಾರವು.

ಆತ್ಮಾ ಹ್ಯಾಕಾಶವಜ್ಜೀವೈರ್ಘಟಾಕಾಶೈರಿವೋದಿತಃ ।
ಘಟಾದಿವಚ್ಚ ಸಙ್ಘಾತೈರ್ಜಾತಾವೇತನ್ನಿದರ್ಶನಮ್ ॥೩॥

೩. ಆತ್ಮನು, ಆಕಾಶವು ಘಟಾಕಾಶಗಳ(ರೂಪ)ದಿಂದ ಹೇಗೋ ಹಾಗೆ, ಜೀವರ (ರೂಪ)ದಿಂದಲೂ ಘಟಾದಿಗಳಂತೆ ಸಂಘಾತಗಳ (ರೂಪ)ದಿಂದಲೂ ಹುಟ್ಟುವನು. ಹುಟ್ಟಿಗೆ ಇದು ನಿದರ್ಶನವು.

(ಭಾಷ್ಯ)

೧೩.೨. ಆತ್ಮಾ ಪರಃ ಓ ಯಸ್ಮಾತ್ ಆಕಾಶವತ್ ಸೂಕ್ಷ್ಮಃ ನಿರವಯವಃ ಸರ್ವಗತಃ ತಸ್ಮಾತ್[1] ಆಕಾಶವತ್ ಉಕ್ತಃ । ಜೀವೈಃ ಕ್ಷೇತ್ರಜ್ಞೈಃ ಘಟಾಕಾಶೈರಿವ ಘಟಾಕಾಶತುಲ್ಯೈಃ ಉದಿತಃ ಉಕ್ತಃ ಸ ಏವ ಆಕಾಶಸಮಃ ಪರ ಆತ್ಮಾ । ಅಥವಾ ಘಟಾಕಾಶೈಃ ಯಥಾ ಆಕಾಶ ಉದಿತಃ ಉತ್ಪನ್ನಃ ತಥಾ ಪರಃ ಜೀವಾತ್ಮಭಿಃ ಉತ್ಪನ್ನಃ । ಜೀವಾತ್ಮನಾಂ ಪರಸ್ಮಾತ್ ಆತ್ಮನಃ ಉತ್ಪತ್ತಿಃ ಯಾ ಶ್ರೂಯತೇ ವೇದಾನ್ತೇಷು ಸಾ ಮಹಾಕಾಶಾತ್ ಘಟಾಕಾಶೋತ್ಪತ್ತಿಸಮಾ ನ ಪರಮಾರ್ಥತಃ ಇತ್ಯಭಿಪ್ರಾಯಃ । ತಸ್ಮಾದೇವ ಆಕಾಶಾತ್ ಘಟಾದಯಃ ಸಙ್ಘಾತಾಃ ಯಥಾ ಉತ್ಪದ್ಯನ್ತೇ ಏವಮ್ ಆಕಾಶಸ್ಥಾನೀಯಾತ್ ಪರಮಾತ್ಮನಃ ಪೃಥಿವ್ಯಾದಿಭೂತಸಙ್ಘಾತಾ ಆಧ್ಯಾತ್ಮಿಕಾಶ್ಚ ಕಾರ್ಯಕರಣಲಕ್ಷಣಾಃ ರಜ್ಜುಸರ್ಪವತ್ ಪಿಕಲ್ಪಿತಾಃ ಜಾಯನ್ತೇ । ಅತಃ ಉಚ್ಯತೇ ಘಟಾದಿವಚ್ಚ ಸಙ್ಘಾತೈಃ ಉದಿತಃ ಇತಿ । ಯದಾ ಮನಸಿ ಪ್ರತಿಪಿಪಾದಯಿಷಯಾ ಶ್ರುತ್ಯಾ ಆತ್ಮನಃ ಜಾತಿಃ ಉಚ್ಯತೇ ಜೀವಾನಾಂ ತದಾ ಜಾತೌ ಉಪಗಮಮಾನಾಯಾಮ್ ಏತತ್ ನಿದರ್ಶನಮ್ ದೃಷ್ಟಾನ್ತಃ ಯಥೋದಿತಾಕಾಶವದುತ್ಪಾದಿಃ ॥

(ಭಾಷ್ಯಾರ್ಥ)

ಆತ್ಮನು ಎಂದರೆ ಪರಮಾತ್ಮನು ಆಕಾಶದಂತೆ ಸೂಕ್ಷ್ಮನಾಗಿ ಅವಯವಗಳಿಲ್ಲದೆ ಎಲ್ಲೆಲ್ಲಿಯೂ ವ್ಯಾಪ್ತನಾಗಿರುವನಷ್ಟೆ, ಆದ್ದರಿಂದ ಆಕಾಶದಂತೆ (ಇರುವನು) ಎಂದು (ಶ್ರುತಿಯಲ್ಲಿ) ಉಕ್ತನಾಗಿರುತ್ತಾನೆ[2]. ಆಕಾಶಕ್ಕೆ ಸಮನಾಗಿರುವ ಅದೇ ಪರಮಾತ್ಮನು ಘಟಾಕಾಶಗಳಂದ ಹೇಗೋ ಹಾಗೆ ಎಂದರೆ ಗಡಿಗೆಯ ಆಕಾಶಗಳಿಗೆ ಸಮಾನನಾಗಿ ಜೀವರು(ಗಳ) ರೂಪದಿಂದ ಕ್ಷೇತ್ರಜ್ಞರುಗಳೆಂಬ ರೂಪದಿಂದ

1. ಒಂದು ಲಿಪಿತಪುಸ್ತಕದಲ್ಲಿದೆ ಎಂದು ಆ॥ ಮುದ್ರಿತಪುಸ್ತಕದಲ್ಲಿರುವ ಪಾಠ.

2. ಉದಿತಃ ಎಂಬ ಮಾತನ್ನು ವದ್ ಹೇಳು ಎಂಬ ಧಾತುವಿನಿಂದ ಹುಟ್ಟಿದ್ದೆಂದು ಇಲ್ಲಿ ಭಾವಿಸಿದೆ.

ಉದಿತಃ ಹೇಳಲ್ಪಟ್ಟಿರುವನು[1] (ಎಂದರ್ಥ). ಅಥವಾ (ಈ ಶ್ಲೋಕಾರ್ಧಕ್ಕೆ ಮತ್ತೊಂದು ಅರ್ಥವನ್ನೂ ಮಾಡಬಹುದು). ಆಕಾಶವು ಹೇಗೆ ಘಟಾಕಾಶಗಳಾಗಿ ಉದಿತವಾಗಿರುವದೋ, ಹುಟ್ಟಿರುವದೋ[2], ಹಾಗೆ ಪರ(ಮಾತ್ಮ)ನು ಜೀವಾತ್ಮರ(ರೂಪ)ದಿಂದ ಹುಟ್ಟಿರುವನು[3]. ಜೀವಾತ್ಮರುಗಳಿಗೆ ಪರಮಾತ್ಮನಿಂದ ಉತ್ಪತ್ತಿಯಾಗುವದೆಂದು ಉಪನಿಷತ್ತುಗಳಲ್ಲಿ ಹೇಳಿದೆಯಲ್ಲ[4], ಅದು ಮಹಾಕಾಶದಿಂದ ಘಟಾಕಾಶಗಳು ಹುಟ್ಟುವದಕ್ಕೆ ಸಮವಾದದ್ದು, ನಿಜವಾಗಿ (ಆಗುವ ಹುಟ್ಟಲ್ಲ) ಎಂದು ಅಭಿಪ್ರಾಯ.

ಅದೇ ಆಕಾಶದಿಂದ ಗಡಿಗೆಯೇ ಮುಂತಾದ ಗುಂಪುಗಳು ಹೇಗೆ ಹುಟ್ಟುವವೋ, ಹಾಗೆ ಆಕಾಶದಂತಿರುವ ಪರಮಾತ್ಮನಿಂದ ಪೃಥಿವಿಯೇ ಮುಂತಾದ ಭೂತಗಳ ಗುಂಪುಗಳೂ(ನಮ್ಮ) ಒಳಗಿನ ಕಾರ್ಯಕರಣರೂಪವಾದ (ಗುಂಪುಗಳೂ) ಹಗ್ಗದ ಹಾವಿನಂತೆ ವಿಕಲ್ಪಿತವಾಗಿ[5] ಹುಟ್ಟುವವು. ಆದ್ದರಿಂದ ಗಡಿಗೆಯೇ ಮುಂತಾದವುಗಳಂತೆ ಸಂಘಾತಗಳಾಗಿಯೂ ಹುಟ್ಟಿರುವನು ಎಂದು ಹೇಳಿರುತ್ತದೆ[6].

ಮಂದಬುದ್ಧಿಯುಳ್ಳವರಿಗೆ (ತತ್ತ್ವವನ್ನು) ತಿಳಿಸುವದಕ್ಕಾಗಿ ಪರಮಾತ್ಮನಿಂದ ಜೀವಾದಿಗಳಿಗೆ[7] ಉತ್ಪತ್ತಿಯನ್ನು ಯಾವಾಗ ಶ್ರುತಿಯಲ್ಲಿ ಹೇಳಲಾಗುತ್ತದೆಯೋ, ಆಗ ಹುಟ್ಟಿನ್ನು ಒಪ್ಪಿರುವ (ಆ ಸಂದರ್ಭದಲ್ಲಿ) ಇದು, ಎಂದರೆ ಮೇಲೆ ಹೇಳಿರುವ ಆಕಾಶದಂತೆ ಎಂದು ಮುಂತಾಗಿರುವದು, ನಿದರ್ಶನವು ದೃಷ್ಟಾಂತವು[8].

---

1. ಆಕಾಶವನ್ನು ಗಡಿಗೆಯ ಆಕಾಶವೆಂಬುದು ಹೇಗೆ ಉಪಾಧಿಯಿಂದ ಆಡಿದ ಗೌಣ ಪ್ರಯೋಗವೋ, ಹಾಗೆಯೇ ಪರಮಾತ್ಮನನ್ನು ಜೀವನೆಂದಿರುವದೂ ಗೌಣವೇ, ನಿಜವಾಗಿ ಪರಮಾತ್ಮನನ್ನೇ ಜೀವನೆಂದು ಕರೆಯುತ್ತೇವೆ ಎಂದರ್ಥ. ತೈ. ೨-೬-೧, ಛಾಂ. ೬-೩-೨, ಬೃ. ೪-೪-೫.

2. "ಉತ್ + ಇತಃ" ಎಂದು ಬಿಡಿಸಿಕೊಂಡು ಉದಿತಃ ಎಂಬ ಮಾತಿಗೆ ಹುಟ್ಟಿರುವನು ಎಂದರ್ಥವನ್ನು ಮಾಡಿದೆ. 3. ಹುಟ್ಟಿದಂತೆ ತೋರುವನು.

4. ಬೃ. ೨-೧-೨೦, ಮುಂ. ೨-೧-೧ ಮುಂತಾದ ಶ್ರುತಿಗಳನ್ನು ಇಲ್ಲಿ ಪರಾಮರ್ಶಿಸಿದೆ. ಆತ್ಮನಿಗೆ ನಿಜವಾಗಿ ಹುಟ್ಟಿಲ್ಲವೆಂಬುದನ್ನು ಸೂ. ಭಾ. ೨-೩-೧೭ ರಲ್ಲಿ ನಿರ್ಣಯಿಸಿದೆ.

5. ಭ್ರಾಂತಿಯಿಂದ ಕಲ್ಪಿತವಾಗಿ.

6. ಆಕಾಶವೇ ಗಡಿಗೆ ಮುಂತಾದವುಗಳಾಗಿಯೂ ಅವುಗಳ ಉಪಾಧಿಯಿಂದ ಘಟಾಕಾಶಾದಿಗಳಾಗಿಯೂ ಹುಟ್ಟಿದಂತೆ ಕಾಣುವ ಹಾಗೆ ಆತ್ಮನೂ ಕಾಣುತ್ತಾನೆ ಎಂದರ್ಥ.

7. ಜೀವ, ಶರೀರಾದಿಗಳು-ಇವುಗಳಿಗೆ ; ನಿಜವಾಗಿ ಯಾವದೂ ಹುಟ್ಟುವದಿಲ್ಲ.

8. ಆತ್ಮನು ಅಜನು, ಏಕೆಂದರೆ ಆಕಾಶದಂತೆ ಅವನು ಸೂಕ್ಷ್ಮನೂ ನಿರವಯವನೂ ಸರ್ವಗತನೂ ಆಗಿರುತ್ತಾನೆ ಎಂದು ಹೇತುವನ್ನೂ ದೃಷ್ಟಾಂತವನ್ನೂ ಹೇಳಿದಂತೆ ಆಯಿತು.

ಘಟಾದಿಷು ಪ್ರಲೀನೇಷು ಘಟಾಕಾಶಾದಯೋ ಯಥಾ ।
ಆಕಾಶೇ ಸಂಪ್ರಲೀಯನ್ತೇ ತದ್ವಜ್ಜೀವಾ ಇಹಾತ್ಮನಿ ॥೪॥

೪. ಗಡಿಗೆಯೇ ಮುಂತಾದವುಗಳು ನಾಶವಾದರೆ ಗಡಿಗೆಯ ಆಕಾಶವೇ ಮುಂತಾದವುಗಳು ಹೇಗೆ ಆಕಾಶದಲ್ಲಿ ಅಡಗುವವೋ ಅದರಂತೆ ಇಲ್ಲಿ ಜೀವರು ಆತ್ಮನಲ್ಲಿ (ಅಡಗುವರು).

(ಭಾಷ್ಯ)

೧೩೩. ಯಥಾ ಘಟಾದ್ಯುತ್ಪತ್ತ್ಯಾ ಘಟಾಕಾಶಾದ್ಯುತ್ಪತ್ತಿಃ, ಯಥಾ ಚ ಘಟಾದಿ ಪ್ರಲಯೇ[1] ಘಟಾಕಾಶಾದಿಪ್ರಲಯಃ, ತದ್ವತ್ ದೇಹಾದಿಸಙ್ಘಾತೋತ್ಪತ್ತ್ಯಾ ಜೀವೋತ್ಪತ್ತಿಃ, ತತ್ಪ್ರಲಯೇ[2] ಚ ಜೀವಾನಾಮ್ ಇಹ ಆತ್ಮನಿ ಪ್ರಲಯಃ ನ ಸ್ವತಃ ಇತ್ಯರ್ಥಃ ॥

(ಭಾಷ್ಯಾರ್ಥ)

ಹೇಗೆ ಗಡಿಗೆ ಮುಂತಾದವುಗಳು ಹುಟ್ಟಿದರೆ ಗಡಿಗೆಯ ಆಕಾಶವೇ ಮುಂತಾದವುಗಳ ಉತ್ಪತ್ತಿ (ಯಾಗುವದೋ), ಹೇಗೆ ಗಡಿಗೆಯೇ ಮುಂತಾದವು ನಾಶವಾದರೆ ಗಡಿಗೆಯ ಆಕಾಶವೇ ಮುಂತಾದವು (ನಾಶವಾಗುವವೋ) ಅದರಂತೆ ದೇಹವೇ ಮುಂತಾದ ಸಂಘಾತಗಳು ಹುಟ್ಟಿದರೆ ಜೀವರಿಗೆ ಹುಟ್ಟು, ಅವು ನಾಶವಾದರೆ ಇಲ್ಲಿ ಆತ್ಮನಲ್ಲಿಯೂ ಪ್ರಲಯ (ವಾಗುವದು), ಸ್ವತಃ (ಅವರಿಗೆ ಹುಟ್ಟುಹೊಂದು) ಗಳಿಲ್ಲ ಎಂದರ್ಥ.

## ಆತ್ಮೈಕತ್ವವಾದದಲ್ಲಿ ಸುಖದುಃಖಾದಿಗಳ ವ್ಯವಸ್ಥೆ

(ಭಾಷ್ಯ)

೧೩೪. ಸರ್ವದೇಹೇಷು ಆತ್ಮೈಕತ್ವೇ ಏಕಸ್ಮಿನ್ ಜನನಮರಣಸುಖಾದಿಮತಿ ಆತ್ಮನಿ ಸರ್ವಾತ್ಮನಾಂ ತತ್ಸಂಬನ್ಧಃ ಕ್ರಿಯಾಫಲಸಾಙ್ಕರ್ಯಂ ಚ ಸ್ಯಾತ್ ಇತಿ ಯೇ ಆಹುಃ ದೈತಿನಃ ತಾನ್ ಪ್ರತಿ ಇದಮ್ ಉಚ್ಯತೇ -

(ಭಾಷ್ಯಾರ್ಥ)

ಎಲ್ಲಾ ದೇಹಗಳಲ್ಲಿ ಒಬ್ಬನೇ ಆತ್ಮನಿದ್ದರೆ ಒಬ್ಬ ಆತ್ಮನಿಗೆ ಹುಟ್ಟುಹೊಂದುಗಳೂ ಸುಖಾದಿಗಳೂ ಆದರೆ ಎಲ್ಲಾ ಆತ್ಮರಿಗೂ ಅದರ ಸಂಬಂಧವೂ ಕರ್ಮ ಮತ್ತು

1. 'ಘಟಾದಿಪ್ರಲಯೇನ' ಪಾ ॥
2. 'ತತ್ಪ್ರಲಯೇನ' ಪಾ॥

(ಅದರ) ಫಲ-ಇವುಗಳ ಬೆರಕೆಯೂ ಆಗಬೇಕಾದೀತು[1] ಎಂದು ದ್ವೈತಿಗಳು ಹೇಳುವರಲ್ಲ, ಅವರಿಗೆ ಇದನ್ನು (ಉತ್ತರ)ವಾಗಿ ಹೇಳುತ್ತಾರ :-

ಯಥೈಕಸ್ಮಿನ್ ಘಟಾಕಾಶೇ ರಜೋಧೂಮಾದಿಭಿರ್ಯುತೇ ।
ನ ಸರ್ವೇ ಸಂಪ್ರಯುಜ್ಯನ್ತೇ ತದ್ವಜ್ಜೀವಾಃ ಸುಖಾದಿಭಿಃ ॥೫॥

೫. ಹೇಗೆ ಒಂದು ಘಟಾಕಾಶವು ಧೂಳು, ಹೊಗೆ-ಮುಂತಾದವುಗಳಿಂದ ಕೂಡಿದ್ದರೆ ಎಲ್ಲಾ (ಘಟಾಕಾಶಗಳೂ ಅವುಗಳೊಡನೆ) ಸೇರಿರುವದಿಲ್ಲವೋ ಅದರಂತೆ ಜೀವರು ಸುಖಾದಿಗಳೊಡನೆ (ಎಲ್ಲರೂ ಸೇರಿರುವದಿಲ್ಲ).

(ಭಾಷ್ಯ)

೧೩೫. ಯಥಾ ಏಕಸ್ಮಿನ್ ಘಟಾಕಾಶೇ ರಜೋಧೂಮಾದಿಭಿಃ ಯುತೇ ಸಂಯುಕ್ತೇ ನ ಸರ್ವೇ ಘಟಾಕಾಶಾಃ[2] ತದ್ರಜೋಧೂಮಾದಿಭಿಃ ಸಂಪ್ರಯುಜ್ಯನ್ತೇ ತದ್ವತ್ ಜೀವಾಃ ಸುಖಾದಿಭಿಃ ॥

(ಭಾಷ್ಯಾರ್ಥ)

ಹೇಗೆ ಒಂದು ಗಡಿಗೆಯ ಆಕಾಶವು ಧೂಳು, ಹೊಗೆ-ಮುಂತಾದವುಗಳಿಂದ ಕೂಡಿಕೊಂಡಿದ್ದರೆ ಸೇರಿಕೊಂಡಿದ್ದರೆ ಎಲ್ಲಾ ಗಡಿಗೆಯ ಆಕಾಶಗಳೂ ಆ ಧೂಳು, ಹೊಗೆ-ಮುಂತಾದವುಗಳಿಂದ ಸೇರಿಕೊಂಡಿರುವದಿಲ್ಲವೋ ಅದರಂತೆ (ಎಲ್ಲಾ) ಜೀವರೂ (ಒಬ್ಬರ) ಸುಖವೇ ಮುಂತಾದವುಗಳಿಂದ (ಸೇರಿಕೊಂಡಿರುವದಿಲ್ಲ).

## ಆತ್ಮೈಕತ್ವವಿಷಯದಲ್ಲಿ ಸಾಂಖ್ಯರ ಆಕ್ಷೇಪಕ್ಕೆ ಪರಿಹಾರ

(ಭಾಷ್ಯ)

೧೩೬. ನನು ಏಕ ಏವ ಆತ್ಮಾ । ಬಾಢಮ್, ನನು ನ ಶ್ರುತಂ ತ್ವಯಾ ಆಕಾಶವತ್ ಸರ್ವಸಙ್ಘಾತೇಷು ಏಕ ಏವ ಆತ್ಮಾ ಇತಿ ? । ಯದಿ ಏಕ ಏವ ಆತ್ಮಾ, ತರ್ಹಿ ಸರ್ವತ್ರ ಸುಖೀ ದುಃಖೀ ಚ ಸ್ಯಾತ್ । ನ ಚ ಇದಂ ಸಾಙ್ಖ್ಯಚೋದ್ಯಂ[3] ಸಂಭವತಿ । ನ ಹಿ ಸಾಙ್ಖ್ಯಃ ಆತ್ಮನಃ ಸುಖಿದುಃಖಾದಿಮತ್ತ್ವಮ್ ಇಚ್ಛತಿ । ಬುದ್ಧಿಸಮವಾಯಾಭ್ಯುಪಗಮಾತ್ ಸುಖಿದುಃಖಾದೀನಾಮ್ । ನ ಚ ಉಪಲಬ್ಧಿಸ್ವರೂಪಸ್ಯ ಆತ್ಮನಃ ಭೇದಕಲ್ಪನಾಯಾಂ

---

1. ಆತ್ಮನಿಗೆ ಸುಖ ದುಃಖಾದಿಗಳ ಸಂಬಂಧವು ನಿಜವಾಗಿ ಆಗುವದೆಂದು ಸಿದ್ಧಾಂತಿಯು ಒಪ್ಪುವದೇ ಇಲ್ಲವಾದರೂ ವ್ಯವಹಾರದೃಷ್ಟಿಯಿಂದ ಒಬ್ಬನಿಗೆ ಆಗುವಂತೆ ತೋರುವ ಸುಖದುಃಖಗಳು ಮತ್ತೊಬ್ಬನಿಗೂ ಆಗಬೇಕಲ್ಲವೆ ?-ಎಂದು ಪೂರ್ವಪಕ್ಷಿಯು ಶಂಕೆ 2. "ಘಟಾಕಾಶಾದಯಃ" ಎಂಬ "ವಾ" ಪಾಠದಲ್ಲಿ ಆದಯಃ ಎಂಬುದು ಹೆಚ್ಚು. 3. "ಸಾಙ್ಖ್ಯಸ್ಯ ಚೋದ್ಯಮ್" ವಾ॥

ಪ್ರಮಾಣಮ್ ಅಸ್ತಿ । ಭೇದಾಭಾವೇ ಪ್ರಧಾನಸ್ಯ ಪಾರಾರ್ಥ್ಯಾನುಪಪತ್ತಿಃ ಇತಿ ಚೇತ್ । ನ । ಪ್ರಧಾನಕೃತಸ್ಯ ಅರ್ಥಸ್ಯ ಆತ್ಮನಿ ಅಸಮವಾಯಾತ್ । ಯದಿ ಹಿ ಪ್ರಧಾನಕೃತಃ ಬನ್ಧಃ ಮೋಕ್ಷೋ ವಾ ಅರ್ಥಃ ಪುರುಷೇಷು ಭೇದೇನ ಸಮವೈತಿ ತತಃ ಪ್ರಧಾನಸ್ಯ ಪಾರಾರ್ಥ್ಯಮ್ ಆತ್ಮೈಕತ್ವೇನೋಪಪದ್ಯತೇ, ಇತಿ ಯುಕ್ತಾ ಪುರುಷಭೇದಕಲ್ಪನಾ । ನ ಚ ಸಾಙ್ಖ್ಯಾನಾಂ ಬನ್ಧಃ ಮೋಕ್ಷೋ ವಾ ಅರ್ಥಃ ಪುರುಷಸಮೇತಃ ಅಭ್ಯುಪಗಮ್ಯತೇ । ನಿರ್ವಿಶೇಷಾಶ್ಚ ಚೇತನ ಮಾತ್ರಾಃ ಆತ್ಮಾನಃ ಅಭ್ಯುಪಗಮ್ಯನ್ತೇ । ಅತಃ ಪುರುಷಸತ್ತಾಮಾತ್ರಪ್ರಯುಕ್ತಮೇವ ಪ್ರಧಾನಸ್ಯ ಪಾರಾರ್ಥ್ಯಂ ಸಿದ್ಧಮ್, ನ ತು ಪುರುಷಭೇದಪ್ರಯುಕ್ತಮ್ ಇತ್ಯತಃ ಪುರುಷಭೇದಕಲ್ಪನಾಯಾಂ ನ ಪ್ರಧಾನಸ್ಯ ಪಾರಾರ್ಥ್ಯಂ ಹೇತುಃ । ನ ಚ ಅನ್ಯತ್ ಪುರುಷಭೇದಕಲ್ಪನಾಯಾಂ ಪ್ರಮಾಣಮ್ ಅಸ್ತಿ ಸಾಙ್ಖ್ಯಾನಾಮ್ । ಪರಸತ್ತಾಮಾತ್ರ ಮೇವ ಚೈತತ್ ನಿಮಿತ್ತೀಕೃತ್ಯ ಸ್ವಯಂ ಬಧ್ಯತೇ ಮುಚ್ಯತೇ ಚ ಪ್ರಧಾನಮ್ । ಪರಶ್ಚ ಉಪಲಬ್ಧಿಮಾತ್ರಸತ್ತಾಸ್ವರೂಪೇಣ ಪ್ರಧಾನಪ್ರವೃತ್ತೌ ಹೇತುಃ, ನ ಕೇನಚಿತ್ ವಿಶೇಷೇಣ ಇತಿ ಕೇವಲಮೂಢತಯೈವ ಪುರುಷಭೇದಕಲ್ಪನಾ ವೇದಾರ್ಥಪರಿತ್ಯಾಗಶ್ಚ ॥

(ಭಾಷ್ಯಾರ್ಥ)

(ಆಕ್ಷೇಪ) :- ಆತ್ಮನು ಒಬ್ಬನೇ ಅಲ್ಲವೆ ?

(ಪರಿಹಾರ) :- ಹೌದು. ಆಕಾಶದಂತೆ ಎಲ್ಲಾ (ಕಾರ್ಯಕರಣ) ಸಂಘಾತ ಗಳಲ್ಲಿಯೂ ಒಬ್ಬನೇ ಆತ್ಮ(ನಿರುವ)ನೆಂದು ಹೇಳಿರುವದನ್ನು[1] ನೀನು ಕೇಳಿಲ್ಲವೆ ?

(ಆಕ್ಷೇಪ) :- ಆತ್ಮನು ಒಬ್ಬನೇ ಎಂದಾದರೆ, ಆಗ ಎಲ್ಲೆಲ್ಲಿಯೂ ಸುಖಿಯೂ ದುಃಖಿಯೂ ಆಗಿರಬೇಕಾದೀತು.

(ಪರಿಹಾರ) :- ಇದು ಸಾಂಖ್ಯನ[2] ಆಕ್ಷೇಪಣೆಯಾಗುವಂತಿಲ್ಲ. ಏಕೆಂದರೆ ಸಾಂಖ್ಯನು ಆತ್ಮನಿಗೆ ಸುಖಿದುಃಖಾದಿಗಳುಂಟೆಂದು ಒಪ್ಪುವದಿಲ್ಲ ; ಸುಖಿದುಃಖಾದಿಗಳು ಬುದ್ಧಿಗೇ ಸೇರಿದವೆಂದು ಅವನು ಒಪ್ಪಿರುವದರಿಂದ (ಅವನು ಹೀಗೆಂದು ಒಪ್ಪುವದಿಲ್ಲ). ಚೈತನ್ಯಸ್ವರೂಪನಾದ ಆತ್ಮನಲ್ಲಿ ಭೇದವನ್ನು ಕಲ್ಪಿಸುವದಕ್ಕೆ ಪ್ರಮಾಣವೇ ಇಲ್ಲ[3].

---

1. ಹಿಂದೆ ಕಾರಿಕೆಯಲ್ಲಿಯೇ ಹೇಳಿದೆಯಲ್ಲ !-ಎಂದಾದರೂ "ಆಕಾಶದಂತೆ ಸರ್ವಗತನೂ ನಿತ್ಯನೂ ಆಗಿರುತ್ತಾನೆ" ಎಂದು ಶ್ರುತಿಯೇ ಹೇಳಿರುವದಲ್ಲ ! ಎಂದಾದರೂ ಈ ವಾಕ್ಯಕ್ಕೆ ಅರ್ಥವನ್ನು ಮಾಡಬಹುದು. 2. ಆತ್ಮರು ಅನೇಕರೆಂದು ಹೇಳುವ ವಾದಿಯು ಸಾಂಖ್ಯನೊ, ವೈಶೇಷಿಕನೊ ? ಸಾಂಖ್ಯನಾಗಲಾರನು ಎಂದರ್ಥ. ಆಚಾರ್ಯರ ಕಾಲಕ್ಕೆ ದ್ವೈತಿಗಳಾದ ವೇದಾಂತಿಗಳೇ ಇರಲಿಲ್ಲವೆಂಬುದಕ್ಕೆ ಇದೊಂದು ಸಾಕ್ಷಿ. 3. ಬುದ್ಧಿಯ ಸಂಬಂಧದಿಂದ ಆತ್ಮನಿಗೂ ಸುಖಿ ದುಃಖಾದಿಗಳು ನಿಜವಾಗಿ ಆಗುವವೆಂದು ಸಾಙ್ಖ್ಯರು ಒಪ್ಪುವದಿಲ್ಲ ; ಪುರುಷರು ಅಸಂಗರು ಎಂದು ಅವರು ಹೇಳುತ್ತಾರೆ.

(ಸಾಂಖ್ಯ) :- (ಆತ್ಮನಲ್ಲಿ) ಭೇದವಿಲ್ಲದಿದ್ದರೆ ಪ್ರಧಾನವು ಮತ್ತೊಬ್ಬರ ಪ್ರಯೋಜನಕ್ಕಾಗಿ (ಕೆಲಸಮಾಡುವದೆಂಬುದು) ಹೊಂದುವದಿಲ್ಲವಲ್ಲ[1] !

(ಭಾಷ್ಯಕಾರ) :- ಹಾಗಲ್ಲ. ಪ್ರಧಾನದಿಂದಾಗುವ ಪ್ರಯೋಜನವು ಆತ್ಮನಲ್ಲಿ ಸೇರದೇ ಇರುವದರಿಂದ. ಒಂದುವೇಳೆ ಪ್ರಧಾನದಿಂದಾಗುವ ಪ್ರಯೋಜನವು ಬಂಧವಾಗಲಿ ಮೋಕ್ಷವಾಗಲಿ-ಪುರುಷರುಗಳಿಗೆ ಬೇರೆಬೇರೆಯಾಗಿ ಸಂಬಂಧಪಡುವದಾಗಿದ್ದರೆ, ಆಗ ಪ್ರಧಾನವು ಮತ್ತೊಬ್ಬರ ಪ್ರಯೋಜನಕ್ಕಾಗಿ (ಕೆಲಸಮಾಡುವದು) ಆತ್ಮನು ಒಬ್ಬನಾದರೆ ಹೊಂದುವದಿಲ್ಲವೆಂದು ಪುರುಷಭೇದವನ್ನು ಕಲ್ಪಿಸುವದು ಸರಿ(ಯಾಗುತ್ತಿತ್ತು). ಆದರೆ ಸಾಂಖ್ಯರು (ಆ) ಪ್ರಯೋಜನವು ಬಂಧವಾಗಲಿ ಮೋಕ್ಷವಾಗಲಿ ಪುರುಷರಿಗೆ ಸಂಬಂಧಪಡುವದೆಂದು ಒಪ್ಪುವದಿಲ್ಲ[2]. ಆತ್ಮರು ಯಾವ ವಿಶೇಷವೂ ಇಲ್ಲದವರು, ಚೈತನ್ಯಮಾತ್ರ (ಸ್ವರೂಪರು)-ಎಂದು (ಅವರು) ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಪುರುಷನು ಇರುವನೆಂಬುದಿಷ್ಟೇ ಕಾರಣದಿಂದ ಪ್ರಧಾನವು ಮತ್ತೊಬ್ಬರಿಗಾಗಿ (ಕೆಲಸಮಾಡುವ)ದೆಂದು[3] ಏರ್ಪಡುವದೇ ಹೊರತು ಪುರುಷರು ಬೇರೆಬೇರೆಯಾಗಿರುವದರಿಂದ ಎಂದು (ಏರ್ಪಡು)ವದಿಲ್ಲ. ಆದ್ದರಿಂದ ಪುರುಷರು ಬೇರೆಬೇರೆಯಾಗಿರುವರೆಂದು ಕಲ್ಪಿಸುವದಕ್ಕೆ ಪ್ರಧಾನವು ಮತ್ತೊಬ್ಬರಿಗಾಗಿ (ಕೆಲಸಮಾಡುವ)ದೆಂಬುದು ಕಾರಣ(ವಾಗುವ)ದಿಲ್ಲ. ಪುರುಷರು ಬೇರೆಬೇರೆ ಎಂದು ಕಲ್ಪಿಸುವದಕ್ಕೆ (ಇನ್ನು) ಬೇರೊಂದು ಪ್ರಮಾಣವೂ ಸಾಂಖ್ಯರಿಗೆ ಇರುವದಿಲ್ಲ. ಮತ್ತೊಬ್ಬ(ನಾದ ಪುರುಷ)ನ ಇರುವಿಕೆಯೆಂಬ ಇದನ್ನು ಮಾತ್ರ ನಿಮಿತ್ತವಾಗಿ ಮಾಡಿಕೊಂಡು ಪ್ರಧಾನವು ತಾನೇ ಬಂಧವನ್ನು ಪಡೆಯುತ್ತದೆ, (ತಾನೇ) ಮೋಕ್ಷವನ್ನೂ ಪಡೆಯುತ್ತದೆ. (ಆ) ಬೇರೆಯಾಗಿರುವ (ಪುರುಷನು) ಚೈತನ್ಯವೆಂಬುದೊಂದೇ ಇರುವಿಕೆಯುಳ್ಳ[4] ಸ್ವರೂಪ(ವುಳ್ಳವನಾಗಿ ಅಷ್ಟ)ರಿಂದಲೇ ಪ್ರಧಾನವು ಕೆಲಸಮಾಡುವದಕ್ಕೆ ಕಾರಣವಾಗಿರುವನೇ ಹೊರತು (ತನ್ನಲ್ಲಿರುವ) ಯಾವದಾದರೊಂದು ವಿಶೇಷದಿಂದಲ್ಲ. ಆದ್ದರಿಂದ ಪುರುಷರು ಬೇರೆಬೇರೆಯೆಂದು (ಸಾಂಖ್ಯರು) ಕಲ್ಪಿಸಿರುವದೂ ವೇದಾರ್ಥವನ್ನು ಬಿಟ್ಟಿರುವದೂ ಬರಿಯ ಮೂಢತನದಿಂದಲೇ (ಆಗಿರುತ್ತದೆ).

---

1. ಇದು ಅರ್ಥಾಪತ್ತಿಪ್ರಮಾಣವು, ಇದನ್ನು ಸಾಂಖ್ಯರು ಅನುಮಾನದಲ್ಲಿಯೇ ಸೇರಿಸಿರುತ್ತಾರೆ. ಸಾಂ. ಕಾ. ೪ ರ ಗೌ. ಭಾಷ್ಯವನ್ನು ನೋಡಿ. ಪ್ರಕೃತಿಯ ಪಾರಾರ್ಥ್ಯವನ್ನು ಸಾಂ. ಕಾ. ೫೫ ರಿಂದ ೬೦ ರ ವರೆಗೆ ವರ್ಣಿಸಿದೆ.

2. ಸಾಂ. ಕಾ. ೬೨, ೬೩, ೬೪ ನೋಡಿ. 3. "ಕೆಲಸಮಾಡುವಂತೆ ತೋರುತ್ತದ ಎಂದು" ಎಂದರ್ಥ. ನಿಜವಾಗಿ ಬಂಧಮೋಕ್ಷಗಳೂ ಪ್ರಕೃತಿಗೇ ಎಂದು ಸಾಂಖ್ಯರೇ ಒಪ್ಪಿರುತ್ತಾರೆ. ಸಾಂ. ಕಾ. ೬೨. 4. ಪರಾರ್ಥವಾಗಿರುವದಕ್ಕೆ ಪರನು ಬೇಕು ; ಅನೇಕ ಪರರು ಬೇಕಿಲ್ಲ.

# ವೈಶೇಷಿಕಾದಿಗಳ ಖಂಡನೆ

(ಭಾಷ್ಯ)

೧೩೭. ಯತ್[1] ತು ಆಹುಃ ವೈಶೇಷಿಕಾದಯಃ ಇಚ್ಛಾದಯಃ ಆತ್ಮಸಮವಾಯಿನಃ ಇತಿ ತದಪಿ ಅಸತ್ । ಸ್ಮೃತಿಹೇತೂನಾಂ ಸಂಸ್ಕಾರಾಣಾಮ್ ಅಪ್ರದೇಶವತಿ ಆತ್ಮನಿ ಅಸಮವಾಯಾತ್ । ಆತ್ಮಮನಃಸಂಯೋಗಾಚ್ಚ ಸ್ಮೃತ್ಯುತ್ಪತ್ತೇಃ ಸ್ಮೃತಿನಿಯಮಾನುಪಪತ್ತಿಃ । ಯುಗಪದ್ ವಾ ಸ್ಮೃತ್ಯುತ್ಪತ್ತಿಪ್ರಸಙ್ಗಃ । ನ ಚ ಭಿನ್ನಜಾತೀಯಾನಾಂ ಸ್ಪರ್ಶಾದಿಹೀನಾನಾಮ್ ಆತ್ಮನಾಂ ಮನಸಶ್ಚಿಭಿಃ ಸಮ್ಬನ್ಧೋ ಯುಕ್ತಃ । ನ ಚ ದ್ರವ್ಯಾತ್ ರೂಪಾದಯಃ ಗುಣಾಃ ಕರ್ಮಸಾಮಾನ್ಯವಿಶೇಷಸಮವಾಯಾ ವಾ ಭಿನ್ನಾಃ ಸನ್ತಿ ಪರೇಷಾಮ್ । ಯದಿ ಹಿ ಅತ್ಯನ್ತಭಿನ್ನಾ ಏವ ದ್ರವ್ಯಾತ್ ಸ್ಯುಃ ಇಚ್ಛಾದಯಶ್ಚ ಆತ್ಮನಃ ತಥಾ[2] ಸತಿ ದ್ರವ್ಯೇಣ ತೇಷಾಂ ಸಮ್ಬನ್ಧಾನುಪಪತ್ತಿಃ । ಅಯುತಸಿದ್ಧಾನಾಂ ಸಮವಾಯಲಕ್ಷಣಃ ಸಂಬನ್ಧಃ ನ ವಿರುಧ್ಯತೇ ಇತಿ ಚೇತ್ । ನ । ಇಚ್ಛಾದಿಭ್ಯಃ ಅನಿತ್ಯೇಭ್ಯಃ ಆತ್ಮನಃ ನಿತ್ಯಸ್ಯ ಪೂರ್ವಸಿದ್ಧತ್ವಾತ್ ನ ಅಯುತ ಸಿದ್ಧತ್ವೋಪಪತ್ತಿಃ । ಆತ್ಮನಾ ಅಯುತ ಸಿದ್ಧತ್ವೇ ಚ ಇಚ್ಛಾದೀನಾಂ ಆತ್ಮಗತ ಮಹತ್ತ್ವವತ್ ನಿತ್ಯತ್ವಪ್ರಸಙ್ಗಃ । ಸ ಚ ಅನಿಷ್ಟಃ । ಆತ್ಮನಃ ಅನಿರ್ಮೋಕ್ಷಪ್ರಸಙ್ಗಾತ್ ।

(ಭಾಷ್ಯಾರ್ಥ)

ಇನ್ನು ವೈಶೇಷಿಕರೇ ಮೊದಲಾದವರು[3] ಇಚ್ಛೆಯೇ ಮುಂತಾದವು ಆತ್ಮನಿಗೆ ಸಮವಾಯ (ಸಂಬಂಧದಿಂದ ಸೇರಿಕೊಂಡಿರುವ)ವೆಂದು ಹೇಳುವರಲ್ಲ, ಅದೂ ಸರಿಯಲ್ಲ. ಏಕೆಂದರೆ ಸ್ಮೃತಿಗೆ ಕಾರಣವಾಗಿರುವ ಸಂಸ್ಕಾರಗಳು (ಆಶ್ರಯಿಸುವದಕ್ಕೆ ಬೇಕಾದ) ಪ್ರದೇಶವಿಲ್ಲದ ಆತ್ಮನಲ್ಲಿ (ಎಂದಿಗೂ) ಸೇರಿಕೊಂಡಿರಲಾರವು. ಆತ್ಮ ಮನಸ್ಸುಗಳ ಸಂಯೋಗದಿಂದ ಸ್ಮೃತಿಯು ಹುಟ್ಟುವದಾದ್ದರಿಂದ (ಇಂಥದ್ದರ) ನೆನಪು (ಇಂಥ ಕಾಲದಲ್ಲಿಯೇ ಹುಟ್ಟಬೇಕೆಂಬ) ನಿಯಮವು ಇರಬಾರದಾಗುವದು[4]. ಅಥವಾ ಎಲ್ಲಾ ಸ್ಮೃತಿಗಳೂ ಒಟ್ಟಿಗೆ ಹುಟ್ಟಿಬಹುದಾಗುವದು[5]. ಇದಲ್ಲದೆ ಬೇರೆಯ ಜಾತಿಗೆ

---

1. 'ಯೇ ತು' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. 2. ಅಚ್ಚಿನ ಪಾಠದಲ್ಲಿ ಇಲ್ಲಿ ಚ ಹೆಚ್ಚಾಗಿದೆ. 3. ಆತ್ಮನಲ್ಲಿ ಇಚ್ಛಾದಿಗಳು ಸತ್ಯವಾಗಿರುವವೆಂದು ಒಪ್ಪುವ ಪಾಶುಪತರೇ ಮುಂತಾದವರನ್ನೂ ಇಲ್ಲಿ ತೆಗೆದುಕೊಂಡಿದೆ. ಗೀ. ಭಾ. ೧೩-೬ ನೋಡಿ. 4. ಜ್ಞಾನವು ಉಂಟಾಗುವದಕ್ಕೆ ಆತ್ಮಮನಸ್ಸುಗಳಿಗೆ ಸಂಯೋಗವಾಗಲೇಬೇಕೆಂಬುದು ವೈಶೇಷಿಕರ ಮತ. ಸ್ಮೃತಿಯೂ ಜ್ಞಾನವಾದ್ದರಿಂದಲೂ ಅನುಭವವುಂಟಾಗುವಾಗಲೂ ಆತ್ಮಮನಃ ಸಂಯೋಗವಾಗುವದೆಂದು ಆ ವಾದಿಗಳು ಒಪ್ಪುವರಾದ್ದರಿಂದಲೂ ಅನುಭವವಿರುವಾಗಲೂ ಸ್ಮೃತಿ ಯುಂಟಾಗಬಹುದಾಗುವದು. ಇದೂ ಅನುಭವವಿರುವ. 5 ಒಂದೇ ಸಂಯೋಗದಿಂದ ಎಲ್ಲಾ ನೆನಪುಗಳೂ ಹುಟ್ಟಿಬಹುದಾಗುವದು.

ಸೇರಿದ ಸ್ಪರ್ಶವೇ ಮುಂತಾದವುಗಳಿಲ್ಲದ ಆತ್ಮರಿಗೆ ಮನಸ್ಸು ಮುಂತಾದವುಗಳ ಸಂಬಂಧವು(ಒಟ್ಟಾಗುವದೆಂಬುದು) ಸರಿಯೂ ಅಲ್ಲ[1]. (ಈ ವೈಶೇಷಿಕಾದಿ) ಪ್ರತಿ (ವಾದಿ)ಗಳ (ಮತದಲ್ಲಿ) ದ್ರವ್ಯಕ್ಕಿಂತ ಬೇರೆಯಾಗಿ ರೂಪವೇ ಮುಂತಾದ ಗುಣ ಗಳಾಗಲಿ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ-(ಇವು)ಗಳಾಗಲಿ ಇರು ವಂತಿಲ್ಲ[2]. ಏಕೆಂದರೆ (ಗುಣಗಳು) ದ್ರವ್ಯಕ್ಕಿಂತಲೂ ಇಚ್ಛಾದಿಗಳು ಆತ್ಮನಿಗಿಂತಲೂ ಅತ್ಯಂತವಾಗಿ ಬೇರೆಯೇ ಆಗಿದ್ದರೆ, ಹಾಗಾದರೆ ಅವುಗಳಿಗೆ ದ್ರವ್ಯದೊಡನೆ ಸಂಬಂಧ (ವೆಂಬುದೇ) ಹೊಂದುವದಿಲ್ಲ. ಅಯುತಸಿದ್ಧವಾಗಿರುವ[3] (ಪದಾರ್ಥಗಳಿಗೆ) ಸಮ ವಾಯವೆಂಬ ಸಂಬಂಧವು(ಒಟ್ಟಾಗುವದು) ವಿರುದ್ಧವಲ್ಲವಲ್ಲ !-ಎಂದು (ವೈಶೇಷಿಕರು ಶಂಕಿಸಬಹುದು). (ಆದರೆ) ಹಾಗಲ್ಲ. (ಏಕೆಂದರೆ) ಇಚ್ಛೆಯೇ ಮುಂತಾದವು ಅನಿತ್ಯ(ವಾಗಿರುವದರಿಂದ ಅವು)ಗಳೊಡನೆ ನಿತ್ಯನಾಗಿರುವ ಆತ್ಮನಿಗೆ ಅಯುತ ಸಿದ್ಧತ್ವವು ಹೊಂದುವಹಾಗಿಲ್ಲ ; ಏಕೆಂದರೆ ಅವನು ಮೊದಲೇ ಸಿದ್ಧನಾಗಿರುತ್ತಾನೆ[4]. ಇಚ್ಛಾದಿಗಳು ಆತ್ಮನೊಡನೆ ಅಯುತಸಿದ್ಧ(ವಾಗಿರುವ)ವೆಂದರೆ ಆತ್ಮನಲ್ಲಿರುವ ಮಹತ್ತ್ವ(ವೆಂಬ ಗುಣದಂತೆ[5] ಅವೂ) ನಿತ್ಯವಾಗಬೇಕಾಗುವದು. ಆದರೆ ಅದು (ಯಾರಿಗೂ) ಇಷ್ಟವಲ್ಲ[6] ; ಏಕೆಂದರೆ (ಆಗ) ಆತ್ಮನಿಗೆ ಮೋಕ್ಷವೇ ಇಲ್ಲವೆಂದಾಗ ಬೇಕಾಗುತ್ತದೆ[7].

1. ಆತ್ಮನಲ್ಲಿ ಸ್ಪರ್ಶಾದಿಗಳಿಲ್ಲ, ಅವಯವಗಳಿಲ್ಲ ; ಮನಸ್ಸು ಮುಂತಾದವುಗಳಿಗಿವೆ. ಆದ್ದರಿಂದ ಆತ್ಮನೆಂಬ ದ್ರವ್ಯವು ಬೇರೆಯ ಜಾತಿಯದಾಯಿತು.

2. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ-ಎಂಬ ಆರು ಭಾವಪದಾರ್ಥ ಗಳನ್ನು ವೈಶೇಷಿಕರು ಒಪ್ಪಿರುತ್ತಾರೆ. ಇವುಗಳಲ್ಲಿ ದ್ರವ್ಯಕ್ಕೆ ಮಿಕ್ಕವು ಅಧೀನವೆಂದೂ ಒಪ್ಪಿ ಅದಕ್ಕಿಂತ ಬೇರೆಯೆಂದೂ ಒಪ್ಪಿರುವದು ಯುಕ್ತಿವಿರುದ್ಧವೆಂದರ್ಥ. ಸೂ. ಭಾ. ೨-೨-೧೭ ನೋಡಿ.

3. ನಿತ್ಯಸಂಬಂಧಕ್ಕೆ ತಕ್ಕವಾಗಿರುವ ಪದಾರ್ಥಗಳು ಅಯುತಸಿದ್ಧಗಳು.

4. ಯುತಸಿದ್ಧವೆಂದರೆ ಬೇರೆಬೇರೆಯ ಕಾಲದಲ್ಲಿ ಬೇರಬೇರೆಯ ಕಡೆಯಲ್ಲಿ ಸ್ವತಂತ್ರ ವಾಗಿರುವದು ; ಹಾಗಿಲ್ಲದ್ದು ಅಯುತಸಿದ್ಧವು. ಆತ್ಮನು ಮೊದಲೇ ಇದ್ದು ಇಚ್ಛಾದಿಗಳು ಆಮೇಲೆ ಉಂಟಾಗುವದರಿಂದ ಅವು ಯುತಸಿದ್ಧ.

5. ಆತ್ಮನಲ್ಲಿ ಮಹತ್ವವೆಂಬ ಪರಿಮಾಣವು ನಿತ್ಯವಾಗಿರುವದೆಂದು ವೈಶೇಷಿಕರು ಇಟ್ಟು ಕೊಂಡಿರುತ್ತಾರೆ.

6. ಏಕೆಂದರೆ ಅದು ಅನುಭವವಿರುದ್ಧ.

7. ಇಚ್ಛಾದಿಗಳು ಹೋಗುವದೇ ಮೋಕ್ಷವಾದ್ದರಿಂದ ಅವು ಹೋಗದಿದ್ದರೆ ಮೋಕ್ಷವಿಲ್ಲ ವಾಗುವದು.

(ಭಾಷ್ಯ)

೧೩೮. ಸಮವಾಯಸ್ಯ ಚ ದ್ರವ್ಯಾತ್ ಅನ್ಯತ್ವೇ ಸತಿ ದ್ರವ್ಯೇಣ ಸಂಬನ್ಧಾನ್ತರಂ ವಾಚ್ಯಮ್ । ಯಥಾ ದ್ರವ್ಯಗುಣಯೋಃ । ಸಮವಾಯಃ ನಿತ್ಯಸಂಬನ್ಧ ಏವ ಇತಿ ನ ವಾಚ್ಯಮ್ ಇತಿ ಚೇತ್ । ತಥಾ ಚ ಸಮವಾಯಸಂಬನ್ಧವತಾಂ ನಿತ್ಯಸಂಬನ್ಧಪ್ರಸಙ್ಗಾತ್ ಪೃಥಕ್ತ್ವಾನುಪಪತ್ತಿಃ । ಅತ್ಯನ್ತಪೃಥಕ್ತ್ವೇ ಚ ದ್ರವ್ಯಾದೀನಾಂ ಸ್ಪರ್ಶವದಸ್ಪರ್ಶ(ವದ್)[1] ದ್ರವ್ಯಯೋರಿವ ಷಷ್ಠ್ಯರ್ಥಾನುಪಪತ್ತಿಃ । ಇಚ್ಛಾದ್ಯುಪಜನಾಪಾಯವದ್ಗುಣವತ್ತ್ವೇ ಚ ಆತ್ಮನಃ ಅನಿತ್ಯತ್ವಪ್ರಸಙ್ಗಃ । ದೇಹಫಲಾದಿವತ್ । ಸಾವಯವತ್ವಂ ವಿಕ್ರಿಯಾವತ್ತ್ವಂ ಚ ದೇಹಾದಿವದೇವ ಇತಿ ದೋಷೌ ಅಪರಿಹಾರ್ಯೌ । ಯಥಾ ತು ಆಕಾಶಸ್ಯ ಅವಿದ್ಯಾಧ್ಯಾರೋಪಿತಘಟಾದ್ಯುಪಾಧಿಕೃತರಜೋಧೂಮಮಲವತ್ತ್ವಾದಿದೋಷವತ್ತ್ವಮ್[2], ತಥಾ ಆತ್ಮನಃ ಅವಿದ್ಯಾಧ್ಯಾರೋಪಿತಬುದ್ಧ್ಯಾದ್ಯುಪಾಧಿಕೃತಸುಖಿದುಃಖಾದಿದೋಷವತ್ತ್ವೇ ಬನ್ಧಮೋಕ್ಷಾದಯಃ ವ್ಯವಹಾರಿಕಾಃ ನ ವಿರುಧ್ಯನ್ತೇ । ಸರ್ವವಾದಿಭಿಃ ಅವಿದ್ಯಾಕೃತವ್ಯವಹಾರಾಭ್ಯುಪಗಮಾತ್, ಪರಮಾರ್ಥಾನಭ್ಯುಪಗಮಾಚ್ಚ । ತಸ್ಮಾತ್ ಆತ್ಮಭೇದಪರಿಕಲ್ಪನಾ ವೃಥೈವ ತಾರ್ಕಿಕೈಃ ಕ್ರಿಯತೇ ಇತಿ ॥

(ಭಾಷ್ಯಾರ್ಥ)

ಇದಲ್ಲದೆ ಸಮವಾಯವು ದ್ರವ್ಯಕ್ಕಿಂತ ಬೇರೆಯಾದರೆ ದ್ರವ್ಯಕ್ಕೂ (ಅದಕ್ಕೂ) ದ್ರವ್ಯಗುಣಗಳಿಗಿರುವಂತೆ ಮತ್ತೊಂದು ಸಂಬಂಧವನ್ನು ಹೇಳಬೇಕಾಗುವದು[3]. ಸಮವಾಯವು ನಿತ್ಯಸಂಬಂಧವೇ ಆಗಿರುವದರಿಂದ (ಅದಕ್ಕೆ ಬೇರೆ ಸಂಬಂಧವನ್ನು) ಹೇಳಬೇಕಾದದ್ದಿರುವದಿಲ್ಲವಲ್ಲ !-ಎಂದು (ಪೂರ್ವಪಕ್ಷಿ ಕೇಳಬಹುದು). ಹಾಗಾದರೆ ಸಮವಾಯಸಂಬಂಧವುಳ್ಳ (ಪದಾರ್ಥಗಳಿಗೆ) ನಿತ್ಯಸಂಬಂಧವಿರಬೇಕಾಗುವದರಿಂದ ಅವು ಬೇರೆಬೇರೆ ಎಂಬುದು ಹೊಂದುವದಿಲ್ಲ[4]. ದ್ರವ್ಯಾದಿಗಳು ಬೇರೆಬೇರೆಯೇ ಆಗಿದ್ದರೆ ಸ್ಪರ್ಶವುಳ್ಳ (ದ್ರವ್ಯ), ಸ್ಪರ್ಶವಿಲ್ಲದ ದ್ರವ್ಯ (-ಇವು)ಗಳಿಗೆ ಹೇಗೆ (ಸಂಬಂಧ

1. 'ಅಸ್ಪರ್ಶವದ್ದ್ರವ್ಯ' ಎಂದೇ ಆಚಾರ್ಯರು ಬರೆದಿರಬಹುದು.

2. ಈ ಪಾ॥ ಕಾ॥ ಪಾಠವು "ಅವಿದ್ಯಾಧ್ಯಾರೋಪಿತರಜೋಧೂಮಮಲತ್ವಾದಿದೋಷವತ್ತ್ವಮ್" ಎಂಬ ಆ॥ ಪಾಠಕ್ಕಿಂತ ಮೇಲು

3. ದ್ರವ್ಯಗುಣಗಳು , ದ್ರವ್ಯಕ್ರಿಯೆಗಳು ; ಜಾತಿವ್ಯಕ್ತಿಗಳು-ಇವುಗಳಿಗೆ ಸಮವಾಯ ಸಂಬಂಧವಿದೆಯೆಂದೂ ಅವು ಬೇರೆಬೇರೆಯ ಪದಾರ್ಥಗಳಿಂದೂ ವೈಶೇಷಿಕರ ಅಂಗೀಕಾರವು.

4. ಸಮವಾಯವೆಂಬ ಸಂಬಂಧವೇ ಸಿದ್ಧಿಸುವದಿಲ್ಲವೆಂಬುದನ್ನು ಸೂ. ಭಾ. ೨-೨-೧೩ ರಲ್ಲಿ ಖಂಡಿಸಿದೆ.

ವಿರಲಾರದೋ ಹಾಗೆ) ಷಷ್ಠ್ಯರ್ಥವು[1] ಹೊಂದುವದಿಲ್ಲ. ಇಚ್ಛೆಯೇ ಮುಂತಾದ ಹುಟ್ಟುವದು, ಹೋಗುವದು-ಎಂಬ (ಸ್ವಭಾವ)ವುಳ್ಳ ಗುಣವುಳ್ಳವನಾದರೆ ಆತ್ಮನು ಅನಿತ್ಯನೂ ಆಗಬೇಕಾಗುವದು[2]. ದೇಹ, ಹಣ್ಣು-ಮುಂತಾದವುಗಳಂತೆಯೇ (ಇದನ್ನರಿಯಬೇಕು). (ಇದೇ) ದೇಹಾದಿಗಳಂತೆಯೇ (ಆತ್ಮನಿಗೆ) ಅವಯವಗಳುಳ್ಳವನಾಗುವಿಕೆ, ಮಾರ್ಪಾಡುಗಳಿರುವವನಾಗುವಿಕೆ-ಎಂಬ ದೋಷಗಳೂ (ಉಂಟಾಗುವದನ್ನು) ಪರಿಹರಿಸಿಕೊಳ್ಳುವದಕ್ಕೆ ಆಗುವದಿಲ್ಲ[3].

ಆದರೆ ಆಕಾಶದಲ್ಲಿ ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟಿದ ಗಡಿಗೆಯೇ ಮುಂತಾದ ಉಪಾಧಿಗಳಿಂದಾದ ಧೂಳು, ಹೊಗೆ, ಕಪ್ಪು-ಮುಂತಾದವುಗಳಿರುವವೆಂಬ ದೋಷಗಳು ಹೇಗೆ ಇರುವವೋ ಹಾಗೆ ಆತ್ಮನಲ್ಲಿ ಅವಿದ್ಯೆಯಿಂದ ಹುಟ್ಟುಗಟ್ಟಿದ, ಬುದ್ಧಿಯೇ ಮುಂತಾದ ಉಪಾಧಿಗಳಿಂದಾದ ಸುಖ, ದುಃಖ-ಮುಂತಾದ ದೋಷಗಳಿರುವವೆಂಬ (ಪಕ್ಷ)ದಲ್ಲಿ ಬಂಧ, ಮೋಕ್ಷ-ಮುಂತಾದವುಗಳು ವ್ಯಾವಹಾರಿಕ(ವಾಗಿರುವದು) ವಿರುದ್ಧವಾಗುವದಿಲ್ಲ. ಏಕೆಂದರೆ ಎಲ್ಲಾ ವಾದಿಗಳೂ ಅವಿದ್ಯೆಯಿಂದಾದ ವ್ಯವಹಾರವನ್ನು ಒಪ್ಪಿರುತ್ತಾರೆ, ನಿಜವಾಗಿ (ಆ ವ್ಯವಹಾರದಂತೆ ಇರುವವೆಂದು ಯಾರೂ) ಒಪ್ಪುವದಿಲ್ಲ[4].

ಆದ್ದರಿಂದ ಆತ್ಮರು ಬೇರೆಬೇರೆ ಎಂದು ತಾರ್ಕಿಕರು ಕಲ್ಪಿಸಿರುವದು ವ್ಯರ್ಥವಾಗಿರುತ್ತದೆ ಎಂದಾಯಿತು[5].

## ಅವಿದ್ಯಾಕೃತವ್ಯವಹಾರಕ್ಕೆ ದೃಷ್ಟಾಂತ

### (ಭಾಷ್ಯ)

೧೩೯. ಕಥಂ ಪುನಃ ಆತ್ಮಭೇದನಿಮಿತ್ತ ಇವ ವ್ಯವಹಾರಃ ಏಕಸ್ಮಿನ್ ಆತ್ಮನಿ ಅವಿದ್ಯಾಕೃತಃ ಉಪಪದ್ಯತೇ ಇತಿ ? ಉಚ್ಯತೇ -

1. ಸಂಬಂಧವು.

2. ಇದಕ್ಕೆ ಹೇತುವನ್ನು ಮುಂದಿನ ವಾಕ್ಯದಲ್ಲಿ ಕೊಟ್ಟಿದೆ.

3. ದೇಹ, ಹಣ್ಣು-ಇವುಗಳಲ್ಲಿ ಬೇರೆಬೇರೆಯ ಗುಣಗಳು ಹುಟ್ಟಿ ಹೋಗುತ್ತಿರುವವು ; ಅವು ಸಾವಯವವೂ ಅನಿತ್ಯವೂ ಆಗಿವೆ. ಇದರಂತೆ ಎಲ್ಲೆಲ್ಲಿಯೂ ಇರುವದು ಅನುಭವದಲ್ಲಿದೆ.

4. ಜನರು ದೇಹಧರ್ಮವನ್ನು ಆತ್ಮನಿಗೆ ಆದಂತೆ ವ್ಯವಹರಿಸುತ್ತಾರೆ ; ಇದು ಮಿಥ್ಯಾಜ್ಞಾನಕೃತವೆಂದು ತಾರ್ಕಿಕರೂ ಒಪ್ಪುತ್ತಾರೆ. ಇದರಂತೆ ಅದ್ವಿತೀಯಾತ್ಮನಲ್ಲಿಯೂ ಅವಿದ್ಯೆಯಿಂದ ಬಂಧ ಮೋಕ್ಷಾದಿಗಳನ್ನು ಒಪ್ಪಿದರೆ ದೋಷವೇನೂ ಇಲ್ಲ.

5. ಸೂ. ಭಾ. ೨-೩-೪೯, ೫೦ ರಲ್ಲಿ ಇದೇ ಚರ್ಚೆಯನ್ನು ಮಾಡಿರುತ್ತದೆ. ತಾರ್ಕಿಕರ ಮತದಲ್ಲಿಯೇ ಈ ದೋಷವನ್ನು ಅಲ್ಲಿ ತೋರಿಸಿರುತ್ತದೆ.

(ಭಾಷ್ಯಾರ್ಥ)

(ಪ್ರಶ್ನೆ) :- ಆತ್ಮರು ಬೇರೆಬೇರೆಯಾಗಿರುವ ನಿಮಿತ್ತದಿಂದಾದ ವ್ಯವಹಾರ ದಂತೆಯೇ ಆತ್ಮನು ಒಬ್ಬನೇ (ಎಂಬ ಪಕ್ಷ)ದಲ್ಲಿ ಅವಿದ್ಯೆಯಿಂದಾದದ್ದು (ಎಂದರೂ) ಹೊಂದುತ್ತದೆ ಎಂಬುದಾದರೂ ಹೇಗೆ ?[1]

(ಉತ್ತರ) :- ಹೇಳುತ್ತೇವೆ :

ರೂಪಕಾರ್ಯಸಮಾಖ್ಯಾಶ್ಚ ಭಿದ್ಯನ್ತೇ ತತ್ರ ತತ್ರ ವೈ ।
ಆಕಾಶಸ್ಯ ನ ಭೇದೋಽಸ್ತಿ ತದ್ವಜ್ಜೀವೇಷು ನಿರ್ಣಯಃ　　॥೬॥

೬. ಮತ್ತು ರೂಪ, ಕಾರ್ಯ, ಹೆಸರು-ಇವುಗಳು ಹೇಗೆ ಅಲ್ಲಲ್ಲಿ ಬೇರೆ ಬೇರೆಯಾಗಿರುವವೋ, (ಆದರೆ) ಆಕಾಶಕ್ಕೆ ಹೇಗೆ ಭೇದವಿರುವದಿಲ್ಲವೋ ಅದರಂತೆ ಜೀವರುಗಳ (ವಿಷಯದಲ್ಲಿಯೂ) ನಿರ್ಣಯವು.

(ಭಾಷ್ಯ)

೧೪೦. ಯಥಾ ಇಹ ಆಕಾಶೇ ಏಕಸ್ಮಿನ್ ಘಟಕರಕಾಪವರಕಾದ್ಯಾಕಾಶಾನಾಮ್ ಅಲ್ಪತ್ವಮಹತ್ತ್ವಾದಿರೂಪಾಣಿ ಭಿದ್ಯನ್ತೇ । ತಥಾ ಕಾರ್ಯಮ್ ಉದಕಾಹರಣಧಾರಣ ಶಯನಾದಿ । ಸಮಾಖ್ಯಾಶ್ಚ ಘಟಾಕಾಶಃ ಕರಕಾಕಾಶಃ[2] ಇತ್ಯಾದ್ಯಾಃ ತತ್ಪ್ರತಾಶ್ಚ ಭಿನ್ನಾ ದೃಶ್ಯನ್ತೇ । ತತ್ರ ತತ್ರ ವೈ ವ್ಯವಹಾರವಿಷಯೇ ಇತ್ಯರ್ಥಃ । ಸರ್ವೋಽಯಮ್ ಆಕಾಶೇ ರೂಪಾದಿಭೇದಕೃತಃ ವ್ಯವಹಾರಃ ನ ಪರಮಾರ್ಥ[3] ಏವ । ಪರಮಾರ್ಥತಸ್ತು ಆಕಾಶಸ್ಯ ನ ಭೇದಃ ಅಸ್ತಿ । ನ ಚ ಆಕಾಶಭೇದನಿಮಿತ್ತಃ ವ್ಯವಹಾರಃ ಅಸ್ತಿ, ಅನ್ತರೇಣ ಪರೋಪಾಧಿ ಕೃತಂ ದ್ವಾರಮ್ । ಯಥಾ ಏತತ್, ತದ್ವತ್ ದೇಹೋಪಾಧಿಭೇದಕೃತೇಷು ಜೀವೇಷು ಘಟಾಕಾಶಸ್ಥಾನೀಯೇಷು ಆತ್ಮಸು ನಿರೂಪಣಾತ್ ಕೃತಃ ಬುದ್ಧಿಮದ್ಭಿಃ ನಿರ್ಣಯಃ ನಿಶ್ಚಯಃ ಇತ್ಯರ್ಥಃ ।।

(ಭಾಷ್ಯಾರ್ಥ)

ಹೇ ! ಈ (ಲೋಕ)ದಲ್ಲಿ ಒಂದೇ ಆಗಿರುವ ಆಕಾಶದಲ್ಲಿ ಗಡಿಗೆ, ಕುಡಿಕೆ, ಮನೆ-ಮುಂತಾದ ಬಯಲುಗಳಲ್ಲಿ (ಒಂದು) ಸಣ್ಣದು, (ಇನ್ನೊಂದು) ದೊಡ್ಡದು-ಎಂದು

---

1. ಆತ್ಮರುಗಳಲ್ಲಿ ರೂಪಭೇದ, ಕಾರ್ಯಭೇದ, ನಾಮಭೇದ- ಎಂಬ ವ್ಯವಹಾರವೆಲ್ಲವೂ ತಪ್ಪುತಿಳಿವಳಿಕೆಯಿಂದಲೇ ಆಗಿದೆ ಎಂಬುದಕ್ಕೆ ದೃಷ್ಟಾಂತವಿದೆಯೆ ?

2. 'ಘಟಾಕಾಶಕರಕಾಕಾತ' ಆ।।ಕಾ।।ಮ್ಯೆ।।

3. 'ಅಪರಮಾರ್ಥ ಏವ' ಮಾ।।

ಮುಂತಾಗಿ ರೂಪಗಳು ಬೇರೆಬೇರೆಯಾಗಿರುವವೋ ; ಹಾಗೂ ನೀರನ್ನು ತರುವದು, (ಅದನ್ನು) ಇಟ್ಟುಕೊಳ್ಳುವದು, ಮಲಗುವದು-ಮುಂತಾದ ಕಾರ್ಯವು (ಇವುಗಳಲ್ಲಿ ಹೇಗೆ) ಬೇರೆಬೇರೆಯಾಗಿರುವದೋ ; ಮತ್ತು ಗಡಿಗೆಯ ಆಕಾಶ, ಕುಡಿಕೆಯ ಆಕಾಶ-ಎಂದು ಮುಂತಾದ ಅವುಗಳಿಂದಾದ ಹೆಸರುಗಳೂ ಬೇರೆಬೇರೆಯಾಗಿ ಕಂಡುಬರುವವೋ ಅಲ್ಲಲ್ಲಿ ಎಂದರೆ (ಆಯಾ) ವ್ಯವಹಾರದ ವಿಷಯದಲ್ಲಿ (ಹೇಗೆ ಈ ಭೇದಗಳು ಕಂಡುಬರುವವೋ) ಎಂದರ್ಥ. ರೂಪವೇ ಮುಂತಾದವುಗಳು[1] ಬೇರೆಬೇರೆಯಾಗಿರುವದರಿಂದಾದ ಈ ವ್ಯವಹಾರವೆಲ್ಲ ನಿಜವೇ ಆಗಿರುವದಿಲ್ಲ ; ನಿಜವಾಗಿ ನೋಡಿದರೆ ಆಕಾಶಕ್ಕೆ ಭೇದವೇ ಇರುವದಿಲ್ಲ, ಆಕಾಶವು ಬೇರೆಬೇರೆಯಾಗಿರುವದರಿಂದಾದ ವ್ಯವಹಾರ(ವೆಂಬುದೂ) ಮತ್ತೊಂದು ಉಪಾಧಿಯಿಂದಾದ ದ್ವಾರವನ್ನು ಬಿಟ್ಟರೆ (ನಿಜವಾಗಿ) ಇರುವದೇ ಇಲ್ಲ. ಇದು ಹೇಗೋ ಹಾಗೆಯೇ ದೇಹಾದಿಗಳೆಂಬ ಬೇರೆ ಬೇರೆಯ ಉಪಾಧಿಗಳಿಂದ ಆಗಿರುವ ಘಟಾಕಾಶದಂತೆ ಇದ್ದುಕೊಂಡಿರುವ[2] ಜೀವರುಗಳಲ್ಲಿಯೂ ಚೆನ್ನಾಗಿ ನೋಡಿ ಬುದ್ಧಿವಂತರು ನಿರ್ಣಯವನ್ನು ನಿಶ್ಚಯವನ್ನು ಮಾಡಿಕೊಂಡಿರುವರು[3] ಎಂದರ್ಥ.

(ಭಾಷ್ಯ)

೧೪೧. ನನು ತತ್ರ ಪರಮಾರ್ಥಕೃತ ಏವ ಘಟಾಕಾಶಾದಿಷು ರೂಪಕಾರ್ಯಾದಿ ಭೇದವ್ಯವಹಾರಃ ಇತಿ ? ನೈತದಸ್ತಿ । ಯಸ್ಮಾತ್ -

(ಭಾಷ್ಯಾರ್ಥ)

(ಆಕ್ಷೇಪ) :- ಆ (ದೃಷ್ಟಾಂತದಲ್ಲಿ) ಗಡಿಗೆಯ ಆಕಾಶವೇ ಮುಂತಾದವುಗಳಲ್ಲಿ ರೂಪ, ಕಾರ್ಯ-ಮುಂತಾದ ಭೇದವ್ಯವಹಾರವು ನಿಜವಾಗಿ ಆಗಿರುವದೇ ಅಲ್ಲವೆ ?

(ಪರಿಹಾರ) :- ಇದು (ಸರಿ)ಯಲ್ಲ. ಏಕೆಂದರೆ :

**ನಾಕಾಶಸ್ಯ ಘಟಾಕಾಶೋ ವಿಕಾರಾವಯವೌ ಯಥಾ ।**
**ನೈವಾತ್ಮನಃ ಸದಾ ಜೀವೋ ವಿಕಾರಾವಯವೌ ತಥಾ** ॥೭॥

1. ವ್ಯಾಕೃತಜಗತ್ತೆಲ್ಲವೂ ಅವಿದ್ಯಾಕೃತವಾದ ನಾಮರೂಪಕರ್ಮಮಯವೆಂಬುದನ್ನು ಬೃ. ಭಾ. ೧-೬-೧ ರಲ್ಲಿ ಕಾಣಬಹುದು.

2. ಸೂ. ಭಾ. ೨-೧-೧೪ ರಲ್ಲಿ ಕೊಟ್ಟಿರುವ ಜೀವೇಶ್ವರವಿಭಾಗವರ್ಣನೆಯನ್ನು ನೋಡಿ.

3. ಒಬ್ಬ ಆತ್ಮನಲ್ಲಿಯೇ ಅನೇಕತ್ವ ಭ್ರಾಂತಿಯಾಗಬಹುದೆಂದು ನಿಶ್ಚಯಿಸಿಕೊಂಡಿರುತ್ತಾರೆ-ಎಂದರ್ಥ.

೭. ಗಡಿಗೆಯ ಆಕಾಶವು ಹೇಗೆ ಆಕಾಶದ ವಿಕಾರಾವಯವಗಳಲ್ಲವೋ ಹಾಗೆ ಜೀವನು ಎಂದಿಗೂ ಆತ್ಮನ ವಿಕಾರಾವಯವಗಳಲ್ಲ.

(ಭಾಷ್ಯ)

೧೪೨. ಪರಮಾರ್ಥಾಕಾಶಸ್ಯ ಘಟಾಕಾಶಃ ನ ವಿಕಾರಃ । ಯಥಾ ಸುವರ್ಣಸ್ಯ ರುಚಕಾದಿಃ, ಯಥಾ ವಾ ಅಪಾಂ ಫೇನಬುದ್ಬುದಹಿಮಾದಿಃ । ನಾಪಿ ಅವಯವಃ, ಯಥಾ ವೃಕ್ಷಸ್ಯ ಶಾಖಾದಿಃ । ನ[1] ಆಕಾಶಸ್ಯ ಘಟಾಕಾಶಃ ವಿಕಾರಾವಯವೌ ಯಥಾ ತಥಾ ನೈವ ಆತ್ಮನಃ ಪರಸ್ಯ ಪರಮಾರ್ಥಸತಃ ಮಹಾಕಾಶಸ್ಥಾನೀಯಸ್ಯ ಘಟಾಕಾಶ ಸ್ಥಾನೀಯಃ ಜೀವಃ ಸದಾ ಸರ್ವದಾ ಯಥೋಕ್ತದೃಷ್ಟಾನ್ತವತ್ ನ ವಿಕಾರಃ, ನಾಪಿ ಅವಯವಃ । ಅತಃ ಆತ್ಮಭೇದಕೃತೋ ವ್ಯವಹಾರಃ ಮೃಷೈವ ಇತ್ಯರ್ಥಃ ॥

(ಭಾವಾರ್ಥ)

ಗಡಿಗೆಯ ಆಕಾಶವು ನಿಜವಾಗಿರುವ ಆಕಾಶದ ವಿಕಾರವಲ್ಲ[2]. ಹೇಗೆ ಅಸಲಿ ಮುಂತಾದದ್ದು ಚಿನ್ನದ (ವಿಕಾರವೋ), ಅಥವಾ ಹೇಗೆ ನೀರಿಗೆ ನೊರೆ, ಗುಳ್ಳೆ, ಮಂಜು-ಮುಂತಾದದ್ದು (ವಿಕಾರವೋ ಹಾಗೆ ವಿಕಾರವಲ್ಲ). ಮರಕ್ಕೆ ಕೊಂಬೆ ಮುಂತಾದದ್ದು ಹೇಗೆ (ಅವಯವವೋ ಹಾಗೆ) ಅವಯವವೂ ಅಲ್ಲ. (ಹೀಗೆ)ಗಡಿಗೆಯ ಆಕಾಶವು (ನಿಜವಾಗಿರುವ) ಬಯಲಿನ ವಿಕಾರಾವಯವಗಳು ಹೇಗಲ್ಲವೋ, ಹಾಗೆ ಮಹಾಕಾಶ ದಂತೆ ಇರುವ ಪರಮಾತ್ಮನಿಗೆ ಘಟಾಕಾಶದಂತೆ ಇರುವ ಜೀವನು ಎಂದಿಗೂ ಯಾವಾಗಲೂ ಈ ಹೇಳಿದ ದೃಷ್ಟಾಂತದಂತೆ ವಿಕಾರವಲ್ಲ, ಅವಯವವೂ[3] ಅಲ್ಲ. ಆದ್ದರಿಂದ ಆತ್ಮರು ಬೇರೆ ಬೇರೆಯೆಂದು (ಇಟ್ಟುಕೊಂಡದ್ದು)ರಿಂದಾಗಿರುವ ವ್ಯವಹಾರವು ಹುಸಿಯೇ ಎಂದರ್ಥ.

## ಜೀವನ ಸಂಸಾರವು ಪರಮಾರ್ಥವಲ್ಲ

(ಭಾಷ್ಯ)

೧೪೩. ಯಸ್ಮಾತ್ ಯಥಾ ಘಟಾಕಾಶಾದಿಭೇದಬುದ್ಧಿನಿಬನ್ಧನಃ ರೂಪ ಕಾರ್ಯಾದಿ ಭೇದವ್ಯವಹಾರಃ ತಥಾ ದೇಹೋಪಾಧಿಜೀವಭೇದಕೃತಃ ಜನ್ಮಮರಣಾದಿ

1. 'ತಥಾ' ಎಂದು ಅಚ್ಚಿನಪುಸ್ತಕಗಳಲ್ಲಿರುವದು ಹೆಚ್ಚು.

2. ಕಾರ್ಯವಲ್ಲ ; ಪರಿಣಾಮವಲ್ಲ.

3. ಸೂ, ಭಾ. ೪-೩-೧೩ ; ಬೃ. ಭಾ ೨-೧-೨೦ ಇವುಗಳಲ್ಲಿಯೂ ವಿಕಾರಾವಯವ ಪಕ್ಷಗಳನ್ನು ಖಂಡಿಸಿದೆ ; ಆದ್ದರಿಂದ ಈ ಪಕ್ಷಗಳನ್ನು ಕೆಲವರು ವೇದಾಂತಿಗಳು ಅವಲಂಬಿಸಿದ್ದರೆಂದು ನಂಬಬೇಕಾಗಿದೆ. ಸೂ. ಭಾ. ೨-೩-೪೩ ನ್ನೂ ನೋಡಿ.

ವ್ಯವಹಾರಃ, ತಸ್ಮಾತ್ ತತ್ಕೃತಮೇವ ಕ್ಲೇಶಕರ್ಮಫಲಮಲವತ್ತ್ವಮ್ ಆತ್ಮನಃ ನ ಪರಮಾರ್ಥತಃ ಇತಿ ಏತಮರ್ಥಂ ದೃಷ್ಟಾನ್ತೇನ ಪ್ರತಿಪಿಪಾದಯಿಷನ್ ಆಹ-

(ಭಾಷ್ಯಾರ್ಥ)

ಹೇಗೆ ಗಡಿಗೆಯ ಆಕಾಶವೇ ಮುಂತಾದವು ಬೇರೆಬೇರೆ ಎಂಬ ಬುದ್ಧಿಯ ನಿಮಿತ್ತದಿಂದಲೇ (ಅವುಗಳ) ರೂಪ, ಕಾರ್ಯ-ಮುಂತಾದ ಭೇದವ್ಯವಹಾರ(ವಾಗು)ವದೋ ಹಾಗೆ ದೇಹಗಳೆಂಬ ಉಪಾಧಿಯಿಂದಾದ ಜೀವರು ಬೇರೆಯೆಂಬ (ಬುದ್ಧಿ)ಯಿಂದಾದದ್ದು (ಜೀವರ) ಹುಟ್ಟು, ಸಾವು-ಮುಂತಾದ ವ್ಯವಹಾರವಷ್ಟೆ. ಆದ್ದರಿಂದ ಕ್ಲೇಶ, ಕರ್ಮ, ಫಲ-ಎಂಬ ಮಲವು[1] ಆತ್ಮನಲ್ಲಿ ಆ (ಅವಿದ್ಯಾವ್ಯವಹಾರ)ದಿಂದಲೇ ಆದದ್ದು, ನಿಜವಾಗಿ (ಅದು) ಅವನಲ್ಲಿಲ್ಲ-ಎಂಬೀ ವಿಷಯವನ್ನು ದೃಷ್ಟಾಂತದಿಂದ ತಿಳಿಸಿಕೊಡುವದಕ್ಕಾಗಿ (ಹೀಗೆಂದು) ಹೇಳುತ್ತಾರೆ :-

ಯಥಾ ಭವತಿ ಬಾಲಾನಾಂ ಗಗನಂ ಮಲಿನಂ ಮಲೈಃ ।
ತಥಾ ಭವತ್ಯಬುದ್ಧಾನಾಮಾತ್ಮಾಪಿ ಮಲಿನೋ ಮಲೈಃ ॥೯॥

೯. ಹೇಗೆ ಗಗನವು ಹುಡುಗರಿಗೆ ಮಲಗಳಿಂದ ಮಲಿನವಾಗಿರುವದೋ, ಹಾಗೆ ಅಬುದ್ಧರಿಗೆ ಆತ್ಮನೂ ಮಲಗಳಿಂದ ಮಲಿನವಾಗಿರುತ್ತಾನೆ.

(ಭಾಷ್ಯ)

೧೪೪. ಯಥಾ ಭವತಿ ಲೋಕೇ ಬಾಲಾನಾಮ್ ಅವಿವೇಕಿನಾಂ ಗಗನಮ್ ಆಕಾಶಂ ಘನರಜೋಧೂಮಾದಿಮಲೈಃ ಮಲಿನಂ ಮಲವತ್ ನ ಗಗನಯಾಥಾತ್ಮ್ಯವಿವೇಕಿನಾಮ್[2] ತಥಾ ಭವತಿ ಆತ್ಮಾ ಪರೋಽಪಿ ಯೋ ವಿಜ್ಞಾತಾ ಪ್ರತ್ಯಕ್ ಕ್ಲೇಶಕರ್ಮಫಲಮಲೈಃ ಮಲಿನಃ ಅಬುದ್ಧಾನಾಂ ಪ್ರತ್ಯಗಾತ್ಮವಿವೇಕರಹಿತಾನಾಂ ನ ಆತ್ಮವಿವೇಕವತಾಮ್ । ನ ಹಿ ಊಷರದೇಶಃ ತೃಡ್ವತ್ತ್ರಾಣ್ಯಧ್ಯಾರೋಪಿತೋದಕಫೇನತರಙ್ಗಾದಿಮಾನ್ । ತಥಾ ನಾತ್ಮಾ ಅಬುಧಾರೋಪಿತಕ್ಲೇಶಾದಿಮಲೈಃ ಮಲಿನೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಲೋಕದಲ್ಲಿ ಹೇಗೆ ಹುಡುಗರಿಗೆ ಅವಿವೇಕಿಗಳಿಗೆ ಗಗನವು ಆಕಾಶವು, ಮೋಡ, ಧೂಳು, ಹೊಗೆ-ಮುಂತಾದ ಮಲಗಳಿಂದ ಮಲಿನವಾಗಿ ಮಲವುಳ್ಳದ್ದಿಂತ (ತೋರು) ತ್ತಿರುತ್ತದೆಯೋ ಗಗನದ ನಿಜವನ್ನು ಬಿಡಿಸಿ ಅರಿತುಕೊಂಡಿರುವವರಿಗೆ (ಹೇಗೆ

1. ಯೋ. ಸೂ. ೧-೨೪. 2. "ನ ಗಗನಂ ಮಲವತ್ ಯಾಥಾತ್ಮ್ಯವಿವೇಕಿನಾಮ್" ಆ॥ ; " ನ ಗಗನಯಾಥಾತ್ಮ್ಯ ವಿವೇಕವತಾಮ್" ವಾ॥ ; ನಾವು ಕೊಟ್ಟಿರುವದು ಕಾ॥ ಪಾಠ.

ತೋರುವ)ದಿಲ್ಲವೋ ಹಾಗೆ ಆತ್ಮನು ಒಳಗೆ ವಿಜ್ಞಾತೃವಾಗಿರುವನಲ್ಲ, (ಅವನು) ಪರಮಾತ್ಮನೇ ಆಗಿದ್ದರೂ ಅಬುದ್ಧರಿಗೆ ಎಂದರೆ ಪ್ರತ್ಯಗಾತ್ಮನನ್ನು ಬಿಡಿಸಿ ಅರಿತು ಕೊಳ್ಳದೆ ಇರುವವರಿಗೆ ಕ್ಲೇಶಗಳು, ಕರ್ಮ, (ಅದರ) ಫಲ-ಎಂಬ ಮಲಗಳಿಂದ ಮಲಿನವಾಗಿ ತೋರುತ್ತಿರುವನೇ ಹೊರತು ಆತ್ಮನನ್ನು ಬಿಡಿಸಿ ಅರಿತುಕೊಂಡವರಿಗೆ ತೋರುವದಿಲ್ಲ. ಬಾಯಾರಿಕೆಯುಳ್ಳ ಪ್ರಾಣಿಯು ಮರುಭೂಮಿಯಲ್ಲಿ ಹುಟ್ಟುಗಟ್ಟಿರುವ ನೀರು, ನೊರೆ, ತೆರೆ-ಮುಂತಾದವು (ನಿಜವಾಗಿ ಅದರಲ್ಲಿ) ಇರುವದಿಲ್ಲವಷ್ಟೆ ? ಹಾಗೆಯೇ ಆತ್ಮನಲ್ಲಿ ತಿಳಿಯದವರು ಹುಟ್ಟುಗಟ್ಟಿರುವ ಕ್ಲೇಶವೇ ಮುಂತಾದ ಮಲಗಳಿಂದ (ಅವನು ನಿಜವಾಗಿ) ಮಲಿನವಾಗಿರುವದಿಲ್ಲ ಎಂದರ್ಥ.

(ಭಾಷ್ಯ)

೧೪೫. ಪುನರಪಿ ಉಕ್ತಮೇವ ಅರ್ಥಂ ಪ್ರಪಞ್ಚಯತಿ-

(ಭಾಷ್ಯಾರ್ಥ)

ಮತ್ತೂ ಒಂದು ಸಲ (ಹಿಂದೆ) ಹೇಳಿರುವ ಅರ್ಥವನ್ನೇ ಬಿಚ್ಚಿ ಹೇಳುತ್ತಾರೆ[1] :-

ಮರಣೇ ಸಂಭವೇ ಚೈವ ಗತ್ಯಾಗಮನಯೋರಪಿ ।
ಸ್ಥಿತೌ ಸರ್ವಶರೀರೇಷು ಹ್ಯಾಕಾಶೇನಾವಿಲಕ್ಷಣಃ ॥೯॥

೯. ಸಾವಿನಲ್ಲಿಯೂ ಮತ್ತು ಹುಟ್ಟಿನಲ್ಲಿಯೂ ಹೋಗುವಿಕೆಬರುವಿಕೆಗಳಲ್ಲಿಯೂ ಇರುವದರಲ್ಲಿಯೂ, ಸರ್ವಶರೀರಗಳಲ್ಲಿಯೂ ಆಕಾಶಕ್ಕಿಂತ ಬೇರೆಯ ರೂಪದವನಲ್ಲದೆಯೇ (ಇರುವನು).

(ಭಾಷ್ಯ)

೧೪೬. ಘಟಾಕಾಶಜನ್ಮನಾಶಗಮನಾಗಮನಸ್ಥಿತಿವತ್ ಸರ್ವಶರೀರೇಷು ಆತ್ಮನಃ ಜನ್ಮಮರಣಾದಿಃ । ಆಕಾಶೇನ ಅವಿಲಕ್ಷಣಃ ಪ್ರತ್ಯೇತವ್ಯಃ ಇತ್ಯರ್ಥಃ ॥

(ಭಾಷ್ಯಾರ್ಥ)

ಗಡಿಗೆಯ ಆಕಾಶವು ಹುಟ್ಟುವದು, ನಾಶವಾಗುವದು, ಹೋಗುವದು, ಬರುದು, ಇರುವದು-ಇವುಗಳಂತೆಯೇ ಎಲ್ಲಾ ಶರೀರಗಳಲ್ಲಿಯೂ ಆತ್ಮನ ಹುಟ್ಟು, ಸಾವು-ಮುಂತಾದವುಗಳು[2]. (ಆತ್ಮನು) ಆಕಾಶಕ್ಕಿಂತ (ಈ ಯಾವ ವಿಷಯದಲ್ಲಿಯೂ) ಬೇರೆಯ ರೂಪದವನಲ್ಲ (ಎಂದ)ರಿಯಬೇಕು ಎಂದರ್ಥ.

---

1. ಉಪಸಂಹಾರಕ್ಕಾಗಿ ಮತ್ತೆ ಹೇಳಿದ್ದಾರೆ ಎಂದರ್ಥ.

2. ಇವೆಲ್ಲವೂ ಅವಿದ್ಯಕವೇ, ನಿಜವಲ್ಲ

## ಆತ್ಮನ ಶರೀರಗಳೆಲ್ಲವೂ ಅವಿದ್ಯಕ

ಸಙ್ಘಾತಾಃ ಸ್ವಪ್ನವತ್ ಸರ್ವೇ ಆತ್ಮಮಾಯಾವಿಸರ್ಜಿತಾಃ ।
ಆಧಿಕ್ಯೇ ಸರ್ವಸಾಮ್ಯೇ ವಾ ನೋಪಪತ್ತಿರ್ಹಿ ವಿದ್ಯತೇ ॥೧೦॥

೧೦. ಸಂಘಾತಗಳೆಲ್ಲವೂ ಕನಸಿನಂತೆ ಆತ್ಮಮಾಯೆಯಿಂದ ಸೃಷ್ಟಿಯಾಗಿರುತ್ತವೆ. (ಅವುಗಳಲ್ಲಿ ಕೆಲವು) ಹೆಚ್ಚಿನವುಗಳೆಂಬ ವಿಷಯದಲ್ಲಾಗಲಿ ಎಲ್ಲವೂ ಸಮಾನವೆಂಬ ವಿಷಯದಲ್ಲಾಗಲಿ ಉಪಪತ್ತಿಯು ಇರುವದೇ ಇಲ್ಲ.

(ಭಾಷ್ಯ)

೧೪೭. ಘಟಾದಿಸ್ಥಾನೀಯಾಸ್ತು ದೇಹಾದಿಸಙ್ಘಾತಾಃ ಸ್ವಪ್ನದೃಶ್ಯದೇಹಾದಿವತ್ ಮಾಯಾವಿಕೃತದೇಹಾದಿವಚ್ಚ[1] ಆತ್ಮಮಾಯಾವಿಸರ್ಜಿತಾಃ । ಆತ್ಮನಃ ಮಾಯಾ ಅವಿದ್ಯಾ । ತಯಾ ಪ್ರತ್ಯುಪಸ್ಥಾಪಿತಾಃ ನ ಪರಮಾರ್ಥತಃ ಸನ್ತಿ ಇತ್ಯರ್ಥಃ । ಯದಿ ಆಧಿಕ್ಯಮ್ ಅಧಿಕಭಾವಃ ತಿರ್ಯಗ್ದೇಹಾದ್ಯಪೇಕ್ಷಯಾ ದೇವಾದಿಕಾರ್ಯಕರಣಸಙ್ಘಾತಾನಾಮ್, ಯದಿ ವಾ ಸರ್ವೇಷಾಂ ಸಮತೈವ ನ ಏಷಾಂ ಉಪಪತ್ತಿಃ ಸಮ್ಭವಸದ್ಭಾವ ಪ್ರತಿಪಾದಕೋ[2] ಹೇತುಃ ವಿದ್ಯತೇ ನಾಸ್ತಿ । ಹಿ ಯಸ್ಮಾತ್ ತಸ್ಮಾತ್ ಅವಿದ್ಯಾಕೃತಾ ಏವ ನ ಪರಮಾರ್ಥತಃ ಸನ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಗಡಿಗೆ ಮುಂತಾದವುಗಳಂತೆ ಇರುವ ದೇಹವೇ ಮುಂತಾದವುಗಳ ಸಂಘಾತಗಳಾದರೋ ಕನಸಿನಲ್ಲಿ ಕಾಣಬರುವ ದೇಹಾದಿಗಳಂತೆಯೂ ಮಾಯಾವಿಯು ಮಾಡಿರುವ ದೇಹವೇ ಮುಂತಾದವುಗಳಂತೆಯೂ[3] ಆತ್ಮಮಾಯಾವಿಸರ್ಜಿತವಾಗಿರುವವು. ಆತ್ಮನ ಮಾಯೆ ಎಂದರೆ ಅವಿದ್ಯೆ ; ಅದರಿಂದ ಎದುರಿಗೆ ಮುಂದೊಡ್ಡಲ್ಪಟ್ಟಿರುವವೇ ಹೊರತು ನಿಜವಾಗಿ ಇರುವದಿಲ್ಲ ಎಂದರ್ಥ. ಕೀಳುಪ್ರಾಣಿಗಳ ದೇಹವೇ ಮುಂತಾದವು

1. 'ಮಾಯಾಕೃತದೇಹಾದಿವಚ್ಚ' ಎಂದಿದ್ದರೂ ಸಾಕಾಗುವದು.

2. 'ಉಪಪತ್ತಿಃ ಸಮ್ಭವಃ' ಆ॥ ; 'ಉಪಪತ್ತಿಸಮ್ಭವಃ' ಎಂದು-ಮುಂತಾಗಿರುವ ಮುದ್ರಿತ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

3. ದೇಹಗಳನ್ನು ಕನಸುಮಾಯೆಗಳ ದೇಹಕ್ಕೆ ಹೋಲಿಸಿರುವದು ಅವುಗಳು ಬರಿಯ ಹುಸಿತೋರಿಕೆ ಎಂಬುದಕ್ಕೆ. ಗೀ. ಭಾ. ಭಾ. ೨೮.

ಗಳಿಗೆ ಹೋಲಿಸಿದರೆ ದೇವತೆಗಳೇ ಮುಂತಾದವರ ಕಾರ್ಯಕರಣಸಂಘಾತಗಳು ಹೆಚ್ಚಿನವೇ ಆಗಿರಲಿ, ಅಥವಾ ಎಲ್ಲವೂ ಒಂದೇ ಸಮವೆಂದೇ ಆಗಲಿ, ಇವುಗಳಿಗೆ ಉಪಪತ್ತಿಯು ಎಂದರೆ (ಅವುಗಳ) ಹುಟ್ಟು (ನಿಜವಾಗಿ) ಇರುವದೆಂದು ತೋರಿಸಿ ಕೊಡುವ ಹೇತು[1] (ಯಾವದೊಂದೂ) ಇರುವದೇ ಇಲ್ಲ. ಹೀಗಿರುವದಷ್ಟೆ, ಅದ ಕಾರಣ (ಅವೆಲ್ಲವೂ) ಅವಿದ್ಯೆಯಿಂದಾದವುಗಳೇ ಹೊರತು ನಿಜವಾಗಿಯೂ ಇರು ವದಿಲ್ಲ ಎಂದರ್ಥ.

## ಆತ್ಮನಿಗೆ ಹುಟ್ಟು-ಮುಂತಾದವಿಲ್ಲವೆಂಬುದಕ್ಕೆ ಶ್ರುತಿ

(ಭಾಷ್ಯ)

೧೪೮. ಉತ್ಪತ್ತ್ಯಾದಿವರ್ಜಿತಸ್ಯ ಅದ್ವಯಸ್ಯ ಆತ್ಮತತ್ತ್ವಸ್ಯ ಶ್ರುತಿಪ್ರಮಾಣಕತ್ವ ಪ್ರದರ್ಶನಾರ್ಥಂ ವಾಕ್ಯಾನಿ ಉಪನ್ಯಸ್ಯನ್ತೇ-

(ಭಾಷ್ಯಾರ್ಥ)

ಹುಟ್ಟು ಮುಂತಾದವುಗಳಿಲ್ಲದ, ತನಗೆರಡನೆಯದಿಲ್ಲದ, ಆತ್ಮತತ್ತ್ವಕ್ಕೆ ಶ್ರುತಿಯೇ ಪ್ರಮಾಣವೆಂದು ತೋರಿಸಿಕೊಡುವದಕ್ಕಾಗಿ (ಕೆಲವು) ವಾಕ್ಯಗಳನ್ನು ಉದಾಹರಿಸುತ್ತಾರೆ :-

ರಸಾದಯೋ ಹಿ ಯೇ ಕೋಶಾಃ ವ್ಯಾಖ್ಯಾತಾಸ್ತೈತ್ತಿರೀಯಕೇ ।
ತೇಷಾಮಾತ್ಮಾ ಪರೋ ಜೀವಃ ಖಂ ಯಥಾ ಸಮ್ಪ್ರಕಾಶಿತಃ ॥೧೧॥

೧೧. ರಸವೇ ಮುಂತಾದ ಯಾವ ಕೋಶಗಳನ್ನು ತೈತ್ತಿರೀಯಕದಲ್ಲಿ ವಿವರಿಸಿರುತ್ತದೆಯೋ ಅವುಗಳಿಗೆ ಆತ್ಮನಾದ ಪರಜೀವನೇ ಆಕಾಶದಂತೆ ಎಂದು ಸಂಪ್ರಕಾಶಿತನಾಗಿರುತ್ತಾನೆ.

(ಭಾಷ್ಯ)

೧೪೯. ರಸಾದಯಃ 'ಅನ್ನರಸಮಯಃ', 'ಪ್ರಾಣಮಯಃ' ಇತ್ಯೇವಮಾದಯಃ ಯೇ ಕೋಶಾ ಇವ ಕೋಶಾಃ ಅಸ್ಯಾದೇರಿವ । ಉತ್ತರೋತ್ತರಾಪೇಕ್ಷಯಾ ಬಹಿರ್ಭಾ-

---

1. " ಸಮ್ಭವಾದಿಸದ್ಭಾವಯುಕ್ತಿಃ" ಎಂದು ಪಾಠವಿದ್ದರೆ ಹುಟ್ಟುವದೇ ಮುಂತಾದದ್ದು ಇದೆ ಎಂಬುದನ್ನು ತೋರಿಸಿಕೊಡುವ ಯುಕ್ತಿ ಎಂದು ಕನ್ನಡಿಸಬೇಕು. ಹಿಂದಿನ ಕಾರಿಕೆಯನ್ನು ನೋಡಿ.

ವಾತ್ ಪೂರ್ವಪೂರ್ವಸ್ಯ[1] । ವ್ಯಾಖ್ಯಾತಾಃ ವಿಸ್ಪಷ್ಟಮ್ ಆಖ್ಯಾತಾಃ ತೈತ್ತಿರೀಯಕೇ ತೈತ್ತಿರೀಯಕ ಶಾಖೋಪನಿಷದ್ವಲ್ಲ್ಯಾಮ್ । ತೇಷಾಂ ಕೋಶಾನಾಮ್ ಆತ್ಮಾಯೇನ ಆತ್ಮನಾ ಪಞ್ಚಾಪಿ ಕೋಶಾ ಆತ್ಮವನ್ತಃ ಅನ್ತರತಮೇನ । ಸ ಹಿ ಸರ್ವೇಷಾಂ ಜೀವನ ನಿಮಿತ್ತತ್ವಾತ್ ಜೀವಃ । ಕೋಽಸೌ ಇತಿ ? ಆಹ- ಪರ ಏವ ಆತ್ಮಾ ಯಃ ಪೂರ್ವಂ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" (ತೈ. ೨-೧) ಇತಿ ಪ್ರಕೃತಃ । ಯಸ್ಮಾತ್ ಆತ್ಮನಃ ಸ್ವಪ್ನಮಾಯಾದಿವತ್ ಆಕಾಶಾದಿಕ್ರಮೇಣ ರಸಾದಯಃ ಕೋಶಲಕ್ಷಣಾಃ ಸಜ್ಞಾತಾಃ ಆತ್ಮಮಾಯಾವಿಸರ್ಜಿತಾಃ ಇತಿ ಉಕ್ತಮ್ । ಸ ಆತ್ಮಾ ಅಸ್ಮಾಭಿಃ ಯಥಾ ಖಂ ತಥಾ ಇತಿ ಸಂಪ್ರಕಾಶಿತಃ । "ಆತ್ಮಾ ಹ್ಯಾಕಾಶವತ್ (೩-೩) ಇತ್ಯಾದಿಭಿಃ ಶ್ಲೋಕೈಃ । ನ ತಾರ್ಕಿಕಪರಿಕಲ್ಪಿತಾತ್ಮವತ್ ಪುರುಷಬುದ್ಧಿಪ್ರಮಾಣಗಮ್ಯಃ ಇತಿ ಅಭಿಪ್ರಾಯಃ ।।

(ಭಾಷ್ಯಾರ್ಥ)

ರಸವೇ ಮುಂತಾದ 'ಅನ್ನರಸಮಯನು', 'ಪ್ರಾಣಮಯನು'-ಎಂಬಿವೇ ಮುಂತಾದ, (ಯಾವ) ಕೋಶಗಳನ್ನು-ಕತ್ತಿಯೇ ಮುಂತಾದದ್ದರ ಒರೆಗಳಂತೆ ಮುಂದು ಮುಂದಿನ (ಕೋಶ)ಕ್ಕಿಂತ ಹಿಂದು ಹಿಂದಿನದು ಹೊರಗಡೆ ಇರುವದರಿಂದ[2] (ಕೋಶ ಗಳೆನಿಸಿರುವ ಪಂಚಕೋಶಗಳನ್ನು)-ತೈತ್ತಿರೀಯಕದಲ್ಲಿ ತೈತ್ತಿರೀಯಕಶಾಖೆಯ ಉಪನಿಷತ್ತಿನ (ಎರಡನೆಯ)ವಲ್ಲಿಯಲ್ಲಿ ವ್ಯಾಖ್ಯಾನಮಾಡಿರುತ್ತದೆಯೋ ವಿಸ್ಪಷ್ಟವಾಗಿ ಹೇಳಿರುತ್ತದೆಯೋ, ಆ ಕೋಶಗಳ ಆತ್ಮನು, ಎಲ್ಲಕ್ಕೂ ಒಳಗಿರುವ ಯಾವ ಆತ್ಮನಿಂದ (ಆ) ಐದು ಕೋಶಗಳೂ ಆತ್ಮವಂತಗಳಾಗಿರುವವೋ, ಅವನೇ ಎಲ್ಲರಿಗೂ ಬದುಕಿರುವದಕ್ಕೆ ಕಾರಣನಾಗಿರುವದರಿಂದ ಜೀವನು[3]. ಅವನು ಯಾವನು ? ಎಂದರೆ ಹೇಳುತ್ತಾರೆ :

1. ' ಉತ್ತರರೋತ್ತರಸ್ಯಾಪೇಕ್ಷಯಾ ಬಹಿರ್ಭಾವಾತ್ ಪೂರ್ವಸ್ಯ ಪೂರ್ವಸ್ಯ ' ಎಂದೂ ಆ।। ಪಾಠವುಂಟು.

2. ' ಅನ್ಯೋಽನ್ತರ ಆತ್ಮಾ ಪ್ರಾಣಮಯಃ ' ಅನ್ನಮಯನಿಗಿಂತ ಒಳಗಿರುವ ಮತ್ತೊಬ್ಬ ಆತ್ಮನು ಪ್ರಾಣಮಯನು (ತೈ. ೨-೨) ಮುಂತಾದ ಶ್ರುತಿಯ ಆಧಾರದಿಂದ ಆಡಿದ ಮಾತು.

3. ಅನ್ನಮಯಕ್ಕೆ ಪ್ರಾಣಮಯನು ಆತ್ಮನು. ಪ್ರಾಣಮಯಕ್ಕೆ ಮನೋಮಯನು ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುವ ಆತ್ಮರು ನಿಜವಾಗಿ ಆತ್ಮರಲ್ಲ. ಆತ್ಮರಾಗಿ ತೋರುವ ಕೋಶ ಗಳೇ. ಆನಂದಮಯಕೋಶದ ವಿವರಣೆಯಲ್ಲಿ 'ಆನಂದವು ಆತ್ಮನು' (ತೈ. ೨-೫-೪) ಎಂದಿದೆ ಯಲ್ಲ, (ತೈ. ಭಾ. ಭಾ. ೧೪೭) ಅವನೇ ನಿಜವಾದ ಆತ್ಮನು. ಮಿಥ್ಯೆಯಾದ ಕೋಶಗಳು ಅವನಿಂದಲೇ ಇರವನ್ನು ಪಡೆದು ಬಾಳುವದರಿಂದ ಅವರಿಗೆ ಇವನೇ ಜೀವ. ತೈ. ಭಾ. ಭಾ. ೧೨೭ನ್ನು ನೋಡಿ.

ಪರಮನೇ ಆಗಿರುವ ಆತ್ಮನು, ಹಿಂದೆ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" (ತೈ. ೨-೧) ಎಂದು ಪ್ರಕೃತನಾಗಿದ್ದನಲ್ಲ, (ಅವನೇ). ಆ ಆತ್ಮನಿಂದಲೇ ಕನಸು, ಮಾಯೆ-ಮುಂತಾದ(ವುಗಳ ಸಂಘಾತಗಳಂತೆ) ಆಕಾಶವೇ ಮುಂತಾದ ಕ್ರಮದಿಂದ ರಸವೇ ಮುಂತಾದ ಕೋಶರೂಪವಾಗಿರುವ ಸಂಘಾತಗಳು ಆತ್ಮಮಾಯಾವಿಸರ್ಜಿತವಾಗಿರುತ್ತವೆ[1] ಎಂದು (ಹಿಂದಿನ ಶ್ಲೋಕದಲ್ಲಿ) ಹೇಳಲಾಗಿರುತ್ತದೆ. ಆ ಆತ್ಮನೇ ನಾವು "ಆತ್ಮಾ ಹ್ಯಾಕಾಶವತ್" (೩-೩) ಮುಂತಾದ ಶ್ಲೋಕಗಳಲ್ಲಿ ಆಕಾಶವು ಹೇಗಿರುವದೋ ಹಾಗೆ (ಇರುವದೆಂದು) ತಿಳಿಸಿಕೊಟ್ಟಿರುವದು. (ಇಷ್ಟೇ ಹೊರತು ನಾವು ಹೇಳಿರುವ ಆತ್ಮನು) ತಾರ್ಕಿಕರು ಕಲ್ಪಿಸಿರುವ ಆತ್ಮನಂತೆ ಪುರುಷಬುದ್ಧಿ ಎಂಬ ಪ್ರಮಾಣದಿಂದ ತಿಳಿಯಬರುವವನಲ್ಲ[2] ಎಂದು ಅಭಿಪ್ರಾಯ.

ದ್ವಯೋರ್ದ್ವಯೋರ್ಮಧುಜ್ಞಾನೇ ಪರಂ ಬ್ರಹ್ಮ ಪ್ರಕಾಶಿತಮ್ ।
ಪೃಥಿವ್ಯಾಮುದರೇ ಚೈವ ಯಥಾಕಾಶಃ ಪ್ರಕಾಶಿತಃ ॥೧೨॥

೧೨. ಪೃಥಿವಿಯಲ್ಲಿಯೂ ಉದರದಲ್ಲಿಯೂ ಆಕಾಶವನ್ನು (ನಾವು ತಿಳಿಸಿರು)ವಂತೆಯೇ ಮಧುಜ್ಞಾನದಲ್ಲಿ ಎರಡೆರಡರಲ್ಲಿ ಪರಬ್ರಹ್ಮವನ್ನು ತಿಳಿಸಿಕೊಟ್ಟಿರುತ್ತದೆ.

(ಭಾಷ್ಯ)

೧೫೦. ಕಿಂಚ ಅಧಿದೈವಮ್ ಅಧ್ಯಾತ್ಮಂ ಚ ತೇಜೋಮಯೋಽಮೃತಮಯಃ ಪುರುಷಃ ಪೃಥಿವ್ಯಾದ್ಯನ್ತರ್ಗತಃ ಯೋ ವಿಜ್ಞಾತಾ ಪರ ಏವ ಆತ್ಮಾ ಬ್ರಹ್ಮ ಸರ್ವಮ್ ಇತಿ ದ್ವಯೋರ್ದ್ವಯೋಃ ಆ ದ್ವೈತಕ್ಷಯಾತ್ ಪರಂ ಬ್ರಹ್ಮ ಪ್ರಕಾಶಿತಮ್ । ಕ್ವ ಇತಿ ? ಆಹ-ಬ್ರಹ್ಮವಿದ್ಯಾಖ್ಯಂ ಮಧು ಅಮೃತಮ್[3] ಮೋದನಹೇತುತ್ವಾತ್

1. ಸೃಷ್ಟಿಯಾಗಿರುವ ಅನ್ನಮಯಾದಿಗಳಿಗೂ ಕನಸಿನ ಅನ್ನಮಯಾದಿಗಳಿಗೂ ತಾರತಮ್ಯವಿಲ್ಲ.

2. ನಾವು ಹೇಳಿರುವ ಆತ್ಮನು ಉಪನಿಷತ್ಪ್ರಮಾಣಗಮ್ಯನಾದ ಪರಮಾತ್ಮನು, ಸಾಂಖ್ಯಿರು, ವೈಶೇಷಿಕರು-ಮುಂತಾದವರು ತರ್ಕದಿಂದ ಸಿದ್ಧಪಡಿಸಿರುವ ಆತ್ಮನಲ್ಲ. ಸೂ. ಭಾ. ೧-೧-೪, ಬೃ. ಭಾ. ೩-೯-೨೬.

3. ಇವರ ಮುಂದೆ ಮುದ್ರಿತಪುಸ್ತಕಗಳಲ್ಲಿರುವ ಅಮೃತತ್ವಮ್ ಎಂಬ ಮಾತನು ಹೆಚ್ಚೆಂದು ಬಿಟ್ಟುಬಿಟ್ಟಿದೆ.

ವಿಜ್ಞಾಯತೇ[1] ಅಸ್ಮಿನ್[2] ಇತಿ ಮಧುಜ್ಞಾನಂ ಮಧುಬ್ರಾಹ್ಮಣಮ್ । ತಸ್ಮಿನ್ ಇತ್ಯರ್ಥಃ । ಕಿಮಿವ ಇತಿ ? ಆಹ-ಪೃಥಿವ್ಯಾಮ್ ಉದರೇ ಚೈವ ಯಥಾ ಏಕಃ ಆಕಾಶಃ ಅನುಮಾನೇನ ಪ್ರಕಾಶಿತಃ ಶ್ಲೋಕೇ[3] ತದ್ವತ್ ಇತ್ಯರ್ಥಃ ।।

(ಭಾಷ್ಯಾರ್ಥ)

ಇದಲ್ಲದೆ ಅಧಿದೈವ ಮತ್ತು ಅಧ್ಯಾತ್ಮ-(ಈ ಎರಡು ರೂಪವಾಗಿಯೂ ಇರುವ) ತೇಜೋಮಯನೂ ಅಮೃತಮಯನೂ ಆಗಿರುವ ಪೃಥಿವಿಯೇ ಮುಂತಾದವು ಗಳಲ್ಲಿರುವ ಪುರುಷನಾದ ವಿಜ್ಞಾತೃವಿದಾನಲ್ಲ, ಅವನು ಪರಮಾತ್ಮನಾದ ಬ್ರಹ್ಮವೇ, (ಅವನೇ) ಎಲ್ಲವೂ-ಎಂದು ಎರಡೆರಡರಲ್ಲಿ[4]-ದ್ವೈತವೆಲ್ಲವೂ ಹೋಗುವವರೆಗೂ (ಹೇಳಿ)-ಪರಬ್ರಹ್ಮವನ್ನೇ ತಿಳಿಸಿರುತ್ತದೆ. ಎಲ್ಲಿ ? ಎಂದರೆ ಹೇಳುತ್ತಾರೆ : ಬ್ರಹ್ಮವಿದ್ಯೆ ಎಂಬ ಮಧು, ಮೋದನಕ್ಕೆ ಕಾರಣವಾಗಿರುವದರಿಂದ (ಅದು ಮಧು) ಅಮೃತವು-ಇದರಲ್ಲಿ ತಿಳಿಯಬರುತ್ತದೆಯಾದ್ದರಿಂದ ಮಧುಬ್ರಾಹ್ಮಣವು[5] ಮಧುಜ್ಞಾನವು. ಅದರಲ್ಲಿ (ತಿಳಿಸಿರುತ್ತದೆ) ಎಂದರ್ಥ[6]. ಏತರಂತೆ ? ಪೃಥಿವಿಯಲ್ಲಿಯೂ ಶರೀರ

1. 'ತತ್ ವಿಜ್ಞಾಯತೇ' ವಾ।। ಕಾ।।

2. 'ಯಸ್ಮಿನ್' ಎಂಬ ಮುದ್ರಿತಪಾಠವನ್ನು ಹೀಗೆ ತಿದ್ದಿಕೊಂಡಿದೆ.

3. 'ಲೋಕೇ' ಎಂಬ ಮುದ್ರಿತಪಾಠವನ್ನು ಹೀಗೆ ತಿದ್ದಿಕೊಂಡಿದೆ. ಈ ವಾಕ್ಯದ ಅನುವಾದವನ್ನೂ ಅದಕ್ಕೆ ಕೊಟ್ಟಿರುವ ಟಿಪ್ಪಣಿಯನ್ನೂ ನೋಡಿರಿ.

4. ಪೃಥ್ವಿ, ಶರೀರ ; ಅಪ್ಪು, ರೇತಸ್ಸು ; ಅಗ್ನಿ, ವಾಕ್ಕು ; ವಾಯು, ಪ್ರಾಣ ; ಆದಿತ್ಯ, ಚಕ್ಷುಸ್ಸು ; ದಿಕ್ಕುಗಳು, ಶ್ರೋತ್ರ ; ಚಂದ್ರ, ಮನಸ್ಸು ; ಮಿಂಚು, ತ್ವಕ್ಕು ; ಗುಡುಗು, ಸ್ವರ ; ಆಕಾಶ, ಹೃದಯಾಕಾಶ ; ಧರ್ಮಸತ್ಯಗಳ ಸಾಮಾನ್ಯ ವಿಶೇಷಗಳು ; ಮನುಷ್ಯಜಾತಿ ಮನುಷ್ಯವ್ಯಕ್ತಿ ; ಕಾರ್ಯಕರಣಸಂಘಾತ ; - ಹೀಗೆ ಎರಡೆರಡಾಗಿ ತೆಗೆದುಕೊಂಡು ಎಲ್ಲೆಲ್ಲಿಯೂ ಆತ್ಮನು ಒಬ್ಬನೇ ಎಂದು ತಿಳಿಸಿರುತ್ತದೆ.

5. ಬೃ. ೨-೫ ಕ್ಕೆ ಮಧುಬ್ರಾಹ್ಮಣವೆಂದು ಹೆಸರು ; ಇದರಲ್ಲಿ ಬ್ರಹ್ಮವಿದ್ಯೆ ಎಂಬ ಅನಂತಹೇತುವಾದ ಮಧುವನ್ನು ತಿಳಿಸಿರುತ್ತದೆ.

6. ಬೃ. ಭಾ. ೨-೫-೧ ರಲ್ಲಿ ಕೊಟ್ಟಿರುವ ಮಂತ್ರವ್ಯಾಖ್ಯಾನಕ್ಕೂ ಇಲ್ಲಿ ಕೊಟ್ಟಿರುವ ವ್ಯಾಖ್ಯಾನಕ್ಕೂ ಸ್ವಲ್ಪ ಹೆಚ್ಚುಕಡಿಮೆಯಿರುವಂತೆ ಕಾಣುತ್ತದೆ. ಪೃಥಿವಿ, ಶರೀರ, ಪೃಥಿವ್ಯಂತರ್ಗತ ಶಾರೀರಾಂತರ್ಗತ ಲಿಂಗಾಭಿಮಾನಿಯಾದ ಆತ್ಮ- ಇವೆಲ್ಲವೂ ಏತರ ಕಾರ್ಯವೋ ಆ ಆತ್ಮನೇ ಬ್ರಹ್ಮ ಎಂಬುದು ಬೃ. ಭಾ. ಇಲ್ಲಿ ಪೃಥಿವಿಯಲ್ಲಿಯೂ ಶರೀರದಲ್ಲಿಯೂ ಇರುವ ಆತ್ಮನು ಒಬ್ಬನೇ, ಅದೇ ಬ್ರಹ್ಮ- ಎಂದು ಹೇಳಿದೆ.

ದಲ್ಲಿಯೂ ಹೇಗೆ ಆಕಾಶವು ಒಂದೇ ಎಂದು ಅನುಮಾನ (ಪ್ರಮಾಣ)ದಿಂದ ಶ್ಲೋಕದಲ್ಲಿ[1] ತಿಳಿಸಲಾಗಿದೆಯೋ ಅದರಂತೆ ಎಂದರ್ಥ.

ಜೀವಾತ್ಮನೋರನನ್ಯತ್ವಮಭೇದೇನ ಪ್ರಶಸ್ಯತೇ ।
ನಾನಾತ್ವಂ ನಿನ್ದ್ಯತೇ ಯಚ್ಚ ಯದೇವಂ ಹಿ ಸಮಞ್ಜಸಮ್ ॥೧೩॥

೧೩. ಜೀವಾತ್ಮರುಗಳಿಗೆ ಅಭೇದ(ವಿರುವದ)ರಿಂದ (ಅವರು) ಬೇರೆ ಬೇರೆಯಲ್ಲವೆಂಬುದನ್ನು ಹೊಗಳಿರುವದೂ ಬೇರೆ ಬೇರೆ ಎಂಬುದನ್ನು ನಿಂದಿಸಿರುವದೂ (ಇದೆ)ಯಲ್ಲ, ಅದು ಹೀಗೆಯೇ ಸಮಂಜಸವಾಗುತ್ತದೆ.

(ಭಾಷ್ಯ)

೧೩೧. ಯತ್ ಯುಕ್ತಿತಃ ಶ್ರುತಿತಶ್ಚ ನಿರ್ಧಾರಿತಂ ಜೀವಸ್ಯ ಪರಸ್ಯ ಚ ಆತ್ಮನಃ ಜೀವಾತ್ಮನೋಃ ಅನನ್ಯತ್ವಮ್ ಅಭೇದೇನ ಪ್ರಶಸ್ಯತೇ ಸ್ತೂಯತೇ ಶಾಸ್ತ್ರೇಣ ವ್ಯಾಸಾದಿಭಿಶ್ಚ । ಯಚ್ಚ ಸರ್ವಪ್ರಾಣಿಸಾಧಾರಣಂ ಸ್ವಾಭಾವಿಕಂ ಶಾಸ್ತ್ರಬಹಿಷ್ಕೃತೈಃ ಕುತಾರ್ಕಿಕೈಃ ವಿರಚಿತಂ ನಾನಾತ್ವದರ್ಶನಂ ನಿನ್ದ್ಯತೇ "ನ ತು ತದ್ದ್ವಿತೀಯಮಸ್ತಿ" (ಬೃ. ೪-೩-೨೩), "ದ್ವಿತೀಯಾದ್ ವೈ ಭಯಂ ಭವತಿ" (ಬೃ. ೧-೪-೨) "ಉದರಮನ್ತರಂ ಕುರುತೇ, ಅಥ ತಸ್ಯ ಭಯಂ ಭವತಿ" (ತೈ. ೨-೭) "ಇದಂ ಸರ್ವಂ ಯದಯಮಾತ್ಮಾ" (ಬೃ. ೨-೪-೬), "ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ" (ಕ. ೨-೧-೧೦) ಇತ್ಯಾದಿವಾಕ್ಯೈಶ್ಚ ಅನ್ಯೈಶ್ಚ ಬ್ರಹ್ಮವಿದ್ಭಿಃ ಯಚ್ಚೈತತ್ ತತ್ ಏವಂ ಹಿ ಸಮಞ್ಜಸಮ್ ಋಜ್ವವಬೋಧಂ ನ್ಯಾಯ್ಯಮ್ ಇತ್ಯರ್ಥಃ । ಯಾಸ್ತು ತಾರ್ಕಿಕ ಪರಿಕಲ್ಪಿತಾಃ ಕುದೃಷ್ಟಯಃ ತಾಃ ಅನೃಜ್ವ್ಯಃ ನಿರೂಪ್ಯಮಾಣಾ ನ ಘಟನಾಂ ಪ್ರಾಞ್ಚನ್ತಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಯುಕ್ತಿಯಿಂದಲೂ ಶ್ರುತಿಯಿಂದಲೂ[2] (ನಾವು) ನಿಶ್ಚಯಮಾಡಿರುವ ಜೀವಾತ್ಮರು

---

1. ಲೋಕದಲ್ಲಿ ಎಂಬ ಮೂಲವನ್ನಿಟ್ಟುಕೊಂಡು "ಜನರು ಆಕಾಶೈಕ್ಯವನ್ನು ಅನುಮಾನದಿಂದ ನಿಶ್ಚಯಿಸುವಂತೆ"- ಎಂಬ ಅರ್ಥವನ್ನು ೪॥ ವ್ಯಾಖ್ಯಾನದಲ್ಲಿ ತಗೆದಿದೆ. ಆದರೆ ಇದು ಪ್ರಕೃತಕ್ಕೆ ಹೊಂದುವ ಹಾಗೆ ಕಾಣುವದಿಲ್ಲ. ಶ್ಲೋಕದಲ್ಲಿ ಘಟಾಕಾಶಾದಿದೃಷ್ಟಾಂತದಿಂದ ನಾವು ಆಕಾಶೈಕ್ಯವನ್ನು ಯುಕ್ತಿಯಿಂದ ತೋರಿಸಿರುವಂತೆ ಮಧುಬ್ರಾಹ್ಮಣದಲ್ಲಿಯೂ ಆತ್ಮೈಕ್ಯವನ್ನು ತೋರಿಸಿದೆ. ಆದ್ದರಿಂದ ನಮ್ಮ ಅಭಿಪ್ರಾಯಕ್ಕೆ ಶ್ರುತಿಯ ಬೆಂಬಲವಿದೆ ಎಂಬುದೇ ಇಲ್ಲಿ ಒಟ್ಟು ಅಭಿಪ್ರಾಯ.

2. ಶ್ರುತಿಪ್ರಮಾಣವನ್ನು ಯುಕ್ತಿಯಿಂದ ನೋಡಿದರೂ ಆತ್ಮೈಕತ್ವವೇ ಏರ್ಪಡುವದರಿಂದ ಇದೇ ಸಮ್ಯಗ್ದರ್ಶನವೆಂದು ಭಾವ.

ಗಳಿಗೆ ಜೀವನಿಗೂ ಪರಮಾತ್ಮನಿಗೂ ಅಭೇದವಿರುವದರಿಂದ (ಅವರಿಬ್ಬರೂ) ಬೇರೆ ಯಲ್ಲವೆಂಬುದನ್ನು ಶಾಸ್ತ್ರವೂ ವ್ಯಾಸಾದಿಗಳೂ ಪ್ರಶಂಸೆಮಾಡಿರುತ್ತಾರೆ, ಹೊಗಳಿರುತ್ತಾರೆ ಎಂಬುದಿದೆಯಲ್ಲ, (ಅದು), ಮತ್ತು ಸರ್ವಪ್ರಾಣಿಗಳಿಗೂ ಸಮಾನವಾಗಿರುವ ಸ್ವಾಭಾವಿಕವಾದ,[1] ಶಾಸ್ತ್ರಕ್ಕೆ ಹೊರಚ್ಚಾಗಿರುವ ಕುತಾರ್ಕಿಕರು[2] ಕಲ್ಪಿಸಿಕೊಂಡಿರುವ ನಾನಾತ್ವದರ್ಶನವು "ಆದರೆ ಆ ಎರಡನೆಯದಿರುವದಿಲ್ಲ" (ಬೃ. ೪-೩-೨೩), "ಎರಡನೆಯದರಿಂದಲೇ ಹೆದರಿಕೆಯುಂಟಾಗುತ್ತದೆಯಷ್ಟೆ" (ಬೃ. ೧-೪-೨) "ಸ್ವಲ್ಪ ವಾದರೂ ಭೇದವನ್ನು ಮಾಡಿಕೊಂಡರೆ, ಆಗ ಅವನಿಗೆ ಭಯವುಂಟಾಗುತ್ತದೆ" (ತೈ. ೨-೭), "ಇದೆಲ್ಲವೂ ಈ ಆತ್ಮನೆಂಬುದೇ" (ಬೃ. ೨-೪-೬), "ಯಾವನು ಇಲ್ಲಿ ಭೇದ ವಿರುವಂತೆ ಕಾಣುವನೋ ಅವನು ಸಾವಿನಮೇಲೆ ಸಾವನ್ನು ಹೊಂದುವನು" (ಕ. ೨-೧-೧೦) ಇದೇ ಮುಂತಾದ ವಾಕ್ಯಗಳಿಂದಲೂ ಬೇರೆಯ ಬ್ರಹ್ಮಜ್ಞಾನಿಗಳಿಂದಲೂ[3] ನಿಂದಿತ ವಾಗಿರುತ್ತದೆಯಲ್ಲ, ಅದೂ[4] ಹೀಗೆಯೇ[5] ಸಮಂಜಸವಾಗುತ್ತದೆ, ನೆಟ್ಟಗೆ ಮನವರಿಕೆ ಯಾಗುತ್ತದೆ, ಯುಕ್ತವಾಗುತ್ತದೆ ಎಂದರ್ಥ. ಆದರೆ, ತಾರ್ಕಿಕರು ಕಲ್ಪಿಸಿಕೊಂಡಿರುವ ಕುದೃಷ್ಟಿಗಳಿರುವವಲ್ಲ[6], ಅವು ನೆಟ್ಟಗಿರುವದಿಲ್ಲ[7], ಪರೀಕ್ಷಿಸಿ ನೋಡಿದರೆ ಹೊಂದು ಗಡೆಯಾಗುವದಿಲ್ಲ ಎಂದು ಅಭಿಪ್ರಾಯ.

1. ಅಜ್ಞಾನಿಗಳಿಲ್ಲರಿಗೂ ಸ್ವಭಾವದಿಂದಲೇ ತಿಳಿದಿರುವ ಎಂದರ್ಥ. ಶಾಸ್ತ್ರವು ಅಜ್ಞರಿಗೆ ಗೊತ್ತಿರುವದನ್ನೇ ಹೇಳಿದರೆ ಅನುವಾದವಾಗುವದೇ ಹೊರತು ಪ್ರಮಾಣವೆನಿಸಲಾರದು.

2. ಶಾಸ್ತ್ರವೆಂದರೆ ವೇದವು. ಶಾಸ್ತ್ರವನ್ನು ಒಪ್ಪದ ಬೌದ್ಧಾದಿಗಳೂ, ಒಪ್ಪಿದರೂ ತರ್ಕವನ್ನು ಮುಖ್ಯವಾಗಿಟ್ಟುಕೊಂಡು ಶಾಸ್ತ್ರವನ್ನು ಎರಡನೆಯದಾಗಿ ಮಾಡಿಕೊಂಡಿರುವ ಸಾಂಖ್ಯಾದಿಗಳೂ ಕುತಾರ್ಕಿಕರು.

3. ವ್ಯಾಸಾದಿಗಳು 'ವಾಸುದೇವನೇ ಎಲ್ಲವೂ' (ಗೀ), 'ಇದೆಲ್ಲವೂ ನಾನೂ ವಾಸುದೇವನು' (ವಿ. ಪು)-ಮುಂತಾದ ವಾಕ್ಯಗಳಿಂದ ಆತ್ಮೈಕತ್ವದರ್ಶನವನ್ನು ಹೊಗಳಿರುತ್ತಾರೆ ; " ದ್ವೈತಿಗಳು ನಿಜ ವನ್ನರಿತವರಲ್ಲ" (ವಿ. ಧ), "ಆತ್ಮನಿಗೂ ಬ್ರಹ್ಮಕ್ಕೂ ಇಲ್ಲದ ಭೇದವನ್ನು ಯಾರುತಾನೇ ಮಾಡಿ ಯಾರು ?"( ವಿ. ಪು)- ಮುಂತಾದ ವಾಕ್ಯಗಳಿಂದ ದ್ವೈತದರ್ಶನವನ್ನು ನಿಂದಿಸಿರುತ್ತಾರೆ.

4. 'ಯಚ್ಚೈತತ್' ಎಂಬ ಮಾತನ್ನು ಭಾಷ್ಯದಲ್ಲಿ ಸಂಬಂಧಕ್ಕಾಗಿ ಮತ್ತೆ ಹಾಕಿಕೊಂಡಿದೆ.

5. ಆತ್ಮೈಕತ್ವಪಕ್ಷದಲ್ಲಿಯೇ.

6. ವೇದಬಾಹ್ಯರಾದ ತಾರ್ಕಿಕರ ಕುದೃಷ್ಟಿಗಳಿಂದ ಶ್ರೇಯಸ್ಸಾಗದು-ಎಂಬ (ಮನು.೧೨-೯೬) ವಚನದ ಸೂಚನೆ.

7. ಅನುಭವಾನುಸಾರಿಯಾದ ತರ್ಕವೇ ನೇರಾಗಿರುವದು ; ಹಾಗಿಲ್ಲದ್ದು ಕೊಂಕು.

# ಶ್ರುತ್ಯುಕ್ತಜೀವಬ್ರಹ್ಮಭೇದಕ್ಕೆ ಗತಿ

(ಭಾಷ್ಯ)

೧೫೨. ನನು ಶ್ರುತ್ಯಾಪಿ ಜೀವಪರಮಾತ್ಮನೋಃ ಪೃಥಕ್ತ್ವಂ[1] ಪ್ರಾಗುತ್ಪತ್ತೇಃ ಉತ್ಪತ್ಯರ್ಥೋಪನಿಷದ್ವಾಕ್ಯೇಭ್ಯಃ ಪೂರ್ವಂ ಪ್ರಕೀರ್ತಿತಂ ಕರ್ಮಕಾಣ್ಡೇ ಅನೇಕಶಃ ಕಾಮಭೇದತಃ "ಇದಂಕಾಮಃ, ಅದಃಕಾಮಃ" ಇತಿ । ಪರಶ್ಚ "ಸ ದಾಧಾರ, ಪೃಥಿವೀಂ ದ್ಯಾಮ್ ...." (ಋ. ೧೦-೧೨೧-೧) ಇತ್ಯಾದಿಮನ್ತ್ರವರ್ಣ್ಯಃ । ತತ್ರ ಕಥಂ ಕರ್ಮ ಜ್ಞಾನಕಾಣ್ಡವಾಕ್ಯವಿರೋಧೇ ಜ್ಞಾನಕಾಣ್ಡವಾಕ್ಯಾರ್ಥಸ್ಯೈವ ಏಕತ್ವಸ್ಯ ಸಾಮಞ್ಜಸ್ಯಮ್ ಅವಧಾರ್ಯತೇ ಇತಿ ? ಅತ್ರೋಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಶ್ರುತಿಯಲ್ಲಿಯೂ ಜೀವಪರಮಾತ್ಮರು ಬೇರೆಬೇರೆ ಎಂದು ಉತ್ಪತ್ತಿಗಿಂತ ಮೊದಲು, ಎಂದರೆ ಉತ್ಪತ್ತಿಯನ್ನು (ಹೇಳುವ)ದಕ್ಕಾಗಿ (ಬಂದಿರುವ) ಉಪನಿಷದ್ವಾಕ್ಯಗಳಿಗಿಂತ ಮೊದಲು ಕರ್ಮಕಾಂಡದಲ್ಲಿ "ಇದನ್ನು ಬಯಸುವವನು (ಇಂಥ ಯಾಗವನ್ನು ಮಾಡಬೇಕು[2] ಎಂದು ಕಾಮಗಳು ಬೇರೆಬೇರೆಯಾಗಿರುವ (ದೆಂಬುದನ್ನವಲಂಬಿಸಿ) ಹೇಳಿದೆಯಲ್ಲ ! "ಆತ್ಮನು ಪೃಥಿವಿಯನ್ನೂ ಮತ್ತು (ಈ) ಅಂತರಿಕ್ಷವನ್ನೂ ಓಡಿದಿಟ್ಟುಕೊಂಡಿರುವನು" (ಋ. ೧೦-೧೨೧-೧) ಎಂದು ಮುಂತಾಗಿರುವ ಮಂತ್ರವರ್ಣಗಳಿಂದ ಪರ(ಮಾತ್ಮ)ನನ್ನೂ ಹೇಳಿದೆಯಲ್ಲ[3] ! ಹೀಗಿರುವಲ್ಲಿ ಕರ್ಮಕಾಂಡಜ್ಞಾನಕಾಂಡಗಳ ವಾಕ್ಯಗಳಿಗೆ (ಒಂದಕ್ಕೊಂದಕ್ಕೆ) ವಿರೋಧವಾದರೆ ಜ್ಞಾನಕಾಂಡದ ವಾಕ್ಯಗಳ ಅರ್ಥವಾದ ಏಕತ್ವವೊಂದೇ ಸಮಂಜಸವೆಂದು ನಿರ್ಧರಿಸುವದು ಹೇಗೆ (ಸರಿ) ?

(ಪರಿಹಾರ) :- ಇದಕ್ಕೆ (ಉತ್ತರವನ್ನು) ಹೇಳುತ್ತೇವೆ.

**ಜೀವಾತ್ಮನೋಃ ಪೃಥಕ್ತ್ವಂ ಯತ್ ಪ್ರಾಗುತ್ಪತ್ತೇಃ ಪ್ರಕೀರ್ತಿತಮ್ ।**
**ಭವಿಷ್ಯದ್ಭೃತ್ಯಾ ಗೌಣಂ ತನ್ಮುಖ್ಯತ್ವಂ ಹಿ ನ ಯುಜ್ಯತೇ ॥೧೪॥**

1. ಇಲ್ಲಿ 'ಯತ್ ಪೃಥಕ್ತ್ವಂ' ಎಂಬ ಪಾಠದಲ್ಲಿ ಯತ್ ಬೇಕಿಲ್ಲ.

2. ಉದಾಹರಣೆಗೆ ತೈ. ಸಂ. ೨-೧ನ್ನು ನೋಡಿರಿ. ಅಲ್ಲಿ ಭೂತಿಕಾಮನು, ಪ್ರಜಾಕಾಮನು, ಪಶುಕಾಮನು-ಮುಂತಾದ ವಿಶೇಷಗಳನ್ನು ಕಾಣಬಹುದು. ಇದರಿಂದ ಜೀವರು ಬೇರೆಬೇರೆ ಎಂದಂತಾಯಿತೆಂದು ಪೂರ್ವಪಕ್ಷಿಯ ಭಾವ 3. ಇದರಿಂದ ಜೀವರಿಗಿಂತ ವಿಲಕ್ಷಣನಾದ ಪರಮಾತ್ಮನನ್ನು ಹೇಳಿದಂತೆ ಆಯಿತು ಎಂದು ಭಾವ.

೧೪. ಜೀವಾತ್ಮರುಗಳಿಗೆ ಪೃಥಕ್ತ್ವವನ್ನು ಉತ್ಪತ್ತಿಗಿಂತ ಮೊದಲು ಹೇಳಿದೆಯಲ್ಲ, ಅದು ಭವಿಷ್ಯದ್ವೃತ್ತಿಯಿಂದ ಗೌಣವು ; ಏಕೆಂದರೆ ಮುಖ್ಯತ್ವವು ಯುಕ್ತವಾಗುವದಿಲ್ಲ.

(ಭಾಷ್ಯ)

೧೫೩. "ಯತೋ ವಾ ಇಮಾನಿ ಭೂತಾನಿ ಜಾಯನ್ತೇ" (ತೈ. ೩-೧), "ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಙ್ಗಾಃ" (ಬೃ. ೨-೧-೨೦), "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ" (ತೈ. ೨-೧), "ತದೈಕ್ಷತ....ತತ್ತೇಜೋಽಸೃಜತ" (ಛಾಂ. ೬-೨-೩)-ಇತ್ಯಾದ್ಯುತ್ಪತ್ತ್ಯರ್ಥೋಪನಿಷದ್ವಾಕ್ಯೇಭ್ಯಃ ಪ್ರಾಕ್ ಪೃಥಕ್ತ್ವಂ ಕರ್ಮಕಾಣ್ಡೇ ಪ್ರಕೀರ್ತಿತಂ ಯತ್, ತತ್ ನ ಪರಮಾರ್ಥತಃ೧, ಕಿಂ ತರ್ಹಿ ? ಗೌಣಮ್, ಮಹಾಕಾಶ ಘಟಾಕಾಶಾದಿಭೇದವತ್ । ಯಥಾ 'ಓದನಂ ಪಚತಿ' ಇತಿ ಭವಿಷ್ಯದ್ವೃತ್ತ್ಯಾ ತದ್ವತ್ । ನ ಹಿ ಭೇದವಾಕ್ಯಾನಾಂ ಕದಾಚಿದಪಿ ಮುಖ್ಯಭೇದಾರ್ಥಕತ್ವಮ್ ಉಪಪದ್ಯತೇ । ಸ್ವಾಭಾವಿಕಾವಿದ್ಯಾವತ್ಪ್ರಾಣಭೇದದೃಷ್ಟ್ಯನುವಾದಿತ್ವಾತ್ ಆತ್ಮಭೇದವಾಕ್ಯಾನಾಮ್ । ಇಹ ಚ ಉಪನಿಷತ್ಸು ಉತ್ಪತ್ತಿಪ್ರಲಯಾದಿವಾಕ್ಯೈಃ ಜೀವಪರಮಾತ್ಮನೋಃ ಏಕತ್ವಮೇವ ಪ್ರತಿಪಿಪಾದಯಿಷಿತಮ್ "ತತ್ ತ್ವಮಸಿ" (ಛಾಂ. ೬-೮-೭), "ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ" (ಬೃ. ೧-೪-೧೦) ಇತ್ಯಾದಿಭ್ಯಃ[2] । ಅತಃ ಉಪನಿಷತ್ಸು ಏಕತ್ವಂ ಶ್ರುತ್ಯಾ ಪ್ರತಿಪಿಪಾದಯಿಷಿತಂ ಭವಿಷ್ಯತಿ ಇತಿ ಭಾವಿನೀಮ್ ಏಕವೃತ್ತಿಮ್[3] ಆಶ್ರಿತ್ಯ ಲೋಕಭೇದದೃಷ್ಟ್ಯನುವಾದಃ[4] ಗೌಣ ಏವ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

"ಯಾವದರಿಂದಲೇ ಈ ಭೂತಗಳು ಹುಟ್ಟುತ್ತವೆಯೋ" (ತೈ. ೩-೧). "ಬೆಂಕಿಯಿಂದ ಸಣ್ಣಸಣ್ಣ ಕಿಡಿಗಳು ಹೇಗೆ (ಹೊರಟುಬರುವವೋ)" (ಬೃ. ೨-೧-೨೦) "ಆ ಈ ಆತ್ಮನಿಂದಲೇ ಆಕಾಶವು ಉಂಟಾಯಿತು" (ತೈ. ೨-೧), "ಅದು ನೋಡಿತು....ಅದು ತೇಜಸ್ಸನ್ನು ಸೃಷ್ಟಿಸಿತು" (ಛಾಂ. ೬-೨-೩). ಮುಂತಾದ ಉತ್ಪತ್ತಿಯನ್ನು (ಹೇಳುವ)ದಕ್ಕಾಗಿ (ಬಂದಿರುವ) ಉಪನಿಷದ್ವಾಕ್ಯಗಳಿಗಿಂತ

1. 'ಪರಮಾರ್ಥಮ್' ಆ।। ಕಾ।। ವಾ
2. 'ಇತ್ಯಾದಿಭಿಃ' ಎಂಬ ಮುದ್ರಿತಪಾಠವನ್ನು ಹೀಗೆ ತಿದ್ದಿಕೊಂಡಿದೆ.
3. 'ಭಾವಿನೀಮಿವ ವೃತ್ತಿಮ್' ವಾ।।
4. 'ಲೋಕೇ ಭೇದದೃಷ್ಟ್ಯನುವಾದಃ' ಎಂಬ ಮುದ್ರಿತಪಾಠವನ್ನು ಹೀಗೆ ತಿದ್ದಿಕೊಂಡಿದೆ.

ಮೊದಲು[1] (ಜೀವಾತ್ಮರು) ಬೇರೆಬೇರೆ ಎಂದು ಕರ್ಮಕಾಂಡದಲ್ಲಿ ಹೇಳಿರುತ್ತದೆಯಲ್ಲ, ಅದು ಪರಮಾರ್ಥವಾಗಿ (ಹೇಳಿದ್ದಲ್ಲ) ; ಮತ್ತೇನೆಂದರೆ ಮಹಾಕಾಶಕ್ಕೂ ಘಟಾಕಾಶವೇ ಮುಂತಾದವುಗಳಿಗೂ ಭೇದ(ವನ್ನು ಹೇಳುವದು ಹೇಗೆ ಗೌಣವೋ) ಹಾಗೆ ಗೌಣವು. 'ಅನ್ನವನ್ನು ಅಡುತ್ತಾನೆ' ಎಂದು ಹೇಗೆ ಭವಿಷ್ಯದ್ವೃತ್ತಿಯಿಂದ (ಹೇಳುವರೋ) ಹಾಗೆ (ಹೇಳಿದ್ದು). ಭೇದವಾಕ್ಯಗಳಿಗೆ ಮುಖ್ಯಭೇದವೇ ಅರ್ಥ ಎಂಬುದು ಎಂದಿಗೂ ಹೊಂದುವದೇ ಇಲ್ಲ ; ಏಕೆಂದರೆ ಸ್ವಾಭಾವಿಕವಾದ ಅವಿದ್ಯೆಯುಳ್ಳ ಜೀವರುಗಳ ಭೇದದೃಷ್ಟಿಯನ್ನೇ ಆತ್ಮಭೇದವಾಕ್ಯಗಳು ಅನುವಾದಮಾಡುತ್ತಿರುತ್ತವೆ[2]. ಇಲ್ಲಿ ಉಪನಿಷತ್ತುಗಳಲ್ಲಿಯೋ ಎಂದರೆ ಉತ್ಪತ್ತಿ, ಪ್ರಲಯ-ಮುಂತಾದ ವಾಕ್ಯಗಳಿಂದ ಜೀವಪರಮಾತ್ಮರುಗಳು ಒಂದೆಂಬುದನ್ನೇ (ತಾತ್ಪರ್ಯದಿಂದ) ತಿಳಿಸಿಕೊಡುವದಕ್ಕೆ ಹೊರಟಿರುತ್ತದೆ[3]. ''ಅದೇ ನೀನಾಗಿರುವೆ'' (ಛಾಂ. ೬-೮-೭), ''ಈ (ದೇವತೆ) ಬೇರೆ, ನಾನು ಬೇರೆ ಎಂದು (ಯಾವನು ಉಪಾಸನೆಮಾಡುವನೋ) ಅವನು ಅರಿಯನು'' (ಬೃ. ೧-೪-೧೦) ಮುಂತಾದ (ವಚನಗಳು ಇದಕ್ಕೆ ಆಧಾರವು)[4]. ಆದ್ದರಿಂದ ಮುಂದೆ ಉಪನಿಷತ್ತುಗಳಲ್ಲಿ ಏಕತ್ವವನ್ನು ಶ್ರುತಿಯು (ತಾತ್ಪರ್ಯದಿಂದ) ತಿಳಿಸುವದು ಎಂದು ಮುಂದೆ ಆಗುವ ಏಕತ್ವವೃತ್ತಿಯನ್ನವಲಂಬಿಸಿ (ಅಜ್ಞ) ಜನರ ಭೇದದೃಷ್ಟಿಯನ್ನು ಅನುವಾದಮಾಡಿರುವದು ಗೌಣವೇ ಎಂದು ಅಭಿಪ್ರಾಯ.

(ಭಾಷ್ಯ)

೧೫೪. ಅಥವಾ ''ತದೈಕ್ಷತ....ತತ್ತೇಜೋಽಸೃಜತ'' (ಛಾಂ. ೬-೨-೩) ಇತ್ಯಾದ್ಯುತ್ಪತ್ತೇಃ ಪ್ರಾಕ್ ''ಏಕಮೇವಾದ್ವಿತೀಯಮ್'' (ಛಾಂ. ೬-೨-೨) ಇತಿ ಏಕತ್ವಂ ಪ್ರಕೀರ್ತಿತಮ್ । ತದೇವ ಚ ''ತತ್ಸತ್ಯಂ ಸ ಆತ್ಮಾ ತತ್ತ್ವಮಸಿ'' (ಛಾಂ. ೬-೮-೭) ಇತಿ ಏಕತ್ವಂ ಭವಿಷ್ಯತಿ ಇತಿ ತಾಂ ಭವಿಷ್ಯದ್ವೃತ್ತಿಮ್ ಅಪೇಕ್ಷ್ಯ ಯತ್ ಜೀವಾತ್ಮನೋಃ

1. ಉಪನಿಷತ್ತುಗಳಲ್ಲಿರುವ ಉತ್ಪತ್ತಿವಾಕ್ಯಗಳು ಐಕ್ಯಕ್ಕಾಗಿಯೇ ಬಂದವುಗಳಾದ್ದರಿಂದ ಎಂದರ್ಥ. ಉತ್ಪತ್ತಿಗಿಂತ ಮೊದಲು ಎಂಬುದು ವಾಕ್ಯದ ಅರ್ಥವಲ್ಲ ; ಏಕೆಂದರೆ ಅಜಾತಿಯನ್ನು ಹೇಳುವದಕ್ಕೆಂದೇ ಈ ಪ್ರಕರಣವು ಬಂದಿದೆ.

2. ಆ ವಾಕ್ಯಗಳಿಗೆ ಕರ್ಮಾದಿಗಳನ್ನು ವಿಧಿಸುವದರಲ್ಲಿಯೇ ತಾತ್ಪರ್ಯವಿದೆ ; ಅವಿಚಾರ ಸ್ವಭಾವದ ದೆಸೆಯಲ್ಲಿರುವ ಅವಿದ್ಯೆಯಿಂದ ಕಲ್ಪಿತವಾದ ಭೇದವನ್ನೇ ಅನುವಾದಮಾಡಿಕೊಂಡು ಕರ್ಮಾದಿಗಳನ್ನು ವಿಧಿಸಿದೆ.

3. ಉತ್ಪತ್ತ್ಯಾದಿವಾಕ್ಯಗಳು ಐಕ್ಯಪರವೆಂಬುದಕ್ಕೆ ಸೂ. ಭಾ. ೪-೩-೧೪ ನೋಡಿ.

4. ಉತ್ಪತ್ತ್ಯಾದಿವಾಕ್ಯಗಳು ಐಕ್ಯವಾಕ್ಯಗಳಲ್ಲಿ ಕೊನೆಗೊಂಡಿರುವದೇ ಆಧಾರವು.

ಪೃಥಕ್ತ್ವಂ[1] ಯತ್ರ ಕ್ವಚಿತ್ ವಾಕ್ಯೇ ಗಮ್ಯಮಾನಂ ತತ್ ಗೌಣಮ್ । ಯಥಾ ಓದನಂ ಪಚತಿ ಇತಿ ತದ್ವತ್ ॥

(ಭಾಷ್ಯಾರ್ಥ)

ಅಥವಾ (ಈ ಶ್ಲೋಕಕ್ಕೆ ಹೀಗೂ ಅರ್ಥವನ್ನು ಮಾಡಬಹುದು) : "ಅದು (ಆಲೋಚಿಸಿ) ನೋಡಿತು.... ಅದು ತೇಜಸ್ಸನ್ನು ಸೃಷ್ಟಿಸಿತು" (ಛಾಂ. ೬-೨-೩) ಮುಂತಾದ ಉತ್ಪತ್ತಿ(ಯನ್ನು ಹೇಳುವ) ಮುಂಚೆಯೇ "ಎರಡನೆಯದಿಲ್ಲದ ಒಂದೇ" (ಛಾಂ. ೬-೨-೨) ಎಂದು ಏಕತ್ವವನ್ನು ಹೇಳಿರುತ್ತದೆ. ಅದೇ ಏಕತ್ವವನ್ನು "ಅದು ಸತ್ಯವು, ಅದೇ ಆತ್ಮನು, ನೀನು ಅದಾಗಿರುವೆ" (ಛಾಂ. ೬-೮-೭) ಎಂದು (ಹೇಳ) ಲಾಗುವದು ಎಂಬ (ಕಾರಣದಿಂದ) ಆ ಭವಿಷ್ಯದ್ವೃತ್ತಿಯ ಅಪೇಕ್ಷೆಯಿಂದ ಜೀವಾತ್ಮರುಗಳಿಗೆ ಭೇದವನ್ನು ಯಾವದಾದರೊಂದು ವಾಕ್ಯದಲ್ಲಿ (ಹೇಳಿರುವಂತೆ) ತೋರುತ್ತದೆಯಲ್ಲ, ಅದು ಗೌಣವು. 'ಅನ್ನವನ್ನು ಅಡುತ್ತಾನೆ' ಎಂಬ ಪ್ರಯೋಗದಂತೆಯೇ[2] ಇದು.

## ಸೃಷ್ಟಿವಾಕ್ಯಗಳ ತಾತ್ಪರ್ಯ

(ಭಾಷ್ಯ)

೧೫೫. ನನು ಯದಿ[3] ಉತ್ಪತ್ತೇಃ ಪ್ರಾಕ್ ಅಜಂ ಸರ್ವಮ್ ಏಕಮೇವ ಅದ್ವಿತೀಯಮ್ ತಥಾಪಿ ಉತ್ಪತ್ತೇರೂರ್ಧ್ವಂ ಜಾತಮ್ ಇದಂ ಸರ್ವಮ್ । ಜೀವಾಶ್ಚ ಭಿನ್ನಾಃ ಇತಿ । ಮೈವಮ್ । ಅನ್ಯಾರ್ಥತ್ವಾತ್ ಉತ್ಪತ್ತಿಶ್ರುತೀನಾಮ್, ಪೂರ್ವಮಪಿ ಪರಿಹೃತ ಏವ ಅಯಂ ದೋಷಃ "ಸ್ವಪ್ನವತ್ ಆತ್ಮಮಾಯಾವಿಸರ್ಜಿತಾಃ ಸಙ್ಘಾತಾಃ ಘಟಾಕಾಶೋತ್ಪತ್ತಿಭೇದಾದಿವತ್ ಜೀವಾನಾಮ್ ಉತ್ಪತ್ತಿಭೇದಾದಿಃ" ಇತಿ ಇತ ಏವ ಉತ್ಪತ್ತಿಭೇದಾದಿಶ್ರುತಿಭ್ಯಃ ಆಕೃಷ್ಯ । ಇಹ ಪುನಃ ಉತ್ಪತ್ತಿಶ್ರುತೀನಾಮ್ ಇದಂ ಪರ್ಯವಪ್ರತಿಪಿಪಾದಯಿಷಯಾ ಉಪನ್ಯಾಸಃ ॥

---

1. ಉತ್ಪತ್ತಿ (ವಾಕ್ಯ) ಕ್ಕಿಂತ ಮೊದಲು (ಅದ್ವೈತವನ್ನು ) ಹೇಳಿದೆಯಲ್ಲ, ಅದೇ ಮುಂದೆ (ಉಕ್ತ)ವಾಗುವದೆಂಬ ಕಾರಣದಿಂದ, ಜೀವಾತ್ಮರ ಪೃಥಕ್ತ್ವವು ಗೌಣವೇ, ಏಕೆಂದರೆ ಮುಖ್ಯತ್ವವು ಹೊಂದುವದಿಲ್ಲ - ಎಂದು ಶ್ಲೋಕಕ್ಕೆ ಈ ವ್ಯಾಖ್ಯಾನಕ್ಕೆ ತಕ್ಕಂತೆ ಅರ್ಥವನ್ನು ಮಾಡಿಕೋಳ್ಳಬೇಕು.

2. ಈ ಪ್ರಯೋಗದಲ್ಲಿ ಅನ್ನವೆಂಬ ಶಬ್ದವನ್ನು ಹೇಗೆ ಗೌಣಾರ್ಥದಲ್ಲಿ ಉಪಯೋಗಿಸಿದೆಯೋ ಹಾಗೆ ಶ್ರುತಿಯಲ್ಲಿ ಜೀವಪರಮಾತ್ಮರ ಭೇದವನ್ನು ಹೇಳುವಂತೆ ಕಾಣುವ ಶಬ್ದಗಳಿಗೆಲ್ಲ ಗೌಣಾರ್ಥವನ್ನು ಕಲ್ಪಿಸಬೇಕು, ಏಕೆಂದರೆ ಉಪಕ್ರಮೋಪಸಂಹಾರಗಳಿಂದ ಏಕತ್ವವು ಮುಖ್ಯವೆಂದು

3. ಯದ್ಯಪಿ ಎಂಬ ಅರ್ಥದಲ್ಲಿಯೇ ಇದನ್ನು ಉಪಯೋಗಿಸಿರುತ್ತದೆ.

(ಭಾಷ್ಯಾರ್ಥ)

(ಆಕ್ಷೇಪ) : - ಸೃಷ್ಟಿಯಾಗುವ ಮೊದಲು ಎಲ್ಲವೂ ಜನ್ಮರಹಿತವಾದ, ತನಗೆರಡನೆಯದಿಲ್ಲದ ಒಂದೇ (ತತ್ತ್ವವಾಗಿರುವ)ದಾದರೂ ಸೃಷ್ಟಿಯಾದ ಬಳಿಕ ಇದೆಲ್ಲವೂ ಹುಟ್ಟಿರುತ್ತದೆ, ಜೀವರೂ ಬೇರೆಬೇರೆ (ಯಾಗಿರುತ್ತಾರಲ್ಲ) !

(ಸಮಾಧಾನ) :- ಹಾಗಲ್ಲ. ಏಕೆಂದರೆ ಸೃಷ್ಟಿಶ್ರುತಿಗಳಿಗೆ ಬೇರೆಯ ಪ್ರಯೋಜನವುಂಟು.

ಕನಸಿನ (ಸಂಘಾತ)ಗಳಂತೆ ಸಂಘಾತಗಳು ಆತ್ಮಮಾಯೆಯಿಂದ ಸೃಷ್ಟವಾಗಿರುತ್ತವೆ ; ಜೀವರುಗಳ ಉತ್ಪತ್ತಿ, ಭೇದ-ಮುಂತಾದದ್ದು ಘಟಾಕಾಶಗಳ ಉತ್ಪತ್ತಿ, ಭೇದ-ಮುಂತಾದವುಗಳಂತೆ (ಗೌಣವು) ಎಂದು ಈ ಉತ್ಪತ್ತಿ, ಭೇದ-ಮುಂತಾದ ಶ್ರುತಿಗಳಿಂದಲೇ (ವಿಷಯವನ್ನು) ತೆಗೆದುಕೊಂಡು ಹಿಂದೆಯೂ (ಕಾ. ೩-೯, ೧೦) ಈ ದೋಷಕ್ಕೆ ಪರಿಹಾರವನ್ನು ಹೇಳಿರುತ್ತದೆ. ಆದರೆ ಈಗ ಉತ್ಪತ್ತಿಶ್ರುತಿಗಳಿಗೆ ತಾತ್ಪರ್ಯವನ್ನು ತಿಳಿಸುವದಕ್ಕಾಗಿ[1] (ಹೀಗೆಂದು) ಹೇಳುತ್ತಾರೆ.

**ಮೃಲ್ಲೋಹವಿಸ್ಫುಲಿಙ್ಗಾದ್ಯೈಃ ಸೃಷ್ಟಿರ್ಯಾ ಚೋದಿತಾನ್ಯಥಾ ।**
**ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಂಚನ ॥೧೫॥**

೧೫. ಮಣ್ಣು, ಕಬ್ಬಿಣ, ಕಿಡಿ-ಮುಂತಾದ (ದೃಷ್ಟಾಂತ)ಗಳಿಂದ ಬೇರೆ (ಬೇರೆ)ಯಾಗಿ ಸೃಷ್ಟಿಯನ್ನು ಹೇಳಿದೆಯಲ್ಲ, ಅದು (ವಿಷಯಕ್ಕೆ) ಇಳಿಸುವದಕ್ಕೆ ಉಪಾಯವು. ಹೇಗೂ ಭೇದವಿರುವದಿಲ್ಲ.

(ಭಾಷ್ಯ)

೧೫ಒ. ಮೃಲ್ಲೋಹವಿಸ್ಫುಲಿಙ್ಗಾದಿದೃಷ್ಟಾನ್ತೋಪನ್ಯಾಸೈಃ ಸೃಷ್ಟಿಃ ಯಾ ಚ ಉದಿತಾ ಪ್ರಕಾಶಿತಾ[2] ಅನ್ಯಥಾ ಅನ್ಯಥಾ ಚ ಸ ಸರ್ವಃ ಸೃಷ್ಟಿಪ್ರಕಾರಃ ಜೀವ ಪರಮಾತ್ಮೈಕತ್ವಬುದ್ಧ್ಯವತಾರಾಯ ಉಪಾಯಃ ಅಸ್ಮಾಕಮ್ । ಯಥಾ ಪ್ರಾಣ ಸಂವಾದೇ ವಾಗಾದ್ಯಾಸುರಪಾಪ್ಮವೇಧಾದ್ಯಾಖ್ಯಾಯಿಕಾ ಕಲ್ಪಿತಾ ಪ್ರಾಣವೈಶಿಷ್ಟ್ಯ ಬೋಧಾವತಾರಾಯ ॥

1. ಶ್ರುತಿಯು ಗೌಣವಾದ ಉತ್ಪತ್ತಿಯನ್ನಾದರೂ ಹೇಳುವದೇಕೆ ?-ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವದಕ್ಕಾಗಿ.

2. ಇಲ್ಲಿ " ಕಲ್ಪಿತಾ" ಎಂದು ವಾ॥ ಕಾ॥

(ಭಾಷ್ಯಾರ್ಥ)

ಮಣ್ಣು, ಕಬ್ಬಿಣ, ಕಿಡಿ-ಮುಂತಾದ ದೃಷ್ಟಾಂತಗಳನ್ನು ಕೊಟ್ಟು, ಸೃಷ್ಟಿಯನ್ನು ಬೇರೆಬೇರೆಯಾಗಿ ಹೇಳಿದೆಯಲ್ಲ, ತಿಳಿಸಿಕೊಟ್ಟಿದೆಯಲ್ಲ, ಆ ಸೃಷ್ಟಿಪ್ರಕಾರವೆಲ್ಲ ಜೀವಪರಮಾತ್ಮರ ಐಕ್ಯದ ಬುದ್ಧಿಗೆ ಇಳಿಸುವದಕ್ಕೆ ಉಪಾಯವೆಂದು ನಮ್ಮ (ಮತವು). ಹೇಗೆ ಪ್ರಾಣಸಂವಾದದಲ್ಲಿ[1] ವಾಕ್ಕು ಮುಂತಾದವುಗಳಿಗೆ ಆಸುರಪಾಪದ ಹೊಡೆತ ವಾಯಿತು ಎಂದು ಮುಂತಾಗಿ ಕಲ್ಪಿಸಿರುವ ಕಥೆ(ಯೆಲ್ಲ) ಪ್ರಾಣನ ಹೆಚ್ಚುಗಾರಿಕೆಯ ತಿಳಿವಳಿಕೆಗೆ ಇಳಿಸುವದಕ್ಕೆ (ಉಪಾಯವೋ ಹಾಗೆ).

(ಭಾಷ್ಯ)

೧೫೭. ತದಪಿ ಅಸಿದ್ಧಮ್ ಇತಿ ಚೇತ್ । ನ । ಶಾಖಾಭೇದೇಷು ಅನ್ಯಥಾ ಅನ್ಯಥಾ ಚ ಪ್ರಾಣಾದಿಸಂವಾದಶ್ರವಣಾತ್ । ಯದಿ ಹಿ ಸಂವಾದಃ ಪರಮಾರ್ಥ ಏವ ಅಭೂತ್ ಏಕರೂಪ ಏವ ಸಂವಾದಃ ಸರ್ವಶಾಖಾಸು ಅಶ್ರೋಷ್ಯತ[2], ವಿರುದ್ಧಾನೇಕಪ್ರಕಾರೇಣ ನಾಶ್ರೋಷ್ಯತ । ಶ್ರೂಯತೇ ತು । ತಸ್ಮಾತ್ ನ ತಾದರ್ಥ್ಯಂ ಸಂವಾದಶ್ರುತೀನಾಮ್ । ತಥಾ ಉತ್ಪತ್ತಿವಾಕ್ಯಾನಿ ಪ್ರತ್ಯೇತವ್ಯಾನಿ ಕಲ್ಪಸರ್ಗಭೇದಾತ್ ಸಂವಾದಶ್ರುತೀನಾಮ್ ಉತ್ಪತ್ತಿಶ್ರುತೀನಾಂ ಚ ಪ್ರತಿಸರ್ಗಮ್ ಅನ್ಯಥಾತ್ವಮ್ ಇತಿ ಚೇತ್ । ನ । ನಿಷ್ಪ್ರಯೋಜನತ್ವಾತ್ ಯಥೋಕ್ತಬುದ್ಧ್ಯವತಾರಪ್ರಯೋಜನವ್ಯತಿರೇಕೇಣ । ನ ಹಿ ಅನ್ಯಪ್ರಯೋಜನವತ್ತ್ವಂ ಸಂವಾದೋತ್ಪತ್ತಿಶ್ರುತೀನಾಂ ಶಕ್ಯಂ ಕಲ್ಪಯಿತುಮ್ । ತಥಾತ್ವಪ್ರತಿಪತ್ತ್ಯರ್ಥೇ ಧ್ಯಾನಾರ್ಥಮ್ ಇತಿ ಚೇತ್ । ನ । ಕಲಹೋತ್ಪತ್ತಿಪ್ರಲಯಾನಾಂ ಪ್ರತಿಪತ್ತೇರನಿಷ್ಪತ್ತ್ಯಾತ್ । ತಸ್ಮಾತ್ ಉತ್ಪತ್ತ್ಯಾದಿಶ್ರುತಯಃ ಆತ್ಮೈಕತ್ವಬುದ್ಧ್ಯವತಾರಾಯೈವ ನಾನ್ಯಾರ್ಥಾಃ ಕಲ್ಪಯಿತುಂ ಯುಕ್ತಾಃ । ಅತಃ ನಾಸ್ತಿ ಉತ್ಪತ್ತ್ಯಾದಿಕೃತಃ ಭೇದಃ ಕಥಂಚನ ॥

(ಭಾಷ್ಯಾರ್ಥ)

(ಆಕ್ಷೇಪ) :- ಅದೂ ಸಿದ್ಧವಾಗಿಲ್ಲವಲ್ಲ[3] !

(ಪರಿಹಾರ) :- ಹಾಗಲ್ಲ. ಏಕೆಂದರೆ ಬೇರೆಬೇರೆಯ ಶಾಖೆಗಳಲ್ಲಿ ಬೇರೆ

1. ಬೃ. ೧-೩ ನ್ನು ನೋಡಿ. ವಾಕ್ಕು ಒಳ್ಳೆಯದನ್ನಾಡುವದು ಮುಂತಾದ ಅಸಂಗವನ್ನು ಮಾಡಿದಾಗ ಕೆಟ್ಟಮಾತನ್ನಾಡುವದು ಮುಂತಾದ ಪಾಪವನ್ನು ಅಸುರರು ಇಂದ್ರಿಯಗಳಿಗೆ ಹತ್ತಿಸಿದರೆಂದು ಅಲ್ಲಿ ಹೇಳಿದೆ.

2. ಈ ವಾ॥ ಪಾಠವೇ ಸರಿ.

3. ಪ್ರಾಣಸಂವಾದವು ಪರಮಾರ್ಥವಲ್ಲವೆಂದೂ ಸಿದ್ಧವಾಗಿರುವದಿಲ್ಲವಲ್ಲ !

ಬೇರೆಯಾಗಿ[1] ಪ್ರಾಣಾದಿಸಂವಾದವು[2] ಶ್ರುತಿಯಲ್ಲಿರುತ್ತದೆ. ಸಂವಾದವು ನಿಜವಾಗಿಯೇ ನಡೆದಿದ್ದರೆ ಎಲ್ಲಾ ಶಾಖೆಗಳಲ್ಲಿಯೂ ಒಂದೇ ಬಗೆಯಾಗಿ ಶ್ರುತಿಯಲ್ಲಿರುತ್ತಿತ್ತು ; ವಿರುದ್ಧವಾದ ಅನೇಕ ಪ್ರಕಾರವಾಗಿ ಶ್ರುತಿಯು ಹೇಳುತ್ತಿರಲಿಲ್ಲ. ಆದರೆ (ವಿರುದ್ಧವಾಗಿ) ಹೇಳಿರುತ್ತದೆ. ಆದ್ದರಿಂದ ಸಂವಾದಶ್ರುತಿಗಳಿಗೆ ಆ (ಸಂವಾದವು) ನಿಜವೆಂಬರ್ಥದಲ್ಲಿ ತಾತ್ಪರ್ಯವಿಲ್ಲ. ಇದರಂತೆಯೇ ಸೃಷ್ಟಿವಾಕ್ಯಗಳನ್ನೂ ತಿಳಿಯಬೇಕು[3].

(ಪೂರ್ವಪಕ್ಷಿ) :- ಬೇರೆಬೇರೆಯ ಕಲ್ಪಗಳ ಸೃಷ್ಟಿಗಳು (ಬೇರೆಬೇರೆಯಾಗಿರು) ವದರಿಂದ ಸಂವಾದಶ್ರುತಿಗಳೂ ಸೃಷ್ಟಿಶ್ರುತಿಗಳೂ ಬೇರೆಬೇರೆಯಾಗಿವೆ (ಎನ್ನೋಣ).

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ (ನಾವು) ಹೇಳಿರುವ ಬುದ್ಧಿಗೆ ಇಳಿಸುವ ದೆಂಬ ಪ್ರಯೋಜನವನ್ನು ಬಿಟ್ಟರೆ (ಅವುಗಳಿಗೆ ಯಾವ ಬೇರೆಯ) ಪ್ರಯೋಜನವೂ ಇರುವದಿಲ್ಲ. ಸಂವಾದ (ಶ್ರುತಿಗಳಿಗೂ) ಉತ್ಪತ್ತಿಶ್ರುತಿಗಳಿಗೂ (ಮತ್ತೆ) ಯಾವ ಪ್ರಯೋಜನವಾದರೂ ಇದೆ ಎಂದು ಕಲ್ಪಿಸುವದಕ್ಕೆ ಆಗುವದೇ ಇಲ್ಲ.

(ಪೂರ್ವಪಕ್ಷಿ) :- ಆ (ಸ್ವರೂಪ)ವನ್ನು ಪಡೆದುಕೊಂಡು[4] ಧ್ಯಾನಮಾಡು ವದಕ್ಕಾಗಿ (ಅವುಗಳನ್ನು ಹೇಳಿದೆ ಎಂದರೊ) ?

(ಸಿದ್ಧಾಂತಿ) :- (ಅದು ಸರಿ)ಯಲ್ಲ. ಏಕೆಂದರೆ ಕಲಹ, ಉತ್ಪತ್ತಿ, ಪ್ರಲಯ-ಇವುಗಳನ್ನು ಪಡೆಯುವದು[5] ಯಾರಿಗೂ ಇಷ್ಟವಲ್ಲ. ಆದ್ದರಿಂದ ಸೃಷ್ಟಿ

1. ಉದಾಹರಣೆಗೆ ಛಾಂದೋಗ್ಯದಲ್ಲಿ (೫-೧) ಪ್ರಾಣಗಳು ತಮ್ಮಲ್ಲಿ ಯಾವನು ಶ್ರೇಷ್ಠನೆಂದು ತಿಳಿಯುವದಕ್ಕೆ ಪ್ರಜಾಪತಿಯ ಬಳಿಗೆ ಹೋದವೆಂದೂ ಆತನು ನಿಮ್ಮಲ್ಲಿ ಯಾವನು ಶರೀರವನ್ನು ಬಿಟ್ಟರೆ ಅದು ಅತ್ಯಂತ ಅಮಂಗಲವಾಗಿ ತೋರುವದೋ ಅವನು ಶ್ರೇಷ್ಠನು ಎಂದು ನಿರ್ಣಯಿಸಿದನೆಂದೂ ಇದೆ. ಐತರೇಯಾರಣ್ಯಕ (೨-೧-೪) ರಲ್ಲಿ ತಾವುತಾವೇ 'ನಮ್ಮಲ್ಲಿ ಯಾರು ಹೊರಟರೆ ಶರೀರವು ಬೀಳುವದೋ ಅವನೇ ಉಕ್ಥನು' ಎಂದು ಗೊತ್ತುಮಾಡಿಕೊಂಡವು ಎಂದಿದೆ. ಇತ್ಯಾದಿ. 2. ಇಲ್ಲಿರುವ ಆದಿ ಎಂಬುದಕ್ಕೆ ಅರ್ಥವೇನೆಂಬುದು ತಿಳಿಯದು. ಮುಖ್ಯ ಪ್ರಾಣನಲ್ಲದೆ ಮಿಕ್ಕ ಪ್ರಾಣಗಳು ಎಂದು ಆ।। ವ್ಯಾಖ್ಯಾನದಲ್ಲಿ ಅರ್ಥಮಾಡಿದೆ.

3. ಅವುಗಳು ಒಂದೊಂದು ಕಡೆಯಲ್ಲಿ ಒಂದೊಂದು ಬಗೆಯಾಗಿರುತ್ತವೆಯಾದ್ದರಿಂದ ಅವಕ್ಕೆ ಸೃಷ್ಟಿಯಲ್ಲಿ ತಾತ್ಪರ್ಯವಿಲ್ಲ ಎಂದು ಭಾವ. ಸೂ. ಭಾ. ೧-೪-೧೪. 4. ಪ್ರಾಣಗಳನ್ನು ಉಪಾಸನೆಮಾಡಿದರೆ ಅವುಗಳ ಅಧಿದೈವಕರೂಪದ ಸಾಕ್ಷಾತ್ಕಾರವೂ ಸಾಯುಜ್ಯವೂ ಆಗುವದೆಂದು ಪೂರ್ವಪಕ್ಷಿಯ ಅಭಿಪ್ರಾಯವಿರಬಹುದು 5. ಪ್ರಾಣಸಂವಾದವೇ ಮುಂತಾದದ್ದೂ ಉತ್ಪತ್ತಿಯೇ ಮುಂತಾದದ್ದೂ ಸತ್ಯವೆಂದು ಧ್ಯಾನಮಾಡಬೇಕೆಂದು ವಿಧಿಸಿಲ್ಲ. ವಿಧಿಸಿದರೆ ಧ್ಯಾನಕ್ಕೆ ಅನುಗುಣವಾದ ಕಲಹವೇ ಮುಂತಾದ ಅನಿಷ್ಟ ಫಲವೂ ಆಗುತ್ತದೆ ಎಂದು ಭಾವ. ಪರಿಣಾಮ ಪ್ರಕ್ರಿಯೆಯು ಶ್ರುತಿಯಲ್ಲಿಯೂ ಸೂತ್ರದಲ್ಲಿಯೂ ಕಂಡರೂ ಪರಿಣಾಮವು ಸತ್ಯವೆಂಬುದಕ್ಕಲ್ಲ, ಉಪಾಸನೆಗೆ ಮತ್ತು ಐಕ್ಯಜ್ಞಾನಕ್ಕೆ. ಸೂ. ಭಾ. ೨-೧-೧೪, ೨-೧-೨೦.

ಮುಂತಾದದ್ದನ್ನು ಹೇಳುವ ಶ್ರುತಿಗಳು ಆತ್ಮನು ಒಬ್ಬನೇ ಎಂಬ ಬುದ್ಧಿಗೆ ಇಳಿಸುವದಕ್ಕೇ (ಉಪಾಯವಾಗಿ) ಬಂದಿವೆಯೇ ಹೊರತು (ಅವುಗಳಿಗೆ) ಮತ್ತೆ ಬೇರೆ ಅರ್ಥವಿದೆ ಎಂದು ಕಲ್ಪಿಸುವದು ಸರಿಯಾಗಲಾರದು. ಆದ್ದರಿಂದ ಸೃಷ್ಟಿಯೇ ಮುಂತಾದವುಗಳಿಂದಾದ ಭೇದವು ಹೇಗೂ ಇರುವದಿಲ್ಲ.

## ಕರ್ಮೋಪಾಸನಾವಾಕ್ಯಗಳ ಗತಿ

(ಭಾಷ್ಯ)

೧೫೮. ಯದಿ ಪರ ಏವ ಆತ್ಮಾ ನಿತ್ಯಶುದ್ಧಬುದ್ಧಮುಕ್ತಸ್ವಭಾವಃ ಏಕಃ ಪರಮಾರ್ಥತಃ[1] ಸನ್ "ಏಕಮೇವಾದ್ವಿತೀಯಮ್" (ಛಾಂ. ೬-೨-೨) ಇತ್ಯಾದಿ ಶ್ರುತಿಭ್ಯಃ । ಅಸತ್ ಅನ್ಯತ್, ಕಿಮರ್ಥಾ ಇಯಮ್ ಉಪಾಸನಾ ಉಪದಿಷ್ಟಾ ? "ಆತ್ಮಾ ವಾ ಅರೇ ದ್ರಷ್ಟವ್ಯಃ" (ಬೃ. ೨-೪-೫) "ಯ ಆತ್ಮಾಪಹತಪಾಪ್ಮಾ" (ಛಾಂ. ೮-೭-೧) "ಸ ಕ್ರತುಂ ಕುರ್ವೀತ" (ಛಾಂ. ೩-೧೪-೧) "ಆತ್ಮೇತ್ಯೇವೋಪಾಸೀತ" (ಬೃ. ೧-೪-೭) ಇತ್ಯಾದಿಶ್ರುತಿಭ್ಯಃ ? ಕರ್ಮಾಣಿ ಚ ಅಗ್ನಿಹೋತ್ರಾದೀನಿ ? ಶೃಣು ತತ್ರ ಕಾರಣಮ್-

(ಭಾಷ್ಯಾರ್ಥ)

(ಆಕ್ಷೇಪ) :- "ಎರಡನೆಯದಿಲ್ಲದ ಒಂದೇ" (ಛಾಂ. ೬-೨-೨) ಮುಂತಾದ ಶ್ರುತಿಗಳ (ಪ್ರಮಾಣ)ದಿಂದ ಯಾವಾಗಲೂ ಶುದ್ಧನಾಗಿ ಜ್ಞಾನಸ್ವರೂಪನಾಗಿ ಮುಕ್ತನಾಗಿರುವ ಸ್ವಭಾವದ ಪರಮಾತ್ಮನೊಬ್ಬನೇ ನಿಜವಾಗಿರುವವನು, ಮಿಕ್ಕದ್ದು ಹುಸಿ ತೋರಿಕೆ-ಎಂದಾದರೆ "ಎಲೇ, ಆತ್ಮನನ್ನೇ ನೋಡಬೇಕು" (ಬೃ. ೨-೪-೫) : "ಯಾವ ಆತ್ಮನು ನಾಶವಾಗಿರುವ ಪಾಪವುಳ್ಳವನೋ (ಅವನನ್ನು ಹುಡುಕಬೇಕು) (ಛಾಂ. ೮-೭-೧)", "ಅವನು (ಈ) ನಿಶ್ಚಯವನ್ನು ಮಾಡಬೇಕು"[2] (ಛಾಂ. ೩-೧೪-೧) "ಆತ್ಮನೆಂದೇ ಉಪಾಸನೆಮಾಡಬೇಕು" (ಬೃ. ೧-೪-೭) ಮುಂತಾದ ಶ್ರುತಿಗಳಿಂದ ಈ

---

1. "ಪರಮಾರ್ಥಃ ಸನ್" ಅ।। ಕಾ।। ಮೈ।। "ಪರಮಾರ್ಥಸನ್" ಎಂದೇ ಆಚಾರ್ಯರು ಬರೆದಿದ್ದರೂ ಬರೆದಿರಬಹುದು.

2. ಇದೂ ಮುಂದಿನ ವಾಕ್ಯವೂ ಬೃಹದಾರಣ್ಯಕವಾಕ್ಯವೂ, ಜ್ಞಾನವಾಕ್ಯಗಳಾದರೂ ಪೂರ್ವಪಕ್ಷಿಯ ಅಭಿಪ್ರಾಯದಲ್ಲಿ ಉಪಾಸನಾವಿಧಿಗಳು. ಸೂ. ಭಾ. ೧-೧-೪ ರಲ್ಲಿ ಈ ವೃತ್ತಿಕಾರರ ಮತವನ್ನು ಅನುವಾದಮಾಡಿಕೊಂಡು ಖಂಡಿಸಿದೆ. ಮೊದಲನೆಯ ಎರಡು ವಾಕ್ಯಗಳಲ್ಲಿಯೂ ಉಪಾಸನೆಯನ್ನೇ ವಿಧಿಸಿದೆ ಎಂಬ ಆ ।। ವ್ಯಾಖ್ಯಾನವು ಭಾಷ್ಯಾನುಗುಣವಿಲ್ಲ.

ಉಪಾಸನೆಯನ್ನೇಕೆ ಉಪದೇಶಮಾಡಿರುತ್ತದೆ ? ಅಗ್ನಿಹೋತ್ರಾದಿಕರ್ಮಗಳನ್ನಾದರೂ (ಏತಕ್ಕೆ ಉಪದೇಶಮಾಡಿರುತ್ತದೆ[1] ?)

(ಸಮಾಧಾನ) :- ಅದಕ್ಕೆ ಕಾರಣವನ್ನು ಕೇಳು :-

ಆಶ್ರಮಾಸ್ತ್ರಿವಿಧಾ ಹೀನಮಧ್ಯಮೋತ್ಕೃಷ್ಟದೃಷ್ಟಯಃ ।
ಉಪಾಸನೋಪದಿಷ್ಟೇಯಂ ತದರ್ಥಮನುಕಮ್ಪಯಾ ॥೧೬॥

೧೬. ಹೀನ, ಮಧ್ಯಮ, ಉತ್ಕೃಷ್ಟ-ಎಂಬ ದೃಷ್ಟಿಗಳುಳ್ಳ ಆಶ್ರಮಗಳು ಮೂರು ಬಗೆ. ಈ ಉಪಾಸನೆಯು ಅವರಿಗಾಗಿ ಕನಿಕರದಿಂದ ಉಪದಿಷ್ಟವಾಗಿರುತ್ತದೆ.

(ಭಾಷ್ಯ)

೧೫೯. ಆಶ್ರಮಾಃ ಆಶ್ರಮಿಣಃ ಅಧಿಕೃತಾಃ । ವರ್ಣಿನಶ್ಚ ಮಾರ್ಗಗಾಃ । ಆಶ್ರಮಶಬ್ದಸ್ಯ ಪ್ರದರ್ಶನಾರ್ಥತ್ವಾತ್ । ತ್ರಿವಿಧಾಃ । ಕಥಮ್ ? ಹೀನಮಧ್ಯಮೋತ್ಕೃಷ್ಟದೃಷ್ಟಯಃ । ಹೀನಾ ನಿಕೃಷ್ಟಾ । ಮಧ್ಯಮಾ ಉತ್ಕೃಷ್ಟಾ ಚ ದೃಷ್ಟಿಃ ದರ್ಶನಸಾಮರ್ಥ್ಯಂ ಯೇಷಾಂ ತೇ । ಮನ್ದಮಧ್ಯಮೋತ್ತಮಬುದ್ಧಿಸಾಮರ್ಥ್ಯೋಪೇತಾಃ ಇತ್ಯರ್ಥಃ । ಉಪಾಸನಾ ಉಪದಿಷ್ಟಾ ಇಯಂ ತದರ್ಥಂ ಮನ್ದಮಧ್ಯಮದೃಷ್ಟ್ಯಾಶ್ರಮಾದ್ಯರ್ಥಮ್ । ಕರ್ಮಾಣಿ ಚ ನ ಚ ಆತ್ಮಾ ಏಕ ಏವ ಅದ್ವಿತೀಯಃ ಇತಿ ನಿಶ್ಚಿತೋತ್ತಮದೃಷ್ಟ್ಯರ್ಥಂ ದಯಾಲುನಾ ವೇದೇನ ಅನುಕಮ್ಪಯಾ ಸನ್ಮಾರ್ಗಗಾಃ ಸನ್ತಃ ಕಥಮ್ ಇಮಾಮ್ ಉತ್ತಮಾಮ್ ಏಕತ್ವದೃಷ್ಟಿಂ ಪ್ರಾಪ್ನುಯುಃ ಇತಿ । "ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದ ಮುಪಾಸತೇ" (ಕೇ. ೧-೫) "ತತ್ ತ್ವಮಸಿ" (ಛಾಂ. ೬-೮-೭) "ಆತ್ಮೈವೇದಂ ಸರ್ವಮ್" (ಛಾಂ. ೭-೨೫-೨) ಇತ್ಯಾದಿಶ್ರುತಿಭ್ಯಃ ॥

(ಭಾಷ್ಯಾರ್ಥ)

ಆಶ್ರಮಗಳು ಎಂದರೆ ಆಶ್ರಮದಲ್ಲಿರುವ ಅಧಿಕಾರಿಗಳು ; ಮತ್ತು ಮಾರ್ಗದಲ್ಲಿರುವ[2] ವರ್ಣದವರು (ಎಂದರ್ಥ) ; ಏಕೆಂದರೆ (ಇಲ್ಲಿರುವ) ಆಶ್ರಮಶಬ್ದವು

1. ಕರ್ಮೋಪಾಸನೆಗಳನ್ನು ವಿಧಿಸಿರುವದಕ್ಕೆ ಉಪಪತ್ತಿಯಿಲ್ಲದೆ ಹೋಗುವದರಿಂದ ಏಕತ್ವಪಕ್ಷವು ಸರಿಯಲ್ಲ ಎಂದು ಭಾವ.

2. ವೈದಿಕಮಾರ್ಗದಲ್ಲಿರುವ ಎಂದರ್ಥ ಕರ್ಮವನ್ನೂ ಉಪಾಸನವನ್ನೂ ವೈದಿಕರಿಗೇ ವಿಧಿಸಿರುತ್ತದೆ.

(ವರ್ಣಿಗಳಿಗೂ) ಉಪಲಕ್ಷಣವಾಗಿ ಬಂದಿರುತ್ತದೆ. (ಅವರು) ಮೂರು ಬಗೆ. ಹೇಗೆಂದರೆ, (ಅವರು) ಹೀನಮಧ್ಯಮೋತ್ಕೃಷ್ಟದೃಷ್ಟಿಗಳು ; ಹೀನ ಎಂದರೆ ಕೀಳಾದ ಮಧ್ಯಮವಾದ ಮತ್ತು ಉತ್ಕೃಷ್ಟವಾದ ದೃಷ್ಟಿಯ ಸಾಮರ್ಥ್ಯವು ಯಾರಿಗೆ ಇರುವದೋ ಅವರು (ಹೀನಮಧ್ಯಮೋತ್ಕೃಷ್ಟದೃಷ್ಟಿಗಳು) ; ಕೀಳ್ತರದ, ನಡುತರದ, ಮತ್ತು ಮೇಲ್ತರದ ಬುದ್ಧಿಶಕ್ತಿಯಿಂದ ಕೂಡಿರುವವರು ಎಂದು ಅರ್ಥ. ಈ ಉಪಾಸನೆಯನ್ನೂ, ಕರ್ಮಗಳನ್ನೂ ಅವರಿಗಾಗಿ (ಆ) ಕೀಳ್ತರದ, ನಡುತರದ, ದೃಷ್ಟಿಯುಳ್ಳ ಆಶ್ರಮಿಗಳೇ ಮುಂತಾದವರಿಗಾಗಿ ಉಪದೇಶಮಾಡಲಾಗಿದೆಯೇ ಹೊರತು ಆತ್ಮನು ಎರಡನೆಯದಿಲ್ಲದ ಒಬ್ಬನೇ ಎಂಬ ನಿಶ್ಚಿತವಾದ ಉತ್ತಮವಾದ ಏಕತ್ವ ದೃಷ್ಟಿಯವರಿಗಲ್ಲ[1]. (ಅಂಥವರಿಗಾಗಿ) ದಯಾಳುವಾದ ವೇದದಿಂದ "(ಇವರು) ಸನ್ಮಾರ್ಗದಲ್ಲಿ ನಡೆಯುವವರಾಗಿ ಹೇಗಾದರೂ ಈ ಉತ್ತಮವಾದ ಏಕತ್ವದೃಷ್ಟಿಯನ್ನು ಪಡೆದುಕೊಳ್ಳಲಿ !" ಎಂದು ಕನಿಕರದಿಂದ (ಉಪದೇಶಮಾಡಿರುತ್ತದೆ.) 'ಯಾವದನ್ನು ಮನಸ್ಸಿನಿಂದ ಮನನಮಾಡಲಾರನೋ ಯಾವದರಿಂದ ಮನಸ್ಸು ಮನನಮಾಡಲ್ಪಡುವದೆಂದು ಹೇಳುವರೋ ಅದೇ ಬ್ರಹ್ಮವೆಂದು ನೀನು ತಿಳಿ ; ಯಾವದನ್ನು ಇದು ಎಂದು ಉಪಾಸನೆಮಾಡುತ್ತಾರೋ ಅದನ್ನಲ್ಲ" (ಕೇ. ೧-೫) "ಅದು ನೀನಾಗಿರುವೆ" (ಛಾಂ. ೬-೮-೭) "ಇದೆಲ್ಲವೂ ಆತ್ಮನೇ" (ಛಾಂ. ೭-೨೫-೨) ಎಂಬಿವೇ ಮುಂತಾದ ಶ್ರುತಿಗಳು[2] ಇದಕ್ಕೆ ಪ್ರಮಾಣವು.

## ರಾಗದ್ವೇಷಾದಿಗಳಿಗೆಡೆಯಿಲ್ಲದ್ದರಿಂದ ಅದ್ವೈತವೇ ಸರಿಯಾದ ದರ್ಶನ

### (ಭಾಷ್ಯ)

೧೬೦. ಶಾಸ್ತ್ರೋಪಪತ್ತಿಭ್ಯಾಮ್ ಅವಧಾರಿತತ್ವಾತ್ ಅದ್ವಯಾತ್ಮದರ್ಶನಂ ಸಮ್ಯಗ್ದರ್ಶನಮ್ । ತದ್ಬಾಹ್ಯತ್ವಾತ್ ಮಿಥ್ಯಾದರ್ಶನಮ್ ಅನ್ಯತ್ । ಇತಶ್ಚ ಮಿಥ್ಯಾದರ್ಶನಂ ದ್ವೈತಿನಾಮ್ । ರಾಗದ್ವೇಷಾದಿದೋಷಾಸ್ಪದತ್ವಾತ್ । ಕಥಮ್ ?-

---

1. ಅದ್ದರಿಂದ " ಸ ಆತ್ಮಾ ಸ ವಿಜ್ಞೇಯಃ" ಎಂದು ಇಲ್ಲಿ ಹೇಳಿರುವದು ಉತ್ತಮದೃಷ್ಟಿಯುಳ್ಳವರಿಗಾಗಿ, ಇದು ಉಪಾಸನೆಯ ವಿಧಿಯಲ್ಲ ಎಂದು ಭಾವ. ಆತ್ಮನನ್ನು ಹುಡುಕಬೇಕು, ಅರಿತುಕೊಳ್ಳಬೇಕು-ಎಂಬ ವ್ಯವಹಾರವುಕೂಡ ಅರಿಯುವದಕ್ಕೆ ಮೊದಲೇ ಎಂದು ಹಿಂದೆಯೇ (೧-೧೮) ರಲ್ಲಿ ಹೇಳಿದೆ. ಸೂ. ಭಾ. ೧-೧-೪, ೧-೧-೧೭, ೧-೨-೬ ಮುಂತಾದ ಕಡೆಗಳಲ್ಲಿಯೂ ಇದನ್ನು ಪ್ರತಿಪಾದಿಸಿರುತ್ತದೆ. 2. ಪರಮಾತ್ಮನಿಗೆ ಉಪಾಸ್ಯತ್ವವೇ ನಿಜವಾದ ಸ್ವರೂಪವಾದರೆ ಹೀಗೆಂದು ಶ್ರುತಿಗಳೂ ಹೇಳುತ್ತಿರಲಿಲ್ಲ ಎಂದು ಭಾವ.

(ಭಾಷ್ಯಾರ್ಥ)

ಶಾಸ್ತ್ರ (ಪ್ರಮಾಣ), ಯುಕ್ತಿ (ಈ ಎರಡ)ರಿಂದಲೂ ನಿರ್ಧರಿಸಿರುವದರಿಂದ ಅದ್ವಯಾತ್ಮದರ್ಶನವೇ ಸರಿಯಾದ ದರ್ಶನವು. ಆ (ಎರಡಕ್ಕೂ) ಹೊರಚ್ಚಾಗಿರುವ ದರಿಂದ ಮಿಕ್ಕದ್ದು ತಪ್ಪು ದರ್ಶನವು. ದ್ವೈತಿಗಳದು ತಪ್ಪುದರ್ಶನವೆಂಬುದು ಈ ಕಾರಣದಿಂದಲೂ (ಸಿದ್ಧವಾಗುತ್ತದೆ. ಅದೇನೆಂದರೆ ಅದು) ರಾಗ, ದ್ವೇಷ-ಮುಂತಾದ ದೋಷಗಳಿಗೆ ಎಡೆಯಾಗಿರುತ್ತದೆ. (ಅದು) ಹೇಗೆ ? (ಎಂದರೆ) :-

ಸ್ವಸಿದ್ಧಾನ್ತವ್ಯವಸ್ಥಾಸು ದ್ವೈತಿನೋ ನಿಶ್ಚಿತಾ ದೃಢಮ್ ।
ಪರಸ್ಪರಂ ವಿರುಧ್ಯನ್ತೇ ತೈರಯಂ ನ ವಿರುಧ್ಯತೇ ॥೧೭॥

೧೭. ತಮ್ಮ ಸಿದ್ಧಾಂತಗಳ ವ್ಯವಸ್ಥೆಗಳಲ್ಲಿ ದ್ವೈತಿಗಳು ದೃಢವಾಗಿ ನಿಶ್ಚಿತ ರಾಗಿರುವರಾಗಿ ಒಬ್ಬರಿಗೊಬ್ಬರು ವಿರುದ್ಧವಾಗಿರುತ್ತಾರೆ. ಇದು ಅವರಿಗೆ ವಿರುದ್ಧವಾಗಿಲ್ಲ.

(ಭಾಷ್ಯ)

೧೭೧. ಸ್ವಸಿದ್ಧಾನ್ತವ್ಯವಸ್ಥಾಸು ಸ್ವಸಿದ್ಧಾನ್ತರಚನಾನಿಯಮೇಷು ಕಪಿಲಕಣಾದ ಬುದ್ಧಾರ್ಹತಾದಿದೃಷ್ಟ್ಯನುಸಾರಿಣಃ ದ್ವೈತಿನಃ ನಿಶ್ಚಿತಾಃ । ಏವಮೇವ ಏಷ ಪರಮಾರ್ಥಃ ನಾನ್ಯಥಾ ಇತಿ ತತ್ರ ತತ್ರ ಅನುರಕ್ತಾಃ, ಪ್ರತಿಪಕ್ಷಂ ಚ ಆತ್ಮನಃ ಪಶ್ಯನ್ತಃ ತಂ ದ್ವಿಷನ್ತಃ ಇತ್ಯೇವಂ ರಾಗದ್ವೇಷೋಪೇತಾಃ ಸ್ವಸಿದ್ಧಾನ್ತದರ್ಶನನಿಮಿತ್ತಮೇವ ಪರಸ್ಪರಮ್ ಅನ್ಯೋನ್ಯಂ ವಿರುಧ್ಯನ್ತೇ । ತೈಃ ಅನ್ಯೋನ್ಯವಿರೋಧಿಭಿಃ ಅಸ್ಮದೀಯಃ ಅಯಂ ವೈದಿಕಃ ಸರ್ವಾನನ್ಯತ್ವಾತ್ ಆತ್ಮೈಕತ್ವದರ್ಶನಪಕ್ಷಃ ನ ವಿರುಧ್ಯತೇ । ಯಥಾ ಸ್ವಹಸ್ತ ಪಾದಾದಿಭಿಃ । ಏವಂ ರಾಗದ್ವೇಷಾದಿದೋಷಾನಾಸ್ಪದತ್ವಾತ್ ಆತ್ಮೈಕತ್ವಬುದ್ಧಿರೇವ ಸಮ್ಯಗ್ದರ್ಶನಮ್ ಇತಿ ಅಭಿಪ್ರಾಯಃ ॥

(ಭಾಷ್ಯಾರ್ಥ)

ದ್ವೈತಿಗಳು ಎಂದರೆ ಕಪಿಲ, ಕಣಾದ, ಬುದ್ಧ, ಅರ್ಹತ ಮುಂತಾದವರ ದೃಷ್ಟಿಯನ್ನು ಅವಲಂಬಿಸಿರುವವರು[1], ತಮ್ಮ ತಮ್ಮ ಸಿದ್ಧಾಂತಗಳ ವ್ಯವಸ್ಥೆಗಳಲ್ಲಿ ತಮ್ಮ (ತಮ್ಮ) ಸಿದ್ಧಾಂತಗಳನ್ನು ಕಟ್ಟುವ ನಿಯಮಗಳಲ್ಲಿ[2] ನಿಶ್ಚಿತರಾಗಿ ಈ ಪರಮಾರ್ಥವು

1. ಇವರೆಲ್ಲರಿಗೂ ತರ್ಕವೇ ಮುಖ್ಯವಾಗಿರುವದರಿಂದ ಇವರನ್ನು ತಾರ್ಕಿಕರೆಂದು ಆಚಾರ್ಯರು ಕರೆದಿದ್ದಾರೆ. ಪೀಠಿಕೆಯನ್ನು ನೋಡಿ.

2. ಸಿದ್ಧಾಂತಗಳನ್ನು ಕೆಲವು ಯುಕ್ತಸಿದ್ಧವಾದ ನಿಯಮಗಳಿಂದ ಕಟ್ಟುವರೇ ಹೊರತು ಅವು ಅನುಭವಸಮ್ಮತವಲ್ಲ ಎಂಬುದನ್ನು ' ರಚನಾನಿಯಮೇಷು' ಎಂಬ ಮಾತಿನಿಂದ ಸೂಚಿಸಿದೆ.

ಹೀಗೆಯೇ ಬೇರೆಯ ಪ್ರಕಾರದಿಂದಲ್ಲ ಎಂದು ಆಯಾ (ಸಿದ್ಧಾಂತನಿಯಮ)ದಲ್ಲಿ ಅನುರಾಗವುಳ್ಳವರಾಗಿ, ತಮಗೆ ಎದುರುಪಕ್ಷವು (ಇಂಥದ್ದೆಂದು) ತಿಳಿಯುತ್ತಾ ಅದನ್ನು ಹಗೆಮಾಡುತ್ತಾ (ಇರುವರು). ಹೀಗೆ ರಾಗದ್ವೇಷಗಳಿಂದ ಕೂಡಿದವರಾಗಿ ತಮ್ಮ ಸಿದ್ಧಾಂತವಾಗಿರುವ ದರ್ಶನದ ಕಾರಣದಿಂದಲೇ ಒಬ್ಬರಿಗೊಬ್ಬರಿಗೆ ವಿರುದ್ಧರಾಗಿರುತ್ತಾರೆ[1]. (ಹಾಗೆ) ಒಬ್ಬರಿಗೊಬ್ಬರು ವಿರೋಧಿಗಳಾಗಿರುವ ಅವರಿಗೆ ಈ ವೈದಿಕವಾದ ಆತ್ಮೈಕತ್ವದರ್ಶನವೆಂಬ ನಮ್ಮ ಪಕ್ಷವು, ಯಾವದಕ್ಕೂ ಭಿನ್ನವಾಗಿರುವದಿಲ್ಲವಾದ್ದರಿಂದ[2], ವಿರುದ್ಧವಾಗಿರುವದಿಲ್ಲ ; ಹೇಗೆ ತನ್ನ ಕೈಕಾಲು-ಮುಂತಾದವುಗಳಿಗೆ (ತಾನು ವಿರೋಧಿಯಲ್ಲವೋ ಹಾಗೆಯೇ ಇದು). ಹೀಗೆ ರಾಗ, ದ್ವೇಷ-ಮುಂತಾದ ದೋಷಗಳಿಗೆ ಎಡೆಯಿಲ್ಲದೆ ಇರುವದರಿಂದ ಆತ್ಮೈಕತ್ವಬುದ್ಧಿಯೇ ಸರಿಯಾದ ತಿಳಿವಳಿಕೆ ಎಂದು ಅಭಿಪ್ರಾಯ.

(ಭಾಷ್ಯ)

೧೬೨. ಕೇನ ಹೇತುನಾ ತೈಃ ನ ವಿರುಧ್ಯತೇ ಇತಿ ? ಉಚ್ಯತೇ-

(ಭಾಷ್ಯಾರ್ಥ)

(ಇದು) ಯಾವ ಕಾರಣದಿಂದ ಅವರಿಗೆ ವಿರುದ್ಧವಲ್ಲ ?-ಎಂದರೆ ಹೇಳುತ್ತಾರೆ :-

**ಅದ್ವೈತಂ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ ।**
**ತೇಷಾಮುಭಯಥಾ ದ್ವೈತಂ ತೇನಾಯಂ ನ ವಿರುಧ್ಯತೇ ॥೧೮॥**

೧೮. ಏಕೆಂದರೆ ಅದ್ವೈತವು ಪರಮಾರ್ಥವು ; ದ್ವೈತವು ಅದರ ಭೇದವೆನಿಸುತ್ತದೆ. ಅವರಿಗೆ ಎರಡು ಪ್ರಕಾರದಿಂದಲೂ ದ್ವೈತವೇ. ಆದ್ದರಿಂದ ಇದು ವಿರುದ್ಧವಲ್ಲ.

(ಭಾಷ್ಯ)

೧೬೩. ಅದ್ವೈತಮ್ ಪರಮಾರ್ಥಃ ಹಿ ಯಸ್ಮಾತ್ ದ್ವೈತಂ ನಾನಾತ್ವಂ ತಸ್ಯ ಅದ್ವೈತಸ್ಯ ಭೇದಃ ತದ್ಭೇದಃ ತಸ್ಯ ಕಾರ್ಯಮ್ ಇತ್ಯರ್ಥಃ । ''ಏಕಮೇವಾದ್ವಿತೀಯಮ್'' (ಛಾಂ. ೬-೨-೧) ''ತತ್ ತೇಜೋಽಸೃಜತ'' (ಛಾಂ. ೬-೨-೩)

---

1. ತಮ್ಮ ಸಿದ್ಧಾಂತಕ್ಕೆ ಅನುಗುಣವಾದ ಸಿದ್ಧಾಂತವುಳ್ಳವರಲ್ಲಿ ರಾಗ ; ಪ್ರತಿಕೂಲವಾದ ಸಿದ್ಧಾಂತವುಳ್ಳವರಲ್ಲಿ ದ್ವೇಷ-ಹೀಗೆ ದೋಷಯುಕ್ತರಾಗಿರುವದರಿಂದ ಒಬ್ಬರಿಗೊಬ್ಬರು ವಿರುದ್ಧರಾಗಿರುತ್ತಾರೆ.

2. ಏಕೆಂದರೆ ಅದ್ವೈತಾತ್ಮನಿಗಿಂತ ಬೇರೆಯಾಗಿರುವದೇ ಇಲ್ಲ.

ಇತಿ ಶ್ರುತೇಃ । ಉಪಪತ್ತೇಶ್ಚ । ಸ್ವಚಿತ್ತಸ್ಪನ್ದನಾಭಾವೇ ಸಮಾಧೌ ಮೂರ್ಚಾಯಾಂ ಸುಷುಪ್ತೌ ಚಾಭಾವಾತ್ । ಅತಃ ತದ್ಭೇದ ಉಚ್ಯತೇ ದ್ವೈತಮ್ । ದ್ವೈತಿನಾಂ ತು ತೇಷಾಂ ಪರಮಾರ್ಥತಶ್ಚ[1] ಅಪರಮಾರ್ಥತಶ್ಚ ಉಭಯಥಾಪಿ ದ್ವೈತಮೇವ । ಯದಿ ಚ ತೇಷಾಂ ಭ್ರಾನ್ತಾನಾಂ ದ್ವೈತದೃಷ್ಟಿಃ, ಅಸ್ಮಾಕಮ್ ಅದ್ವೈತದೃಷ್ಟಿಃ ಅಭ್ರಾನ್ತಾನಾಮ್, ತೇನ ಅಯಂ ಹೇತುನಾ ಅಸ್ಮತ್ಪಕ್ಷಃ ನ ವಿರುಧ್ಯತೇ ತೈಃ । ''ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ'' (ಬೃ. ೨-೫-೧೯) ''ನ ತು ತದ್ದ್ವಿತೀಯಮಸ್ತಿ'' (ಬೃ. ೪-೩-೨೩) ಇತಿ ಶ್ರುತೇಃ । ಯಥಾ ಮತ್ತಗಜಾರೂಢಃ ಉನ್ಮತ್ತಂ ಭೂಮಿಷ್ಠಂ[2] ''ಗಜಾರೂಢೋಽಹಮ್ ವಾಹಯ ಮಾಂ ಪ್ರತಿ'' ಇತಿ ಬ್ರುವಾಣಮಪಿ ತಂ ಪ್ರತಿ ನ ವಾಹಯತಿ ಅವಿರೋಧ ಬುದ್ಧ್ಯಾ, ತದ್ವತ್ । ತತಃ ಪರಮಾರ್ಥತಃ ಬ್ರಹ್ಮವಿತ್ ಆತ್ಮೈವ ದ್ವೈತಿನಾಮ್ । ತೇನ ಅಯಂ ಹೇತುನಾ ಅಸ್ಮತ್ಪಕ್ಷಃ ನ ವಿರುಧ್ಯತೇ ತೈಃ ॥

(ಭಾಷ್ಯಾರ್ಥ)

(ಹಿ) ಏಕೆಂದರೆ ಅದ್ವೈತವು ಪರಮಾರ್ಥವು, ದ್ವೈತವು ನಾನಾತ್ವವು ಅದರ ಭೇದವು ಆ ಅದ್ವೈತದ ಕಾರ್ಯವು ಎನಿಸಿರುತ್ತದೆ. ''ಎರಡನೆಯದಿಲ್ಲದ ಒಂದೇ'' (ಛಾಂ. ೬-೨-೧), ''ಅದು ತೇಜಸ್ಸನ್ನು ಸೃಷ್ಟಿಸಿತು'' (ಛಾಂ. ೬-೨-೩) ಎಂಬ ಶ್ರುತಿಯು[3] ಇದಕ್ಕೆ ಪ್ರಮಾಣವು. ಯುಕ್ತಿಯಿಂದಲೂ (ಹೀಗೆಂದು ಏರ್ಪಡುತ್ತದೆ). ಏಕೆಂದರೆ ತನ್ನ ಚಿತ್ತದ ಅಲುಗಾಟವಿಲ್ಲದ ಸಮಾಧಿಯಲ್ಲಿ, ಮೂರ್ಛೆಯಲ್ಲಿ, ಮತ್ತು ತನಿನಿದ್ರೆಯಲ್ಲಿ (ದ್ವೈತವು) ಇರುವದಿಲ್ಲ[4]. ಆದ್ದರಿಂದ ದ್ವೈತವು ಆ (ಅದ್ವೈತ)ದ ಭೇದವೆನಿಸುತ್ತದೆ. ಆದರೆ ಆ ದ್ವೈತಿಗಳ (ಮತದಲ್ಲಿ) ನಿಜವಾಗಿಯೂ ಭ್ರಾಂತಿಯಿಂದಲೂ, ಎರಡು ಪ್ರಕಾರದಿಂದಲೂ, ದ್ವೈತವೇ[5]. ಅವರು ಭ್ರಾಂತರಾಗಿರುವದರಿಂದ ದ್ವೈತದೃಷ್ಟಿಯೂ, ಅಭ್ರಾಂತರಾಗಿರುವದರಿಂದ ನಮಗೆ ಅದ್ವೈತದೃಷ್ಟಿ ಎಂದಾದರೆ, (ಆಗ) ಆ ಕಾರಣದಿಂದ ಈ ನಮ್ಮ ಪಕ್ಷವು ಅವರಿಗೆ ವಿರುದ್ಧವಾಗುವದಿಲ್ಲ. ''ಇಂದ್ರನು

---

1. 'ಪರಮಾರ್ಥತೋಽಪರಮಾರ್ಥತಶ್ಚ' ವಾ॥

2. 'ಪ್ರತಿ' ಎಂದು ಆ॥ ಕಾ॥ ಗಳಲ್ಲಿ ಹೆಚ್ಚಾಗಿರುವದು ಬೇಕಿಲ್ಲ.

3. ಅದ್ವೈತದಿಂದ ದ್ವೈತವೆಲ್ಲವೂ ಬಂದಿದೆ, ಆದ್ದರಿಂದ ಅದ್ವೈತವೇ ಪರಮಾರ್ಥವು ಎಂದು ಶ್ರುತಿಯ ಅಭಿಪ್ರಾಯ.

4. ಆದ್ದರಿಂದ ಅದ್ವೈತದಲ್ಲಿಯೇ ದ್ವೈತವು ಆರೋಪಿತವಾಗಿರುವದೆಂಬುದು ಅನುಭವ ಸಮ್ಮತ.

5. ಆದ್ದರಿಂದ ಶ್ರುತ್ಯನುಭವವಿರುದ್ಧವಾದ ಮತದವರು.

ಮಾಯೆಗಳಿಂದ ಬಹುರೂಪವಾಗಿ ತೋರುವನು'' (ಬೃ. ೨-೫-೧೯), ''ಆದರೆ ಅಲ್ಲಿ ಎರಡನೆಯದಿರುವದಿಲ್ಲ[1]'' (ಬೃ. ೪-೩-೨೩) ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಹೇಗೆ ಮದ್ವಾನೆಯನ್ನೇರಿರುವವನು, ನೆಲದಮೇಲಿದ್ದುಕೊಂಡಿರುವ ಹುಚ್ಚ(ನೊಬ್ಬನು) ''ನಾನು ಆನೆಯನ್ನೇರಿರುವೆನು, ನನ್ನಕಡೆಗೆ (ನಿನ್ನ ಆನೆಯನ್ನು) ಬಿಡು'' ಎಂದು ಹೇಳಿದರೂ (ಅವನಲ್ಲಿ) ವಿರೋಧಬುದ್ಧಿಯನ್ನು ಮಾಡದೆ ಅವನ ಕಡೆಗೆ (ಆನೆಯನ್ನು) ಬಿಡದಿರುವನೋ ಅದರಂತೆಯೇ (ಇದು). ಆದ್ದರಿಂದ ಬ್ರಹ್ಮ ಜ್ಞಾನಿಯು ದ್ವೈತಿಗಳಿಗೆ ನಿಜವಾಗಿ ಆತ್ಮನೇ ಆಗಿರುತ್ತಾನೆ ; ಆದ್ದರಿಂದ ಈ ಕಾರಣ ದಿಂದ ನಮ್ಮ ಈ ಪಕ್ಷವು ಅವರಿಗೆ ವಿರುದ್ಧವಾಗಿರುವದಿಲ್ಲ.

(ಭಾಷ್ಯ)

೧೬೪. ದ್ವೈತಮ್ ಅದ್ವೈತಭೇದಃ ಇತಿ ಉಕ್ತೇ ದ್ವೈತಮಪಿ ಅದ್ವೈತವತ್ ಪರಮಾರ್ಥಸತ್ ಇತಿ ಸ್ಯಾತ್ ಕಸ್ಯಚಿತ್ ಆಶಙ್ಕಾ ಇತ್ಯತಃ ಆಹ-

(ಭಾಷ್ಯಾರ್ಥ)

ದ್ವೈತವು ಅದ್ವೈತದ ಭೇದವು ಎಂದು ಹೇಳಿರುವದರಿಂದ ಅದ್ವೈತದಂತೆ ದ್ವೈತವೂ ನಿಜವಾಗಿರುವದೆಂದು ಯಾವನಿಗಾದರೂ ಆಶಂಕೆಯುಂಟಾಗಬಹುದು[2]. ಆದ್ದರಿಂದ ಅದಕ್ಕೆ (ಪರಿಹಾರವನ್ನು) ಹೇಳುತ್ತಾರೆ :-

ಮಾಯಯಾ ಭಿದ್ಯತೇ ಹ್ಯೇತನ್ನಾನ್ಯಥಾಜಂ ಕಥಂಚನ ।
ತತ್ತ್ವತೋ ಭಿದ್ಯಮಾನೇ ಹಿ ಮರ್ತ್ಯತಾಮಮೃತಂ ವ್ರಜೇತ್ ॥೧೯॥

೧೯. ಇದು ಮಾಯೆಯಿಂದಲೇ ಭಿನ್ನವಾಗಿರುತ್ತದೆ. ಅಜವಾದದ್ದು (ಇನ್ನು) ಬೇರೆ (ಯಾವ) ಪ್ರಕಾರದಿಂದಲೂ (ಭಿನ್ನವಾಗಲಾರದು). ಏಕೆಂದರೆ ನಿಜವಾಗಿಯೇ ಭೇದವಾಗುವದಾದರೆ ಅಮೃತವು ಮರ್ತ್ಯತ್ವವನ್ನು ಹೊಂದ ಬೇಕಾದೀತು.

(ಭಾಷ್ಯ)

೧೬೫. ಯತ್ ಪರಮಾರ್ಥಸತ್ ಅದ್ವೈತಂ ಮಾಯಯಾ ಭಿದ್ಯತೇ ಹಿ ಏತತ್

---

1. ಭ್ರಾಂತಿಯಿಂದ ದ್ವೈತವು ತೋರುವದೆಂಬುದಕ್ಕೂ ಅದ್ವೈತದಲ್ಲಿ ದ್ವೈತವು ಅಡಗಿದೆ ಎಂಬುದಕ್ಕೂ ಸುಷುಪ್ತಿಯ ಅನುಭವವಿದೆಯೆಂದು ಈ ಎರಡು ಶ್ರುತಿಗಳು ಹೇಳುವವು.

2. ಅದ್ವೈತದಲ್ಲಿ ಭೇದವುಂಟಾದರೆ ಅದು ನಿಜವಾಗಿ ಅದ್ವೈತವಲ್ಲ ಎಂಬ ಯುಕ್ತಿಯನ್ನು ಮರೆತು ಯಾವನಾದರೂ ಹೀಗೆಂದು ಶಂಕಿಸಬಹುದು.

ತೈಮಿರಿಕಾನೇಕಚನ್ದ್ರವತ್ ರಜ್ಜುಸರ್ಪಧಾರಾದಿಭಿರ್ಭೇದ್ಯೈರಿವ ಪರಮಾರ್ಥತಃ ನಿರವಯವತ್ವಾತ್ ಆತ್ಮನಃ । ಸಾವಯವಂ ಹಿ ಅವಯವಾನ್ಯಥಾತ್ವೇನ ಭಿದ್ಯತೇ । ಯಥಾ ಮೃತ್ ಘಟಾದಿಭೇದ್ಯೈಃ । ತಸ್ಮಾತ್ ನಿರವಯವಮ್ ಅಜಂ ನ ಅನ್ಯಥಾ ಕಥಂಚನ । ಕೇನಚಿದಪಿ ಪ್ರಕಾರೇಣ ನ ಭಿದ್ಯತೇ ಇತಿ ಅಭಿಪ್ರಾಯಃ । ತತ್ತ್ವತಃ ಭಿದ್ಯಮಾನೇ[1] ಹಿ ಅಮೃತಮ್ ಅಜಮ್ ಅದ್ವಯಂ ಸ್ವಭಾವತಃ ಸನ್ ಮರ್ತ್ಯತಾಂ ವ್ರಜೇತ್ । ಯಥಾ ಅಗ್ನಿಃ ಶೀತತಾಮ್ । ತಚ್ಚ ಅನಿಷ್ಟಂ ಸ್ವಭಾವವೈಪರೀತ್ಯಗಮನಮ್ । ಸರ್ವಪ್ರಮಾಣವಿರೋಧಾತ್ । ಅಜಮವ್ಯಯಮ್[2] ಆತ್ಮತತ್ತ್ವಂ ಮಾಯಯೈವ ಭಿದ್ಯತೇ ನ ಪರಮಾರ್ಥತಃ । ತಸ್ಮಾತ್ ನ ಪರಮಾರ್ಥಸತ್ ದ್ವೈತಮ್ ॥

(ಭಾಷ್ಯಾರ್ಥ)

ನಿಜವಾಗಿಯೂ ಇದ್ದುಕೊಂಡಿರುವ ಅದ್ವೈತವಿದೆಯಲ್ಲ, ಇದು ಪರೆಗಣ್ಣಿನವರಿಗೆ (ಕಾಣುವ) ಅನೇಕ ಚಂದ್ರರಂತೆಯೂ ಹಗ್ಗವು ಹಾವು, (ನೀರಿನ) ಕೋಡಿ-ಮುಂತಾದ ವಿಶೇಷ(ರೂಪ)ಗಳಿಂದ ಭಿನ್ನವಾಗಿರುವಂತೆಯೂ ಮಾಯೆಯಿಂದ ಭಿನ್ನವಾಗಿರುವದೇ ಹೊರತು ನಿಜವಾಗಿ (ಭಿನ್ನವಾಗಿರು)ವದಿಲ್ಲ. ಏಕೆಂದರೆ ಆತ್ಮನು ನಿರವಯವನಾಗಿರುತ್ತಾನೆ. ಅವಯವಗಳಿಂದ ಕೂಡಿರುವ (ವಸ್ತುವೇ) ಅಲ್ಲವೆ, (ತನ್ನ) ಅವಯವಗಳು ಮಾರ್ಪಡುವದರಿಂದ ಭಿನ್ನವಾಗಿರುತ್ತದೆ ? ಉದಾಹರಣೆಗೆ ಮಣ್ಣು, ಗಡಿಗೆಯೇ ಮುಂತಾದ (ರೂಪದ) ಭೇದಗಳಾಗಿ (ಭಿನ್ನವಾಗುತ್ತದೆ). ಆದ್ದರಿಂದ ನಿರವಯವವಾಗಿರುವ ಅಜವಾದ (ಬ್ರಹ್ಮವು) ಇನ್ನು ಹೇಗೂ ಯಾವ ಪ್ರಕಾರದಿಂದಲೂ ಬೇರ್ಪಡುವದಿಲ್ಲ-ಎಂದು ಅಭಿಪ್ರಾಯ. ಏಕೆಂದರೆ (ಅದು) ನಿಜವಾಗಿಯೇ ಭಿನ್ನವಾಗುವದಾದರೆ ಸ್ವಭಾವದಿಂದ ಅಮೃತವೂ ಅಜವೂ ಅದ್ವಯವೂ[3] ಆಗಿರುವದು, ಬೆಂಕಿಯು ತಂಪನ್ನು ಪಡೆಯುವಂತೆ ಮರ್ತ್ಯತ್ವವನ್ನು ಹೊಂದಬೇಕಾದೀತು. ಸ್ವಭಾವವೇ ವಿರುದ್ಧವಾಗಿ ಆಗುವದು (ಯಾರಿಗೂ) ಇಷ್ಟವಲ್ಲ[4]. ಏಕೆಂದರೆ (ಹಾಗಾಗುವದು) ಎಲ್ಲಾ ಪ್ರಮಾಣಗಳಿಗೂ ವಿರುದ್ಧವಾಗಿರುತ್ತದೆ. ಅಜವೂ, ಅವ್ಯಯವೂ, ಆಗಿರುವ ಆತ್ಮತತ್ತ್ವವು ಮಾಯೆ

---

1. " ಭಿದ್ಯಮಾನಮ್" ವಾ॥ ಕಾ॥

2. "ಅದ್ವಯಮ್" ವಾ॥ ; ಅದೂ ಆಗಬಹುದು.

3. ಅಮೃತವೆಂದರೆ ನಾಶವಾಗುವ ಯೋಗ್ಯತೆಯಿಲ್ಲದ್ದು. ಅಜ ಎಂದು ಹುಟ್ಟಿಲ್ಲದ್ದು. ಅದ್ವಯವೆಂದರೆ ತನಗೆರಡನೆಯದಿಲ್ಲದ್ದು. ಇಂಥದ್ದಕ್ಕೆ ನಾಶವಾಗುವದೆಂಬುದು ಸಾಧ್ಯವಿಲ್ಲ.

4. ವಸ್ತುವಿನ ಸ್ವಭಾವವು ಬೇರೆಯಾಗುತ್ತದೆ ಎಂದು ಯಾವ ವಾದಿಗಳೂ ಹೇಳುವದಿಲ್ಲ.

ಯಿಂದಲೇ ಭಿನ್ನವಾಗಿರುತ್ತದೆಯೇ ಹೊರತು ನಿಜವಾಗಿ (ಭಿನ್ನವಾಗಿ)ರುವದಿಲ್ಲ. ಆದ್ದರಿಂದ ದ್ವೈತವು ನಿಜವಾಗಿರುವದಲ್ಲ.

## ಜಾತಬ್ರಹ್ಮವಾದದಲ್ಲಿ ದೋಷ

ಅಜಾತಸ್ಯೈವ ಭಾವಸ್ಯ ಜಾತಿಮಿಚ್ಛನ್ತಿ ವಾದಿನಃ ।
ಅಜಾತೋ ಹ್ಯಮೃತೋ ಭಾವೋ ಮರ್ತ್ಯತಾಂ ಕಥಮೇಷ್ಯತಿ ॥೨೦॥

೨೦. ಅಜಾತವೇ ಆಗಿರುವ ಭಾವಕ್ಕೆ ವಾದಿಗಳು ಜಾತಿಯನ್ನು ಒಪ್ಪಿರುತ್ತಾರೆ. ಅಜಾತವೂ, ಅಮೃತವೂ ಆಗಿರುವ ಭಾವವು ಮರ್ತ್ಯತ್ವವನ್ನು ಹೇಗೆ ಹೊಂದೀತು ?

(ಭಾಷ್ಯ)

೧೬೬. ಯೇ ತು ಪುನಃ ಕೇಚಿತ್ ಉಪನಿಷದ್ವ್ಯಾಖ್ಯಾತಾರಃ ಬ್ರಹ್ಮವಾದಿನಃ ವಾವದೂಕಾಃ ಅಜಾತಸ್ಯೈವ ಆತ್ಮತತ್ತ್ವಸ್ಯ ಅಮೃತಸ್ಯ ಸ್ವಭಾವತಃ ಜಾತಿಮ್ ಉತ್ಪತ್ತಿಮ್ ಇಚ್ಛನ್ತಿ ಪರಮಾರ್ಥತ ಏವ ತೇಷಾಂ ಜಾತಂ ಚೇತ್ ತದೇವ ಮರ್ತ್ಯತಾಮ್ ಏಷ್ಯತಿ ಅವಶ್ಯಮ್ । ಸ ಚ ಅಜಾತಃ ಹಿ ಅಮೃತಃ ಭಾವಃ ಸ್ವಭಾವತಃ ಸನ್ ಆತ್ಮಾ ಕಥಂ ಮರ್ತ್ಯತಾಮ್ ಏಷ್ಯತಿ ? ನ ಕಥಂಚನ ಮರ್ತ್ಯತ್ವಂ ಸ್ವಭಾವವೈಪರೀತ್ಯಮ್ ಏಷ್ಯತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಆದರೆ ಉಪನಿಷತ್ತುಗಳನ್ನು ವ್ಯಾಖ್ಯಾನಮಾಡಿರುವ ಬ್ರಹ್ಮವಾದಿಗಳು ಕೆಲವರು ವಾದಿಗಳು[1] ಅಜಾತವೇ ಆಗಿರುವ ಆತ್ಮತತ್ತ್ವಕ್ಕೆ ಸ್ವಭಾವದಿಂದ ಅಮೃತವಾಗಿರುವ (ಆತ್ಮತತ್ತ್ವಕ್ಕೆ) ಜಾತಿಯನ್ನು ಎಂದರೆ ನಿಜವಾಗಿಯೇ ಹುಟ್ಟನ್ನು ಒಪ್ಪಿರುವರಲ್ಲ, ಅವರ (ಮತದಲ್ಲಿ) ಹುಟ್ಟಿದ್ದಾದರೆ ಅದೇ ಅವಶ್ಯವಾಗಿ ಮರ್ತ್ಯತ್ವವನ್ನು ಹೊಂದಿಯೇ ತೀರುವದು. ಆ ಅಜಾತವಾಗಿ ಅಮೃತವಾಗಿರುವ ಸ್ವಭಾವದಿಂದ ಸದ್ರೂಪನಾಗಿರುವ[2]

---

1. ವಾದಿನಃ ಎಂಬುದನ್ನೂ ಬರೆದು ಭಾಷ್ಯಕಾರರು ವಾದದೂಕಾಃ ಎಂಬ ಅರ್ಥವನ್ನು ಬರೆದಿರುವರೋ ಮೂಲದ ಮಾತನ್ನು ಬಿಟ್ಟೇ ಇರುವರೋ ಹೇಳುವದಕ್ಕೆ ಬರುವದಿಲ್ಲ. ಇದರಂತೆ ಭಾವಸ್ಯ ಎಂಬ ಮಾತೂ ಬಿಟ್ಟಿದೆ.

2. " ಆತ್ಮನು ಸ್ವಭಾವದಿಂದ ಅಜಾತನೂ ಅಮೃತನಾಗಿದ್ದುಕೊಂಡಿರುವವನಾಗಿದ್ದುಕೊಂಡು ಹೇಗೆ ..." ಎಂದೂ ಕನ್ನಡಿಸಬಹುದು.

ಆತ್ಮನು ಹೇಗೆ ಮರ್ತ್ಯತ್ವವನ್ನು ಹೊಂದಿಯಾನು ? ಮರ್ತ್ಯತ್ವವೆಂಬ ವಿರುದ್ಧಸ್ವಭಾವವನ್ನು ಹೇಗೂ ಹೊಂದಲಾರನು ಎಂದು ಅರ್ಥ.

ನ ಭವತ್ಯಮೃತಂ ಮರ್ತ್ಯಂ ನ ಮರ್ತ್ಯಮಮೃತಂ ತಥಾ ।
ಪ್ರಕೃತೇರನ್ಯಥಾಭಾವೋ ನ ಕಥಂಚಿದ್ಭವಿಷ್ಯತಿ ॥೨೧॥

೨೧. ಅಮೃತವು ಮರ್ತ್ಯವಾಗುವದಿಲ್ಲ. ಹಾಗೂ ಮರ್ತ್ಯವು ಅಮೃತ (ವಾಗುವ)ದಿಲ್ಲ. ಪ್ರಕೃತಿಗೆ ಅನ್ಯಥಾಭಾವವು ಹೇಗೂ ಆಗಲಾರದು.

(ಭಾಷ್ಯ)

೧೬೭. ಯಸ್ಮಾತ್ ನ ಭವತಿ ಅಮೃತಂ ಮರ್ತ್ಯಂ ಲೋಕೇ । ನಾಪಿ ಮರ್ತ್ಯಮ್ ಅಮೃತಂ ತಥಾ । ತತಃ ಪ್ರಕೃತೇಃ ಸ್ವಭಾವಸ್ಯ ಅನ್ಯಥಾಭಾವಃ ಸ್ವತಃ ಪ್ರಚ್ಯುತಿಃ ನ ಕಥಂಚಿತ್ ಭವಿಷ್ಯತಿ । ಅಗ್ನೇರಿವ ಔಷ್ಣ್ಯಸ್ಯ ॥

(ಭಾಷ್ಯಾರ್ಥ)

ಏಕೆಂದರೆ ಲೋಕದಲ್ಲಿ ಅಮೃತವಾದದ್ದು[1] ಮರ್ತ್ಯವಾಗುವದಿಲ್ಲ, ಹಾಗೂ ಮರ್ತ್ಯ ವಾದದ್ದು[2] ಅಮೃತವೂ ಆಗುವದಿಲ್ಲ. ಆದ್ದರಿಂದ ಪ್ರಕೃತಿಗೆ ಎಂದರೆ ಸ್ವಭಾವಕ್ಕೆ ಅನ್ಯಥಾಭಾವವು[3], ತನ್ನ (ಸ್ವರೂಪ)ದಿಂದ ಜಾರುವದು ಹೇಗೂ ಆಗಲಾರದು, ಬೆಂಕಿಗೆ ಬಿಸಿಯು ಹೇಗೆ (ತಪ್ಪಲೇ ಆರದೋ ಹಾಗೆ)

ಸ್ವಭಾವೇನಾಮೃತೋ ಯಸ್ಯ ಭಾವೋ ಗಚ್ಛತಿ ಮರ್ತ್ಯತಾಮ್ ।
ಕೃತಕೇನಾಮೃತಸ್ತಸ್ಯ ಕಥಂ ಸ್ಥಾಸ್ಯತಿ ನಿಶ್ಚಲಃ ॥೨೨॥

೨೨. ಯಾವನ (ಮತದಲ್ಲಿ) ಸ್ವಭಾವದಿಂದ ಅಮೃತವಾದ ಭಾವವು ಮರ್ತ್ಯತ್ವವನ್ನು ಹೊಂದುವದೋ, ಅವನ (ಮತದಲ್ಲಿ) ಕೃತಕವಾಗಿ ಅಮೃತವಾದದ್ದು ನಿಶ್ಚಲವಾಗಿ ಹೇಗೆ ನಿಲ್ಲುವದು ?

(ಭಾಷ್ಯ)

೧೬೮. ಯಸ್ಯ ಪುನರ್ಮಾದಿನಃ ಸ್ವಭಾವೇನ ಅಮೃತಃ ಭಾವಃ ಮರ್ತ್ಯತಾಂ

---

1. ಸ್ವಭಾವದಿಂದ ನಾಶವಾಗತಕ್ಕದ್ದಲ್ಲದ್ದು.

2. ನಾಶವಾಗುವ ಸ್ವಭಾವವುಳ್ಳದ್ದು.

3. ಮತ್ತೊಂದು ಸ್ವರೂಪವನ್ನು ಪಡೆಯುವದು, ಮಾರ್ಪಾಡು.

ಗಚ್ಛತಿ ಪರಮಾರ್ಥತಃ ಜಾಯತೇ, ತಸ್ಯ ಪ್ರಾಕ್ ಉತ್ಪತ್ತೇಃ ಸ ಭಾವಃ ಸ್ವಭಾವತಃ ಅಮೃತಃ ಇತಿ ಪ್ರತಿಜ್ಞಾ ಮೃಷೈವ । ಕಥಂ ತರ್ಹಿ ? ಕೃತಕೇನ ಅಮೃತಃ ತಸ್ಯ ಸ್ವಭಾವಃ ಕೃತಕೇನ ಅಮೃತಃ । ಸ ಕಥಂ ಸ್ಥಾಸ್ಯತಿ ನಿಶ್ಚಲಃ ಅಮೃತಸ್ವಭಾವತಯಾ ? ನ ಕಥಂಚಿತ್ ಸ್ಥಾಸ್ಯತಿ । ಆತ್ಮಜಾತಿವಾದಿನಃ ಸರ್ವಥಾ[1] ಅಜಂ ನಾಮ ನಾಸ್ತ್ಯೇವ, ಸರ್ವ ಮೇತತ್ ಮರ್ತ್ಯಮ್ । ಅತಃ ಅನಿರ್ಮೋಕ್ಷಪ್ರಸಙ್ಗಃ ಇತ್ಯಭಿಪ್ರಾಯಃ ।

(ಭಾಷ್ಯಾರ್ಥ)

ಆದರೆ ಯಾವ ವಾದಿಯ (ಮತದಲ್ಲಿ) ಸ್ವಭಾವದಿಂದ ಅಮೃತವಾಗಿರುವ ಭಾವವು ಮರ್ತ್ಯತ್ವವನ್ನು ಹೊಂದುತ್ತದೆಯೋ, ನಿಜವಾಗಿ ಹುಟ್ಟುತ್ತದೆಯೋ[2] ಆತನ (ಮತದಲ್ಲಿ) ಹುಟ್ಟುವದಕ್ಕೆ ಮೊದಲು ಆ ವಸ್ತುಸ್ವಭಾವದಿಂದ ಅಮೃತ(ವಾಗಿರುತ್ತದೆ) ಎಂಬ ಪ್ರತಿಜ್ಞೆಯು ಸುಳ್ಳೇ. ಮತ್ತೇನೆಂದರೆ ಕೃತಕವಾಗಿ ಅಮೃತವು, ಅದರ ಸ್ವಭಾವವು ಕೃತಕವಾಗಿ[3] ಅಮೃತವಾಗಿರುತ್ತದೆ. ಅದು ನಿಶ್ಚಲವಾಗಿ ಅಮೃತಸ್ವಭಾವದಿಂದ ಹೇಗೆ ನಿಂತುಕೊಳ್ಳುವದು ? ಹೇಗೂ ನಿಂತುಕೊಳ್ಳಲಾರದು. ಆತ್ಮನಿಗೆ ಹುಟ್ಟು (ಉಂಟೆಂಬ)ವಾದಿಯ (ಮತದಲ್ಲಿ) ಹೇಗೂ ಅಜವೆಂಬುದು ಇಲ್ಲವೇ ಇಲ್ಲ. ಇದೆಲ್ಲವೂ ಮರ್ತ್ಯವೇ. ಆದ್ದರಿಂದ (ಈ ಮತದಲ್ಲಿ) ಮೋಕ್ಷವೇ ಇಲ್ಲವೆಂದಾಗುವದು ಎಂದು ಅಭಿಪ್ರಾಯ.

## ಅಜಾತಿವಾದದಲ್ಲಿ ಸೃಷ್ಟಿಶ್ರುತಿಯ ತಾತ್ಪರ್ಯ

(ಭಾಷ್ಯ)

೧೬೯. ನನು ಅಜಾತಿವಾದಿನಃ ಸೃಷ್ಟಿಪ್ರತಿಪಾದಿಕಾ ಶ್ರುತಿಃ ನ ಸಙ್ಗಚ್ಛತೇ[4] । ಬಾಢಮ್, ವಿದ್ಯತೇ ಸೃಷ್ಟಿಪ್ರತಿಪಾದಿಕಾ ಶ್ರುತಿಃ । ಸಾ ತು ಅನ್ಯಪರಾ । "ಉಪಾಯಃ ಸೋಽವತಾರಾಯ." (೩-೧೫) ಇತಿ ಅವೋಚಾಮ । ಇದಾನೀಮ್ ಉಕ್ತೇಽಪಿ ಪರಿಹಾರೇ ಪುನಶ್ಚೋದ್ಯಪರಿಹಾರೌ ವಿವಕ್ಷಿತಾರ್ಥಂ ಪ್ರತಿ ಸೃಷ್ಟಿಶ್ರುತ್ಯಕ್ಷರಾಣಾಮ್ ಆನುಲೋಮ್ಯವಿರೋಧಶಙ್ಕಾಮಾತ್ರಪರಿಹಾರಾರ್ಥೌ ।।

1. " ಸರ್ವದಾ" ಆ।। ಕಾ।। ಮೈ।।

2. ನಿಜವಾಗಿ ಹುಟ್ಟುವದನ್ನು ಇಲ್ಲಿ ಖಂಡಿಸಿದೆ, ಮಾಯೆಯಿಂದ ಹುಟ್ಟುವದನ್ನಲ್ಲ.

3. ತೋರಿಕೆಯಿಂದ; ಪರಮಾರ್ಥವಾಗಿ ಅದು ಮರ್ತ್ಯವೇ.

4. "ಸಙ್ಗಚ್ಛತೇ ಪ್ರಾಮಾಣ್ಯಮ್" ಎಂಬ ಆ।। ಕಾ।। ಪಾಠದಲ್ಲಿ "ಪ್ರಾಮಾಣ್ಯಮ್" ಬೇಕಾಗಿಲ್ಲ.

(ಭಾಷ್ಯಾರ್ಥ)

(ಆಕ್ಷೇಪ) :- (ಯಾವದೂ) ಹುಟ್ಟುವದಿಲ್ಲವೆಂಬ ವಾದಿಯ (ಮತದಲ್ಲಿ) ಸೃಷ್ಟಿಯನ್ನು ಹೇಳುವ ಶ್ರುತಿಗೆ (ಪ್ರಾಮಾಣ್ಯವು) ಹೊಂದುವದಿಲ್ಲವಲ್ಲ !

(ಪರಿಹಾರ) :- ನಿಜ, ಸೃಷ್ಟಿಯನ್ನು ಹೇಳುವ ಶ್ರುತಿ(ಯೂ) ಇದೆ. ಆದರೆ ಅದಕ್ಕೆ ತಾತ್ಪರ್ಯವು ಬೇರೆ. ಅದು ತತ್ತ್ವವನ್ನು (ಮೆಲ್ಲಗೆ) ತಂದು ತಿಳಿಸುವದಕ್ಕೆ ಉಪಾಯವೆಂದು (ಹಿಂದೆ ೩-೧೫ರಲ್ಲಿ) ಹೇಳಿರುತ್ತೇವೆ.

ಹೀಗೆ ಪರಿಹಾರವನ್ನು ಹೇಳಿದ್ದರೂ ಈಗ ಮತ್ತೆ ಆಕ್ಷೇಪಪರಿಹಾರಗಳನ್ನು (ಇಲ್ಲಿ ಹೇಳಿರುವದು) (ನೀವು) ಹೇಳಬೇಕೆಂಬಿರುವ (ಅಜಾತಿಯೆಂಬ) ವಿಷಯಕ್ಕೆ ಸೃಷ್ಟಿ ಶ್ರುತಿಯ ಅಕ್ಷರಗಳು ಹೊಂದುಗೆಯಾಗದೆ ವಿರುದ್ಧವಾಗಿರುವವಲ್ಲ !- ಎಂಬ ಶಂಕೆಯನ್ನು ಮಾತ್ರ ಪರಿಹರಿಸುವದಕ್ಕೆ.

ಭೂತತೋಽಭೂತತೋ ವಾಪಿ ಸೃಜ್ಯಮಾನೇ ಸಮಾ ಶ್ರುತಿಃ ।
ನಿಶ್ಚಿತಂ ಯುಕ್ತಿಯುಕ್ತಂ ಚ ಯತ್ ತದ್ಭವತಿ ನೇತರತ್ ॥೨೩॥

೨೩. ಭೂತವಾಗಿ ಅಥವಾ ಅಭೂತವಾಗಿ ಸೃಷ್ಟಿಯಾಗಿದ್ದರೂ ಶ್ರುತಿಯು ಸಮವಾಗಿರುತ್ತದೆ. ಯಾವದು ನಿಶ್ಚಿತವಾಗಿಯೂ ಯುಕ್ತಿಯುಕ್ತವಾಗಿಯೂ (ಇರುವದೋ) ಅದು ಆಗುವದೇ ಹೊರತು ಉಳಿದದ್ದು (ಆಗುವ)ದಿಲ್ಲ.

(ಭಾಷ್ಯ)

೧೭೦. ಭೂತತಃ ಪರಮಾರ್ಥತಃ ಸೃಜ್ಯಮಾನೇ ವಸ್ತುನಿ ಅಭೂತತೋ ಮಾಯಯಾ ವಾ ಮಾಯಾಮಿವಾ ಇವ ಸೃಜ್ಯಮಾನೇ ವಸ್ತುನಿ ಸಮಾ ತುಲ್ಯಾ ಸೃಷ್ಟಿ ಶ್ರುತಿಃ । ನನು ಗೌಣಮುಖ್ಯಯೋಃ ಮುಖ್ಯೇ ಶಬ್ದಾರ್ಥಪ್ರತಿಪತ್ತಿಃ ಯುಕ್ತಾ । ನ । ಅನ್ಯಥಾ ಸೃಷ್ಟೇಃ ಅಪ್ರಸಿದ್ಧತ್ವಾತ್ । ನಿಷ್ಪ್ರಯೋಜನತ್ವಾಚ್ಚ ಇತಿ ಅವೋಚಾಮ । ಅವಿದ್ಯಾ (ಸೃಷ್ಟಿ)ವಿಷಯೈವ ಸರ್ವಾ ಗೌಣೀ ಮುಖ್ಯಾ ಚ ಸೃಷ್ಟಿಃ ನ ಪರಮಾರ್ಥತಃ । "ಸಬಾಹ್ಯಾಭ್ಯನ್ತರೋ ಹ್ಯಜಃ" (ಮುಂ. ೨-೧-೨) ಇತಿ ಶ್ರುತೇಃ । ತಸ್ಮಾತ್ ಶ್ರುತ್ಯಾ ನಿಶ್ಚಿತಂ ಯತ್ ಏಕಮೇವಾದ್ವಿತೀಯಮ್, ಅಜಮ್, ಅಮೃತಮ್-ಇತಿ । ಯುಕ್ತಿಯುಕ್ತಂ ಚ ಯುಕ್ತ್ಯಾ ಚ ಸಮ್ಪನ್ನಂ ತದೇವ ಇತಿ ಅವೋಚಾಮ ಪೂರ್ವೈರ್ಗ್ರನ್ಥೈಃ । ತದೇವ ಶ್ರುತ್ಯರ್ಥೋ ಭವತಿ ನೇತರತ್ ಕದಾಚಿದಪಿ ॥

(ಭಾಷ್ಯಾರ್ಥ)

ಭೂತವಾಗಿ ಎಂದರೆ ನಿಜವಾಗಿ ವಸ್ತುವು ಸೃಷ್ಟಿಯಾಗಲಿ ಅಭೂತವಾಗಿ ಎಂದರೆ

ಮಾಯಾವಿಯಿಂದ ಆಗುವಂತೆ ಮಾಯೆಯಿಂದ ವಸ್ತುಸೃಷ್ಟಿಯಾಗಲಿ, (ಎರಡರಲ್ಲಿಯೂ) ಸೃಷ್ಟಿಶ್ರುತಿಯು ಸಮವಾಗಿರುವದು, ಒಂದೇ ಆಗಿರುವದು.

(ಆಕ್ಷೇಪ) :- ಗೌಣಮುಖ್ಯಗಳಲ್ಲಿ, ಮುಖ್ಯ(ವಾದ ಅರ್ಥದಲ್ಲಿಯೇ) ಶಬ್ದಾರ್ಥವೆಂದು ತಿಳಿಯುವದು ಯುಕ್ತವಲ್ಲವೆ[1] ?

(ಸಮಾಧಾನ) :- ಹಾಗಲ್ಲ. ಏಕೆಂದರೆ ಬೇರೆಯ ಬಗೆಯ ಸೃಷ್ಟಿಯೇ ಇಲ್ಲ[2] ; (ಸೃಷ್ಟಿಶ್ರುತಿಗೆ ಆ ಪಕ್ಷದಲ್ಲಿ) ಯಾವ ಪ್ರಯೋಜನವೂ ಇಲ್ಲ ಎಂದು (ಹಿಂದೆ ೧೫ನೆಯ ಕಾರಿಕೆಯಲ್ಲಿ ಹೇಳಿರುತ್ತೇವೆ. ಗೌಣಸೃಷ್ಟಿ, ಮುಖ್ಯಸೃಷ್ಟಿ-ಎಲ್ಲವೂ ಅವಿದ್ಯಾವಿಷಯವಾದದ್ದೇ ಹೊರತು ನಿಜವಾದದ್ದಲ್ಲ. ''ಹೊರಗೂ ಒಳಗೂ ಜನ್ಮವಿಲ್ಲದವನು'' (ಮುಂ. ೨-೧-೨) ಎಂಬ ಶ್ರುತಿಯ (ಪ್ರಮಾಣ)ದಿಂದ (ಹೀಗೆಂದು ಸಿದ್ಧವಾಗುವದು). ಆದ್ದರಿಂದ ಯಾವದು ''ಎರಡನೆಯದಿಲ್ಲದ ಒಂದೇ'' ''ಜನ್ಮರಹಿತವಾದದ್ದು'' ''ಅಮೃತವಾದದ್ದು'' ಎಂದು ಶ್ರುತಿಯಿಂದ ನಿಶ್ಚಿತವಾಗಿರುವದೋ (ಯಾವದು) ಯುಕ್ತಿಯುಕ್ತವೂ (ಆಗಿರುವದೋ)-ಯುಕ್ತಿಯಿಂದ ಕೂಡಿರುವದು ಅದೇ ಎಂದು ಹಿಂದಿನ ಶ್ಲೋಕಗಳಲ್ಲಿ[3] ಹೇಳಿರುತ್ತೇವಷ್ಟೆ-ಅದೇ[4] ಶ್ರುತ್ಯರ್ಥವಾಗುವದೇ ಹೊರತು ಮತ್ತೊಂದು ಎಂದಿಗೂ (ಶ್ರುತ್ಯರ್ಥವಾಗ)ಲಾರದು.

(ಭಾಷ್ಯ)

೧೭೧. ಕಥಂ ಶ್ರುತಿನಿಶ್ಚಯಃ ಇತಿ ? ಆಹ-

(ಭಾಷ್ಯಾರ್ಥ)

ಶ್ರುತಿಯ ನಿಶ್ಚಯವು ಹೇಗೆ ?-ಎಂದರೆ (ಕಾರಿಕಾಕಾರರು) ಹೇಳುತ್ತಾರೆ.

**ನೇಹ ನಾನೇತಿ ಚಾಮ್ನಾಯಾದಿನ್ದ್ರೋ ಮಾಯಾಭಿರಿತ್ಯಪಿ ।**
**ಅಜಾಯಮಾನೋ ಬಹುಧಾ ಮಾಯಯಾ ಜಾಯತೇ ತು ಸಃ ॥೨೪॥**

೨೪. ''ಇಲ್ಲಿ ನಾನಾ ಇಲ್ಲ'' ಎಂಬ ಆಮ್ನಾಯದಿಂದಲೂ ''ಇಂದ್ರನು ಮಾಯೆಗಳಿಂದ'' ಎಂಬ ಶಾಸ್ತ್ರದಿಂದಲೂ ಹುಟ್ಟದೆ ಇರುವನಾಗಿಯೇ ಅವನು ಬಹು ಪ್ರಕಾರವಾಗಿ ಮಾಯೆಯಿಂದಲೇ ಹುಟ್ಟುವನು.

---

1. ಶಾ. ಭಾ. ೩. ೨. ೧. '' ಮುಖ್ಯಗೌಣಯೋಃ ಮುಖ್ಯೇ ಕಾರ್ಯಸಂಪ್ರತ್ಯಯಃ''
2. ಮಾಯಿಕವಲ್ಲದ ಮುಖ್ಯ ಸೃಷ್ಟಿ ಇದ್ದರೆತಾನೆ ನಾವು ಹೇಳುವದು ಗೌಣವಾದೀತು ?
3. ಆಕಾಶದೃಷ್ಟಾಂತದ ಕಾರಿಕೆಗಳಲ್ಲಿ.
4. ಜನ್ಮರಹಿತವಾದ ಅದ್ವೈತತತ್ತ್ವವೇ.

(ಭಾಷ್ಯ)

೧೭೨. ಯದಿ ಹಿ ಭೂತತ ಏವ ಸೃಷ್ಟಿಃ ಸ್ಯಾತ್, ತತಃ ಸತ್ಯಮೇವ ನಾನಾ ವಸ್ತು ಇತಿ ತದಭಾವಪ್ರದರ್ಶನಾರ್ಥಮ್[1] ಆಮ್ನಾಯಃ ನ ಸ್ಯಾತ್ । ಅಸ್ತಿ ಚ ''ನೇಹ ನಾನಾಸ್ತಿ ಕಿಂಚನ'' (ಕ. ೨-೧-೧೧) ಇತ್ಯಾದಿರಾಮ್ನಾಯಃ ದ್ವೈತಭಾವಪ್ರತಿಷೇಧಾರ್ಥಃ । ತಸ್ಮಾತ್ ಆತ್ಮೈಕತ್ವಪ್ರತಿಪತ್ತ್ಯರ್ಥಾ ಕಲ್ಪಿತಾ ಸೃಷ್ಟಿಃ ಅಭೂತೈವ ಪ್ರಾಣಸಂವಾದವತ್ । ''ಇಂದ್ರೋ ಮಾಯಾಭಿಃ'' (ಬೃ. ೨-೫-೧೯) ಇತಿ ಅಭೂತಾರ್ಥಪ್ರತಿಪಾದಕೇನ ಮಾಯಾಶಬ್ದೇನ ವ್ಯಪದೇಶಾತ್ । ನನು ಪ್ರಜ್ಞಾವಚನೋ ಮಾಯಾಶಬ್ದಃ । ಸತ್ಯಮ್ । ಇನ್ದ್ರಿಯಪ್ರಜ್ಞಾಯಾ ಅವಿದ್ಯಾಮಯತ್ವೇನ ಮಾಯಾತ್ವಾಭ್ಯುಪಗಮಾತ್ ಅದೋಷಃ । ಮಾಯಾಭಿಃ ಇನ್ದ್ರಿಯಪ್ರಜ್ಞಾಭಿಃ ಅವಿದ್ಯಾರೂಪಾಭಿಃ ಇತ್ಯರ್ಥಃ । ''ಅಜಾಯಮಾನೋ ಬಹುಧಾ ವಿಜಾಯತೇ'' (ತೈ. ಆ. ೩-೧೩) ಇತಿ ಶ್ರುತೇಃ । ತಸ್ಮಾತ್ ಮಾಯಯೈವ ಜಾಯತೇ ತು ಸಃ । ತುಶಬ್ದಃ ಅವಧಾರಣಾರ್ಥಃ 'ಮಾಯಯೈವ' ಇತಿ । ನ ಹಿ ಅಜಾಯಮಾನತ್ವಂ ಬಹುಧಾಜನ್ಮ ಚ ಏಕತ್ರ ಸಮ್ಭವತಿ । ಅಗ್ನಾವಿವ ಶೈತ್ಯಮ್ ಔಷ್ಣ್ಯಂ ಚ । ಫಲಪತ್ತ್ವಾಚ್ಚ ಆತ್ಮೈಕತ್ವದರ್ಶನಮೇವ ಶ್ರುತಿನಿಶ್ಚಿತೋಽರ್ಥಃ । ''ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ ''(ಈ ೭) ಇತ್ಯಾದಿ ಮನ್ತ್ರವರ್ಣಾತ್,'' ಮೃತ್ಯೋಃ ಸ ಮೃತ್ಯುಮಾಪ್ನೋತಿ'' (ಕ. ೩-೧-೧೦) ಇತಿ ನಿನ್ದಿತತ್ವಾಚ್ಚ ಸೃಷ್ಟ್ಯಾದಿಭೇದದೃಷ್ಟೇಃ ॥

(ಭಾಷ್ಯಾರ್ಥ)

ಏಕೆಂದರೆ ನಿಜವಾಗಿಯೂ ಸೃಷ್ಟಿಯಾಗಿರುವದಾದರೆ ಆಗ ಬೇರೆಬೇರೆಯ (ರೂಪದ) ವಸ್ತು ಸತ್ಯವೇ ಆಗುವದರಿಂದ ಅದು ಇಲ್ಲ ಎಂದು ತಿಳಿಸುವದಕ್ಕಾಗಿ ಶಾಸ್ತ್ರವು ಇರುತ್ತಿರಲಿಲ್ಲ. ಆದರೆ ಇಲ್ಲಿ ''ಒಂದಿಷ್ಟೂ ನಾನಾತ್ವವಿರುವದಿಲ್ಲ'' (ಕ. ೨-೧-೧೧) ಎಂದು ದ್ವೈತವಸ್ತುವನ್ನು ಅಲ್ಲಗಳೆಯುವದಕ್ಕಾಗಿ (ಹೊರಟಿರುವ) ಶಾಸ್ತ್ರವು ಇದೆ. ಆದ್ದರಿಂದ ಪ್ರಾಣಸಂವಾದದಂತೆ ಸೃಷ್ಟಿಯೂ, ಆತ್ಮೈಕತ್ವವನ್ನು ತಿಳಿಯುವದಕ್ಕೆ (ಉಪಾಯವಾಗಿ) ಕಲ್ಪಿತವಾಗಿದೆ, ನಿಜವಲ್ಲವೇ ಅಲ್ಲ. ''ಇಂದ್ರನು ಮಾಯೆಗಳಿಂದ (ಬ ಾಪನಾಗಿ ತೋರುತ್ತಾನೆ)'' (ಬೃ. ೨-೫-೧೯) ಎಂದು (ನಿಜವಾಗಿ) ಇಲ್ಲದ ವಸ್ತುವನ್ನು ತಿಳಿಸುವ ''ಮಾಯಾ'' ಎಂಬ ಶಬ್ದದಿಂದ (ಸೃಷ್ಟಿಯನ್ನು ಶ್ರುತಿಯಲ್ಲಿ) ಕರೆದಿರುತ್ತದೆ.

1. 'ಪ್ರದರ್ಶನಾರ್ಥಃ' ವಾ॥

(ಆಕ್ಷೇಪ) :- ಮಾಯಾ ಎಂಬ ಮಾತಿಗೆ ಪ್ರಜ್ಞೆ ಎಂದು ಅರ್ಥವಲ್ಲವೆ[1] ?

(ಪರಿಹಾರ) :- ನಿಜ. ಇಂದ್ರಿಯದ ಅರಿವು ಅವಿದ್ಯಾಮಯವಾಗಿರುವದರಿಂದ[2] (ಇದು) ಇದು ಮಾಯೆ ಎಂದು (ನಾವು) ಒಪ್ಪಿರುವದರಿಂದ (ಇದರಲ್ಲಿ ಏನೂ) ತಪ್ಪಿಲ್ಲ. ಮಾಯೆಗಳಿಂದ ಎಂದರೆ ಅವಿದ್ಯಾರೂಪವಾದ ಇಂದ್ರಿಯದ ಅರಿವುಗಳಿಂದ ಎಂದರ್ಥ[3] ''ಹುಟ್ಟಿದೆ ಇರುವವನಾಗಿ ಬಹುಪ್ರಕಾರದಿಂದ ಹುಟ್ಟುತ್ತಾನೆ'' (ತೈ. ಆ. ೩-೧೩) ಎಂಬ ಶ್ರುತಿಯ (ಪ್ರಮಾಣ)ದಿಂದ (ಇದು ಸಿದ್ಧವಾಗುತ್ತದೆ). ಆದ್ದರಿಂದ ಮಾಯೆಯಿಂದಲೇ ಅವನು ಹುಟ್ಟುತ್ತಾನೆ. (ಕಾರಿಕೆಯಲ್ಲಿರುವ) ತುಶಬ್ದವು 'ಮಾಯೆಯಿಂದಲೇ' ಎಂದು ಒತ್ತಿಹೇಳುವದಕ್ಕಾಗಿ (ಬಂದಿರುತ್ತದೆ). ಏಕೆಂದರೆ ಹುಟ್ಟದಿರುವದೂ ಬಹುಪ್ರಕಾರವಾಗಿ ಹುಟ್ಟುವದೂ, ಬೆಂಕಿಯಲ್ಲಿ ತಂಪೂ ಬಿಸಿಯೂ ಹೇಗೆ (ಇರುವದು ಹೊಂದಲಾರದೋ ಹಾಗೆ ಎರಡೂ) ಒಂದರಲ್ಲಿಯೇ ಹೊಂದಲಾರದು[4]. ಆತ್ಮೈಕತ್ವದರ್ಶನಕ್ಕೆ ಫಲವನ್ನು (ಹೇಳಿರುವದರಿಂದಲೂ[5] ಇದೇ) ಶ್ರುತಿನಿಶ್ಚಿತವಾದ ಅರ್ಥವು. ''ಏಕತ್ವವನ್ನು ಕಂಡುಕೊಂಡಾತನಿಗೆ ಅಲ್ಲಿ ಯಾವ ಮೋಹವು, ಯಾವ ಶೋಕವು ?'' (ಈ. ೭) ಎಂದು ಮುಂತಾಗಿ ಮಂತ್ರವರ್ಣ(ವಿರುವ)ದರಿಂದ (ಈ ಜ್ಞಾನಕ್ಕೆ ಫಲವತ್ತ್ವವು ಸಿದ್ಧವಾಗಿರುತ್ತದೆ). ''(ಯಾವನು ಇಲ್ಲಿ ನಾನಾತ್ವವಿದ್ದಂತೆ ಕಾಣುವನೋ) ಅವನು ಮೃತ್ಯುವಿನಮೇಲೆ ಮೃತ್ಯುವನ್ನು ಪಡೆಯುತ್ತಾನೆ'' (ಕ. ೨-೧-೧೦) ಎಂದು ಸೃಷ್ಟಿಯೇ ಮುಂತಾದ ಭೇದದೃಷ್ಟಿಯನ್ನು ನಿಂದಿಸಿರುವದರಿಂದಲೂ[6] (ಇದೇ ಶ್ರುತಿಯ ನಿಶ್ಚಯವೆಂದು ಏರ್ಪಡುತ್ತದೆ).

ಸಮ್ಭೂತೇರಪವಾದಾಚ್ಚ ಸಮ್ಭವಃ ಪ್ರತಿಷಿಧ್ಯತೇ ।
ಕೋ ನ್ವೇನಂ ಜನಯೇದಿತಿ ಕಾರಣಂ ಪ್ರತಿಷಿಧ್ಯತೇ ॥೨೫॥

---

1. ಯಾಸ್ಕರ ನಿಘಂಟುವಿನಲ್ಲಿ 'ಮಾಯಾ ' ಎಂಬ ಶಬ್ದವನ್ನು ಜ್ಞಾನದ ಹೆಸರುಗಳಲ್ಲಿ ಒಂದಾಗಿ ಹೇಳಿದೆ.

2. ತಪ್ಪುತಿಳಿವಳಿಕೆಯಾಗಿರುವದರಿಂದ, ಪರಮಾರ್ಥದಲ್ಲಿಲ್ಲದ ಭೇದವನ್ನು ತಿಳಿಸುವದರಿಂದ.

3. ಆತ್ಮನು ಇಂದ್ರಿಯದರಿವುಗಳಿಂದ ಬಹುಪ್ರಕಾರವಾಗಿ ಕಾಣುತ್ತಾನೆ. ಎಂದು ಶ್ರುತಿಯ ಅರ್ಥ.

4. ಆದ್ದರಿಂದ ಹುಟ್ಟುವದು ಪರಮಾರ್ಥವಲ್ಲ. 5. ಫಲವುಳ್ಳ, ಶ್ರುತಿಗೆ ಫಲವನ್ನು ಹೇಳದಿರುವ ವಾಕ್ಯವು ಅಂಗವೆಂಬುದು ಮಿಮಾಂಸಕರ ಯುಕ್ತಿ ; ಏಕತ್ವಕ್ಕೆ ಫಲವಿದೆ, ಸೃಷ್ಟಿಗೆ ಫಲವಿಲ್ಲ. ಆದ್ದರಿಂದ ಸೃಷ್ಟಿವಾಕ್ಯವು ಏಕತವಾಕ್ಯಕ್ಕೆ ಅಂಗವಾಯಿತು.

6. ನಾನಾತ್ವವನ್ನು ನಿಂದಿಸಿರುವದರಿಂದ ಅದು ಶ್ರುತ್ಯರ್ಥವಾಗಲಾರದು.

೨೫. ಸಂಭೂತಿಯನ್ನು ಅಲ್ಲಗಳೆದಿರುವದರಿಂದಲೂ ಸಂಭವವನ್ನು ಇಲ್ಲವೆಂದಿರುತ್ತದೆ. "ಈತನನ್ನು ಯಾರುತಾನೆ ಹುಟ್ಟಿಸಿಯಾನು ?" ಎಂದು ಕಾರಣವನ್ನು ಇಲ್ಲವೆಂದಿರುತ್ತದೆ.

(ಭಾಷ್ಯ)

೧೭೩. "ಅನ್ಧಂ ತಮಃ ಪ್ರವಿಶನ್ತಿ ಯೇ ಸಮ್ಭೂತಿಮುಪಾಸತೇ" (ಈ. ಮಾ. ೯) ಇತಿ ಸಂಭೂತೇಃ ಉಪಾಸ್ಯತ್ವಾಪವಾದಾತ್ ಸಂಭವಃ ಪ್ರತಿಷಿಧ್ಯತೇ । ನ ಹಿ ಪರಮಾರ್ಥತಃ ಸಮ್ಭೂತಾಯಾಂ[1] ಸಮ್ಭೂತೌ ತದಪವಾದಃ ಉಪಪದ್ಯತೇ । ನನು ವಿನಾಶೇನ ಸಮ್ಭೂತೇಃ ಸಮುಚ್ಚಯವಿಧ್ಯರ್ಥಃ ಸಮ್ಭೂತ್ಯಪವಾದಃ । ಯಥಾ "ಅನ್ಧಂ ತಮಃ ಪ್ರವಿಶನ್ತಿ ಯೇಽವಿದ್ಯಾಮುಪಾಸತೇ" (ಈ. ಮಾ. ೧೨) ಇತಿ । ಸತ್ಯಮೇವ ದೇವತಾದರ್ಶನಸ್ಯ ಸಮ್ಭೂತಿವಿಷಯಸ್ಯ ವಿನಾಶಶಬ್ದವಾಚ್ಯಸ್ಯ ಚ[2] ಕರ್ಮಣಃ ಸಮುಚ್ಚಯವಿಧಾನಾರ್ಥಃ ಸಮ್ಭೂತ್ಯಪವಾದಃ । ತಥಾಪಿ ವಿನಾಶಾಖ್ಯಸ್ಯ ಕರ್ಮಣಃ ಸ್ವಾಭಾವಿಕಾತ್ಜ್ಞಾನಪ್ರವೃತ್ತಿರೂಪಸ್ಯ ಮೃತ್ಯೋಃ ಅತಿತರಣಾರ್ಥತ್ವವತ್ ದೇವತಾದರ್ಶನ ಕರ್ಮಸಮುಚ್ಚಯಸ್ಯ ಪುರುಷಸಂಸ್ಕಾರಾರ್ಥಸ್ಯ ಕರ್ಮಫಲರಾಗಪ್ರವೃತ್ತಿರೂಪಸ್ಯ ಸಾಧ್ಯಸಾಧನೈಷಣಾದ್ವಯಲಕ್ಷಣಸ್ಯ ಮೃತ್ಯೋಃ ಅತಿತರಣಾರ್ಥತ್ವಮ್ । ಏವಂ ಹಿ ಏಷಣಾದ್ವಯರೂಪಾತ್ ಮೃತ್ಯೋಃ ಅಶುದ್ಧೇಃ ವಿಯುಕ್ತಃ ಪುರುಷಃ ಸಂಸ್ಕೃತಃ ಸ್ಯಾತ್ । ಅತಃ ಮೃತ್ಯೋಃ ಅತಿತರಣಾರ್ಥಾ ದೇವತಾದರ್ಶನಕರ್ಮಸಮುಚ್ಚಯಲಕ್ಷಣಾ ಹಿ ಅವಿದ್ಯಾ । ಏವಮೇವ ಏಷಣಾಲಕ್ಷಣಾತ್[3] ಅವಿದ್ಯಯಾ[4] ಮೃತ್ಯೋಃ ಅತಿತೀರ್ಣಸ್ಯ ವಿರಕ್ತಸ್ಯ ಉಪನಿಷಚ್ಛಾಸ್ತ್ರಾರ್ಥಾಲೋಚನಪರಸ್ಯ ನಾನ್ತರೀಯಕೀ ಪರಮಾತ್ಮೈಕತ್ವವಿದ್ಯೋತ್ಪತ್ತಿಃ ಇತಿ ಪೂರ್ವಭಾವಿನೀಮ್ ಅವಿದ್ಯಾಮ್ ಅಪೇಕ್ಷ್ಯ ಪಶ್ಚಾದ್ಭಾವಿನೀ ಬ್ರಹ್ಮವಿದ್ಯಾ ಅಮೃತತ್ವಸಾಧನಾ ಏಕೇನ ಪುರುಷೇಣ ಸಮ್ಬಧ್ಯಮಾನಾ ಅವಿದ್ಯಯಾ ಸಮುಚ್ಚೀಯತೇ ಇತ್ಯುಚ್ಯತೇ । ಅತಃ ಅನ್ಯಾರ್ಥತ್ವಾತ್ ಅಮೃತತ್ವಸಾಧನಂ ಬ್ರಹ್ಮವಿದ್ಯಾಮ್ ಅಪೇಕ್ಷ್ಯ ನಿನ್ಯಾರ್ಥ ಏವ ಭವತಿ ಸಮ್ಭೂತ್ಯಪವಾದಃ । ಯದ್ಯಪಿ ಅಶುದ್ಧಿವಿಯೋಗಹೇತುಃ । ಅತನ್ನಿಷ್ಠತ್ವಾತ್ । ಅತ ಏವ ಸಮ್ಭೂತೇರಪವಾದಾತ್ ಸಮ್ಭೂತೇಃ

---

1. 'ಪರಮಾರ್ಥಸಮ್ಭೂತಾಯಾಂ' ಪಾ॥

2. ಆ॥ ಪಾಠದಲ್ಲಿಲ್ಲವಿದ್ದರೂ ಚಕಾರವೂ ಇಲ್ಲಿ ಬೇಕು.

3. 'ಏವಮೇವ ಏಷಣಾದ್ವಯಲಕ್ಷಣಾವಿದ್ಯಾಯಾಃ' ಪಾ॥, "ಏವಮೇವ ಏಷಣಾ ಲಕ್ಷಣಾ ವಿದ್ಯಾಯಾಃ" ಕಾ॥

4. " ಅವಿದ್ಯಾಯಾಃ " ಎಂಬ ಮುದ್ರಿತಪಾಠಕ್ಕಿಂತ ಇದೇ ಮೇಲು.

ಅಪೇಕ್ಷಿಕಮೇವ ಸತ್ತ್ವಮ್ ಇತಿ ಪರಮಾರ್ಥಸದಾತ್ಮೈಕತ್ವಮ್ ಅಪೇಕ್ಷ್ಯ ಅಮೃತಾಖ್ಯಃ ಸಮ್ಭವಃ ಪ್ರತಿಷಿಧ್ಯತೇ ॥

(ಭಾಷ್ಯಾರ್ಥ).

"ಯಾರು ಸಂಭೂತಿಯನ್ನು ಉಪಾಸನೆಮಾಡುತ್ತಾರೋ ಅವರು ಅಂಧಂ ತಮಸ್ಸನ್ನು ಪ್ರವೇಶಿಸುತ್ತಾರೆ." (ಈ. ಮಾ. ೯) ಎಂದು ಸಂಭೂತಿಯನ್ನು ಉಪಾಸನೆ ಮಾಡತಕ್ಕದ್ದಲ್ಲವೆಂದು ಹೇಳಿರುವದರಿಂದ ಸಂಭವವನ್ನು ಇಲ್ಲವೆಂದಿರುತ್ತದೆ. ಸಂಭೂತಿಯು ನಿಜವಾಗಿ ಹುಟ್ಟಿದ್ದರೆ ಅದನ್ನು ಅಲ್ಲಗಳೆಯುವದು ಹೊಂದಲೇ ಆರದು.

(ಆಕ್ಷೇಪ) :- (ಇಲ್ಲಿ) ಸಂಭೂತಿಗೂ ವಿನಾಶಕ್ಕೂ ಸಮುಚ್ಚಯವನ್ನು ವಿಧಿಸುವದಕ್ಕಲ್ಲವೆ, ಸಂಭೂತಿಯನ್ನು ಅಪವಾದಮಾಡಿರುವದು[1] ? ಹೇಗೆ (ಮುಂದೆ) "ಯಾರು ಅವಿದ್ಯೆಯನ್ನು ಉಪಾಸನೆಮಾಡುವರೋ ಅವರು ಅಂಧಂತಮಸ್ಸನ್ನು ಪ್ರವೇಶಿಸುತ್ತಾರೆ" (ಈ. ಮಾ. ೧೨) ಎಂದು (ವಿದ್ಯಾವಿದ್ಯೆಗಳ ಸಮುಚ್ಚಯವನ್ನು ವಿಧಿಸುವದಕ್ಕಾಗಿ ಅವಿದ್ಯೋಪಾಸನೆಯನ್ನು ನಿಂದಿಸಿದೆಯೋ ಹಾಗೆಯೇ ಇದೂ ಅಲ್ಲವೆ ?)

(ಪರಿಹಾರ) :- ಸಂಭೂತಿವಿಷಯಕವಾದ ದೇವತೋಪಾಸನೆಯನ್ನೂ ಮತ್ತು ವಿನಾಶಶಬ್ದವಾಚ್ಯವಾದ ಕರ್ಮವನ್ನೂ ಸಮುಚ್ಚಯ (ಮಾಡಿ ಅನುಷ್ಠಾನಮಾಡಬೇಕೆಂದು) ವಿಧಾನಮಾಡುವದಕ್ಕಾಗಿಯೇ ಸಂಭೂತಿಯನ್ನು ನಿಂದಿಸಿದೆ-ಎಂಬುದು ನಿಜವೇ. ಆದರೂ ವಿನಾಶವೆಂಬ ಹೆಸರಿನ ಕರ್ಮವನ್ನು ಸ್ವಾಭಾವಿಕವಾದ ಅಜ್ಞಾನ (ದಿಂದಾಗುವ) ಪ್ರವೃತ್ತಿರೂಪವಾದ ಮೃತ್ಯುವನ್ನು[2] ದಾಟುವದಕ್ಕೆ ಹೇಗೆ (ವಿಧಿಸಿದೆಯೋ ಹಾಗೆ), ದೇವತಾದರ್ಶನ, ಕರ್ಮ-ಇವುಗಳ ಸಮುಚ್ಚಯಾನುಷ್ಠಾನವು ಪುರುಷಸಂಸ್ಕಾರಕ್ಕಾಗಿ (ಮಾಡತಕ್ಕದ್ದಾಗಿದ್ದು) ಕರ್ಮಫಲದಲ್ಲಿ ರಾಗದಿಂದ

---

1. ಸಂಭೂತಿಯನ್ನು ನಿಜವಾಗಿ ನಿಂದಿಸಿದೆಯಾದರೆ ಸಂಭವವು ಮಾಯಿಕವೆಂದಾದೀತು ; ಆದರೆ ಹಾಗಲ್ಲ. ಒಂದನ್ನು ನಿಂದಿಸುವದು ಮತ್ತೊಂದರ ವಿಧಾನಾರ್ಥವಾಗಿ-ಎಂಬ ನ್ಯಾಯದಿಂದ ಸಂಭೂತಿ, ವಿನಾಶ-ಇವುಗಳನ್ನು ಒಂದೊಂದಾಗಿ ಮಾಡುವದನ್ನು ನಿಂದಿಸಿರುವದು ಎರಡನ್ನೂ ಸೇರಿಸಿ ಅನುಷ್ಠಾನಮಾಡಬೇಕು ಎಂಬ ಅಭಿಪ್ರಾಯದಿಂದ. ಆದ್ದರಿಂದ ಸಂಭೂತಿಯನ್ನು ನಿಂದಿಸಿಲ್ಲ - ಎಂದು ಪೂರ್ವಪಕ್ಷಿಯ ಭಾವ. ಇಲ್ಲಿ ಕೊಟ್ಟಿರುವ ಶ್ರುತಿಯನ್ನು ಮಾಧ್ಯಂದಿನಪಾಠದಂತೆ ಅರ್ಥಮಾಡಿಕೊಳ್ಳಬೇಕು.

2. ಶಾಸ್ತ್ರವಿಹಿತಕರ್ಮವನ್ನರಿಯದವರು ಸ್ವಭಾವದಿಂದ ತೊಡಗುವ ಲೌಕಿಕಕರ್ಮವನ್ನೇ ಇಲ್ಲಿ ಮೃತ್ಯುವೆಂದಿದೆ ; ಏಕೆಂದರೆ ಅದರಿಂದ ಆ ಜನರಿಗೆ ಅನರ್ಥವೇ ಉಂಟಾಗುವದು.

ಪ್ರವರ್ತಿಸುವ ಸಾಧ್ಯಸಾಧನಗಳೆಂಬ ಎರಡು ಏಷಣೆಗಳ ರೂಪದ ಮೃತ್ಯುವನ್ನು ದಾಟುವದಕ್ಕಾಗಿ[1] (ವಿಧಿಸಿರುತ್ತದೆ). ಈ ರೀತಿಯಲ್ಲಿ ಏಷಣಾದ್ವಯರೂಪವಾದ ಮೃತ್ಯುವೆನಿಸಿರುವ ಅಶುದ್ಧಿಯಿಂದ ಬಿಡುಗಡೆಯನ್ನು ಹೊಂದಿದರೆ ಪುರುಷನು ಸಂಸ್ಕಾರವನ್ನು ಹೊಂದಿದವನಾಗುವನು. ಆದ್ದರಿಂದ (ಈ) ಮೃತ್ಯುವನ್ನು ದಾಟುವದಕ್ಕಾಗಿ ದೇವತಾದರ್ಶನ, ಕರ್ಮ-ಇವುಗಳ ಸಮುಚ್ಚಯವೆಂಬ ಅವಿದ್ಯೆಯನ್ನು (ವಿಧಿಸಿರುತ್ತದೆ[2]). ಹೀಗೆಯೇ ಏಷಣಾರೂಪವಾದ ಮೃತ್ಯುವನ್ನು ಅವಿದ್ಯೆಯಿಂದ[3] ದಾಟಿರುವವನಾಗಿ ವಿರಕ್ತನಾಗಿರುವವನು ಉಪನಿಷಚ್ಛಾಸ್ತ್ರದ ಅರ್ಥವನ್ನು ಮನನ ಮಾಡುವದರಲ್ಲಿ ತಾತ್ಪರ್ಯವುಳ್ಳವನಾದರೆ ಪರಮಾತ್ಮೈಕತ್ವವಿದ್ಯೆಯುಂಟಾಗುವದು ಅವಶ್ಯವಾಗಿ (ಆಗಿಯೇ ತೀರುವ)ದರಿಂದ ಮೊದಲು ಇರುವ ಅವಿದ್ಯೆಗಿಂತ ಆ ಬಳಿಕ ಉಂಟಾಗುವ ಅಮೃತತ್ವಸಾಧನವಾದ ಬ್ರಹ್ಮವಿದ್ಯೆಯು ಒಬ್ಬ ಪುರುಷನಲ್ಲಿಯೇ ಸೇರಿಕೊಳ್ಳುವದರಿಂದ ಅವಿದ್ಯೆಗೆ ಸೇರಿಸಿದ್ದಾಯಿತೆನಿಸುತ್ತದೆ[4]. ಆದ್ದರಿಂದ ಅಶುದ್ಧಿಯನ್ನು ತೊಲಗಿಸುವದಕ್ಕೆ ಕಾರಣವಾದರೂ (ಸಮುಚ್ಚಯವು) ಬೇರೆ ಒಂದು ಪ್ರಯೋಜನಕ್ಕಾಗಿರುವದರಿಂದ[5] ಅಮೃತತ್ವಕ್ಕೆ ಸಾಧನವಾಗಿರುವ ಬ್ರಹ್ಮವಿದ್ಯೆಯ ಹೋಲಿಕೆಯಿಂದ ಸಂಭೂತಿಯ ನಿಂದೆಯು ನಿಂದೆಗಾಗಿಯೇ (ಬಂದದ್ದು) ಎಂದಾಗುತ್ತದೆ[6]. ಏಕೆಂದರೆ (ಅದು) ಅದರಲ್ಲಿಯೇ ತಾತ್ಪರ್ಯವುಳ್ಳದ್ದಲ್ಲ[7]. ಆದ್ದರಿಂದಲೇ (ಹೀಗೆ) ಸಂಭೂತಿ

---

1. ಶಾಸ್ತ್ರೀಯ ಕರ್ಮವನ್ನೂ ಉಪಾಸನೆಯನ್ನೂ ಮಾಡುವವನು ಅವುಗಳ ಫಲವನ್ನು ಬಯಸದೆ ಅನುಷ್ಠಾನಮಾಡಿದರೆ ಪುರುಷಸಂಸ್ಕಾರವುಂಟಾಗುವದೆಂಬ ಕಾರಣದಿಂದ ಅವನ್ನು ವಿಧಿಸಿದಯೇ ಹೊರತು ಕೇವಲ ಸಮುಚ್ಚಯಕ್ಕಾಗಿ ಅಲ್ಲ. ಬಯಕೆ ಎಂಬ ಮೃತ್ಯುವನ್ನು ದಾಟುವದೇ ಅವಕ್ಕೆ ಮುಖ್ಯೋದ್ದೇಶ. ಸಾಧ್ಯಸಾಧನಗಳೆಂಬ ಏಷಣೆಗಳನ್ನು ಬೃ.೧-೫-೧೬ ರಲ್ಲಿ ವರ್ಣಿಸಿದೆ.

2. "ವಿದ್ಯಾಂ ಚಾವಿದ್ಯಾಂ ಚ" ಎಂಬ ಶ್ರುತಿಗೆ ಅರ್ಥವನ್ನು ಹೇಳುವದಕ್ಕೆ ಇಲ್ಲಿಂದ ಮೊದಲು ಮಾಡಿದೆ.

3. ಕರ್ಮೋಪಾಸನೆಗಳ ಸಮುಚ್ಚಯದಿಂದ.

4. ಅವಿದ್ಯೆಯು ಅನುಷ್ಠಾನರೂಪ, ವಿದ್ಯೆಯು ಪರಮಾರ್ಥಜ್ಞಾನರೂಪ-ಇವೆರಡೂ ಒಬ್ಬನಲ್ಲಿಯೇ ಕ್ರಮವಾಗಿರುವದರಿಂದ ಸಮುಚ್ಚಿತವೆಂದು ಹೇಳದೆಯೇ ಹೊರತು ಒಂದೇ ಕಾಲದಲ್ಲಿರುವವೆಂಬ ಅಭಿಪ್ರಾಯದಿಂದಲ್ಲ.

5. ಅದ್ವೈತಜ್ಞಾನಕ್ಕಾಗಿ ಎಂದರ್ಥ.

6. ಸಮುಚ್ಚಯವು ಬ್ರಹ್ಮವಿದ್ಯೆಯ ದೃಷ್ಟಿಯಿಂದ ನಿಜವಾಗಿ ಅವಿದ್ಯೆಯೇ ; ಅದರಿಂದ ದಾಗುವ ಫಲವು, ಅಮೃತತ್ವವು, ಅಂಧಂತಮಸ್ಸೆಂದಿರುವದು ನಿಂದೆಗಾಗಿಯೇ.

7. ಸಂಭೂತಿಫಲವಾದ ಅಮೃತವನ್ನೇ ಹೇಳುವದಕ್ಕೆ ಬಂದದ್ದಲ್ಲ.

ಯನ್ನು ನಿಂದಿಸಿರುವದರಿಂದ ಸಂಭೂತಿಯ ಇರವು ಆಪೇಕ್ಷಿಕವೇ[1] (ಆಯಿತು). ಆದ್ದರಿಂದ ನಿಜವಾಗಿಯೂ ಇರುವ ಆತ್ಮೈಕತ್ವದ ದೃಷ್ಟಿಯಿಂದ ಅಮೃತವೆಂಬ ಸಂಭವವನ್ನು ಇಲ್ಲವೆಂದಿರುತ್ತದೆ (ಎಂದು ಸಿದ್ಧವಾಯಿತು).

(ಭಾಷ್ಯ)

೧೭೪. ಏವಂ ಮಾಯಾನಿರ್ಮಿತಸ್ಯೈವ[2] ಜೀವಸ್ಯ ಅವಿದ್ಯಯಾ ಪ್ರತ್ಯುಪ ಸ್ಥಾಪಿತಸ್ಯ ಅವಿದ್ಯಾನಾಶೇ ಸ್ವಭಾವರೂಪತ್ವಾತ್ ಪರಮಾರ್ಥತಃ ಕೋ ನ್ವೇನಂ ಜನ ಯೇತ್ ? ನ ಹಿ ರಜ್ಜ್ವಾಮ್ ಅವಿದ್ಯಾರೋಪಿತಂ ಸರ್ಪಂ ಪುನಃ ವಿವೇಕತೋ ನಷ್ಟಂ ಜನಯೇತ್ ಕಶ್ಚಿತ್ । ತಥಾ ನ ಕಶ್ಚಿತ್ ಏನಂ ಜನಯೇದಿತಿ ಕೋ ನು ಇತ್ಯಾಕ್ಷೇಪಾರ್ಥತ್ವಾತ್ ಕಾರಣಂ ಪ್ರತಿಷಿಧ್ಯತೇ । ಅವಿದ್ಯೋದ್ಭೂತಸ್ಯ ನಷ್ಟಸ್ಯ ಜನಯಿತೃಕಾರಣಂ ನ ಕಿಂಚಿತ್ ಅಸ್ತಿ ಇತ್ಯಭಿಪ್ರಾಯಃ । ''ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್'' (ಕ. ೧-೨-೧೮) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಹೀಗೆ ಮಾಯೆಯಿಂದ ನಿರ್ಮಿತನಾದಂತೆ ಅವಿದ್ಯೆಯಿಂದ ಕಲ್ಪಿತನಾಗಿರುವ ಜೀವನಿಗೆ ಅವಿದ್ಯೆಯು ಹೋಗಲು ಪರಮಾರ್ಥವಾಗಿಯೇ (ತನ್ನ) ಸ್ವಭಾವರೂಪ (ವನ್ನೇ ಹೊಂದು)ವದರಿಂದ ''ಇವನನ್ನು (ಮತ್ತೆ[3]) ಯಾರು ಹುಟ್ಟಿಸಿಯಾರು ?'' (ಬೃ. ೩-೯-೨೮) ಹಗ್ಗದಲ್ಲಿ ಅವಿದ್ಯೆಯಿಂದ ಆರೋಪಿತವಾಗಿರುವ ಸರ್ಪವನ್ನು ವಿವೇಕದಿಂದ (ಅದು) ಹೋದ (ಬಳಿಕ) ಮತ್ತೆ ಯಾರೂ ಹುಟ್ಟಿಸಲಾರರಷ್ಟೆ ? ಹಾಗೆಯೇ (ಇವನನ್ನು) ಯಾರೂ ಹುಟ್ಟಿಸಲಾರರು ಎಂದು (ಅವನನ್ನು ಹುಟ್ಟಿಸುವ) ಕಾರಣವನ್ನೇ (ಶ್ರುತಿಯಲ್ಲಿ) ಇಲ್ಲವೆಂದಿರುತ್ತದೆ ; ಏಕೆಂದರೆ (ಅಲ್ಲಿ) ''ಯಾರುತಾನೆ (ಹುಟ್ಟಿಸಿಯಾರು ?) ಎಂಬುದಕ್ಕೆ ಆಕ್ಷೇಪವೇ ಅರ್ಥ. ಅವಿದ್ಯೆಯಿಂದ ಉಂಟಾಗಿ ನಷ್ಟವಾಗಿರುವದನ್ನು ಉಂಟುಮಾಡುವ ಕಾರಣವು ಯಾವದೂ ಇಲ್ಲ ಎಂದು ಅಭಿಪ್ರಾಯ. ''ಈತನು ಏತರಿಂದಲೂ (ಉಂಟಾಗು)ವದಿಲ್ಲ, ಯಾರೂ (ಈತನಿಂದ) ಉಂಟಾಗಿರುವದಿಲ್ಲ'' (ಕ. ೧-೨-೧೮) ಎಂಬ ಶ್ರುತಿಯ (ಬೆಂಬಲ)ವಿರುವದರಿಂದ (ಹೀಗೆಂದು ಅರ್ಥಮಾಡಬೇಕು).

---

1. ಹೋಲಿಕೆಯ ಅಮೃತವು ಪರಮಾರ್ಥವಾಗಲಾರದು.

2. '' ನಿರ್ಮಿತಸ್ಯೈವ'' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

3. 'ಪುನಃ' ಎಂಬ ಮಾತು ಕಾರಿಕೆಯಲ್ಲಿಲ್ಲವೆಂಬ ಕಾರಣದಿಂದ ಭಾಷ್ಯಕಾರರು ಇಲ್ಲಿ ಬಿಟ್ಟಿರುವರೋ ಭಾಷ್ಯದಲ್ಲಿದ್ದದ್ದನ್ನು ಲೇಖಕರು ಕೈಬಿಟ್ಟಿರುವರೋ ತಿಳಿಯದು ; ಅರ್ಥಕ್ಕೇನೋ ಇದೂ ಅವಶ್ಯ.

## ಶ್ರುತಿಯಿಂದ ಅಜಬ್ರಹ್ಮದ ಜ್ಞಾನವಾಗುವ ರೀತಿ

ಸ ಏಷ ನೇತಿ ನೇತೀತಿ ವ್ಯಾಖ್ಯಾತಂ ನಿಹ್ನುತೇ ಯತಃ ।
ಸರ್ವಮಗ್ರಾಹ್ಯಭಾವೇನ ಹೇತುನಾಜಂ ಪ್ರಕಾಶತೇ ॥೨೬॥

೨೬. "ಸ ಏಷ ನೇತಿ ನೇತಿ" (ಆ ಈತನು ಇದಲ್ಲ, ಇದಲ್ಲ) ಎಂದು ವಿವರಿಸಿದ್ದನ್ನು ಎಲ್ಲವನ್ನೂ ಅಗ್ರಾಹ್ಯತ್ವವೆಂಬ ಕಾರಣದಿಂದ ಅಲ್ಲಗಳೆಯುತ್ತದೆ ಯಾದ್ದರಿಂದ ಅಜವು ಬೆಳಗುತ್ತದೆ.

(ಭಾಷ್ಯ)

೧೭೫. ಸರ್ವವಿಶೇಷಪ್ರತಿಷೇಧೇನ "ಅಥಾತ ಆದೇಶೋ ನೇತಿ ನೇತಿ" (ಬೃ. ೨-೩-೬) ಇತಿ ಪ್ರತಿಪಾದಿತಸ್ಯ ಆತ್ಮನಃ ದುರ್ಬೋಧ್ಯತ್ವಂ[1] ಮನ್ಯಮಾನಾ ಶ್ರುತಿಃ ಪುನಃ ಪುನಃ ಉಪಾಯಾನ್ತರತ್ವೇನ ತಸ್ಯೈವ ಪ್ರತಿಪಿಪಾದಯಿಷಯಾ ಯದ್ ಯತ್ ವ್ಯಾಖ್ಯಾತಂ ತತ್ ಸರ್ವಂ ನಿಹ್ನುತೇ ಗ್ರಾಹ್ಯಂ ಜನಿಮದ್ಬುದ್ಧಿವಿಷಯಮ್ ಅಪಲಪತಿ ಅರ್ಥಾತ್ । "ಸ ಏಷ ನೇತಿ ನೇತಿ" (ಬೃ. ೩-೯-೨೬, ೪-೨-೪, ೪-೪-೨೨, ೪-೫-೧೫) ಇತ್ಯಾತ್ಮನಃ ಅದೃಶ್ಯತಾಂ ದರ್ಶಯನ್ತೀ ಶ್ರುತಿಃ ಉಪಾಯಸ್ಯ ಉಪೇಯ ನಿಷ್ಠತಾಮ್ ಅಜಾನತಃ ಉಪಾಯತ್ವೇನ ವ್ಯಾಖ್ಯಾತಸ್ಯ ಉಪೇಯವತ್ ಗ್ರಾಹ್ಯತಾ ಮಾ ಭೂತ್ ಇತಿ ಅಗ್ರಾಹ್ಯಭಾವೇನ ಹೇತುನಾ ಕಾರಣೇನ ನಿಹ್ನುತೇ ಇತ್ಯರ್ಥಃ । ತತಶ್ಚ ಏವಮ್ ಉಪಾಯಸ್ಯ ಉಪೇಯನಿಷ್ಠತಾಮೇವ ಜಾನತಃ ಉಪೇಯಸ್ಯ ಚ ನಿತ್ಯೈಕರೂಪತ್ವಮ್ ಇತಿ ತಸ್ಯ ಸಬಾಹ್ಯಾಭ್ಯನ್ತರಮಜಮ್ ಆತ್ಮತತ್ತ್ವಂ ಪ್ರಕಾಶತೇ ಸ್ವಯಮೇವ ॥

(ಭಾಷ್ಯಾರ್ಥ)

"ಇನ್ನು ಆದ್ದರಿಂದ (ಬ್ರಹ್ಮದ) ಉಪದೇಶವನ್ನು (ಮಾಡಲಾಗುತ್ತದೆ) 'ಇದಲ್ಲ', 'ಇದಲ್ಲ'" (ಬೃ. ೨-೩-೬) ಎಂದು ಎಲ್ಲಾ ವಿಶೇಷಗಳನ್ನೂ ಅಲ್ಲಗಳೆದು[2] ತಿಳಿಸಿಕೊಟ್ಟ, ಆತ್ಮನನ್ನು ಅರಿತುಕೊಳ್ಳುವದು ಕಷ್ಟವೆಂಬ ಅಭಿಪ್ರಾಯದಿಂದ ಶ್ರುತಿಯು

1. 'ದುರ್ಬೋಧತ್ವಂ' ವಾ॥
2. ಮೂರ್ತಾಮೂರ್ತಗಳನ್ನೂ, ಅದರ ವಾಸನೆಗಳನ್ನೂ ಅಲ್ಲಗಳೆದು ಎಂದರ್ಥ.

ಮತ್ತೆಮತ್ತೆ ಬೇರೊಂದು ಉಪಾಯದಿಂದ[1] ಅವನನ್ನೇ ತಿಳಿಸಿಕೊಡಬೇಕೆಂಬ ಇಚ್ಛೆಯಿಂದ ಯಾವಯಾವದನ್ನು (ಹಿಂದೆ) ವಿವರಿಸಿಹೇಳಿತ್ತೋ ಅದೆಲ್ಲವನ್ನೂ ನಿಷೇಧಿಸುತ್ತದೆ, ಗ್ರಾಹ್ಯವಾದ ಹುಟ್ಟುಳ್ಳದ್ದೆಂಬ ಬುದ್ಧಿಗೆ ವಿಷಯವಾದ(ದ್ದೆಲ್ಲ)ವನ್ನೂ ಅರ್ಥ(ವಶ)ದಿಂದ ಅಲ್ಲಗಳೆಯುತ್ತದೆ[2]. "ಸ ಏಷ ನೇತಿ ನೇತಿ" (ಆ ಇವನೇ ನೇತಿ ನೇತಿ ಎಂಬ ಆತ್ಮನು ಬೃ. ೩-೯-೨೬, ೪-೨-೪, ೪-೪-೨೨, ೪-೫-೧೫) ಎಂದು ಆತ್ಮನು ಅದೃಶ್ಯನೆಂದು ತಿಳಿಸುವ ಶ್ರುತಿಯು ಉಪಾಯವಾಗಿ (ಹೇಳಿದ್ದಕ್ಕೆ) ಉಪೇಯದಲ್ಲಿಯೇ ತಾತ್ಪರ್ಯವೆಂಬುದನ್ನು ಅರಿಯದೆ ಇರುವವನು ಉಪಾಯವೆಂದು ತಾನು ಹೇಳಿರುವದನ್ನು ಉಪೇಯದಂತೆಯೇ (ಸತ್ಯವೆಂದು) ಗ್ರಹಿಸುವದು ಆಗಬಾರದು ಎಂದು, (ಅದು) ಅಗ್ರಾಹ್ಯವೆಂಬ ಹೇತುವಿನಿಂದ, ಕಾರಣದಿಂದ, ಅಲ್ಲಗಳೆಯುತ್ತದೆ[3] ಎಂದರ್ಥ. ಮತ್ತು ಇದರಿಂದ ಹೀಗೆ ಉಪಾಯವು ಉಪೇಯದಲ್ಲಿಯೇ ತಾತ್ಪರ್ಯವುಳ್ಳದ್ದು ಎಂದೂ ಉಪೇಯವು ಯಾವಾಗಲೂ ಒಂದೇ ರೂಪವಾಗಿರುವದೆಂದೂ[4] ಅರಿತುಕೊಂಡವನಿಗೆ ಹೊರಗೂ ಒಳಗೂ ಜನ್ಮರಹಿತವಾಗಿರುವ ಆತ್ಮತತ್ತ್ವವು ತಾನೇ ತೋರಿಕೊಳ್ಳುತ್ತದೆ[5].

## ಸದ್ವಸ್ತುವಿಗೆ ಮಾಯೆಯಿಂದ ಜನ್ಮವುಂಟು

(ಭಾಷ್ಯ)

೧೭೬. ಏವಂ ಹಿ ಶ್ರುತಿವಾಕ್ಯಶತೈಃ ಸಬಾಹ್ಯಾಭ್ಯನ್ತರಮಜಮ್ ಆತ್ಮತತ್ತ್ವಮ್, ಅದ್ವಯಮ್, ನ ತತೋಽನ್ಯತ್ ಅಸ್ತಿ ಇತಿ ನಿಶ್ಚಿತಮ್ ಏತತ್ । ಯುಕ್ತ್ಯಾ ಚ ಅಧುನಾ ಏತದೇವ ಪುನರ್ನಿರ್ಧಾರ್ಯತೇ ಇತ್ಯಾಹ-

---

1. ಬೃ. ೩-೯-೨೬ ರಲ್ಲಿ ಶರೀರಾದಿಕಾರ್ಯಕರಣಗಳು ಆತ್ಮನಿಗಾಗಿ ಇವೆ ಎಂಬ ಉಪಾಯದಿಂದ; ೪-೨-೪ ರಲ್ಲಿ ಜಾಗ್ರದಾದ್ಯವಸ್ಥೆಗಳೆಂಬ ಉಪಾಯದಿಂದ; ೪-೪-೨೨ ರಲ್ಲಿ ಯಜ್ಞಾದಿ ಸಾಧನಗಳು. ಸಂನ್ಯಾಸ ಎಂಬ ಉಪಾಯದಿಂದ ; ೪-೫-೧೫ ರಲ್ಲಿ ಪ್ರಿಯತಮನಾದ ಆತ್ಮನ ಶ್ರವಣಾದಿಗಳೆಂಬ ಉಪಾಯದಿಂದ-ಹೀಗೆ ಬೇರೆಬೇರೆಯ ಉಪಾಯಗಳಿಂದ ಎಂದರ್ಥ.

2. 'ಸ ಏಷ ನೇತಿ ನೇತ್ಯಾತ್ಮಾ' ಎಂದು ಮತ್ತೆ ಮತ್ತೆ ಹೇಳಿರುತ್ತದೆ.

3. ಉಪಾಯವು ಉಪಾಯವೆಂದೇ ಗ್ರಹಿಸತಕ್ಕದ್ದು ; ಅದು ಸತ್ಯವೆಂದೂ ಗ್ರಹಿಸಬಾರದು. ಆದ್ದರಿಂದ ಒಂದೊಂದು ಉಪಾಯವನ್ನು ಹೇಳಿದ ಬಳಿಕವೂ ನೇತಿ ನೇತಿ 'ಇದಲ್ಲ', 'ಇದಲ್ಲ' ಎಂದು ಉಪಾಯವನ್ನು ಅಲ್ಲಗಳೆದಿರುತ್ತದೆ.

4. ಉಪಾಯವು ಬೇರೆಯಾದಮಾತ್ರದಿಂದ ಅದು ತಿಳಿಸುವ ಆತ್ಮನು ಬೇರೆಯಲ್ಲ.

5. ನೇತಿ ನೇತಿ ಶ್ರುತಿಯು ಉಪಾಯವನ್ನು ಅಲ್ಲಗಳೆಯುವದರಲ್ಲಿಯೇ ಮುಗಿಯುತ್ತದೆ. ಆತ್ಮನನ್ನು ವಿಷಯೀಕರಿಸಿ ತಿಳಿಸುವದಿಲ್ಲ. ಆತ್ಮನು ಸ್ವಯಂಪ್ರಕಾಶನಾದ್ದರಿಂದ ತಾನೇ ತಿಳಿದುಬರುತ್ತಾನೆ.

(ಭಾಷ್ಯಾರ್ಥ)

ಹೀಗೆ ನೂರಾರು ಶ್ರುತಿವಾಕ್ಯಗಳಿಂದ ಹೊರಗೂ ಒಳಗೂ ಹುಟ್ಟಿಲ್ಲದ ಎರಡನೆಯದಿಲ್ಲದ್ದು ಆತ್ಮತತ್ತ್ವವು, ಅದಕ್ಕಿಂತ ಬೇರೆಯಾಗಿ (ಯಾವದೂ) ಇಲ್ಲ-ಎಂಬದನ್ನು ನಿಶ್ಚಯಿಸಲಾಯಿತು. ಈಗ ಯುಕ್ತಿಯಿಂದಲೂ ಇದನ್ನೇ ಮತ್ತೆ ಗೊತ್ತುಪಡಿಸಲಾಗುತ್ತದೆ ಎಂದು ಹೇಳುತ್ತಾರೆ :-

ಸತೋ ಹಿ ಮಾಯಯಾ ಜನ್ಮ ಯುಜ್ಯತೇ ನ ತು ತತ್ತ್ವತಃ ।
ತತ್ತ್ವತೋ ಜಾಯತೇ ಯಸ್ಯ ಜಾತಂ ತಸ್ಯ ಹಿ ಜಾಯತೇ ॥೨೭॥

೨೭. ಏಕೆಂದರೆ ಸತ್ತಿಗೆ ಮಾಯೆಯಿಂದ ಜನ್ಮವು ಹೊಂದುತ್ತದೆಯೇ ಹೊರತು ನಿಜವಾಗಿ (ಜನ್ಮವು ಹೊಂದು)ವದಿಲ್ಲ. ಯಾವನ (ಮತದಲ್ಲಿ) ನಿಜವಾಗಿ ಹುಟ್ಟುವದೋ ಅವನ (ಮತದಲ್ಲಿ) ಹುಟ್ಟಿದ್ದೇ ಹುಟ್ಟುತ್ತದೆ ಎಂದಾಗುವದು.

(ಭಾಷ್ಯ)

೧೭೭. ತತ್ರ ಏತತ್ ಸ್ಯಾತ್-ಸದಾ ಅಗ್ರಾಹ್ಯಮೇವ ಚೇತ್ ಅಸದೇವ ಆತ್ಮತತ್ತ್ವಮ್ ಇತಿ । ತನ್ನ । ಕಾರ್ಯಗ್ರಹಣಾತ್ । ಯಥಾ ಸತಃ ಮಾಯಾವಿನಃ ಮಾಯಯಾ ಜನ್ಮ ಕಾರ್ಯಮ್, ಏವಂ ಜಗತಃ ಜನ್ಮ ಕಾರ್ಯಂ ಗೃಹ್ಯಮಾಣಂ ಮಾಯಾವಿನಮಿವ ಪರಮಾರ್ಥಸನ್ತಮ್ ಆತ್ಮಾನಂ ಜಗಜ್ಜನ್ಮಮಾಯಾಸ್ಪದಮ್ ಅವಗಮಯತಿ[1] । ಯಸ್ಮಾತ್ ಸತೋ ಹಿ ವಿದ್ಯಮಾನಾತ್ ಕಾರಣಾತ್ ಮಾಯಾನಿರ್ಮಿತಸ್ಯ ಹಸ್ತ್ಯಾದಿಕಾರ್ಯಸ್ಯೇವ ಜಗಜ್ಜನ್ಮ ಯುಜ್ಯತೇ । ನಾಸತಃ ಕಾರಣಾತ್ । ನ ತು ತತ್ತ್ವತ ಏವ ಆತ್ಮನಃ ಜನ್ಮ ಯುಜ್ಯತೇ ॥

(ಭಾಷ್ಯಾರ್ಥ)

ಇಲ್ಲಿ ಈ (ಆಕ್ಷೇಪವು) ಉಂಟಾಗಬಹುದು :- ಆತ್ಮತತ್ತ್ವವು ಯಾವಾಗಲೂ ಅಗ್ರಾಹ್ಯವೇ ಆಗಿದ್ದರೆ[2] (ಅದು) ಅಸತ್ತೇ (ಎಂದಾಯಿತು). (ಆದರೆ) ಇದು ಸರಿಯಲ್ಲ. ಏಕೆಂದರೆ (ಅದರ) ಕಾರ್ಯವು ತಿಳಿಯಬರುತ್ತದೆ. ಹೇಗೆ (ನಿಜವಾಗಿಯೂ)

1. "ಮಾಯಾಸ್ಪದಮೇವ ಗಮಯತಿ " ವಾ॥ ಕಾ॥

2. ಆತ್ಮನು ಅಗ್ರಾಹ್ಯನು, ಅವನೇ ನೇತಿ ನೇತಿ ಎಂದು ಹೇಳಿದ ಆತ್ಮನು ಎಂದು ಶ್ರುತಿಯಲ್ಲಿದೆ ಎಂದು ಹಿಂದಿನ ಕಾರಿಕೆಯಲ್ಲಿ ಹೇಳಿದೆಯಷ್ಟೆ ; ಅಗ್ರಾಹ್ಯನಾದರೆ ಅವನು ಅಸದ್ರೂಪನು, ಇಲ್ಲ-ಎಂದಾಯಿತು ಎಂದು ಆಕ್ಷೇಪ.

ಇರುತ್ತಿರುವ ಮಾಯಾವಿಯಿಂದಲೇ (ಹುಸಿತೋರಿಕೆಯ ವಸ್ತುಗಳ) ಜನ್ಮವೆಂಬ ಕಾರ್ಯವು ಮಾಯೆಯಿಂದಾಗಿರುವದೋ[1] ಹಾಗೆಯೇ ಜಗತ್ತಿನ ಜನ್ಮವೆಂಬ ಕಾರ್ಯವು ತಿಳಿಯಬರುತ್ತಿರುವದರಿಂದ ಮಾಯಾವಿಯಂತೆ ನಿಜವಾಗಿಯೂ ಇದ್ದುಕೊಂಡಿರುವ ಜಗತ್ತಿನ ಜನ್ಮವೆಂಬ ಮಾಯೆಗೆ ಆಸ್ಪದನಾಗಿರುವ[2] ಆತ್ಮನು (ಇರಬೇಕೆಂದು) ಗೊತ್ತು ಪಡಿಸಿಕೊಡುತ್ತದೆ. ಏಕೆಂದರೆ ಸತ್ತಾಗಿರುವ (ನಿಜವಾಗಿ) ಇದ್ದುಕೊಂಡೇ ಇರುವ ಕಾರಣ ದಿಂದಲೇ ಮಾಯಾನಿರ್ಮಿತವಾದ ಆನೆಯೇ ಮುಂತಾದ ಕಾರ್ಯವು (ಹುಟ್ಟು) ವಂತೆ ಜಗತ್ತಿನ ಜನ್ಮವಾಗುವದೆಂಬುದು ಯುಕ್ತವಾಗುವದೇ ಹೊರತು ಇಲ್ಲದ ಕಾರಣದಿಂದ (ಆಗುವದೆಂಬುದು ಯುಕ್ತ)ವಾಗಲಾರದು. ಹೀಗಲ್ಲದೆ ನಿಜವಾಗಿಯೇ ಆತ್ಮನಿಂದ ಜನ್ಮವಾ(ಗುವದೆಂಬುದು) ಯುಕ್ತವಲ್ಲ.

(ಭಾಷ್ಯ)

೧೭೮. ಅಥವಾ ಸತಃ ವಿದ್ಯಮಾನಸ್ಯ ವಸ್ತುನಃ ರಜ್ಜ್ವಾದೇಃ ಸರ್ಪಾದಿವತ್ ಮಾಯಯಾ ಜನ್ಮ ಯುಜ್ಯತೇ ನ ತು ತತ್ತ್ವತಃ ಯಥಾ ತಥಾ ಅಗ್ರಾಹ್ಯಸ್ಯಾಪಿ ಸತ ಏವ ಆತ್ಮನಃ ರಜ್ಜುಸರ್ಪವತ್ ಜಗದ್ರೂಪೇಣ ಮಾಯಯಾ ಜನ್ಮ ಯುಜ್ಯತೇ ನ ತು ತತ್ತ್ವತ ಏವ ಅಜಸ್ಯ ಆತ್ಮನಃ ಜನ್ಮ । ಯಸ್ಯ ಪುನಃ ಪರಮಾರ್ಥಸತ್ ಅಜಮ್ ಆತ್ಮತತ್ತ್ವಮ್ ಜಗದ್ರೂಪೇಣ ಜಾಯತೇ ವಾದಿನಃ ನ ಹಿ ತಸ್ಯ ಅಜಂ ಜಾಯತೇ ಇತಿ ಶಕ್ಯಂ ವಕ್ತುಮ್ । ವಿರೋಧಾತ್ । ತತಃ ತಸ್ಯ ಅರ್ಥಾತ್ ಜಾತಂ ಜಾಯತೇ ಇತಿ ಆಪನ್ನಮ್ । ತತಶ್ಚ ಅನವಸ್ಥಾ ಜಾತಾತ್ ಜಾಯಮಾನತ್ವೇನ । ತಸ್ಮಾತ್ ಅಜಮ್ ಏಕಮೇವ ಆತ್ಮತತ್ತ್ವಮ್ ಇತಿ ಸಿದ್ಧಮ್ ॥

(ಭಾಷ್ಯಾರ್ಥ)

ಅಥವಾ[3] ಸತ್ತಾದ (ನಿಜವಾಗಿ) ಇದ್ದುಕೊಂಡಿರುವ ಹಗ್ಗವೇ ಮುಂತಾದ ವಸ್ತು

---

1. "ಮಾಯಾಯಾಃ ಜನ್ಮ" ಅಥವಾ "ಮಾಯಾಜನ್ಮ" ಎಂದೂ ಭಾಷ್ಯಕಾರರು ಬರೆದಿರ ಬಹುದು. ಆದರೆ ಕಾರಿಕೆಗನುಗುಣವಾಗಿ ಮಾಯಯಾ ಎಂಬ ಪಾಠವನ್ನೇ ಇಟ್ಟುಕೊಂಡಿದೆ.

2. ಮಾಯಾವಿಯಲ್ಲಿ ಮಾಯಾವಸ್ತುಗಳು ಕಲ್ಪಿತವಾಗಿರಬೇಕು. ಅವು ನಿರಾಸ್ಪದ ವಾಗಿರಲಾರವು.

3. ಮೊದಲನೆಯ ಅರ್ಥದಿಂದ 'ಸತಃ' ಎಂಬುದು ಪಂಚಮಿ ಎಂದು ನಿಮಿತ್ತಕಾರಣ ವಾಗಿ ಬ್ರಹ್ಮವನ್ನು ಒಪ್ಪಿ ಅರ್ಥವನ್ನು ಹೇಳಲಾಗಿತ್ತು ಆಗ ಷಷ್ಠಿ ಎಂದು ಗಣಿಸಿ ಉಪಾದಾನಕಾರಣ ವಾಗಿ ಒಪ್ಪಿ ಹೇಳುತ್ತಾರೆ. ಮಾಯಾಜನ್ಮವಾಗುವದು ನಿಜವಾಗಿರುವ ವಸ್ತುವಿನಿಂದ, ನಿಜವಾಗಿ ರುವ ವಸುವಿಗೆ.

ವಿಗೆ ಹಾವೇ ಮುಂತಾದ (ರೂಪದಿಂದ) ಮಾಯೆಯಿಂದ (ಮಾತ್ರ) ಜನ್ಮವು ಆಗ ಬಹುದಾಗಿರುತ್ತದೆಯೇ ಹೊರತು ನಿಜವಾಗಿ (ಜನ್ಮವು) ಹೇಗೆ (ಆಗುವಂ)ತಿಲ್ಲವೋ, ಹಾಗೆ ಅಗ್ರಾಹ್ಯನಾಗಿರುವನಾದರೂ ನಿಜವಾಗಿರುವ ಆತ್ಮನಿಗೇ ಹಗ್ಗದ ಹಾವಿನಂತಿರುವ ಜಗದ್ರೂಪದಿಂದ ಮಾಯೆಯಿಂದ ಜನ್ಮ(ವಾಗುವದೆಂಬುದು) ಯುಕ್ತವಾಗುತ್ತದೆಯೇ ಹೊರತು ಜನ್ಮರಹಿತನಾದ ಆತ್ಮನಿಗೆ ನಿಜವಾಗಿಯೇ ಜನ್ಮವು ಆಗಲಾರದು. ಆದರೆ ಯಾವ ವಾದಿಯ ಮತದಲ್ಲಿ ನಿಜವಾಗಿ ಸತ್ತಾಗಿರುವ ಜನ್ಮರಹಿತವಾದ ಆತ್ಮತತ್ತ್ವವು ಜಗದ್ರೂಪದಿಂದ (ನಿಜವಾಗಿ) ಹುಟ್ಟುವದೋ[1] ಆತನು ಅಜವಾದದ್ದು ಹುಟ್ಟುತ್ತದೆ ಎಂದು ಹೇಳುವದಕ್ಕೆ ಆಗಲಾರದು. ಏಕೆಂದರೆ (ಅದು ತನಗೆ ತಾನೇ) ವಿರೋಧವಾಗುತ್ತದೆ[2]. ಆದ್ದರಿಂದ ಆತನ (ಮಾತಿಗೆ) ಅರ್ಥವು ಹುಟ್ಟಿದ್ದೇ ಹುಟ್ಟುವದು ಎಂದು ಆಗುತ್ತದೆ, ಮತ್ತು ಅದರಿಂದ ಹುಟ್ಟಿದ್ದರಿಂದಲೇ ಹುಟ್ಟುವದೆಂದಾಗಿ ಅನವಸ್ಥೆಯಾಗುವದು[3]. ಆದ್ದರಿಂದ ಆತ್ಮತತ್ತ್ವವು ಜನ್ಮರಹಿತವಾದ ಒಂದೇ ಎಂದು ಸಿದ್ಧವಾಯಿತು.

ಅಸತೋ ಮಾಯಯಾ ಜನ್ಮ ತತ್ತ್ವತೋ ನೈವ ಯುಜ್ಯತೇ ।
ವನ್ಧ್ಯಾಪುತ್ರೋ ನ ತತ್ತ್ವೇನ ಮಾಯಯಾ ವಾಪಿ ಜಾಯತೇ ॥೨೮॥

೨೮. ಅಸತ್ತಿಗೆ ಮಾಯೆಯಿಂದ (ಅಥವಾ) ತತ್ತ್ವದಿಂದ ಜನ್ಮವು ಹೊಂದುವದೇ ಇಲ್ಲ. ಬಂಚೆಯ ಮಗನು ತತ್ತ್ವದಿಂದಲಾಗಲಿ ಮಾಯೆಯಿಂದಲಾಗಲಿ ಹುಟ್ಟುವದಿಲ್ಲ.

(ಭಾಷ್ಯ)

೧೭೯. ಅಸದ್ವಾದಿನಾಮ್ ಅಸತಃ ಭಾವಸ್ಯ ಮಾಯಯಾ ತತ್ತ್ವತೋ ವಾ ನ ಕಥಂಚನ ಜನ್ಮ ಯುಜ್ಯತೇ ಅದೃಷ್ಟತ್ವಾತ್ । ನ ಹಿ ವನ್ಧ್ಯಾಪುತ್ರಃ ಮಾಯಯಾ

1. ಈ ಕಾರಿಕೆಯಲ್ಲಿ (೧) ಜನ್ಮವು ನಿಜವಾಗಿಯೂ ಆಗುತ್ತದೆ ಎಂಬ ವಾದ, (೨) ಅಸತ್ತಿಗೆ ಜನ್ಮವಾಗುವದೆಂಬ ವಾದ-ಇವೆರಡೂ ಸರಿಯಲ್ಲವೆಂದು ಹೇಳಿದೆ. ಎರಡನೆಯ ವಾದದ ಅನುಪಪತ್ತಿಯನ್ನು ಮುಂದಿನ ಶ್ಲೋಕದಲ್ಲಿ ತೋರಿಸಿದೆ. ಮೊದಲನೆಯವರ ಅನುಪತ್ತಿಯನ್ನು ಇಲ್ಲಿಯೇ ತಿಳಿಸಿದೆ.

2. ಅಜ , ಹುಟ್ಟುತ್ತದೆ-ಎಂಬ ಮಾತು ವ್ಯಾಹತ.

3. ಏಕೆಂದರೆ ಎಷ್ಟೇ ಹಿಂದಕ್ಕೆ ಸರಿದು ಯಾವದೊಂದನ್ನು ನೋಡಿದರೂ ಅದಕ್ಕೊಂದು ಕಾರಣವಿರಬೇಕಾಗುವದು

ತತ್ತ್ವತೋ ವಾ ಜಾಯತೇ । ತಸ್ಮಾತ್ ಅತ್ರ ಅಸದ್ವಾದೋ ದೂರತ ಏವ ಅನುಪಪನ್ನಃ ಇತ್ಯರ್ಥಃ ॥

(ಭಾಷ್ಯಾರ್ಥ)

ಅಸದ್ವಾದಿಗಳ (ಮತದಲ್ಲಿ[1]) ಇಲ್ಲದಿರುವ ಭಾವವು ಹುಟ್ಟುತ್ತದೆ (ಎಂಬುದು) ಮಾಯೆಯಿಂದಲಾಗಲಿ ನಿಜವಾಗಿಯಾಗಲಿ ಹೇಗೂ ಹೊಂದಲಾರದು. (ಏಕೆಂದರೆ ಅದು ಎಲ್ಲಿಯೂ) ಕಂಡುಬರುವದಿಲ್ಲ. ಬಂಜೆಯ ಮಗನು ಮಾಯೆಯಿಂದಲಾಗಲಿ ನಿಜವಾಗಿಯಾಗಲಿ ಹುಟ್ಟುವದೇ ಇಲ್ಲ. ಆದ್ದರಿಂದ ಇಲ್ಲಿ ಅಸದ್ವಾದವು ದೂರವಾಗಿಯೇ ಅಯುಕ್ತವಾಗಿರುತ್ತದೆ ಎಂದರ್ಥ.

## ಜನ್ಮವು ಮಾಯಿಕವೆಂಬುದು ಹೇಗೆ ?

(ಭಾಷ್ಯ)

೧೮೦. ಕಥಂ ಪುನಃ ಸತಃ ಮಾಯಯೈವ ಜನ್ಮ ಇತಿ ? ಉಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಸದ್ವಸ್ತುವಿಗಾದರೂ ಮಾಯೆಯಿಂದಲೇ ಜನ್ಮವು ಎಂಬುದು ಹೇಗೆ ?

(ಪರಿಹಾರ) :- ಹೇಳುತ್ತೇವೆ :-

**ಯಥಾ ಸ್ವಪ್ನೇ ದ್ವಯಾಭಾಸಂ ಸ್ಪನ್ದತೇ ಮಾಯಯಾ ಮನಃ ।**
**ತಥಾ ಜಾಗ್ರದ್ ದ್ವಯಾಭಾಸಂ ಸ್ಪನ್ದತೇ ಮಾಯಯಾ ಮನಃ ॥೨೯॥**

೨೯. ಹೇಗೆ ಸ್ವಪ್ನದಲ್ಲಿ ಮನಸ್ಸು ಮಾಯೆಯಿಂದ ದ್ವಯಾಭಾಸವಾಗಿ ಅಲುಗಾಡುತ್ತಿರುವದೋ ಹಾಗೆ ಜಾಗ್ರತ್ತಿನಲ್ಲಿ ಮನಸ್ಸು ಮಾಯೆಯಿಂದ ದ್ವಯಾಭಾಸವಾಗಿ ಅಲುಗಾಡುತ್ತಿರುವದು.

(ಭಾಷ್ಯ)

೧೮೧. ಯಥಾ ರಜ್ಜ್ವಾಂ ವಿಕಲ್ಪಿತಃ ಸರ್ಪಃ ರಜ್ಜುರೂಪೇಣ ಅವೇಕ್ಷ್ಯಮಾಣಃ ಸನ್ ಏವಂ ಮನಃ ಪರಮಾರ್ಥವಿಜ್ಞಪ್ತ್ಯಾತ್ಮರೂಪೇಣ ಅವೇಕ್ಷ್ಯಮಾಣಂ ಸದ್ ಗ್ರಾಹ್ಯಗ್ರಾಹಕರೂಪೇಣ ದ್ವಯಾಭಾಸಂ ಸ್ಪನ್ದತೇ ಸ್ವಪ್ನೇ ಮಾಯಯಾ ರಜ್ಜ್ವಾಮ್

1. ಇಲ್ಲಿ ಅಸತ್ಕಾರ್ಯವಾದಿಗಳಾದ ವೈಶೇಷಿಕರನ್ನೂ ಶೂನ್ಯವಾದಿಗಳನ್ನೂ ಸೇರಿಸಿದೆ ಎಂದು ಭಾವಿಸಬೇಕು.

ಇವ ಸರ್ಪಃ । ತಥಾ ತದ್ವದೇವ ಜಾಗ್ರತ್ ಜಾಗರಿತೇ ಸ್ಪನ್ದತೇ ಮಾಯಯಾ ಮನಃ । ಸ್ಪನ್ದತೇ ಇವ ಇತ್ಯರ್ಥಃ ।।

(ಭಾಷ್ಯಾರ್ಥ)

ಹೇಗೆ ಹಗ್ಗದಲ್ಲಿ ಹುಟ್ಟುಗಟ್ಟಿರುವ ಹಾವು ಹಗ್ಗದ ರೂಪದಿಂದ ನೋಡಿದರೆ ಸದ್ರೂಪವಾಗಿರುವದೋ, ಹಾಗೆ ಮನಸ್ಸು ಪರಮಾರ್ಥವಿಜ್ಞಾನವಾದ ಆತ್ಮಸ್ವರೂಪದಿಂದ ನೋಡಿದಾಗ ಸದ್ರೂಪವಾಗಿರುವದು[1]. (ಅದು) ಅರಿಯುವದು, ಅರಿಯಲ್ಪಡತಕ್ಕದ್ದು ಎಂಬ ರೂಪದಿಂದ ದ್ವೈತದಂತೆ ತೋರುತ್ತಾ ಕನಸಿನಲ್ಲಿ ಮಾಯೆಯಿಂದ ಹಗ್ಗದಲ್ಲಿ ಹಾವು ತೋರುವಂತೆ, ಮಾಯೆಯಿಂದ ಅಲುಗಾಡುತ್ತಿರುತ್ತದೆ. ಹಾಗೆಯೇ ಅದರಂತೆಯೇ (ಜಾಗ್ರತ್ ಜಾಗರಿತೇ) ಎಚ್ಚರದಲ್ಲಿಯೂ ಮನಸ್ಸು ಮಾಯೆಯಿಂದ ಅಲುಗಾಡುವಂತಿರುತ್ತದೆ. ಎಂದು ಅರ್ಥ[2].

ಅದ್ವಯಂ ಚ ದ್ವಯಾಭಾಸಂ ಮನಃ ಸ್ವಪ್ನೇ ನ ಸಂಶಯಃ ।
ಅದ್ವಯಂ ಚ ದ್ವಯಾಭಾಸಂ ತಥಾ ಜಾಗ್ರನ್ನ ಸಂಶಯಃ ॥೩೦॥

೩೦. ಮನಸ್ಸು ಕನಸಿನಲ್ಲಿ ಅದ್ವಯವೂ ದ್ವಯಾಭಾಸವೂ (ಆಗಿರುತ್ತದೆ ಎಂಬುದರಲ್ಲಿ) ಸಂಶಯವಿಲ್ಲ. ಹಾಗೆ ಎಚ್ಚರದಲ್ಲಿ(ಯೂ) ಅದ್ವಯವೂ ದ್ವಯಾಭಾಸವೂ (ಆಗಿರುತ್ತದೆ ಎಂಬುದರಲ್ಲಿ) ಸಂಶಯವಿಲ್ಲ.

(ಭಾಷ್ಯ)

೧೮೨. ರಜ್ಜುರೂಪೇಣ ಸರ್ಪ ಇವ ಪರಮಾರ್ಥತಃ ಆತ್ಮರೂಪೇಣ ಅದ್ವಯಂ ಸತ್ ದ್ವಯಾಭಾಸಂ ಮನಃ ಸ್ವಪ್ನೇ ನ ಸಂಶಯಃ । ನ ಹಿ ಸ್ವಪ್ನೇ ಹಸ್ತ್ಯಾದಿ ಗ್ರಾಹ್ಯಂ ತತ್ ಗ್ರಾಹಕಂ ವಾ ಚಕ್ಷುರಾದಿ ದ್ವಯಂ ವಿಜ್ಞಾನವ್ಯತಿರೇಕೇಣ ಅಸ್ತಿ । ಜಾಗ್ರದಪಿ ತಥೈವ ಇತ್ಯರ್ಥಃ । ಪರಮಾರ್ಥಸದ್ವಿಜ್ಞಾನಮಾತ್ರಾವಿಶೇಷಾತ್ ।।

1. ಮನುಸ್ಸು ಎಂದೇ ಕಾರಿಕೆಯಲ್ಲಿದ್ದರೂ ಇದು ಅದ್ವಯವಾಗಿರುವದೆಂದು ಮುಂದಿನ ಕಾರಿಕೆಯಲ್ಲಿ ಹೇಳಿರುವದರಿಂದಲೂ ಆತ್ಮರೂಪದಿಂದಲೇ ಇದು ಸತ್ಯವೆಂದು ಇನ್ನೂ ಮುಂದೆ ವಿವರಿಸಿರುವದರಿಂದಲೂ, ಮನಸ್ಸೆಂದರೆ ಇಲ್ಲಿ ಆತ್ಮನೆಂದೇ ಗ್ರಹಿಸಬೇಕು. ಮಾಂ. ೪ ನೆಯ ಮಂತ್ರದ ಭಾಷ್ಯವನ್ನು ನೋಡಿ.

2. "ಮಾಯೆಯಿಂದ ಅಲುಗಾಡುತ್ತಿರುತ್ತದೆ" ಎಂದರೆ ಇದೂ ಒಂದು ಬಗೆಯ ಅಲುಗಾಟವೆಂದು ಭಾವಿಸಬಾರದು.

(ಭಾಷ್ಯಾರ್ಥ)

ಹಾವು ಹಗ್ಗದ ರೂಪದಿಂದ ಹೇಗೋ ಹಾಗೆ ನಿಜವಾಗಿ ಆತ್ಮರೂಪದಿಂದ ಅದ್ವಯವಾಗಿದ್ದುಕೊಂಡು ಮನಸ್ಸು ಕನಸಿನಲ್ಲಿ ದ್ವೈತದಂತೆ ಕಾಣುತ್ತಿರುವದು. (ಇದಕ್ಕೆ) ಸಂಶಯವಿಲ್ಲ. ಏಕೆಂದರೆ ಸ್ವಪ್ನದಲ್ಲಿ ವಿಜ್ಞಾನಕ್ಕಿಂತ[1] ಬೇರೆಯಾಗಿ-ಆನೆಯೇ ಮುಂತಾದ ಗ್ರಾಹ್ಯವಾಗಲಿ ಅಥವಾ ಅದನ್ನು ಗ್ರಹಿಸುವ ಚಕ್ಷುರಿಂದ್ರಿಯವೇ ಮುಂತಾದದ್ದಾಗಲಿ-ದ್ವೈತವು ಇರುವದೇ ಇಲ್ಲ. ಎಚ್ಚರದಲ್ಲಿಯೂ ಹಾಗೆಯೇ ಎಂದರ್ಥ. ಏಕೆಂದರೆ ಪರಮಾರ್ಥಸತ್ತಾಗಿರುವ ವಿಜ್ಞಾನಮಾತ್ರವೇ[2] (ಇರುವ ದೆಂಬುದು) ಸಮಾನವಾಗಿರುತ್ತದೆ.

## ದ್ವೈತವು ಮನೋಮಾತ್ರ

(ಭಾಷ್ಯ)

೧೪೩. ರಜ್ಜುಸರ್ಪವತ್ ವಿಕಲ್ಪನಾರೂಪಂ ದ್ವೈತರೂಪೇಣ ಮನ ಏವ ಇತಿ ಉಕ್ತಮ್ । ತತ್ರ ಕಿಂ ಪ್ರಮಾಣಮ್ ಇತಿ ? ಅನ್ವಯವ್ಯತಿರೇಕಲಕ್ಷಣಮ್ ಅನುಮಾನಮ್ ಆಹ । ಕಥಮ್ ?

(ಭಾಷ್ಯಾರ್ಥ)

ಹಗ್ಗದ ಹಾವಿನಂತೆ ಮನಸ್ಸೇ ದ್ವೈತರೂಪದಿಂದ ವಿಕಲ್ಪನಾರೂಪ(ವುಳ್ಳದ್ದಾಗಿರುವದು) ಎಂದು ಹೇಳಿದೆ(ಯಷ್ಟೆ). ಅದಕ್ಕೆ ಪ್ರಮಾಣವೇನು ? ಎಂದರೆ (ಇದಕ್ಕೆ) ಅನ್ವಯ, ವ್ಯತಿರೇಕ[3] ಎಂಬ ಅನುಮಾನವನ್ನು ಹೇಳುತ್ತಾರ. ಹೇಗೆಂದರೆ :-

ಮನೋದೃಶ್ಯಮಿದಂ ದ್ವೈತಂ ಯತ್ಕಿಂಚಿತ್ ಸಚರಾಚರಮ್ ।
ಮನಸೋ ಹ್ಯಮನೀಭಾವೇ ದ್ವೈತಂ ನೈವೋಪಲಭ್ಯತೇ ॥೩೧॥

೩೧. ಸಚರಾಚರವಾದ ಈ ದ್ವೈತವೆಂಬುದು ಎಷ್ಟಿದೆಯೋ (ಅಷ್ಟೂ) ಮನೋದೃಶ್ಯವಾಗಿರುತ್ತದೆ. ಏಕೆಂದರೆ ಮನಸ್ಸು ಅಮನಸ್ಸಾದರೆ ದ್ವೈತವು ತೋರುವದೇ ಇಲ್ಲ.

1. ಮನಸ್ಸಿಗಿಂತ ಎಂದು ಅರ್ಥವನ್ನು ಮಾಡಬೇಕಾದದ್ದಿಲ್ಲ ; ಚೈತನ್ಯಕ್ಕಿಂತ ಎಂದೇ ಅರ್ಥ.

2. ಆತ್ಮಚೈತನ್ಯವೇ.

3. ಅದಿದ್ದರೆ ಇದೂ ಇರುವದು ಎಂಬುದು ಅನ್ವಯ ; ಅದಿಲ್ಲದಿದ್ದರೆ ಇದೂ ಇರುವದಿಲ್ಲ ಎಂಬುದು ವ್ಯತಿರೇಕ.

(ಭಾಷ್ಯ)

೧೮೪. ತೇನ ಓ ಮನಸಾ ವಿಕಲ್ಪ್ಯಮಾನೇನ ದೃಶ್ಯಮ್ ಮನೋದೃಶ್ಯಮ್ ಇದಂ ದ್ವೈತಮ್ । ಸರ್ವಂ ಮನಃ ಇತಿ ಪ್ರತಿಜ್ಞಾ । ತದ್ಭಾವೇ ಭಾವಾತ್ ತದಭಾವೇ ಅಭಾವಾತ್ । ಮನಸೋ ಓ ಅಮನೀಭಾವೇ ನಿರುದ್ಧೇ[1] ವಿವೇಕದರ್ಶನಾಭ್ಯಾಸ ವೈರಾಗ್ಯಾಭ್ಯಾಂ ರಜ್ಜ್ವಾಮಿವ ಸರ್ಪೇ, ಲಯಂ ಗತೇ ವಾ ಸುಷುಪ್ತೇ, ದ್ವೈತಂ ನೈವ ಉಪಲಭ್ಯತೇ । ಇತಿ ಅಭಾವಾತ್ ಸಿದ್ಧಂ ದ್ವೈತಸ್ಯ ಅಸತ್ತ್ವಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ವಿವಿಧವಾಗಿ ಕಲ್ಪಿಸಲ್ಪಡುವ ಆ ಮನಸ್ಸಿಗೇ ಈ ದ್ವೈತವೆಂಬುದು ದೃಶ್ಯವಾಗಿರುತ್ತದೆ[2]. ಆದ್ದರಿಂದ ಮನೋದೃಶ್ಯವು. ಎಲ್ಲವೂ ಮನಸ್ಸೇ ಎಂಬುದು ಪ್ರತಿಜ್ಞೆ[3]. ಏಕೆಂದರೆ ಅದಿದ್ದರೆ ಇರುತ್ತದೆ, ಅದಿಲ್ಲದಿದ್ದರೆ (ಇದೂ) ಇರುವದಿಲ್ಲ. ಹೇಗೆಂದರೆ ಮನಸ್ಸಿಗೆ ಅಮನೀಭಾವವಾದರೆ, ವಿವೇಕದರ್ಶನದ ಅಭ್ಯಾಸ (ಮತ್ತು) ವೈರಾಗ್ಯ-(ಇವು)ಗಳಿಂದ (ಮನಸ್ಸು) ಹಗ್ಗದಲ್ಲಿ ಹಾವಿನಂತೆ ನಾಶಗೊಳಿಸಲ್ಪಟ್ಟರೆ[4], ಅಥವಾ ಸುಷುಪ್ತಿಯಲ್ಲಿ ಅಡಗಿದರೆ[5], ದ್ವೈತವು ತೋರುವದೇ ಇಲ್ಲ. ಆದ್ದರಿಂದ (ಹೀಗೆ) ಇರುವದಿಲ್ಲವಾದ್ದರಿಂದ ದ್ವೈತವು ಅಸತ್ತು[6] ಎಂದು ಸಿದ್ಧವಾಯಿತು ಎಂದರ್ಥ.

## ಜ್ಞಾನದಿಂದ ಮನಸ್ಸು ಅಮನಸ್ಕಾಗುವದು

(ಭಾಷ್ಯ)

೧೮೫. ಕಥಂ ಪುನರಮನೀಭಾವಃ ಇತಿ ? ಉಚ್ಯತೇ-

(ಭಾಷ್ಯಾರ್ಥ)

(ಪ್ರಶ್ನೆ) :- (ಮನಸ್ಸು) ಅಮನಸ್ಕಾಗುವದಾದರೂ ಹೇಗೆ ?

1. "ಮನಸಿ" ಎಂದು ಅನ್ವಾಹಾರಮಾಡಿಕೊಳ್ಳಬೇಕು. ಆಗ ಮುಂದೆ ಬಂದಿರುವ ಸಪ್ತಮೀ ವಿಭಕ್ತಿಗಳನ್ನು ಇದಕ್ಕೆ ಹೊಂದಿಸಿಕೊಳ್ಳುವದಕ್ಕೆ ಅನುಕೂಲವಾಗುತ್ತದೆ.

2. ಮನಸ್ಸಿಗೆ ದೃಶ್ಯ ಎಂಬಲ್ಲಿ ಮನಸ್ಸೇ ದೃಶ್ಯವಾಗಿ ತೋರುತ್ತದೆ- ಎಂಬ ಅಭಿಪ್ರಾಯವು ಅಡಗಿದೆ. 3. ಪ್ರತಿಜ್ಞೆ, ಹೇತು-ಮುಂತಾದ ನ್ಯಾಯದ ಅವಯವಗಳನ್ನು ೨-೪ ಭಾಷ್ಯದಲ್ಲಿ ವಿವರಿಸಿದೆ. 4. ಬಾಧಿತವಾದರೆ ಎಂದರ್ಥ. ಯೋಗದಲ್ಲಿ ಹೇಳಿರುವ ಚಿತ್ತನಿರೋಧವಿದಲ್ಲ.

5. ಮನಸ್ಸು ಅಲ್ಲಿ ಕಾಣದೆ ಇದ್ದರೂ ಅಲ್ಲಿ ಇದೆ ಎಂದೇ ನಮ್ಮಗಳ ಭಾವನೆಯಿದೆ. ಆದ್ದರಿಂದ ಅಲ್ಲಿ ಅದು ಅಡಗಿದ ಎಂದು ಹೇಳಿದೆ. ನಿಜವಾಗಿ ಅಲ್ಲಿಯೂ ಮನಸ್ಸಿಲ್ಲ.

6. ಜ್ಞಾನವೇ ಚೈತನ್ಯವಸ್ತುವಿನ ಇರವಿಗೆ ಪ್ರಮಾಣವು ಎಂದು ಭಾವ.

(ಉತ್ತರ) :- ಹೇಳುತ್ತೇವೆ.

**ಆತ್ಮಸತ್ಯಾನುಬೋಧೇನ ನ ಸಙ್ಕಲ್ಪಯತೇ ಯದಾ ।**
**ಅಮನಸ್ತಾಂ ತದಾ ಯಾತಿ ಗ್ರಾಹ್ಯಾಭಾವೇ ತದಗ್ರಹಮ್ ॥೩೨॥**

೩೨. ಆತ್ಮಸತ್ಯಾನುಬೋಧದಿಂದ ಯಾವಾಗ ಸಂಕಲ್ಪಿಸುವದಿಲ್ಲವೋ ಆಗ ಗ್ರಾಹ್ಯವು ಇಲ್ಲವಾಗಲು ಗ್ರಹಣವಿಲ್ಲದ್ದಾಗಿ ಅದು ಅಮನಸ್ಕತೆಯನ್ನು ಹೊಂದುವದು.

(ಭಾಷ್ಯ)

೧೪೬. ಆತ್ಮೈವ ಸತ್ಯಮ್ ಆತ್ಮಸತ್ಯಮ್ ಮೃತ್ತಿಕಾವತ್ । "ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್" (ಛಾಂ. ೬-೧-೪) ಇತಿ ಶ್ರುತೇಃ । ತಸ್ಯ ಶಾಸ್ತ್ರಾಚಾರ್ಯೋಪದೇಶಮ್ ಅನು ಅವಬೋಧಃ ಆತ್ಮಸತ್ಯಾನುಬೋಧಃ । ತೇನ ಸಙ್ಕಲ್ಪಾಭಾವತಯಾ ನ ಸಙ್ಕಲ್ಪಯತೇ ದಾಹ್ಯಾಭಾವೇ ಜ್ವಲನಮಿವ ಅಗ್ನಿಃ[1] । ಯದಾ ಯಸ್ಮಿನ್ ಕಾಲೇ ತದಾ ತಸ್ಮಿನ್ ಕಾಲೇ ಅಮನಸ್ತಾಮ್ ಅಮನೋಭಾವಂ ಯಾತಿ ಗ್ರಾಹ್ಯಾಭಾವೇ ತತ್ ಮನಃ ಅಗ್ರಹಂ ಗ್ರಹಣವಿಕಲ್ಪನಾವರ್ಜಿತಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಆತ್ಮಸತ್ಯವು ಎಂದರೆ ಆತ್ಮನೆಂಬ ಸತ್ಯವು. "ವಿಕಾರವು ಮಾತಿನಿಂದಾಗಿರುವ ಬರಿಯ ಹೆಸರು. ಮಣ್ಣೆಂಬುದೇ ಸತ್ಯವು" (ಛಾಂ. ೬-೧-೪) ಎಂಬ ಶ್ರುತಿಯ ಪ್ರಮಾಣದಂತೆ ಮೃತ್ತಿಕೆಯಂತೆ[2] (ಆತ್ಮನೇ ಸತ್ಯವು). ಆ (ಆತ್ಮಸತ್ಯವನ್ನು) ಶಾಸ್ತ್ರ, ಆಚಾರ್ಯ-ಇವರುಗಳ ಉಪದೇಶಕ್ಕೆ ಅನುಗುಣವಾಗಿ ಅರಿತುಕೊಳ್ಳುವದೇ ಆತ್ಮ

1. "ಅಗ್ನೇಃ" ಎಂಬ ಅಚ್ಚಿನ ಪಾಠವು ಅಷ್ಟು ಹೊಂದುಗೆಯಾಗಿಲ್ಲ. "ಅಗ್ನಿಃ" ಎಂದು ತಿದ್ದಿಕೊಂಡರೂ ಜ್ವಲನಂ ನ ಕುರುತೇ ಎಂದು ಅಧ್ಯಾಹಾರಮಾಡಿಕೊಂಡು ಅನ್ವಯಿಸಬೇಕಾಗುವದು. ಇಲ್ಲಿ ಮೂಲವು ಏನೋ ಸ್ವಲ್ಪ ಬದಲಾಯಿಸಿರುವಂತೆ ಕಾಣುತ್ತದೆ.

2. ಮೃತ್ತಿಕೆಯೇ ಹೇಗೆ ಘಟಾದಿಕಲ್ಪನೆಗಳಿಗೆ ಆಸ್ಪದವಾಗಿರುವದೋ ಹಾಗೆ ಪರಮಾರ್ಥಸತ್ಯನಾದ ಆತ್ಮನೇ ಎಲ್ಲಕ್ಕೂ ಆಸ್ಪದನಾಗಿರುತ್ತಾನೆ, ಆತ್ಮನನ್ನು ಬಿಟ್ಟು ಯಾವದೊಂದೂ ಸತ್ಯವಾಗಿರುವದಿಲ್ಲ ಎಂದರ್ಥ. "ಏಕಾತ್ಮಪ್ರತ್ಯಯಸಾರಮ್" ಎಂಬ ಶ್ರುತಿಯ ಅಭಿಪ್ರಾಯವೂ ಇಲ್ಲಿದೆ.

ಸತ್ಯಾನುಬೋಧವು[1]. ಅದರಿಂದ ಸಂಕಲ್ಪಮಾಡತಕ್ಕ (ವಿಷಯವು ಯಾವದೂ) ಇಲ್ಲದಿರುವದರಿಂದ ಸುಡುವ (ವಸ್ತು)ವಿಲ್ಲವಾಗಲು ಬೆಂಕಿಯು ಸುಡುವಿಕೆಯನ್ನು (ಬಿಡು)ವಂತೆ ಯಾವಾಗ ಯಾವ ಕಾಲದಲ್ಲಿ (ಯಾವದನ್ನೂ) ಸಂಕಲ್ಪಿಸದೆ ಇರುವದೋ, ಆಗ ಆ ಕಾಲದಲ್ಲಿ ಆ ಮನಸ್ಸು ಗ್ರಾಹ್ಯವಾದ (ವಸ್ತು) ಇಲ್ಲವಾಗಲು[2] ಅಗ್ರಹವಾಗಿ ಅರಿಯುವದೆಂಬ ವಿಕಲ್ಪವಿಲ್ಲದ್ದಾಗಿ ಎಂದರ್ಥ. (ಆಗ) ಅಮನಸ್ತೆಯನ್ನು ಮನಸ್ಸಾಗಿಲ್ಲದಿರುವಿಕೆಯನ್ನು ಹೊಂದುತ್ತದೆ[3].

## ಜ್ಞಾನದ ಸ್ವರೂಪ

(ಭಾಷ್ಯ)

೧೮೭. ಯದಿ ಅಸಟದಂ ದ್ವೈತಮ್ ಕೇನ ಸ್ವಮಜಮ್[4] ಆತ್ಮತತ್ತ್ವಂ ವಿಬುಧ್ಯತೇ ಇತಿ ? ಉಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಈ ದ್ವೈತವು ಅಸತ್ತೇ ಆದರೆ ಹುಟ್ಟಿಲ್ಲದ ತನ್ನ ಆತ್ಮನನ್ನು ಏತರಿಂದ ಅರಿಯಬೇಕು ?

(ಪರಿಹಾರ) :- ಹೇಳುತ್ತೇವೆ :-

ಅಕಲ್ಪಕಮಜಂ ಜ್ಞಾನಂ ಜ್ಞೇಯಾಭಿನ್ನಂ ಪ್ರಚಕ್ಷತೇ ।
ಬ್ರಹ್ಮಜ್ಞೇಯಮಜಂ ನಿತ್ಯಮಜೇನಾಜಂ ವಿಬುಧ್ಯತೇ ॥೩೩॥

೩೩. ಜ್ಞಾನವು, ಅಕಲ್ಪಕವು, ಅಜವು, ಜ್ಞೇಯಾಭಿನ್ನವು (ಎಂದು) ಹೇಳುವರು. ಬ್ರಹ್ಮಜ್ಞೇಯವು[5] ನಿತ್ಯವೂ ಅಜವು. ಅಜದಿಂದ ಅಜವು ಅರಿತುಕೊಳ್ಳುತ್ತದೆ.

1. ಶ್ರುತಿ, ಗುರುವಾಕ್ಯ, ಆತ್ಮಾನುಭವ-ಈ ಮೂರೂ ಒಂದುಗಡೆಯಾಗಿ ಆಗುವ ಬೋಧವೇ ಆತ್ಮಸತ್ಯಾನುಬೋಧವು.

2. ಅನಾತ್ಮವೆಂದು ಸ್ಪುಟವಾಗಲು.

3. ಆತ್ಮಸ್ವರೂಪವನ್ನೇ ಪಡೆದುಬಿಡುತ್ತದೆ.

4. "ಸಮಗ್ಗಸಮ್" ಎಂಬ ಅಚ್ಚಿನ ಪಾಠಕ್ಕಿಂತ ಇದು ಉತ್ತಮ.

5. ಭಾಷ್ಯಕ್ಕನುಗುಣವಾಗಿ ಕನ್ನಡಿಸಿರುವದಿದು. "ಬ್ರಹ್ಮಜ್ಞೇಯಮ್" ಬಿಡಿಸಿಕೊಂಡು ಜ್ಞೇಯವಾದ ಬ್ರಹ್ಮವು ನಿತ್ಯವು, ಅಜವಾದದ್ದು" ಎಂದೂ ಕನ್ನಡಿಸಬಹುದು.

(ಭಾಷ್ಯ)

೧೪೪. ಅಕಲ್ಪಕಂ ಸರ್ವಕಲ್ಪನಾವರ್ಜಿತಮ್ ಅತ ಏವ ಅಜಂ ಜ್ಞಾನಂ ಜ್ಞಪ್ತಿ ಮಾತ್ರಂ ಜ್ಞೇಯೇನ ಪರಮಾರ್ಥಸತಾ ಬ್ರಹ್ಮಣಾ ಅಭಿನ್ನಂ ಪ್ರಚಕ್ಷತೇ ಕಥಯನ್ತಿ ಬ್ರಹ್ಮವಿದಃ । ''ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇ'' (ಬೃ. ೪-೩-೩೦) ಅಗ್ನ್ಯುಷ್ಣವತ್ । ''ವಿಜ್ಞಾನಮಾನನ್ದಂ ಬ್ರಹ್ಮ'' (ಬೃ. ೩-೯-೨೮) ''ಸತ್ಯಂ ಜ್ಞಾನಮನನ್ತಂ ಬ್ರಹ್ಮ'' (ತೈ. ೨-೧) ಇತ್ಯಾದಿಶ್ರುತಿಭ್ಯಃ । ತಸ್ಯೈವ ವಿಶೇಷಣಮ್ (ಬ್ರಹ್ಮಜ್ಞೇಯಮ್) । ಬ್ರಹ್ಮ ಜ್ಞೇಯಂ ಯಸ್ಯ ಸ್ವಸ್ಯ ತದಿದಂ ಬ್ರಹ್ಮಜ್ಞೇಯಮ್ । ಔಷ್ಣಸ್ಯೇವ[1] ಅಗ್ನಿವತ್ ಅಭಿನ್ನಮ್ । ತೇನ ಆತ್ಮಸ್ವರೂಪೇಣ ಅಜೇನ ಜ್ಞಾನೇನ ಅಜಂ ಜ್ಞೇಯಮ್ ಆತ್ಮತತ್ತ್ವಂ ಸ್ವಯಮೇವ ವಿಬುಧ್ಯತೇ ಅವಗಚ್ಛತಿ । ನಿತ್ಯ ಪ್ರಕಾಶಸ್ವರೂಪ ಇವ ಸವಿತಾ ನಿತ್ಯವಿಜ್ಞಾನೈಕರಸಘನತ್ವಾತ್ ನ ಜ್ಞಾನಾನ್ತರಮ್ ಅಪೇಕ್ಷತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಅಕಲ್ಪಕವಾದ ಯಾವ ಕಲ್ಪನೆಯೂ ಇಲ್ಲದ[2], ಆದ್ದರಿಂದಲೇ ಅಜವಾದ ಜ್ಞಾನವು ಬರಿಯ ಚೈತನ್ಯವು ಜ್ಞೇಯವಾದ ಪರಮಾರ್ಥಸದ್ರೂಪವಾದ ಬ್ರಹ್ಮಕ್ಕಿಂತ ಬೇರೆಯಲ್ಲ (ಎಂದು) ಬ್ರಹ್ಮಜ್ಞಾನಿಗಳು ಹೇಳುವರು, ತಿಳಿಸುತ್ತಾರೆ. ''ಅರಿಯುವಾತನ ಅರಿವಿಗೆ ನಾಶವು ಇರುವದೇ ಇಲ್ಲ'' (ಬೃ. ೪-೩-೩೦) ಬೆಂಕಿಯ ಬಿಸಿಗೆ ಹೇಗೆ (ಲೋಪ ವಿಲ್ಲವೋ ಹಾಗೆ) ''ವಿಜ್ಞಾನವೂ ಆನಂದವೂ ಆದ ಬ್ರಹ್ಮವು'' (ಬೃ. ೩-೯-೨೮) ''ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು'' (ತೈ. ೨-೧) ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣವು. ಆ ಜ್ಞಾನಕ್ಕೆ[3] (ಇನ್ನೊಂದು) ವಿಶೇಷಣವನ್ನು (ಹೇಳುತ್ತಾರೆ) : (ಇದು ಬ್ರಹ್ಮಜ್ಞೇಯವು) ಬ್ರಹ್ಮವು ಯಾವ ತನಗೆ ಜ್ಞೇಯವಾಗಿರುವದೋ ಅಂಥ ಇದು ಬ್ರಹ್ಮಜ್ಞೇಯವು. ಬಿಸಿಯು ಬೆಂಕಿಗೆ ಹೇಗೋ (ಹಾಗೆ ಬ್ರಹ್ಮಕ್ಕಿಂತಲೂ)

---

1. ''ಉಷ್ಣಸ್ಯೇವ'' ಎಂಬ ಆ।। ಪಾಠಕ್ಕಿಂತ ಇದು ಮೇಲು.

2. ಇದು ಇಂಥ ''ದ್ರವ್ಯವು, ಗುಣವು'' ಮುಂತಾದ ಕಲ್ಪನೆಯಿಲ್ಲದ.

3. ''ಬ್ರಹ್ಮಜ್ಞೇಯವಾದ ಜ್ಞಾನವು'' ಎಂದು ಅನ್ವಯಿಸಿರುತ್ತದೆ. ಅಜವಾಗಿರುವ ಆತ್ಮ ತತ್ತ್ವವು ತಾನೇ ತನ್ನನ್ನರಿಯುವ ಜ್ಞಾನವಾಗಿರುತ್ತದೆ- ಎಂಬರ್ಥವು ಇದರಿಂದ ಹೊರಡುತ್ತದೆ. ಬ್ರಹ್ಮವೂ, ಜ್ಞೇಯವೂ, ನಿತ್ಯವೂ, ಅಜವೂ ಆದ ಜ್ಞಾನವಾಗಿರುತ್ತದೆ ಎಂಬಲೂ ಅರ್ಥವನ್ನು ಮಾಡ ಬಹುದು. 'ಜ್ಞೇಯವೆಂಬುದು ಭೂತಪೂರ್ವಗತಿಯಿಂದ ಎಂದು ಉಪನಿಷತ್ತಿನ ಭಾಷ್ಯದಲ್ಲಿಯೇ ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

ಅಭಿನ್ನವಾದದ್ದು. (ನಿತ್ಯವೂ ಅಜವಾದದ್ದು[1]). ಆ ತನ್ನ ಸ್ವರೂಪವೇ ಆಗಿರುವ ಅಜವಾದ ಜ್ಞಾನದಿಂದ ಅಜವಾದ ಜ್ಞೇಯವು ಆತ್ಮತತ್ತ್ವವು, ತಾನೇ ಅರಿತುಕೊಳ್ಳುತ್ತದೆ, ಗೊತ್ತುಮಾಡಿಕೊಳ್ಳುತ್ತದೆ. ಯಾವಾಗಲೂ ಬೆಳಗುತ್ತಿರುವ ಸ್ವರೂಪದ ಸೂರ್ಯನಂತೆ ಯಾವಾಗಲೂ ಅರಿವಿನ ಸ್ವರೂಪವೇ ಆಗಿರುವ ಗಟ್ಟಿಯಾಗಿರುವದರಿಂದ ಮತ್ತೊಂದು ಜ್ಞಾನವನ್ನು ಬಯಸುವದಿಲ್ಲ[2] ಎಂದರ್ಥ.

## ಜ್ಞಾನದಿಂದ ನಿಗ್ರಹವಾದ ಮನಸ್ಸಿನ ಸ್ವರೂಪ

(ಭಾಷ್ಯ)

೧೪೯. ಆತ್ಮಸತ್ಯಾನುಬೋಧೇನ ಸಙ್ಕಲ್ಪಮ್ ಅಕುರ್ವತ್ ಬಾಹ್ಯವಿಷಯಾಭಾವೇ ನಿರಿನ್ಧನಾಗ್ನಿವತ್ ಪ್ರಶಾನ್ತಂ ನಿಗೃಹೀತಂ ನಿರುದ್ಧಂ ಮನೋ ಭವತಿ ಇತ್ಯುಕ್ತಮ್ । ಏವಂ ಚ ಮನಸಃ ಹಿ ಅಮನೀಭಾವೇ ದ್ವೈತಾಭಾವಶ್ಚ ಉಕ್ತಃ । ತಸ್ಯ-

(ಭಾಷ್ಯಾರ್ಥ)

ಆತ್ಮನೇ ಸತ್ಯನೆಂಬ ಅನುಬೋಧದಿಂದ ಹೊರಗಿನ ವಿಷಯವಿಲ್ಲವಾಗಲು ಸಂಕಲ್ಪವನ್ನು ಮಾಡದೆ ಕಟ್ಟಿಗೆಯಿಲ್ಲದ ಬೆಂಕಿಯಂತೆ ಬಹಳ ಶಾಂತವಾಗಿ ಮನಸ್ಸು ನಿಗೃಹೀತವಾಗಿ ನಿರುದ್ಧವಾಗುವದು ಎಂದು ಹೇಳಿದ್ದಾಯಿತು. ಮತ್ತು ಹೀಗೆ ಮನಸ್ಸು ಮನಸ್ಸಲ್ಲದೆ ಹೋಗಲು ದ್ವೈತವೂ ಇರುವದಿಲ್ಲ ಎಂದು ಹೇಳಿದ್ದಾಯಿತು[3]. ಆ-

ನಿಗೃಹೀತಸ್ಯ ಮನಸೋ ನಿರ್ವಿಕಲ್ಪಸ್ಯ ಧೀಮತಃ ।
ಪ್ರಚಾರಃ ಸ ತು ವಿಜ್ಞೇಯಃ ಸುಷುಪ್ತೇಽನ್ಯೋ ನ ತತ್ಸಮಃ ॥೩೪॥

೩೪. ನಿಗೃಹೀತವಾದ, ನಿರ್ವಿಕಲ್ಪವಾದ, ಧೀಮಂತವಾದ ಮನಸ್ಸಿನ ಪ್ರಚಾರವಿದೆಯಲ್ಲ, ಅದನ್ನೇ ಅರಿತುಕೊಳ್ಳಬೇಕು. ತನಿನಿದ್ರೆಯಲ್ಲಿ (ಇರುವದು) ಬೇರೆಯ(ತರ)ದ್ದು ; ಅದಕ್ಕೆ ಸಮನಲ್ಲ.

(ಭಾಷ್ಯ)

೧೫೦. ಏವಂ ನಿಗೃಹೀತಸ್ಯ ನಿರುದ್ಧಸ್ಯ ಮನಸಃ ನಿರ್ವಿಕಲ್ಪಸ್ಯ ಸರ್ವಕಲ್ಪನಾ

---

1. ಈ ಎರಡು ಮಾತುಗಳು ಭಾಷ್ಯದಲ್ಲಿ ಇಲ್ಲಿ ಬಿಟ್ಟುಹೋಗಿವೆ.

2. ಅಕ್ಷರಾರ್ಥವನ್ನು ಓದಿದು ತಾನು ತನ್ನನ್ನೇ ಅರಿತುಕೊಳ್ಳುತ್ತದೆ ಎಂಬ ಕರ್ಮಕರ್ತೃ ಭಾವವನ್ನು ಕಲ್ಪಿಸಬಾರದು-ಎಂದು ಭಾವ

3. ೩೧-೩೨ ನೆಯ ಕಾರಿಕೆಗಳಲ್ಲಿ ಹೇಳಿರುವದರ ಸಾರವಿದು.

ವರ್ಜಿತಸ್ಯ ಧೀಮತಃ ವಿವೇಕವತಃ ಪ್ರಚರಣಂ ಪ್ರಚಾರಃ ಯಃ ಸ ತು ಪ್ರಃ (ವಿಜ್ಞೇಯಃ)[1] ವಿಶೇಷೇಣ ಜ್ಞೇಯಃ ಯೋಗಿಭಿಃ । ನನು ಸರ್ವಪ್ರತ್ಯಯಾಭಾವೇ ಯಾದೃಶಃ ಸುಷುಪ್ತಿಸ್ಥಸ್ಯ ಮನಸಃ ಪ್ರಚಾರಃ ತಾದೃಶ ಏವ ನಿರುದ್ಧಸ್ಯಾಪಿ । ಪ್ರತ್ಯಯಾಭಾವಾವಿಶೇಷಾತ್ । ಕಿಂ ತತ್ರ ವಿಜ್ಞೇಯಮ್ ಇತಿ ? ಅತ್ರ ಉಚ್ಯತೇ । ನೈವಮ್ । ಯಸ್ಮಾತ್ ಸುಷುಪ್ತೇ ಅನ್ಯಃ ಪ್ರಚಾರಃ ಅವಿದ್ಯಾಮೋಹತಮೋಗ್ರಸ್ತಸ್ಯ ಅನ್ತರ್ಲೀನಾನೇಕಾನರ್ಥಪ್ರವೃತ್ತಿಬೀಜವಾಸನಾವತಃ ಮನಸಃ ಆತ್ಮಸತ್ಯಾನುಬೋಧಹುತಾಶವಿಪ್ಲುಷ್ಟಾ ವಿದ್ಯಾನರ್ಥಪ್ರವೃತಿಬೀಜಸ್ಯ ನಿರುದ್ಧಸ್ಯ ಅನ್ಯ ಏವ ಪ್ರಶಾನ್ತಸರ್ವಕ್ಲೇಶರಜಸಃ ಸ್ವತನ್ತ್ರಃ ಪ್ರಚಾರಃ । ಅತಃ ನ ತತ್ಸಮಃ । ತಸ್ಮಾತ್ ಯುಕ್ತಃ ಸ ವಿಜ್ಞಾತುಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಹೀಗೆ ನಿಗೃಹೀತವಾದ ನಿರುದ್ಧವಾದ[2] ನಿರ್ವಿಕಲ್ಪವಾದ ಯಾವ ಕಲ್ಪನೆಯೂ ಇಲ್ಲದ ಧೀಮಂತವಾದ ಎಂದರೆ ವಿವೇಕದಿಂದ ಕೂಡಿರುವ[3] ನಡೆಯೆಂಬ ಮನಸ್ಸಿನ ಪ್ರಚಾರವಿದೆಯಲ್ಲ[4], ಆ ಪ್ರಚಾರವು ವಿಜ್ಞೇಯವು, ಯೋಗಿಗಳಾದವರು[5] ವಿಶೇಷವಾಗಿ ಅರಿತುಕೊಳ್ಳತಕ್ಕದ್ದು.

(ಆಕ್ಷೇಪ) :- ಯಾವ ಪ್ರತ್ಯಯವೂ ಇಲ್ಲದೆ ಹೋಗಲಾಗಿ ತನಿನಿದ್ರೆಯಲ್ಲಿರುವ ಮನಸ್ಸಿನ ಪ್ರಚಾರವು ಎಂಥದ್ದಾ(ಗಿರುವದೋ) ನಿರುದ್ಧ (ಮನಸ್ಸಿ)ನ (ಪ್ರಚಾರ)ವೂ ಅಂಥದ್ದೇ (ಆಗಿರುತ್ತದೆ). ಏಕೆಂದರೆ ಪ್ರತ್ಯಯಗಳು ಇಲ್ಲವೆಂಬುದು (ಎರಡಕ್ಕೂ) ಸಮಾನವಾಗಿರುತ್ತದೆ. (ಹೀಗಿರುವಲ್ಲಿ) ಇಲ್ಲಿ ಅರಿತುಕೊಳ್ಳತಕ್ಕದ್ದು ಏನು ?

(ಪರಿಹಾರ) :- ಇದಕ್ಕೆ (ಉತ್ತರವನ್ನು ಹೇಳುತ್ತೇವೆ. ಹಾಗಲ್ಲ. ಏಕೆಂದರೆ ತನಿನಿದ್ರೆಯಲ್ಲಿ ಅವಿದ್ಯೆಯೆಂಬ ಮೋಹದ ಕತ್ತಲೆಯಿಂದ ಮುಚ್ಚಲ್ಪಟ್ಟಿರುವ ತನ್ನೊಳಗೆ ಅನೇಕ ಅನರ್ಥಪ್ರವೃತ್ತಿಗಳಿಗೆ ಬೀಜವಾದ ವಾಸನೆಗಳಿಂದ ಕೂಡಿರುವ ಮನಸ್ಸಿನ

1. ಈ ಮಾತು ಆ।। ದಲ್ಲಿ ಬಿಟ್ಟು ಹೋಗಿದೆ. ಆ।।ಕಾ।।ಗಳಲ್ಲಿ "ವಿಶೇಷೇಣ ಜ್ಞೇಯಃ ವಿಜ್ಞೇಯಃ" ಎಂದಿದೆ.

2. ನಿರುದ್ಧವಾದ ಎಂದರೆ ಜ್ಞಾನದಿಂದ ಆತ್ಮನಾಗಿ ಮಾಡಿಕೊಂಡು ಇಲ್ಲವಾಗಿಸಿದ ಎಂದರ್ಥ ; ಇಲ್ಲಿ ಯೋಗದಲ್ಲಿ ಹೇಳಿರುವ ಚಿತ್ತವೃತ್ತಿನಿರೋಧವನ್ನೇನೂ ಹೇಳಿಲ್ಲ.

3. ಆತ್ಮನೇ ಸತ್ಯ, ಮಿಕ್ಕದ್ದೆಲ್ಲವೂ ಅಸತ್ಯ-ಎಂಬ ವಿವೇಕದಿಂದ ಕೂಡಿರುವ.

4. ಪ್ರಚಾರವೆಂದರೆ ವೃತ್ತಿಯು ; ವ್ಯವಹಾರದೃಷ್ಟಿಯಿಂದ ಮನಸ್ಸಿನ ವೃತ್ತಿಯು ಜ್ಞಾನವು, ಪರಮಾರ್ಥವಾಗಿ ಅದು ಆತ್ಮನೇ.

5. ವಿಚಾರಕರಾದ ಮುಮುಕ್ಷುಗಳು.

ಪ್ರಚಾರವೇ ಬೇರೆ[1], ಆತ್ಮನೇ ಸತ್ಯವೆಂಬ ಅನುಬೋಧವೆಂಬ ಬೆಂಕಿಯಿಂದ ಅವಿದ್ಯೆಯೆಂಬ ಅನರ್ಥಪ್ರವೃತ್ತಿಬೀಜವು ಸುಟ್ಟುಹೋಗಿರುವ ನಿರುದ್ಧವಾದ, ಕ್ಲೇಶಗಳ ರಜಸ್ಸೆಲ್ಲ ನಾಶವಾಗಿಬಿಟ್ಟಿರುವ (ಮನಸ್ಸಿನ) ಸ್ವತಂತ್ರವಾದ ಪ್ರಚಾರವೇ ಬೇರೆ(ಯ ಬಗೆಯದು)[2]. ಆದ್ದರಿಂದ (ಇದು) ಅದಕ್ಕೆ ಸಮನಲ್ಲ. ಆದ್ದರಿಂದ ಇದನ್ನು ಅರಿತು ಕೊಳ್ಳಬೇಕಾದದ್ದು ಯುಕ್ತ ಎಂದು ಅಭಿಪ್ರಾಯ.

(ಭಾಷ್ಯ)

೧೯೧. ಪ್ರಚಾರಭೇದೇ ಹೇತುಮ್ ಆಹ-

(ಭಾಷ್ಯಾರ್ಥ)

(ಈ ಎರಡು) ಪ್ರಚಾರಗಳು ಬೇರೆಯಾಗಿರುವದಕ್ಕೆ ಕಾರಣವನ್ನು ಹೇಳುತ್ತಾರೆ :-

ಲೀಯತೇ ಹಿ ಸುಷುಪ್ತೇ ತನ್ನಿಗೃಹೀತಂ ನ ಲೀಯತೇ ।
ತದೇವ ನಿರ್ಭಯಂ ಬ್ರಹ್ಮ ಜ್ಞಾನಾಲೋಕಂ ಸಮನ್ತತಃ ॥೩೫॥

೩೫. ಏಕೆಂದರೆ ಸುಷುಪ್ತಿಯಲ್ಲಿ ಅದು ಲಯವಾಗುತ್ತದೆ ; ನಿಗೃಹೀತವಾದರೆ ಲಯವಾಗುವದಿಲ್ಲ. ಅದೇ ನಿರ್ಭಯವಾದ ಎಲ್ಲೆಲ್ಲಿಯೂ ಜ್ಞಾನಾಲೋಕವಾದ ಬ್ರಹ್ಮವು.

(ಭಾಷ್ಯ)

೧೯೨. ಲೀಯತೇ ಸುಷುಪ್ತೇ[3] ಹಿ ಯಸ್ಮಾತ್ ಸರ್ವಾಭಿಃ ಅವಿದ್ಯಾಪ್ರತ್ಯಯ ಬೀಜವಾಸನಾಭಿಃ ಸಹ ತಮೋರೂಪಮ್ ಅವಿಶೇಷರೂಪಂ ಬೀಜಭಾವಮ್ ಆಪದ್ಯತೇ । ತತ್ ವಿವೇಕವಿಜ್ಞಾನಪೂರ್ವಕಂ ನಿರುದ್ಧಂ ನಿಗೃಹೀತಂ ಸತ್ ನ ಲೀಯತೇ ತಮೋಬೀಜಭಾವಂ ನ ಆಪದ್ಯತೇ । ತಸ್ಮಾತ್ ಯುಕ್ತಃ ಪ್ರಚಾರಭೇದಃ ಸುಷುಪ್ತಸ್ಯ

---

1. ಸುಷುಪ್ತಿಯಲ್ಲಿ ವಿಷಯಗಳ ಅರಿವು ಇರುವದಿಲ್ಲವಾದರೂ ಎಚ್ಚೆತ್ತಕೂಡಲೆ ವಿಷಯ ಸತ್ಯತ್ವಬುದ್ಧಿಯು ಮತ್ತೆ ಕಾಣುತ್ತದೆ. ಆದ್ದರಿಂದ ಮನಸ್ಸಿನ ವೃತ್ತಿಯಲ್ಲಿ ದ್ವೈತಸತ್ಯತ್ವವಾಸನೆಯಿರುವದು ಎಂದು ಹೇಳಿದೆ. ಇಲ್ಲಿ ಹೇಳಿರುವ ಅವಿದ್ಯೆಯ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಜ್ಞಾನವುಂಟಾದರೆ ಅವಿದ್ಯೆಯು ನಾಶವಾಗುವದು. ಅದರಿಂದ ರಾಗಾದಿಕ್ಲೇಶಗಳೂ ಹೋಗಿರುವವು. ಅದರಿಂದ ಕರ್ಮಪ್ರವೃತ್ತಿಯೂ ಆಗದೇ ಇರುವದು. ಆದ್ದರಿಂದ ಇಲ್ಲಿ ಮನಸ್ಸು ಸ್ವತಂತ್ರವಾದ ವೃತ್ತಿಯನ್ನು ಹೊಂದಿರುತ್ತದೆ. ಸುಷುಪ್ತಿಯ ಮನಸ್ಸಿನಂತೆ ಪರವಶವಲ್ಲ.

3. 'ಸುಷುಪ್ತೌ' ಎಂಬ ಅಚ್ಚಿನ ಪಾಠಕ್ಕಿಂತ ಇದೇ ಕಾರಿಕಾನುಸಾರಿ.

ಸಮಾಹಿತಸ್ಯ ಚ[1] ಮನಸಃ । ಯದಾ ಗ್ರಾಹ್ಯಗ್ರಾಹಕಾವಿದ್ಯಾಕೃತಮಲದ್ವಯ ವರ್ಜಿತಮ್, ತದಾ ಪರಮ್ ಅದ್ವಯಂ ಬ್ರಹ್ಮೈವ ತತ್ ಸಂವೃತ್ತಮ್ ಇತ್ಯತಃ ತದೇವ ನಿರ್ಭಯಮ್ । ದ್ವೈತಗ್ರಹಣಸ್ಯ ಭಯನಿಮಿತ್ತಸ್ಯ ಅಭಾವಾತ್ ಶಾನ್ತಮ್ ಅಭಯಂ ಬ್ರಹ್ಮ । ಯದ್ ವಿದ್ವಾನ್ ನ ಬಿಭೇತಿ ಕುತಶ್ಚನ । ತದೇವ ವಿಶೇಷ್ಯತೇ ಜ್ಞಪ್ತಿಃ ಜ್ಞಾನಮ್ ಆತ್ಮಸ್ವಭಾವಚೈತನ್ಯಮ್ । ತದೇವ ಜ್ಞಾನಮ್ ಆಲೋಕಃ ಪ್ರಕಾಶಃ ಯಸ್ಯ ತದ್ ಬ್ರಹ್ಮ ಜ್ಞಾನಾಲೋಕಮ್ । ವಿಜ್ಞಾನೈಕರಸಘನಮ್ ಇತ್ಯರ್ಥಃ । ಸಮನ್ತತಃ ಸಮನ್ತಾತ್ ಸರ್ವತಃ । ವ್ಯೋಮವತ್ ನೈರನ್ತರ್ಯೇಣ ವ್ಯಾಪಕಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹಿ = ಏಕೆಂದರೆ (ಇದು) ಸುಷುಪ್ತಿಯಲ್ಲಿ ಅವಿದ್ಯಾಪ್ರತ್ಯಯಗಳಿಗೆ ಬೀಜವಾಗಿರುವ ಎಲ್ಲಾ ವಾಸನೆಗಳೊಡನೆ ಲಯವಾಗುತ್ತದೆ. ತಮೋರೂಪವಾದ ಸಾಮಾನ್ಯ ರೂಪವಾದ ಬೀಜಭಾವವನ್ನು ಹೊಂದುತ್ತದೆ. ಅದು ವಿವೇಕವಿಜ್ಞಾನಪೂರ್ವಕವಾಗಿ ನಿಗೃಹೀತವಾದರೆ ನಿರುದ್ಧವಾದರೆ ಲಯವಾಗುವದಿಲ್ಲ. ತಮೋರೂಪದ ಬೀಜಭಾವವನ್ನು ಹೊಂದುವದಿಲ್ಲ[2]. ಆದ್ದರಿಂದ ಸುಷುಪ್ತವಾದ ಮತ್ತು ಸಮಾಹಿತವಾದ ಮನಸ್ಸಿನ ಪ್ರಚಾರಗಳಲ್ಲಿ ಭೇದ(ವಿರುವದು) ಯುಕ್ತವಾಗಿರುತ್ತದೆ. ಯಾವಾಗ ಗ್ರಾಹ್ಯ, ಗ್ರಾಹಕ-ಎಂಬ, ಅವಿದ್ಯೆಯಿಂದಾಗಿರುವ ಮಲದ್ವಯವಿಲ್ಲದ್ದಾಗುವದೋ[3] ಆಗ ಹೆಚ್ಚಿನ ಅದ್ವಯವಾದ ಬ್ರಹ್ಮವೇ ಅದಾಗಿಬಿಟ್ಟಿರುವದರಿಂದ ಅದೇ ನಿರ್ಭಯವು. ಭಯಕ್ಕೆ ಕಾರಣವಾದ ದ್ವೈತದ ಅರಿವೆಂಬ ನಿಮಿತ್ತವು ಇಲ್ಲದ್ದರಿಂದ ಶಾಂತವಾಗಿ ಅಭಯವಾಗಿರುವ ಬ್ರಹ್ಮ(ವಾಗಿರುತ್ತದೆ). ಆ ಬ್ರಹ್ಮವನ್ನು ಅರಿತುಕೊಂಡವನು ಏತಕ್ಕೂ ಹೆದರುವದಿಲ್ಲ[4].

1. "ಚ" ಇಲ್ಲಿ ಬೇಕು.

2. ಬೀಜಭಾವವು ತಮೋರೂಪವು-ಎಂದರೆ ಅವಿದ್ಯಾಕಲ್ಪಿತವು ಎಂದರ್ಥ. ಹಗ್ಗದಲ್ಲಿ ಕಲ್ಪಿತವಾಗಿರುವ ಹಾವು ಕಣ್ಮರೆಯಾದರೆ ಹೇಗೆ ಬೀಜಭಾವವು ಇರುವದೋ ಹಾಗೆಯೇ ಇಲ್ಲಿಯೂ ಅರಿಯಬೇಕು.

3. ವ್ಯವಹಾರದಲ್ಲಿ ಕಾಣುವ ಅರಿಯುವದು, ಅರಿಯಲ್ಪಡತಕ್ಕದ್ದು-ಎಂಬ ವಿಭಾಗವು ಅವಿದ್ಯಾಕಲ್ಪಿತವಾಗಿರುತ್ತದೆ.

4. ತೈತ್ತಿರೀಯ ೨-೯ ಶ್ರುತಿಯ ಸೂಚನೆ. ಅಲ್ಲಿ ಹೇಳಿರುವ ಬ್ರಹ್ಮಸ್ವರೂಪವೇ ಜ್ಞಾನದಿಂದ ನಿಗೃಹೀತವಾದ ಮನಸ್ಸಿನ ಸ್ವರೂಪವು ಎಂದು ಭಾವ.

ಆ (ಬ್ರಹ್ಮರೂಪವಾದ ಮನಸ್ಸಿಗೇ) ವಿಶೇಷಣವನ್ನು ಹೇಳುತ್ತಾರೆ
ಅರಿವು, ಆತ್ಮಸ್ವರೂಪವೇ ಆದ ಚೈತನ್ಯವು. ಆ ಜ್ಞಾನವೆಂಬ ಆಲೋಕವು, ಬೆಳಕು, ಯಾವ ಬ್ರಹ್ಮಕ್ಕಿರುವದೋ ಅದು ಜ್ಞಾನಾಲೋಕವು. ಅರಿವೆಂಬ ಒಂದೇ ರಸದ ಗಟ್ಟಿಯು ಎಂದರ್ಥ. (ಸಮನ್ತತಃ - ಸಮನ್ತಾತ್) ಎಲ್ಲಾ ಕಡೆಯಲ್ಲಿಯೂ ಆಕಾಶದಂತೆ ಎಡೆಬಿಡದೆ ವ್ಯಾಪಿಸಿಕೊಂಡಿರುತ್ತದೆ ಎಂದರ್ಥ.

ಅಜಮನಿದ್ರಮಸ್ವಪ್ನಮನಾಮಕಮರೂಪಕಮ್ ।
ಸಕೃದ್ವಿಭಾತಂ ಸರ್ವಜ್ಞಂ ನೋಪಚಾರಃ ಕಥಂಚನ ॥೩೬॥

೩೬. ಅಜವು, ಅನಿದ್ರವು, ಅಸ್ವಪ್ನವು, ಅನಾಮಕವು, ಅರೂಪಕವು, ಒಂದೇ ಸಮನೆ ಪ್ರಕಾಶಿಸುವಂಥದ್ದು, ಸರ್ವಜ್ಞವು. ಹೇಗೂ ಉಪಚಾರ ವಿರುವದಿಲ್ಲ.

(ಭಾಷ್ಯ)

೧೯೩. ಜನ್ಮನಿಮಿತ್ತಾಭಾವಾತ್ ಸಬಾಹ್ಯಾಭ್ಯನ್ತರಮ್ ಅಜಮ್ । ಅವಿದ್ಯಾ ನಿಮಿತ್ತಂ ಹಿ ಜನ್ಮ ರಜ್ಜುಸರ್ಪವತ್ ಇತಿ ಅವೋಚಾಮ । ಸಾ ಚ ಅವಿದ್ಯಾ ಆತ್ಮ ಸತ್ಯಾನುಬೋಧೇನ ನಿರುದ್ಧಾ ಯತಃ ಅತಃ[1] ಅಜಮ್ । ಅತ ಏವ ಅನಿದ್ರಮ್ । ಅವಿದ್ಯಾಲಕ್ಷಣಾನಾದಿಮಾಯಾನಿದ್ರಾಸ್ವಾಪಾತ್[2] ಪ್ರಬುದ್ಧಮ್[3] ಅದ್ವಯಸ್ವರೂಪೇಣ ಆತ್ಮನಾ । ಅತಃ 'ಅಸ್ವಪ್ನಮ್' । ಅಪ್ರಬೋಧಕೃತೇ ಹಿ ಅಸ್ಯ ನಾಮರೂಪೇ । ಪ್ರಬೋಧಾಚ್ಚ ತೇ ರಜ್ಜುಸರ್ಪವದ್ ವಿನಷ್ಟೇ ಇತಿ ನ ನಾಮ್ನಾ ಅಭಿಧೀಯತೇ ಬ್ರಹ್ಮ ರೂಪ್ಯತೇ ವಾ ನ ಕೇನಚಿತ್ ಪ್ರಕಾರೇಣ ಇತಿ ಅನಾಮಕಮ್ ಅರೂಪಕಂ ಚ ತತ್ । "ಯತೋ ವಾಚೋ ನಿವರ್ತನ್ತೇ" (ತೈ. ೨-೪) ಇತ್ಯಾದಿಶ್ರುತೇಃ । ಕಿಂ ಚ ಸಕೃದ್ವಿಭಾತಂ । ಸದೈವ ವಿಭಾತಂ ಸದಾ ಭಾರೂಪಮ್ । ಅಗ್ರಹಣಾನ್ಯಥಾಗ್ರಹಣಾವಿರ್ಭಾವ ತಿರೋಭಾವವರ್ಜಿತತ್ವಾತ್ । ಗ್ರಹಣಾಗ್ರಹಣೇ ಹಿ ರಾತ್ರ್ಯಹನೀ । ತಮಶ್ಚಾವಿದ್ಯಾಲಕ್ಷಣಂ ಸದಾ ಅಪ್ರಭಾತತ್ವೇ ಕಾರಣಮ್ । ತದಭಾವಾತ್ ನಿತ್ಯಚೈತನ್ಯಭಾರೂಪತ್ವಾಚ್ಚ ಯುಕ್ತಂ 'ಸಕೃದ್ವಿಭಾತಮ್' ಇತಿ । ಅತ ಏವ ಸರ್ವಂ ಚ ತತ್ ಜ್ಞಸ್ವರೂಪಂ[4] ಚ ಇತಿ

---

1. ಈ ಮಾತು ಇಲ್ಲಿ ಬೇಕು.
2. 'ಅನಾದಿರ್ಮಾಯಾ . ' ಎಂಬ ಆಚ್ಛಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
3. 'ಪ್ರಬುದ್ಧಃ' ಆ॥
4. 'ಜ್ಞಪ್ತಿಸ್ವರೂಪಂ ಚ' ಎಂಬ ವಾ॥ ಕಾ॥ ಪಾಠವು ಬೇಕಿಲ್ಲ.

ಸರ್ವಜ್ಞಮ್ । ನ ಇಹ ಬ್ರಹ್ಮಣಿ ಏವಂವಿಧೇ ಉಪಚರಣಮ್ ಉಪಚಾರಃ ಕರ್ತವ್ಯಃ । ಯಥಾ ಅನ್ಯೇಷಾಮ್ ಆತ್ಮಸ್ವರೂಪವ್ಯತಿರೇಕೇಣ ಸಮಾಧಾನಾದ್ಯುಪಚಾರಃ । ನಿತ್ಯ ಶುದ್ಧಬುದ್ಧಮುಕ್ತಸ್ವಭಾವತ್ವಾತ್ ಬ್ರಹ್ಮಣಃ ಕಥಂಚನ । ನ ಕಥಂಚಿದಪಿ ಕರ್ತವ್ಯ ಸಮ್ಭವಃ ಅವಿದ್ಯಾನಾಶೇ ಇತ್ಯರ್ಥಃ ।।

(ಭಾಷ್ಯಾರ್ಥ)

(ಈ ಬ್ರಹ್ಮವು[1]) ಜನ್ಮಕ್ಕೆ ನಿಮಿತ್ತವೇ ಇಲ್ಲದ್ದರಿಂದ ಹೊರಗೂ ಒಳಗೂ ಅಜವು. ಹಗ್ಗದ ಹಾವು (ಹುಟ್ಟು)ವಂತೆ (ಇದು) ಹುಟ್ಟುವದಕ್ಕೆ ಅವಿದ್ಯೆಯೇ ನಿಮಿತ್ತವೆಂದು (ಹಿಂದೆ[2]) ಹೇಳಿರುತ್ತೇವೆ. ಆ ಅವಿದ್ಯೆಯೇ ಆತ್ಮನೇ ಸತ್ಯನೆಂಬ ಅನುಬೋಧದಿಂದ ನಾಶವಾಗಿರುತ್ತದೆಯಷ್ಟೆ, ಆ ಕಾರಣದಿಂದ (ಇದು) ಅಜವು. ಆದ್ದರಿಂದಲೇ ಅನಿದ್ರವು[3]. ಅವಿದ್ಯಾಲಕ್ಷಣವಾದ ಅನಾದಿಯಾದ ಮಾಯಾನಿದ್ರೆಯ ಕನಸಿನಿಂದ ಅದ್ವಯಸ್ವರೂಪವನ್ನು (ಹೊಂದಿದ) ಆತ್ಮನಾಗಿ ಎಚ್ಚತ್ತಿದೆಯಾಗಿ[4] ಅಸ್ವಪ್ನವು. ಎಚ್ಚರದೆ ಇರುವದರಿಂದಲೇ ಅಲ್ಲವೆ, ಅದಕ್ಕೆ ನಾಮರೂಪಗಳು (ತೋರಿಕೊಳ್ಳುವದು) ? (ಈಗ) ಎಚ್ಚತ್ತಿರುವದರಿಂದ ಅವುಗಳು ಹಗ್ಗದ ಹಾವಿನಂತೆ ಹೋಗಿ ಬಿಟ್ಟಿರುತ್ತವೆಯಾಗಿ (ಈ) ಬ್ರಹ್ಮವು (ಯಾವ) ಹೆಸರಿನಿಂದಲೂ ಹೇಳುವದಕ್ಕೆ ಆಗುವಂತಿಲ್ಲ. ಯಾವ ಪ್ರಕಾರವಾಗಿಯೂ ನಿರೂಪಿಸುವದಕ್ಕೂ ಬರುವದಿಲ್ಲ ; ಆದ್ದರಿಂದ ಅದು ಅನಾಮಕವು, ಅರೂಪಕವು. "ಯಾವದರಿಂದ ವಾಕ್ಕುಗಳು ಹಿಂತಿರುಗುವವೋ" (ತೈ. ೨-೪) ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣವು. ಮತ್ತು (ಇದು) ಒಂದೇ ಸಮನೆ ಪ್ರಕಾಶಿಸುವಂಥದ್ದು, ಯಾವಾಗಲೂ ಹೊಳೆಯುವಂಥದ್ದು, ಯಾವಾಗಲೂ ಬೆಳಕಿನ ರೂಪದ್ದೇ (ಆಗಿರುವದು) ; ಏಕೆಂದರೆ ತಿಳಿಯದಿರುವದು, ತಪ್ಪಾಗಿ ತಿಳಿಯು

1. ಜ್ಞಾನದಿಂದ ನಿಗೃಹೀತವಾದ ಮನಸ್ಸು ಬ್ರಹ್ಮವೇ ಆಗಿರುತ್ತದೆ ಆ ಬ್ರಹ್ಮದ ಲಕ್ಷಣವನ್ನೇ ಇಲ್ಲಿ ಹೇಳಿರುತ್ತದೆ.

2. ಈ ಪ್ರಕರಣದ ೨೭ನೆಯ ಕಾರಿಕೆಯಲ್ಲಿ.

3. ಅವಿದ್ಯೆಯೇ ನಿದ್ರೆ ; ಅದು ಹೋಗಿರುವದರಿಂದ ಅನಿದ್ರವು.

4. ೧-೧೬ನೆಯ ಕಾರಿಕೆಯ ಭಾಷ್ಯದಲ್ಲಿ ಈ ಅನಾದಿಸ್ವಪ್ನವನ್ನೂ ಅದರಿಂದ ಎಚ್ಚತ್ತಿರುವವನ ಆತ್ಮನ ವರ್ಣನೆಯನ್ನೂ ಇದಕ್ಕೆ ಹೋಲಿಸಿರಿ. ಅಲ್ಲಿ ತುರೀಯಾತ್ಮನ ವರ್ಣನೆಯೂ ಇಲ್ಲಿರುವ ನಿಗೃಹೀತಮನಸ್ಸಿನ ವರ್ಣನೆಯೂ ಒಂದೇ ತತ್ತ್ವವನ್ನು ಹೇಳುವವು.

ವದು, ತೋರುವದು, ಮರೆಯಾಗುವದು-ಇವುಗಳಿರುವದಿಲ್ಲ[1]. ತಿಳಿಯುವದು, ತಿಳಿಯದಿರುವದು-ಎಂಬ ಹಗಲುರಾತ್ರೆಗಳೂ ಅವಿದ್ಯಾರೂಪವಾದ ಕತ್ತಲೆಯೂ (ಇದು) ಯಾವಾಗಲೂ ತೋರದಿರುವದಕ್ಕೆ ಕಾರಣವು[2]. ಆ (ಕಾರಣ)ವಿಲ್ಲದ್ದರಿಂದಲೂ ಯಾವಾಗಲೂ ಚೈತನ್ಯವೆಂಬ ಬೆಳಕಿನ ರೂಪದಲ್ಲಿಯೇ ಇರುವದರಿಂದಲೂ (ಎಂದೆಂದಿಗೂ) 'ಒಂದೇಸಮನೆ ಪ್ರಕಾಶಿಸುವಂಥದ್ದು' ಎಂದು (ಹೇಳಿದ್ದು) ಸರಿ. ಆದ್ದರಿಂದಲೇ ಅದು ಸರ್ವವೂ ಆಗಿದ್ದು ಜ್ಞಸ್ವರೂಪವೂ[3] ಆಗಿರುವದರಿಂದ ಸರ್ವಜ್ಞವು. ಈ ವಿಧವಾಗಿರುವ ಈ ಬ್ರಹ್ಮದಲ್ಲಿ ಹೇಗೂ ಉಪಚಾರವಿಲ್ಲ, ಉಪಚರಣವು (ಇನ್ನೂ) ಮಾಡಬೇಕಾದದ್ದು ಇರುವದಿಲ್ಲ. ಹೇಗೆ ಮಿಕ್ಕವರಿಗೆ ಆತ್ಮಸ್ವರೂಪಕ್ಕಿಂತ ಬೇರೆಯಾಗಿ ಸಮಾಧಿಯೇ ಮುಂತಾದ ಉಪಚಾರವು (ಉಳಿ)ದಿರುವದೋ[4] (ಹಾಗೆ ಉಳಿದಿರುವದಿಲ್ಲ). ಬ್ರಹ್ಮವು ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದಾದ್ದರಿಂದ, ಅವಿದ್ಯೆಯು ನಾಶವಾದಮೇಲೆ (ಇನ್ನು) ಮಾಡಬೇಕಾದದ್ದೆಂಬುದು ಹೇಗೂ ಹೊಂದುವದಿಲ್ಲ[5] ಎಂದರ್ಥ.

(ಭಾಷ್ಯ)

೧೯೪. ಅನಾಮಕತ್ವಾದ್ಯುಕ್ತಾರ್ಥಸಿದ್ಧಯೇ ಹೇತುಮ್ ಆಹ-

(ಭಾಷ್ಯಾರ್ಥ)

(ಅನಾಮಕವು) ಎಂದು ಮುಂತಾಗಿ (ಹಿಂದೆ) ಹೇಳಿರುವ ವಿಷಯವು ಸಿದ್ಧಿಯಾಗುವದಕ್ಕಾಗಿ (ಇಲ್ಲಿ) ಕಾರಣವನ್ನು ಹೇಳುತ್ತಾರೆ :-

---

1. ತಿಳಿಯದಿರುವದು, ತಿಳಿಯುವದು-ಎಂಬ ಜ್ಞಾನಾಜ್ಞಾನಗಳಿಗೆ ಆಶ್ರಯವಲ್ಲ. ಹಗಲು ವಿಷಯಗಳನ್ನು ಕಾಣುವದು, ರಾತ್ರೆಯಲ್ಲಿ ಕಾಣದಿರುವದು-ಎಂಬ ಹೆಚ್ಚುಕಡಿಮೆಗಳು ಜನರಿಗೆ ಇರುವಂತೆ ಇದಕ್ಕೆ ಇಲ್ಲ. ಜ್ಞಾನವುಂಟಾದಾಗ ತೋರುವದು ಉಂಟಾಗದೆ ಇರುವಾಗ ತೋರದೆ ಇರುವದು ಎಂದು ಜ್ಞಾನಾಜ್ಞಾನಗಳಿಗೆ ವಿಷಯವೂ ಇಲ್ಲ ಎಂದು ಅರ್ಥ.

2. ಮೊದಲನೆಯ ಎರಡನ್ನು ಆಶ್ರಯಪರವಾಗಿಯೂ, ಎರಡನೆಯ ಕತ್ತಲೆಯನ್ನು ವಿಷಯದ ಪರವಾಗಿಯೂ ಅರ್ಥಮಾಡಿಕೊಳ್ಳಬೇಕು.

3. ಎಲ್ಲವನ್ನೂ ಅರಿಯುವದೆಂದರ್ಥವಲ್ಲ ; ಏಕೆಂದರೆ ಅದು ಅದ್ವಿತೀಯವಾಗಿರುತ್ತದೆ. ಚೈತನ್ಯಸ್ವರೂಪವೇ ಎಂದರ್ಥ

4. ಅಜ್ಞರಿಗೆ ಸಮಾಧಿಯೇ ಮುಂತಾದದ್ದು ಮಾಡತಕ್ಕದ್ದಿರುತ್ತದೆ. ಇದರ ವಿವರವನ್ನು ಮುಂದೆ ೪೦ನೆಯ ಕಾರಿಕೆಯಿಂದ ಕೊಡಲಾಗುತ್ತದೆ.

5. ಜ್ಞಾನಾಭ್ಯಾಸವೇ ಮುಂತಾದ ಸಾಧನಗಳು ಜ್ಞಾನವಾದ ಬಳಿಕವೂ ಇರುವವೆಂಬ

ಸರ್ವಾಭಿಲಾಪವಿಗತಃ ಸರ್ವಚಿನ್ತಾಸಮುತ್ಥಿತಃ ।
ಸುಪ್ರಶಾನ್ತಃ ಸಕೃಜ್ಜ್ಯೋತಿಃ ಸಮಾಧಿರಚಲೋಽಭಯಃ ॥೩೭॥

೩೭. ಸರ್ವಾಭಿಲಾಪವಿಗತನು, ಸರ್ವಚಿಂತಾಸಮುತ್ಥಿತನು, ಸುಪ್ರಶಾಂತನು, ಸಕೃಜ್ಜ್ಯೋತಿಯು, ಸಮಾಧಿಯು, ಅಚಲನು, ಅಭಯನು.

(ಭಾಷ್ಯ)

೧೯೫. ಅಭಿಲಪ್ಯತೇ ಅನೇನ ಇತಿ ಅಭಿಲಾಪಃ ವಾಕ್ ಕರಣಂ ಸರ್ವಪ್ರಕಾರಸ್ಯ ಅಭಿಧಾನಸ್ಯ । ತಸ್ಮಾತ್ ವಿಗತಃ । ವಾಕ್ ಅತ್ರ ಉಪಲಕ್ಷಣಾರ್ಥಃ । ಸರ್ವಬಾಹ್ಯ ಕರಣವರ್ಜಿತಃ ಇತ್ಯೇತತ್ । ತಥಾ ಸರ್ವಚಿನ್ತಾಸಮುತ್ಥಿತಃ । ಚಿನ್ತ್ಯತೇ ಅನಯಾ ಇತಿ ಚಿನ್ತಾ ಬುದ್ಧಿಃ । ತಸ್ಯಾಃ ಸಮುತ್ಥಿತಃ । ಅನ್ತಃಕರಣವರ್ಜಿತಃ ಇತ್ಯರ್ಥಃ । "ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾಶ್ ಪರತಃ ಪರಃ" (ಮುಂ. ೨-೧-೨) ಇತ್ಯಾದಿಶ್ರುತೇಃ[1] । ಯಸ್ಮಾತ್ ಸರ್ವವಿಶೇಷವರ್ಜಿತಃ[2] ಅತಃ ಸುಪ್ರಶಾನ್ತಃ । ಸಕೃಜ್ಜ್ಯೋತಿಃ ಸದೈವ ಜ್ಯೋತಿಃ ಆತ್ಮಚೈತನ್ಯಸ್ವರೂಪೇಣ । ಸಮಾಧಿಃ । ಸಮಾಧಿನಿಮಿತ್ತಪ್ರಜ್ಞಾವಗಮ್ಯ ತ್ವಾತ್ । ಸಮಾಧೀಯತೇ ಅಸ್ಮಿನ್ ಇತಿ ವಾ ಸಮಾಧಿಃ । ಅಚಲಃ ಅವಿಕ್ರಿಯಃ । ಅತ ಏವ ಅಭಯಃ । ವಿಕ್ರಿಯಾಭಾವಾತ್ ॥

(ಭಾಷ್ಯಾರ್ಥ)

ಯಾವದರಿಂದ ಹೇಳುತ್ತಾರೋ ಅದು ಅಭಿಲಾಪವು, ಎಲ್ಲಾ ಬಗೆಯ ಮಾತಿಗೂ ಕರಣವಾದ ವಾಕ್ಕು ; ಅದು ಇಲ್ಲದವನು (ಸರ್ವಾಭಿಲಾಪವಿಗತನು). ಇಲ್ಲಿ ವಾಕ್ಕು (ಇಲ್ಲವೆಂದು ಹೇಳಿರುವದು) ಉಪಲಕ್ಷಣಕ್ಕಾಗಿ ; ಹೊರಗಿನ ಯಾವ ಕರಣಗಳೂ ಇಲ್ಲದವನು ಎಂದು ಅಭಿಪ್ರಾಯ. ಹಾಗೂ ಸರ್ವಚಿಂತಾಸಮುತ್ಥಿತನು, ಇದರಿಂದ ಚಿಂತಿಸುತ್ತಾರಾದ್ದರಿಂದ (ಈ) ಬುದ್ಧಿಯು ಚಿಂತೆ (ಎನಿಸುವದು) ; ಅದನ್ನು (ಬಿಟ್ಟು) ಎದ್ದವನು. (ಸರ್ವಚಿಂತಾಸಮುತ್ಥಿತನು) ; ಅಂತಃಕರಣವಿಲ್ಲದವನು ಎಂದರ್ಥ. "ಅಪ್ರಾಣನು, ಅಮನಸ್ಕನು, ಶುಭ್ರನು, ಹೆಚ್ಚಿನ ಅಕ್ಷರಕ್ಕಿಂತಲೂ ಹೆಚ್ಚಿನವನು" (ಮುಂ. ೨-೧-೨) ಮುಂತಾದ ಶ್ರುತಿಯು[3] ಇದಕ್ಕೆ ಪ್ರಮಾಣವು. (ಓಗೆ) ಯಾವ

1. "ಅಪ್ರಾಣೋಹ್ಯಮನಾಃ ಶುಭ್ರಃ" ಇತಿ ಶ್ರುತೇಃ । ಅಕ್ಷರಾತ್ ಪರತಃ ಪರಃ ಎಂಬ ಆ॥ ಪಾಠವು ಸರಿಯಲ್ಲ. 2. 'ಸರ್ವವಿಷಯವರ್ಜಿತಃ' ಎಂಬ ವಾ॥ ಮೈ॥ ಪಾಠವು ಸರಿಯಲ್ಲ.

3. ಇಲ್ಲಿ ಪ್ರಾಣವಿಲ್ಲ ಎಂದರೆ ಬಹಿಃಕರಣಗಳಿಲ್ಲ. ಮನಸ್ಸಿಲ್ಲ ಎಂದರೆ ಅಂತಃಕರಣವಿಲ್ಲ- ಎಂದು ಅಭಿಪ್ರಾಯ.

ವಿಶೇಷವೂ ಇಲ್ಲದವನಾದ್ದರಿಂದ ಅತ್ಯಂತಪ್ರಶಾಂತನಾಗಿರುವನು. ಸಕೃಜ್ಜ್ಯೋತಿಯು, ಯಾವಾಗಲೂ ಆತ್ಮಚೈತನ್ಯಸ್ವರೂಪದಿಂದ ಬೆಳಗುತ್ತಿರುವವನು. ಸಮಾಧಿಯು : ಏಕೆಂದರೆ ಸಮಾಧಿಯ ನಿಮಿತ್ತದಿಂದ (ಉಂಟಾಗುವ) ಅರಿವಿನಿಂದ ತಿಳಿಯಬರುತ್ತಾನೆ. ಅಥವಾ (ಚಿತ್ತವು) ಇವನಲ್ಲಿ ಸಮಾಧಾನವನ್ನು ಹೊಂದುತ್ತದೆಯಾದ್ದರಿಂದ (ಇವನು) ಸಮಾಧಿಯು[1]. ಅಚಲನು, ಯಾವ ವಿಕಾರವೂ ಇಲ್ಲದವನು ; ಆದ್ದರಿಂದಲೇ ಅಭಯನು, ಏಕೆಂದರೆ ಇವನಲ್ಲಿ (ಯಾವ) ವಿಕಾರವೂ ಇರುವದಿಲ್ಲ.

(ಭಾಷ್ಯ)

೧೯೬. ಯಸ್ಮಾತ್ ಬ್ರಹ್ಮೈವ 'ಸಮಾಧಿರಚಲೋಽಭಯಃ' ಇತ್ಯುಕ್ತಮ್ ಅತಃ-

(ಭಾಷ್ಯಾರ್ಥ)

(ಹೀಗೆ) ಬ್ರಹ್ಮವೇ ಸಮಾಧಿಯು, ಅಚಲವಾದದ್ದು, ಭಯವಿಲ್ಲದ್ದು-ಎಂದು ಹೇಳಿದೆಯಷ್ಟೆ ; ಆದ್ದರಿಂದ :-

ಗ್ರಹೋ ನ ತತ್ರ ನೋತ್ಸರ್ಗಶ್ಚಿನ್ತಾ ಯತ್ರ ನ ವಿದ್ಯತೇ ।
ಆತ್ಮಸಂಸ್ಥಂ ತದಾ ಜ್ಞಾನಮಜಾತಿ ಸಮತಾಂ ಗತಮ್ ॥೩೮॥

೩೮. ಎಲ್ಲಿ ಚಿಂತೆಯಿಲ್ಲವೋ ಅಲ್ಲಿ ಗ್ರಹವಿಲ್ಲ, ಉತ್ಸರ್ಗವಿಲ್ಲ. ಆಗ ಜ್ಞಾನವು ಆತ್ಮಸಂಸ್ಥವಾ(ಗಿರುವದು), ಅಜಾತಿಯಾಗಿ ಸಮತೆಯನ್ನು ಹೊಂದಿರುವದು.

(ಭಾಷ್ಯ)

೧೯೭. ನ ತತ್ರ ತಸ್ಮಿನ್ ಬ್ರಹ್ಮಣಿ ಗ್ರಹಃ ಗ್ರಹಣಮ್ ಉಪಾದಾನಮ್ ನ ಉತ್ಸರ್ಗಃ ಉತ್ಸರ್ಜನಂ ಹಾನಂ ವಾ ವಿದ್ಯತೇ । ಯತ್ರ ಹಿ ವಿಕ್ರಿಯಾ ತದ್ವಿಷಯತ್ವಂ ವಾ ತತ್ರ ಹಾನೋಪಾದಾನೇ ಸ್ಯಾತಾಮ್ । ನ ತದ್ವ್ಯಯಮ್ ಇಹ ಬ್ರಹ್ಮಣಿ ಸಂಭವತಿ । ವಿಕಾರಹೇತೋಃ ಅನ್ಯಸ್ಯ ಅಭಾವಾತ್, ನಿರವಯವತ್ವಾಚ್ಚ । ಅತಃ ನ ತತ್ರ ಹಾನೋಪಾದಾನೇ ಸಂಭವತಃ[2] । ಚಿನ್ತಾ ಯತ್ರ ನ ವಿದ್ಯತೇ । ಸರ್ವಪ್ರಕಾರೈವ ಚಿನ್ತಾ

1. ಮನಸ್ಸು ಸಮಾಧಾನವನ್ನು ಹೊಂದಿದರೆ ಆತ್ಮಜ್ಞಾನವಾಗುತ್ತದೆ ಎಂದು ಮೊದಲನೆಯ ಅರ್ಥ ; ಆತ್ಮನಲ್ಲಿ ಸಂತ ಹೊರತು ಮನಸ್ಸು ಸಮಾಧಾನವನ್ನು ಹೊಂದುವದಿಲ್ಲ ಎಂಬುದು ಎರಡನೆಯ ಅರ್ಥ. ಗೀ-ಭಾ ೨-೫೫ ಭಾ. ಭಾ ೯೯ ನೋಡಿ.

2. "ಹಾನೋಪಾದಾನೇ ಇತ್ಯರ್ಥಃ" ಆ॥

ನ ಸಂಭವತಿ ಯತ್ರ । ಅಮನಸ್ತ್ವಾತ್ ಕುತಸ್ತತ್ರ ಹಾನೋಪಾದಾನೇ ಇತ್ಯರ್ಥಃ । ಯದ್ಯೈವ ಆತ್ಮಸತ್ಯಾನುಬೋಧೋ ಜಾತಃ ತದ್ಯೈವ ಆತ್ಮಸಂಸ್ಥಂ ವಿಷಯಾಭಾವಾತ್ ಅಗ್ನ್ಯುಷ್ಣವತ್ ಆತ್ಮನ್ಯೇವ ಸ್ಥಿತಂ ಜ್ಞಾನಮ್ । ಅಜಾತಿ ಜಾತಿವರ್ಜಿತಮ್ । ಸಮತಾಂಗತಮ್, ಪರಂ ಸಾಮ್ಯಮ್ ಆಪನ್ನಂ ಭವತಿ । ಯತ್ ಆದೌ ಪ್ರತಿ ಜ್ಞಾತಮ್, ''ಅತೋ ವಕ್ಷ್ಯಾಮ್ಯಕಾರ್ಪಣ್ಯಮಜಾತಿ ಸಮತಾಂಗತಮ್'' (೩-೨) ಇತಿ, ಇದಂ ತತ್ ಉಪಪತ್ತಿತಃ ಶಾಸ್ತ್ರತಶ್ಚ ಉಕ್ತಮ್ ಉಪಸಂಹ್ರಿಯತೇ-''ಅಜಾತಿ ಸಮತಾಂಗತಮ್'' ಇತಿ । ಏತಸ್ಮಾತ್ ಆತ್ಮಸತ್ಯಾನುಬೋಧಾತ್ ಕಾರ್ಪಣ್ಯವಿಷಯಮ್ ಅನ್ಯತ್ । ''ಯೋ ವಾ ಏತದಕ್ಷರಂ ಗಾರ್ಗ್ಯವಿದಿತ್ವಾಸ್ಮಾಲ್ಲೋಕಾತ್ ಪ್ರೈತಿ ಸ ಕೃಪಣಃ'' (ಬೃ. ೩-೮-೧೦) ಇತಿ ಶ್ರುತೇಃ । ಪ್ರಾಪ್ಯೈತತ್ ಸರ್ವಃ ಕೃತಕೃತ್ಯಃ ಬ್ರಾಹ್ಮಣೋ ಭವತಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಅಲ್ಲಿ ಆ ಬ್ರಹ್ಮದಲ್ಲಿ, ಗ್ರಹವು ಎಂದರೆ ಗ್ರಹಿಸುವದು, ತೆಗೆದುಕೊಳ್ಳುವದು ಇರುವದಿಲ್ಲ ; ಉತ್ಸರ್ಗವು, ಉತ್ಸರ್ಜನವು, ಬಿಡುವದೂ ಇರುವದಿಲ್ಲ. ಎಲ್ಲಿ ವಿಕಾರವಾಗಲಿ, ಆ (ವಿಕಾರಕ್ಕೆ) ವಿಷಯವಾಗಿರುವವಾಗಲಿ (ಇರುವದೋ) ಅದರ (ವಿಷಯ)ದಲ್ಲಿ ತೆಗೆದುಕೊಳ್ಳುವದೂ ಬಿಡುವದೂ ಇರಬಹುದು. ಆ ಎರಡೂ ಈ ಬ್ರಹ್ಮದಲ್ಲಿ ಇರುವಹಾಗಿಲ್ಲ ; ಏಕೆಂದರೆ (ಇದರ) ವಿಕಾರಕ್ಕೆ ಕಾರಣವಾದದ್ದು ಮತ್ತೊಂದು ಇರುವದಿಲ್ಲ, (ಇದು) ಅವಯವಗಳಿಲ್ಲದ್ದೂ ಆಗಿದೆ[1]. ಆದ್ದರಿಂದ ಅದರಲ್ಲಿ ಹಾನೋಪಾದಾನಗಳು ಆಗುವಂತಿಲ್ಲ. ಎಲ್ಲಿ ಚಿಂತೆಯಿಲ್ಲವೋ ಯಾವ (ಬ್ರಹ್ಮದಲ್ಲಿ) ಮನಸ್ಸಿಲ್ಲದಿರುವದರಿಂದ[2] ಯಾವ ಬಗೆಯ ಚಿಂತೆಯೂ ಇರುವಂತಿಲ್ಲವೋ[3] (ಎಂದರ್ಥ). (ಇಂಥ ಕಡೆ)ಯಲ್ಲಿ ಹಾನೋಪಾದಾನಗಳು ಎಲ್ಲಿದ್ದಾವು[4] ? ಎಂದರ್ಥ.

1. ಅದ್ವಿತೀಯವಾದ್ದರಿಂದ ಅದನ್ನು ಮಾರ್ಪಡಿಸುವ ಹೇತುವಿಲ್ಲ ; ಅವಯವಗಳಿಲ್ಲದ್ದರಿಂದ ಅದು ಮಾರ್ಪಡುವ ಸ್ವಭಾವದ್ದಲ್ಲ.

2. ಮುಂ. ೨-೧-೨. ಆತ್ಮನಲ್ಲಿ ಮನಸ್ಸಿಲ್ಲ, ಮನಸ್ಸುಳ್ಳ ವಸ್ತುವೊಂದು ಆತ್ಮನಿಗಿಂತ ಬೇರೆಯಾಗಿಲ್ಲ ; ಆದ್ದರಿಂದ ಮನಸ್ಸಿನ ಪ್ರತ್ಯಯಕ್ಕೆ ವಿಷಯವಾಗಿರುವದೆಂಬುದು ಬ್ರಹ್ಮದಲ್ಲಿಲ್ಲ.

3. ಯಾವ ಪ್ರತ್ಯಯಕ್ಕೂ ವಿಷಯವಲ್ಲದ್ದೋ ಎಂದರ್ಥ.

4. ಮನಸ್ಸಿಗೇ ವಿಷಯವಾಗದ್ದು ಇಂದ್ರಿಯಗಳಿಂದ ತೆಗೆದುಕೊಳ್ಳವದಕ್ಕೂ ಬಿಡುವದಕ್ಕೂ ಹೇಗೆ ವಿಷಯವಾದೀತು ?- ಎಂದರ್ಥ.

ಯಾವಾಗ ಆತ್ಮವೊಂದೇ ಸತ್ಯವೆಂಬ ಅನುಬೋಧವುಂಟಾಯಿತೋ ಆಗಲೇ ಜ್ಞಾನವು (ತನಗೆ) ವಿಷಯವಿಲ್ಲದ್ದರಿಂದ ಬೆಂಕಿಯ ಬಿಸಿಯಂತೆ ಆತ್ಮಸಂಸ್ಥವಾಯಿತು[1]. ಆತ್ಮನಲ್ಲಿಯೇ ನಿಂತುಬಿಟ್ಟಿತು. 'ಅಜಾತಿ ಜಾತಿಯಿಲ್ಲದ್ದು, ಸಮತೆಯನ್ನು ಹೊಂದಿರುವದು ಹೆಚ್ಚಿನ ಸಾಮ್ಯವನ್ನು ಹೊಂದಿರುವದು[2]. ''ಅತೋ ವಕ್ಷ್ಯಾಮ್ಯಕಾರ್ಪಣ್ಯಮಜಾತಿ ಸಮತಾಂ ಗತಮ್'' ಆದ್ದರಿಂದ ಕಾರ್ಪಣ್ಯವಿಲ್ಲದ, ಸಮತೆಯನ್ನು ಹೊಂದಿರುವ ಅಜಾತಿಯನ್ನು ಹೇಳುವೆನು. (೩-೨) ಎಂದು ಮೊದಲು ಪ್ರತಿಜ್ಞೆಮಾಡಿತ್ತಷ್ಟೆ, ಆ ಇದನ್ನು ಯುಕ್ತಿಯಿಂದಲೂ, ಶಾಸ್ತ್ರದಿಂದಲೂ ಹೇಳಿದ್ದಾಯಿತಾಗಿ ಈಗ ''ಅಜಾತಿ ಸಮತಾಂ ಗತಮ್'' ಎಂದು ಉಪಸಂಹಾರಮಾಡಿರುತ್ತದೆ[3]. ಈ ಆತ್ಮಸತ್ಯಾನುಬೋಧಕ್ಕಿಂತ ಬೇರೆಯಾದದ್ದು ಕಾರ್ಪಣ್ಯಕ್ಕೆ ವಿಷಯವಾದದ್ದು. ಏಕೆಂದರೆ ''ಎಲೌ ಗಾರ್ಗಿ, ಈ ಅಕ್ಷರವನ್ನು ಅರಿತುಕೊಳ್ಳದೆ ಯಾವನಾದರೆ ಈ ಲೋಕವನ್ನು ಬಿಟ್ಟು ತೆರಳುವನೋ ಅವನು ಕೃಪಣನು.'' (ಬೃ. ೩-೮-೧೦) ಇದನ್ನು ಪಡೆದರೆ ಪ್ರತಿಯೊಬ್ಬನೂ ಕೃತಕೃತ್ಯನೂ, ಬ್ರಾಹ್ಮಣನೂ ಆಗುವನು[4] ಎಂದಭಿಪ್ರಾಯ.

(ಭಾಷ್ಯ)

೧೯೮. ಯದ್ಯಪಿ ಇದಮಿತ್ಥಂ ಪರಮಾರ್ಥತತ್ತ್ವಮ್-

(ಭಾಷ್ಯಾರ್ಥ)

ಈ ಪರಮಾರ್ಥತತ್ತ್ವವು ಹೀಗಿರುವದಾದರೂ[5]-

1. ಕಟ್ಟಿಗೆಯನ್ನು ಸುಟ್ಟು ಬಳಿಕ ಬೆಂಕಿಯ ಬಿಸಿಯು ತನಗೆ ವಿಷಯವಿಲ್ಲದ್ದರಿಂದ ಹೇಗೆ ಬೆಂಕಿಯ ಸ್ವರೂಪದಲ್ಲಿಯೇ ಇರುವದೋ ಹಾಗೆ ಮನಸ್ಸು ವಿಷಯದ ಅಸತ್ಯತ್ವವನ್ನು ಕಂಡೊಡನೆ ಅಮನಸ್ಸಾಗಿ ಆತ್ಮನ ಸ್ವರೂಪದಲ್ಲಿಯೇ ನಿಂತುಬಿಡುತ್ತದೆ. ಪರಮಾರ್ಥದೃಷ್ಟಿಯಿಂದ ಆತ್ಮನೇ ಮನೋರೂಪವಾಗಿಯೂ ತೋರುತ್ತಿರುವನು ಎಂದು ಹೇಳಿದಂತೆ ಆಯಿತು.

2. 'ಪರಂ ಸಾಮ್ಯಮ್' ಎಂದರೆ ಸಮಾನವಾಗುವದಲ್ಲ. ಒಂದೇ ಆಗಿಬಿಡುವದು. ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೊಂದೂ ಇರುವದಿಲ್ಲವಾದ್ದರಿಂದ ಜ್ಞಾನದಿಂದ ಏಕತ್ವರೂಪವಾದ ಸಾಮ್ಯವನ್ನು ಹೊಂದಬಹುದು. ಮುಂ ಭಾ. ೩-೧-೩-ನೋಡಿ.

3. ಅಜಾತಿಯನ್ನು ಹೇಳುವದೇ ಪ್ರಕರಣಕ್ಕೆ ಮುಖ್ಯವಾದ ಗುರಿ ಎಂಬುದನ್ನು ತಿಳಿಸುವದಕ್ಕೆ ಉಪಕ್ರಮಿಸಿದ್ದನ್ನು ಉಪಸಂಹಾರಮಾಡುತ್ತಾರೆ. ಮುಂದೆ ಯೋಗರೂಪವಾದ ಸಾಧನವನ್ನು ಹೇಳಿರುವದರಲ್ಲಿ ಪರಮತಾತ್ಪರ್ಯವಿಲ್ಲ.

4. ಮನು ೧೨-೯೭, ಬೃ-ಭಾ 'ಅಥ ಬ್ರಾಹ್ಮಣಃ' ಎಂಬುದರ ವ್ಯಾಖ್ಯಾನವನ್ನು ನೋಡಿ.

5. ಆತ್ಮಸ್ವರೂಪವೇ ಆಗಿರುವದಾದರೂ.

ಅಸ್ಪರ್ಶಯೋಗೋ ವೈ ನಾಮ ದುರ್ದರ್ಶಃ ಸರ್ವಯೋಗಿಭಿಃ ।
ಯೋಗಿನೋ ಬಿಭ್ಯತಿ ಹ್ಯಸ್ಮಾದಭಯೇ ಭಯದರ್ಶಿನಃ ॥೫೯॥

೫೯. ಅಸ್ಪರ್ಶಯೋಗ ಎಂದು ಪ್ರಸಿದ್ಧವಾಗಿರುವ (ಇದು) ಎಲ್ಲಾ ಯೋಗಿಗಳಿಗೂ ದುರ್ದರ್ಶವಾಗಿರುವದು. ಏಕೆಂದರೆ ಅಭಯದಲ್ಲಿ ಭಯವನ್ನು ಕಾಣುತ್ತಾ ಯೋಗಿಗಳು ಇದಕ್ಕೆ ಹೆದರುವರು.

(ಭಾಷ್ಯ)

೧೯೯. ಅಸ್ಪರ್ಶಯೋಗೋ ನಾಮ ಅಯಮ್ । ಸರ್ವಸಮ್ಬನ್ಧಾಖ್ಯಸ್ಪರ್ಶ ವರ್ಜಿತತ್ವಾತ್ ಅಸ್ಪರ್ಶಯೋಗೋ ನಾಮ ವೈ ಸ್ಮರ್ಯತೇ ಪ್ರಸಿದ್ಧಮ್[1] ಉಪನಿಷತ್ಸು । ದುಃಖೇನ ದೃಶ್ಯತೇ ಇತಿ ದುರ್ದರ್ಶಃ ಸರ್ವೈಃ ಯೋಗಿಭಿಃ[2] ವೇದಾನ್ತವಿಹಿತವಿಜ್ಞಾನ ರಹಿತೈಃ ಸರ್ವಯೋಗಿಭಿಃ । ಆತ್ಮಸತ್ಯಾನುಬೋಧಾಯಾಸಲಭ್ಯ ಏವ ಇತ್ಯರ್ಥಃ । ಯೋಗಿನಃ ಬಿಭ್ಯತಿ ಹಿ ಅಸ್ಮಾತ್ ಸರ್ವಭಯವರ್ಜಿತಾದಪಿ ಆತ್ಮನಾಶರೂಪಮ್ ಇಮಂ ಯೋಗಂ ಮನ್ಯಮಾನಾಃ ಭಯಂ ಕುರ್ವನ್ತಿ । ಅಭಯೇ ಅಸ್ಮಿನ್ ಭಯ ದರ್ಶಿನಃ ಭಯನಿಮಿತ್ತಾತ್ಮನಾಶದರ್ಶನಶೀಲಾಃ ಅವಿವೇಕಿನಃ ಇತ್ಯರ್ಥಃ ॥

(ಭಾಷ್ಯಾರ್ಥ)

ಇದು ಅಸ್ಪರ್ಶಯೋಗವೆಂದೇ ಪ್ರಸಿದ್ಧವಾಗಿರುವದು. ಯಾವ ಸಂಬಂಧರೂಪ ವಾದ ಸ್ಪರ್ಶವೂ (ಇದಕ್ಕೆ) ಇರುವದಿಲ್ಲವಾದ್ದರಿಂದ[3] ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿ ರುವ ಇದನ್ನು ಅಸ್ಪರ್ಶಯೋಗವೆಂದು (ಬಲ್ಲವರು) ಹೇಳುತ್ತಿರುವರು[4]. ಎಲ್ಲಾ ಯೋಗಿ ಗಳಿಗೂ ಇದು ದುರ್ದರ್ಶವು, ಕಷ್ಟದಿಂದ ತಿಳಿಯಬರುವಂಥದ್ದು, ವೇದಾಂತದಲ್ಲಿ

1. "ಪ್ರಸಿದ್ಧಃ" ವಾ॥ ಕಾ॥ ಮೈ॥

2. ಮೂಲದಲ್ಲಿಯೂ ಭಾಷ್ಯದಲ್ಲಿಯೂ 'ಸರ್ವಯೋಗಿನಾಮ್,' ವಾ॥

3. ಆತ್ಮಜ್ಞಾನವು ಯಾವದೊಂದು ಸಂಬಂಧವೂ ಇಲ್ಲದ ಆತ್ಮನನ್ನು ತಿಳಿಸುವದರಿಂದ ಇದಕ್ಕೆ ಅಸ್ಪರ್ಶಯೋಗವೆಂದು ಹೆಸರು. ಗೀ. ಭಾ. ೬-೨೩ ರಲ್ಲಿ ಯೋಗಶಬ್ದದ ನಿರ್ವಚನವನ್ನು ನೋಡಿ.

4. ಈ ಜ್ಞಾನವು ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿದೆ, ಜ್ಞಾನಿಗಳು ಇದನ್ನು ಅಸ್ಪರ್ಶ ಯೋಗವೆಂದು ಕರೆಯುತ್ತಾರೆ ; ಏಕೆಂದರೆ ಯೋಗದಂತೆ ಇಲ್ಲಿ ಯಾವದನ್ನೂ ವಿಷಯಮಾಡಿಕೊಳ್ಳ ಬೇಕಾದದ್ದು ಇರುವದಿಲ್ಲ. 'ಸ್ಮರ್ಯತೇ' ಎಂದರೆ 'ಸ್ಮರ್ಯತೇ ಬ್ರಹ್ಮವಿದ್ಭಿಃ' ಬ್ರಹ್ಮಜ್ಞಾನಿಗಳು ಹೇಳುತ್ತಾರೆ ಎಂದರ್ಥ.

ಹೇಳಿರುವ ವಿಜ್ಞಾನವಿಲ್ಲದ ಎಲ್ಲಾ ಯೋಗಿಗಳಿಗೂ (ದುರ್ದರ್ಶವು), ಆತ್ಮಸತ್ಯಾನುಬೋಧವೆಂಬ ಆಯಾಸದಿಂದಲೇ ಸಿಕ್ಕತಕ್ಕದ್ದು[1]. ಯಾವ ಭಯವೂ ಇಲ್ಲದ್ದಾದರೂ ಇದು ತಮ್ಮ (ಸ್ವರೂಪದ) ನಾಶ(ಕ್ಕೆ ಕಾರಣವು) ಎಂದು ಈ ಯೋಗವನ್ನು ಅರಿಯುತ್ತಾ ಯೋಗಿಗಳು ಇದಕ್ಕೆ ಹೆದರುತ್ತಾರೆ, ಅಂಜಿಕೆಯನ್ನು ಮಾಡಿಕೊಂಡಿರುತ್ತಾರೆ. ಅಭಯವಾದ ಇದರಲ್ಲಿ[2] ಭಯದರ್ಶಿಗಳಾಗಿ ಭಯಕ್ಕೆ ಕಾರಣವಾದ ಆತ್ಮನಾಶವನ್ನೇ ಕಾಣುವ ಸ್ವಭಾವದ ಅವಿವೇಕಿಗಳು[3] (ಇದಕ್ಕೆ ಅಂಜುತ್ತಾರೆ) ಎಂದರ್ಥ.

## ಮಧ್ಯಮಾಧಿಕಾರಿಗಳಿಗೆ ಮನೋನಿಗ್ರಹದಿಂದ ಪುರುಷಾರ್ಥ

ಮನಸೋ ನಿಗ್ರಹಾಯತ್ತಮಭಯಂ ಸರ್ವಯೋಗಿನಾಮ್ ।
ದುಃಖಕ್ಷಯಃ ಪ್ರಬೋಧಶ್ಚಾಪ್ಯಕ್ಷಯಾ ಶಾನ್ತಿರೇವ ಚ ॥೪೦॥

೪೦. ಎಲ್ಲಾ ಯೋಗಿಗಳಿಗೂ ಅಭಯವು ಮನಸ್ಸಿನ ನಿಗ್ರಹಕ್ಕೆ ಅಧೀನವು ; ದುಃಖಕ್ಷಯವೂ ಜ್ಞಾನವೂ ಅಕ್ಷಯವಾದ ಶಾಂತಿಯೂ (ಮನಸ್ಸಿನ ನಿಗ್ರಹಕ್ಕೆ ಅಧೀನವು).

(ಭಾಷ್ಯ)

೨೦೦. ಯೇಷಾಂ ಪುನಃ ಬ್ರಹ್ಮಸ್ವರೂಪವ್ಯತಿರೇಕೇಣ ರಜ್ಜುಸರ್ಪವತ್ ಕಲ್ಪಿತ ಮೇವ ಮನಃ ಇನ್ದ್ರಿಯಾದಿ ಚ ನ ಪರಮಾರ್ಥತಃ ವಿದ್ಯತೇ, ತೇಷಾಂ ಬ್ರಹ್ಮ ಸ್ವರೂಪಾಣಾಮ್ ಅಭಯಂ ಮೋಕ್ಷಾಖ್ಯಾ ಚ ಅಕ್ಷಯಾ ಶಾನ್ತಿಃ ಸ್ವಭಾವತ ಏವ ಸಿದ್ಧಾ ನಾನ್ಯಾಯತ್ತಾ "ನೋಪಚಾರಃ ಕಥಂಚನ" (೩-೩೬) ಇತಿ ಅವೋಚಾಮ । ಯೇ ತು ಅತಃ ಅನ್ಯೇ ಯೋಗಿನಃ ಮಾರ್ಗಗಾಃ ಹೀನಮಧ್ಯಮದೃಷ್ಟಯಃ ಮನೋಽನ್ಯತ್ ಆತ್ಮವ್ಯತಿರಿಕ್ತಮ್ ಆತ್ಮಸಂಬನ್ಧಿ ಪಶ್ಯನ್ತಿ, ತೇಷಾಮ್ ಆತ್ಮಸತ್ಯಾನುಬೋಧರಹಿತಾನಾಂ ಮನಸಃ ನಿಗ್ರಹಾಯತ್ತಮ್ ಅಭಯಂ ಸರ್ವೇಷಾಂ ಯೋಗಿನಾಮ್ । ಕಿಂ ಚ ದುಃಖಕ್ಷಯೋಽಪಿ । ನ ಹಿ ಆತ್ಮಸಂಬನ್ಧಿನಿ ಮನಸಿ ಪ್ರಚಲಿತೇ ದುಃಖಕ್ಷಯಃ ಅಸ್ತಿ ಅವಿವೇಕಿನಾಮ್ । ಕಿಂ ಚ ಆತ್ಮಪ್ರಬೋಧೋಽಪಿ ಮನೋನಿಗ್ರಹಾಯತ್ತ ಏವ । ತಥಾ ಅಕ್ಷಯಾಪಿ ಮೋಕ್ಷಾಖ್ಯಾ ಶಾನ್ತಿಃ ತೇಷಾಂ ಮನೋನಿಗ್ರಹಾಯತ್ತೈವ ॥

1. ಬರಿಯ ಯೋಗದಿಂದ ಸಿಕ್ಕತಕ್ಕದ್ದಲ್ಲ  2. ತೈ. ೨-೭ ; ಬೃ. ೪-೨-೪

3. ಭಯವನ್ನು ಕಾಣುವವರು ಕರ್ಮಗಳೆಂದು ವ್ಯಾಖ್ಯಾನ ; ಆದರೆ ಆತ್ಮಸತ್ಯಾನುಬೋಧವಿಲ್ಲದ ಸಾಧಕರನ್ನೆಲ್ಲ ಇಲ್ಲಿ ಯೋಗಿಗಳೆಂದು ಕರೆದಿದೆ ಎಂಬುದು ಮುಖ್ಯ.

(ಭಾಷ್ಯಾರ್ಥ)

ಯಾರಿಗಾದರೆ ಬ್ರಹ್ಮಸ್ವರೂಪಕ್ಕಿಂತ ಬೇರೆಯಾದ ಮನಸ್ಸೂ ಇಂದ್ರಿಯವೇ ಮುಂತಾದವುಗಳೂ ಹಗ್ಗದ ಹಾವಿನಂತೆ ಕಲ್ಪಿತವೇ ಆಗಿರುವದೋ ನಿಜವಾಗಿ ಇರುವದಿಲ್ಲವೋ ಬ್ರಹ್ಮಸ್ವರೂಪವಾಗಿರುವ ಅವರಿಗೆ ಅಭಯವೂ ಮೋಕ್ಷವೆಂಬ ಹೆಸರಿನ ಅಕ್ಷಯವಾದ ಶಾಂತಿಯೂ ಸ್ವಭಾವದಿಂದಲೇ ಸಿದ್ಧವಾಗಿರುತ್ತದೆಯೇ ಹೊರತು ಮತ್ತೊಂದರ ಅಧೀನವಲ್ಲ. "(ಅವರು) ಮಾಡತಕ್ಕದ್ದು ಹೇಗೂ ಇರುವದಿಲ್ಲ" ಎಂದು ಹಿಂದೆ ಹೇಳಿರುತ್ತೇವೆ.

ಆದರೆ ಯಾರು ಇವರಿಗಿಂತ ಭಿನ್ನರಾಗಿರುವ ಯೋಗಿಗಳೋ ಹೀನ ಮಧ್ಯಮ ದೃಷ್ಟಿಗಳುಳ್ಳವರಾಗಿ[1] (ವೈದಿಕ) ಮಾರ್ಗದಲ್ಲಿ ನಡೆಯುತ್ತಾ ಆತ್ಮನಿಗಿಂತ ಬೇರೆಯಾಗಿ ಆತ್ಮನಿಗೆ ಸಂಬಂಧಪಟ್ಟಂತೆ ಮನಸ್ಸೆಂಬುದು ಬೇರೆ (ಇದೆ) ಎಂದು, ತಿಳಿದಿರುವರೋ ಅಂಥ ಸರ್ವಯೋಗಿಗಳೂ ಆತ್ಮಸತ್ಯಾನುಬೋಧವು ಇಲ್ಲದವರಾದ್ದರಿಂದ (ಅವರಿಗೆ) ಅಭಯವು ಮನಸ್ಸನ್ನು ನಿಗ್ರಹಮಾಡಿಕೊಳ್ಳುವದಕ್ಕೆ ಅಧೀನವಾಗಿರುವದು[2]. ಮತ್ತು ದುಃಖಕ್ಷಯವೂ (ಅವರಿಗೆ ಮನೋನಿಗ್ರಹದ ಅಧೀನವೇ) ; ಏಕೆಂದರೆ ವಿವೇಕವಿಲ್ಲದವರಿಗೆ[3] ಆತ್ಮನಿಗೆ ಸಂಬಂಧಪಟ್ಟಿರುವ ಮನಸ್ಸು ಅಲುಗಾಡಿದರೆ ದುಃಖವು ನಾಶವಾಗಲೇ ಆರದು[4]. ಇದಲ್ಲದೆ ಆತ್ಮಜ್ಞಾನವೂ (ಅವರಿಗೆ) ಮನೋನಿಗ್ರಹಕ್ಕೆ ಅಧೀನವಾಗಿಯೇ ಇರುವದು[5]. ಇದರಂತೆ ಅಕ್ಷಯವಾದ ಮೋಕ್ಷವೆಂಬ ಶಾಂತಿಯುಕೂಡ ಅವರಿಗೆ ಮನೋನಿಗ್ರಹಕ್ಕೆ ಅಧೀನವಾಗಿಯೇ ಇರುವದು.

1. ಜ್ಞಾನಿಗಳಿಗೆ ಜ್ಞಾನಾಭ್ಯಾಸ, ಧ್ಯಾನ-ಮುಂತಾದ ಸಾಧನಗಳು ಯಾವದೂ ಇಲ್ಲ ; ಹೀನ ದೃಷ್ಟಿಯುಳ್ಳ ಕರ್ಮಿಗಳಿಗೂ ಮಧ್ಯಮದೃಷ್ಟಿಯುಳ್ಳ ಉಪಾಸಕರಿಗೂ ಸಾಧನವನ್ನು ಶಾಸ್ತ್ರದಲ್ಲಿ ಹೇಳಿದೆ ಎಂದು ಭಾವ.

2. ಜ್ಞಾನಯೋಗಿಗಳನ್ನು ಬಿಟ್ಟು ಮಿಕ್ಕ ಸರ್ವಯೋಗಿಗಳಿಗೂ ಎಂದು ಕಾರಿಕೆಗೆ ಅರ್ಥಮಾಡಬೇಕು ಎಂಬುದು ಹಿಂದಿನ ಗ್ರಂಥಸಂದರ್ಭದಿಂದ ಸ್ಪಷ್ಟವಾಗುತ್ತದೆ ಎಂದು ಭಾವ. ಜ್ಞಾನಿಗಳಿಗೆ ಅಭಯಾದಿಗಳು ಸ್ವತಃಸಿದ್ಧ, ಯೋಗಿಗಳಿಗೆ ಮನೋನಿಗ್ರಹಸಾಧ್ಯ.

3. ಆತ್ಮಜ್ಞಾನವಿಲ್ಲದವರಿಗೆ

4. ಮನಸ್ಸು ಅಲುಗಾಡುವ-ಎಚ್ಚರಕನಸುಗಳಲ್ಲಿ ದುಃಖವೂ ಅದರ ಅಲುಗಾಟವಿಲ್ಲದ ಸುಷುಪ್ತಿಯಲ್ಲಿ ಸುಖವೂ ಅನುಭವಸಿದ್ಧ ; ಆದ್ದರಿಂದ ಮನಸ್ಸು ಅಲುಗಾಡದಂತೆ ಮಾಡಿಕೊಂಡರೇ ಸಾಧಕರಿಗೆ ದುಃಖಕ್ಷಯ.

5. ಮನೋನಿಗ್ರಹವಾದ ಬಳಿಕ ತತ್ತ್ವಜ್ಞಾನವೂ ಅವರಿಗೆ ಹೊಳೆಯುವದು.

ಉತ್ಸೇಕ ಉದಧೇ ರ್ಯದ್ವತ್ ಕುಶಾಗ್ರೇಣೈಕಬಿನ್ದುನಾ ।
ಮನಸೋ ನಿಗ್ರಹಸ್ತದ್ವದ್ಬವೇದಪರಿಖೇದತಃ ॥೪೧॥

೪೧. ಸಮುದ್ರವನ್ನು ಕುಶಾಗ್ರದಿಂದ ಒಂದೊಂದು ತೊಟ್ಟಾಗಿ ತೆಗೆದು ಹಾಕುವದು ಹೇಗೋ ಅದರಂತೆ ಅಪರಿಖೇದದಿಂದ ಮನಸ್ಸಿನ ನಿಗ್ರಹವು (ಆಗುವದು).

(ಭಾಷ್ಯ)

೨೦೧. ಮನೋನಿಗ್ರಹೋಽಪಿ ತೇಷಾಮ್ ಉದಧೇಃ ಕುಶಾಗ್ರೇಣ ಏಕಬಿನ್ದುನಾ ಉತ್ಸೇಚನೇನ ಶೋಷಣವ್ಯವಸಾಯವತ್ ವ್ಯವಸಾಯವತಾಮ್ ಅನವಸನ್ನಾನ್ತಃಕರಣಾನಾಮ್ ಅನಿರ್ವೇದಾತ್ ಅಪರಿಖೇದತಃ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಅವರಿಗೆ ಮನೋನಿಗ್ರಹವುಕೂಡ ದರ್ಭೆಯ ತುದಿಯಿಂದ ಒಂದೊಂದು ತೊಟ್ಟಾಗಿ ತೆಗೆದುಹಾಕುವದರಿಂದ ಸಮುದ್ರವನ್ನು ಒಣಗಿಸುವೆನೆಂಬ ನಿಶ್ಚಯದಂತೆ ಮನೋನಿಶ್ಚಯವುಳ್ಳವರಾಗಿ ಅಂತಃಕರಣದಲ್ಲಿ ಕುಸಿಯದೆ ಇರುವವರಿಗೆ ಬೇಸರವಿಲ್ಲದೆ ಇರುವ ಅಪರಿಖೇದದಿಂದ ಆಗುತ್ತದೆ ಎಂದರ್ಥ.

(ಭಾಷ್ಯ)

೨೦೨. ಕಿಮ್ ಅಪರಿಖಿನ್ನವ್ಯವಸಾಯಮಾತ್ರಮೇವ ಮನೋನಿಗ್ರಹೇ ಉಪಾಯಃ ? ನ ಇತ್ಯುಚ್ಯತೇ-

(ಭಾಷ್ಯಾರ್ಥ)

ಬೇಸರವಿಲ್ಲದ ನಿಶ್ಚಯವೊಂದೇ ಮನೋನಿಗ್ರಹಕ್ಕೆ ಉಪಾಯವೆ ?-ಎಂದರೆ ಹಾಗಲ್ಲವೆನ್ನುತ್ತಾರೆ.

ಉಪಾಯೇನ ನಿಗೃಹ್ಣೀಯಾತ್ ವಿಕ್ಷಿಪ್ತಂ ಕಾಮಭೋಗಯೋಃ ।
ಸುಪ್ರಸನ್ನಂ ಲಯೇ ಚೈವ ಯಥಾ ಕಾಮೋ ಲಯಸ್ತಥಾ ॥೪೨॥

೪೨. ಕಾಮಭೋಗಗಳಲ್ಲಿ ವಿಕ್ಷಿಪ್ತವಾದ (ಮನಸ್ಸನ್ನು) ಉಪಾಯದಿಂದ ನಿಗ್ರಹಮಾಡಬೇಕು. ಲಯದಲ್ಲಿ ಸುಪ್ರಸನ್ನವಾದ (ಮನಸ್ಸನ್ನೂ ನಿಗ್ರಹ ಮಾಡಬೇಕು). ಹೇಗೆ ಕಾಮವೊ ಲಯವೂ ಹಾಗೆಯೇ.

(ಭಾಷ್ಯ)

೨೦೩. ಅಪರಿಖಿನ್ನವ್ಯವಸಾಯವಾನ್ ಸನ್ ವಕ್ಷ್ಯಮಾಣೇನ ಉಪಾಯೇನ ಕಾಮ ಭೋಗವಿಷಯೇ[1] ವಿಕ್ಷಿಪ್ತಂ ಮನಃ ನಿಗೃಹ್ಣೀಯಾತ್ ನಿರುನ್ಧ್ಯಾತ್ ಆತ್ಮನ್ಯೇವ ಇತ್ಯರ್ಥಃ। ಕಿಂ ಚ ಲೀಯತೇ ಅಸ್ಮಿನ್ ಇತಿ ಸುಷುಪ್ತಿಃ ಲಯಃ ತಸ್ಮಿನ್ ಲಯೇ ಚ ಸುಪ್ರಸನ್ನಮ್ ಆಯಾಸವರ್ಜಿತಮಪಿ ಇತ್ಯೇತತ್ । 'ನಿಗೃಹ್ಣೀಯಾತ್' ಇತ್ಯನುವರ್ತತೇ । ಸುಪ್ರಸನ್ನಂ ಚೇತ್ ಕಸ್ಮಾತ್ ನಿಗೃಹ್ಯತೇ ಇತಿ ? ಉಚ್ಯತೇ । ಯಸ್ಮಾತ್ ಯಥಾ ಕಾಮಃ ಅನರ್ಥ ಹೇತುಃ ತಥಾ ಲಯೋಽಪಿ । ಅತಃ ಕಾಮವಿಷಯಸ್ಯ ಮನಸಃ ನಿಗ್ರಹವತ್ ಲಯಾದಪಿ ನಿರೋದ್ಧವ್ಯತ್ವಮ್[2] ಇತ್ಯರ್ಥಃ ॥

(ಭಾಷ್ಯಾರ್ಥ)

(ಹೀಗೆ) ಬೇಸರವಿಲ್ಲದೆ ಮನೋನಿಶ್ಚಯವುಳ್ಳವನಾಗಿ ಮುಂದೆ ಹೇಳುವ ಉಪಾಯದಿಂದ ಕಾಮ ಮತ್ತು ಭೋಗ-(ಇವುಗಳ) ವಿಷಯದಲ್ಲಿ ವಿಕ್ಷಿಪ್ತವಾದ[3] ಮನಸ್ಸನ್ನು ನಿಗ್ರಹಿಸಬೇಕು, ಆತ್ಮನಲ್ಲಿಯೇ ತಡೆದು ನಿಲ್ಲಿಸಿಕೊಳ್ಳಬೇಕು ಎಂದರ್ಥ. ಮತ್ತು (ಲಯದಲ್ಲಿ), ಇದರಲ್ಲಿ (ಮನಸ್ಸು) ಲಯವಾಗುವದರಿಂದ ಸುಷುಪ್ತಿಗೆ 'ಲಯ' ವೆಂದು ಹೆಸರು ; ಆ ಲಯದಲ್ಲಿಯೂ ಸುಪ್ರಸನ್ನವಾದ (ಮನಸ್ಸನ್ನು) ಆಯಾಸ ವಿಲ್ಲದ (ಮನಸ್ಸನ್ನು) ಎಂದರ್ಥ[4]. 'ನಿಗ್ರಹಿಸಬೇಕು' ಎಂದು ಇಲ್ಲಿಯೂ ಹಿಂದಿನಿಂದ ಸೇರಿಕೊಳ್ಳುತ್ತದೆ. ಸುಪ್ರಸನ್ನವಾಗಿದ್ದರೆ (ಅದನ್ನು) ನಿಗ್ರಹಿಸುವದು ಏಕೆ ?-ಎಂದರೆ ಹೇಳುತ್ತಾರೆ : ಏಕೆಂದರೆ ಹೇಗೆ ಕಾಮವು ಅನರ್ಥಹೇತುವೋ ಲಯವೂ ಹಾಗೆಯೇ (ಅನರ್ಥಹೇತು)[5]. ಆದ್ದರಿಂದ ಕಾಮವನ್ನು ವಿಷಯಮಾಡಿಕೊಳ್ಳುವ ಮನಸ್ಸನ್ನು ಹೇಗೆ ನಿಗ್ರಹಮಾಡಿಕೊಳ್ಳಬೇಕೋ ಹಾಗೆಯೇ ಲಯ(ವಾಗದಂತೆ ಅದ)ರಿಂದಲೂ ತಡೆದಿಡಬೇಕು-ಎಂದರ್ಥ.

1. 'ವಿಷಯೇಷು' ಎಂಬ ಪಾಠಕ್ಕಿಂತ ಈ ಪಾಠವು ಮೇಲು.

2. ' ನಿರೋದ್ಧವ್ಯಮ್' ಆ॥ ಕಾ॥ ಮೈ॥

3. ಚಂಚಲವಾದ ; ವಿಷಯಗಳ ಕಡೆಗೆ ಇಂದ್ರಿಯಗಳ ಮೂಲಕ ಧಾವಿಸುವದಕ್ಕೂ ಅವು ದೊರೆತರೆ ಭೋಗಿಸುವದಕ್ಕೂ ಮನಸ್ಸು ಹೊಯ್ದಾಡುತ್ತಿರುವದು. ಇದೇ ವಿಕ್ಷೇಪವೆಂಬ ದೋಷವು.

4. ವಿಷಯವಿಷಯಿಗಳ ಆಕಾರದಲ್ಲಿ ಇರುವದೇ ಆಯಾಸವು. ಈ ಆಯಾಸವು ಸುಷುಪ್ತಿ ಯಲ್ಲಿಲ್ಲದ್ದರಿಂದ ಸುಪ್ರಸನ್ನವೆಂದಿದೆ.

5. ಲಯವು ಸ್ವತಃ ಅನರ್ಥಹೇತುವಲ್ಲದಿದ್ದರೂ ವಿಕ್ಷೇಪದ ಮೂಲಕವಾಗಿ ಅನರ್ಥಹೇತು ವಾಗಿರುತ್ತದೆ.

(ಭಾಷ್ಯ)

೨೦೪. ಕಃ ಸ ಉಪಾಯ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಆ ಉಪಾಯವು ಯಾವದು ? ಎಂದರೆ ಹೇಳುತ್ತಾರೆ.

ದುಃಖಿಂ ಸರ್ವಮನಸ್ಮೃತ್ಯ ಕಾಮಭೋಗಾನ್ನಿವರ್ತಯೇತ್ ।
ಅಜಂ ಸರ್ವಮನುಸ್ಮೃತ್ಯ ಜಾತಂ ನೈವ ತು ಪಶ್ಯತಿ ॥೪೩॥

೪೩. ಎಲ್ಲವೂ ದುಃಖಿವೆಂದು ನೆನೆದು ಕಾಮಭೋಗದಿಂದ (ಮನಸ್ಸನ್ನು) ಹಿಂತಿರುಗಿಸಿಕೊಳ್ಳಬೇಕು. ಎಲ್ಲವೂ ಅಜವೆಂದು ನೆನೆದುಕೊಂಡರೆ ಹುಟ್ಟಿದ್ದನ್ನು ಕಾಣುವದೇ ಇಲ್ಲ.

(ಭಾಷ್ಯ)

೨೦೫. ಸರ್ವಂ ದ್ವೈತಮ್ ಅವಿದ್ಯಾವಿಜೃಮ್ಭಿತಂ ದುಃಖಿಮೇವ ಇತಿ ಅನುಸ್ಮೃತ್ಯ ಕಾಮಭೋಗಾತ್ ಕಾಮನಿಮಿತ್ತಃ ಭೋಗಃ ಇಚ್ಛಾವಿಷಯಃ ತಸ್ಮಾತ್ ವಿಪ್ರಸೃತಂ ಮನಃ ನಿವರ್ತಯೇತ್ ವೈರಾಗ್ಯಭಾವನಯಾ ಇತ್ಯರ್ಥಃ । ಅಜಂ ಬ್ರಹ್ಮ ಸರ್ವಮ್ ಇತ್ಯೇತತ್ ಶಾಸ್ತ್ರಾಚಾರ್ಯೋಪದೇಶತಃ ಅನುಸ್ಮೃತ್ಯ ತದ್ವಿಪರೀತಂ ದ್ವೈತಂ ಜಾತಂ[1] ನೈವ ತು ಪಶ್ಯತಿ । ಅಭಾವಾತ್ ॥

(ಭಾಷ್ಯಾರ್ಥ)

ಅವಿದ್ಯೆಯಿಂದ ಹರಡಿಕೊಂಡಿರುವ ದ್ವೈತವೆಲ್ಲವೂ ದುಃಖಿವೇ ಎಂದು ನೆನೆದು[2] ಕಾಮಭೋಗದಿಂದ ಕಾಮನಿಮಿತ್ತವಾದ ಭೋಗವೆಂಬ ಇಚ್ಛೆಯ ವಿಷಯ(ವಿದೆಯಲ್ಲ), ಅದರಿಂದ, ವಿಕ್ಷಿಪ್ತವಾದ ಮನಸ್ಸನ್ನು ವೈರಾಗ್ಯಭಾವನೆಯಿಂದ ಹಿಂತಿರುಗಿಸಿಕೊಳ್ಳ ಬೇಕು ಎಂದರ್ಥ. ಎಲ್ಲವೂ ಅಜವಾದ (ಹುಟ್ಟಿಲ್ಲದ) ಬ್ರಹ್ಮವು ಎಂಬಿದನ್ನು ಶಾಸ್ತ್ರಾ ಚಾರ್ಯರುಗಳ ಉಪದೇಶದಿಂದ ಅನುಸ್ಮರಣೆಮಾಡಿಕೊಂಡರೆ[3] ಅದಕ್ಕೆ ವಿರುದ್ಧ ವಾದ ದ್ವೈತವೆಂಬ ಹುಟ್ಟಿರುವ (ವಸ್ತುವನ್ನು) ಕಾಣುವದೇ ಇಲ್ಲ. ಏಕೆಂದರೆ ಅದು ಇರುವದೇ ಇಲ್ಲ[4].

1. 'ದ್ವೈತಜಾತಂ'' ಎಂದೇ ಅಚ್ಚಿನ ಪುಸ್ತಕಗಳಲ್ಲಿದೆಯಾದರೂ 'ದ್ವೈತಂ ಜಾತಂ ' ಎಂದೇ ಇರಬೇಕು, ಏಕೆಂದರೆ ಮೂಲದಲ್ಲಿ 'ಜಾತಮ್' ಎಂದೇ ಇದೆ.

2. ಅನುಭವದಿಂದಲೂ ವೈರಾಗ್ಯಭೋಧಕಸ್ಮೃತಿಗಳಿಂದಲೂ ಮನದಂದು.

3. ಶ್ರುತಿಯಿಂದಲೂ ಆಚಾರ್ಯರಿಂದಲೂ ತಿಳಿದದ್ದನ್ನೂ ನೆನೆದುಕೊಂಡರೆ.

4. ನಿಜವಾಗಿ ದ್ವೈತವು ಇಲ್ಲವೇ ಇಲ್ಲವಾದ್ದರಿಂದ ಅದು ಇಲ್ಲವೆಂದು ಭಾವಿಸಿದರೆ ಅದು ಹೋಗಿಬಿಡುವದು ಎಂದು ಭಾವ

ಲಯೇ ಸಮ್ಬೋಧಯೇಚ್ಚಿತ್ತಂ ವಿಕ್ಷಿಪ್ತಂ ಶಮಯೇತ್ ಪುನಃ ।
ಸಕಷಾಯಂ ವಿಜಾನೀಯಾತ್ ಸಮಪ್ರಾಪ್ತಂ ನ ಚಾಲಯೇತ್ ॥೪೪॥

೪೪. ಲಯವಾದರೆ ಚಿತ್ತವನ್ನು ಎಚ್ಚರಗೊಳಿಸಬೇಕು, ವಿಕ್ಷಿಪ್ತವಾದರೆ ಮತ್ತೆ ಶಮನಮಾಡಬೇಕು. ಸಕಷಾಯವೆಂಬುದನ್ನು ಅರಿತುಕೊಳ್ಳಬೇಕು ; ಸಮ ಪ್ರಾಪ್ತವಾದರೆ ಚಾಲನೆಮಾಡಬಾರದು.

(ಭಾಷ್ಯ)

೨೦೬. ಏವಮ್ ಅನೇನ ಜ್ಞಾನಾಭ್ಯಾಸವೈರಾಗ್ಯದ್ವಯೋಪಾಯೇನ ಲಯೇ ಸುಷುಪ್ತೇ ಲೀನಂ ಸಂಬೋಧಯೇತ್ ಮನಃ । ಆತ್ಮವಿವೇಕದರ್ಶನೇನ ಯೋಜ ಯೇತ್ । ಚಿತ್ತಂ ಮನಃ ಇತಿ ಅನರ್ಥಾನ್ತರಮ್ । ವಿಕ್ಷಿಪ್ತಂ ಚ ಕಾಮಭೋಗೇಷು ಶಮಯೇತ್ ಪುನಃ । ಏವಂ ಪುನಃಪುನಃ ಅಭ್ಯಸ್ಯತಃ ಲಯಾತ್ ಸಮ್ಬೋಧಿತಂ ವಿಷಯೇಭ್ಯಶ್ಚ ವ್ಯಾವರ್ತಿತಂ ನಾಪಿ ಸಾಮ್ಯಾಪನ್ನಮ್ ಅನ್ತರಾಲಾವಸ್ಥಂ ಸಕಷಾಯಂ ಸರಾಗಂ ಬೀಜಸಂಯುಕ್ತಂ ಮನಃ ಇತಿ ವಿಜಾನೀಯಾತ್ । ತತೋಽಪಿ ಯತ್ನತಃ ಸಾಮ್ಯಮ್ ಆಪಾದಯೇತ್ । ಯದಾ ತು ಸಮಪ್ರಾಪ್ತಂ ಭವತಿ ಸಮಪ್ರಾಪ್ತ್ಯಭಿಮುಖೀ-ಭವತಿ ಇತ್ಯರ್ಥಃ । ತತಃ ತತ್ ನ ವಿಚಾಲಯೇತ್ ವಿಷಯಾಭಿಮುಖಂ ನ ಕುರ್ಯಾತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಜ್ಞಾನಾಭ್ಯಾಸ[1], ವೈರಾಗ್ಯ-ಎಂಬ ಈ ಎರಡು ಉಪಾಯಗಳಿಂದ ಲಯ ವಾದರೆ ಸುಷುಪ್ತಿಯಲ್ಲಿ ಲಯವಾದ (ಚಿತ್ತವನ್ನು[2]) ಮನಸ್ಸನ್ನು ಎಚ್ಚರಗೊಳಿಸ ಬೇಕು, ಆತ್ಮನನ್ನು ಬಿಡಿಸಿ ತಿಳಿದುಕೊಳ್ಳುವದಕ್ಕೆ ಹತ್ತಿಸಬೇಕು. ಚಿತ್ತವೆಂದರೂ ಮನಸ್ಸೆಂದರೂ ಒಂದೇ. ಕಾಮಭೋಗಗಳಲ್ಲಿ ವಿಕ್ಷಿಪ್ತವಾದರೆ (ಅದನ್ನು) ಮತ್ತೆ ಶಮನ ಗೊಳಿಸಬೇಕು. ಹೀಗೆ ಮತ್ತೆಮತ್ತೆ ಅಭ್ಯಾಸಮಾಡುತ್ತಾ ಲಯವಾಗದಂತೆ ಎಚ್ಚರಿಸಿ, ವಿಷಯಗಳಿಂದಲೂ ಹಿಂತಿರುಗಿಸಿದರೆ (ಇನ್ನೂ) ಸಾಮ್ಯವನ್ನು ಹೊಂದದಿದ್ದರೆ[3], ಆ ನಡುವಣ ಅವಸ್ಥೆಯಲ್ಲಿರುವ ಮನಸ್ಸನ್ನು ಸಕಷಾಯವು, ರಾಗದಿಂದ ಕೂಡಿರುವದು,

---

1. ಎಲ್ಲವೂ ಅಜವೆಂದು ಶಾಸ್ತ್ರಾಚಾರ್ಯರಿಂದ ತಿಳಿದದ್ದನ್ನು ಅನುಸ್ಮರಣೆಮಾಡುವದೇ ಜ್ಞಾನಾಭ್ಯಾಸವು.

2. ಈ ಅರ್ಥದ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿದೆ ಎಂದು ತೋರುತ್ತದೆ.

3. ಆತ್ಮಾಕಾರವಾಗದಿದ್ದರೆ.

ಬೀಜದಿಂದೊಡಗೂಡಿರುವದು[1]-ಎಂದು ತಿಳಿಯಬೇಕು. ಅದರಿಂದಲೂ (ತಪ್ಪಿಸಿ) ಪ್ರಯತ್ನದಿಂದ ಸಾಮ್ಯವನ್ನು ಹೊಂದಿಸಬೇಕು. ಆದರೆ ಯಾವಾಗ ಸಮತೆಯನ್ನು ಪಡೆದ್ದಾಗುವದೋ, ಸಮತೆಯನ್ನು ಹೊಂದುವಕಡೆಗೆ ತಿರುಗುವದೋ ಎಂದರ್ಥ. ಆಗ ಅದನ್ನು ಅಲುಗಾಡಿಸಬಾರದು, ವಿಷಯಗಳ ಕಡೆಗೆ ತಿರುಗಿಸಬಾರದು ಎಂದರ್ಥ.

ನಾಸ್ವಾದಯೇತ್ ಸುಖಿಂ ತತ್ರ ನಿಸ್ಸಙ್ಗಃ ಪ್ರಜ್ಞಯಾ ಭವೇತ್ ।
ನಿಶ್ಚಲಂ ನಿಶ್ಚರಚ್ಚಿತ್ತಮೇಕೀಕುರ್ಯಾತ್ ಪ್ರಯತ್ನತಃ ॥೪೫॥

೪೫. ಅಲ್ಲಿ ಸುಖಿವನ್ನು ಸವಿಯಬಾರದು. ಪ್ರಜ್ಞೆಯಿಂದ ನಿಸ್ಸಂಗನಾಗಿರ ಬೇಕು. ನಿಶ್ಚಲವಾಗಿದ್ದು, ಹೊರಹೊರಡುವ ಚಿತ್ತವನ್ನು ಪ್ರಯತ್ನದಿಂದ ಒಂದಾಗಿಸಬೇಕು.

(ಭಾಷ್ಯ)

೨೦೭. ಸಮಾಧಿತ್ಸತಃ[2] ಯೋಗಿನಃ ಯತ್ ಸುಖಿಂ ಜಾಯತೇ ತತ್ ನ ಆಸ್ವಾದಯೇತ್ । ತತ್ರ ನ ರಜ್ಯೇತ ಇತ್ಯರ್ಥಃ । ಕಥಂ ತರ್ಹಿ ? ನಿಸ್ಸಙ್ಗಃ ನಿಃಸ್ಪೃಹಃ ಪ್ರಜ್ಞಯಾ ವಿವೇಕಬುದ್ಧ್ಯಾ ಯತ್ ಉಪಲಭ್ಯತೇ ಸುಖಿಂ ತತ್ ಅವಿದ್ಯಾಪರಿಕಲ್ಪಿತಂ ಮೃಷೈವ ಇತಿ ವಿಭಾವಯೇತ್ । ತತೋಽಪಿ ಸುಖಿರಾಗಾತ್ ನಿಗೃಹ್ಣೀಯಾತ್ ಇತ್ಯರ್ಥಃ । ಯದಾ ಪುನಃ ಸುಖಿರಾಗಾತ್ ನಿವೃತ್ತಂ ನಿಶ್ಚಲಸ್ವಭಾವಂ ಸತ್ ನಿಶ್ಚರತ್ ಬಹಿರ್ನಿರ್ಗಚ್ಛತ್ ಭವತಿ ಚಿತ್ತಮ್ । ತತಸ್ತತಃ ನಿಯಮ್ಯ ಉಕ್ತೋಪಾಯೇನ ಆತ್ಮನ್ಯೇವ ಏಕೀಕುರ್ಯಾತ್ ಪ್ರಯತ್ನತಃ । ಚಿತ್ಸ್ವರೂಪಸತ್ತಾಮಾತ್ರಮೇವ ಆಪಾದಯೇತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಸಮಾಧಿಯನ್ನು ಹೊಂದುವದರಲ್ಲಿರುವ[3] ಯೋಗಿಗೆ ಯಾವ ಸುಖಿವು ಉಂಟಾಗು ವದೋ[4] ಅದನ್ನು ಸವಿಯಬಾರದು, ಅದರಲ್ಲಿ ರಕ್ತನಾಗಿರಬಾರದು ಎಂದರ್ಥ, ಹಾಗಾದರೆ ಹೇಗೆ ಇರಬೇಕು ? ಎಂದರೆ ಪ್ರಜ್ಞೆಯಿಂದ ವಿವೇಕಬುದ್ಧಿಯಿಂದ, ನಿಸ್ಸಂಗ

1. ಮತ್ತೆ ವಿಕ್ಷೇಪವನ್ನು ಹೊಂದಬಹುದಾದದ್ದು.
2. ಇಲ್ಲಿ ತತ್ರ ಎಂಬ ಮಾತು ಬಿಟ್ಟುಹೋಗಿರುವಂತೆ ಕಾಣುತ್ತದೆ :
3. ಇಷ್ಟರಲ್ಲಿಯೇ ಹೊಂದಲಿರುವ.
4. ಮುಂದೆ ಸಮಾಧಿಯುಂಟಾಗುವದೆಂಬ ನಿರೀಕ್ಷಣೆಯ ಸುಖಿವಿದು.

ನಾಗಿ ಯಾವ ಆಸೆಯೂ ಇಲ್ಲದವನಾಗಿ (ಇರಬೇಕು)[1]. ಯಾವ ಸುಖವು ಕಾಣಬರುತ್ತಿದೆಯೋ ಅದು ಅವಿದ್ಯಾಕಲ್ಪಿತವಾದದ್ದು, ಮಿಥ್ಯೆಯೇ[2] - ಎಂದು ಭಾವಿಸುತ್ತಿರಬೇಕು. ಆ ಸುಖದ ಆಸೆಯಿಂದಲೂ (ಮನಸ್ಸನ್ನು) ನಿಗ್ರಹಿಸಿಕೊಳ್ಳಬೇಕು. ಎಂದರ್ಥ. ಯಾವಾಗಲಾದರೆ ಸುಖರಾಗದಿಂದ ಹಿಂತಿರುಗದ (ಚಿತ್ತವು) ನಿಶ್ಚಲಸ್ವಭಾವವುಳ್ಳದ್ದಾಗಿದ್ದು ಹೊರಹೊರಡುವದೋ ಹೊರಕ್ಕೆ ಬರುವದಾಗುವದೋ ಆಗ ಅದರಿಂದ (ಹಿಮ್ಮೆಟ್ಟಿಸಿ) ತಡೆದು ಹಿಂದೆ ಹೇಳಿದ ಉಪಾಯದಿಂದ ಆತ್ಮನಲ್ಲಿಯೇ ಪ್ರಯತ್ನದಿಂದ ಒಂದುಮಾಡಿಕೊಳ್ಳಬೇಕು ; ಬರಿಯ ಚಿತ್ಸ್ವರೂಪದ ಇರವನ್ನು ಮಾಡಿಕೊಳ್ಳಬೇಕು ಎಂದರ್ಥ[3].

**ಯದಾ ನ ಲೀಯತೇ ಚಿತ್ತಂ ನ ಚ ವಿಕ್ಷಿಪ್ಯತೇ ಪುನಃ ।**
**ಅನಿಙ್ಗನಮನಾಭಾಸಂ ನಿಷ್ಪನ್ನಂ ಬ್ರಹ್ಮ ತತ್ತದಾ ॥೪೬॥**

೪೬. ಯಾವಾಗ ಚಿತ್ತವು ಲಯವಾಗುವದಿಲ್ಲವೋ ಮತ್ತೆ ವಿಕ್ಷಿಪ್ತವೂ ಆಗುವದಿಲ್ಲವೋ, ಹೊಯ್ದಾಡದೆ, ತೋರಿಕೊಳ್ಳದೆ (ಇರುವದೋ) ಆಗ ಅದು ಬ್ರಹ್ಮವಾಯಿತು.

(ಭಾಷ್ಯ)

೨೦೮. ಯಥೋಕ್ತೋಪಾಯೇನ ನಿಗೃಹೀತಂ ಚಿತ್ತಂ ಯದಾ ಸುಷುಪ್ತೇ ನ ಲೀಯತೇ ನ ಚ ಪುನಃ ವಿಷಯೇಷು ವಿಕ್ಷಿಪ್ಯತೇ । ಅನಿಙ್ಗನಮ್ ಅಚಲಂ ನಿವಾತ ಪ್ರದೀಪಕಲ್ಪಮ್ । ಅನಾಭಾಸಂ ಚ ನ ಕೇನಚಿತ್ ಕಲ್ಪಿತೇನ ವಿಷಯಭಾವೇನ ಅವಭಾಸತೇ । ಇತಿ ಯದಾ ಏವಂಲಕ್ಷಣಂ ಚಿತ್ತಮ್ ತದಾ ನಿಷ್ಪನ್ನಂ ಬ್ರಹ್ಮಸ್ವರೂಪೇಣ ನಿಷ್ಪನ್ನಂ ಚಿತ್ತಂ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮೇಲೆ ಹೇಳಿದ ಉಪಾಯದಿಂದ[4] ನಿಗ್ರಹಮಾಡಿಕೊಂಡ ಚಿತ್ತವು ಯಾವಾಗ

---

1. ಸುಖದಲ್ಲಿ ಅಭಿಮಾನವನ್ನು ಮಾಡಬಾರದು.

2. ಏಕೆಂದರೆ ಈ ಸುಖವೆಂಬುದು ಸತ್ತ್ವಗುಣದಿಂದ ಅಂತಃಕರಣದಲ್ಲಿ ತೋರಿಕೊಳ್ಳುವ ಧರ್ಮವು. ಗೀ. ಭಾ. ೧೪-೬ ರಲ್ಲಿ 'ಸುಖಸಂಗೇನ' ಎಂಬುದರ ಭಾಷ್ಯವನ್ನು ನೋಡಿ.

3. ಆತ್ಮನಿಗಿಂತ ಬೇರೆಯಾದ ಇರವನ್ನು ಚಿತ್ತಕ್ಕೆ ಕೊಡದೆ ಆತ್ಮಮಾತ್ರವೇ ಆದಂದು ಚಿಂತಿಸಬೇಕು-ಎಂದರ್ಥ.

4. ಲಯ, ವಿಕ್ಷೇಪ, ಕಷಾಯ, ರಸಾಸ್ವಾದ-ಇವುಗಳನ್ನು ಗೆದ್ದು ಚಿತ್ತವನ್ನು ಬ್ರಹ್ಮಾಕಾರವಾಗಿ ಮಾಡುವದರಿಂದ.

ಸುಷುಪ್ತಿಯಲ್ಲಿ ಲಯವಾಗುವದಿಲ್ಲವೋ, ಮತ್ತೆ ವಿಷಯಗಳಲ್ಲಿ ವಿಕ್ಷಿಪ್ತವೂ ಆಗುವದಿಲ್ಲವೋ, ಅನಿಂಗನವಾಗಿರುವದೋ ಗಾಳಿಯಿಲ್ಲದೆಡೆಯಲ್ಲಿರುವ ದೀಪದಂತೆ[1] ಅಲುಗಾಡದೆಯೂ, ಅನಾಭಾಸವಾಗಿಯೂ ಯಾವದೊಂದು ಕಲ್ಪಿತವಾದ ವಿಷಯರೂಪದಿಂದಲೂ ತೋರದೆ ಇರುವದೋ[2], ಯಾವಾಗ ಚಿತ್ತವು ಇಂಥ ಸ್ವರೂಪದ್ದಾಗುವದೋ ಆಗ ಬ್ರಹ್ಮವಾಯಿತು, ಬ್ರಹ್ಮಸ್ವರೂಪದಿಂದ ಚಿತ್ತವು ವಿಪರ್ಟ್ಟಿದ್ದಾಗುವದು ಎಂದರ್ಥ.

## ಮನೋನಿಗ್ರಹದಿಂದ ಸಿದ್ಧವಾಗುವ ಸುಖ

ಸ್ವಸ್ಥಂ ಶಾನ್ತಂ ಸನಿರ್ವಾಣಮಕಥ್ಯಂ ಸುಖಮುತ್ತಮಮ್ ।
ಅಜಮಜೇನ ಜ್ಞೇಯೇನ ಸರ್ವಜ್ಞಂ ಪರಿಚಕ್ಷತೇ ॥೪೭॥

೪೭. ಸ್ವಸ್ಥವು, ಶಾಂತವು, ಸನಿರ್ವಾಣವು, ಹೇಳುವದಕ್ಕಾಗದ ಉತ್ತಮ ಸುಖವು, ಅಜವು, ಅಜವಾದ ಜ್ಞೇಯರೂಪದಿಂದ ಸರ್ವಜ್ಞವಾದದ್ದು-ಎಂದು ಹೇಳುವರು.

(ಭಾಷ್ಯ)

೨೦೯. ಯಥೋಕ್ತಂ ಪರಮಾರ್ಥಸುಖಮ್ ಆತ್ಮಸತ್ಯಾನುಬೋಧಲಕ್ಷಣಂ ಸ್ವಸ್ಥಂ ಸ್ವಾತ್ಮನಿ ಸ್ಥಿತಮ್ । ಶಾನ್ತಂ ಸರ್ವಾನರ್ಥೋಪಶಮರೂಪಮ್ । ಸನಿರ್ವಾಣಮ್ । ನಿರ್ವೃತಿಃ ನಿರ್ವಾಣಂ ಕೈವಲ್ಯಮ್ । ಸಹ ನಿರ್ವಾಣೇನ ವರ್ತತೇ । ತಚ್ಚ ಅಕಥ್ಯಮ್ ನ ಶಕ್ಯತೇ ಕಥಯಿತುಮ್ । ಅತ್ಯನ್ತಾಸಾಧಾರಣವಿಷಯತ್ವಾತ್ । ಸುಖಮ್ ಉತ್ತಮಮ್ । ನಿರತಿಶಯಂ ಹಿ ತತ್ ಯೋಗಿಪ್ರತ್ಯಕ್ಷಮೇವ । ನ ಜಾತಮ್ ಇತಿ ಅಜಮ್ । ಯಥಾ ವಿಷಯವಿಷಯಮ್ । ಅಜೇನ ಅನುತ್ಪನ್ನೇನ ಜ್ಞೇಯೇನ ಅವ್ಯತಿರಿಕ್ತಂ ಸತ್ ಸ್ವೇನ ಸರ್ವಜ್ಞರೂಪೇಣ ಸರ್ವಜ್ಞಂ ಬ್ರಹ್ಮೈವ ಸುಖಂ ಪರಿಚಕ್ಷತೇ ಕಥಯನ್ತಿ ಬ್ರಹ್ಮವಿದಃ ॥

(ಭಾಷ್ಯಾರ್ಥ)

ಮೇಲೆ ಹೇಳಿದ ಪರಮಾರ್ಥಸುಖವು[3] ಆತ್ಮಸತ್ಯಾನುಬೋಧದಿಂದ ತಿಳಿಯ

---

1. ಗೀ. ೬-೧೯. 2. ಹೊರಗಿನ ವಿಷಯಗಳ ರೂಪವಾಗಿ ಅಥವಾ ಒಳಗಿನ ಸಬೀಜಚಿತ್ತದ ರೂಪವಾಗಿ ತೋರದೆ ಇರುವದೋ.

3. ಸಮಾಧಿಯಿಂದ ಉಂಟಾಗುವದೆಂದು ಹೇಳಿದ್ದರಿಂದ ಕೃತಕವೆಂದು ತಿಳಿಯಬಾರದು ಎಂದು ಭಾವ.

ಬರುವಂಥದ್ದು[1]. (ಅದು) ಸ್ವಸ್ಥವು, ತನ್ನ ಆತ್ಮನಲ್ಲಿಯೇ ಇರತಕ್ಕದ್ದು[2]. ಶಾಂತವು ಎಲ್ಲಾ ಬಗೆಯ ಅನರ್ಥಗಳೂ ನಾಶವಾಗಿರುವದರ ಸ್ವರೂಪದ್ದು[3]. ಸನಿರ್ವಾಣವು ; ನಿರ್ವಾಣವೆಂದರೆ ಸುಖವು, ಕೈವಲ್ಯವು, ನಿರ್ವಾಣದೊಡನೆ ಇರತಕ್ಕದ್ದು. ಮತ್ತು ಅದು ಅಕಥ್ಯವು, ಹೇಳುವದಕ್ಕೆ ಶಕ್ಯವಲ್ಲ ; ಏಕೆಂದರೆ ಅತ್ಯಂತವಾಗಿ ಅಸಾಧಾರಣವಾದ ವಿಷಯವುಳ್ಳದ್ದು[4]. ಉತ್ತಮವಾದ ಸುಖವು ; ಏಕೆಂದರೆ ಅದು ಮಿಗಿಲಿಲ್ಲದ ಯೋಗಿಗಳಿಗೆ ಮಾತ್ರ ಗೋಚರವಾಗುವ (ಸುಖವು). ವಿಷಯಗಳ ವಿಷಯವಾದ (ಸುಖದಂತೆ) ಹುಟ್ಟುವದಲ್ಲವಾದ್ದರಿಂದ ಅದು ಅಜವು. ಅಜವಾದ ಹುಟ್ಟದೆ ಇರುವ ಜ್ಞೇಯಕ್ಕಿಂತ ಭಿನ್ನವಾಗಿರುವದಿಲ್ಲವಾಗಿ ತನ್ನ ಸರ್ವಜ್ಞಸ್ವರೂಪದಿಂದ ಸರ್ವಜ್ಞವಾದ ಬ್ರಹ್ಮವೇ[5] (ಆ) ಸುಖವು ಎಂದು ಬ್ರಹ್ಮವನ್ನು ಬಲ್ಲವರು ಹೇಳುತ್ತಾರೆ.

(ಭಾಷ್ಯ)

೨೧೦. ಸರ್ವೋಽಪಿ ಅಯಂ ಮನೋನಿಗ್ರಹಾದಿಃ ಮೃಲ್ಲೋಹಾದಿವತ್ ಸೃಷ್ಟಿಃ ಉಪಾಸನಾ ಚ ಉಕ್ತಾ ಪರಮಾರ್ಥಸ್ವರೂಪಪ್ರತಿಪತ್ತ್ಯುಪಾಯತ್ವೇನ ನ ಪರಮಾರ್ಥ ಸತ್ಯಾ ಇತಿ[6] । ಪರಮಾರ್ಥಸತ್ಯಂ ತು-

(ಭಾಷ್ಯಾರ್ಥ)

ಈ ಮನೋನಿಗ್ರಹವೇ ಮುಂತಾದದ್ದು ಮಣ್ಣು, ಕಬ್ಬಿಣ-ಮುಂತಾದವುಗಳಂತೆ ಎಂಬ ಸೃಷ್ಟಿ ಮತ್ತು ಉಪಾಸನೆ-ಎಂಬುದೆಲ್ಲವೂ ಪರಮಾರ್ಥಸ್ವರೂಪವನ್ನು ತಿಳಿಯುವದಕ್ಕೆ ಉಪಾಯವಾಗಿ ಹೇಳಿದ್ದು, ಪರಮಾರ್ಥಸತ್ಯವಲ್ಲ. ಪರಮಾರ್ಥಸತ್ಯವಾದರೋ-

## ಪ್ರಕರಣದ ಉಪಸಂಹಾರ

**ನ ಕಶ್ಚಿಜ್ಜಾಯತೇ ಜೀವಃ ಸಮ್ಭವೋಽಸ್ಯ ನ ವಿದ್ಯತೇ**
**ಏತತ್ತದುತ್ತಮಂ ಸತ್ಯಂ ಯತ್ರ ಕಿಂಚಿನ್ನ ಜಾಯತೇ** ॥೪೮॥

1. ಜ್ಞಾನದಿಂದ ತಿಳಿಯುವ ತತ್ತ್ವವೂ ಈ ಸುಖವೂ ಒಂದೇ.

2. ಹೊರಗಿನ ವಿಷಯದಿಂದ ಉಂಟಾಗುವದಲ್ಲ,

3. ದುಃಖಮಿಶ್ರವಲ್ಲದ ಸ್ವರೂಪಸುಖವು. 4. ಇಂಥ ಸುಖದಂತೆ ಎಂದು ಬ್ರಹ್ಮಾನಂದಕ್ಕೆ ಹೋಲಿಕೆಯನ್ನು ಕೊಡುವದಕ್ಕೆ ಬರುವದಿಲ್ಲ. ಉಪನಿಷತ್ತಿನಲ್ಲಿ 'ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯನ್ತೇ' ಎಂಬ ವಾಕ್ಯದ ಅರ್ಥವೆಲ್ಲ ಇಲ್ಲಿ ಬಂದಿರುತ್ತದೆ.

5. ಬ್ರಹ್ಮಕ್ಕೂ ಬ್ರಹ್ಮಾಕಾರವಾದ ಚಿತ್ತದ ಆನಂದಕ್ಕೂ ಭೇದವಿಲ್ಲ ಎಂದು ಭಾವ.

6. ಇಲ್ಲಿ 'ಇತಿ' ಏಕೆ ಬಂದಿದೆ ಎಂಬುದು ಗೊತ್ತಾಗುವದಿಲ್ಲ.

೪೮. ಯಾವ ಜೀವನೂ ಹುಟ್ಟುವದಿಲ್ಲ ; ಇವನಿಗೆ ಸಂಭವವು ಇಲ್ಲ. ಎಲ್ಲಿ ಯಾವದೂ ಹುಟ್ಟುವದಿಲ್ಲವೋ ಅಂಥ ಇದೇ ಉತ್ತಮಸತ್ಯವು.

(ಭಾಷ್ಯ)

೨೧೧. ನ ಕಶ್ಚಿತ್ ಜಾಯತೇ ಜೀವಃ ಕರ್ತಾ ಭೋಕ್ತಾ ಚ ನ ಉತ್ಪದ್ಯತೇ ಕೇನಚಿದಪಿ ಪ್ರಕಾರೇಣ । ಅತಃ ಸ್ವಭಾವತಃ ಅಜಸ್ಯ ಅಸ್ಯ ಏಕಸ್ಯ ಆತ್ಮನಃ ಸಮ್ಭವಃ ಕಾರಣಂ ನ ವಿದ್ಯತೇ ನಾಸ್ತಿ । ಯಸ್ಮಾತ್ ನ ವಿದ್ಯತೇ ಅಸ್ಯ ಕಾರಣಂ ತಸ್ಮಾತ್ ನ ಕಶ್ಚಿತ್ ಜಾಯತೇ ಜೀವಃ ಇತ್ಯೇತತ್ । ಪೂರ್ವೇಷು ಉಪಾಯತ್ವೇನ ಉಕ್ತಾನಾಂ ಸತ್ಯಾನಾಮ್ ಏತತ್ ತತ್[1] ಉತ್ತಮಂ ಸತ್ಯಂ ಯತ್ರ[2] ಯಸ್ಮಿನ್ ಸತ್ಯಸ್ವರೂಪೇ ಬ್ರಹ್ಮಣಿ ಅಣುಮಾತ್ರಮಪಿ ಕಿಂಚಿತ್ ನ ಜಾಯತೇ ಇತಿ ॥

(ಭಾಷ್ಯಾರ್ಥ)

ಯಾವ ಜೀವನೂ ಹುಟ್ಟುವದಿಲ್ಲ, (ಯಾವನೊಬ್ಬ) ಕರ್ತೃಭೋಕ್ತೃವೂ ಯಾವ ಪ್ರಕಾರದಿಂದಲೂ ಉಂಟಾಗುವದಿಲ್ಲ. ಆದ್ದರಿಂದ ಸ್ವಭಾವದಿಂದಲೇ ಅಜನಾಗಿರುವ ಏಕನಾಗಿರುವ ಈ ಆತ್ಮನಿಗೆ ಸಂಭವವು ಕಾರಣವು, ಇರುವದಿಲ್ಲ, ಇಲ್ಲ. ಈತನಿಗೆ (ಮತ್ತೊಂದು) ಕಾರಣವೇ ಇಲ್ಲವಲ್ಲವೆ, ಆದ್ದರಿಂದ ಯಾವ ಜೀವನೂ ಹುಟ್ಟುವದಿಲ್ಲ ಎಂದು ಅಭಿಪ್ರಾಯ. ಹಿಂದಿನ (ಶ್ಲೋಕಗಳಲ್ಲಿ ಜ್ಞಾನಕ್ಕೆ) ಉಪಾಯವೆಂದು ಹೇಳಿದ ಸತ್ಯಗಳಲ್ಲೆಲ್ಲ, ಆ ಇದೇ ಉತ್ತಮಸತ್ಯವು. ಇಲ್ಲಿ, ಈ ಸತ್ಯಸ್ವರೂಪವಾದ ಬ್ರಹ್ಮದಲ್ಲಿ ಯಾವದೂ ಅಣುಮಾತ್ರವೂ ಹುಟ್ಟುವದಿಲ್ಲ.

******

1-2. ಈ ಮಾತುಗಳು ಬಿಟ್ಟುಹೋಗಿವೆ ಎಂದು ತೋರುತ್ತದೆ.

# ೪. ಅಲಾತಶಾಂತಿಪ್ರಕರಣ

## ಈ ಪ್ರಕರಣದ ಸಂಬಂಧ

(ಭಾಷ್ಯ)

೨೧೨. ಓಙ್ಕಾರನಿರ್ಣಯದ್ವಾರೇಣ ಆಗಮತಃ ಪ್ರತಿಜ್ಞಾತಸ್ಯ ಅದ್ವೈತಸ್ಯ, ಬಾಹ್ಯವಿಷಯಭೇದವೈತಥ್ಯಾಚ್ಚ ಸಿದ್ಧಸ್ಯ, ಪುನಃ ಅದ್ವೈತೇ ಶಾಸ್ತ್ರಯುಕ್ತಿಭ್ಯಾಂ ಸಾಕ್ಷಾತ್ ನಿರ್ಧಾರಿತಸ್ಯ "ಏತತ್ ತತ್ ಉತ್ತಮಂ ಸತ್ಯಮ್" (೩-೪೮) ಇತಿ ಉಪಸಂಹಾರಃ ಕೃತಃ ಅನ್ತೇ । ತಸ್ಯೈತಸ್ಯ ಆಗಮಾರ್ಥಸ್ಯ ಅದ್ವೈತದರ್ಶನಸ್ಯ ಪ್ರತಿಪಕ್ಷಭೂತಾಃ ದ್ವೈತಿನಃ ವೈನಾಶಿಕಾಶ್ಚ । ತೇಷಾಂ ಚ ಅನ್ಯೋನ್ಯವಿರೋಧಾತ್ ರಾಗದ್ವೇಷಾದಿಕ್ಲೇಶಾಸ್ಪದಂ ದರ್ಶನಮ್ ಇತಿ ಮಿಥ್ಯಾದರ್ಶನತ್ವಂ ಸೂಚಿತಮ್ । ಕ್ಲೇಶಾನಾಸ್ಪದತ್ವಾತ್ ಸಮ್ಯಗ್ದರ್ಶನಮ್ ಇತಿ ಅದ್ವೈತದರ್ಶನಸ್ತುತಯೇ[1] । ತದಿಹ ವಿಸ್ತರೇಣ ಅನ್ಯೋನ್ಯ ವಿರುದ್ಧತಯಾ ಅಸಮ್ಯಗ್ದರ್ಶನತ್ವಂ ಪ್ರದರ್ಶ್ಯ ತತ್ಪ್ರತಿಷೇಧೇನ ಅದ್ವೈತದರ್ಶನಸಿದ್ಧಿಃ ಉಪಸಂಹರ್ತವ್ಯಾ ಆವೀತನ್ಯಾಯೇನ ಇತಿ ಅಲಾತಶಾನ್ತಿ ಪ್ರಕರಣಮ್[2] ಆರಭ್ಯತೇ-

(ಭಾಷ್ಯಾರ್ಥ)

ಓಂಕಾರವನ್ನು ನಿರ್ಣಯ (ಮಾಡುವದರ) ಮೂಲಕ ಆಗಮದಿಂದ[3] ಮೊದಲು ತಿಳಿಸಿ, ಹೊರಗಿನ ಬೇರೆಬೇರೆಯ ವಿಷಯಗಳು ವಿತಥವಾಗಿರುವವೆಂಬ (ಕಾರಣ) ದಿಂದಲೂ[4] ಸಿದ್ಧವಾಗಿರುವ ಅದ್ವೈತವನ್ನು ಮತ್ತೆ ಅದ್ವೈತ(ಪ್ರಕರಣ)ದಲ್ಲಿ ಶಾಸ್ತ್ರಯುಕ್ತಿಗಳಿಂದ ಸಾಕ್ಷಾತ್ತಾಗಿ[5] ಗೊತ್ತುಪಡಿಸಿ (ಅದನ್ನು) "ಏತತ್ತದುತ್ತಮಂ ಸತ್ಯಮ್" ಅಂಥ ಇದೇ ಉತ್ತಮಸತ್ಯವು (೩-೪೮) ಎಂದು ಕೊನೆಯಲ್ಲಿ ಉಪಸಂಹಾರವನ್ನು ಮಾಡಿದ್ದಾಗಿದೆ. ಆಗಮಾರ್ಥವಾದ[6] ಆ ಈ ಅದ್ವೈತದರ್ಶನಕ್ಕೆ ದ್ವೈತಿಗಳೂ ವೈನಾಶಿಕರೂ[7]

1. ' ಸ್ತೂಯತೇ' ಎಂಬ ಆ।। ಕಾ।। ಪಾಠಕ್ಕಿಂತ ಈ ವಾ।। ಮೈ।। ಪಾಠವು ಮೇಲು.

2. 'ಅಲಾತಶಾನ್ತಿರಾರಭ್ಯತೇ' ಆ।। ಮೈ।।

3. ಉಪದೇಶಪ್ರಧಾನವಾದ ಆಗಮಪ್ರಕರಣದಿಂದ.

4. ಯುಕ್ತಿಯಿಂದಲೂ.

5. ದ್ವೈತವು ಮಿಥ್ಯೆಯೆಂದು ತೋರಿಸುವದರ ಮೂಲಕ ಅದ್ವೈತವನ್ನು ಗೊತ್ತುಪಡಿಸುವ ವಕ್ರರೀತಿಯನ್ನು ಬಿಟ್ಟು ನೇರವಾಗಿಯೇ ಅಜಾತಿಯನ್ನು ತಿಳಿಸುವದರಿಂದ 'ಸಾಕ್ಷಾತ್ತಾಗಿ' ಎಂದಿದೆ.

6. ಶಾಸ್ತ್ರಪ್ರಮಾಣಸಿದ್ಧವಾದ.

7. ಸಾಂಖ್ಯರು, ವೈಶೇಷಿಕರು, ಜೈನರು- ಮುಂತಾದ ದ್ವೈತಿಗಳೂ ಬೌದ್ಧರೆಂಬ ವೈನಾಶಿಕರೂ.

ಎದುರಾಳಿಗಳಾಗಿರುವರು[1]. ಮತ್ತು (ಇವರು) ಒಬ್ಬರಿಗೊಬ್ಬರು ವಿರೋಧವಾಗಿ (ವಾದಿಸುತ್ತಿ)ರುವದರಿಂದ ಅವರ ದರ್ಶನವು ರಾಗದ್ವೇಷಾದಿಕ್ಲೇಶಗಳಿಗೆ ಆಶ್ರಯವಾಗಿರುತ್ತದೆಯಾಗಿ ಮಿಥ್ಯಾದರ್ಶನವು ಎಂದು ಸೂಚಿಸಿದ್ದಾಯಿತು[2]. (ಯಾವ) ಕ್ಲೇಶಕ್ಕೂ ಆಶ್ರಯವಲ್ಲದ್ದರಿಂದ (ಇದು) ಸರಿಯಾದ ದರ್ಶನವು ಎಂದು ಅದ್ವೈತದರ್ಶನವನ್ನು ಹೊಗಳುವದಕ್ಕಾಗಿ (ಹೀಗೆ ಸೂಚಿಸಲಾಗಿದೆ). ಆದ್ದರಿಂದ ಇಲ್ಲಿ (ಅವರ ದರ್ಶನಗಳು) ಒಂದಕ್ಕೊಂದಕ್ಕೆ ವಿರುದ್ಧವಾಗಿರುವದರಿಂದ (ಅವು) ಸರಿಯಾದ ದರ್ಶನಗಳಲ್ಲ ವೆಂಬುದನ್ನು ವಿಸ್ತಾರವಾಗಿ ತೋರಿಸಿಕೊಟ್ಟು ಅವನ್ನು ಅಲ್ಲಗಳೆಯುವಮೂಲಕವಾಗಿ ಆವೀತನ್ಯಾಯದಿಂದ[3] ಅದ್ವೈತದರ್ಶನವು ಸಿದ್ಧಿಯಾಗುವದೆಂದು[4] ಉಪಸಂಹಾರಮಾಡುವದಕ್ಕಾಗಿ ಅಲಾತಶಾಂತಿಪ್ರಕರಣವನ್ನು ಆರಂಭಿಸಿರುತ್ತದೆ.

## ಮಂಗಲಾಚರಣೆ

(ಭಾಷ್ಯ)

೨೧೩. ತತ್ರ ಅದ್ವೈತದರ್ಶನಸಮ್ಪ್ರದಾಯಕರ್ತುಃ ಅದ್ವೈತಸ್ವರೂಪೇಣೈವ ನಮಸ್ಕಾರಾರ್ಥಃ ಅಯಂ ಆದ್ಯಶ್ಲೋಕಃ । ಆಚಾರ್ಯಪೂಜಾ ಹಿ ಅಭಿಪ್ರೇತಾರ್ಥ ಸಿದ್ಧ್ಯರ್ಥಾ ಇಷ್ಯತೇ ಶಾಸ್ತ್ರಾರಮ್ಭೇ ॥

(ಭಾಷ್ಯಾರ್ಥ)

ಇಲ್ಲಿ ಅದ್ವೈತದರ್ಶನಕ್ಕೆ ಸಂಪ್ರದಾಯಪ್ರವರ್ತಕನಾದ (ನಾರಾಯಣನನ್ನು) ಅದ್ವೈತಸ್ವರೂಪದಿಂದಲೇ ನಮಸ್ಕಾರ (ಮಾಡುವ)ದಕ್ಕಾಗಿ ಈ ಮೊದಲನೆಯ ಶ್ಲೋಕವು ಬಂದಿರುತ್ತದೆ. ಏಕೆಂದರೆ ಶಾಸ್ತ್ರದ ಪ್ರಾರಂಭದಲ್ಲಿ ಆಚಾರ್ಯರನ್ನು

1. ಎದುರಾಳಿಗಳೆಂದು ತಿಳಿದುಕೊಂಡಿರುತ್ತಾರೆ ; ಪರಮಾರ್ಥವಾಗಿ ಅದ್ವೈತಕ್ಕೆ ಎದುರಾಳಿಗಳೇ ಇಲ್ಲ.

2. ೩-೧೭, ೧೮ ರ ಭಾಷ್ಯವನ್ನೂ ೨-೩೩ ರಿಂದ ೩೫ರ ವರೆಗಿನ ಭಾಷ್ಯವನ್ನು ನೋಡಿರಿ.

3. ಅನುಮಾನದಲ್ಲಿ ವೀತ, ಅವೀತ- ಎಂದು ಎರಡು ಬಗೆ. 'ಎಲ್ಲಿ ಹೊಗೆಯಿರುವದೋ ಅಲ್ಲಿ ಬೆಂಕಿಯಿರುವದು' ಎಂದು ಅನ್ವಯರೀತಿಯಿಂದ ಊಹಿಸುವದು ವೀತವು ; 'ಎಲ್ಲಿ ಬೆಂಕಿಯಿರುವದಿಲ್ಲವೋ ಅಲ್ಲಿ ಹೊಗೆಯಿರುವದಿಲ್ಲ' ಎಂದು ವ್ಯತಿರೇಕದಿಂದ ಊಹಿಸುವದು ಅವೀತವು. ಅದ್ವೈತವು ಸರಿಯಾದ ದರ್ಶನವೆಂದು ಹಿಂದೆ ತೋರಿಸಿರುವದು ವೀತ ; ದ್ವೈತದರ್ಶನಗಳು ಸರಿಯಲ್ಲ ಎಂದು ಮುಂದೆ ತೋರಿಸಿಕೊಡುವದು ಅವೀತ.

4. ಅದ್ವೈತವೇ ಸಿದ್ಧವಾಗುವದರಿಂದ ಅದ್ವೈತದರ್ಶನವೇ ಸರಿಯೆಂದಾಗುವದು ಎಂದರ್ಥ.

ಗೌರವಿಸುವದು ಇಷ್ಟಾರ್ಥವು[1] ನೆರವೇರುವದಕ್ಕೆ (ಕಾರಣ)ವೆಂದು ಎಣಿಸಲ್ಪಟ್ಟಿರುತ್ತದೆ.

ಜ್ಞಾನೇನಾಕಾಶಕಲ್ಪೇನ ಧರ್ಮಾನ್ ಯೋ ಗಗನೋಪಮಾನ್ ।
ಜ್ಞೇಯಾಭಿನ್ನೇನ ಸಮ್ಬುದ್ಧಸ್ತಂ ವನ್ದೇ ದ್ವಿಪದಾಂ ವರಮ್ ॥೧॥

೧. ಗಗನೋಪಮರಾದ ಧರ್ಮರುಗಳನ್ನು ಆಕಾಶಕಲ್ಪವಾದ ಜ್ಞೇಯಾಭಿನ್ನವಾದ ಜ್ಞಾನದಿಂದ ಯಾವಾತನು ಅರಿತಿರುವನೋ ಆ ಪುರುಷಶ್ರೇಷ್ಠನನ್ನು ನಮಸ್ಕರಿಸುತ್ತೇನೆ.

(ಭಾಷ್ಯ)

೨೧೪. ಆಕಾಶೇನ ಈಷತ್ ಅಸಮಾಪ್ತಮ್ ಆಕಾಶಕಲ್ಪಮ್ । ಆಕಾಶತುಲ್ಯಮ್ ಇತ್ಯೇತತ್[2] । ತೇನ ಆಕಾಶಕಲ್ಪೇನ ಜ್ಞಾನೇನ । ಕಿಮ್ ? ಧರ್ಮಾನ್ ಆತ್ಮನಃ । ಕಿಂವಿಶಿಷ್ಟಾನ್ ? ಗಗನೋಪಮಾನ್ ಗಗನಮ್ ಉಪಮಾ ಯೇಷಾಂ ತೇ ಗಗನೋಪಮಾಃ । ತಾನ್ ಆತ್ಮನಃ ಧರ್ಮಾನ್ । ಜ್ಞಾನಸ್ಯೈವ ಪುನರ್ವಿಶೇಷಣಮ್- ಜ್ಞೇಯೈಃ ಧರ್ಮೈಃ ಆತ್ಮಭಿಃ ಅಭಿನ್ನಮ್ ಅಗ್ನ್ಯುಷ್ಣವತ್ ಸವಿತೃಪ್ರಕಾಶವಚ್ಚ ಜ್ಞಾನಮ್ । ತೇನ ಜ್ಞೇಯಾಭಿನ್ನೇನ ಜ್ಞಾನೇನ ಆಕಾಶಕಲ್ಪೇನ ಜ್ಞೇಯಾತ್ಮಸ್ವರೂಪಾವ್ಯತಿರಿಕ್ತೇನ ಗಗನೋಪಮಾನ್ ಧರ್ಮಾನ್ ಯಃ ಸಂಬುದ್ಧಃ ಸಂಬುದ್ಧವಾನ್ ನಿತ್ಯಮೇವ[3] ಈಶ್ವರಃ ಯೋ ನಾರಾಯಣಾಖ್ಯಃ ತಂ ವನ್ದೇ ಅಭಿವಾದಯೇ । ದ್ವಿಪದಾಂ ವರಂ ದ್ವಿಪದೋಪಲಕ್ಷಿತಾನಾಂ ಪುರುಷಾಣಾಂ ವರಂ ಪ್ರಧಾನಮ್ । ಪುರುಷೋತ್ತಮಮ್ ಇತ್ಯಭಿಪ್ರಾಯಃ । ಉಪದೇಷ್ಟೃನಮಸ್ಕಾರಮುಖೇನ ಜ್ಞಾನಜ್ಞೇಯಜ್ಞಾತೃಭೇದರಹಿತಂ ಪರಮಾರ್ಥತತ್ತ್ವದರ್ಶನಮ್ ಇಹ ಪ್ರಕರಣೇ ಪ್ರತಿಪಿಪಾದಯಿಷಿತಂ ಪ್ರತಿಪಕ್ಷಪ್ರತಿಷೇಧದ್ವಾರೇಣ ಪ್ರತಿಜ್ಞಾತಂ ಭವತಿ ॥

(ಭಾಷ್ಯಾರ್ಥ)

ಆಕಾಶವೇ (ಆಗುವದಕ್ಕೆ) ಸ್ವಲ್ಪ ಕಡಿಮೆಯಾದದ್ದು ಆಕಾಶಕಲ್ಪವು. ಆಕಾಶಕ್ಕೆ

---

1. ಗ್ರಂಥವು ನಿರ್ವಿಘ್ನವಾಗಿ ಮುಗಿಯುವದು, ಶಿಷ್ಯರಲ್ಲಿ ಹರಡಿಕೊಳ್ಳುವದು-ಮುಂತಾದದ್ದು. ಇಲ್ಲಿ ಶಾಸ್ತ್ರ ಎಂಬ ಮಾತಿನ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. 'ತುಲ್ಯಮೇತತ್' ಎಂಬ ಆ।। ಪಾಠವು ಅಚ್ಚಿನ ಅಥವಾ ಬರೆದವರ ತಪ್ಪು.

3. 'ಸಂಬುದ್ಧವಾನಿತ್ಯಯಮೇವ' ಎಂಬ ಆ।। ಮೈ।। ಗಳಿಗಿಂತ ಈ।। ವಾ।। ಕಾ।। ಪಾಠವು ಮೇಲು.

ಸಮಾನವಾದದ್ದು, ಅಂಥ ಆಕಾಶಕಲ್ಪವಾದ ಜ್ಞಾನದಿಂದ. (ಏನನ್ನು ? ಎಂದರೆ) ಧರ್ಮರುಗಳನ್ನು ಆತ್ಮರುಗಳನ್ನು[1]. ಎಂಥ ಆತ್ಮರುಗಳನ್ನು ? ಎಂದರೆ ಗಗನೋಪಮರಾದ ಆಕಾಶವು ಯಾರಿಗೆ ಹೋಲಿಕೆಯಾಗಿರುವದೋ ಅವರು ಗಗನೋಪಮರು ; ಅಂಥ ಆತ್ಮರೆಂಬ ಧರ್ಮರುಗಳನ್ನು. (ಈಗ) ಜ್ಞಾನಕ್ಕೇ ಮತ್ತೊಂದು ವಿಶೇಷಣವನ್ನು ಕೊಡುತ್ತಾರೆ : (ಈ) ಜ್ಞಾನವು ಜ್ಞೇಯರಾದ ಆತ್ಮರುಗಳೆಂಬ ಧರ್ಮರುಗಳಿಗಿಂತ ಆತ್ಮರುಗಳಿಗಿಂತ ಬೇರೆಯಲ್ಲದೆ ಬೆಂಕಿಯ ಬಿಸಿಯಂತೆಯೂ ಸೂರ್ಯನ ಬೆಳಕಿನಂತೆಯೂ (ಅದೇ ರೂಪದಲ್ಲಿ)ರುವದು. ಹೀಗೆ ಅರಿಯಲ್ಪಡತಕ್ಕ (ಆತ್ಮರುಗಳಿಗಿಂತ) ಬೇರೆಯಲ್ಲದೆಯೂ ಆಕಾಶಸಮಾನವಾಗಿಯೂ ಇರುವ ಜ್ಞೇಯರಾದ ಆತ್ಮರುಗಳ ಸ್ವರೂಪಕ್ಕಿಂತ ಬೇರೆಯಾಗಿಲ್ಲದ ಗಗನೋಪಮರಾದ ಧರ್ಮರುಗಳನ್ನು ಯಾವ ನಾರಾಯಣನೆಂಬ ಹೆಸರಿನ[2] ಈಶ್ವರನು ಯಾವಾಗಲೂ[3] ಅರಿತಿರುವನೋ ಆತನನ್ನು ನಮಸ್ಕರಿಸುತ್ತೇನೆ. ದ್ವಿಪದಾಂ ವರಂ (ಎರಡು ಕಾಲಿನವರಲ್ಲಿ ಶ್ರೇಷ್ಠನಾದವನನ್ನು ಎಂದು ಮೂಲದಲ್ಲಿಯಷ್ಟೆ, ಇದಕ್ಕೆ) ಎರಡು ಕಾಲುಗಳಿರುವದೆಂಬ ಉಪಲಕ್ಷಣವುಳ್ಳ ಪುರುಷರಲ್ಲಿ ವರನಾದ, ಮುಖ್ಯನಾದ (ಎಂದರ್ಥ) ; ಪುರುಷೋತ್ತಮನನ್ನು[4] (ನಮಸ್ಕರಿಸುತ್ತೇನೆ) ಎಂದು ಅಭಿಪ್ರಾಯ.

ಉಪದೇಶಮಾಡಿದ (ಗುರುವನ್ನು) ನಮಸ್ಕಾರಮಾಡುವದರಮೂಲಕ ಜ್ಞಾನ (ಅರಿವು), ಜ್ಞೇಯ (ಅರಿಯಲ್ಪಡತಕ್ಕದ್ದು), ಜ್ಞಾತೃ (ಅರಿಯುವವನು)-ಎಂಬ ಭೇದವಿಲ್ಲದ ಪರಮಾರ್ಥತತ್ತ್ವದರ್ಶನವನ್ನು ಈ ಪ್ರಕರಣದಲ್ಲಿ ಪ್ರತಿಪಕ್ಷಗಳ ಖಂಡನೆಯ ದ್ವಾರದಿಂದ ಪ್ರತಿಪಾದಿಸಬೇಕೆಂದಿರುತ್ತದೆ ಎಂದು ಪ್ರತಿಜ್ಞೆಯನ್ನು ಮಾಡಿದಂತಾಯಿತು.

---

1. ಧರ್ಮ ಎಂಬ ಮಾತನ್ನು ಆತ್ಮರು ಎಂಬರ್ಥದಲ್ಲಿ ಕಠೋಪನಿಷತ್ತಿನಲ್ಲಿ (೨-೧-೧೪) ಉಪಯೋಗಿಸಿದೆ. ಈ ಪ್ರಕರಣದಲ್ಲಿರುವ ಬೌದ್ಧಪ್ರಕ್ರಿಯಾಸಾಮ್ಯವಿಚಾರವಾಗಿ ಪೀಠಿಕೆಯನ್ನೂ ಪರಿಶಿಷ್ಟವನ್ನೂ ನೋಡಿರಿ.

2. ಗೌಡಪಾದರವರು ಬದರಿಕಾಶ್ರಮದಲ್ಲಿ ತಪಸ್ಸುಮಾಡಲು ನಾರಾಯಣಭಗವಂತನು ಪ್ರಸನ್ನನಾಗಿ ಅವರಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನಾಗಿ ಆ ಪರಮೇಶ್ವರನೇ ಪರಮಗುರು ಎಂದು ಆ।। ಟೀಕೆಯಲ್ಲಿದೆ. ಪೀಠಿಕೆಯಲ್ಲಿ ನೋಡಿ.

3. ಜ್ಞಾನ, ಜ್ಞಾತೃ, ಜ್ಞೇಯ-ಇವೆಲ್ಲವೂ ಒಂದೇ ತತ್ತ್ವದ ತೋರಿಕೆಗಳು ಎಂದು ಭಾವ ; ೩-೩೩ನ್ನು ನೋಡಿ ಉಪದೇಶಸಾಹಸ್ರೀ ಗದ್ಯಭಾಗದ ಎರಡನೆಯ ಪ್ರಕರಣದಲ್ಲಿಯೂ ಇದನ್ನು ವಿಸ್ತಾರವಾಗಿ ಚರ್ಚಿಸಿ ತೋರಿಸಿರುತ್ತದೆ. ಆತ್ಮನು ನಿತ್ಯಜ್ಞಾನದಿಂದ ಅರಿಯುವನೆಂಬ ಭಾವವನ್ನು ೧-೧೨, ೨-೧೨ ರಲ್ಲಿಯೂ ಹೊರಪಡಿಸಿದೆ.

4. ಈ ಅದ್ವೈತಜ್ಞಾನವನ್ನು ಪಡೆಯುವದೇ ಪುರುಷೋತ್ತಮತ್ವವು ಎಂಬ ಸೂಚನೆ ಇಲ್ಲಿದೆ.

(ಭಾಷ್ಯ)

೨೧೫. ಅಧುನಾ ಅದ್ವೈತದರ್ಶನಯೋಗಸ್ಯ ನಮಸ್ಕಾರಃ ತತ್‌ಸ್ತುತಯೇ-

(ಭಾಷ್ಯಾರ್ಥ)

ಈಗ ಅದ್ವೈತದರ್ಶನವೆಂಬ ಯೋಗವನ್ನು ನಮಸ್ಕಾರ(ಮಾಡುತ್ತಾರೆ. ಹೀಗೆ ನಮಸ್ಕರಿಸು)ವದು ಅದನ್ನು ಹೊಗಳುವದಕ್ಕಾಗಿ.

**ಅಸ್ಪರ್ಶಯೋಗೋ ವೈ ನಾಮ ಸರ್ವಸತ್ತ್ವಸುಖೋ ಹಿತಃ ।**
**ಅವಿವಾದೋಽವಿರುದ್ಧಶ್ಚ ದೇಶಿತಸ್ತಂ ನಮಾಮ್ಯಹಮ್ ॥೨॥**

೨. ಸರ್ವಸತ್ತ್ವಸುಖವೂ ಹಿತವೂ ಅವಿವಾದವೂ ಅವಿರುದ್ಧವೂ ಆದ ಅಸ್ಪರ್ಶಯೋಗವೆಂದು ಪ್ರಸಿದ್ಧವಾಗಿರುವ (ಯಾವ ಯೋಗವು) ದೇಶಿತವಾಗಿರುವದೋ ಅದನ್ನು ನಾನು ನಮಸ್ಕರಿಸುತ್ತೇನೆ.

(ಭಾಷ್ಯ)

೨೧೬. ಸ್ಪರ್ಶನಂ ಸ್ಪರ್ಶಃ ಸಮ್ಬನ್ಧಃ ನ ವಿದ್ಯತೇ ಯಸ್ಯ ಯೋಗಸ್ಯ ಕೇನಚಿತ್ ಕದಾಚಿದಪಿ ಸಃ ಅಸ್ಪರ್ಶಯೋಗಃ ಬ್ರಹ್ಮಸ್ವಭಾವ ಏವ । ವೈ ನಾಮ ಇತಿ ಬ್ರಹ್ಮವಿದಾಮ್ ಅಸ್ಪರ್ಶಯೋಗ ಇತ್ಯೇವಂ ಪ್ರಸಿದ್ಧಃ ಇತ್ಯರ್ಥಃ । ಸ ಚ ಸರ್ವಸತ್ತ್ವಸುಖಿಃ । ಭವತಿ ಕಶ್ಚಿತ್ ಅತ್ಯನ್ತಸುಖಿಸಾಧನವಿಶಿಷ್ಟೋಽಪಿ ದುಃಖಿರೂಪಃ ಯಥಾ ತಪಃ । ಅಯಂ ತು ನ ತಥಾ । ಕಿಂ ತರ್ಹಿ ? ಸರ್ವಸತ್ತ್ವಾನಾಂ ಸುಖಿಃ । ತಥಾ ಇಹ ಭವತಿ ಕಶ್ಚಿತ್ ವಿಷಯೋಪಭೋಗಃ ಸುಖಿಃ ನ ಹಿತಃ । ಅಯಂ ತು ಸುಖಿಃ ಹಿತಶ್ಚ । ನಿತ್ಯಮ್ ಅಪ್ರಚಲಿತಸ್ವಭಾವತ್ವಾತ್ । ಕಿಂ ಚ ಅವಿವಾದಃ । ವಿರುದ್ಧಂ ವದನಂ[1] ವಿವಾದಃ ಪಕ್ಷಪ್ರತಿಪಕ್ಷಪರಿಗ್ರಹೇಣ ಯಸ್ಮಿನ್ ನ ವಿದ್ಯತೇ ಸಃ ಅವಿವಾದಃ । ಕಸ್ಮಾತ್ ? ಯತಃ ಅವಿರುದ್ಧಶ್ಚ । ಯಃ ಈದೃಶಃ ಯೋಗಃ ದೇಶಿತಃ ಉಪದಿಷ್ಟಃ ಶಾಸ್ತ್ರೇಣ ತಂ ನಮಾಮಿ ಅಹಮ್ । ಪ್ರಣಮಾಮಿ ಇತ್ಯರ್ಥಃ ॥

(ಭಾಷ್ಯಾರ್ಥ)

ಸ್ಪರ್ಶವು (ಎಂದರೆ) ಮುಟ್ಟುವದು ಸಂಬಂಧವು ಯಾವ ಯೋಗಕ್ಕೆ ಯಾವದರೊಡನೆಯೂ ಎಂದಿಗೂ ಇಲ್ಲವೋ ಅದು ಅಸ್ಪರ್ಶಯೋಗವು ; (ಇದು) ಬ್ರಹ್ಮ

1. 'ವಿರುದ್ಧವದನಂ' ಆ॥-

ಸ್ವಭಾವವೇ[1]. (ಮೂಲದಲ್ಲಿರುವ) ವೈ ನಾಮ ಎಂಬ (ನಿಪಾತಗಳಿಗೆ) ಬ್ರಹ್ಮವೇತ್ತರುಗಳಿಗೆ ಅಸ್ಪರ್ಶಯೋಗವೆಂಬೀತೆರನಾಗಿ ಪ್ರಸಿದ್ಧವಾಗಿರುವ ಎಂದರ್ಥ. ಮತ್ತು ಅದು ಸರ್ವಸತ್ತ್ವಸುಖವು ; ಒಂದೊಂದು (ಯೋಗವು) ಹೆಚ್ಚಿನ ಸುಖಸಾಧನವುಳ್ಳದ್ದಾದರೂ ದುಃಖರೂಪವಾಗಿರುವದುಂಟು ; ಉದಾಹರಣೆಗೆ ತಪಸ್ಸು[2] (ಅಂಥದ್ದು). ಆದರೆ ಈ (ಯೋಗವು) ಅಂಥದ್ದಲ್ಲ, ಮತ್ತೇನೆಂದರೆ ಎಲ್ಲಾ ಪ್ರಾಣಿಗಳಿಗೂ ಸುಖವಾಗಿರುತ್ತದೆ. ಇದರಂತೆ ಈ ಲೋಕದಲ್ಲಿ ಒಂದೊಂದು ವಿಷಯೋಪಭೋಗವು[3] ಸುಖವಾಗಿರುತ್ತದೆ, ಹಿತವಾಗಿರುವದಿಲ್ಲ ; ಆದರೆ ಈ (ಯೋಗವು ಮಾತ್ರ) ಸುಖವಾಗಿಯೂ (ಇರುತ್ತದೆ), ಹಿತವಾಗಿಯೂ (ಇರುತ್ತದೆ). ಏಕೆಂದರೆ (ಇದು) ಎಂದಿಗೂ ಹೋಗದ ಸ್ವಭಾವವುಳ್ಳದ್ದಾಗಿರುತ್ತದೆ. ಇದೂ ಅಲ್ಲದೆ ಇದು ಅವಿವಾದವೂ (ಆಗಿರುತ್ತದೆ). ವಿರುದ್ಧವಾದ ಪಕ್ಷ ಪ್ರತಿಪಕ್ಷಗಳನ್ನು ಹಿಡಿದು (ಮಾಡುವ) ವಾದವು ವಿವಾದವು ; (ಅದು) ಯಾವ ದರಲ್ಲಿಲ್ಲವೋ ಅದು ಅವಿವಾದವು ; (ಅಂಥದ್ದು ಈ ಯೋಗವು). (ಅದು) ಹೇಗೆ ? ಎಂದರೆ ಇದು ಅವಿರುದ್ಧವೂ ಆಗಿರುವದರಿಂದ. ಇಂಥ ಯಾವ ಯೋಗವು ದೇಶಿತವಾಗಿರುವದೋ ಶಾಸ್ತ್ರದಿಂದ ಉಪದಿಷ್ಟವಾಗಿರುವದೋ ಆ (ಯೋಗವನ್ನು) ನಾನು ನಮಿಸುತ್ತೇನೆ ; ನಮಸ್ಕರಿಸುತ್ತೇನೆ ಎಂದರ್ಥ[4].

## ದ್ವೈತಿಗಳ ವಿವಾದದಿಂದ ಅಜಾತಿವಾದದ ಸಿದ್ಧಿ

### (ಭಾಷ್ಯ)

೨೧೭. ಕಥಂ ದ್ವೈತಿನಃ ಪರಸ್ಪರಂ ವಿರುಧ್ಯನ್ತೇ ಇತಿ ? ಉಚ್ಯತೇ-

### (ಭಾಷ್ಯಾರ್ಥ)

ದ್ವೈತಿಗಳು ಒಬ್ಬರೊಡನೊಬ್ಬರು ವಿರುದ್ಧವಾಗಿ (ವಾದಮಾಡುತ್ತಿ)ರುವರೆಂಬುದು ಹೇಗೆ ? ಎಂದರೆ ಹೇಳುತ್ತಾರೆ :-

**ಭೂತಸ್ಯ ಜಾತಿಮಿಚ್ಛನ್ತಿ ವಾದಿನಃ ಕೇಚಿದೇವ ಹಿ ।**
**ಅಭೂತಸ್ಯಾಪರೇ ಧೀರಾ ವಿವದನ್ತಃ ಪರಸ್ಪರಮ್** ॥೩॥

೩. ಕೆಲವರು ವಾದಿಗಳು ಮಾತ್ರವೇ ಭೂತ(ವಸ್ತುವಿಗೆ) ಜಾತಿಯನ್ನು

1. ಬ್ರಹ್ಮಸ್ವಭಾವವು ಅದ್ವೈತಿಯತ್ವವು, ಮತ್ತೊಂದನ್ನು ಸೋಕದೆ ಇರುವದು. ಅದನ್ನು ತಿಳಿಸುವದರಿಂದ ಅದ್ವೈತದರ್ಶನವು ಅಸ್ಪರ್ಶಯೋಗವೆನಿಸಿರುತ್ತದೆ.

2. ಕೃಚ್ಛ್ರ, ಚಾಂದ್ರಾಯಣ-ಮುಂತಾದದ್ದು.

3. ನಿಷಿದ್ಧವಾದ ವಿಷಯೋಪಭೋಗವು ಸುಖವಾದರೂ ಹಿತವಲ್ಲ.

4. ಗೀತೆಯ ೯-೨ ರಲ್ಲಿ ಈ ಜ್ಞಾನವನ್ನು ಹೊಗಳಿರುವ ಬಗೆಯನ್ನು ಇದಕ್ಕೆ ಹೋಲಿಸಿರಿ.

ಒಪ್ಪುತ್ತಾರಷ್ಟೆ. ಮತ್ತೆ ಕೆಲವರು ಧೀರರು ಅಭೂತಕ್ಕೆ (ಜಾತಿಯನ್ನು ಒಪ್ಪುತ್ತಾರೆ. ಹೀಗೆ) ಒಬ್ಬರೊಡನೊಬ್ಬರು ವಿವಾದಮಾಡುತ್ತಿ(ರುವರು.)

(ಭಾಷ್ಯ)

೨೧೮. ಭೂತಸ್ಯ ವಿದ್ಯಮಾನಸ್ಯ ವಸ್ತುನಃ ಜಾತಿಮ್ ಉತ್ಪತ್ತಿಮ್ ಇಚ್ಛನ್ತಿ ವಾದಿನಃ ಕೇಚಿದೇವ ಹಿ ಸಾಙ್ಖ್ಯಾಃ ನ ಸರ್ವ ಏವ ದ್ವೈತಿನಃ । ಯಸ್ಮಾತ್ ಅಭೂತಸ್ಯ ಅವಿದ್ಯಮಾನಸ್ಯ ಅಪರೇ ವೈಶೇಷಿಕಾಃ ನೈಯಾಯಿಕಾಶ್ಚ । ಧೀರಾ ಧೀಮನ್ತಃ । ಪ್ರಾಜ್ಞಾಭಿಮಾನಿನಃ ಇತ್ಯರ್ಥಃ । ವಿವದನ್ತಃ ವಿರುದ್ಧಂ ವದನ್ತಃ ಹಿ ಅನ್ಯೋನ್ಯಮ್ ಇಚ್ಛನ್ತಿ ಜೇತುಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

(ಕೆಲವರು) ಭೂತ (ವಸ್ತುವಿಗೆ) ಇರುವ ವಸ್ತುವಿಗೆ ಜಾತಿಯನ್ನು ಉತ್ಪತ್ತಿಯನ್ನು ಒಪ್ಪುತ್ತಾರೆ. ಕೆಲವರೇ ವಾದಿಗಳು ಸಾಂಖ್ಯರು (ಮಾತ್ರ) (ಹೀಗೆಂದು ಒಪ್ಪುತ್ತಾರೆ), ಎಲ್ಲಾ ದ್ವೈತಿಗಳೂ ಒಪ್ಪುವದಿಲ್ಲ. ಏಕೆಂದರೆ ಮತ್ತೆ ಕೆಲವರು ವೈಶೇಷಿಕರೂ ನೈಯಾಯಿಕರೂ[1] ಅಭೂತಕ್ಕೆ ಇಲ್ಲದ (ವಸ್ತುವಿಗೆ), ಉತ್ಪತ್ತಿಯನ್ನು ಒಪ್ಪುತ್ತಾರೆ. ಧೀರರು, ಬುದ್ಧಿವಂತರು, ತಾವೇ ತಿಳಿದವರೆಂಬ ಅಭಿಮಾನವುಳ್ಳವರು ಎಂದರ್ಥ. (ಹೀಗೆ) ವಿವಾದಮಾಡುತ್ತಾ, ವಿರುದ್ಧವಾಗಿ ವಾದಿಸುತ್ತಾ ಒಬ್ಬರನೊಬ್ಬರು ಜಯಿಸಲಿಚ್ಛಿಸುತ್ತಿರುವರು[2] ಎಂದು ಅಭಿಪ್ರಾಯ.

(ಭಾಷ್ಯ)

೨೧೯. ತೈಃ ಏವಂ ವಿರುದ್ಧವದನೇನ ಅನ್ಯೋನ್ಯಪಕ್ಷಪ್ರತಿಷೇಧಂ ಕುರ್ವದ್ಭಿಃ ಕಿಂ ಖ್ಯಾಪಿತಂ ಭವತೀತಿ ? ಉಚ್ಯತೇ-

(ಭಾಷ್ಯಾರ್ಥ)

ಹೀಗೆ ವಿರುದ್ಧವಾಗಿ ವಾದಮಾಡುವದರಿಂದ ಒಬ್ಬರ ಪಕ್ಷವನ್ನೊಬ್ಬರು ಅಲ್ಲಗಳೆಯುತ್ತಿರುವ ಅವರು ಏನನ್ನು ತೋರಿಸಿಕೊಟ್ಟಂತೆ ಆಗುತ್ತದೆ ? ಎಂದರೆ ಹೇಳುತ್ತಾರೆ :-

1. ಸಾಂಖ್ಯರು ಸತ್ಕಾರ್ಯವಾದಿಗಳು, ವೈಶೇಷಿಕರೂ ನೈಯ್ಯಾಯಿಕರೂ ಅಸತ್ಕಾರ್ಯವಾದಿಗಳು. ಪೀಠಿಕೆಯನ್ನು ನೋಡಿ.

2. ತನ್ನ ಪಕ್ಷವನ್ನು ಹೆಚ್ಚಿನದೆಂದು ಸಾಧಿಸುವದಕ್ಕಾಗಿ ಮತ್ತೊಬ್ಬರ ಪಕ್ಷವನ್ನು ಖಂಡಿಸುವ ಚರ್ಚೆಯನ್ನು ನೈಯ್ಯಾಯಿಕರು 'ಜಲ್ಪಕಥೆ' ಎನ್ನುವರು. ದ್ವೈತಿಗಳು ಜಲ್ಪವನ್ನೇ ಮುಖ್ಯವಾಗಿಟ್ಟುಕೊಂಡು ತರ್ಕವನ್ನು ಉಪಯೋಗಿಸುತ್ತಾರೆ, ಅದ್ವೈತಿಗಳಂತೆ ತತ್ತ್ವಾರ್ಥನಿರ್ಣಯಕ್ಕೆ ಉಪಯೋಗಿಸುವದಿಲ್ಲ-ಎಂದು ಭಾವ.

ಭೂತಂ ನ ಜಾಯತೇ ಕಿಂಚಿದಭೂತಂ ನೈವ ಜಾಯತೇ ।
ವಿವದನ್ತೋ ದ್ವಯಾ ಹ್ಯೇವಮಜಾತಿಂ ಖ್ಯಾಪಯನ್ತಿ ತೇ ॥೪॥

೪. ಭೂತವಾದದ್ದು ಯಾವದೂ ಹುಟ್ಟುವದಿಲ್ಲ. ಅಭೂತವು ಹುಟ್ಟುವದೇ ಇಲ್ಲ. ಹೀಗೆ ಆ ದ್ವಯ (ವಾದಿಗಳು) ವಿವಾದಮಾಡುತ್ತಾ ಅಜಾತಿಯನ್ನು ಹೊರಪಡಿಸುತ್ತಿರುವರು.

(ಭಾಷ್ಯ)

೨೨೦. ಭೂತಂ ವಿದ್ಯಮಾನಂ ವಸ್ತು ನ ಜಾಯತೇ ಕಿಂಚಿತ್ । ವಿದ್ಯಮಾನತ್ವಾದೇವ, ಆತ್ಮವತ್ । ಇತ್ಯೇವಂ ವದನ್ ಅಸದ್ವಾದೀ ಸಾಙ್ಖ್ಯಪಕ್ಷಂ ಪ್ರತಿಷೇಧತಿ ಸಜ್ಜನ್ಮ । ತಥಾ ಅಭೂತಮ್ ಅವಿದ್ಯಮಾನಮ್ ಅವಿದ್ಯಮಾನತ್ವಾತ್ ನೈವ ಜಾಯತೇ ಶಶವಿಷಾಣ ವತ್ । ಇತ್ಯೇವಂ ವದನ್ ಸಾಙ್ಖ್ಯೋಽಪಿ ಅಸದ್ವಾದಿಪಕ್ಷಮ್ ಅಸಜ್ಜನ್ಮ ಪ್ರತಿಷೇಧತಿ । ವಿವದನ್ತಃ ವಿರುದ್ಧಂ ವದನ್ತಃ ದ್ವಯಾಃ[1] ದ್ವೈತಿನಃ ಹಿ[2] ಏತೇ ಅನ್ಯೋನ್ಯಸ್ಯ ಪಕ್ಷೌ ಸದಸತೋರ್ಜನ್ಮನೀ ಪ್ರತಿಷೇಧನ್ತಃ ಅಜಾತಿಮ್ ಅನುತ್ಪತ್ತಿಮ್ ಅರ್ಥಾತ್ ವ್ಯಾಪಯನ್ತಿ ಪ್ರಕಾಶಯನ್ತಿ ತೇ ॥

(ಭಾಷ್ಯಾರ್ಥ)

ಭೂತವು ಇರುವ ವಸ್ತು ಯಾವದೂ ಹುಟ್ಟುವದಿಲ್ಲ. ಏಕೆಂದರೆ (ಅದು ಮೊದಲು) ಇದ್ದುಕೊಂಡೇ ಇರುವದರಿಂದ (ಹುಟ್ಟಬೇಕಾದದ್ದಿಲ್ಲ. ಇದಕ್ಕೆ) ಆತ್ಮನು ದೃಷ್ಟಾಂತವು[3]. ಹೀಗೆಂದು ಅಸದ್ವಾದಿಯು[4] ಇರುವದೇ ಹುಟ್ಟುವದೆಂಬ ಸಾಂಖ್ಯಪಕ್ಷವನ್ನು ಅಲ್ಲಗಳೆಯುತ್ತಾನೆ. ಹೀಗೆಯೇ ಅಭೂತವಾದದ್ದು ಇಲ್ಲದೆ ಇರುವ (ವಸ್ತು)

1. 'ಅದ್ವಯಾಃ ಅದ್ವೈತಿನಃ' ಎಂಬ ಪಾ॥ ಪಾಠವು ತಪ್ಪು.

2. 'ಅಪಿ' ಎಂಬ ಆ॥ ಪಾಠವು ಮೂಲಕ್ಕೆ ವಿರುದ್ಧ.

3. ಪರ್ವತದಲ್ಲಿ ಬೆಂಕಿಯಿರಬೇಕು ; ಏಕೆಂದರೆ ಅಡಿಗೆಯ ಮನೆಯಲ್ಲಿರುವಂತೆ ಅಲ್ಲಿ ಹೊಗೆಯಿದೆ-ಎಂಬುದು ಅನುಮಾನಪ್ರಮಾಣವನ್ನು ತಿಳಿಸುವ ವಾಕ್ಯದ ಆಕಾರವು. ಈ ಪ್ರಕಾರವನ್ನನುಸರಿಸಿ ಇರುವದು ಹುಟ್ಟುವಾರದು. ಏಕೆಂದರೆ ಅದು ಆತ್ಮನಂತೆ ಇರುವ ವಸ್ತುವಾಗಿದೆ-ಎಂಬ ವೈಶೇಷಿಕರ ತರ್ಕವು ಹುಟ್ಟಿದೆ , ಇಲ್ಲದ್ದು ಹುಟ್ಟಲಾರದು, ಏಕೆಂದರೆ ಅದು ಪೊಲದ ಕೊಂಬಿನಂತೆ ಇಲ್ಲದ ವಸ್ತುವಾಗಿದೆ-ಎಂಬ ಸಾಂಖ್ಯರ ತರ್ಕವೂ ಈ ಪ್ರಕಾರದಿಂದಲೇ ಹುಟ್ಟಿದೆ. ಒಬ್ಬರ ಪಕ್ಷವನ್ನೊಬ್ಬರು ಖಂಡಿಸುವ ಈ ತರ್ಕವನ್ನನುಸರಿಸಿದರೂ ಯಾವದೂ ಹುಟ್ಟುವದಿಲ್ಲವೆಂದೇ ಏರ್ಪಡುತ್ತದೆ-ಎಂದು ಭಾವ. 4. ಮೊದಲು ಇಲ್ಲದ ಕಾರ್ಯವು ಹುಟ್ಟುತ್ತದೆ ಎಂಬ ವಾದಿ.

ಇಲ್ಲದಿರುವದರಿಂದ ಹುಟ್ಟುವದೇ ಇಲ್ಲ : ಇದಕ್ಕೆ ಮೊಲದ ಕೊಂಬು ದೃಷ್ಟಾಂತವು- ಹೀಗೆಂದು ವಾದಿಸುತ್ತಾ ಸಾಂಖ್ಯನೂ ಅಸದ್ವಾದಿಯ ಪಕ್ಷವಾದ ಇಲ್ಲದ್ದರ ಹುಟ್ಟನ್ನು ಅಲ್ಲಗಳೆಯುತ್ತಾನೆ.

(ಹೀಗೆ) ವಿವಾದಮಾಡುತ್ತಾ (ಒಬ್ಬರಿಗೊಬ್ಬರು) ವಿರುದ್ಧವಾಗಿ ಹೇಳುತ್ತಾ ದ್ವಯ(ವಾದಿ)ಗಳು ಈ ದ್ವೈತಿಗಳು ಇದ್ದದ್ದು, ಇಲ್ಲದ್ದು-ಇವುಗಳು ಹುಟ್ಟುವ ವೆಂಬ ಒಬ್ಬರ ಪಕ್ಷವನ್ನೊಬ್ಬರು ಅಲ್ಲಗಳೆಯುತ್ತಿರುವದರಿಂದ ಅಜಾತಿಯನ್ನೇ (ಯಾವದೂ) ಹುಟ್ಟುವದಿಲ್ಲವೆಂಬುದನ್ನೇ ಅರ್ಥವಶದಿಂದ ಹೊರಪಡಿಸುತ್ತಾರೆ. ತೋರಿಸಿಕೊಡುತ್ತಾರೆ.

ಖ್ಯಾಪ್ಯಮಾನಾಮಜಾತಿಂ ತೈರನುಮೋದಾಮಹೇ ವಯಮ್ ।
ವಿವದಾಮೋ ನ ತೈಃ ಸಾರ್ಧಮವಿವಾದಂ ನಿಬೋಧತ ॥೫॥

೫. ಅವರು ಹೊರಪಡಿಸುತ್ತಿರುವ ಅಜಾತಿಯನ್ನು ನಾವು ಅನುಮೋದಿಸುತ್ತಿರುವೆವೇ ಹೊರತು ಅವರೊಡನೆ ವಿವಾದಮಾಡುತ್ತಿಲ್ಲ. (ಹೀಗೆ) ಅವಿವಾದವನ್ನು ತಿಳಿದುಕೊಳ್ಳಿರಿ.

(ಭಾಷ್ಯ)

೨೨೧. ತೈಃ ಏವಂ ಖ್ಯಾಪ್ಯಮಾನಾಮ್ ಅಜಾತಿಮ್ 'ಏವಮ್ ಅಸ್ತು' ಇತಿ ಅನುಮೋದಾಮಹೇ ಕೇವಲಮ್[1] । ನ ತೈಃ ಸಾರ್ಧಂ ವಿವದಾಮಃ ಪಕ್ಷಪ್ರತಿಪಕ್ಷ ಪರಿಗ್ರಹಣೇನ[2] । ಯಥಾ ತೇ ಅನ್ಯೋನ್ಯಮ್ ಇತ್ಯಭಿಪ್ರಾಯಃ । ಅತಃ ತಮ್ ಅವಿವಾದಂ ವಿವಾದರಹಿತಂ ಪರಮಾರ್ಥದರ್ಶನಮ್ ಅನುಜ್ಞಾತಮ್ ಅಸ್ಮಾಭಿಃ ನಿಬೋಧತ ಹೇ ಶಿಷ್ಯಾಃ ॥

(ಭಾಷ್ಯಾರ್ಥ)

ಅವರು ಹೀಗೆ ಹೊರಪಡಿಸುತ್ತಿರುವ ಅಜಾತಿಯನ್ನು (ಹಾಗೆಯೇ ಆಗಲಿ) ಎಂದು ನಾವು ಸುಮ್ಮನೆ ಅನುಮೋದಿಸುತ್ತಿರುವೆವೇ ಹೊರತು (ಇದು ನಮ್ಮ) ಪಕ್ಷ, (ಇದು) ಪ್ರತಿಪಕ್ಷ-ಎಂದು ಇಟ್ಟುಕೊಂಡು ಅವರು ಹೇಗೆ ಒಬ್ಬರೊಡನೊಬ್ಬರು (ವಿವಾದಮಾಡುತ್ತಿರುವರೋ ಹಾಗೆ) ಅವರೊಡನೆ ವಿವಾದವನ್ನು ಮಾಡುತ್ತಿರುವದಿಲ್ಲ. ಆದ್ದರಿಂದ ಎಲೈ

1. ಇಲ್ಲಿ 'ವಯಮ್' ಎಂಬ ಮಾತು ಬಿಟ್ಟುಹೋಗಿದೆ.
2. 'ಪರಿಗ್ರಹೇಣ' ವಾ॥, 'ಗ್ರಹಣೇನ' ಕಾ॥

[1], ಇಂಥ ಅವಿವಾದವನ್ನು (ಯಾವ) ವಿವಾದವೂ ಇಲ್ಲದ ಈ ಪರಮಾರ್ಥ ದರ್ಶನವನ್ನು ನಾವು ಒಪ್ಪಿರುತ್ತೇವೆಂಬುದನ್ನು ತಿಳಿದುಕೊಳ್ಳಿರಿ.

## ಜಾತಿವಾದದಲ್ಲಿ ದೋಷ

ಅಜಾತಸ್ಯೈವ ಧರ್ಮಸ್ಯ ಜಾತಿಮಿಚ್ಛನ್ತಿ ವಾದಿನಃ ।
ಅಜಾತೋ ಹ್ಯಮೃತೋ ಧರ್ಮೋ ಮರ್ತ್ಯತಾಂ ಕಥಮೇಷ್ಯತಿ ॥೬॥

೬. ಹುಟ್ಟದ ವಸ್ತುವಿಗೇ ವಾದಿಗಳು ಹುಟ್ಟನ್ನು ಅಂಗೀಕರಿಸಿರುತ್ತಾರೆ. ಹುಟ್ಟದೆಯೂ ನಾಶವಿಲ್ಲದೆಯೂ ಇರುವ ವಸ್ತು ಮರ್ತ್ಯತ್ವವನ್ನು ಹೇಗೆ ಹೊಂದೀತು ?

(ಭಾಷ್ಯ)

೨೨೨. ಸದಸದ್ವಾದಿನಃ ಸರ್ವೇಽಪಿ ಇತಿ । ಪುರಸ್ತಾತ್[2] ಕೃತಭಾಷ್ಯಃ ಶ್ಲೋಕಃ ॥

(ಭಾಷ್ಯಾರ್ಥ)

ಸದ್ವಾದಿಗಳು, ಅಸದ್ವಾದಿಗಳು-ಎಲ್ಲರೂ(ಹೀಗೆಂದು ಒಪ್ಪಿರುತ್ತಾರೆ ಎಂದರ್ಥ. ಈ) ಶ್ಲೋಕಕ್ಕೆ ಮೊದಲೇ[3] ಭಾಷ್ಯವನ್ನು ಮಾಡಿರುತ್ತದೆ.

ನ ಭವತ್ಯಮೃತಂ ಮರ್ತ್ಯಂ ನ ಮರ್ತ್ಯಮಮೃತಂ ತಥಾ ।
ಪ್ರಕೃತೇರನ್ಯಥಾಭಾವೋ ನ ಕಥಂಚಿದ್ಭವಿಷ್ಯತಿ ॥೭॥

ಸ್ವಭಾವೇನಾಮೃತೋ ಯಸ್ಯ ಧರ್ಮೋ ಗಚ್ಛತಿ ಮರ್ತ್ಯತಾಮ್ ।
ಕೃತಕೇನಾಮೃತಸ್ತಸ್ಯ ಕಥಂ ಸ್ಥಾಸ್ಯತಿ ನಿಶ್ಚಲಃ ॥೮॥

೭-೮. ಅಮೃತವು ಮರ್ತ್ಯವಾಗಲಾರದು, ಹಾಗೂ ಮರ್ತ್ಯವಾದದ್ದು ಅಮೃತವೂ ಆಗಲಾರದು. ಪ್ರಕೃತಿಗೆ ಮತ್ತೊಂದು ಸ್ವಭಾವವು ಹೇಗೂ ಆಗಲಾರದು. ಯಾವನ (ಮತದಲ್ಲಿ) ಸ್ವಭಾವದಿಂದ ಅಮೃತವಾದ ವಸ್ತು

1. ಇಲ್ಲಿ ಪರಪಕ್ಷದಲ್ಲಿ ದೋಷವನ್ನು ಹೇಳಿರುವದು ಶಿಷ್ಯರು ಆ ಪಕ್ಷಗಳ ಅಸಾರತೆಯನ್ನು ಮನಗಂಡು ಅದ್ವೈತದ ಕಡೆಗೆ ತಿರುಗಲೆಂಬುದಕ್ಕಾಗಿ ; ಮತ್ತೊಬ್ಬರ ಪಕ್ಷವನ್ನು ಖಂಡಿಸದೆ ಅದ್ವೈತವು ಸಿದ್ಧವಾಗುವದಿಲ್ಲವೆಂಬುದೇನೂ ಇಲ್ಲ.

2. 'ಆಯಂ ತು ಪುರಸ್ತಾತ್' ವಾ॥ 3. ೩-೨೦ ರಲ್ಲಿ

ಮರ್ತ್ಯತ್ವವನ್ನು ಹೊಂದುತ್ತದೆಯೋ ಆತನ (ಮತದಲ್ಲಿ) ಕೃತಕವಾಗಿ ಅಮೃತವಾದ (ಆ ವಸ್ತು) ಹೇಗೆ ನಿಶ್ಚಲವಾಗಿ ನಿಂತುಕೊಂಡೀತು ?

(ಭಾಷ್ಯ)

೨೨೩. ಉಕ್ತಾರ್ಥಾನಾಂ ಶ್ಲೋಕಾನಾಮ್ ಇಹ ಉಪನ್ಯಾಸಃ ಪರವಾದಿಪಕ್ಷಾಣಾಮ್ ಅನ್ಯೋನ್ಯವಿರೋಧಖ್ಯಾಪಿತಾನುಮೋದನ[1]ಪ್ರದರ್ಶನಾರ್ಥಃ ।।

(ಭಾಷ್ಯಾರ್ಥ)

(ಹಿಂದೆಯೇ[2]) ಅರ್ಥವನ್ನು ಹೇಳಿರುವ (ಈ) ಶ್ಲೋಕಗಳನ್ನು ಇಲ್ಲಿ (ಮತ್ತೆ) ಹೇಳಿರುವದು ಮಿಕ್ಕವಾದಿಗಳ ಪಕ್ಷಗಳು ಒಂದಕ್ಕೊಂದು ವಿರುದ್ಧವಾಗಿರುವದರಿಂದ ಪ್ರಖ್ಯಾತವಾಗುವ (ಅಜಾತಿವಾದವನ್ನು) ಒಪ್ಪುತ್ತೇವೆಂದು ತಿಳಿಸುವದಕ್ಕೆ[3].

(ಭಾಷ್ಯ)

೨೨೪. ಯಸ್ಮಾತ್ ಲೌಕಿಕ್ಯಪಿ ಪ್ರಕೃತಿಃ ನ ವಿಪರ್ಯೇತಿ । ಕಾಸೌ ಇತಿ ? ಆಹ-

(ಭಾಷ್ಯಾರ್ಥ)

ಏಕೆಂದರೆ ಲೌಕಿಕ (ದೃಷ್ಟಿಯ) ಪ್ರಕೃತಿಯುಕೂಡ ವಿರುದ್ಧಸ್ವಭಾವವನ್ನು ಹೊಂದುವದಿಲ್ಲ. ಅದು ಯಾವದು ? ಎಂದರೆ ಹೇಳುತ್ತಾರೆ :-

ಸಾಂಸಿದ್ಧಿಕೀ ಸ್ವಾಭಾವಿಕೀ ಸಹಜಾ ಅಕೃತಾ ಚ ಯಾ ।
ಪ್ರಕೃತಿಃ ಸೇತಿ ವಿಜ್ಞೇಯಾ ಸ್ವಭಾವಂ ನ ಜಹಾತಿ ಯಾ ।।೯।।

೯. ಸಾಂಸಿದ್ಧಿಕ, ಸ್ವಾಭಾವಿಕ, ಸಹಜ, ಮತ್ತು ಅಕೃತವಾದದ್ದಿರುವದಲ್ಲ, ಅದು-ಯಾವದು ಸ್ವಭಾವವನ್ನು ಬಿಡದಿರುವದೋ ಅದು-ಪ್ರಕೃತಿಯೆಂದು ತಿಳಿಯಬೇಕು.

(ಭಾಷ್ಯ)

೨೨೫. ಸಮ್ಯಕ್ಸಿದ್ಧಿಃ ಸಂಸಿದ್ಧಿಃ ತತ್ರ ಭವಾ ಸಾಂಸಿದ್ಧಿಕೀ । ಯಥಾ ಯೋಗಿನಾಂ ಸಿದ್ಧಾನಾಮ್ ಅಣಿಮಾದ್ಯೈಶ್ವರ್ಯಪ್ರಾಪ್ತಿಃ ಪ್ರಕೃತಿಃ । ಸಾ ಭೂತಭವಿಷ್ಯತ್ಕಾಲಯೋರಪಿ ಯೋಗಿನಾಂ ನ ವಿಪರ್ಯೇತಿ । ತಥೈವ ಸಾ । ತಥಾ ಸ್ವಾಭಾವಿಕೀ ದ್ರವ್ಯಸ್ವಭಾವತ ಏವ ಸಿದ್ಧಾ[4] । ಯಥಾ ಅಗ್ನ್ಯಾದೀನಾಮ್ ಉಷ್ಣಪ್ರಕಾಶಾಟಲಕ್ಷಣಾ । ಸಾಪಿ ನ ಕಾಲಾನ್ತರೇ

1. 'ಖ್ಯಾಪಿತಾನುತ್ಪತ್ತ್ಯಾಮೋದನ' ವಾ।। ಮ್ಯ।।
2. ೩-೬, ೭, ೮ ರ ಭಾಷ್ಯದಲ್ಲಿ.
3. ಆದ್ದರಿಂದ ಪುನರುಕ್ತಿಯಿಲ್ಲ. 4. ಆ।। ದಲ್ಲಿಲ್ಲ , ಇದರ ಒಳ್ಳೆಯದು.

ವ್ಯಭಿಚರತಿ ದೇಶಾನ್ತರೇ ಚ । ತಥಾ ಸಹಜಾ ಆತ್ಮನಾ ಸಹೈವ ಜಾತಾ । ಯಥಾ ಪಕ್ಷ್ಮಾದೀನಾಮ್ ಆಕಾಶಗಮನಾದಿಲಕ್ಷಣಾ । ತಥಾ ಅನ್ಯಾಪಿ ಯಾ ಕಾಚಿತ್ ಅಕೃತಾ ಕೇನಚಿತ್ ನ ಕೃತಾ । ಯಥಾ ಅಪಾಂ ನಿಮ್ನದೇಶಗಮನಾದಿಲಕ್ಷಣಾ । ಅನ್ಯಾಪಿ ಯಾ ಕಾಚಿತ್ ಸ್ವಭಾವಂ ನ ಜಹಾತಿ ಸಾ ಸರ್ವಾ ಪ್ರಕೃತಿಃ ಇತಿ ವಿಜ್ಞೇಯಾ ಲೋಕೇ ಮಿಥ್ಯಾ ಕಲ್ಪಿತೇಷು ಲೌಕಿಕೇಷ್ವಪಿ ವಸ್ತುಷು ಪ್ರಕೃತಿಃ ನ ಅನ್ಯಥಾ ಭವತಿ । ಕಿಮುತ ಅಜ ಸ್ವಭಾವೇಷು ಪರಮಾರ್ಥವಸ್ತುಷು ಅಮೃತತತ್ತ್ವಲಕ್ಷಣಾ ಪ್ರಕೃತಿಃ ನಾನ್ಯಥಾ ಭವತೀತಿ[1] ॥

(ಭಾಷ್ಯಾರ್ಥ)

೧. ಸಾಂಸಿದ್ಧಿಕವಾದದ್ದು[2] ಸಂಸಿದ್ಧಿಯೆಂದರೆ ಉತ್ತಮವಾದ ಸಿದ್ಧಿ. ಅದರಿಂದ ಆದದ್ದು ಸಾಂಸಿದ್ಧಿಕ. ಉದಾಹರಣೆಗೆ ಸಿದ್ಧರಾದ[3] ಯೋಗಿಗಳಿಗೆ ಅಣಿಮಾ ಮುಂತಾದ ಐಶ್ವರ್ಯಗಳನ್ನು ಪಡೆಯುವದು ಪ್ರಕೃತಿಯು. ಅದು ಹಿಂದಿನ ಮುಂದಿನ ಕಾಲ ಗಳಲ್ಲಿಯೂ ಯೋಗಿಗಳಿಗೆ ಬೇರೆಯ ಸ್ವಭಾವದ್ದಾಗುವದಿಲ್ಲ[4], ಅದು ಹಾಗೆಯೇ ಇರುತ್ತದೆ. ೨. ಇದರಂತೆ ಸ್ವಾಭಾವಿಕವಾದದ್ದು : ವಸ್ತುವಿನ ಸ್ವಭಾವದಿಂದಲೇ ಇದ್ದು ಕೊಂಡಿರುವದು. ಉದಾಹರಣೆಗೆ ಬೆಂಕಿ ಮುಂತಾದವುಗಳಿಗೆ ಬಿಸಿ, ಬೆಳಕು-ಮುಂತಾದ[5] ರೂಪದಲ್ಲಿರುವದು (ಸ್ವಾಭಾವಿಕಪ್ರಕೃತಿ). ಅದೂ ಬೇರೊಂದು ಕಾಲದಲ್ಲಾಗಲಿ ಬೇರೊಂದು ದೇಶದಲ್ಲಾಗಲಿ ಬೇರ್ಪಡುವದಿಲ್ಲ. ೩. ಇದರಂತೆ ಸಹಜವಾದದ್ದು : ತನ್ನೊಡನೆಯೇ ಹುಟ್ಟಿರುವದು, ಉದಾಹರಣೆಗೆ ಪಕ್ಷಿಗಳು ಮುಂತಾದವಕ್ಕೆ ಆಕಾಶದಲ್ಲಿ ಸಂಚರಿಸುವದೇ ಮುಂತಾದ ರೂಪದ (ಪ್ರಕೃತಿಯು ಸಹಜವಾದದ್ದು.) ೪. (ಇನ್ನು ಬೇರೆ ಯಾವದು[6]) ಅಕೃತವಾದದ್ದು, ಯಾರಿಂದಲೂ ಮಾಡಲ್ಪಡದೆ (ತಾನೇ) ಇರುವದು. ಉದಾಹರಣೆಗೆ ನೀರು ತಗ್ಗಾಗಿರುವ ಕಡೆಗೆ ಹರಿಯುವದು ಮುಂತಾದದ್ದು (ಅಕೃತ

1. 'ಇತ್ಯಭಿಪ್ರಾಯಃ' ಆ॥, 'ಭವೇತ್ ಇತ್ಯಭಿಪ್ರಾಯಃ' ಮಾ॥-ಎಂಬ ಪಾಠಗಳಿಗಿಂತ ಇದು ಮೇಲು ; ಅಥವಾ 'ಭವತೀತಿ ಇತ್ಯಭಿಪ್ರಾಯಃ' ಎಂದಿರಬೇಕು.

2. ಈ ಮಾತು ಭಾಷ್ಯದಲ್ಲಿದ್ದು ಬಿಟ್ಟುಹೋಗಿದೆ ಎಂದು ತೋರುವದು.

3. ಸಾಧಕರಿಗೆ ಐಶ್ವರ್ಯವು ಪೂರ್ಣವಾಗಿ ಬಂದಿರುವದಿಲ್ಲ ; ಆದ್ದರಿಂದ ಸಿದ್ಧರಾದ ಎಂದಿದೆ. 4 ಒಂದು ಸಲ ಬಂದ ಬಳಿಕ ಸ್ವಭಾವವಾಗಿ ಬಿಟ್ಟಿರುತ್ತದೆ ಎಂದರ್ಥ. ಇದರ ಮುಂದಿನ ವಾಕ್ಯವು ಇಲ್ಲದಿದ್ದರೂ ಸಾಗುತ್ತದೆ.

5. ಬೇಯಿಸುವದು ಮುಂತಾದ ಎಂದರ್ಥ ; ಇದು ವಸ್ತುವಿನ ಸ್ವರೂಪಕ್ಕೇ ಸೇರಿದ್ದು.

6. 'ಅನ್ಯಾಪಿ ಯಾ ಕಾಚಿತ್' ಎಂಬುದರ ಅನುವಾದವಿದು, ಈ ಮಾತ್ಯಗಳು ಹೆಚ್ಚಾಗಿ ಬಿದ್ದಿವೆ ಎಂದು ತೋರುತ್ತದೆ.

ಪ್ರಕೃತಿಯು). ಇನ್ನೂ ಯಾವಯಾವದು ಸ್ವಭಾವವನ್ನು ಬಿಡುವದಿಲ್ಲವೋ ಅದೆಲ್ಲವೂ ಲೋಕದಲ್ಲಿ ಪ್ರಕೃತಿಯು ಎಂದು ಅರಿಯತಕ್ಕದ್ದಾಗಿರುವದು.

ಮಿಥ್ಯಾಕಲ್ಪಿತವಾಗಿರುವ ಲೌಕಿಕವಸ್ತುಗಳಲ್ಲಿಕೂಡ ಪ್ರಕೃತಿಯು ಬೇರೆಯಾಗುವದಿಲ್ಲ[1]. ಇನ್ನು ಹುಟ್ಟುವ ಸ್ವಭಾವವೇ ಇಲ್ಲದ ಪರಮಾರ್ಥವಸ್ತುಗಳಲ್ಲಿ[2] ನಾಶವಿಲ್ಲದಿರುವದೆಂಬ ಪ್ರಕೃತಿಯು ಬೇರೆಯಾಗಲಾರದೆಂದು (ಹೇಳುವ)ದೇನು[3] ? (ಎಂದು ಅಭಿಪ್ರಾಯ[4]).

## ಅಜಾತಿವಾದದ ಉಪಸಂಹಾರ

(ಭಾಷ್ಯ)

೨೨೬. ಕಿಂವಿಷಯಾ ಪುನಃ ಸಾ ಪ್ರಕೃತಿಃ ಯಸ್ಯಾ ಅನ್ಯಥಾಭಾವಃ ವಾದಿಭಿಃ ಕಲ್ಪ್ಯತೇ ? ಕಲ್ಪನಾಯಾಂ ವಾ ಕೋ ದೋಷ ಇತಿ ? ಆಹ-

(ಭಾಷ್ಯಾರ್ಥ)

ಯಾವ ಪ್ರಕೃತಿಯು ಬೇರ್ಪಡುವದು ಎಂದು ವಾದಿಗಳು ಕಲ್ಪಿಸಿರುವರೋ ಆ ಪ್ರಕೃತಿಯ ವಿಷಯವು ಯಾವದು[5] ? ಹಾಗೆ (ವಾದಿಗಳು) ಕಲ್ಪಿಸಿರುವದರಲ್ಲಿರುವ ದೋಷವಾದರೂ ಯಾವದು ? ಎಂದರೆ ಹೇಳುತ್ತಾರೆ :-

ಜರಾಮರಣನಿರ್ಮುಕ್ತಾಃ ಸರ್ವೇ ಧರ್ಮಾಃ ಸ್ವಭಾವತಃ ।
ಜರಾಮರಣಮಿಚ್ಛನ್ತಶ್ಚ್ಯವನ್ತೇ ತನ್ಮನೀಷಯಾ ॥೧೦॥

೧೦. ಎಲ್ಲಾ ಧರ್ಮರೂ ಸ್ವಭಾವದಿಂದಲೇ, ಜರಾಮರಣನಿರ್ಮುಕ್ತರು. ಜರಾಮರಣಗಳನ್ನು ಬಯಸಿ ಅದೇ ಮನೀಷೆಯಿಂದ ಜಾರಿ ಬೀಳುತ್ತಿರುವರು.

(ಭಾಷ್ಯ)

೨೨೭. ಜರಾಮರಣನಿರ್ಮುಕ್ತಾಃ ಜರಾಮರಣಾದಿಸರ್ವವಿಕ್ರಿಯಾವರ್ಜಿತಾಃ ಇತ್ಯರ್ಥಃ । ಕೇ ? ,ಸರ್ವೇ ಧರ್ಮಾಃ ಸರ್ವೆ ಆತ್ಮಾನಃ ಇತ್ಯೇತತ್ । ಸ್ವಭಾವತಃ

---

1. ವ್ಯವಹಾರದೃಷ್ಟಿಯಿಂದ ನೋಡುವವರಿಗೆ ಹಾಗೆಯೇ ಇರುತ್ತದೆ.

2. ಆತ್ಮರುಗಳಲ್ಲಿ ಎಂದರ್ಥ ; ಇದು ಮುಂದಿನ ಕಾರಿಕೆಯಲ್ಲಿ ಸ್ಪಷ್ಟವಾಗಿರುತ್ತದೆ.

3. ಆದರೂ ವಾದಿಗಳು ಈ ಸ್ವಭಾವವೂ ಬೇರ್ಪಡುವದೆಂದು ಕಲ್ಪಿಸಿರುತ್ತಾರೆ ; ಇದೇ ಅವರ ಮತದಲ್ಲಿರುವ ದೋಷವು ಎಂದು ಭಾವ.

4. 'ಇತಿ ಇತ್ಯಭಿಪ್ರಾಯಃ' ಎಂಬ ಪಾಠಕ್ಕೆ ಅನುವಾದವಿದು.

5. ಯಾವದರ ಪ್ರಕೃತಿಯನ್ನು ಬೇರ್ಪಡುವದೆಂದು ವಾದಿಗಳು ಕಲ್ಪಿಸಿರುತ್ತಾರೆ ? ಎಂದು

ಪ್ರಕೃತಿತಃ[1] । ಏವಂಸ್ವಭಾವಾಃ[2] ಸನ್ತಃ ಧರ್ಮಾಃ ಜರಾಮರಣಮ್ ಇಚ್ಛನ್ತಃ ಇಚ್ಛನ್ತ ಇವ ಇಚ್ಛನ್ತಃ ರಜ್ಜ್ವಾಮಿವ ಸರ್ಪಮ್ ಆತ್ಮನಿ ಕಲ್ಪಯನ್ತಃ ಚ್ಯವನ್ತೇ । ಸ್ವಭಾವತಃ ಚಲನ್ತಿ ಇತ್ಯರ್ಥಃ । ತನ್ಮನೀಷಯಾ ಜರಾಮರಣಚಿನ್ತಯಾ । ತದ್ಭಾವಭಾವಿತತ್ವದೋಷೇಣ ಇತ್ಯರ್ಥಃ ॥

(ಭಾಷ್ಯಾರ್ಥ)

ಜರಾಮರಣನಿರ್ಮುಕ್ತರು, ಮುಪ್ಪು, ಸಾವು-ಮುಂತಾದ[3] ಯಾವ ವಿಕಾರವೂ ಇಲ್ಲದವರು ಎಂದರ್ಥ. ಯಾರು ? ಎಂದರೆ ಎಲ್ಲಾ ಧರ್ಮರೂ, ಎಲ್ಲಾ ಆತ್ಮರುಗಳೂ ಎಂದು ಅಭಿಪ್ರಾಯ. ಸ್ವಭಾವದಿಂದಲೇ, ಪ್ರಕೃತಿಯಿಂದಲೇ ಇಂಥ ಸ್ವಭಾವವುಳ್ಳ ವರಾಗಿದ್ದರೂ (ಈ) ಧರ್ಮರುಗಳ ಜರಾಮರಣಗಳನ್ನು ಬಯಸಿ,-ಇಲ್ಲಿ ಬಯಸಿ ಎಂದರೆ ಬಯಸುವವರಂತೆ (ಎಂದರ್ಥ[4])-ಹಗ್ಗದಲ್ಲಿ ಹಾವನ್ನು (ಕಲ್ಪಿಸುವಂತೆ) ಆತ್ಮನಲ್ಲಿ (ಅವನ್ನು) ಕಲ್ಪಿಸಿಕೊಂಡು[5] ಚಾರಿಬೀಳುವರು, ಸ್ವಭಾವವನ್ನು ಬಿಟ್ಟುಹೋಗುವರು ಎಂದರ್ಥ. ಅದೇ ಮನೀಷೆಯಿಂದ ಮುಪ್ಪುಸಾವುಗಳ ಚಿಂತನೆಯಿಂದ, ಅದೇ ಭಾವನೆಯಿಂದ ಭಾವಿತರಾಗಿರುವ ದೋಷದಿಂದ[6] (ಸ್ವಭಾವವನ್ನು ಬಿಟ್ಟು, ಚಲಿಸುವರು) ಎಂದರ್ಥ.

## ದ್ವೈತಿಗಳ ವಿವಾದದಿಂದ ಕಾರ್ಯಕಾರಣವಾದದ ನಿರಾಸ

(ಭಾಷ್ಯ)

೨೨೮. ಕಥಂ ಸಚ್ಚಾತಿವಾದಿಭಿಃ ಸಾಙ್ಖ್ಯೈಃ ಅನುಪಪನ್ನಮ್ ಉಚ್ಯತೇ ಇತ್ಯಾಹ ವೈಶೇಷಿಕಃ-

1. 'ಪ್ರಕೃತಿತ ಏವ' ವಾ॥ ಕಾ॥ ಮೈ॥　2. 'ಅತ ಏವಂಸ್ವಭಾವಾಃ' ವಾ॥ ಕಾ॥ ಮೈ॥

3. ಹುಟ್ಟುವದು, ಬೆಳೆಯುವದು-ಮುಂತಾದ ವಿಕಾರಗಳನ್ನೂ ಅಥವಾ ಹಸಿವು, ನೀರಡಿಕೆ, ಮುಪ್ಪು, ಸಾವು, ಶೋಕ, ಮೋಹ-ಮುಂತಾದ ವಿಕಾರಗಳನ್ನೂ ತಿಳಿಸುವದಕ್ಕೆ ಉಪಲಕ್ಷಣವಾಗಿ ಜರಾಮರಣಗಳೆಂದಿದೆ ಎಂದು ಭಾವ.

4. ಕಲ್ಪನೆಗೆ ಜರಾಮರಣಪ್ರಾಪ್ತಿಯೇ ಫಲ ಎಂದು ಭಾವ.

5. ಕಲ್ಪನೆಯಿಂದಲೇ ವಿಕಾರಗಳು ಆತ್ಮನಲ್ಲಿ ತೋರುತ್ತವೆ, ನಿಜವಾಗಿ ಇವು ಶರೀರಾದಿದೃಶ್ಯಗಳಲ್ಲಿರುವದರಿಂದ ಆತ್ಮನ ಧರ್ಮಗಳಲ್ಲ.

6. ಹಾಗೆಯೇ ಭಾವನೆಯನ್ನು ಮಾಡಿಕೊಂಡಿರುವದರಿಂದ ಅದೇ ನಿಜವಾಗಿ ತೋರುತ್ತಿರುವದು. ಆದ್ದರಿಂದ ಪರಮಾರ್ಥವನ್ನು ಅರಿತುಕೊಂಡು ಈ ಸಂಸಾರದ ಭಾವನೆಯಿಂದ ಪಾರಾಗಬೇಕು ಎಂದು ಭಾವ.

(ಭಾಷ್ಯಾರ್ಥ)

ಸತ್ಕಾರ್ಯವಾದಿಗಳಾದ ಸಾಂಖ್ಯರು ಹೇಳುವದು ಹೇಗೆ ಅಯುಕ್ತ ? ಎಂದರೆ

[1]

ಕಾರಣಂ ಯಸ್ಯ ವೈ ಕಾರ್ಯಂ ಕಾರಣಂ ತಸ್ಯ ಜಾಯತೇ ।
ಜಾಯಮಾನಂ ಕಥಮಜಂ ಭಿನ್ನಂ ನಿತ್ಯಂ ಕಥಂ ಚ ತತ್ ॥೧೧॥

೧೧. ಯಾವನ (ಮತದಲ್ಲಿ) ಕಾರಣವೇ ಕಾರ್ಯವೋ ಅವನ (ಮತದಲ್ಲಿ) ಕಾರಣವು ಹುಟ್ಟುತ್ತದೆ. ಹುಟ್ಟುವಂಥದ್ದು ಅಜವು ಹೇಗೆ ? ಮತ್ತು ಅದು ಭಿನ್ನವಾದರೆ ನಿತ್ಯವು ಹೇಗೆ ?

(ಭಾಷ್ಯ)

೨೨೯. ಕಾರಣಂ ಮೃದ್ವತ್ ಉಪಾದಾನಲಕ್ಷಣಂ ಯಸ್ಯ ವಾದಿನಃ ವೈ ಕಾರ್ಯಮ್ । ಕಾರಣಮೇವ ಕಾರ್ಯಾಕಾರೇಣ ಪರಿಣಮತೇ ಯಸ್ಯ ವಾದಿನಃ ಇತ್ಯರ್ಥಃ । ತಸ್ಯ ಅಜಮೇವ ಸತ್ ಪ್ರಧಾನಾದಿ ಕಾರಣಂ ಮಹದಾದಿಕಾರ್ಯರೂಪೇಣ ಜಾಯತೇ ಇತ್ಯರ್ಥಃ । ಮಹದಾದ್ಯಾಕಾರೇಣ ಚೇತ್ ಜಾಯಮಾನಂ ಪ್ರಧಾನಂ ಕಥಮ್ ಅಜಮ್ ಉಚ್ಯತೇ ತೈಃ ? ವಿಪ್ರತಿಷಿದ್ಧಂ ಚ ಇದಂ ಜಾಯತೇ ಅಜಂ ಚ ಇತಿ । ನಿತ್ಯಂ ಚ ತೈರುಚ್ಯತೇ ಪ್ರಧಾನಮ್ । ಭಿನ್ನಂ ವಿದೀರ್ಣಂ ಸ್ಫುಟಿತಮ್ ಏಕದೇಶೇನ ಸತ್ ಕಥಂ ನಿತ್ಯಂ ಭವೇತ್ ಇತ್ಯರ್ಥಃ । ನ ಹಿ ಸಾವಯವಂ ಘಟಾದಿ ಏಕದೇಶಸ್ಫುಟನಧರ್ಮಿ ನಿತ್ಯಂ ದೃಷ್ಟಂ ಲೋಕೇ ಇತ್ಯರ್ಥಃ । ವಿದೀರ್ಣಂ ಚ ಸ್ಯಾತ್ ಏಕದೇಶೇನ ಅಜಂ ನಿತ್ಯಂ ಚ ಇತ್ಯೇತತ್ ವಿಪ್ರತಿಷಿದ್ಧಂ ತೈರಭಿಧೀಯತೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಕಾರಣವು ಮಣ್ಣಿನಂತೆ ಉಪಾದಾನರೂಪವಾಗಿರುವ[2] (ವಸ್ತುವು) ಯಾವ ವಾದಿಯ(ಮತದಲ್ಲಿ) ಕಾರ್ಯವೋ, ಕಾರಣವೇ ಕಾರ್ಯಾಕಾರವಾಗಿ ಯಾವ ವಾದಿಯ

1. ಅಜಾತಿವಾದವನ್ನು ಸ್ಫುಟಗೊಳಿಸುವದೇ ಸಾಂಖ್ಯವೈಶೇಷಿಕರ ಚರ್ಚೆಗೆ ಪ್ರಯೋಜನವಾದ್ದರಿಂದ ಸಾಂಖ್ಯರೂ ವೈಶೇಷಿಕರ ಆರಂಭವಾದದ ಮೇಲೆ ಹೀಗೆಯೇ ದೋಷವನ್ನು ಹೇಳುತ್ತಾರೆಂದು ಇಲ್ಲಿ ಹೇಳಿದಂತೆ ಇಟ್ಟುಕೊಳ್ಳಬೇಕು.

2. ಯಾವದನ್ನು ಪಡೆಯುವದಕ್ಕೆ ಏನನ್ನು ತೆಗೆದುಕೊಳ್ಳುವರೋ ಅದು ಅದಕ್ಕೆ ಉಪಾದಾನ ಕಾರಣವು. ಉದಾಹರಣೆಗೆ ಮಡಕೆಯನ್ನು ಮಾಡುವದಕ್ಕೆ ಮಣ್ಣನ್ನು ತೆಗೆದುಕೊಳ್ಳುವರಾದ್ದರಿಂದ ಮಣ್ಣು ಮಡಕೆಗೆ ಉಪಾದಾನಕಾರಣವು.

(ಮತದಲ್ಲಿ) ಪರಿಮಿಸುವದೋ ಎಂದರ್ಥ[1]. ಅವನ (ಮತದಲ್ಲಿ) ಅಜವೇ (ಹುಟ್ಟುವದಲ್ಲದ್ದೇ) ಆಗಿರುವ ಪ್ರಧಾನವೇ ಮುಂತಾದ ಕಾರಣವು ಮಹತ್ತು ಮುಂತಾದ ಕಾರ್ಯರೂಪದಿಂದ ಹುಟ್ಟುತ್ತದೆ[2]-(ಎಂದಾಯಿತು) ಎಂದರ್ಥ. ಮಹತ್ತೇ ಮುಂತಾದದ್ದರ ಆಕಾರದಿಂದ ಹುಟ್ಟುವದಾದರೆ ಪ್ರಧಾನವು ಅಜವೆಂದು ಅವರು ಹೇಗೆ ಹೇಳುತ್ತಾರೆ ? ಹುಟ್ಟುತ್ತದೆ (ಆದರೂ ಅದು) ಅಜವೂ ಆಗಿದೆ-ಎನ್ನುವದಿದು (ತನಗೆ ತಾನೇ) ವಿರುದ್ಧವಾದ (ಮಾತು).

ಇದಲ್ಲದೆ ಪ್ರಧಾನವು ನಿತ್ಯವೆಂದೂ ಅವರು ಹೇಳುತ್ತಾರೆ. (ಆದರೆ ಅದು) ಭಿನ್ನವಾಗಿ, ಸೀಳಿಕೊಂಡು, ಒಂದು ಭಾಗದಲ್ಲಿ ಬಿರಿದುಕೊಂಡದ್ದಾಗಿದ್ದು[3] (ಅದು) ಹೇಗೆ (ತಾನೆ) ನಿತ್ಯವಾಗೀತು ? ಎಂದರ್ಥ. ಏಕೆಂದರೆ ಲೋಕದಲ್ಲಿ ಸಾವಯವವಾಗಿ ಒಂದು ಕಡೆಯಲ್ಲಿ ಬಿರಿದುಕೊಳ್ಳುವ ಸ್ವಭಾವವುಳ್ಳ ಗಡಿಗೆಯೇ ಮುಂತಾದದ್ದು ನಿತ್ಯವಾಗಿರುವದು ಕಂಡುಬಂದಿರುವದೇ ಇಲ್ಲವಲ್ಲ[4] ! ಎಂದರ್ಥ. ಒಂದು ಭಾಗದಲ್ಲಿ ಸೀಳಿಕೊಂಡೂ (ಇರುತ್ತದೆ), ಅಜವಾಗಿ ನಿತ್ಯವೂ (ಆಗಿರುತ್ತದೆ) ಎಂಬಿದನ್ನು ವಿರುದ್ಧವಾಗಿ ಅವರು ಹೇಳುತ್ತಿದ್ದಾರೆ-ಎಂದು ಅಭಿಪ್ರಾಯ.

(ಭಾಷ್ಯ)

೨೩೦. ಉಕ್ತಸ್ಯೈವ ಅರ್ಥಸ್ಯ ಸ್ಪಷ್ಟೀಕರಣಾರ್ಥಮ್ ಆಹ-

(ಭಾಷ್ಯಾರ್ಥ)

(ಹಿಂದೆ) ಹೇಳಿಯೇ ಇರುವ ವಿಷಯವನ್ನು[5] ಸ್ಪಷ್ಟಗೊಳಿಸುವದಕ್ಕಾಗಿ (ಈ ಮಾತನ್ನು) ಹೇಳುತ್ತಾರೆ :-

---

1. ಸಾಂಖ್ಯರ ಮತದಲ್ಲಿ ಕಾರಣವೇ ಕಾರ್ಯರೂಪವನ್ನು ನಿಜವಾಗಿ ಪಡೆಯುತ್ತದೆ.

2. ಪ್ರಧಾನವು ಮೂಲಕಾರಣವು. ಅದರಿಂದ ಮಹತ್ತು, ಮಹತ್ತಿನಿಂದ ಅಹಂಕಾರ, ಅಹಂಕಾರದಿಂದ ತನ್ಮಾತ್ರೆಗಳು, ತನ್ಮಾತ್ರೆಗಳಿಂದ ಮಹಾಭೂತಗಳು-ಹೀಗೆ ಹುಟ್ಟುವವೆಂದು ಸಾಂಖ್ಯರು ಹೇಳುತ್ತಾರೆ

3. ಹುಟ್ಟುವದೆಂದರೇ ಅವಯವಗಳು ಹೆಚ್ಚು ಕಡಿಮೆಯಾಗುವದು. ಹುಟ್ಟಿದರೂ ಹೆಚ್ಚು ಕಡಿಮೆಯಾಗುವದಿಲ್ಲವೆಂಬುದು ಯುಕ್ತಿವಿರುದ್ಧ-ಎಂದು ಭಾವ.

4. ಅವಯವವನ್ನು ಸೀಳಿದುಕೊಳ್ಳುವ, ಮಾರ್ಪಾಡಾಗುವ, ವಸ್ತುವೆಲ್ಲ ಅನಿತ್ಯವಾಗಿರುತ್ತದೆ. ಆದ್ದರಿಂದ ಹುಟ್ಟುವ, ಅವಯವಗಳ ಮಾರ್ಪಾಡುಳ್ಳ, ಪ್ರಧಾನವೂ ಅನಿತ್ಯವಾಗಬೇಕಾಯಿತು-ಎಂದು ಭಾವ ಸಂ ಭಾ ೨-೧೧-೨೯  5. ಕಾರಣವೇ ಕಾರ್ಯವಾಗುವದೆಂದೂ ಕಾರಣವೂ ನಿತ್ಯವೆಂದೂ ಹೇಳುವದು ಬಿರುವ ವಿಷಯವನ್ನು.

ಕಾರಣಾದ್ಯದ್ಯನನ್ಯತ್ವಮತಃ ಕಾರ್ಯಮಜಂ ತವ ।
ಜಾಯಮಾನಾದ್ಧಿ ವೈ ಕಾರ್ಯಾತ್ ಕಾರಣಂ ತೇ ಕಥಂ ಧ್ರುವಮ್ ॥೧೨॥

೧೨. ಕಾರಣಕ್ಕಿಂತ ಅನನ್ಯವಾದರೆ, ಅದರಿಂದ ಕಾರ್ಯವು ಅಜವಾದರೆ, ಹುಟ್ಟುವ ಕಾರ್ಯಕ್ಕೆ (ಅನನ್ಯವಾದ) ಕಾರಣವು ನಿನ್ನ (ಮತದಲ್ಲಿ) ಧ್ರುವವು ಹೇಗೆ ?

(ಭಾಷ್ಯ)

೨೩೧. ಕಾರಣಾತ್ ಅಜಾತ್ ಕಾರ್ಯಸ್ಯ ಯದಿ ಅನನ್ಯತ್ವಮ್ ಇಷ್ಟಂ ತ್ವಯಾ ತತಃ ಕಾರ್ಯಮ್ ಅಜಮ್ ಇತಿ ಪ್ರಾಪ್ತಮ್ । ಇದಂ ಚ ಅನ್ಯತ್ ವಿಪ್ರತಿಷಿದ್ಧಂ ಕಾರ್ಯಮ್ ಅಜಂ ಚ ಇತಿ ತವ । ಕಿಂ ಚ ಅನ್ಯತ್ ಕಾರ್ಯಕಾರಣಯೋಃ ಅನನ್ಯತ್ವೇ ಜಾಯಮಾನಾತ್ ಹಿ ವೈ ಕಾರ್ಯಾತ್ ಕಾರಣಮ್ ಅನನ್ಯತ್ ಧ್ರುವಂ ನಿತ್ಯಂ ಚ[1] ತೇ ಕಥಂ ಭವೇತ್ ? ನ ಹಿ ಕುಕ್ಕುಟ್ಯಾ ಏಕದೇಶಃ ಪಚ್ಯತೇ, ಏಕದೇಶಃ ಪ್ರಸವಾಯ ಕಲ್ಪತೇ ॥

(ಭಾಷ್ಯಾರ್ಥ)

ಹುಟ್ಟದೆ ಇರುವ ಕಾರಣಕ್ಕಿಂತ ಕಾರ್ಯವು ಬೇರೆಯಲ್ಲವೆಂದು ನಿನ್ನ ಅಭಿಮತವಾದರೆ[2], ಆಗ ಕಾರ್ಯವು (ಕೂಡ) ಅಜವೆಂದಾಗುವದು[3]. ಕಾರ್ಯವೂ ಆಗಿದೆ ಅಜವೂ ಆಗಿದೆ ಎನ್ನುವದು ನಿನ್ನ (ಮತದಲ್ಲಿ) ಇದೂ ಒಂದು ಬೇರೆ ವಿರುದ್ಧವಾದ[4] (ಮಾತು).

ಇದಲ್ಲದೆ ಮತ್ತೂ ಒಂದು (ಆಕ್ಷೇಪವುಂಟು) : ಕಾರ್ಯಕಾರಣಗಳು (ಒಂದಕ್ಕಿಂತ ಒಂದು) ಬೇರೆಯಲ್ಲವಾದರೆ ಹುಟ್ಟುವ ಕಾರ್ಯಕ್ಕಿಂತ ಬೇರೆಯಲ್ಲದ ಕಾರಣವು ನಿನ್ನ (ಮತದಲ್ಲಿ) ಧ್ರುವವೂ ನಿತ್ಯವೂ (ಆಗಿರುವದು) ಹೇಗೆ[5] ? ಹೆಣ್ಣುಕೋಳಿಯಲ್ಲಿ ಒಂದು ಭಾಗವನ್ನು ಅಡಿಗೆಮಾಡಿಕೊಳ್ಳುತ್ತಾರೆ, ಇನ್ನೊಂದು ಭಾಗವು ಮೊಟ್ಟೆ ಇಡುವದಕ್ಕೆ ಆಗುತ್ತದೆ (ಎನ್ನುವದು) ಆಗಲಾರದಷ್ಟೆ[6] ?

1. 'ನಿತ್ಯಂ ಧ್ರುವಂ ಚ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. ಕಾರ್ಯಕಾರಣಗಳು ಒಂದಕ್ಕಿಂತ ಒಂದು ಬೇರೆಯಲ್ಲ, ಕಾರ್ಯವೂ ಕಾರಣವೂ ಒಂದೇ- ಎಂದಾದರೆ. 3. ಏಕೆಂದರೆ ಕಾರಣವಾದ ಪ್ರಧಾನವು ಅಜ ; ಆದೇ ಕಾರ್ಯವೆಂದು ಸಾಂಖ್ಯನು ಒಪ್ಪಿರುತ್ತಾನೆ. 4. ಕಾರ್ಯವಾದ ಮಹತ್ತು ಅಜವಾದ ಪ್ರಧಾನವೇ ಎಂದು ಹೇಳುವಲ್ಲಿ ಅಜವಾದ ಪ್ರಧಾನವೇ ಹುಟ್ಟುತ್ತದೆ ಎಂದಂತೆ ಆಗುತ್ತದೆ ಎಂದು ಭಾವ. 5. ಪ್ರಧಾನವು ಹುಟ್ಟುವ ಮಹತ್ತೇ ಎಂದು ಹೇಳುವಲ್ಲಿ ಮಹತ್ತು ಅನಿತ್ಯವಾದ್ದರಿಂದ ಪ್ರಧಾನವೂ ಅನಿತ್ಯವು ಎಂದಂತೆ ಆಗುತ್ತದೆ ಎಂದು ಭಾವ. 6. ಹೆಣ್ಣುಕೋಳಿಯನ್ನು ಎರಡೂ ಕೆಲಸಗಳಿಗೆ ವಿನಿಯೋಗಿಸುವದು ಹೇಗೆ ಅಸಾಧ್ಯವೋ ಹಾಗೆ ಪ್ರಧಾನವು ನಿತ್ಯವೂ ಆಗಿ ಕಾರ್ಯವಾಗಿ ಹುಟ್ಟುವದೂ ಆಗಿರುವದು ಅಸಾಧ್ಯ.

ಅಜಾದ್ಯೈ ಜಾಯತೇ ಯಸ್ಯ ದೃಷ್ಟಾನ್ತಸ್ತಸ್ಯ ನಾಸ್ತಿ ವೈ ।
ಜಾತಾಚ್ಚ ಜಾಯಮಾನಸ್ಯ ನ ವ್ಯವಸ್ಥಾ ಪ್ರಸಜ್ಯತೇ ॥೧೩॥

೧೩. ಯಾವನ (ಮತದಲ್ಲಿ) ಅಜವಾದ (ವಸ್ತುವಿನಿಂದ ಕಾರ್ಯವು) ಹುಟ್ಟುವದೋ ಅವನಿಗೆ ದೃಷ್ಟಾನ್ತವು ಇರುವದಿಲ್ಲ. ಮತ್ತು ಹುಟ್ಟಿದ್ದರಿಂದಲೇ ಹುಟ್ಟುವ(ಕಾರ್ಯ)ಕ್ಕೆ ವ್ಯವಸ್ಥೆಯಿಲ್ಲವೆಂದು ಆಗುತ್ತದೆ.

(ಭಾಷ್ಯ)

೨೩.೨. ಕಿಂ ಚ ಅನ್ಯತ್ ಅಜಾತ್ ಅನುತ್ಪನ್ನಾತ್ ವಸ್ತುನಃ ಜಾಯತೇ ಯಸ್ಯ ವಾದಿನಃ ಕಾರ್ಯಮ್ ದೃಷ್ಟಾನ್ತಃ ತಸ್ಯ ನಾಸ್ತಿ ವೈ । ದೃಷ್ಟಾನ್ತಾಭಾವೇ ಅರ್ಥಾತ್ ಅಜಾತ್ ನ ಕಿಂಚಿತ್ ಜಾಯತೇ ಇತಿ ಸಿದ್ಧಂ ಭವತಿ ಇತ್ಯರ್ಥಃ । ಯದಾ ಪುನಃ ಜಾತಾತ್ ಜಾಯಮಾನಸ್ಯ ವಸ್ತುನಃ ಅಭ್ಯುಪಗಮಃ ತದಪಿ ಅನ್ಯಸ್ಮಾತ್ ಜಾತಾತ್ ತದಪಿ ಅನ್ಯಸ್ಮಾತ್ ಇತಿ ನ ವ್ಯವಸ್ಥಾ ಪ್ರಸಜ್ಯತೇ ಅನವಸ್ಥಾ ಸ್ಯಾತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತೊಂದು (ಮಾತು) : ಯಾವ ವಾದಿಯ (ಮತದಲ್ಲಿ) ಅಜವಾದ ಹುಟ್ಟದೆ ಇರುವ ವಸ್ತುವಿನಿಂದ ಕಾರ್ಯವು ಹುಟ್ಟುತ್ತದೆಯೋ ಅವನಿಗೆ ದೃಷ್ಟಾಂತವೇ ಇರುವದಿಲ್ಲ. ದೃಷ್ಟಾಂತವಿಲ್ಲದಿದ್ದರೆ[1] ಅಜವಾದ್ದರಿಂದ ಯಾವದೂ (ನಿಜವಾಗಿ) ಹುಟ್ಟಲಾರದೆಂದು ಅರ್ಥವಶದಿಂದಲೇ ಸಿದ್ಧವಾಗುತ್ತದೆ-ಎಂದರ್ಥ. (ಇನ್ನು) ಯಾವಾಗ ಹುಟ್ಟಿದ್ದರಿಂದಲೇ ವಸ್ತು ಹುಟ್ಟುವದೆಂದು ಒಪ್ಪುತ್ತಾನೋ (ಆಗ) ಅದೂ ಮತ್ತೊಂದು ಹುಟ್ಟಿದ ವಸ್ತುವಿನಿಂದ (ಹುಟ್ಟುತ್ತದೆ), ಅದೂ ಮತ್ತೊಂದರಿಂದ (ಹುಟ್ಟುತ್ತದೆ)-ಎಂದು ವ್ಯವಸ್ಥೆಯೇ ಇಲ್ಲವಾಗುತ್ತದೆ, ಅನವಸ್ಥೆಯಾದೀತು[2] ಎಂದರ್ಥ[3].

1. ಪೂರ್ವಪಕ್ಷಿಯು ತರ್ಕಪ್ರಧಾನನು ; ದೃಷ್ಟಾಂತವಿಲ್ಲದೆ ತರ್ಕವು ಸಿದ್ಧವಾಗುವದಿಲ್ಲವೆಂದು ಅವನು ಒಪ್ಪಿರುತ್ತಾನೆ. ಆದ್ದರಿಂದ ಅಜವಾದ ಪ್ರಧಾನದಿಂದ ಮಹತ್ತು ಹುಟ್ಟುತ್ತದೆ ಎಂಬುದಕ್ಕೆ ತರ್ಕದ ಬೆಂಬಲವಿಲ್ಲವೆಂದಾಗುತ್ತದೆ.

2. ತರ್ಕದಲ್ಲಿ ಅನವಸ್ಥೆ ಎಂಬುದೂ ಒಂದು ದೋಷ. ೩-೨೭ ರಲ್ಲಿಯೂ ಈ ದೋಷವನ್ನು ಹೇಳಿದೆ. ಒಂದರಿಂದ ಒಂದು ಹುಟ್ಟುತ್ತಿರುವದೇ ಸ್ವಭಾವವು ಎಂದು ಹೇಳಿದರೆ ಈ ದೋಷವು ಬರುವದೆಂದು ನೆನಪಿಸುವದಕ್ಕಾಗಿ ಹೀಗೆಂದು ಹೇಳಿದೆ.

3. ಇಲ್ಲಿ ವೈಶೇಷಿಕನ ಮೇಲೆ ಸಾಂಖ್ಯನು ಹಾಕಬಹುದಾದ ದೋಷಗಳನ್ನೂ ಕಲ್ಪಿಸಿಕೊಳ್ಳಬೇಕು. ಸೂ. ಭಾ. ೨-೨-೧೨, ೧೩ ಮುಂತಾದವುಗಳನ್ನು ನೋಡಿ.

## ಧರ್ಮಾಧರ್ಮಗಳಿಗೂ ಶರೀರಕ್ಕೂ ಕಾರ್ಯಕಾರಣಭಾವವಿಲ್ಲ

(ಭಾಷ್ಯ)

"ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್" (ಬೃ. ೪-೫-೧೫) ಇತಿ ಪರಮಾರ್ಥತೋ ದ್ವೈತಾಭಾವಃ ಶ್ರುತ್ಯಾ ಉಕ್ತಃ । ತಮ್ ಆಶ್ರಿತ್ಯ ಆಹ-

(ಭಾಷ್ಯಾರ್ಥ)

"ಆದರೆ ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಗಿರುವದೋ (ಅಲ್ಲಿ ಏತರಿಂದ ಯಾರನ್ನು ನೋಡುವನು ?)" (ಬೃ. ೪-೫-೧೫) ಎಂದು ಪರಮಾರ್ಥ (ದೃಷ್ಟಿ) ಯಿಂದ ದ್ವೈತವೇ ಇಲ್ಲವೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಅದನ್ನವಲಂಬಿಸಿ[1] (ಈಗ) ಹೇಳುತ್ತಾರೆ :-

**ಹೇತೋರಾದಿಃ ಫಲಂ ಯೇಷಾಮಾದಿರ್ಹೇತುಃ ಫಲಸ್ಯ ಚ ।**
**ಹೇತೋಃ ಫಲಸ್ಯ ಚಾನಾದಿಃ ಕಥಂ ತೈರುಪವರ್ಣ್ಯತೇ ॥೧೪॥**

೧೪. ಹೇತುವಿಗೆ ಫಲವು ಆದಿಯೆಂದೂ ಹೇತುವು ಫಲಕ್ಕೆ ಆದಿಯೆಂದೂ ಯಾರ (ಮತವಿರುವದೋ) ಅವರು ಹೇತುವಿಗೂ ಫಲಕ್ಕೂ ಅನಾದಿತ್ವವನ್ನು ಹೇಳುವದು ಹೇಗೆ ?

(ಭಾಷ್ಯ)

೨೩೪. ಹೇತೋಃ ಧರ್ಮಾದೇಃ[2] ಆದಿಃ ಕಾರಣಂ ದೇಹಾದಿಸಙ್ಘಾತಃ ಫಲಂ ಯೇಷಾಂ ವಾದಿನಾಮ್ । ತಥಾ ಆದಿಃ ಕಾರಣಮ್ ಹೇತುಃ ಧರ್ಮಾದಿಃ ಫಲಸ್ಯ ಚ ದೇಹಾದಿಸಙ್ಘಾತಸ್ಯ । ಏವಂ ಹೇತುಫಲಯೋಃ ಇತರೇತರಕಾರ್ಯಕಾರಣತ್ವೇನ ಆದಿ ಮತ್ತ್ವಂ ಬ್ರುವದ್ಭಿರೇವ ಹೇತೋಃ ಫಲಸ್ಯ ಚ ಅನಾದಿತ್ವಂ ಕಥಂ ತೈಃ ಉಪವರ್ಣ್ಯತೇ ? ವಿಪ್ರತಿಷಿದ್ಧಮ್ ಇತ್ಯರ್ಥಃ । ನ ಹಿ ನಿತ್ಯಸ್ಯ ಕೂಟಸ್ಥಸ್ಯ ಆತ್ಮನಃ ಹೇತುಫಲಾತ್ಮತಾ ಸಂಭವತಿ ॥

(ಭಾಷ್ಯಾರ್ಥ)

ಹೇತುವಿಗೆ ಧರ್ಮಮುಂತಾದಕ್ಕೆ[3] ದೇಹವೇ ಮುಂತಾದವುಗಳ ಸಂಘಾತವೆಂಬ ಫಲವು ಯಾವ ವಾದಿಗಳ ಮತದಲ್ಲಿ ಆದಿಯೋ ಕಾರಣವೋ ; ಮತ್ತು ಧರ್ಮ

---

1. ಸಾಂಖ್ಯವೈಶೇಷಿಕರು ಒಬ್ಬರು ಹೇಳುವ ದ್ವೈತಪ್ರಕ್ರಿಯೆಯನ್ನೊಬ್ಬರು ಖಂಡಿಸುತ್ತಾರಾದ್ದರಿಂದ ಶ್ರುತಿಯಲ್ಲಿ ಹೇಳಿರುವ ಅದ್ವೈತವೇ ಸರಿಯೆಂದು ಪೂರ್ವಪಕ್ಷಮಾಡುತ್ತದೆ ಎಂದು ಭಾವ.

2. 'ಧರ್ಮಾಧರ್ಮಾದೇಃ' ಎಂಬ ಪಾಠಕ್ಕಿಂತ ಇದೇ ಮೇಲು.

3. ಧರ್ಮ, ಅಧರ್ಮ- ಇವುಗಳಿಗೆ.

ಮುಂತಾದದ್ದು ಫಲಕ್ಕೆ ದೇಹಾದಿಗಳ ಸಂಘಾತಕ್ಕೆ ಆದಿಯೋ ಕಾರಣವೋ (ಎಂದರ್ಥ). ಹೀಗೆ ಹೇತುಫಲಗಳಿಗೆ ಒಂದಕ್ಕೊಂದಕ್ಕೆ ಕಾರ್ಯಕಾರಣಭಾವವಿರುವ ದರಿಂದ (ಅವೆರಡಕ್ಕೂ) ಆದಿಯುಂಟೆಂದು ಹೇಳುತ್ತಲೇ ಆ ವಾದಿಗಳು ಹೇತುವಿಗೂ ಫಲಕ್ಕೂ ಅನಾದಿತ್ವವನ್ನು ಹೇಳುತ್ತಿರುವರಲ್ಲ[1] ! (ಇದು) ಹೇಗೆ ? (ಇದು ತಮ್ಮ ಮತಕ್ಕೇ) ವಿರುದ್ಧವು ಎಂದರ್ಥ. ನಿತ್ಯವಾಗಿ ಕೂಟಸ್ಥನಾಗಿರುವ ಆತ್ಮನಿಗೆ ಹೇತುಫಲಭಾವವು ಹೊಂದುವದೇ ಇಲ್ಲವಲ್ಲ[2] !

(ಭಾಷ್ಯ)

೨೩೫. ಕಥಂ ತೈಃ ವಿರುದ್ಧಮ್ ಅಭ್ಯುಪಗಮ್ಯತೇ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಅವರು ಅಂಗೀಕರಿಸಿರುವದು ವಿರುದ್ಧವೆಂಬುದು ಹೇಗೆ ಎಂದರೆ ಹೇಳುತ್ತಾರೆ[3] :-

ಹೇತೋರಾದಿಃ ಫಲಂ ಯೇಷಾಮಾದಿರ್ಹೇತುಃ ಫಲಸ್ಯ ಚ ।
ತಥಾ ಜನ್ಮ ಭವೇತ್ತೇಷಾಂ ಪುತ್ರಾಜ್ಜನ್ಮ ಪಿತುರ್ಯಥಾ ॥೧೫॥

೧೫. ಯಾರ (ಮತದಲ್ಲಿ) -ಹೇತುವಿಗೆ ಫಲವು ಆದಿಯೋ, ಮತ್ತು ಹೇತುವು ಫಲಕ್ಕೆ ಆದಿಯೋ, ಅವರ (ಮತದಲ್ಲಿ) ಮಗನಿಂದ ತಂದೆಗೆ (ಜನ್ಮ ವೆಂಬುದು) ಹೇಗೋ ಹಾಗೆ ಜನ್ಮ (ವನ್ನು ಹೇಳಿದಂತೆ) ಆಗುವದು.

(ಭಾಷ್ಯ)

೨೩೬. ಹೇತುಜನ್ಮಾದೇವ ಫಲಾತ್ ಹೇತೋಃ ಜನ್ಮ ಅಭ್ಯುಪಗಚ್ಛತಾಂ

1. ಹೇತುಫಲಾತ್ಮಕವಾದ ಸಂಸಾರವು ಅನಾದಿ ಎಂಬುದು ಪೂರ್ವಪಕ್ಷ. ಇಲ್ಲಿ (೧) ಹೇತು, ಫಲ-ಒಂದೊಂದೂ ಅನಾದಿಯೊ, (೨) ಇವು ಒಂದರಿಂದೊಂದಾಗುತ್ತವೆಯಾದರೂ ಹೇತುಫಲ ಪರಂಪರೆಯು ಅನಾದಿಯೊ, (೩) ಒಂದು ಹೇತುವಿನಿಂದ ಬೇರೆಯ ಫಲ, ಆ ಫಲದಿಂದ ಮತ್ತೊಂದು ಹೇತು-ಹೀಗೆ ಬೀಜಾಂಕುರನ್ಯಾಯದಿಂದ ಒಟ್ಟು ಪರಂಪರೆಯು ಅನಾದಿಯೊ ?-ಎಂಬ ಮೂರು ವಿಕಲ್ಪಗಳನ್ನು ಒಟ್ಟಿ ಈ ಮೂರನ್ನೂ ಒಂದೊಂದಾಗಿ ಖಂಡಿಸುತ್ತಾರೆ.

2. ಆತ್ಮನಿಗೆ ಧರ್ಮಾಧರ್ಮಗಳ ಅಥವಾ ಶರೀರದ ಸಂಬಂಧವೇ ನಿಜವಾಗಿ ಇಲ್ಲ ವೆಂಬುದನ್ನು ಸೂ. ಭಾ. ೧-೧-೪ ರಲ್ಲಿ ತೋರಿಸಿದೆ.

3. ಧರ್ಮಾಧರ್ಮಗಳು ಶರೀರಾದಿಗಳಿಗೂ ಶರೀರಾದಿಗಳು ಧರ್ಮಾಧರ್ಮಗಳಿಗೂ ಕಾರಣ ವೆಂದರೆ ಅನ್ಯೋನ್ಯಾಶ್ರಯದೋಷವೆಂದು ಎರಡನೆಯ ವಿಕಲ್ಪವನ್ನು ಖಂಡಿಸುತ್ತಾರೆ ಎಂದು ಭಾವ.

ತೇಷಾಮ್ ಈದೃಶಃ ವಿರೋಧಃ ಉಕ್ತೋ ಭವತಿ ಯಥಾ ಪುತ್ರಾತ್ ಜನ್ಮ ಪಿತುಃ ।।

(ಭಾಷ್ಯಾರ್ಥ)

ಹೇತುವಿನಿಂದ ಉಂಟಾಗುವ ಫಲದಿಂದಲೇ ಹೇತುವಿಗೆ ಜನ್ಮವನ್ನು ಒಪ್ಪುವ ಅವರು- ಮಗನಿಂದ ತಂದೆಯ ಹುಟ್ಟನ್ನು (ಹೇಳಿದರೆ) ಎಂಥ (ವಿರೋಧವೋ) ಅಂಥ ವಿರೋಧವನ್ನೇ ಹೇಳಿದಂತೆ ಆಗುವದು.

(ಭಾಷ್ಯ)

೨೩೭. ಯಥೋಕ್ತೋ ವಿರೋಧಃ ನ ಯುಕ್ತಃ ಅಭ್ಯುಪಗನ್ತುಮ್ ಇತಿ ಚೇತ್ ಮನ್ಯಸೇ-

(ಭಾಷ್ಯಾರ್ಥ)

ಮೇಲೆ ಹೇಳಿರುವ ವಿರೋಧವನ್ನು ಒಪ್ಪಿಕೊಳ್ಳುವದು ಸರಿಯಲ್ಲವೆಂದು ನಿನ್ನ ಅಭಿಪ್ರಾಯವಾದರೆ-

**ಸಮ್ಭವೇ ಹೇತುಫಲಯೋರೇಷಿತವ್ಯಃ ಕ್ರಮಸ್ತ್ವಯಾ ।**
**ಯುಗಪತ್ ಸಮ್ಭವೇ ಯಸ್ಮಾದಸಮ್ಬನ್ಧೋ ವಿಷಾಣವತ್ ।।೧೬।।**

೧೬. ಹೇತುಫಲಗಳ ಸಂಭವದಲ್ಲಿ ನೀನು ಕ್ರಮವನ್ನು ಇಟ್ಟುಕೊಳ್ಳಬೇಕು. ಏಕೆಂದರೆ ಒಟ್ಟಿಗೆ ಸಂಭವವಾದರೆ (ಅವಕ್ಕೆ) ಕೋಡುಗಳಂತೆ (ಒಂದಕ್ಕೊಂದಕ್ಕೆ) ಸಂಬಂಧವಿರುವದಿಲ್ಲ.

(ಭಾಷ್ಯ)

೨೩೮. ಸಮ್ಭವೇ ಉತ್ಪತ್ತೌ । ಹೇತುಫಲಯೋಃ ಕ್ರಮಃ ಏಷಿತವ್ಯಃ ಅನ್ವೇಷ್ಟವ್ಯಃ ತ್ವಯಾ[1], ಹೇತುಃ ಪೂರ್ವಂ ಪಶ್ಚಾತ್ ಫಲಂ ಚ ಇತಿ । ಇತಶ್ಚ ಯುಗಪತ್ ಸಮ್ಭವೇ ಯಸ್ಮಾತ್ ಹೇತುಫಲಯೋಃ ಕಾರ್ಯಕಾರಣತ್ವೇನ ಅಸಮ್ಬನ್ಧಃ । ಯಥಾ ಯುಗಪತ್ ಸಮ್ಭವತೋಃ ಸವ್ಯೇತರಗೋವಿಷಾಣಯೋಃ ।।

(ಭಾಷ್ಯಾರ್ಥ)

ಹೇತುಫಲಗಳ ಸಂಭವದಲ್ಲಿ ಹುಟ್ಟುವದರಲ್ಲಿ ನೀನು ಕ್ರಮವನ್ನು ('ಏಷಿತವ್ಯಃ'-ಅನ್ವೇಷ್ಟವ್ಯಃ) ಇಟ್ಟುಕೊಳ್ಳಬೇಕು ; ಮೊದಲು ಹೇತುವೂ ಬಳಿಕ ಫಲವೂ (ಹುಟ್ಟು

1. ಆ।। ಮೈ।। ಗಳಲ್ಲಿಲ್ಲ.

ವವು) ಎಂದು (ಕ್ರಮವನ್ನು) ಹುಡುಕಿಡಬೇಕಾಗುವದು. ಈ ಕಾರಣದಿಂದಲೂ (ಕ್ರಮವನ್ನು ಒಪ್ಪಬೇಕಾಗುವದು). ಏಕೆಂದರೆ ಹೇತುಫಲಗಳು ಒಟ್ಟಿಗೆ ಹುಟ್ಟಿದರೆ (ಇಂಥದ್ದು ಕಾರ್ಯವು, ಇಂಥದ್ದು ಕಾರಣವು ಎಂದು) ಕಾರ್ಯಕಾರಣಭಾವದಿಂದ (ಅವುಗಳಿಗೆ) ಸಂಬಂಧವಿರುವದಿಲ್ಲ. ಹೇಗೆ ಒಂದೇ ಕಾಲದಲ್ಲಿ ಹುಟ್ಟುವ ಎಡಬಲದ ಎತ್ತಿನ ಕೋಡುಗಳಿಗೆ (ಸಂಬಂಧವಿರುವದಿಲ್ಲವೋ ಹಾಗೆ).

(ಭಾಷ್ಯ)

೨೩೯. ಕಥಮ್ ಅಸಮ್ಬನ್ಧ ಇತಿ ? ಆಹ-

(ಭಾಷ್ಯಾರ್ಥ)

(ಅವುಗಳಿಗೆ) ಸಂಬಂಧವಿರುವದಿಲ್ಲವೆಂಬುದು ಹೇಗೆ ? ಎಂದರೆ ಹೇಳುತ್ತಾರೆ :-

ಫಲಾದುತ್ಪದ್ಯಮಾನಃ ಸನ್ ನ ತೇ ಹೇತುಃ ಪ್ರಸಿಧ್ಯತಿ ।
ಅಪ್ರಸಿದ್ಧಃ ಕಥಂ ಹೇತುಃ ಫಲಮುತ್ಪಾದಯಿಷ್ಯತಿ ॥೧೭॥

೧೭. ಫಲದಿಂದ ಹುಟ್ಟುವದಾಗಿರುವದರಿಂದ ನಿನ್ನ (ಮತದಲ್ಲಿ) ಹೇತುವು ಪ್ರಸಿದ್ಧವಾಗಲಾರದು. ಪ್ರಸಿದ್ಧವಾಗದ ಹೇತು ಹೇಗೆ (ತಾನೆ) ಫಲವನ್ನು ಉಂಟುಮಾಡುವದು ?

(ಭಾಷ್ಯ)

೨೪೦. ಜನ್ಯಾತ್ ಸ್ವತಃ ಅಲಬ್ಧಾತ್ಮಕಾತ್ ಫಲಾತ್ ಉತ್ಪದ್ಯಮಾನಃ ಸನ್ ಶಶವಿಷಾಣಾದೇರಿವ ಅಸತಃ ನ (ತೇ[1]) ಹೇತುಃ ಪ್ರಸಿಧ್ಯತಿ ಜನ್ಮ ನ ಲಭತೇ । ಅಲಬ್ಧಾತ್ಮಕಃ ಅಪ್ರಸಿದ್ಧಃ ಸನ್ ಶಶವಿಷಾಣಾದಿಕಲ್ಪಃ (ಹೇತುಃ[2]) ತವ ಕಥಂ ಫಲಮ್ ಉತ್ಪಾದಯಿಷ್ಯತಿ ? ನ ಹಿ ಇತರೇತರಾಪೇಕ್ಷಸಿದ್ಧ್ಯೋಃ ಶಶವಿಷಾಣಕಲ್ಪಯೋಃ ಕಾರ್ಯಕಾರಣಭಾವೇನ ಸಮ್ಬನ್ಧಃ ಕ್ವಚಿತ್ ದೃಷ್ಟಃ ಅನ್ಯಥಾ ವಾ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

(ಮುಂದೆ) ಹುಟ್ಟುವದಾಗಿದ್ದು ತಾನೇ (ಇನ್ನೂ) ಸ್ವರೂಪವನ್ನು ಪಡೆದುಕೊಳ್ಳದೆ ಇರುವ[3] ಫಲದಿಂದ ಹುಟ್ಟುವದಾಗಿರುವದಾಗಿ, ಮೊಲದಕೊಂಬು ಮುಂತಾದದ್ದ

1. ಈ ಮಾತು ಭಾಷ್ಯದಲ್ಲಿ ಬಿಟ್ಟು ಹೋಗಿದೆ, ಆದರೆ ಮುಂದೆ 'ತವ' ಎಂಬ ಮಾತು ಬಂದಿದೆ.

2. ಈ ಮಾತು ಇಲ್ಲಿ ಬಿಟ್ಟುಹೋಗಿದೆ.

3. ಹುಟ್ಟುವದೆಂದರೆ ಸ್ವರೂಪವನ್ನು ಪಡೆದುಕೊಳ್ಳುವದು.

ರಂತೆ ಅಸತ್ತಾಗಿರುವ (ಫಲದಿಂದ) ಹೇತು (ನಿನ್ನ ಮತದಲ್ಲಿ) ಪ್ರಸಿದ್ಧವಾಗಲಾರದು, ಜನ್ಮವನ್ನು ತಳೆಯಲಾರದು. ಸ್ವರೂಪವನ್ನು ಪಡೆದುಕೊಳ್ಳದೆ ಇರುವದರಿಂದ ಅಪ್ರಸಿದ್ಧವಾಗಿರುವ ಮೊಲದ ಕೊಂಬೇ ಮುಂತಾದದ್ದರಂತಿರುವ (ಹೇತುವು) ನಿನ್ನ (ಮತದಲ್ಲಿ) ಹೇಗೆತಾನೆ ಫಲವನ್ನುಂಟುಮಾಡೀತು ? ಒಂದನ್ನು ಬಯಸಿ ಮತ್ತೊಂದು ಸಿದ್ಧವಾಗಬೇಕಾಗಿರುವ ಮೊಲದ ಕೊಂಬಿನಂತಿರುವ (ಎರಡು ವಸ್ತುಗಳಿಗೆ) ಕಾರ್ಯ ಕಾರಣಭಾವದ ಸಂಬಂಧವಾಗಲಿ ಮತ್ತೆ ಯಾವ ಬೇರೆಯ ಸಂಬಂಧವಾಗಲಿ[1] ಎಲ್ಲಿಯೂ ಕಂಡುಬಂದಿಲ್ಲವಲ್ಲ !-ಎಂದು ಅಭಿಪ್ರಾಯ.

(ಭಾಷ್ಯ)

೨೪೧. ಅಸಮ್ಬನ್ಧದೋಷೇಣ ಅಪೋದಿತೇಽಪಿ[2] ಹೇತುಫಲಯೋಃ ಕಾರ್ಯ ಕಾರಣಭಾವೇ-

(ಭಾಷ್ಯಾರ್ಥ)

(ಹೀಗೆ) ಸಂಬಂಧವಿಲ್ಲವಾಗುವದೆಂಬ ದೋಷ(ವಿರುವ)ದರಿಂದ ಹೇತುಫಲ ಗಳಿಗೆ ಕಾರ್ಯಕಾರಣಭಾವವನ್ನು ಅಲ್ಲಗಳೆದ ಮೇಲೂ-

ಯದಿ ಹೇತೋಃ ಫಲಾತ್ ಸಿದ್ಧಿಃ ಫಲಸಿದ್ಧಿಶ್ಚ ಹೇತುತಃ ।
ಕತರತ್ ಪೂರ್ವನಿಷ್ಪನ್ನಂ ಯಸ್ಯ ಸಿದ್ಧಿರಪೇಕ್ಷಯಾ ॥೧೮॥

೧೮. ಹೇತುವಿಗೆ ಫಲದಿಂದ ಸಿದ್ಧಿ, ಮತ್ತು ಫಲಸಿದ್ಧಿಯು ಹೇತುವಿನಿಂದ ಎಂದು (ಹೇಳುವೆ)ಯಾದರೆ, ಇವೆರಡರಲ್ಲಿ ಮೊದಲು ಇರುವದು ಯಾವದು ? ಯಾವದರ ಸಿದ್ಧಿಯು (ಮತ್ತೊಂದರ) ಅಪೇಕ್ಷೆಯಿಂದ (ಆಗುವದೋ ಅದನ್ನು ಹೇಳು[3]).

(ಭಾಷ್ಯ)

೨೪೨. ಯದಿ ಹೇತುಫಲಯೋಃ ಅನ್ಯೋನ್ಯಸಿದ್ಧಿಃ ಅಭ್ಯುಪಗಮ್ಯತೇ ವಿವ

---

1. ಅತ್ಯಂತವಾಗಿ ಅಸಿದ್ಧವಾದ ವಸ್ತುಗಳಿಗೆ ಯಾವ ಸಂಬಂಧವೂ ಇರಲಾರದು ; ಆದ್ದರಿಂದ ಕಾರ್ಯಕಾರಣಭಾವವಲ್ಲದಿದ್ದರೆ ಮತ್ತೊಂದು ಸಂಬಂಧವಿರಲಿ ಎನ್ನುವದಕ್ಕೆ ಆಗುವದಿಲ್ಲ.

2. "ಅಪಾಕೃತೇಽಪಿ" ವಾ॥

3. ಇದು ಭಾಷ್ಯಾನುಸಾರಿಯಾದ ಅರ್ಥ. ಯಸ್ಯ ಅಪೇಕ್ಷಯಾ ಸಿದ್ಧಿಃ ತತ್ ಪೂರ್ವನಿಷ್ಪನ್ನಂ ಕತರತ್ ? ಯಾವದರ ಅಪೇಕ್ಷೆಯಿಂದ ಇನ್ನೊಂದರ ಸಿದ್ಧಿಯಾಗುವದೋ ಅಂಥ ಪೂರ್ವಸಿದ್ಧವಾದದ್ದು ಯಾವದು ? ಎಂದೂ ಕಾರಿಕೆಯನ್ನು ಅನ್ವಯಿಸಬಹುದು.

ತ್ವಯಾ, ಕತರತ್ ಪೂರ್ವನಿಷ್ಪನ್ನಂ ಹೇತುಫಲಯೋಃ ಯಸ್ಯ ಪಶ್ಚಾದ್ಭಾವಿನಃ ಸಿದ್ಧಿಃ ಸ್ಯಾತ್ ಪೂರ್ವಸಿದ್ಧ್ಯಪೇಕ್ಷಯಾ[1] ತತ್ ಬ್ರೂಹಿ ಇತ್ಯರ್ಥಃ ॥

(ಭಾಷ್ಯಾರ್ಥ)

ಹೇತುಫಲಗಳಿಗೆ ಒಂದರಿಂದೊಂದರ ಸಿದ್ಧಿಯು (ಆಗುವದೆಂದು) ನೀನು ಅಂಗೀಕರಿಸಿಯೇ ತೀರುವೆಯಾದರೆ, ಹೇತುಫಲ(ಗಳೆಂಬ ಎರಡ)ರಲ್ಲಿ ಯಾವದು ಮೊದಲು ಇರುವದು ? ಆಮೇಲೆ ಉಂಟಾಗುವ ಯಾವದರ ಸಿದ್ಧಿಯು ಮೊದಲು (ಉಂಟಾಗುವದರ) ಸಿದ್ಧಿಯನ್ನು ಅಪೇಕ್ಷಿಸಿ ಆಗುವದೋ ಅದನ್ನು ಹೇಳು ಎಂದರ್ಥ.

(ಭಾಷ್ಯ)

೨೪೩. ಅಥ ಏತತ್ ನ ಶಕ್ಯತೇ ವಕ್ತುಮ್ ಇತಿ ಮನ್ಯಸೇ-

(ಭಾಷ್ಯಾರ್ಥ)

ಇನ್ನು ಇದನ್ನು ಹೇಳುವದಕ್ಕೆ ಆಗುವದಿಲ್ಲ ಎಂದು (ನೀನು) ತಿಳಿಯುವೆಯಾದರೆ-

ಅಶಕ್ತಿರಪರಿಜ್ಞಾನಂ ಕ್ರಮಕೋಪೋಽಥ ವಾ ಪುನಃ ।
ಏವಂ ಹಿ ಸರ್ವಥಾ ಬುದ್ಧೈರಜಾತಿಃ ಪರಿದೀಪಿತಾ ॥೧೯॥

೧೯. ಅಶಕ್ತಿಯು ಅಪರಿಜ್ಞಾನವು, ಅಥವಾ ಕ್ರಮಕೋಪ(ವಾಗುವದು). ಹೀಗೆ ಸರ್ವಪ್ರಕಾರದಿಂದಲೂ ಬುದ್ಧರು ಅಜಾತಿಯನ್ನು ಬೆಳಗಿಸಿದಂತಾಗುವದು.

(ಭಾಷ್ಯ)

೨೪೪. ಸೇಯಮ್ ಅಶಕ್ತಿಃ ಅಪರಿಜ್ಞಾನಮ್ । ತತ್ತ್ವಾವಿವೇಕಃ ಮೂಢತಾ ಇತ್ಯರ್ಥಃ । ಅಥವಾ ಯೋಽಯಂ ತ್ವಯಾ ಉಕ್ತಃ ಕ್ರಮಃ ಹೇತೋಃ ಫಲಸ್ಯ ಸಿದ್ಧಿಃ ಫಲಾಚ್ಚ ಹೇತೋಃ ಸಿದ್ಧಿಃ ಇತಿ ಇತರೇತರಾನನ್ತರ್ಯಲಕ್ಷಣಃ ತಸ್ಯ ಕೋಪಃ ವಿಪರ್ಯಾಸಃ ಅನ್ಯಥಾಭಾವಃ ಸ್ಯಾತ್ ಇತ್ಯಭಿಪ್ರಾಯಃ । ಏವಂ ಹೇತುಫಲಯೋಃ ಕಾರ್ಯಕಾರಣ ಭಾವಾನುಪಪತ್ತೇಃ ಅಜಾತಿಃ ಸರ್ವಸ್ಯ ಅನುತ್ಪತ್ತಿಃ ಪರಿದೀಪಿತಾ ಪ್ರಕಾಶಿತಾ ಅನ್ಯೋನ್ಯ ದೋಷಂ ಬ್ರುವದ್ಭಿಃ ವಾದಿಭಿಃ ಬುದ್ಧೈಃ ಪಂಡಿತೈಃ ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಈ ಅಶಕ್ತಿಯು ಅಪರಿಜ್ಞಾನವು ; ತತ್ತ್ವವನ್ನು ತಿಳಿಯಲಾರದ ಮೂಢ

1. "ಪೂರ್ವಸಿದ್ಧಾಪೇಕ್ಷಯಾ" ಪಾ॥

ತನವು[1] ಎಂದರ್ಥ. ಅಥವಾ ಹೇತುವಿನಿಂದ ಫಲವುಂಟಾಗುತ್ತದೆ, ಫಲದಿಂದ ಹೇತು ಉಂಟಾಗುತ್ತದೆ-ಎಂದು ಒಂದಾದಮೇಲೊಂದು ಸಿದ್ಧಿಸುತ್ತದೆ ಎಂದು ನೀನು ಹೇಳಿರುವ ಈ ಕ್ರಮವಿದೆಯಲ್ಲ, ಅದರ ಕೋಪವು ಎಂದರೆ ವಿಪರ್ಯಾಸವು, ಬೇರೆಯಾಗಿ ಬಿಡುವದು (ಎಂಬ ದೋಷ)ವಾಗುವದು[2] ಎಂದು ಅಭಿಪ್ರಾಯ.

ಹೀಗೆ ಹೇತುಫಲಗಳಿಗೆ ಕಾರ್ಯಕಾರಣಭಾವವು ಹೊಂದುವದಿಲ್ಲವಾದ್ದರಿಂದ, ಅಜಾತಿಯನ್ನೇ ಯಾವದೂ ಹುಟ್ಟುವದಿಲ್ಲವೆಂಬುದನ್ನೇ, ಒಬ್ಬರ (ಪಕ್ಷದಲ್ಲಿ) ಮತ್ತೊಬ್ಬರು ದೋಷವನ್ನು ಹೇಳುತ್ತಿರುವ(ಈ) ವಾದಿಗಳಾದ ಬುದ್ಧರು, ಪಂಡಿತರು[3] ಬೆಳಗಿಸಿದಂತೆ ತಿಳಿಸಿಕೊಟ್ಟಂತೆ ಆಗುವದು-ಎಂದರ್ಥ.

(ಭಾಷ್ಯ)

೨೪೫. ನನು ಹೇತುಫಲಯೋಃ ಕಾರ್ಯಕಾರಣಭಾವಃ ಇತಿ ಅಸ್ಮಾಭಿಃ ಉಕ್ತಮ್ । ಶಬ್ದಮಾತ್ರಮ್ ಆಶ್ರಿತ್ಯ ಫಲಮಿದಂ ತ್ವಯಾ ಉಕ್ತಮ್ "ಪುತ್ರಾಜ್ಜನ್ಮ ಪಿತುರ್ಯಥಾ" (೪-೧೫), "ವಿಷಾಣವಚ್ಚ ಅಸಮ್ಬನ್ಧಃ" (೪-೧೬) ಇತ್ಯಾದಿ । ನ ಹಿ ಅಸ್ಮಾಭಿಃ ಅಸಿದ್ಧಾತ್ ಹೇತೋಃ ಫಲಸಿದ್ಧಿಃ, ಅಸಿದ್ಧಾದ್ ವಾ ಫಲಾತ್ ಹೇತುಸಿದ್ಧಿಃ ಅಭ್ಯುಪಗತಾ । ಕಿಂ ತರ್ಹಿ ? ಬೀಜಾಙ್ಕುರವತ್ ಕಾರ್ಯಕಾರಣಭಾವಃ ಅಭ್ಯುಪಗಮ್ಯತೇ ಇತಿ । ಅತ್ರ ಉಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಹೇತುಫಲಗಳಿಗೆ ಕಾರ್ಯಕಾರಣ(ವಿರುತ್ತದೆ) ಎಂದು ನಾವು ಹೇಳಿದೆವು. ಬರಿಯ ಮಾತನ್ನು ಆಶ್ರಯಿಸಿಕೊಂಡು ಮಗನಿಂದ ತಂದೆಯ ಜನ್ಮ(ವಾಗು

1. ವಾದದಲ್ಲಿ ತಪ್ಪಾಗಿ ತಿಳಿದುಕೊಳ್ಳುವದು. ಎದುರಾಳಿಯು ತನ್ನ ಮತದಲ್ಲಿ ಆರೋಪಿಸಿದ ದೋಷವನ್ನು ಪರಿಹರಿಸಿಕೊಳ್ಳದೆ ಅಥವಾ ಆತನ ಪಕ್ಷವನ್ನು ಖಂಡಿಸದೆ ಆಗುವ ಸೋಲಿಗೆ ನಿಗ್ರಹಸ್ಥಾನವೆಂದು ಹೆಸರು. ಇಲ್ಲಿ ಅಪರಿಜ್ಞಾನವೆಂದರೆ ಪ್ರತಿವಾದಿಯು ಹೇಳಿದ್ದನ್ನು ತಿಳಿದುಕೊಳ್ಳದಿರುವದೆಂಬ ಅಜ್ಞಾನವಲ್ಲ ; ಪ್ರತಿವಾದಿಗೆ ಉತ್ತರವನ್ನು ಹೇಳುವದಕ್ಕೆ ತೋಚದೆ ಸುಮ್ಮನಿರುವ ಅಪ್ರತಿಭೆ ಎಂಬ ನಿಗ್ರಹಸ್ಥಾನವಿದು. 2. ಮೊದಲು ಮಾಡಿದ ಪ್ರತಿಜ್ಞೆಯನ್ನು ಬಿಡುವದು ಪ್ರತಿಜ್ಞಾಹಾನಿಯು, ಮೊದಲಿನ ಪ್ರತಿಜ್ಞೆಗೆ ವಿರುದ್ಧವಾಗಿಯೇ ಒಪ್ಪಿಕೊಂಡು ವಾದಿಸುವದಕ್ಕೆ ಹೊರಟರೆ ಅಪಸಿದ್ಧಾನ್ತವು-ಈ ಎರಡರಲ್ಲಿ ಒಂದು ನಿಗ್ರಹಸ್ಥಾನವು ನಿನಗೆ ಬಂದೊದಗುತ್ತದೆ ಎಂದು ಭಾವ.

3. ಇದು ಹಾಸ್ಯಗರ್ಭಿತವಿಶೇಷಣ. ತಾವೇ ಪಂಡಿತರೆಂದು ತಿಳಿದುಕೊಂಡಿರುವ ವಾದಿಗಳು ಧರ್ಮದಿಂದ ಶರೀರವು ಬರುತ್ತದೆಯೆಂತಲೂ ಶರೀರದಿಂದ ಧರ್ಮವುಂಟಾಗುವದೆಂತಲೂ ಹೇಳುತ್ತಾ ಯಾವದೂ ಹುಟ್ಟುವದೇ ಇಲ್ಲ ಎಂಬ ನಮ್ಮ ಅಜಾತಿವಾದವನ್ನೇ ಸಿದ್ಧಪಡಿಸಿಕೊಡುತ್ತಿದಾರೆ ಎಂದು ಭಾವ.

ವದು) ಹೇಗೋ (ಹಾಗೆ)'' (೪-೧೫), ''ಕೋಡುಗಳಂತೆ (ಒಂದಕ್ಕೊಂದಕ್ಕೆ) ಸಂಬಂಧವಿರುವದಿಲ್ಲ'' (೪-೧೬) ಎಂದು ಮುಂತಾಗಿ ಛಲವನ್ನು[1] ಹೇಳಿರುತ್ತೀಯೆ. ಏಕೆಂದರೆ ತಾನೇ ಸಿದ್ಧವಾಗದೆ ಇರುವ ಹೇತುವಿನಿಂದ ಫಲವು ಸಿದ್ಧವಾಗುತ್ತದೆಂದಾಗಲಿ ತಾನೇ ಸಿದ್ಧವಾಗದೆ ಇರುವ ಫಲದಿಂದ ಹೇತುವು ಸಿದ್ಧಿಯಾಗುವದೆಂದಾಗಲಿ ನಾವು ಒಪ್ಪಿರುವದಿಲ್ಲ : ಮತ್ತೇನೆಂದರೆ ಬೀಜಾಂಕುರಗಳಂತೆ[2] (ಒಂದಕ್ಕೊಂದಕ್ಕೆ) ಕಾರ್ಯ ಕಾರಣಭಾವವನ್ನು ಒಪ್ಪಿರುತ್ತೇವೆ.

(ಪರಿಹಾರ) :- ಇದಕ್ಕೆ (ಉತ್ತರವನ್ನು) ಹೇಳುತ್ತೇವೆ :-

ಬೀಜಾಙ್ಕುರಾಖ್ಯೋ ದೃಷ್ಟಾನ್ತಃ ಸದಾ ಸಾಧ್ಯಸಮೋ ಹಿ ಸಃ ।
ನ ಹಿ ಸಾಧ್ಯಸಮೋ ಹೇತುಃ ಸಿದ್ಧೌ ಸಾಧ್ಯಸ್ಯ ಯುಜ್ಯತೇ ॥೨೦॥

೨೦. ಬೀಜಾಂಕುರವೆಂಬ ದೃಷ್ಟಾಂತವು (ಇರುವದಲ್ಲ), ಅದು ಯಾವಾಗಲೂ ಸಾಧ್ಯಸಮವೇ. ಸಾಧ್ಯಕ್ಕೆ ಸಮವಾದ ಹೇತು ಸಾಧ್ಯವನ್ನು ಸಿದ್ಧಿ ಮಾಡುವದಕ್ಕೆ ಉಪಯುಕ್ತವಾಗುವದಿಲ್ಲವಷ್ಟೆ.

(ಭಾಷ್ಯ)

೨೪೬. ಬೀಜಾಙ್ಕುರಾಖ್ಯಿಃ ದೃಷ್ಟಾನ್ತಃ ಯಃ ಸ[3] ಸಾಧ್ಯೇನ ಸಮಃ ತುಲ್ಯಃ ಮಮ ಇತ್ಯಭಿಪ್ರಾಯಃ । ನನು ಪ್ರತ್ಯಕ್ಷಃ ಕಾರ್ಯಕಾರಣಭಾವಃ ಬೀಜಾಙ್ಕುರಯೋಃ ಅನಾದಿಃ । ನ । ಪೂರ್ವಸ್ಯ ಪೂರ್ವಸ್ಯ ಅಪರವತ್[4] ಆದಿಮತ್ತ್ವಾಭ್ಯುಪಗಮಾತ್ । ಯಥಾ ಇದಾನೀಮ್ ಉತ್ಪನ್ನಃ ಅಪರಃ ಅಙ್ಕುರಃ ಬೀಜಾತ್ ಆದಿಮಾನ್ ಬೀಜಂ ಚ ಅಪರಮ್ ಅನ್ಯಸ್ಮಾತ್ ಅಙ್ಕುರಾತ್ ಇತಿ ಕ್ರಮೇಣೋತ್ಪನ್ನತ್ವಾತ್ ಆದಿಮತ್ । ಏವಂ ಪೂರ್ವಃ ಪೂರ್ವಃ ಅಙ್ಕುರಃ ಬೀಜಂ ಚ ಪೂರ್ವಂ ಪೂರ್ವಮ್ ಆದಿಮದೇವ ಇತಿ ಪ್ರತ್ಯೇಕಂ ಸರ್ವಸ್ಯ ಬೀಜಾಙ್ಕುರಜಾತಸ್ಯ ಆದಿಮತ್ತ್ವಾತ್ ಕಸ್ಯಚಿದಪಿ ಅನಾದಿತ್ವಾನುಪಪತ್ತಿಃ । ಏವಂ ಹೇತುಫಲಾನಾಮ್ ॥

(ಭಾಷ್ಯಾರ್ಥ)

...ಜಾಂಕುರವೆಂಬ ದೃಷ್ಟಾಂತವಿದೆಯಲ್ಲ, ಅದು (ಯಾವಾಗಲೂ ಸಾಧ್ಯ

---

1. ಮಾತನ್ನಾಡಿದವನ ಅಭಿಪ್ರಾಯಕ್ಕೆ ವಿರುದ್ಧವಾದ ಮತ್ತೊಂದು ಅಭಿಪ್ರಾಯವನ್ನು ಅವನ ಮಾತಿಗೆ ಕಲ್ಪಿಸುವದು ಛಲವು (ನ್ಯಾ. ಸೂ. ೧-೨-೧೨).

2. ಹಿಂದೆ ೨೫೩ ಪುಟದ ೧ ಟಿಪ್ಪಣಿಯಲ್ಲಿ ಹೇಳಿದ ವಿಕಲ್ಪಗಳಲ್ಲಿ ಇದು ಮೂರನೆಯದು.

3. ಇದರ ಮುಂದೆ 'ಸದಾ ಸಾಧ್ಯಸಮಃ' ಎಂಬ ಮಾತುಗಳು ಬಿಟ್ಟು ಹೋಗಿರಬೇಕೆಂದು ತೋರುತ್ತದೆ. 4. 'ಅಪರಭಾವಾತ್' ಎಂಬ ವಾ॥ ಕಾ॥ ಪಾಠಗಳಿಗಿಂತ ಇದೇ ಮೇಲು.

ಸಮವು[1]), ನನ್ನ (ಮತದಲ್ಲಿ ಅದೂ) ಸಾಧ್ಯಕ್ಕೆ ಸಮವಾಗಿರುತ್ತದೆ, (ಅದನ್ನು) ಹೋಲುವದಾಗಿದೆ ಎಂದು ಅಭಿಪ್ರಾಯ.

(ಆಕ್ಷೇಪ) :- ಬೀಜಾಂಕುರಗಳಿಗೆ ಅನಾದಿಯಾದ ಕಾರ್ಯಕಾರಣಭಾವವಿರುವದು ಪ್ರತ್ಯಕ್ಷವಾಗಿದೆಯಲ್ಲ !

(ಪರಿಹಾರ) :- ಹಾಗಲ್ಲ. ಏಕೆಂದರೆ ಮುಂದಿನದಕ್ಕೆ ಹೇಗೋ ಹಾಗೆ ಹಿಂದು ಹಿಂದಿನದಕ್ಕೆ ಆದಿಯಿರುವದೆಂದು (ನೀವು) ಒಪ್ಪಿರುತ್ತೀರಿ. (ಇದರ ವಿವರ) : ಈಗ ಬೀಜದಿಂದ ಹುಟ್ಟಿದ (ಅದರ) ಮುಂದಿನ ಮೊಳಕೆಯು ಹೇಗೆ ಆದಿಯುಳ್ಳದ್ದೋ, (ಆ) ಮತ್ತೊಂದು ಮೊಳಕೆಯಿಂದ (ಹುಟ್ಟುವ) (ಅದರ) ಮುಂದಿನ ಬೀಜವೂ ಈ ಕ್ರಮದಿಂದ ಹುಟ್ಟುವದರಿಂದ ಆದಿಯುಳ್ಳದ್ದೋ, ಹಾಗೆಯೇ ಹಿಂದುಹಿಂದಿನ ಮೊಳಕೆಯೂ ಹಿಂದುಹಿಂದಿನ ಬೀಜವೂ ಆದಿಯುಳ್ಳದ್ದೇ (ಆಗಿರುತ್ತದೆ)ಯಾದ್ದರಿಂದ ಬೀಜಾಂಕುರಸಮೂಹವೆಲ್ಲವೂ ಒಂದೊಂದಾಗಿ (ನೋಡಿದರೆ) ಆದಿಯುಳ್ಳದ್ದೇ ಆಗಿರುವದರಿಂದ, ಯಾವದೊಂದೂ ಅನಾದಿಯೆಂಬುದು ಹೊಂದುವಹಾಗಿರುವದಿಲ್ಲ. ಇದರಂತೆಯೇ ಹೇತುಫಲಗಳಿಗೂ (ಅನಾದಿತ್ವವು ಹೊಂದುವಹಾಗಿಲ್ಲ).

(ಭಾಷ್ಯ)

೨೪೭. ಅಥ ಬೀಜಾಙ್ಕುರಸನ್ತತೇಃ ಅನಾದಿಮತ್ತ್ವಮ್ ಇತಿ ಚೇತ್ । ನ । ಏಕತ್ವಾನುಪಪತ್ತೇಃ । ನ ಹಿ ಬೀಜಾಙ್ಕುರವ್ಯತಿರೇಕೇಣ ಬೀಜಾಙ್ಕುರಸನ್ತತಿರ್ನಾಮ ಏಕಾ ಅಭ್ಯುಪಗಮ್ಯತೇ, ಹೇತುಫಲಸನ್ತತಿರ್ವಾ ತದನಾದಿತ್ವವಾದಿಭಿಃ । ತಸ್ಮಾತ್ ಸೂಕ್ತಂ ಹೇತೋಃ ಫಲಸ್ಯ ಚ ಅನಾದಿಃ ಕಥಂ ತೈರುಪವರ್ಣ್ಯತೇ ಇತಿ । ತಥಾ ಚ ಅನ್ಯದಪಿ ಅನುಪಪತ್ತೇಃ ನ ಫಲಮ್ ಇತಿ ಅಭಿಪ್ರಾಯಃ ।।

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ಬೀಜಾಂಕುರಗಳ ಪ್ರವಾಹವೇ ಅನಾದಿಯಾಗಿರಬಹುದಲ್ಲ !

(ಪರಿಹಾರ) :- ಹಾಗಲ್ಲ. ಏಕೆಂದರೆ ಅದು ಒಂದೆಂಬುದು ಹೊಂದುವದಿಲ್ಲ.

(ಇದರ ವಿವರ) : ಬೀಜಾಂಕುರಗಳನ್ನು ಬಿಟ್ಟರೆ ಬೀಜಾಂಕುರಪ್ರವಾಹವೆಂಬುದೊಂದು (ಬೇರೆಯಾಗಿ) ಇದೆಯೆಂದಾಗಲಿ, (ಹೇತುಫಲಗಳನ್ನು ಬಿಟ್ಟು) ಹೇತುಫಲ ಪ್ರವಾಹವೆಂಬುದೊಂದು (ಬೇರೆಯಾಗಿದೆ)ಯೆಂದಾಗಲಿ ಇವು ಅನಾದಿ ಎಂಬವರು

1. ಸಾಧ್ಯವು ಹೇಗೆ ಇನ್ನೂ ಸಿದ್ಧವಾಗಿಲ್ಲವೋ ಹಾಗೆ ಅದೂ ಸಿದ್ಧವಾಗಿಲ್ಲ-ಎಂದರ್ಥ.

ಒಪ್ಪಿರುವದೇ ಇಲ್ಲ. ಆದ್ದರಿಂದ "ಅವರು ಹೇತುವಿಗೂ ಫಲಕ್ಕೂ ಅನಾದಿತ್ವವನ್ನು ಹೇಳುವದು ಹೇಗೆ" ? (೪-೧೪) ಎಂದು (ನಾವು) ಹೇಳಿದ್ದು ಸರಿಯೇ. ಇದರಂತೆ ಮಿಕ್ಕದ್ದೂ[1]-(ನಾವು ಹೇಳಿದ್ದು ಸರಿಯೇ, ವಾದಿಗಳು ಹೇಳಿದ ದೃಷ್ಟಾಂತವು) ಹೊಂದುವದಿಲ್ಲವಾದ್ದರಿಂದ (ನಾವು ಹೇಳಿದ್ದು) ಛಲವಲ್ಲ ಎಂದು ಅಭಿಪ್ರಾಯ.

(ಭಾಷ್ಯ)

೨೪೮. ನ ಚ ಲೋಕೇ ಸಾಧ್ಯಸಮಃ ಹೇತುಃ ಸಾಧ್ಯಸ್ಯ[2] ಸಿದ್ಧೌ ಸಿದ್ಧಿನಿಮಿತ್ತಂ ಯುಜ್ಯತೇ[3] ಪ್ರಯುಜ್ಯತೇ ಪ್ರಮಾಣಕುಶಲೈಃ ಇತ್ಯರ್ಥಃ । ಹೇತುಃ ಇತಿ ದೃಷ್ಟಾನ್ತೋಽತ್ರ ಅಭಿಪ್ರೇತಃ । ಗಮಕತ್ವಾತ್ । ಪ್ರಕೃತೋ ಹಿ ದೃಷ್ಟಾನ್ತಃ ನ ಹೇತುಃ ಇತಿ ।।

(ಭಾಷ್ಯಾರ್ಥ)

ಲೋಕದಲ್ಲಿ ಸಾಧ್ಯಕ್ಕೆ ಸಮನಾಗಿರುವ[4] ಹೇತುವು[5] ಸಾಧ್ಯಸಿದ್ಧಿಯಲ್ಲಿ (ಸಾಧ್ಯವನ್ನು) ಸಿದ್ಧಿಮಾಡುವ ನಿಮಿತ್ತದಿಂದ ಉಪಯುಕ್ತವಾಗುವದಿಲ್ಲ, ಪ್ರಮಾಣ(ವನ್ನು ಉಪಯೋಗಿಸುವದರಲ್ಲಿ) ಜಾಣರಾದವರು (ಅದನ್ನು) ಪ್ರಯೋಗಿಸುವದಿಲ್ಲವಲ್ಲವೆ ? ಎಂದು ಅರ್ಥ. ಇಲ್ಲಿ ಹೇತು ಎಂಬ (ಮಾತು) ದೃಷ್ಟಾಂತವನ್ನು ಹೇಳುವ ಅಭಿಪ್ರಾಯದಿಂದ (ಪ್ರಯುಕ್ತವಾಗಿದೆ). ಏಕೆಂದರೆ (ಹೀಗೆಂದು ಸಂದರ್ಭದಿಂದ) ಗೊತ್ತಾಗುತ್ತದೆ. ಹೇಗೆಂದರೆ ಇಲ್ಲಿ ದೃಷ್ಟಾಂತವು ಪ್ರಕೃತವಾಗಿದೆಯೇ ಹೊರತು ಹೇತುವು (ಪ್ರಕೃತವಾಗಿರುವ)ದಿಲ್ಲ[6]. ಆದ್ದರಿಂದ (ಹೇತುವೆಂದರೆ ದೃಷ್ಟಾಂತವೇ).

1. ಮಗನಿಂದ ತಂದೆಗೆ ಜನ್ಮವಾಗುವಂತೆ, ಎತ್ತಿನ ಕೋಡುಗಳಿಗೆ ಸಂಬಂಧವಿಲ್ಲದಿರುವಂತೆ- ಎಂದು ಹೇಳಿದ್ದು.

2. 'ಸಾಧ್ಯಸಿದ್ಧೌ' ಎಂಬ ಆ।। ಪಾಠಕ್ಕಿಂತ ಇದೇ ಮೇಲು.

3. ಆ।। ದಲ್ಲಿ ಬಿಟ್ಟುಹೋಗಿದೆ.

4. ದೃಷ್ಟಾಂತದಲ್ಲಿ ಸಾಧ್ಯವು ಸಿದ್ಧವಾಗಿರಬೇಕು. ಆದರೆ ಸಾಧ್ಯವಾದ ಅನಾದಿತ್ವವು ದೃಷ್ಟಾಂತದಲ್ಲಿಯೂ ಇಲ್ಲವಾದ್ದರಿಂದ ಅದು ಸಾಧ್ಯಸಮವು.

5. ಇಲ್ಲಿ ದೃಷ್ಟಾಂತವೆಂದು ಈ ಮಾತಿಗೆ ಅರ್ಥ. ಇದನ್ನು ಮುಂದೆ ಭಾಷ್ಯಕಾರರು ಸ್ಪಷ್ಟಪಡಿಸುವರು.

6. ಪರ್ವತದಲ್ಲಿ ಬೆಂಕಿಯಿದೆ, ಏಕೆಂದರೆ ಅದರಲ್ಲಿ ಅಡಿಗೆಯ ಮನೆಯಲ್ಲಿರುವಂತೆಯೇ ಹೊಗೆಯಿದೆ-ಎಂಬ ನ್ಯಾಯದಲ್ಲಿ ಹೊಗೆಯೆಂಬುದು ಹೇತು, ಅಡಿಗೆಯ ಮನೆಯು ದೃಷ್ಟಾಂತವು ; ಹೀಗೆಯೇ ಹೇತುಫಲಗಳು ಅನಾದಿ ಎಂಬಲ್ಲಿ ಬೀಜಾಂಕುರದಂತೆ ಎಂಬುದೂ ದೃಷ್ಟಾಂತವು, ಹೇತುವಲ್ಲ.

## ಹೇತುಫಲಗಳ ಅಜಾತಿತ್ವಸಿದ್ಧಿ

(ಭಾಷ್ಯ)

೨೪೯. ಕಥಂ ಬುದ್ಧೈಃ ಅಜಾತಿಃ ಪರಿದೀಪಿತಾ ಇತಿ ? ಆಹ-

(ಭಾಷ್ಯಾರ್ಥ)

ಬುದ್ಧರು ಅಜಾತಿಯನ್ನೇ ಬೆಳಗಿದಂತಾಯಿತು (೪-೧೯) (ಎಂದಿರಲ್ಲ, ಅದು) ಹೇಗೆ ? ಎಂದರೆ ಹೇಳುತ್ತಾರೆ :-

**ಪೂರ್ವಾಪರಾಪರಿಜ್ಞಾನಮಜಾತೇಃ ಪರಿದೀಪಕಮ್ ।**
**ಜಾಯಮಾನಾದ್ಧಿ ವೈ ಧರ್ಮಾತ್ ಕಥಂ ಪೂರ್ವಂ ನ ಗೃಹ್ಯತೇ ॥೨೧॥**

೨೧. ಮೊದಲು, ಆಮೇಲಿನದು-(ಇವನ್ನು) ಅರಿಯದಿರುವದು ಅಜಾತಿಯನ್ನು ಬೆಳಗಿತೋರಿಸುವದು. ಏಕೆಂದರೆ ಹುಟ್ಟುವ ಧರ್ಮಕ್ಕಿಂತ ಮೊದಲು (ಇಂಥದ್ದೆಂದು) ತಿಳಿಯದೆ ಇರುವದು ಹೇಗೆ ?

(ಭಾಷ್ಯ)

೨೫೦. ಯದೇತತ್ ಹೇತುಫಲಯೋಃ ಪೂರ್ವಾಪರಾಪರಿಜ್ಞಾನಂ ತಚ್ಚೈತತ್ ಅಜಾತೇಃ ಪರಿದೀಪಕಮ್ ಅವಬೋಧಕಮ್ ಇತ್ಯರ್ಥಃ । ಜಾಯಮಾನೋ ಹಿ ಚೇತ್[1] ಧರ್ಮಃ ಗೃಹ್ಯತೇ ಕಥಂ ತಸ್ಮಾತ್ ಪೂರ್ವಂ ಕಾರಣಂ ನ ಗೃಹ್ಯತೇ ? ಅವಶ್ಯಂ ಹಿ ಜಾಯಮಾನಸ್ಯ ಗ್ರಹೀತ್ರಾ ತಜ್ಜನಕಂ ಗ್ರಹೀತವ್ಯಮ್ । ಜನ್ಯಜನಕಯೋಃ ಸಮ್ಬನ್ಧಸ್ಯ ಅನಪೇತತ್ವಾತ್ । ತಸ್ಮಾತ್ ಅಜಾತಿಪರಿದೀಪಕಂ ತತ್ ಇತ್ಯರ್ಥಃ ॥

(ಭಾಷ್ಯಾರ್ಥ)

(ಹೀಗೆ) ಹೇತುಫಲಗಳಲ್ಲಿ (ಯಾವದು) ಮೊದಲು, (ಯಾವದು) ಆಮೇಲೆ ಎಂಬುದನ್ನು ಅರಿಯದಿರುವದುಂಟಲ್ಲ, ಆ ಇದೂ ಅಜಾತಿಯನ್ನು ಬೆಳಗಿ ತೋರಿಸತಕ್ಕದ್ದು, ತಿಳಿಯಪಡಿಸತಕ್ಕದ್ದು[2] ಎಂದರ್ಥ. ಏಕೆಂದರೆ ಹುಟ್ಟುವ ವಸ್ತುವು ತಿಳಿಯಬರುವದಾದರೆ, ಅದಕ್ಕಿಂತ ಮೊದಲು (ಇರುವ) ಕಾರಣವು ಏಕೆ ತಿಳಿಯಬರುವದಿಲ್ಲ ?

1. "ಚ" ಆ॥ "ವೈ" ಮೈ॥-ಎಂಬ ಪಾಠಗಳಿಗಿಂತ ಇದೇ ಮೇಲು.

2. ಹುಟ್ಟುವ ಹೇತುಫಲಗಳನ್ನು ಬಲ್ಲವರು ಇಂಥದ್ದರಿಂದ ಅವು ಹುಟ್ಟುವವೆಂಬುದನ್ನು ಬಲ್ಲವರಾಗಿರಬೇಕು ; ಆದರೆ ಅದನ್ನರಿಯೆವೆಂಬುದರಿಂದ ಹುಟ್ಟನ್ನೇ ಅರಿಯವೆಂದು ಅವರು ಒಪ್ಪಿದಂತೆ ಆಯಿತು.

ಹುಟ್ಟುವ (ವಸ್ತುವನ್ನು) ಅರಿಯುವವನು ಅವಶ್ಯವಾಗಿ ಅದನ್ನು ಹುಟ್ಟಿಸುವ (ಕಾರಣವನ್ನು) ಅರಿಯಲೇ ಬೇಕು ; ಏಕೆಂದರೆ ಹುಟ್ಟುವ (ಕಾರ್ಯ), ಹುಟ್ಟಿಸುವ (ಕಾರಣ)-ಇವೆರಡಕ್ಕೂ ಇರುವ ಸಂಬಂಧವು ಎಂದಿಗೂ ಹೋಗಲಾರದು[1]. ಆದ್ದರಿಂದ ಇದು ಅಜಾತಿಯನ್ನು ಬೆಳಗಿತೋರಿಸತಕ್ಕದ್ದು ಎಂದರ್ಥ.

(ಭಾಷ್ಯ)

೨೫೧. ಇತಶ್ಚ ನ ಜಾಯತೇ ಕಿಂಚಿತ್-

(ಭಾಷ್ಯಾರ್ಥ)

ಈ (ಕಾರಣ)ದಿಂದಲೂ ಯಾವ (ವಸ್ತುವೂ) ಹುಟ್ಟುವದಿಲ್ಲ :-

**ಸ್ವತೋ ವಾ ಪರತೋ ವಾಪಿ ನ ಕಿಂಚಿದ್ವಸ್ತು ಜಾಯತೇ ।**
**ಸದಸತ್ಸದಸದ್ವಾಪಿ ನ ಕಿಂಚಿದ್ವಸ್ತು ಜಾಯತೇ ॥೨೨॥**

೨೨. ತನ್ನಿಂದಲೇ ಆಗಲಿ ಮತ್ತೊಂದರಿಂದಲಾಗಲಿ, ಯಾವದೊಂದು ವಸ್ತುವೂ ಹುಟ್ಟುವದಿಲ್ಲ. ಇರುವದಾಗಲಿ, ಇಲ್ಲದ್ದಾಗಲಿ, ಇದ್ದೂ ಇಲ್ಲದ್ದಾಗಲಿ ಯಾವ ವಸ್ತುವೂ ಹುಟ್ಟುವದಿಲ್ಲ.

(ಭಾಷ್ಯ)

೨೫೨. ಯತ್ ಜಾಯಮಾನಂ ವಸ್ತು ಸ್ವತಃ ಪರತಃ ಉಭಯತೋ ವಾ ; ಸತ್, ಅಸತ್, ಸದಸದ್ ವಾ[2] ಜಾಯತೇ । ನ ತಸ್ಯ ಕೇನಾಪಿ ಪ್ರಕಾರೇಣ ಜನ್ಮ ಸಮ್ಭವತಿ । ನ ತಾವತ್ ಸ್ವಯಮೇವ ಅಪರಿನಿಷ್ಪನ್ನಾತ್ ಸ್ವತಃ ಸ್ವರೂಪಾತ್ ಸ್ವಯಮೇವ ಜಾಯತೇ । ಯಥಾ ಘಟಸ್ತಸ್ಮಾದೇವ ಘಟಾತ್ । ನಾಪಿ ಪರತಃ ಅನ್ಯಸ್ಮಾತ್ ಅನ್ಯಃ । ಯಥಾ ಘಟಾತ್ ಪಟಃ ಪಟಾತ್ ಪಟಾನ್ತರಮ್ । ತಥಾ ನೋಭಯತಃ । ವಿರೋಧಾತ್ । ಯಥಾ ಘಟಪಟಾಭ್ಯಾಂ ಘಟಃ ಪಟೋ ವಾ ನ ಜಾಯತೇ । ನನು ಮೃದೋ ಘಟೋ ಜಾಯತೇ ಪಿತುಶ್ಚ ಪುತ್ರಃ । ಸತ್ಯಮ್ । ಅಸ್ತಿ, "ಜಾಯತೇ" ಇತಿ ಪ್ರತ್ಯಯಃ ಶಬ್ದಶ್ಚ ಮೂಢಾನಾಮ್ । ತಾವೇವ ಶಬ್ದಪ್ರತ್ಯಯೌ

1. ಕಾರ್ಯಕಾರಣಗಳಿಗೆ ನಿತ್ಯಸಂಬಂಧವಿದೆ ಎನ್ನುವವರು ಕಾರಣವು ಯಾವದು ಎಂಬುದನ್ನು ಗೊತ್ತುಪಡಿಸಬೇಕು. ಆದರೆ ಹೇತುಫಲಗಳಲ್ಲಿ ಯಾವದು ಮೊದಲೆಂಬುದನ್ನು ಗೊತ್ತುಪಡಿಸಲಾರದೆ ಇರುವದರಿಂದ ಅವು ಹುಟ್ಟುವದಿಲ್ಲವೆಂದೇ ಒಪ್ಪಿಕೊಂಡಂತಾಯಿತೆಂದು ಭಾವ. 2. ಇಲ್ಲಿ ಅಚ್ಚಿನ ಪುಸ್ತಕಗಳಲ್ಲಿರುವ 'ನ' ಎಂಬುದನ್ನು ಬಿಟ್ಟುಬಿಟ್ಟುದೇವೆ.

ವಿವೇಕಿಭಿಃ ಪರೀಕ್ಷ್ಯತೇ ಕಿಂ ಸತ್ಯಮೇವ ತೌ ಉತ ಮೃಷಾ ಇತಿ । ಯಾವತಾ ಪರೀಕ್ಷ್ಯಮಾಣಂ[1] ಶಬ್ದಪ್ರತ್ಯಯವಿಷಯಂ ವಸ್ತು ಘಟಪುತ್ರಾದಿಲಕ್ಷಣಂ ಶಬ್ದ ಮಾತ್ರಮೇವ ತತ್[2] । "ವಾಚಾರಮ್ಭಣಮ್" (ಛಾಂ. ೬-೪-೪೧) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಏಕೆಂದರೆ ಹುಟ್ಟುವ ವಸ್ತು ತಾನೇ, ಮತ್ತೊಂದರಿಂದ, ಅಥವಾ ಎರಡರಿಂದಲೂ (ಹುಟ್ಟುತ್ತದೆ) ; ಇರುವದು, ಇಲ್ಲದ್ದು, ಅಥವಾ ಇದ್ದೂ ಇಲ್ಲದ್ದು ಹುಟ್ಟುತ್ತದೆ (ಎನ್ನಬೇಕು[3]). (ಆದರೆ) ಅದಕ್ಕೆ (ಈ) ಯಾವ ಬಗೆಯಿಂದಲೂ ಹುಟ್ಟುವಿಕೆಯು ಆಗುವಂತಿಲ್ಲ.

(ಹೇಗೆಂದರೆ), ಮೊದಲನೆಯದಾಗಿ ತಾನೇ ಸಿದ್ಧವಾಗದಿರುವ ತನ್ನ ಸ್ವರೂಪದಿಂದ ತಾನೇ ಹುಟ್ಟುವದಿಲ್ಲ ; ಉದಾಹರಣೆಗೆ (ಒಂದು)ಗಡಿಗೆಯು ಅದೇ ಗಡಿಗೆಯಿಂದ (ಹುಟ್ಟುವದಿಲ್ಲ). ಮತ್ತೊಂದರಿಂದ, ಇನ್ನೊಂದು ವಸ್ತುವಿನಿಂದ (ಅದಕ್ಕಿಂತ) ಬೇರೆಯಾದ (ಮತ್ತೊಂದು ವಸ್ತು ಹುಟ್ಟುವ)ದಿಲ್ಲ, ಹೇಗೆಂದರೆ ಗಡಿಗೆಯಿಂದ ಬಟ್ಟೆ, ಬಟ್ಟೆಯಿಂದ ಮತ್ತೊಂದು ಬಟ್ಟೆ (ಹುಟ್ಟಲಾರದು). ಇದರಂತೆ (ತನ್ನಿಂದ, ಮತ್ತೊಂದರಿಂದ-ಹೀಗೆ) ಎರಡರಿಂದಲೂ (ಹುಟ್ಟು)ಲಾರದು ; ಏಕೆಂದರೆ ಇದು ವಿರುದ್ಧವಾಗಿರುತ್ತದೆ. ಉದಾಹರಣೆಗೆ ಗಡಿಗೆ ಬಟ್ಟೆ-(ಈ ಎರಡ)ರಿಂದ ಗಡಿಗೆಯಾಗಲಿ ಬಟ್ಟೆಯಾಗಲಿ ಹುಟ್ಟಲಾರದು.

(ಆಕ್ಷೇಪ) :- ಮಣ್ಣಿನಿಂದ ಗಡಿಗೆಯು ಹುಟ್ಟುವದಲ್ಲ ! ತಂದೆಯಿಂದ ಮಗನೂ (ಹುಟ್ಟುವನಲ್ಲ[4]) ?

(ಪರಿಹಾರ) :- ನಿಜ. ಹುಟ್ಟುತ್ತದೆ ಎಂಬ ಪ್ರತ್ಯಯವೂ ಮಾತೂ ಮೂಢರಲ್ಲಿರುತ್ತದೆ. (ಆದರೆ) ಈ ಶಬ್ದಪ್ರತ್ಯಯಗಳನ್ನೇ "ಇವೇನು ಸತ್ಯವೋ, ಅಥವಾ ಮಿಥ್ಯೆಯೋ ?" ಎಂದು ವಿವೇಕಿಗಳು ಪರೀಕ್ಷಿಸುತ್ತಾರೆ[5]. ಏಕೆಂದರೆ (ಹಾಗೆ) ಪರೀಕ್ಷೆ ಮಾಡಿದರೆ, (ಈ) ಶಬ್ದಪ್ರತ್ಯಯಗಳಿಗೆ ವಿಷಯವಾಗಿರುವ ಗಡಿಗೆ, ಮಗ-ಮುಂತಾದ

1. "ಪರೀಕ್ಷ್ಯಮಾಣೇ" ಎಂಬ ಪಾಠಕ್ಕಿಂತ ಇದೇ ಮೇಲು.

2. ಈ ಮಾತು ಇಲ್ಲದಿದ್ದರೂ ಸಾಗುತ್ತದೆ. 3. ಈ ಆರು ವಿಕಲ್ಪಗಳನ್ನು ಬಿಟ್ಟರೆ ಹುಟ್ಟುವ ವಸ್ತುವಿಗೆ ಮತ್ತೆ ಯಾವ ಪ್ರಕಾರವೂ ಇರಲಾರದು.

4. ಪ್ರತ್ಯಕ್ಷವಾಗಿ ಸಿದ್ಧವಾಗಿರುವದನ್ನು ಯುಕ್ತಿಯಿಂದ ಅಲ್ಲಗಳೆಯಬಹುದೆ ? ಎಂದು ಪ್ರಶ್ನೆ.

5. ಮೂಢರ ಪ್ರತ್ಯಕ್ಷವು ಪ್ರತ್ಯಕ್ಷಾಭಾಸವು ; ಪರೀಕ್ಷಿತಪ್ರತ್ಯಕ್ಷವೇ ಪ್ರಮಾಣವಾಗಿರುವದರಿಂದ ಅದನ್ನು ಪರೀಕ್ಷಿಸುವದಕ್ಕೇ ಇಲ್ಲಿ ವಿಕಲ್ಪವನ್ನು ಮಾಡಿರುತ್ತದೆ ಎಂದು ಸಿದ್ಧಾಂತಿಯ ಆಶಯ.

ರೂಪದ ವಸ್ತು ಬರಿಯ ಮಾತಾಗಿರುತ್ತದೆ. ''(ಕಾರ್ಯವು) ಮಾತಿನಿಂದಾದದ್ದು'' (ಛಾಂ. ೬-೪-೧) ಎಂಬ ಶ್ರುತಿಯಿಂದ[1] (ಇದು ಸಿದ್ಧವಾಗುತ್ತದೆ).

(ಭಾಷ್ಯ)

೨೫೩. ಸಚ್ಚೇತ್ ನ ಜಾಯತೇ । ಸತ್ತ್ವಾತ್ । ಮೃತ್ಪಿತ್ರಾದಿವತ್ । ಯದಿ ಅಸತ್, ತಥಾಪಿ ನ ಜಾಯತೇ । ಅಸತ್ತ್ವಾದೇವ, ಶಶವಿಷಾಣಾದಿವತ್ । ಅಥ ಸದಸತ್, ತಥಾಪಿ ನ ಜಾಯತೇ । ವಿರುದ್ಧಸ್ಯ ಏಕಸ್ಯ ಅಸಮ್ಭವಾತ್ । ಅತಃ ನ ಕಿಂಚಿತ್ ವಸ್ತು ಜಾಯತೇ ಇತಿ ಸಿದ್ಧಮ್ । ಯೇಷಾಂ ಪುನಃ ಜನಿರೇವ ಜಾಯತೇ ಇತಿ ಕ್ರಿಯಾಕಾರಕಫಲೈಕತ್ವಮ್ ಅಭ್ಯುಪಗಮ್ಯತೇ, ಕ್ಷಣಿಕತ್ವಂ ಚ ವಸ್ತುನಃ, ತೇ ದೂರತ ಏವ ನ್ಯಾಯಾಪೇತಾಃ । 'ಇದಮ್ ಇತ್ಥಮ್' ಇತಿ ಅವಧಾರಣಕ್ಷಣಾನ್ತರಾನವಸ್ಥಾನಾತ್, ಅನನುಭೂತಸ್ಯ ಸ್ಮೃತ್ಯನುಪಪತ್ತೇಶ್ಚ ॥

(ಭಾಷ್ಯಾರ್ಥ)

(ಅದು) ಇರುವದಾದರೆ ಹುಟ್ಟುವದಿಲ್ಲ ; ಏಕೆಂದರೆ ಮಣ್ಣು, ತಂದೆ-ಮೊದಲಾದದ್ದರಂತೆ (ಅದು) ಸತ್ತಾಗಿದೆ[2]. ಅದು ಇಲ್ಲ ಎಂದರೆ, ಹಾಗೂ ಹುಟ್ಟುವದಿಲ್ಲ ; ಏಕೆಂದರೆ ಮೊಲದಕೊಂಬು ಮುಂತಾದದ್ದರಂತೆ ಅಸತ್ತಾಗಿರುತ್ತದೆ[3]. ಹಾಗಿಲ್ಲದೆ ಅದು ಇದ್ದೂ ಇಲ್ಲದ್ದು (ಎನ್ನುವದಾದರೆ) ಹಾಗೂ ಹುಟ್ಟುವದಿಲ್ಲ ; ಏಕೆಂದರೆ (ಹೀಗೆ) ವಿರುದ್ಧವಾಗಿರುವ (ಧರ್ಮಗಳುಳ್ಳ) ಒಂದು (ವಸ್ತು ಇರುವದೆಂಬುದೇ) ಆಗುವ ಹಾಗಿಲ್ಲ[4]. ಆದ್ದರಿಂದ[5] ಯಾವ ವಸ್ತುವೂ ಹುಟ್ಟುವದಿಲ್ಲವೆಂದು ಸಿದ್ಧವಾಯಿತು.

1. ಕಾರ್ಯವೆಂಬುದು ಬರಿಯ ಮಾತೇ ಹೊರತು ಕಾರಣಕ್ಕಿಂತ ವ್ಯತಿರಿಕ್ತವಾಗಿ ಅದು ಇರುವದೇ ಇಲ್ಲ ಎಂಬ ಅನುಭವವಿದೆ ; ಹಾಗೆಂದೇ ಶ್ರುತಿಯು ಹೇಳುತ್ತದೆ. ಶ್ರುತಿಯುಕ್ತ್ಯನುಭವಗಳಿಂದ ಪ್ರತ್ಯಕ್ಷಾಭಾಸವನ್ನು ತಳ್ಳಿಹಾಕುವದು ಯುಕ್ತವೇ ಆಗಿದೆ ಎಂದು ಭಾವ.

2. ಸತ್ತಾಗಿರುವ ಹಗ್ಗವೇ ಮುಂತಾದವುಗಳಿಗೆ ಮಾಯೆಯಿಂದ ಜನ್ಮವುಂಟಾಗ ಬಹುದೆಂಬುದನ್ನು ೩-೨೭ ರಲ್ಲಿ ಹೇಳಿರುವದಕ್ಕೆ ಇದು ವಿರುದ್ಧವಲ್ಲ ; ಏಕೆಂದರೆ ಸದ್ವಸ್ತುವಿಗೆ ನಿಜವಾಗಿ ಜನ್ಮವಿಲ್ಲವೆಂದು ಹೇಳುವದೇ ಪ್ರಕರಣದ ಉದ್ದೇಶವು. ಹುಟ್ಟುವದೆಂದರೆ ಸ್ವರೂಪವನ್ನು ಪಡೆಯುವದು ; ಸ್ವರೂಪವು ಮೊದಲೇ ಇದ್ದರೆ, ಇದ್ದದ್ದನ್ನು ಮತ್ತೆ ಪಡೆಯುವದೆಂದರೆ ಅರ್ಥವಿಲ್ಲ ಎಂದು ಭಾವ. 3. ೩-೨೮ನ್ನು ನೋಡಿ. 4. ವಸ್ತುವೇ ಇಲ್ಲದ ಮೇಲೆ ಅದಕ್ಕೆ ಜನ್ಮ ವಿರಬಹುದೆಂಬ ಶಂಕೆಯುಂಟಾಗಲು ಕಾರಣವೇ ಇರುವದಿಲ್ಲ.

5. ಸತ್ತು, ಅಸತ್ತು, ಅಥವಾ ಸದಸತ್ತು ಆಗಿರುವ ವಸ್ತುವಿಗೆ ತನ್ನಿಂದ, ಮತ್ತೊಂದರಿಂದ ಅಥವಾ ಈ ಎರಡೂ ಸೇರಿದ ವಸ್ತುವಿನಿಂದ ಜನ್ಮವಿಲ್ಲ ಎಂದು ತೋರಿಸಿಕೊಟ್ಟಿರುವದರಿಂದ.

ಇನ್ನು ಯಾರ (ಮತದಲ್ಲಿ) ಹುಟ್ಟುವದೆಂಬ ಕ್ರಿಯೆಯೇ ಹುಟ್ಟುವದೆಂದು ಕ್ರಿಯೆ, ಕಾರಕ, ಫಲ-ಇವುಗಳ ಐಕ್ಯವನ್ನು ಒಪ್ಪಿರುತ್ತದೆಯೋ, ಆ (ಬೌದ್ಧರಂತೂ ನ್ಯಾಯವನ್ನು ಬಿಟ್ಟು ದೂರವಾಗಿಯೇ ಹೋಗಿರುತ್ತಾರೆ. ಏಕೆಂದರೆ 'ಇದು ಹೀಗೆ (ಇದೆ)' ಎಂದು ನಿಶ್ಚಯಿಸುವ ಕ್ಷಣವನ್ನು ಬಿಟ್ಟು (ಮತ್ತೊಂದು) ಕ್ಷಣವೂ ನಿಲ್ಲುವದಿಲ್ಲ[1]. ಅನುಭವಿಸದೆ ಇರುವ ವಸ್ತುವನ್ನು ನೆನಪಿಗೆ ತಂದುಕೊಳ್ಳುವದಕ್ಕೂ ಆಗುವದಿಲ್ಲ[2].

(ಭಾಷ್ಯ)

೨೫೪. ಕಿಂಚ ಹೇತುಫಲಯೋಃ ಅನಾದಿತ್ವಮ್ ಅಭ್ಯುಪಗಚ್ಛತಾ ತ್ವಯಾ ಬಲಾತ್ ಹೇತುಫಲಯೋಃ ಅಜನ್ಮೈವ ಅಭ್ಯುಪಗತಂ ಸ್ಯಾತ್ । ತತ್[3] ಕಥಮ್ ?

(ಭಾಷ್ಯಾರ್ಥ)

ಇದಲ್ಲದೆ ಹೇತುಫಲಗಳು ಅನಾದಿ ಎಂದು ಒಪ್ಪಿರುವ ನೀನು ಹೇತುಫಲಗಳಿಗೆ ಹುಟ್ಟುವಿಕೆಯಿಲ್ಲವೆಂದೇ ಬಲಾತ್ಕಾರದಿಂದ ಒಪ್ಪಿದಂತೆ ಆಗುವದು. ಅದು ಹೇಗೆ ? ಎಂದರೆ-

ಹೇತುರ್ನ ಜಾಯತೇಽನಾದೇಃ ಫಲಂ ಚಾಪಿ ಸ್ವಭಾವತಃ ।
ಆದಿರ್ನ ವಿದ್ಯತೇ ಯಸ್ಯ ತಸ್ಯ ಹ್ಯಾದಿರ್ನ ವಿದ್ಯತೇ ॥೨೩॥

೨೩. ಅನಾದಿಯಾದ (ಫಲ)ದಿಂದ ಹೇತು ಹುಟ್ಟುವದಿಲ್ಲ, ಫಲವು ಕೂಡ ಸ್ವಭಾವದಿಂದ (ಹೀಗೆಯೇ ಹುಟ್ಟಲಾರದು). ಏಕೆಂದರೆ ಯಾವದಕ್ಕೆ ಆದಿಯಿರುವದಿಲ್ಲವೋ ಅದಕ್ಕೆ ಆದಿಯಿರುವದೇ ಇಲ್ಲ.

(ಭಾಷ್ಯ)

೨೫೫. ಅನಾದೇಃ ಆದಿರಹಿತಾತ್ ಫಲಾತ್ ಹೇತುಃ ನ ಜಾಯತೇ । ನ ಹಿ ಅನುತ್ಪನ್ನಾತ್ ಅನಾದೇಃ ಫಲಾತ್ ಹೇತೋಃ ಜನ್ಮ ಇಷ್ಯತೇ ತ್ವಯಾ ಫಲಂ

---

1. ಕ್ರಿಯೆ, ಕಾರಕ, ಫಲ-ಮೂರೂ ಒಂದೇ ಕ್ಷಣದಲ್ಲಿರಲಾರವೆಂಬುದು ಅನುಭವಸಿದ್ಧ. ಬೇರೆ ಬೇರೆಯ ಕ್ಷಣದಲ್ಲಿ ಒಂದೇ ವಸ್ತು ಇರುವದಿಲ್ಲ ಎಂಬುದು ಬೌದ್ಧರ ಅಂಗೀಕಾರವಾಗಿರುವ ದರಿಂದ ಈ ಕ್ರಿಯೆಗೆ ಈ ಫಲ ಎಂದು ಗೊತ್ತುಪಡಿಸುವದಕ್ಕೆ ಆಗುವಂತಿಲ್ಲ-ಎಂದು ಭಾವ.

2. ಎರಡು ಕ್ಷಣಕ್ಕೆ ಸಂಬಂಧಪಟ್ಟ ಒಂದೇ ವಸ್ತುವನ್ನು ಕ್ಷಣಿಕವಾದಿಗಳು ಒಪ್ಪುವದಿಲ್ಲವಾದ್ದರಿಂದ ಸ್ಮೃತಿಯು ಹೇಗೆ ಆಗುವದೆಂಬುದನ್ನು ಆ ವಾದಿಗಳು ತಿಳಿಸಿ ಹೇಳಲಾರರು-ಎಂದು ಭಾವ.

3. ವಾ॥ ದಲ್ಲಿಲ್ಲ.

ಚಾಪಿ[1] ಆದಿರಹಿತಾತ್ ಅನಾದೇಃ ಹೇತೋಃ ಅಜಾತ್ ಸ್ವಭಾವತ ಏವ ನಿರ್ನಿಮಿತ್ತಂ ಜಾಯತೇ ಇತಿ ನ ಅಭ್ಯುಪಗಮ್ಯತೇ । ತಸ್ಮಾತ್ ಅನಾದಿತ್ವಮ್ ಅಭ್ಯುಪಗಚ್ಛತಾ ತ್ವಯಾ ಹೇತುಫಲಯೋಃ ಅಜನ್ಮೈವ ಅಭ್ಯುಪಗಮ್ಯತೇ । ಯಸ್ಮಾತ್ ಆದಿಃ ಕಾರಣಂ ನ ವಿದ್ಯತೇ ಯಸ್ಯ ಲೋಕೇ ತಸ್ಯ ಹಿ ಆದಿಃ ಪೂರ್ವೋಕ್ತಾ ಜಾತಿಃ ನ ವಿದ್ಯತೇ । ಕಾರಣವತ ಏವ ಹಿ ಆದಿಃ ಅಭ್ಯುಪಗಮ್ಯತೇ ನ ಅಕಾರಣವತಃ ।।

(ಭಾಷ್ಯಾರ್ಥ)

ಅನಾದಿಯಾದ, ಆದಿಯಿಲ್ಲದ ಫಲದಿಂದ ಹೇತುವು ಹುಟ್ಟಲಾರದು. ಏಕೆಂದರೆ (ತಾನು) ಹುಟ್ಟದೆ ಅನಾದಿಯಾಗಿರುವ ಫಲದಿಂದ ಹೇತುವಿಗೆ ಜನ್ಮ(ವಾಗುವ ದೆಂದು) ನೀನು ಒಪ್ಪುವದಿಲ್ಲ. (ಇದರಂತೆ) ಫಲವುಕೂಡ ಆದಿಯಿಲ್ಲದೆ ಅನಾದಿಯಾಗಿರುವ ಅಜವಾಗಿರುವ ಹೇತುವಿನಿಂದ ಸ್ವಭಾವದಿಂದಲೇ ಯಾವ ನಿಮಿತ್ತವೂ ಇಲ್ಲದೆ ಹುಟ್ಟುತ್ತದೆಯೆಂದೂ (ನೀನು) ಒಪ್ಪುವದಿಲ್ಲ. ಆದ್ದರಿಂದ (ಇವು ಹೀಗೆ) ಅನಾದಿಯೆಂದು ಒಪ್ಪಿರುವ ನೀನು ಹೇತುಫಲಗಳಿಗೆ ಹುಟ್ಟು ಇಲ್ಲವೆಂದೇ ಒಪ್ಪಿದಂತಾಯಿತು[2]. ಏಕೆಂದರೆ ಲೋಕದಲ್ಲಿ ಯಾವದಕ್ಕೆ ಆದಿಯಿಲ್ಲವೋ ಕಾರಣವಿರುವದಿಲ್ಲವೋ, ಅದಕ್ಕೆ ಆದಿಯಿರುವದಿಲ್ಲ, ಹಿಂದೆ ಹೇಳಿದ ಜಾತಿಯು ಇರುವದಿಲ್ಲ. ಕಾರಣವುಳ್ಳದ್ದಕ್ಕೇ, ಹುಟ್ಟುವಿಕೆಯನ್ನು ಒಪ್ಪುತ್ತಾರೆಯೇ ಹೊರತು ಕಾರಣವಿಲ್ಲದ್ದಕ್ಕೆ (ಯಾರೂ ಹುಟ್ಟನ್ನು ಒಪ್ಪುವದಿಲ್ಲ.)

## ಚಿತ್ತಕ್ಕಿಂತ ಬೇರೆಯಾದ ವಿಷಯವಿಲ್ಲ

(ಭಾಷ್ಯ)

೨೫೬. ಉಕ್ತಸ್ಯೈವ ಅರ್ಥಸ್ಯ ದೃಢೀಕರಣಚಿಕೀರ್ಷಯಾ ಪುನರಾಕ್ಷಿಪತಿ-

1. ಈ. ವಾ।। ಪಾಠವೇ ಮೂಲಾನುಸಾರಿ.

2. ಹೇತುವೂ ಫಲವೂ ಅನಾದಿಯಾಗಿರುವವು ಎಂದು ಹೇಳುವವನು ಅವು ಹುಟ್ಟುವದಿಲ್ಲ ವೆಂದು ಹೇಳಿದಂತಾಗುವದು. ಏಕೆಂದರೆ ಶರೀರವೆಂಬ ಫಲವು ಅನಾದಿಯಾಗಿ ಇದ್ದುಕೊಂಡಿದ್ದರೆ ಅದರಿಂದ ಯಾವ ವಿಶೇಷನಿಮಿತ್ತವೂ ಇಲ್ಲದೆ ಧರ್ಮಾಧರ್ಮಗಳು ಹುಟ್ಟುವದಕ್ಕೆ ಕಾರಣವಿಲ್ಲ. ಇದರಂತೆ ಅನಾದಿಯಾದ ಹೇತುವಿನಿಂದ ಶರೀರವು ಹುಟ್ಟುವದಕ್ಕೂ ನಿಮಿತ್ತವಿಲ್ಲ- ಎಂದು ಭಾವ. ಇದು ಭಾಷ್ಯಾನುಸಾರವಾಗಿ ಕಾರಿಕೆಗೆ ಅರ್ಥ. "ಹೇತುಃ ನ ಜಾಯತೇ । ಅನಾದೇಃ = ಅನಾದಿತ್ವಾತ್" ಎಂದು ಅನ್ವಯಿಸಿದರೆ ಹೇತುವು ಅನಾದಿಯಾಗಿರುವದರಿಂದ ಹುಟ್ಟುವದಿಲ್ಲ ಎಂದೂ ಮೂಲಕ್ಕೆ ಅರ್ಥವನ್ನು ಮಾಡಬಹುದಾಗುವದು.

(ಭಾಷ್ಯಾರ್ಥ)

ಹಿಂದೆ ಹೇಳಿದ ವಿಷಯವನ್ನೇ[1] ದೃಢಪಡಿಸಬೇಕೆಂಬ ಇಚ್ಛೆಯಿಂದ ಮತ್ತೆ ಆಕ್ಷೇಪವನ್ನು ಮಾಡುತ್ತಾರೆ[2] :-

ಪ್ರಜ್ಞಪ್ತೇಃ ಸನಿಮಿತ್ತತ್ವಮನ್ಯಥಾ ದ್ವಯನಾಶತಃ ।
ಸಙ್ಕ್ಲೇಶಸ್ಯೋಪಲಬ್ಧೇಶ್ಚ ಪರತನ್ತ್ರಾಸ್ತಿತಾ ಮತಾ ॥೨೪॥

೨೪. ಪ್ರಜ್ಞಪ್ತಿಗೆ ಸನಿಮಿತ್ತತ್ವವಿದೆ ; ಏಕೆಂದರೆ ಹಾಗಿಲ್ಲದಿದ್ದರೆ ದ್ವಯ ನಾಶವಾಗುವದು. ಸಂಕ್ಲೇಶವು ಕಂಡುಬರುವದರಿಂದಲೂ ಪರತಂತ್ರವು ಇರ ಬೇಕೆಂದು (ನಮ್ಮ) ಮತವಾಗಿದೆ.

(ಭಾಷ್ಯ)

೨೫೭. ಪ್ರಜ್ಞಾನಂ ಪ್ರಜ್ಞಪ್ತಿಃ, ಶಬ್ದಾದಿಪ್ರತೀತಿಃ । ತಸ್ಯಾಃ ಸನಿಮಿತ್ತತ್ವಮ್ । ನಿಮಿತ್ತಂ ಕಾರಣಮ್ । ವಿಷಯಃ ಇತ್ಯೇತತ್ । ಸನಿಮಿತ್ತತ್ವಂ ಸವಿಷಯತ್ವಂ ಸ್ವಾತ್ಮ ವ್ಯತಿರಿಕ್ತವಿಷಯತಾ ಇತ್ಯೇತತ್ ಪ್ರತಿಜಾನೀಮಹೇ । ನ ಹಿ ನಿರ್ವಿಷಯಾ ಪ್ರಜ್ಞಪ್ತಿಃ ಶಬ್ದಾದಿಪ್ರತೀತಿಃ ಸ್ಯಾತ್ । ತಸ್ಯಾಃ ಸನಿಮಿತ್ತತ್ವಾತ್ । ಅನ್ಯಥಾ ನಿರ್ವಿಷಯತ್ವೇ ಶಬ್ದ ಸ್ಪರ್ಶನೀಲಪೀತಲೋಹಿತಾದಿಪ್ರತ್ಯಯವೈಚಿತ್ರ್ಯಸ್ಯ ದ್ವಯಸ್ಯ ನಾಶತಃ । ನಾಶಃ ಅಭಾವಃ ಪ್ರಸಜ್ಯೇತ ಇತ್ಯರ್ಥಃ । ನ ಚ ಪ್ರತ್ಯಯವೈಚಿತ್ರ್ಯಸ್ಯ ದ್ವಯಸ್ಯ ಅಭಾವಃ ಅಸ್ತಿ । ಪ್ರತ್ಯಕ್ಷತ್ವಾತ್ । ಅತಃ ಪ್ರತ್ಯಯವೈಚಿತ್ರ್ಯಸ್ಯ ದ್ವಯಸ್ಯ ದರ್ಶನಾತ್ ಪರೇಷಾಂ ತನ್ತ್ರಂ ಪರತನ್ತ್ರಮ್ ಇತಿ[3] ಅನ್ಯಶಾಸ್ತ್ರಮ್ । ತಸ್ಯ ಪರತನ್ತ್ರಸ್ಯ ಪರತನ್ತ್ರಾಶ್ರಯಸ್ಯ ಬಾಹ್ಯಾರ್ಥಸ್ಯ ಜ್ಞಾನವ್ಯತಿರಿಕ್ತಸ್ಯ ಅಸ್ತಿತಾ ಮತಾ ಅಭಿಪ್ರೇತಾ । ನ ಹಿ ಪ್ರಜ್ಞಪ್ತೇಃ ಪ್ರಕಾಶಮಾತ್ರಸ್ವರೂಪಾಯಾಃ ನೀಲಪೀತಾದಿಬಾಹ್ಯಾಲಮ್ಬನವೈಚಿತ್ರ್ಯಮ್ ಅನ್ತರೇಣ ಸ್ವಭಾವಭೇದೇನೈವ[4] ವೈಚಿತ್ರ್ಯಂ ಸಮ್ಭವತಿ । ಸ್ಫಟಿಕಸ್ಯೇವ ನೀಲಾದ್ಯುಪಾಧ್ಯಾಶ್ರಯೈರ್ವಿನಾ ವೈಚಿತ್ರ್ಯಂ ನ ಘಟತೇ ಇತ್ಯಭಿಪ್ರಾಯಃ ॥

1. ಕಾರ್ಯಕಾರಣಭಾವವು ಹೇಗೂ ಹೊಂದುವದಿಲ್ಲವಾಗಿ ಅಜಾದ್ವಯಾತ್ಮತತ್ತ್ವವೊಂದೇ ಪರಮಾರ್ಥವೆಂಬುದನ್ನು.

2. ಬಾಹ್ಯಾರ್ಥವು ಇದೆ ಎಂಬ ವಾದಿಗಳ ಮೂಲಕವಾಗಿ ಆಕ್ಷೇಪವನ್ನು ಒಡ್ಡಿ ಪರಿಹಾರ ಮಾಡುತ್ತಾರೆ ಎಂದು ಭಾವ.

3. ಈ ಮಾತು ಇಲ್ಲದಿದ್ದರೂ ಸಾಗುತ್ತದೆ.

4. ''ಸ್ವಭಾವಭೇದೇನೈತತ್'' ವಾ॥ ಕಾ॥

(ಭಾಷ್ಯಾರ್ಥ)

ಪ್ರಜ್ಞಪ್ತಿ ಎಂದರೆ ಪ್ರಜ್ಞಾನವು, ಶಬ್ದವೇ ಮುಂತಾದವುಗಳನ್ನು ಅರಿಯುವದು. ಆ (ಪ್ರಜ್ಞಪ್ತಿಗೆ) ಸನಿಮಿತ್ತತ್ವವಿದೆ. ನಿಮಿತ್ತವೆಂದರೆ ಕಾರಣವು ; ವಿಷಯವು ಎಂದರ್ಥ. ಸನಿಮಿತ್ತತ್ವವು ಎಂದರೆ ವಿಷಯದೊಡನಿರುವದು: ತನ್ನ ಸ್ವರೂಪಕ್ಕಿಂತ ಬೇರೆಯಾದ(ವಸ್ತುವನ್ನು ಅದು) ವಿಷಯವಾಗಿ (ಮಾಡಿ)ಕೊಂಡಿರುತ್ತದೆ[1] ಎಂಬಿದು ನಮ್ಮ ಪ್ರತಿಜ್ಞೆಯು. ವಿಷಯವೇ ಇಲ್ಲದೆ ಪ್ರಜ್ಞಪ್ತಿಯು, ಎಂದರೆ ಶಬ್ದವೇ ಮುಂತಾದವುಗಳ ಅರಿವು ಉಂಟಾಗಲಾರದು. ಏಕೆಂದರೆ ಆ (ಅರಿವಿಗೆ) ನಿಮಿತ್ತವಿರಬೇಕಾಗಿದೆ. ಹಾಗಿಲ್ಲದೆ ವಿಷಯವಿಲ್ಲದೆ (ಅರಿವು ಇರುವ)ದಾದರೆ ಶಬ್ದ, ಸ್ಪರ್ಶ, ಕಪ್ಪು, ಹಳದಿ, ಕೆಂಪು-ಮುಂತಾದ ಬಗೆಬಗೆಯ ಅರಿವುಗಳ (ರೂಪದ) ದ್ವಯವು ನಾಶವಾಗುವದು ; ನಾಶವೆಂದರೆ (ಅದರ) ಅಭಾವವು (ಉಂಟಾಗ)ಬೇಕಾದೀತು ಎಂದರ್ಥ. ಪ್ರತ್ಯಯಗಳು ಬಗೆಬಗೆಯಾಗಿರುವದೆಂಬ ದ್ವಯದ ಅಭಾವವೇ (ಆಗಲಿ ಎನ್ನುವದ)ಕ್ಕಿಲ್ಲ ; ಏಕೆಂದರೆ (ಆ ವೈಚಿತ್ರ್ಯವಿರುವದು) ಪ್ರತ್ಯಕ್ಷವಾಗಿರುತ್ತದೆ. ಆದ್ದರಿಂದ ಪ್ರತ್ಯಯಗಳು ಬಗೆಬಗೆಯಾಗಿರುವದೆಂಬ ದ್ವಯವು ಕಂಡುಬರುತ್ತಿರುವದರಿಂದ[2] ಪರತಂತ್ರವು-ಮಿಕ್ಕವರ ತಂತ್ರವು ಪರತಂತ್ರವು[3], ಎಂದರೆ (ವಿಜ್ಞಾನವಾದಿಗಳಲ್ಲದ) ಬೇರೆಯವರ[4] ಶಾಸ್ತ್ರವು, ಆ (ಪರತಂತ್ರವು ಎಂದರೆ) ಪರತಂತ್ರವನ್ನು ಅವಲಂಬಿಸಿರುವ ಹೊರಗಿನ ವಿಷಯವು ಜ್ಞಾನಕ್ಕಿಂತ ಬೇರೆಯಾಗಿ ಇರಬೇಕು ಎಂದು ಮತವು (ನಮ್ಮ) ಅಭಿಪ್ರಾಯವು. ಬರಿಯ ಪ್ರಕಾಶದ ಸ್ವರೂಪವಾಗಿರುವ ಪ್ರಜ್ಞಪ್ತಿಯು ಕಪ್ಪು, ಹಳದಿ-ಮುಂತಾದ ಹೊರಗಿನ ವಿಷಯವು ಬಗೆಬಗೆಯಾಗಿದ್ದ ಹೊರತು (ತನ್ನ) ಸ್ವಭಾವಭೇದದಿಂದಲೇ (ಹೀಗೆ) ಬಗೆಬಗೆಯಾಗಿರುವದೆಂಬುದು ಆಗುವ ಹಾಗಿಲ್ಲವಷ್ಟೆ. ಸ್ಫಟಿಕಕ್ಕೆ ಕಪ್ಪಾಗಿರುವ

1. ಹೊರಗಿನ ಬೇರೆಬೇರೆಯ ವಸ್ತುಗಳನ್ನು ವಿಷಯೀಕರಿಸುವದರಿಂದ ಬಗೆಬಗೆಯ ಅರಿವುಗಳುಂಟಾಗಬೇಕು ಎಂಬ ವಾದಿಗಳ ಮತವಿದು. ಇದಕ್ಕೆ ವಿಜ್ಞಾನಮಾತ್ರವಾದಿಯು ಮುಂದೆ ಉತ್ತರವನ್ನು ಹೇಳುವನು.

2. ಇದು ಹೇತು. ವಿಷಯಗಳಿರಬೇಕು ಎಂಬುದನ್ನು ಪೂರ್ವಪಕ್ಷಿಯು ಅನುಮಾನದಿಂದಲೇ ಸಾಧಿಸುವದಕ್ಕೆ ಹೊರಟಿರುತ್ತಾನೆ.

3. ಬೌದ್ಧದರ್ಶನದಲ್ಲಿ ಈ ಮಾತಿಗೆ ಬೇರೊಂದು ಅರ್ಥವಿದೆ. ಪರಿಶಿಷ್ಟವನ್ನು ನೋಡಿ.

4. ಬೌದ್ಧರಲ್ಲಿಯೂ ಹೊರಗಿನ ವಸ್ತುಗಳನ್ನು ಒಪ್ಪಿರುವವರು ಇರುತ್ತಾರೆ. ಬೌದ್ಧರಾಗಲಿ ಅಬೌದ್ಧರಾಗಲಿ ಹೊರಗಿನ ವಿಷಯಗಳನ್ನು ಒಪ್ಪಿರುವವರನ್ನೆಲ್ಲ ಇಲ್ಲಿ ಪರರು ಎನ್ನಬಹುದು.

(ವಸ್ತು) ಮುಂತಾದ ಉಪಾಧಿಗಳ ಆಶ್ರಯವಿಲ್ಲದೆ ಹೇಗೆ (ಬಣ್ಣಗಳ) ವೈಚಿತ್ರ್ಯವು ಹೊಂದಲಾರದೋ[1] (ಹಾಗೆಯೇ ಇದು) ಎಂದು ಅಭಿಪ್ರಾಯ.

(ಭಾಷ್ಯ)

೨೫೮. ಇತಶ್ಚ ಪರತನ್ತ್ರಾಶ್ರಯಸ್ಯ ಬಾಹ್ಯಾರ್ಥಸ್ಯ ಜ್ಞಾನವ್ಯತಿರಿಕ್ತಸ್ಯ ಅಸ್ತಿತಾ । ಸಙ್ಕ್ಲೇಶನಂ ಸಙ್ಕ್ಲೇಶಃ ದುಃಖಿಮ್ ಇತ್ಯರ್ಥಃ । (ತಸ್ಯ ಸಙ್ಕ್ಲೇಶಸ್ಯ ಉಪ ಲಬ್ಧೇಃ[2]) । ಉಪಲಭ್ಯತೇ ಹಿ ಅಗ್ನಿದಾಹಾದಿನಿಮಿತ್ತಂ ದುಃಖಿಮ್ । ಯದಿ ಅಗ್ನ್ಯಾದಿ ಬಾಹ್ಯಂ ದಾಹಾದಿನಿಮಿತ್ತಂ ವಿಜ್ಞಾನವ್ಯತಿರಿಕ್ತಂ ನ ಸ್ಯಾತ್ ತತಃ ದಾಹಾದಿದುಃಖಂ ನ ಉಪಲಭ್ಯೇತ । ಉಪಲಭ್ಯತೇ ತು । ಅತಃ ತೇನ ಮನ್ಯಾಮಹೇ ಅಸ್ತಿ ಬಾಹ್ಯಃ ಅರ್ಥಃ ಇತಿ । ನ ಹಿ ವಿಜ್ಞಾನಮಾತ್ರೇ ಸಙ್ಕ್ಲೇಶಃ ಯುಕ್ತಃ ಅನ್ಯತ್ರ ಅದರ್ಶನಾತ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಪರತಂತ್ರವನ್ನು ಆಶ್ರಯಿಸಿರುವ, ಜ್ಞಾನಕ್ಕಿಂತ ಬೇರೆಯಾದ ಹೊರಗಿನ ವಿಷಯವು ಇರುವದೆಂಬುದು, ಈ (ಕಾರಣದಿಂದಲೂ ಸಿದ್ಧವಾಗುತ್ತದೆ) : ಸಂಕ್ಲೇಶವು ಎಂದರೆ ಕ್ಲೇಶಪಡಿಸುವದು ; ದುಃಖಿವು ಎಂದರ್ಥ. (ಆ ಸಂಕ್ಲೇಶವು ಕಂಡು ಬರುವದರಿಂದ), ಬೆಂಕಿಯು ಸುಡುವದೇ ಮುಂತಾದ ನಿಮಿತ್ತದಿಂದ (ಆಗುವ) ದುಃಖಿವು ಕಂಡುಬರುತ್ತದೆಯಲ್ಲವೆ ? ಸುಡುವದೇ ಮುಂತಾದದ್ದಕ್ಕೆ, ವಿಜ್ಞಾನ ಕ್ಕಿಂತ ಬೇರೆಯಾಗಿ, ಬೆಂಕಿಯೇ ಮುಂತಾದ ಹೊರಗಿನ ನಿಮಿತ್ತವು ಇಲ್ಲದಿದ್ದರೆ ಆಗ ಸುಡುವದೇ ಮುಂತಾದ ದುಃಖಿವು ಕಂಡುಬರುತ್ತಿರಲಿಲ್ಲ ; ಆದರೆ (ಈಗ ಆ ದುಃಖಿವು) ಕಂಡುಬರುತ್ತದೆ. ಆದ್ದರಿಂದ ಈ (ಕಾರಣ)ದಿಂದ ಹೊರಗಿನ ವಸ್ತು ಇದೆಯೆಂದು ನಾವು ಅಭಿಪ್ರಾಯಪಡುತ್ತೇವೆ. ಬರಿಯ ವಿಜ್ಞಾನವೇ

1. ಇದು ದೃಷ್ಟಾಂತವು. ಸ್ವಚ್ಛವಾದ ವಿಜ್ಞಾನದಲ್ಲಿ ವೈಚಿತ್ರ್ಯವಿರುವದರಿಂದ ಅದಕ್ಕೆ ನಿಮಿತ್ತವಾಗಿರುವ ವಿಷಯಗಳಿರಬೇಕು ; ಏಕೆಂದರೆ ಸ್ವಚ್ಛವಾಗಿರುವ ಸ್ಫಟಿಕಾದಿಗಳಲ್ಲಿ ಆಗುವ ವೈಚಿತ್ರ್ಯಗಳು ಹೊರಗಿನ ನಿಮಿತ್ತಗಳಿಂದಲೇ ಆಗುತ್ತವೆ ಎಂದರ್ಥ. ಬೌದ್ಧರಲ್ಲಿ ಸೌತ್ರಾಂತಿಕರು ವಿಷಯಗಳನ್ನು ಅನುಮಾನದಿಂದಲೇ ಸಾಧಿಸುತ್ತಿದ್ದರು.

2. ಈ ವಾಕ್ಯವು ಭಾಷ್ಯದಲ್ಲಿದ್ದು ಬರೆದವರ ಕೈತಪ್ಪಿನಿಂದ ಬಿಟ್ಟುಹೋಗಿದೆ ಎಂದು ತೋರುವದು.

(ಆದರೆ) ಸಂಕ್ಲೇಶವು (ತೋರುವದು) ಯುಕ್ತವಾಗುವದಿಲ್ಲ ; ಏಕೆಂದರೆ ಮಿಕ್ಕ ಕಡೆಯಲ್ಲಿ[1] (ಅದು) ಕಂಡುಬರುವದಿಲ್ಲ-ಎಂದು ಅಭಿಪ್ರಾಯ.

(ಭಾಷ್ಯ)

೨೫೯. ಅತ್ರ ಉಚ್ಯತೇ-

(ಭಾಷ್ಯಾರ್ಥ)

ಇದಕ್ಕೆ (ಉತ್ತರವನ್ನು) ಹೇಳುತ್ತೇವೆ :-

ಪ್ರಜ್ಞಪ್ತೇಃ ಸನಿಮಿತ್ತತ್ವಮಿಷ್ಯತೇ ಯುಕ್ತಿದರ್ಶನಾತ್ ।
ನಿಮಿತ್ತಸ್ಯಾನಿಮಿತ್ತತ್ವಮಿಷ್ಯತೇ ಭೂತದರ್ಶನಾತ್ ॥೨೫॥

೨೫. ಪ್ರಜ್ಞಪ್ತಿಯು ಸನಿಮಿತ್ತವಾಗಿರಬೇಕೆಂದು ಯುಕ್ತಿಯನ್ನು ಕಂಡದ್ದರಿಂದ ಒಪ್ಪಿರುತ್ತೀಯೆ. ನಿಮಿತ್ತವು ನಿಮಿತ್ತವಲ್ಲವೆಂದು ಭೂತದರ್ಶನದಿಂದ (ನಾವು) ಒಪ್ಪಿರುತ್ತೇವೆ.

(ಭಾಷ್ಯ)

೨೬೦. ಬಾಢಮ್ ಏವಂ ಪ್ರಜ್ಞಪ್ತೇಃ ಸನಿಮಿತ್ತತ್ವಂ ದ್ವ್ಯಯಸಙ್ಕ್ಲೇಶೋಪಲಬ್ಧಿ ಯುಕ್ತಿದರ್ಶನಾತ್ ಇಷ್ಯತೇ ತ್ವಯಾ । ಸ್ಥಿರೀಭವ ತಾವತ್ ತ್ವಂ ಯುಕ್ತಿದರ್ಶನಂ ವಸ್ತುನಃ ತಥಾತ್ವಾಭ್ಯುಪಗಮೇ ಕಾರಣಮ್ ಇತ್ಯತ್ರ । ಬ್ರೂಹಿ ಕಿಂ ತತಃ ಇತಿ । ಉಚ್ಯತೇ । ನಿಮಿತ್ತಸ್ಯ ಪ್ರಜ್ಞಪ್ತ್ಯಾಲಮ್ಬನಾಭಿಮತಸ್ಯ[2] ಘಟಾದೇಃ ಅನಿಮಿತ್ತತ್ವಮ್ ಅನಾಲಮ್ಬನತ್ವಂ ವೈಚಿತ್ರ್ಯಾಹೇತುತ್ವಮ್ ಇಷ್ಯತೇ ಅಸ್ಮಾಭಿಃ । ಕಥಮ್ ? ಭೂತದರ್ಶನಾತ್ ಪರಮಾರ್ಥದರ್ಶನಾತ್ ಇತ್ಯೇತತ್ । ನ ಹಿ ಘಟಃ ಯಥಾ ಭೂತಮೃದ್ರೂಪದರ್ಶನೇ ಸತಿ ತದ್ವ್ಯತಿರೇಕೇಣ ಅಸ್ತಿ, ಯಥಾ ಅಶ್ವಾತ್ ಮಹಿಷಃ । ಪಟೋ ವಾ ತನ್ತುವ್ಯತಿರೇಕೇಣ ತನ್ತವಶ್ಚ ಅಂಶುವ್ಯತಿರೇಕೇಣ ಇತ್ಯೇವಮ್ ಉತ್ತರೋತ್ತರಭೂತದರ್ಶನೇ ಅ ಶಬ್ದಪ್ರತ್ಯಯನಿರೋಧಾತ್ ನೈವ ನಿಮಿತ್ತಮ್ ಉಪಲಭಾಮಹೇ ಇತ್ಯರ್ಥಃ ॥

---

1. ಮೊದಲು ದುಃಖವು ಕಾಣದೆ ಇರುವ ಕಡೆಯಿಂದ ಬೆಂಕಿಯನ್ನಿಟ್ಟರೆ ಅದರ ಸುಡುವಿಕೆಯಿಂದ ದುಃಖವಾಗುತ್ತದೆ ; ಆದರೆ ಗಂಧವನ್ನು ಬಳಿದರೆ ಆಗುವದಿಲ್ಲ. ಈ ವೈಚಿತ್ರ್ಯಕ್ಕೆ ಬೆಂಕಿ, ಗಂಧ ಎಂಬ ವಿಷಯಗಳೇ ಕಾರಣವೆಂದು ಸಿದ್ಧವಾಗುತ್ತದೆ. ಏಕೆಂದರೆ ವಿಜ್ಞಾನವು ಎರಡು ಕಡೆಯಲ್ಲಿಯೂ ಇರುತ್ತದೆ.

2. ಇದರ ಮುಂದೆ 'ತವ' ಎಂದು ಹೆಚ್ಚಾಗಿ ವಾ॥ ಕಾ॥

(ಭಾಷ್ಯಾರ್ಥ)

ಹೀಗೆ ದ್ವಯ, ದುಃಖಾನುಭವ-(ಎಂಬೀ ಎರಡು ಬಗೆಯ ಯುಕ್ತಿಯನ್ನು) ಕಂಡು ನೀನು ಪ್ರಜ್ಞಪ್ತಿಗೆ ನಿಮಿತ್ತವಿರಬೇಕೆಂದು ಒಪ್ಪಿರುತ್ತೀಯೆ, ನಿಜ, (ಆದರೆ) ಯುಕ್ತಿಯನ್ನು ಕಂಡದ್ದು ವಸ್ತು ಹಾಗೇ ಇರಬೇಕೆನ್ನುವದಕ್ಕೆ (ತಕ್ಕಷ್ಟು) ಕಾರಣ (ಎಂದು ಅಂಗೀಕರಿಸಿ) ಅಲ್ಲಿಯೇ ನೀನು ಭದ್ರವಾಗಿ ನಿಂತುಕೊ.

(ಪೂರ್ವಪಕ್ಷಿ) :- (ಹಾಗೆಯೇ ಆಗಲಿ). ಅದರಿಂದೇನಾಗುವದು ? ಹೇಳು.

(ಸಿದ್ಧಾಂತಿ[1]) :- ಹೇಳುತ್ತೇವೆ (ಕೇಳು). ಪ್ರಜ್ಞಪ್ತಿಗೆ ವಿಷಯವೆಂದು (ನಿನಗೆ) ಸಮ್ಮತವಾಗಿರುವ ಗಡಿಗೆಯೇ ಮುಂತಾದ ನಿಮಿತ್ತವು ಅನಿಮಿತ್ತವು, (ಪ್ರಜ್ಞಪ್ತಿಗೆ) ವಿಷಯವಲ್ಲ, (ಅರಿವಿನ) ವೈಚಿತ್ರ್ಯಕ್ಕೆ ಹೇತುವಲ್ಲ-ಎಂದು ನಾವು ಒಪ್ಪುತ್ತೇವೆ. (ಅದು) ಹೇಗೆ ? ಎಂದರೆ ಭೂತದರ್ಶನದಿಂದ, ಪರಮಾರ್ಥವನ್ನು ಕಂಡದ್ದರಿಂದ (ಹಾಗೆ ಹೇಳುತ್ತೇವೆ[2]) ಎಂದಭಿಪ್ರಾಯ. ನಿಜವಾಗಿರುವ ಮಣ್ಣಿನ ಸ್ವರೂಪವನ್ನು ಕಂಡುಕೊಂಡ ಮೇಲೆ ಗಡಿಗೆ ಎಂಬುದು-ಕುದುರೆಗಿಂತ ಬೇರೆಯಾಗಿ ಕೋಣನಿರುವಂತೆ[3]-ಆ (ಮಣ್ಣಿ) ಗಿಂತ ಬೇರೆಯಾಗಿ (ಸ್ವತಂತ್ರವಾಗಿ) ಇರುವದಿಲ್ಲವಷ್ಟೆ. (ಹೀಗೆಯೇ) ಬಟ್ಟೆಯೆಂಬು ದಾದರೂ ನೂಲುಗಳಿಗಿಂತ ಬೇರೆಯಾಗಿ (ಇರುವದಿಲ್ಲ), ನೂಲುಗಳೂ ಹತ್ತಿಯ ಹಿಂಜಿ ಗಳಿಗಿಂತ (ಬೇರೆಯಾಗಿರುವದಿಲ್ಲ). ಹೀಗೆ ಮುಂದುಮುಂದಕ್ಕೆ ನಿಜವಾಗಿರುವದನ್ನು ನೋಡುತ್ತಾ ಮಾತೂ ಅರಿವೂ ನಾಶವಾಗುವವರೆಗೂ ಸಾಗಿದರೆ[4] (ಆ ಹೊರಗಿನ) ನಿಮಿತ್ತ ವೆಂಬುದು ನಮಗೆ ತೋರುವದೇ ಇಲ್ಲ ಎಂದು ಅಭಿಪ್ರಾಯ.

(ಭಾಷ್ಯ)

೨೬೧. ಅಥವಾ ಅಭೂತದರ್ಶನಾತ್ ಬಾಹ್ಯಾರ್ಥಸ್ಯ ಅನಿಮಿತ್ತತ್ವಮ್ ಇಷ್ಯತೇ । ರಜ್ಜ್ವಾದಾವಿವ ಸರ್ಪಾದೇಃ ಇತ್ಯರ್ಥಃ । ಭ್ರಾನ್ತಿದರ್ಶನವಿಷಯತ್ವಾಚ್ಚ ನಿಮಿತ್ತಸ್ಯ ಅನಿಮಿತ್ತತ್ವಂ ಭವೇತ್ । ತದಭಾವೇ ಅಭಾವಾತ್ । ನ ಹಿ ಸುಷುಪ್ತ

1. ಇಲ್ಲಿ ವಿಜ್ಞಾನವಾದಿಯೇ ಸಿದ್ಧಾಂತಿ.

2. ಯುಕ್ತಿಯಿಂದ ವಿಷಯವನ್ನು ಸಾಧಿಸುವ ನಿನ್ನ ಪಕ್ಷವು ದುರ್ಬಲವು ; ಅನುಭವಾನು ಸಾರವಾಗಿ ವಿಚಾರಮಾಡಿ ವಿಷಯವಿಲ್ಲವೆನ್ನುವ ನಮ್ಮ ಪಕ್ಷವು ಪ್ರಬಲವು ಎಂದು ಭಾವ.

3. ಕುದುರೆ. ಕೋಣ-ಇವು ನಿಜವಾಗಿರುವವೆಂದು ಒಪ್ಪಿ ಈ ದೃಷ್ಟಾಂತವನ್ನು ಕೊಟ್ಟಿದೆ; ವಿಜ್ಞಾನವಾದಿಯು ಮತದಲ್ಲಿ ಅವೂ ವಿಜ್ಞಾನಕ್ಕಿಂತ ಬೇರೆಯಾಗಿ ಇರುವದಿಲ್ಲ.

4. ಹತ್ತಿಯೂ ತನ್ನ ಕಾರಣವಾದ ಭೂತಗಳಿಗಿಂತ ಬೇರೆಯಲ್ಲ ; ಅವುಗಳೂ ತಮ್ಮ ತಮ್ಮ ಕಾರಣಗಳಿಗಿಂತ ಬೇರೆಯಾಗಿರುವದಿಲ್ಲ. ಕೊನೆಗೆ ಎಲ್ಲವೂ ಆಕಾಶವೇ ಆಗಿ ಬಿಡುತ್ತದೆ.

ಸಮಾಹಿತಮುಕ್ತಾನಾಂ ಭ್ರಾನ್ತಿದರ್ಶನಾಭಾವೇ ಆತ್ಮವ್ಯತಿರಿಕ್ತಃ ಬಾಹ್ಯೋಽರ್ಥಃ ಉಪಲಭ್ಯತೇ । ನ ಹಿ ಉನ್ಮತ್ತಾವಗತಂ ವಸ್ತು ಅನುನ್ಮತ್ತೈರಪಿ ತಥಾಭೂತಂ ಗಮ್ಯತೇ । ಏತೇನ ದ್ವಯದರ್ಶನಂ ಸಜಾತೀಯೋಪಲಬ್ಧಿಶ್ಚ ಪ್ರತ್ಯುಕ್ತಾ ॥

(ಭಾಷ್ಯಾರ್ಥ)

ಅಥವಾ ಅಭೂತದರ್ಶನದಿಂದ[1] ಹೊರಗಿನ ಪದಾರ್ಥವು (ಇಲ್ಲವೆಂದು ಕಂಡುಬರುವದರಿಂದ) ನಿಮಿತ್ತವಲ್ಲವೆಂದು ಒಪ್ಪಿರುತ್ತೇವೆ ; ಹಗ್ಗವೇ ಮುಂತಾದದ್ದರಲ್ಲಿ ಹಾವು ಮುಂತಾದದ್ದು ಹೇಗೆ (ಇರುವದಿಲ್ಲವೋ, ಆದ್ದರಿಂದ ಹೇಗೆ ಅದು ನಿಜವಾದ ವಿಷಯವಲ್ಲವೋ ಹಾಗೆ[2]) ಎಂದರ್ಥ. ಭ್ರಾಂತಿಜ್ಞಾನಕ್ಕೆ ವಿಷಯವಾಗಿರುವದರಿಂದಲೂ (ನೀವು ಹೇಳುವ) ನಿಮಿತ್ತವು (ನಿಜವಾಗಿ) ನಿಮಿತ್ತವಾಗಲಾರದು. ಏಕೆಂದರೆ ಆ (ಭ್ರಾಂತಿ)ಯಿಲ್ಲದಾಗ (ಅದೂ) ಇರುವದಿಲ್ಲ[3]. ಸುಷುಪ್ತಿಯನ್ನನುಭವಿಸುವವರು, ಸಮಾಧಿಯಲ್ಲಿರುವವರು, ಮುಕ್ತರು-(ಇವರು)ಗಳಿಗೆ ಭ್ರಾಂತಿಜ್ಞಾನವಿರುವದಿಲ್ಲ ; (ಆಗ) ತಮಗಿಂತ ಬೇರೆಯಾಗಿ ಹೊರಗಿನ ವಿಷಯವು ಕಂಡುಬರುವದೇ ಇಲ್ಲ[4]. ಹುಚ್ಚರು (ಇರುವದೆಂದು) ತಿಳಿಯುವ ವಸ್ತು ಹುಚ್ಚರಲ್ಲದವರಿಗೂ ಸತ್ಯವಾಗಿ

1. "ಇಷ್ಯತೇಽಭೂತದರ್ಶನಾತ್" ಎಂದು ಪಾಠವನ್ನು ಇಟ್ಟುಕೊಂಡು ಅಭೂತದರ್ಶನದಿಂದ ಎಂಬ ಅರ್ಥವನ್ನು ತೆಗೆಯಲಾಗಿದೆ. ಸರಿಯಾಗಿ ನೋಡಿದರೆ ವಿಷಯವೆಂಬುದು ಯಾವದೂ ತನ್ನ ತನ್ನ ಕಾರಣಕ್ಕಿಂತ ಬೇರೆಯಾಗಿ ಇರುವದೇ ಇಲ್ಲ ಎಂದರ್ಥ.

2. ಹಗ್ಗದಲ್ಲಿ ಹಾವು ಇರುವದೂ ಇಲ್ಲ, ಅದು ಜ್ಞಾನಕ್ಕೆ ವಿಷಯವೂ ಅಲ್ಲ-ಎಂದು ಭಾವ. ಇಲ್ಲದ ವಸ್ತು ಜ್ಞಾನದ ವೈಚಿತ್ರ್ಯಕ್ಕೆ ನಿಮಿತ್ತವೆನ್ನುವದಕ್ಕೆ ಕಾರಣವಿಲ್ಲವೆಂದು ಅರ್ಥ. ಹಗ್ಗದಲ್ಲಿ ಹಾವು ಇಲ್ಲವೆಂದು ಹೇಳಿರುವದರಿಂದ ಅನಿರ್ವಚನೀಯಪದಾರ್ಥದ ಉತ್ಪತ್ತಿಯನ್ನು ಹೇಳುವ ಈಚಿನ ವೇದಾಂತಿಗಳ ಮತವು ಭಾಷ್ಯಾರೂಢವಲ್ಲವೆಂದು ನಿಶ್ಚಯಿಸಬಹುದಾಗಿದೆ. ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿಯಿದೆ ಎಂದು ತಿಳಿಯುತ್ತಾರೆಯೇ ಹೊರತು ಅದರಲ್ಲಿ ನಿಜವಾಗಿ ಬೆಳ್ಳಿಯೇನೂ ಇರುವದಿಲ್ಲ-ಎಂಬ ಸೂ. ಭಾ. ೪-೧-೫ನ್ನು ನೋಡಿ.

3. ಇದೊಂದು ಹೊಸಯುಕ್ತಿಯೆಂದು ಭಾವಿಸಬಾರದು. ಹೊರಗಿನ ವಿಷಯವು ಅಭೂತ, ಅಪರಮಾರ್ಥ, ಎಂಬುದು ಹೇಗೆ ?-ಎಂದರೆ ಅದು ಭ್ರಾಂತರಿಗೆ ಮಾತ್ರ ತೋರುವದರಿಂದ. ಕಣ್ಣು ಪರೆಯವನಿಗೆ ಮಾತ್ರ ಕಂಡು ಇಲ್ಲದಿರುವನಿಗೆ ಕಾಣದಿರುವದರಿಂದಲೇ ದ್ವಿತೀಯಚಂದ್ರನು ಇಲ್ಲವೆನ್ನುವದು ಎಂಬ ತೈ. ಭಾ. ಭಾ. ೨೧೩, ೨೧೫ ನೋಡಿರಿ.

4. ಈ ಅವಸ್ಥೆಗಳಲ್ಲಿ ವಿಜ್ಞಾನವು ಮಾತ್ರ ಇದೆ ಎಂದು ಬೌದ್ಧನ ಅಭಿಪ್ರಾಯ ; ಆತ್ಮನು ಮಾತ್ರ ಇರುತ್ತಾನೆ ಎಂಬುದು ವೇದಾಂತಿಯ ಮತ.

ಕಾಣಿಸಲಾರದಷ್ಟೆ. ಇದರಿಂದ ದ್ವಯದರ್ಶನ, ಸಂಕ್ಲೇಶದ ಅನುಭವ-ಇವೆರಡಕ್ಕೂ ಉತ್ತರವನ್ನು ಹೇಳಿದಂತೆ ಆಯಿತು[1].

(ಭಾಷ್ಯ)

೨೬.೨. ಯಸ್ಮಾತ್ ನಾಸ್ತಿ ಬಾಹ್ಯಂ ನಿಮಿತ್ತಮ್, ಅತಃ-

(ಭಾಷ್ಯಾರ್ಥ)

ಹೀಗೆ ಹೊರಗಿನ ನಿಮಿತ್ತವು ಇಲ್ಲವಾಯಿತಷ್ಟೆ, ಆದ್ದರಿಂದ-

**ಚಿತ್ತಂ ನ ಸಂಸ್ಪೃಶತ್ಯರ್ಥಂ ನಾರ್ಥಾಭಾಸಂ ತಥೈವ ಚ ।**
**ಅಭೂತೋ ಹಿ ಯತಶ್ಚಾರ್ಥೋ ನಾರ್ಥಾಭಾಸಸ್ತತಃ ಪೃಥಕ್ ॥೨೬॥**

೨೬. ಚಿತ್ತವು (ಹೊರಗಿನ) ಅರ್ಥವನ್ನು ಮುಟ್ಟುವದಿಲ್ಲ, ಅರ್ಥಾಭಾಸವನ್ನೂ ಹಾಗೆಯೇ (ಮುಟ್ಟುವ)ದಿಲ್ಲ. ಏಕೆಂದರೆ ಅರ್ಥವು ಅಭೂತವಲ್ಲವೆ, (ಆದ್ದರಿಂದ) ಅದಕ್ಕಿಂತ ಬೇರೆಯಾಗಿ ಅರ್ಥಾಭಾಸವಿರುವದಿಲ್ಲ.

(ಭಾಷ್ಯ)

೨೬.೩. ಚಿತ್ತಂ ನ ಸ್ಪೃಶತಿ ಅರ್ಥಂ ಬಾಹ್ಯಾಲಮ್ಬನವಿಷಯಮ್ । ನಾಪಿ ಅರ್ಥಾಭಾಸಮ್ । ಚಿತ್ತತ್ವಾತ್ ಸ್ವಪ್ನಚಿತ್ತವತ್ । ಅಭೂತೋ ಹಿ ಜಾಗರಿತೇಽಪಿ ಸ್ವಪ್ನಾರ್ಥವದೇವ ಬಾಹ್ಯಃ ಶಬ್ದಾದ್ಯರ್ಥೋ ಯತಃ । ಉಕ್ತಹೇತುತ್ವಾಚ್ಚ । ನಾಪಿ ಅರ್ಥಾಭಾಸಃ ಚಿತ್ತಾತ್ ಪೃಥಕ್ ಚಿತ್ತಮೇವ ಹಿ ಘಟಾದ್ಯರ್ಥವತ್ ಅವಭಾಸತೇ ಯಥಾ ಸ್ವಪ್ನೇ ॥

(ಭಾಷ್ಯಾರ್ಥ)

ಚಿತ್ತವು ಅರ್ಥವನ್ನು ಹೊರಗಿನ ಆಶ್ರಯವಾದ ವಿಷಯವನ್ನು ಮುಟ್ಟುವದಿಲ್ಲ ; ಅರ್ಥಾಭಾಸವನ್ನೂ (ಮುಟ್ಟುವ)ವದಿಲ್ಲ ; ಏಕೆಂದರೆ (ಇದು ಕನಸಿನ ಚಿತ್ತದಂತೆ ಚಿತ್ತವಾಗಿರುತ್ತದೆ[2]. ಎಚ್ಚರದಲ್ಲಿಯೂ ಹೊರಗಿನ ಶಬ್ದವೇ ಮುಂತಾದ ವಿಷಯವು

1. ಏಕೆಂದರೆ ಇವು ಭ್ರಾಂತರಿಗೆ ಮಾತ್ರ ತೋರುತ್ತವೆ ಸುಷುಪ್ತಪುರುಷಾದಿಗಳಿಗೆ ತೋರುವದಿಲ್ಲ.

2. ಚಿತ್ತವು ವಿಷಯವಿಲ್ಲದೆ ಕನಸಿನಲ್ಲಿರುವದೆಂದು ಒಪ್ಪಿರುತ್ತೀರಿ ; ಎಚ್ಚರದಲ್ಲಿ ಮಾತ್ರ ಅದಕ್ಕೇಕೆ ವಿಷಯವಿರಬೇಕು ?-ಎಂದು ಭಾವ.

ಕನಸಿನ ವಿಷಯದಂತೆಯೇ ಅಪರಮಾರ್ಥ(ವಾಗಿರುತ್ತದೆ)ಯಲ್ಲವೆ ? ಹಿಂದೆ ಹೇಳಿರುವ ಯುಕ್ತಿಯಿಂದಲೂ[1] (ಹೀಗೆಂದು ತಿಳಿಯಬೇಕು). ಚಿತ್ತಕ್ಕಿಂತ ಬೇರೆಯಾಗಿ ಅರ್ಥಾಭಾಸವೂ ಇರುವದಿಲ್ಲ ; ಏಕೆಂದರೆ ಚಿತ್ತವೇ, ಕನಸಿನಲ್ಲಿ ಹೇಗೋ ಹಾಗೆ, ಗಡಿಗೆಯೇ ಮುಂತಾದ ವಿಷಯದಂತೆ ತೋರುತ್ತಿರುವದು.

(ಭಾಷ್ಯ)

೨೬೪. ನನು ವಿಪರ್ಯಾಸಸ್ತರ್ಹಿ ಅಸತಿ ಘಟಾದೌ ಘಟಾದ್ಯಾಭಾಸತಾ ಚಿತ್ತಸ್ಯ । ತಥಾ ಚ ಸತಿ ಅವಿಪರ್ಯಾಸಃ ಕ್ವಚಿತ್ ವಕ್ತವ್ಯಃ ಇತಿ । ಅತ್ರೋಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ಗಡಿಗೆಯೇ ಮುಂತಾದದ್ದು ಇಲ್ಲದಿರುವಾಗ ಚಿತ್ತವು ಗಡಿಗೆಯೇ ಮುಂತಾದದ್ದರಂತೆ ತೋರುವದೆಂಬುದು ಭ್ರಾಂತಿಯಾಯಿತು. ಮತ್ತು ಹಾಗಾದರೆ ಅಭ್ರಾಂತಿಯನ್ನು ಎಲ್ಲಾದರೂ ಹೇಳಬೇಕಾಗುವದಲ್ಲ[2] ?

(ಪರಿಹಾರ) :- ಇದಕ್ಕೆ (ಉತ್ತರವನ್ನು) ಹೇಳುತ್ತೇವೆ :-

ನಿಮಿತ್ತಂ ನ ಸದಾ ಚಿತ್ತಂ ಸಂಸ್ಪೃಶತ್ಯಧ್ವಸು ತ್ರಿಷು ।
ಅನಿಮಿತ್ತೋ ವಿಪರ್ಯಾಸಃ ಕಥಂ ತಸ್ಯ ಭವಿಷ್ಯತಿ　　॥೨೭॥

೨೭. ಚಿತ್ತವು ಮೂರು ಕಾಲಗಳಲ್ಲಿ ಯಾವಾಗಲೂ ನಿಮಿತ್ತವನ್ನು ಮುಟ್ಟುವದೇ ಇಲ್ಲ. ಆದಕ್ಕೆ ನಿಮಿತ್ತವಿಲ್ಲವೆಂಬುದು ವಿಪರ್ಯಾಸವೆಂದು ಹೇಗೆ ಆದೀತು ?

(ಭಾಷ್ಯ)

೨೬೫. ನಿಮಿತ್ತಂ ವಿಷಯಮ್ ಅತೀತಾನಾಗತವರ್ತಮಾನಾಧ್ವಸು[3] ತ್ರಿಷ್ವಪಿ ಸದಾ

1. ವಿಷಯವೆಂಬುದು ಸುಷುಪ್ತ್ಯಾದಿಗಳಲ್ಲಿ ಕಾಣದಿರುವದರಿಂದ ಬರಿಯ ಭ್ರಾಂತಿ ಎಂದು ಹೇಳಿದ ಯುಕ್ತಿ.

2. ಹಗ್ಗದ ಹಾವು ಭ್ರಾಂತಿಯಾದರೆ ನಿಜವಾದ ಹಾವು ಒಂದು ಇರಬೇಕು ; ಹಾಗೆಯೇ ಚಿತ್ತಕ್ಕೆ ವಿಷಯವು ತೋರುವದು ಇಲ್ಲಿ ಭ್ರಾಂತಿಯಾದರೆ, ಎಲ್ಲಿಯಾದರೂ ನಿಜವಾದ ಗಡಿಗೆ ಇರಬೇಕೆಂದೇ ಆಗುವದಲ್ಲ !-ಎಂದು ಆಕ್ಷೇಪ. ಸರಿಯಾದ ತಿಳಿವಳಿಕೆಯೊಂದೂ ಇಲ್ಲದೆ, ಅದರಂಥ ಭ್ರಾಂತಿಯು ಇರಲಾರದು ಎಂಬ ತಾರ್ಕಿಕರ ಆಕ್ಷೇಪವಿದು.

3. "ಅತೀತಾನಾಗತವರ್ತಮಾನೇಷು ಅಧ್ವಸು" ಎಂದಿದ್ದರೆ ಚೆನ್ನಾಗಿತು.

ಚಿತ್ತಂ ನ ಸಂಸ್ಪೃಶತ್ಯೇವ[1] । ಯದಿ ಹಿ ಕ್ವಚಿತ್ ಸಂಸ್ಪೃಶೇತ್ ಸಃ ಅವಿಪರ್ಯಾಸಃ ಪರಮಾರ್ಥತಃ ಇತ್ಯತಃ ತದಪೇಕ್ಷಯಾ ಅಸತಿ ಘಟೇ ಘಟಾಭಾಸತಾ[2] ವಿಪರ್ಯಾಸಃ ಸ್ಯಾತ್ । ನ ತು ತದಸ್ತಿ ಕದಾಚಿದಪಿ ಚಿತ್ತಸ್ಯ ಅರ್ಥಸಂಸ್ಪರ್ಶನಮ್ । ತಸ್ಮಾತ್ ಅನಿಮಿತ್ತಃ ವಿಪರ್ಯಾಸಃ ಕಥಂ ತಸ್ಯ ಚಿತ್ತಸ್ಯ ಭವಿಷ್ಯತಿ ? ನ ಕಥಂಚಿತ್ ವಿಪರ್ಯಾಸಃ ಅಸ್ತಿ ಇತ್ಯಭಿಪ್ರಾಯಃ । ಅಯಮೇವ ಹಿ ಸ್ವಭಾವಶ್ಚಿತ್ತಸ್ಯ ಯದುತ ಅಸತಿ ನಿಮಿತ್ತೇ ಘಟಾದೌ ತದ್ವದವಭಾಸನಮ್ ॥

(ಭಾಷ್ಯಾರ್ಥ)

ಹಿಂದಿನ, ಮುಂದಿನ, (ಮತ್ತು) ಈಗಿನ (ಕಾಲ) ಎಂಬ ಮೂರು ಕಾಲಗಳಲ್ಲಿ ಯಾವಾಗಲೂ ಚಿತ್ತವು ನಿಮಿತ್ತವನ್ನು ವಿಷಯವನ್ನು ಮುಟ್ಟುವದೇ ಇಲ್ಲ. ಯಾವಾಗಲಾದರೂ (ಅದು) ಮುಟ್ಟುತ್ತಿದ್ದರೆ, (ಆಗ) ಅದು ನಿಜವಾದ ಅಭ್ರಾಂತಿಯು ಎಂದಾಗುವದರಿಂದ ಅದಕ್ಕೆ ಹೋಲಿಸಿದರೆ ಗಡಿಗೆಯಿಲ್ಲದಿರುವಾಗ ಗಡಿಗೆಯಂತೆ ತೋರುವದು ಭ್ರಾಂತಿಯಾದೀತು. ಆದರೆ ಹಾಗೆ ಚಿತ್ತವು ವಿಷಯವನ್ನು ಮುಟ್ಟುವದೆಂಬುದು ಯಾವಾಗಲೂ ಇರುವದಿಲ್ಲ. ಹೀಗಿರುವದರಿಂದ ನಿಮಿತ್ತವಿಲ್ಲವೆಂಬುದು ಆ ಚಿತ್ತಕ್ಕೆ ಭ್ರಾಂತಿ (ಎಂದು) ಹೇಗಾದೀತು ? ಹೇಗೂ ಭ್ರಾಂತಿಯಿಲ್ಲ ಎಂದು ಅಭಿಪ್ರಾಯ. ಏಕೆಂದರೆ ನಿಮಿತ್ತವಾದ ಗಡಿಗೆಯೇ ಮುಂತಾದದ್ದು ಇಲ್ಲದಿರುವಾಗ ಅದರಂತೆ ತೋರುವದಿದೆಯಲ್ಲ, ಇದೇ ಅಲ್ಲವೆ, ಚಿತ್ತದ ಸ್ವಭಾವವು[3] ?

## ಚಿತ್ತವು ಆತ್ಮನಿಗಿಂತ ಬೇರೆ ಇರಲಾರದು

(ಭಾಷ್ಯ)

೨೬೬. ''ಪ್ರಜ್ಞಪ್ತೇಃ ಸನಿಮಿತ್ತತ್ವಮ್'' (೪-೨೫) ಇತ್ಯಾದಿ ಏತದನ್ತಂ ವಿಜ್ಞಾನವಾದಿನಃ ಬೌದ್ಧಸ್ಯ ವಚನಂ ಬಾಹ್ಯಾರ್ಥವಾದಿಪಕ್ಷಪ್ರತಿಷೇಧಪರಮ್ ಆಚಾರ್ಯೇಣ ಅನುಮೋದಿತಮ್ । ತದೇವ ಹೇತುಂ ಕೃತ್ವಾ ತತ್ಪಕ್ಷಪ್ರತಿಷೇಧಾಯ ತದಿದಮ್ ಉಚ್ಯತೇ 'ತಸ್ಮಾತ್' ಇತ್ಯಾದಿ-

1. 'ನ ಸ್ಪೃಶೇದೇವ ಹಿ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. 'ಘಟಾದ್ಯಾಭಾಸತಾ' ಎಂಬ ಪಾಠಕ್ಕಿಂತ ಇದೇ ಉತ್ತಮ.

3. ನಿಜವಾದ ಗಡಿಗೆಯನ್ನು ಹೇಳುವ ಬುದ್ಧಿಯೊಂದು, ಇಲ್ಲದ ಗಡಿಗೆಯನ್ನು ಗಡಿಗೆಯೆಂದು ಹೇಳುವ ಬುದ್ಧಿಯೊಂದು-ಹೀಗೆ ಎರಡು ಇವೆಯಂದು ಪಾಠಗಳು ಭ್ರಾಂತರಾಗಿರುತ್ತಾರೆ. ನಿಜವೇನೆಂದರೆ ಬುದ್ಧಿಗಿಂತ ಬೇರೆಯಾಗಿ ತೋರುವದು ಯಾವದೂ ಇರುವಟಲ್ಲ, ಬುದ್ಧಿಯೊಂದೇ ಪರಮಾರ್ಥವು-ಎಂಬುದು ಬೌದ್ಧನ ಅಭಿಪ್ರಾಯ.

(ಭಾಷ್ಯಾರ್ಥ)

"ಪ್ರಜ್ಞಪ್ತಿಗೆ ನಿಮಿತ್ತವಿರದ ಕು" (೪-೨೫) ಎಂಬಲ್ಲಿಂದ ಹಿಡಿದು ಈವರೆಗೆ ವಿಜ್ಞಾನವಾದಿಯಾದ ಬೌದ್ಧನು ಹೊರಗೆ ವಸ್ತುವಿರುವದೆಂಬ ವಾದಿಗಳ ಪಕ್ಷವನ್ನು ಖಂಡಿಸುವದಕ್ಕಾಗಿ ಹೇಳಿದ್ದನ್ನು ಆಚಾರ್ಯರು ಒಪ್ಪಿ(ಹೇಳಿ)ರುತ್ತಾರೆ. (ಈಗ) ಅದನ್ನೇ[1] ಕಾರಣವಾಗಿಟ್ಟುಕೊಂಡು ಅವನ ಪಕ್ಷವನ್ನು ಅಲ್ಲಗಳೆಯುವದಕ್ಕೆ "ತಸ್ಮಾತ್" ಮುಂತಾದ ಆ ೫ (ಶ್ಲೋಕವನ್ನು) ಹೇಳುತ್ತಾರೆ :-

ತಸ್ಮಾನ್ನ ಜಾಯತೇ ಚಿತ್ತಂ ಚಿತ್ತದೃಶ್ಯಂ ನ ಜಾಯತೇ ।
ತಸ್ಯ ಪಶ್ಯನ್ತಿ ಯೇ ಜಾತಿಂ ಖೇ ವೈ ಪಶ್ಯನ್ತಿ ತೇ ಪದಮ್ ॥೨೮॥

೨೮. ಆದ್ದರಿಂದ ಚಿತ್ತವು ಹುಟ್ಟುವದಿಲ್ಲ, ಚಿತ್ತದೃಶ್ಯವು ಹುಟ್ಟುವದಿಲ್ಲ. ಅದರ ಹುಟ್ಟನ್ನು ಯಾರು ಕಾಣುವರೋ ಅವರು ಆಕಾಶದಲ್ಲಿಯೇ ಹೆಜ್ಜೆಯ ಗುರುತನ್ನು ಕಾಣುವರು.

(ಭಾಷ್ಯ)

೨೬೭. ಯಸ್ಮಾತ್ ಅಸತ್ಯೇವ ಘಟಾದೌ ಘಟಾದ್ಯಾಭಾಸತಾ ಚಿತ್ತಸ್ಯ ವಿಜ್ಞಾನವಾದಿನಾ ಅಭ್ಯುಪಗತಾ ತತ್ ಅನುಮೋದಿತಮ್ ಅಸ್ಮಾಭಿರಪಿ ಭೂತದರ್ಶನಾತ್ । ತಸ್ಮಾತ್ ತಸ್ಯಾಪಿ ಚಿತ್ತಸ್ಯ ಜಾಯಮಾನಾವಭಾಸತಾ ಅಸತ್ಯೇವ ಜನ್ಮನಿ ಯುಕ್ತಾ ಭವಿತುಮ್ ಇತ್ಯತಃ ನ ಜಾಯತೇ ಚಿತ್ತಮ್ । ಯಥಾ ಚಿತ್ತದೃಶ್ಯಂ ನ ಜಾಯತೇ । ಅತಃ ತಸ್ಯ ಚಿತ್ತಸ್ಯ ಯೇ ಜಾತಿಂ ಪಶ್ಯನ್ತಿ ವಿಜ್ಞಾನವಾದಿನಃ ಕ್ಷಣಿಕತ್ವದುಃಖಿತ್ವ ಶೂನ್ಯತ್ವಾನಾತ್ಮತ್ವಾದಿ ಚ ತೇನೈವ ಚಿತ್ತೇನ ಚಿತ್ತಸ್ವರೂಪಂ ದ್ರಷ್ಟುಮ್ ಅಶಕ್ಯಂ ಪಶ್ಯನ್ತಃ ಖೇ ವೈ ಪಶ್ಯನ್ತಿ ತೇ ಪದಂ ಪಕ್ಷ್ಮಾದೀನಾಮ್ । ಅತಃ ಇತರೇಭ್ಯೋಽಪಿ ದ್ವೈತಿಭ್ಯಃ ಅತ್ಯನ್ತಸಾಹಸಿಕಾಃ ಇತ್ಯರ್ಥಃ । ಯೇಽಪಿ ಶೂನ್ಯವಾದಿನಃ ಪಶ್ಯನ್ತ ಏವ ಸರ್ವಶೂನ್ಯತಾಂ ಸ್ವದರ್ಶನಸ್ಯಾಪಿ ಶೂನ್ಯತಾಂ ಪ್ರತಿಜಾನತೇ ತೇ ತತೋಽಪಿ ಸಾಹಸಿಕತರಾಃ ಖಂ ಮುಷ್ಟಿನಾಪಿ ಜಿಘೃಕ್ಷನ್ತಿ ॥

(ಭಾಷ್ಯಾರ್ಥ)

ಗಡಿಗೆ ಮುಂತಾದದ್ದು ಇಲ್ಲದಿದ್ದರೂ ಗಡಿಗೆ ಮುಂತಾದವುಗಳ (ರೂಪ)ದಲ್ಲಿ ತೋರುವದು ಚಿತ್ತದ (ಸ್ವಭಾವವೆಂದು) ವಿಜ್ಞಾನವಾದಿಯು ಒಪ್ಪಿರುತ್ತಾನಷ್ಟೆ, ಇದ್ದ ದ್ದನ್ನು ಕಂಡು ಹೇಳಿದ್ದಾದ್ದರಿಂದ ಅದನ್ನು ನಾವೂ ಒಪ್ಪಿರುತ್ತೇವೆ. ಆದ್ದರಿಂದ ಆ ಚಿತ್ತವೂ

---

1. ತನ್ನ ರೂಪದಿಂದ ನಿಜವಾಗಿಲ್ಲದ್ದೂ ಹುಟ್ಟಬಹುದೆಂಬುದನ್ನು.

(ತನಗೆ) ಹುಟ್ಟಿಲ್ಲವೇ ಇಲ್ಲವಾದರೂ ಹುಟ್ಟಿದಂತೆ ತೋರುವದೆಂದಾಗುವದು ಯುಕ್ತವಾಗಿರುತ್ತದೆ. ಆದ್ದರಿಂದ ಚಿತ್ತವು ಹುಟ್ಟುವದಿಲ್ಲ. ಹೇಗೆ ಚಿತ್ತಕ್ಕೆ ಕಾಣುವ (ವಸ್ತು) ಹುಟ್ಟುವದಿಲ್ಲವೋ (ಹಾಗೆಯೇ ಇದೂ ಹುಟ್ಟುವದಿಲ್ಲ). ಹೀಗಿರುವದರಿಂದ ಚಿತ್ತದ ಸ್ವರೂಪವನ್ನು ಆದೇ ಚಿತ್ತದಿಂದ ಕಾಣುವದು ಆಗಲಾರದೆಂಬುದನ್ನು ಕಂಡೂ[1] ಆ ಚಿತ್ತಕ್ಕೆ ಹುಟ್ಟನ್ನು ಯಾರು ಕಾಣುವರೋ[2], (ಅದು) ಕ್ಷಣಿಕ[3], ದುಃಖ[4], ಶೂನ್ಯ[5], ಆತ್ಮನಿಲ್ಲದ್ದು[6] ಮುಂತಾಗಿಯೂ ಯಾವ ವಿಜ್ಞಾನವಾದಿಗಳು (ತಿಳಿಯುವರೋ) ಅವರು ಆಕಾಶದಲ್ಲಿಯೇ ಹಕ್ಕಿಗಳು ಮುಂತಾದವುಗಳ ಹೆಜ್ಜೆಯ (ಗುರುತ)ನ್ನು ಕಾಣುವರು. ಆದ್ದರಿಂದ (ಇವರು) ಮಿಕ್ಕ ದ್ವೈತಿಗಳಿಗಿಂತಲೂ ಅತ್ಯಂತ ಸಾಹಸಿಕರು ಎಂದರ್ಥ.

ಇನ್ನು ಯಾವ ಶೂನ್ಯವಾದಿಗಳು ಎಲ್ಲವೂ ಶೂನ್ಯವೆಂಬುದನ್ನು (ತಾವೇ) ನೋಡುತ್ತಿದ್ದರೂ ತಮ್ಮ ನೋಟವೂ ಶೂನ್ಯವೆಂದು ಹೇಳುತ್ತಿರುವರೋ[7] ಅವರು ಮತ್ತೂ ಸಾಹಸಿಕರು, (ಅವರು) ಆಕಾಶವನ್ನು ಮುಷ್ಟಿಯಿಂದಲೂ ಹಿಡಿಯುವದಕ್ಕೆಳಸುತ್ತಿರುವರು.

## ಅಜಾತಿವಾದವೇ ಸರಿಯಾದದ್ದು

(ಭಾಷ್ಯ)

೨೬೮. ಉಕ್ತೈಃ ಹೇತುಭಿಃ ಅಜಮೇಕಂ ಬ್ರಹ್ಮ ಇತಿ ಸಿದ್ಧಮ್ । ಯತ್ಪುನರಾದೌ ಪ್ರತಿಜ್ಞಾತಮ್, ತತ್ಫಲೋಪಸಂಹಾರಾರ್ಥೋಽಯಂ ಶ್ಲೋಕಃ-

---

1. ಚಿತ್ತವೇ ಕರ್ತೃ, ಚಿತ್ತವೇ ಕರ್ಮ-ಎಂಬುದು ತನಗತಾನೇ ವಿರುದ್ಧ.

2. ಚಿತ್ತವನ್ನೇ ಕಾಣದವರು ಅದರ ಹುಟ್ಟು, ಮುಂತಾದವನ್ನೂ ಕಾಣುವದು ಹೇಗೆ ?-ಎಂದರ್ಥ. 3. ಒಂದೊಂದು ಕ್ಷಣಕ್ಕೂ ಒಂದು ಚಿತ್ತವು ನಾಶವಾಗಿ ಮತ್ತೊಂದು ಹುಟ್ಟುತ್ತಿರುವದು ; ಅದು ಒಂದೇ ಎಂಬುದು ಭ್ರಾಂತಿ ಎಂದು ವಿಜ್ಞಾನವಾದಿಗಳ ಮತ.

4. ಚಿತ್ತದ ದುಃಖವನ್ನು ಕಳೆಯುವದಕ್ಕಾಗಿಯೇ ಸಾಧಕರು ಪ್ರಯತ್ನಿಸಬೇಕೆಂಬುದು ಬೌದ್ಧರ ಮತ. 5. ಚಿತ್ತವು ಕ್ಷಣಿಕವಾದ್ದರಿಂದ ಒಂದು ಕ್ಷಣವಾದ ಮೇಲೆ ಅದು ಶೂನ್ಯವಾಗಿ ಬಿಡುವದು ಎಂದು ಬೌದ್ಧನ ಭಾವ.

6. ಚಿತ್ತಕ್ಕೆ ತಿರುಳಾಗಿ ಆತ್ಮನೆಂಬ ವಸ್ತು ಇಲ್ಲ ಎಂದು ಬೌದ್ಧನ ವಾದ.

7. ಎಲ್ಲವೂ ಶೂನ್ಯವೆಂಬವನು ಅದನ್ನು ಕಂಡು ಅನುಭವದಿಂದ ಹೇಳಿದರೆ ಅನುಭವವನ್ನು ಬಿಟ್ಟು ಮಿಕ್ಕದ್ದು ಶೂನ್ಯವಾಗುವದೇ ಹೊರತು ಎಲ್ಲವೂ ಶೂನ್ಯವಾಗಲಾರದು, ಅನುಭವವಿಲ್ಲದ ಹೇಳಿದರೆ ಶೂನ್ಯವಾದಕ್ಕೆ ಪ್ರಮಾಣವಿಲ್ಲದೆ ಹೋಗುವದು.

(ಭಾಷ್ಯಾರ್ಥ)

(ಮೇಲೆ) ಹೇಳಿದ ಹೇತುಗಳಿಂದ ಬ್ರಹ್ಮವು ಹುಟ್ಟುವದಲ್ಲ, ಒಂದೇ ಎಂದು ಸಿದ್ಧವಾಯಿತು. ಇನ್ನು ಮೊದಲು ಪ್ರತಿಜ್ಞೆಮಾಡಿತ್ತಲ್ಲ[1], ಅದರ ಫಲವನ್ನು ಉಪಸಂಹಾರ ಮಾಡುವದಕ್ಕೆ ಈ (ಮುಂದಿನ) ಶ್ಲೋಕವು (ಬಂದಿದೆ) :-

ಅಜಾತಂ ಜಾಯತೇ ಯಸ್ಮಾದಜಾತಿಃ ಪ್ರಕೃತಿಸ್ತತಃ ।
ಪ್ರಕೃತೇರನ್ಯಥಾಭಾವೋ ನ ಕಥಂಚಿದ್ಭವಿಷ್ಯತಿ ॥೫೯॥

೫೯. (ಓಗೆ) ಹುಟ್ಟಿದ್ದೇ ಹುಟ್ಟುತ್ತಿರುವದಷ್ಟೆ, ಆದ್ದರಿಂದ ಅಜಾತಿಯು ಪ್ರಕೃತಿಯು, ಪ್ರಕೃತಿಯು ಬೇರ್ಪಡುವದು ಹೇಗೂ ಆಗಲಾರದು.

(ಭಾಷ್ಯ)

೨೬೯. ಅಜಾತಮ್ । ಯತ್ ಚಿತ್ತಂ ಬ್ರಹ್ಮೈವ ಜಾಯತೇ ಇತಿ ವಾದಿಭಿಃ ಪರಿಕಲ್ಪ್ಯತೇ ತತ್ ಅಜಾತಂ ಜಾಯತೇ ಯಸ್ಮಾತ್ ಅಜಾತಿಃ ಪ್ರಕೃತಿಃ ತಸ್ಯ । ತತಃ ತಸ್ಮಾತ್ ಅಜಾತರೂಪಾಯಾಃ ಪ್ರಕೃತೇಃ ಅನ್ಯಥಾಭಾವಃ ಜನ್ಮ ನ ಕಥಂಚಿತ್ ಭವಿಷ್ಯತಿ ॥

(ಭಾಷ್ಯಾರ್ಥ)

ಹುಟ್ಟಿದ್ದೇ : ಚಿತ್ತವು ಬ್ರಹ್ಮವೇ (ಆಗಿದ್ದು) ಹುಟ್ಟುತ್ತದೆ ಎಂದು ವಾದಿಗಳು ಕಲ್ಪಿಸಿರುವರಲ್ಲವೆ ? ಆದ್ದರಿಂದ ಅಜಾತವು ಹುಟ್ಟುತ್ತದೆಯಷ್ಟೆ[2], (ಆದ್ದರಿಂದ) ಅದಕ್ಕೆ ಹುಟ್ಟದೆ ಇರುವದೇ ಪ್ರಕೃತಿಯು[3]. ಆದ್ದರಿಂದ ಆದಕಾರಣ ಹುಟ್ಟದೆ ಇರುವದೆಂಬ ಪ್ರಕೃತಿಗೆ ಬೇರ್ಪಡುವದು, ಎಂದರೆ ಹುಟ್ಟುವದು ಹೇಗೂ ಆಗಲಾರದು.

## ಸಂಸಾರಮೋಕ್ಷಗಳು ಪರಮಾರ್ಥವೆಂದರೆ ದೋಷ

(ಭಾಷ್ಯ)

೨೭೦. ಅಯಂ ಚ ಅಪರಃ ಆತ್ಮನಃ ಸಂಸಾರಮೋಕ್ಷಯೋಃ ಪರಮಾರ್ಥ ಸದ್ಭಾವವಾದಿನಾಂ ದೋಷಃ ಉಚ್ಯತೇ-

---

1. ಯಾವನೂ ಹುಟ್ಟುವದಿಲ್ಲವೆಂಬುದನ್ನು ವಾದಿಗಳು ತಮ್ಮ ವಿವಾದದಿಂದ ಸಿದ್ಧಪಡಿಸುತ್ತಾರೆಂದು ಹಿಂದೆ ೪ನೆಯ ಕಾರಿಕೆಯಲ್ಲಿ ಪ್ರತಿಜ್ಞೆಮಾಡಿತ್ತಲ್ಲ, ಅದನ್ನು.

2. ಅಜಾತವು ಹುಟ್ಟುತ್ತದೆ ಎಂದರೆ ಹುಟ್ಟಿತೆಂದು ಹೇಳುತ್ತಾರೆ ಎಂದರ್ಥ.

3. ಸ್ವಭಾವವು.

(ಭಾಷ್ಯಾರ್ಥ)

ಆತ್ಮನಿಗೆ ಸಂಸಾರಮೋಕ್ಷಗಳು ಪರಮಾರ್ಥವಾಗಿ ಇರುವವೆಂಬ ವಾದಿಗಳ (ಮತದಲ್ಲಿ) ಈ ಇನ್ನೊಂದು[1] ದೋಷವನ್ನು ಹೇಳುತ್ತಾರೆ :-

ಅನಾದೇರನ್ತವತ್ತ್ವಂ ಚ ಸಂಸಾರಸ್ಯ ನ ಸೇತ್ಸ್ಯತಿ ।
ಅನನ್ತತಾ ಚಾದಿಮತೋ ಮೋಕ್ಷಸ್ಯ ನ ಭವಿಷ್ಯತಿ ॥೩೦॥

೩೦. ಅನಾದಿಯಾದ ಸಂಸಾರಕ್ಕೆ ಅಂತವಿರುವದೆಂಬುದು ಸಿದ್ಧಿಸಲಾರದು ; ಆದ್ಧಿಯುಳ್ಳ ಮೋಕ್ಷಕ್ಕೆ ಅನಂತತ್ವವೂ ಆಗಲಾರದು.

೨೭೧. ಅನಾದೇಃ ಅತೀತಕೋಟಿರಹಿತಸ್ಯ ಸಂಸಾರಸ್ಯ ಅನ್ತವತ್ತ್ವಂ ಸಮಾಪ್ತಿಃ ನ ಸೇತ್ಸ್ಯತಿ. ಯುಕ್ತಿತಃ ಸಿದ್ಧಿಂ ನೋಪಯಾಸ್ಯತಿ । ನ ಹಿ ಅನಾದಿಃ ಸನ್ ಅನ್ತವಾನ್ ಕಶ್ಚಿತ್ ಪದಾರ್ಥಃ ದೃಷ್ಟಃ ಲೋಕೇ । ಬೀಜಾಙ್ಕುರಸಮ್ಬನ್ಧನೈರನ್ತರ್ಯವಿಚ್ಛೇದೋ ದೃಷ್ಟಃ ಇತಿ ಚೇತ್ । ನ । ಏಕವಸ್ತ್ವಭಾವೇನ ಅಪೋಟಿತತ್ವಾತ್ । ತಥಾ ಅನನ್ತತಾಪಿ ವಿಜ್ಞಾನಪ್ರಾಪ್ತಿಕಾಲಪ್ರಭವಸ್ಯ ಮೋಕ್ಷಸ್ಯ ಆದಿಮತಃ ನ ಭವಿಷ್ಯತಿ । ಘಟಾದಿಷು ಅದರ್ಶನಾತ್ । ಘಟಾದಿವಿನಾಶವತ್ ಅವಸ್ತುತ್ವಾತ್ ಅದೋಷಃ ಇತಿ ಚೇತ್ । ತಥಾ ಚ ಮೋಕ್ಷಸ್ಯ ಪರಮಾರ್ಥಸದ್ಭಾವಪ್ರತಿಜ್ಞಾಹಾನಿಃ । ಅಸತ್ತ್ವಾದೇವ ಶಶವಿಷಾಣಸ್ಯೇವ ಆದಿಮತ್ತ್ವಾಭಾವಶ್ಚ ॥

(ಭಾಷ್ಯಾರ್ಥ)

ಅನಾದಿಯಾದ ಹಿಂದೆ (ಇರುವ)ದೆಂಬ ಕೋಟಿಯಿಲ್ಲದ ಸಂಸಾರಕ್ಕೆ (ಇಲ್ಲಿಗೆ) ಮುಗಿಯಿತೆಂಬುದು ಸಿದ್ಧಿಸಲಾರದು, ಯುಕ್ತಿಯಿಂದ ಸಿದ್ಧಿಯನ್ನು ಹೊಂದಲಾರದು[2]. ಏಕೆಂದರೆ ಅನಾದಿಯಾಗಿದ್ದು ಕೊನೆಯುಳ್ಳದ್ದಾಗಿರುವ ಯಾವ ಪದಾರ್ಥವೂ ಲೋಕದಲ್ಲಿ ಕಂಡುಬಂದಿರುವದಿಲ್ಲ. ಬೀಜ, ಅಂಕುರ- ಇವುಗಳ ಸಂಬಂಧ ಪ್ರವಾಹವು ನಾಶವಾದದ್ದು ಕಂಡುಬಂದಿಲ್ಲವೆ ? ಎಂದರೆ ಇಲ್ಲ. ಏಕೆಂದರೆ (ಆ ದೃಷ್ಟಾಂತದಲ್ಲಿ ಅನಾದಿಯಾದ) ಯಾವದೊಂದು ವಸ್ತುವೂ ಇಲ್ಲವೆಂದು (ಇದಕ್ಕೆ) ಪರಿಹಾರವನ್ನು (ಆಗಲೆ) ಹೇಳಿರುತ್ತೇವೆ[3].

1. ಹುಟ್ಟಿಲ್ಲದ ಆತ್ಮನಿಗೆ ಹುಟ್ಟನ್ನು ಹೇಳುವ ದೋಷವಲ್ಲದೆ ಮತ್ತೊಂದು ದೋಷವನ್ನೂ ಹೇಳುತ್ತಾರೆ ಎಂದರ್ಥ.

2. ಗೀ. ಭಾ. ೧೩-೨ (ಭಾ. ಭಾ. ೨೨೦)ನೋಡಿ. 3. ೪-೨೦ರಲ್ಲಿ.

ಇದರಂತೆ ಜ್ಞಾನವನ್ನು ಪಡೆಯುವ ಕಾಲದಲ್ಲಿಯೇ ಹುಟ್ಟುವದಾಗಿ ಆದಿಯುಳ್ಳ ಮೋಕ್ಷಕ್ಕೆ ಅಂತವಿಲ್ಲವೆಂಬುದೂ ಆಗಲಾರದು[1]. ಏಕೆಂದರೆ (ಆದಿಯುಳ್ಳ) ಗಡಿಗಯೇ ಮುಂತಾದವುಗಳಲ್ಲಿ (ಹೀಗೆ ಅಂತವಿಲ್ಲದಿರುವದು) ಕಂಡುಬಂದಿಲ್ಲ. ಗಡಿಗೆಯೇ ಮುಂತಾದವುಗಳು ಪ್ರಾಗಭಾವದಂತೆ[2] (ಇದೂ) ಅಭಾವರೂಪವಾಗಿರುವದರಿಂದ (ಹೀಗೆ ಅಂಗೀಕರಿಸುವದರಲ್ಲಿ) ಯಾವ ದೋಷವೂ ಇಲ್ಲವಲ್ಲ !-ಎಂದರೆ ಆಗ ಮೋಕ್ಷವು ನಿಜವಾಗಿಯೂ ಇರುವ ಪರಮಪುರುಷಾರ್ಥವೆಂದು ಮಾಡಿದ ಪ್ರತಿಜ್ಞೆಯನ್ನು ಬಿಟ್ಟಂತೆ ಆಗುವದು. ಅಸತ್ಯವಿರುವಪದಾರ್ಥದಲ್ಲಿ ಪೊಲದಕೊಂಬಿಗೆ ಹೇಗೆ (ಆದಿಯಿಲ್ಲವೋ ಅದರಂತೆ ಇದಕ್ಕೂ) ಆದಿಯಿಲ್ಲದೆ ಹೋಗುವದು[3].

## ಜಾಗ್ರತ್ಪದಾರ್ಥಗಳು ಮಿಥ್ಯೆ, ಆದ್ದರಿಂದಲೂ ಸಂಸಾರಮೋಕ್ಷಗಳಿಲ್ಲ

ಆದಾವನ್ತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ।
ವಿತಥೈಃ ಸದೃಶಾಃ ಸನ್ತೋಽವಿತಥಾ ಇವ ಲಕ್ಷಿತಾಃ ॥೩೧॥
ಸಪ್ರಯೋಜನತಾ ತೇಷಾಂ ಸ್ವಪ್ನೇ ವಿಪ್ರತಿಪದ್ಯತೇ ।
ತಸ್ಮಾದಾದ್ಯನ್ತವತ್ತ್ವೇನ ಮಿಥ್ಯೈವ ಖಲು ತೇ ಸ್ಮೃತಾಃ ॥೩೨॥

೩೧-೩೨. ಮೊದಲಿನಲ್ಲಿಯೂ ಕೊನೆಯಲ್ಲಿಯೂ ಯಾವದು ಇಲ್ಲವೋ ಅದು ಈಗಲೂ ಹಾಗೆಯೇ. ವಿತಥಗಳಿಗೆ ಸಮಾನವಾಗಿದ್ದುಕೊಂಡು ಅವಿತಥಗಳಂತೆ ಕಾಣುತ್ತಿರುವವು. ಅವುಗಳಿಗೆ (ಇರುವ) ಸಪ್ರಯೋಜನತ್ವವು ಕನಸಿನಲ್ಲಿ ವಿರುದ್ಧವಾದ ಅಭಿಪ್ರಾಯಕ್ಕೆ ಆಸ್ಪದವಾಗುತ್ತದೆ. ಆದ್ದರಿಂದ ಆದ್ಯಂತಗಳಿರುವದರಿಂದ ಅವು ಮಿಥ್ಯೆಯೇ ಎನಿಸುವವು.

1. ಜ್ಞಾನವು ಇದ್ದ ಮೋಕ್ಷವನ್ನು ತೆಗೆಸದೆ, ಹೊಸದಾಗಿ ಮೋಕ್ಷವನ್ನುಂಟುಮಾಡುವದೆಂದರೆ ಈ ದೋಷ 2 ಪ್ರಾಗಭಾವವೇ ಮೋಕ್ಷವೆಂಬ ತಾರ್ಕಿಕರ ಮತದಲ್ಲಿ ಆದಿಯುಳ್ಳ ಅಂತವಿಲ್ಲದ ಪ್ರಧ್ವಂಸಾಭಾವವನ್ನು ದೃಷ್ಟಾಂತವಾಗಿ ಕೊಟ್ಟರೂ ಕೊಡಬಹುದು. ಮೋಕ್ಷವು ಭಾವರೂಪವೆಂಬುವರಿಗೆ ಈ ದೃಷ್ಟಾಂತವೂ ಇಲ್ಲವೆಂದು.

3 ಪ್ರಧ್ವಂಸಾಭಾವದಂತೆ ಪದಾರ್ಥಕ್ಕೆ ಆದಿಯಿದೆ ಎಂಬ ತಾರ್ಕಿಕರ ಮತವು ಸರಿಯಲ್ಲ. ಏಕೆಂದರೆ ಅಭಾವವೆಂದರೆ ತುಚ್ಛ ಇಲ್ಲದ್ದು, ಅದಕ್ಕೆ ಆದಿ ಎಲ್ಲಿಂದ ಬರಬೇಕು ?.. ಎಂದು ಭಾವ. ತೈ. ಭಾ. ಭಾ. ೯, ೧೦ ಭಾ. ೨೨-೨೪ (ಭಾ ಭಾ. ೫೫೭) ಇವುಗಳಲ್ಲಿ ಅಭಾವವು ವಿಕಲ್ಪ ಮಾತ್ರವೆಂದು ತೋರುವದೆ

(ಭಾಷ್ಯ)

೨೭೨. ಷ್ಟೇ ಕೃತವ್ಯಾಖ್ಯಾನೌ ಶ್ಲೋಕೌ ಇಹ ಸ
ಪ್ರಸಙ್ಗೇನ ಪಠಿತೌ ॥

(ಭಾಷ್ಯಾರ್ಥ)

ವೈತಥ್ಯದಲ್ಲಿ[1] (ಇವೆರಡು) ಶ್ಲೋಕಗಳಿಗೂ ವ್ಯಾಖ್ಯಾನಮಾಡಿರುತ್ತದೆ. ಸಂಸಾರ ಮೋಕ್ಷಗಳು (ನಿಜವಾಗಿ) ಇಲ್ಲವೆಂದು (ಹೇಳುವ) ಪ್ರಸಕ್ತಿಯಿಂದ (ಇದನ್ನು ಮತ್ತೆ ಇಲ್ಲಿ) ಹೇಳಿದೆ.

## ಕನಸಿನಂತೆ ಎಚ್ಚರವೂ ಮಿಥ್ಯೆ

(ಭಾಷ್ಯ)

೨೭೩. "ನಿಮಿತ್ತಸ್ಯಾನಿಮಿತ್ತತ್ವಮಿಷ್ಯತೇ ಭೂತದರ್ಶನಾತ್" (೪-೨೫) ಇತ್ಯ-
ಯಮ್ ಅರ್ಥಃ ಪ್ರಪಞ್ಚ್ಯತೇ ಏತೈಃ ಶ್ಲೋಕೈಃ-

(ಭಾಷ್ಯಾರ್ಥ)

"ನಿಮಿತ್ತವು ನಿಮಿತ್ತವಲ್ಲವೆಂದು ಭೂತದರ್ಶನದಿಂದ ಒಪ್ಪಿರುತ್ತೇವೆ" (೪-೨೫) ಎಂಬೀ ವಿಷಯವನ್ನು ಈ ಶ್ಲೋಕಗಳಿಂದ ವಿವರಿಸುತ್ತಾರೆ :-

**ಸರ್ವೇ ಧರ್ಮಾ ಮೃಷಾ ಸ್ವಪ್ನೇ ಕಾಯಸ್ಯಾನ್ತರ್ನಿದರ್ಶನಾತ್ ।**
**ಸಂವೃತೇಽಸ್ಮಿನ್ ಪ್ರದೇಶೇ ವೈ ಭೂತಾನಾಂ ದರ್ಶನಂ ಕುತಃ ॥೩೩॥**

೩೩. ಕನಸಿನಲ್ಲಿ (ಕಾಣುವ) ಎಲ್ಲಾ ಧರ್ಮಗಳೂ[2] ಸುಳ್ಳೇ ; ಏಕೆಂದರೆ ಅವು ಶರೀರದ ಒಳಗಡೆ ಕಾಣಬರುತ್ತವೆ[3]. ಸಂಕುಚಿತವಾದ ಈ ಸ್ಥಳದಲ್ಲಿ ಭೂತಗಳನ್ನು[4] ನೋಡುವದೆಲ್ಲಿ (ಬಂತು) ?

1. ೨-೬, ೭ ಈ ಕಾರಿಕೆಗಳು. ಸಕಲಪದಾರ್ಥಗಳೂ ಮಿಥ್ಯೆಯಾಗಿರುವಲ್ಲಿ ಬಂಧಮೋಕ್ಷಗಳು ಹೇಗೆ ಸತ್ಯವಾಗುವವು ?-ಎಂದು ಭಾವ. 2. ಜೀವರೂ ಪದಾರ್ಥಗಳೂ.

3. ಎಚ್ಚರದ ಶರೀರದ ಒಳಗೇ ನಾವು ಕನಸನ್ನು ಕಾಣುತ್ತೇವೆಂಬುದು ಎಚ್ಚರದ ದೃಷ್ಟಿಯಿಂದ. ಈ ದೃಷ್ಟಿಯಿಂದ ಕನಸನ್ನು ಸುಳ್ಳೆಂದು ತೋರಿಸಿ ಆ ದೃಷ್ಟಾಂತದ ಬಲದಿಂದ ಎಚ್ಚರವನ್ನೂ ಸುಳ್ಳೆಂದು ೩೬ನೆಯ ಕಾರಿಕೆಯಲ್ಲಿ ಸಾಧಿಸಿರುತ್ತಾರೆ. ವ್ಯಾಖ್ಯಾನಕಾರರು ಕನಸಿನ ಶ್ಲೋಕಗಳನ್ನು ಎಚ್ಚರವು ಸುಳ್ಳೆಂದು ತೋರಿಸುವದಕ್ಕೂ ಉಪಯೋಗಿಸಿರುತ್ತಾರೆ.' ಉದಾಹರಣೆಗೆ ಈ ಶ್ಲೋಕದ 'ಕಾಯಸ್ಯಾನ್ತಃ' ಎಂಬುದಕ್ಕೆ ವಿರಾಡ್ದೇಹದಲ್ಲಿರುವದರಿಂದ ಎಚ್ಚರವೂ ಸುಳ್ಳು ಎಂದು ಬರೆದಿದ್ದಾರೆ. ಇದು ಅಷ್ಟು ಒಪ್ಪಾಗಿರುವದಿಲ್ಲ.

4. ಪ್ರಾಣಿಗಳನ್ನು ಮತ್ತು ಇತರ ಪದಾರ್ಥಗಳನ್ನು.

ನ ಯುಕ್ತಂ ದರ್ಶನಂ ಗತ್ವಾ ಕಾಲಸ್ಯಾನಿಯಮಾದ್ಗತೌ ।
ಪ್ರತಿಬುದ್ಧಶ್ಚ ವೈ ಸರ್ವಸ್ತಸ್ಮಿನ್ ದೇಶೇ ನ ವಿದ್ಯತೇ ॥೩೪॥

೩೪. ಹೋಗಿ (ಪದಾರ್ಥಗಳನ್ನು) ನೋಡುತ್ತಾನೆಂಬುದು ಯುಕ್ತವಲ್ಲ ; ಏಕೆಂದರೆ (ಅಲ್ಲಿ) ಹೋಗುವದಕ್ಕೆ (ಬೇಕಾದ) ಕಾಲ (ವಿಷ್ಟಿರಬೇಕೆಂಬ) ನಿಯಮವಿರುವದಿಲ್ಲ. ಎಚ್ಚೆತ್ತವನು ಯಾವನೂ ಆ ದೇಶದಲ್ಲಿರುವದಿಲ್ಲ.

(ಭಾಷ್ಯ)

೨೭೪. ಜಾಗರಿತೇ ಗತ್ಯಾಗಮನಕಾಲೋ ನಿಯತಃ[1] ದೇಶ[2] ಪ್ರಮಾಣತಃ ಯಃ ತಸ್ಯ ಅನಿಯಮಾತ್ ನಿಯಮಸ್ಯ ಅಭಾವಾತ್ ಸ್ವಪ್ನೇ ನ ದೇಶಾನ್ತರಗಮನಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಎಚ್ಚರದಲ್ಲಿ ದೇಶಪ್ರಮಾಣದಿಂದ[3] ಹೋಗಿ ಬರುವದಕ್ಕೆ ಎಷ್ಟು ಕಾಲವು ಗೊತ್ತಾಗಿರುವದೋ, ಅದರ ಅನಿಯಮವಿರುವದರಿಂದ ನಿಯಮವಿರುವದಿಲ್ಲವಾದ್ದರಿಂದ ಕನಸಿನಲ್ಲಿ ಬೇರೊಂದು ಸ್ಥಲಕ್ಕೆ (ನಿಜವಾಗಿ) ಹೋಗಿರುವದಿಲ್ಲ ಎಂದರ್ಥ[4].

ಮಿತ್ರಾದ್ಯೈಃ ಸಹ ಸಮ್ಮನ್ತ್ರ್ಯ ಸಮ್ಬುದ್ಧ್ಯೇ ನ ಪ್ರಪದ್ಯತೇ ।
ಗೃಹೀತಂ ಚಾಪಿ ಯತ್ಕಿಂಚಿತ್ ಪ್ರತಿಬುದ್ಧ್ಯೇ ನ ಪಶ್ಯತಿ ॥೩೫॥

೩೫. ಮಿತ್ರರೇ ಮುಂತಾದವರೊಡನೆ ಆಲೋಚನೆಮಾಡಿ ಎಚ್ಚೆತ್ತವನು (ಅದನ್ನು) ನಂಬುವದಿಲ್ಲ. ಮತ್ತು ಯಾವದನ್ನಾದರೂ ತೆಗೆದುಕೊಂಡಿದ್ದರೆ (ಅದನ್ನು) ಎಚ್ಚೆತ್ತವನು ಕಾಣುವದಿಲ್ಲ.

(ಭಾಷ್ಯ)

೨೭೫. ಮಿತ್ರಾದ್ಯೈಃ ಸಹ ಸಮ್ಮನ್ತ್ರ್ಯ ತದೇವ ಮನ್ತ್ರಣಂ ಪ್ರತಿಬುದ್ಧಃ ನ ಪ್ರಪದ್ಯತೇ । ಗೃಹೀತಂ ಚ ಯತ್ಕಿಂಚಿತ್ ಹಿರಣ್ಯಾದಿ ನ ಪ್ರಾಪ್ನೋತಿ । ತತಶ್ಚ[5] ನ ದೇಶಾನ್ತರಂ ಗಚ್ಛತಿ ಸ್ವಪ್ನೇ ॥

1. "ಗತ್ಯಾಗಮನಕಾಲೌ ನಿಯತೌ" ವಾ॥ ಮೈ॥

2. "ದೇಶಃ" ಎಂಬ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

3. ಎಚ್ಚರದಲ್ಲಿ ಇಷ್ಟು ದೂರಕ್ಕೆ ಹೋಗಿಬರುವದಕ್ಕೆ ಇಷ್ಟು ಕಾಲವು ಬೇಕೆಂಬ ನಿಯಮವಿರುವದು. ಅದರೂ ರಾಮೇಶ್ವರದಲ್ಲಿ ಮಲಗಿದವನು ಕಾಶಿಗೆ ಹೋದಂತೆ ಒಂದು ಘಳಿಗೆಯೊಳಗಾಗಿ ಕನಸುಕಾಣುತ್ತಾನೆ !

4. ಈ ಕಾರಿಕೆಯ ಉತ್ತರಾರ್ಧವು ೨-೨ ರಲ್ಲಿದೆ ; ಆ ಕಾರಿಕೆಯ ಭಾಷ್ಯವನ್ನು ನೋಡಿ.

5. "ಗತಶ್ಚ," ವಾ॥

(ಭಾಷ್ಯಾರ್ಥ)

ಮಿತ್ರರೇ ಮುಂತಾದವರೊಡನೆ (ಕನಸಿನಲ್ಲಿ) ಆಲೋಚನೆಮಾಡಿದ್ದರೂ ಎಚ್ಚತ್ತ ಮೇಲೆ ಅದೇ ಆಲೋಚನೆಯನ್ನು (ನಿಜವೆಂದು) ನಂಬುವದಿಲ್ಲ[1]. ಚಿನ್ನವೇ ಮುಂತಾಗಿ (ತಾನು) ತೆಗೆದುಕೊಂಡಿದ್ದ ಯಾವದಾದರೂ (ವಸ್ತುವನ್ನು) ಪಡೆದಿರುವದಿಲ್ಲ. ಆದ್ದರಿಂದಲೂ[2] ಕನಸಿನಲ್ಲಿ ಬೇರೊಂದು ಸ್ಥಲಕ್ಕೆ (ನಿಜವಾಗಿ) ಹೋಗಿರುವದಿಲ್ಲ.

ಸ್ವಪ್ನೇ ಚಾವಸ್ತುಕಃ ಕಾಯಃ ಪೃಥಗನ್ಯಸ್ಯ ದರ್ಶನಾತ್ ।
ಯಥಾ ಕಾಯಸ್ತಥಾ ಸರ್ವಂ ಚಿತ್ತದೃಶ್ಯಮವಸ್ತುಕಮ್ ॥೩೬॥

೩೬. ಕನಸಿನಲ್ಲಿರುವ ಶರೀರವು ಅಸತ್ಯ(ವಾಗಿರುತ್ತದೆ) ; ಏಕೆಂದರೆ (ಅದಕ್ಕಿಂತ) ಬೇರೆಯಾಗಿ ಮತ್ತೊಂದು ಕಾಣಿಸುತ್ತಿರುವದು. ಶರೀರವು ಹೇಗೋ ಹಾಗೆ ಚಿತ್ತದೃಶ್ಯವಾದದ್ದೆಲ್ಲವೂ ಅಸತ್ಯವೇ.

(ಭಾಷ್ಯ)

೨೭೬. ಸ್ವಪ್ನೇ ಚ ಅಟನ್ ದೃಶ್ಯತೇ ಯಃ ಕಾಯಃ ಸಃ ಅವಸ್ತುಕಃ । ತತಃ ಅನ್ಯಸ್ಯ ಪ್ರದೇಶಸ್ಥಸ್ಯ ಪೃಥಕ್ ಕಾಯಾನ್ತರಸ್ಯ ದರ್ಶನಾತ್ । ಯಥಾ ಸ್ವಪ್ನದೃಶ್ಯಃ ಕಾಯಃ ಅಸನ್ ತಥಾ ಸರ್ವಂ ಚಿತ್ತದೃಶ್ಯಮ್ ಅವಸ್ತುಕಂ ಜಾಗರಿತೇಽಪಿ । ಚಿತ್ತದೃಶ್ಯತ್ವಾತ್ ಇತ್ಯರ್ಥಃ । ಸ್ವಪ್ನಸಮತ್ವಾತ್ ಅಸತ್ ಜಾಗರಿತಮಪಿ ಇತಿ ಪ್ರಕರಣಾರ್ಥಃ ॥

(ಭಾಷ್ಯಾರ್ಥ)

ಮತ್ತು ಕನಸಿನಲ್ಲಿ ತಿರುಗಾಡುತ್ತಿ(ರುವಂತೆ) ಕಾಣುತ್ತಿರುವದಲ್ಲ, ಆ ಶರೀರವು ಅಸತ್ಯವು. ಏಕಂದರೆ ಅದಕ್ಕಿಂತ ಬೇರೆಯಾಗಿ ನಿದ್ರೆಮಾಡುತ್ತಿರುವ ಸ್ಥಲದಲ್ಲಿ ಮತ್ತೊಂದು ಶರೀರವು ಕಾಣುತ್ತಿರುವದು[3]. ಹೇಗೆ ಕನಸಿನಲ್ಲಿ ಕಾಣುವ ಶರೀರವು ಅಸತ್ಯವೋ ಹಾಗೆ

1. ಮಿತ್ರರೊಡನೆ ಮಾತನಾಡುತ್ತಿದ್ದಂತೆ ಕನಸಾಗಿ ಎಚ್ಚತ್ತವನಿಗೆ ಅವರೊಡನೆ ತಾನು ನಿಜವಾಗಿ ಮಾತನಾಡಿದನೆಂಬ ನಂಬಿಕೆಯಾಗುವದಿಲ್ಲ ; ಆ ಗೆಳೆಯರೂ ಕನಸಿನಲ್ಲಿ ನಿನ್ನೊಡನೆ ನಾವು ಮಾತನಾಡಿದೆವೆಂದು ಒಪ್ಪುವದಿಲ್ಲ. ಆ ಮಿತ್ರರಿದ್ದ ಬೇರೊಂದು ಸ್ಥಲಕ್ಕೆ ನಾವು ನಿಜವಾಗಿ ಹೋಗಿರಲಿಲ್ಲವೆಂದು ಇದರಿಂದ ಸಿದ್ಧವಾಯಿತು.

2. ಕನಸಿನ ಯಾವ ವಸ್ತುಗಳೂ ಎಚ್ಚರಕ್ಕೆ ಬರುವಹಾಗಿಲ್ಲ. ಅಂಥ ವಸ್ತುಗಳೇ ನಮಗೆ ಸಿಕ್ಕರೂ ಕನಸಿನ ಮತ್ತು ಎಚ್ಚರದ ವಸ್ತುಗಳು ಅದೇ ವಸ್ತುಗಳು ಎಂದು ನಂಬುವದಕ್ಕೆ ಯಾವ ಪ್ರಮಾಣವೂ ಇರುವದಿಲ್ಲ.

3. ಈ ಶರೀರವು ಕಾಣುವದೆಂಬುದು ಎಚ್ಚರವಾಗಿರುವ ಮತ್ತೊಬ್ಬರ ದೃಷ್ಟಿಯಿಂದ.

ಚಿತ್ತದೃಶ್ಯವಾದ ಎಲ್ಲವೂ ಎಚ್ಚರದಲ್ಲಿಯೂ ಅಸತ್ಯವೇ ; ಏಕೆಂದರೆ (ಕನಸಿನ ದೃಶ್ಯ ದಂತೆ ಅದೂ) ಚಿತ್ತದೃಶ್ಯವಾಗಿರುತ್ತದೆ[1]. ಕನಸಿಗೆ ಸಮನಾಗಿರುವದರಿಂದ ಎಚ್ಚರವೂ ಸುಳ್ಳೇ ಎಂಬುದು ಪ್ರಕರಣದ ಅರ್ಥವು.

## ಎಚ್ಚರಕನಸುಗಳಿಗೆ ಕಾರ್ಯಕಾರಣಭಾವವಿಲ್ಲ

(ಭಾಷ್ಯ)

೨೭೭. ಇತರಸ್ಯ ಅಸತ್ತ್ವೇ ಜಾಗರಿತವಸ್ತುನಃ-

(ಭಾಷ್ಯಾರ್ಥ)

ಈ (ಕಾರಣ)ವಿಂದಲೂ ಎಚ್ಚರದ ವಸ್ತು ಅಸತ್ಯ :-

ಗ್ರಹಣಾಜ್ಜಾಗರಿತವತ್ ತದ್ಧೇತುಃ ಸ್ವಪ್ನ ಇಷ್ಯತೇ ।
ತದ್ಧೇತುತ್ವಾತ್ತು ತಸ್ಯೈವ ಸಜ್ಜಾಗರಿತಮಿಷ್ಯತೇ ॥೩೭॥

೩೭. ಎಚ್ಚರದಂತೆ ಕಂಡುಬರುವದರಿಂದ ಸ್ವಪ್ನವು ತದ್ಧೇತುವೆನಿಸುವದು. ಆದರೆ ತದ್ಧೇತುವಾಗಿರುವದರಿಂದ ಅವನಿಗೇ ಎಚ್ಚರವು ಇರುವದೆನಿಸುವದು.

(ಭಾಷ್ಯ)

೨೭೮. ಜಾಗರಿತವತ್ ಜಾಗರಿತಸ್ಯೇವ ಗ್ರಹಣಾತ್ ಗ್ರಾಹ್ಯಗ್ರಾಹಕರೂಪೇಣ ಸ್ವಪ್ನಸ್ಯ ತತ್ ಜಾಗರಿತಂ ಹೇತುಃ ಅಸ್ಯ ಸ್ವಪ್ನಸ್ಯ ಸ ಸ್ವಪ್ನಃ ತದ್ಧೇತುಃ ಜಾಗರಿತ ಕಾರ್ಯಮ್ ಇಷ್ಯತೇ । ತದ್ಧೇತುತ್ವಾತ್ (ತು) ಜಾಗರಿತಕಾರ್ಯತ್ವಾತ್ ತಸ್ಯೈವ ಸ್ವಪ್ನ ದೃಶ ಏವ ಸತ್ ಜಾಗರಿತಮ್ ನ ತು ಅನ್ಯೇಷಾಮ್ । ಯಥಾ ಸ್ವಪ್ನಃ ಇತ್ಯಭಿಪ್ರಾಯಃ । ಯಥಾಸ್ವಪ್ನಃ ಸ್ವಪ್ನದೃಶ ಏವ ಸನ್ ಸಾಧಾರಣವಿದ್ಯಮಾನವಸ್ತುವತ್ ಅವಭಾಸತೇ, ತಥಾ ತತ್ಕಾರಣತ್ವಾತ್ ಸಾಧಾರಣವಿದ್ಯಮಾನವಸ್ತುವತ್ ಅವಭಾಸಮಾನಮ್ । ನ ತು ಸಾಧಾರಣಂ ವಿದ್ಯಮಾನವಸ್ತು ಸ್ವಪ್ನವದೇವ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಎಚ್ಚರದಂತೆ, ಅರಿಯಲ್ಪಡತಕ್ಕದ್ದು ಅರಿಯುವದು-ಎಂಬ ರೂಪದಿಂದ ಎಚ್ಚರ ದಂತೆ ಕಾಣಬರುವದರಿಂದ ಸ್ವಪ್ನವು ತದ್ಧೇತು-ಅದು, ಎಚ್ಚರವು ಈ ಕನಸಿಗೆ ಹೇತು ವಾಗಿರುವದರಿಂದ ಈ ಸ್ವಪ್ನವು ತದ್ಧೇತು-ಎಚ್ಚರದ ಕಾರ್ಯವು ಎನಿಸುವದು. ಆದರೆ

1. ಎಚ್ಚರದಲ್ಲಿ ಕಾಣುವದೆಲ್ಲವೂ ಮಿಥ್ಯೆ ; ಏಕೆಂದರೆ ಅದು ಕನಸಿನ ಶರೀರಾದಿಗಳಂತೆ ಚಿತ್ತ ದೃಶ್ಯವಾಗಿರುತ್ತದೆ-ಎಂಬ ಅನುಮಾನವು ಇಲ್ಲಿ ಸೂಚಿತವಾಗಿದೆ ಎಂದು ಭಾವ.

ತದ್ಧೇತುವಾಗಿರುವದರಿಂದ ಎಚ್ಚರದ ಕಾರ್ಯವಾಗಿರುವದರಿಂದ ಅವನಿಗೇ (ಆ) ಕನಸುಕಾಣುವವನಿಗೇ (ಆ) ಎಚ್ಚರವು ಇರುವದೇ ಹೊರತು ಮತ್ತೊಬ್ಬರಿಗಿರುವದಿಲ್ಲ. ಕನಸಿನಂತೆಯೇ (ಇದು) ಎಂದು ಅಭಿಪ್ರಾಯ. ಹೇಗೆ ಕನಸು ಕನಸುಕಾಣುವವನಿಗೇ ಇರುವದಾದರೂ (ಎಲ್ಲರಿಗೂ) ಸಮಾನವಾಗಿರುವ ವಸ್ತುವಿನಂತೆ ತೋರುತ್ತಿರುವದೋ ಅದರಂತೆ ಅದಕ್ಕೆ ಕಾರಣವಾಗಿರುವದರಿಂದ[1] (ಎಚ್ಚರವೂ ಎಲ್ಲರಿಗೂ) ಸಮಾನವಾಗಿರುವ ವಸ್ತುವಿನಂತೆ ತೋರುವದು. ಆದರೆ ಕನಸಿನಂತೆಯೇ (ಅದು ಎಲ್ಲರಿಗೂ) ಸಮಾನವಾಗಿರುವ ವಸ್ತುವಲ್ಲ ಎಂದು ಅಭಿಪ್ರಾಯ[2].

(ಭಾಷ್ಯ)

೨೭೯. ನನು ಸ್ವಪ್ನಕಾರಣತ್ವೇಽಪಿ ಜಾಗರಿತವಸ್ತುನಃ ನ ಸ್ವಪ್ನವತ್ ಅವಸ್ತುತ್ವಮ್ । ಅತ್ಯನ್ತಚಲೋ ಹಿ ಸ್ವಪ್ನಃ, ಜಾಗರಿತಂ ತು ಸ್ಥಿರಂ ಲಕ್ಷ್ಯತೇ । ಸತ್ಯಮ್ ಏವಮ್ ಅವಿವೇಕಿನಾಂ ಸ್ಯಾತ್ । ವಿವೇಕಿನಾಂ ತು ನ ಕಸ್ಯಚಿತ್ ವಸ್ತುನಃ ಉತ್ಪಾದಃ ಪ್ರಸಿದ್ಧಃ । ಅತಃ -

(ಭಾಷ್ಯಾರ್ಥ)

(ಆಕ್ಷೇಪ) :- ಎಚ್ಚರವೆಂಬ ವಸ್ತು ಕನಸಿಗೆ ಕಾರಣವಾಗಿರುವದಾದರೂ (ಅದು) ಕನಸಿನ (ವಸ್ತುವಿನಂತೆ) ಅಸತ್ಯವಲ್ಲ. ಏಕೆಂದರೆ ಕನಸು ಅತ್ಯಂತ ಚಂಚಲವಾಗಿರುತ್ತದೆ ; ಆದರೆ ಎಚ್ಚರವು ಸ್ಥಿರವಾಗಿ ಕಾಣುತ್ತದೆಯಲ್ಲ[3] !

(ಪರಿಹಾರ) :- ನಿಜ. ವಿಂಗಡಿಸಿ ತಿಳಿದುಕೊಳ್ಳಲಾರದವರಿಗೆ ಹಾಗೆಯೇ ಇರಬಹುದು. ಆದರೆ ವಿವೇಕಿಗಳಿಗೆ ಯಾವ ವಸ್ತುವೂ ಹುಟ್ಟುವದೆಂಬುದು ಸಿದ್ಧವಾಗಿರುವದಿಲ್ಲ. ಆದ್ದರಿಂದ-

1. ಕನಸು ಎಚ್ಚರದ ವಾಸನೆಯಿಂದಲೇ ಆಗುವದೆಂದು ಜನರು ಸಾಮಾನ್ಯವಾಗಿ ನಂಬುವದನ್ನು ಇಟ್ಟುಕೊಂಡು ಇಲ್ಲಿ ಹೇಳಿದೆ.

2. ಎಚ್ಚರವು ಎಲ್ಲರಿಗೂ ಸೇರಿದ್ದಾದರೆ ಅದರ ಕಾರ್ಯವಾದ ಕನಸೂ ಎಲ್ಲರಿಗೂ ಆಗಬೇಕು ; ಹಾಗಿಲ್ಲ. ಆದ್ದರಿಂದ ಎಚ್ಚರವೂ ಎಲ್ಲರಿಗೂ ಸಮಾನವೆಂಬುದು ಭ್ರಾಂತಿಯೇ. ಕನಸೂ ತನ್ನ ಕಾಲದಲ್ಲಿ ಅಲ್ಲಿ ತೋರುತ್ತಿರುವವರಿಗೆಲ್ಲ ಸಮಾನವಾದ ಎಚ್ಚರದಂತೆಯೇ ಕಂಡರೂ ಎಚ್ಚೆತ್ತ ಬಳಿಕ ಅದು ಕನಸುಕಂಡವನೊಬ್ಬನಿಗೇ ಆಯಿತೆಂದು ನಿಶ್ಚಯವಾಗುವಂತೆಯೇ ಎಚ್ಚರವೆಂಬವಸ್ಥೆಯನ್ನೂ ತಿಳಿಯಬೇಕು.

3. ಕನಸು ಒಂದೊಂದು ವೇಳೆ ಒಂದೊಂದು ಬಗೆಯಾಗಿ ತೋರುತ್ತದೆ ; ಕನಸಿನ ವಸ್ತುಗಳೂ ಕ್ಷಣಕ್ಕೊಂದು ರೂಪವನ್ನು ಪಡೆಯುತ್ತವೆ. ಎಚ್ಚರವು ಹೀಗಲ್ಲವಲ್ಲ !-ಎಂದು ಆಕ್ಷೇಪ.

ಉತ್ಪಾದಸ್ಯಾಪ್ರಸಿದ್ಧತ್ವಾ್ಜ್ಜದಜಂ ಸರ್ವಮುದಾಹೃತಮ್ ।
ನ ಚ ಭೂತಾದಭೂತಸ್ಯ ಸಂಭವೋಽಸ್ತಿ ಕಥಂಚನ ॥೩೮॥

೩೮. ಹುಟ್ಟುವದು ಪ್ರಸಿದ್ಧವಾಗಿಲ್ಲವಾದ್ದರಿಂದ ಎಲ್ಲವೂ ಅಜವೇ ಎಂದು ಹೇಳಲ್ಪಟ್ಟಿರುತ್ತದೆ. ಇರುವದರಿಂದ ಇಲ್ಲದ್ದು ಹುಟ್ಟುತ್ತದೆ ಎಂಬುದು ಹೇಗೂ ಆಗಲಾರದು.

(ಭಾಷ್ಯ)

೨೮೦. ಅಪ್ರಸಿದ್ಧತ್ವಾತ್ ಉತ್ಪಾದಸ್ಯ ಆತ್ಮೈವ ಸರ್ವಮ್ ಇತಿ ಅಜಂ ಸರ್ವಮ್ ಉದಾಹೃತಂ ವೇದಾನ್ತೇಷು "ಸ ಬಾಹ್ಯಾಭ್ಯನ್ತರೋ ಹ್ಯಜಃ" (ಮುಂ. ೨-೧-೨) ಇತಿ । ಯದಪಿ ಮನ್ಯಸೇ ಚಾಗರಿತಾತ್ ಸತಃ ಅಸನ್ ಸ್ವಪ್ನಃ ಜಾಯತೇ ಇತಿ, ತದಸತ್ । ನ ಭೂತಾತ್ ವಿದ್ಯಮಾನಾತ್ ಅಭೂತಸ್ಯ ಅಸತಃ ಸಮ್ಭವಃ ಅಸ್ತಿ ಲೋಕೇ । ನ ಹಿ ಅಸತಃ ಶಶವಿಷಾಣಾದೇಃ ಸಮ್ಭವಃ ದೃಷ್ಟಃ ಕಥಂಚಿದಪಿ ॥

(ಭಾಷ್ಯಾರ್ಥ)

ಹುಟ್ಟುವದೆಂಬುದು ಅಸಿದ್ಧವಾಗಿರುವದರಿಂದ ಎಲ್ಲವೂ ಆತ್ಮನೇ ಆಗಿರುವದರಿಂದ ಎಲ್ಲವೂ ಅಜವು ಎಂದು "ಹೊರಗೂ ಒಳಗೂ ಅಜನೇ" (ಮುಂ. ೨-೧-೨) ಎಂದು (ಮುಂತಾಗಿ) ವೇದಾಂತಗಳಲ್ಲಿ ಹೇಳಲ್ಪಟ್ಟಿರುತ್ತದೆ[1]. ಇನ್ನು (ನಿಜವಾಗಿ) ಇರುವ ಎಚ್ಚರದಿಂದ ಇಲ್ಲದ ಕನಸು ಉಂಟಾಗುವದು ಎಂದು ತಿಳಿದಿರುವೆಯಲ್ಲ, ಅದು ಸರಿಯಲ್ಲ. (ಏಕೆಂದರೆ) ಭೂತದಿಂದ ಇರುವದರಿಂದ ಅಭೂತವು ಇಲ್ಲದ್ದು ಹುಟ್ಟುವದೆಂಬುದು ಲೋಕದಲ್ಲಿ (ಎಲ್ಲಿಯೂ) ಆಗುವಹಾಗಿಲ್ಲ. ಇಲ್ಲದಿರುವ ಮೊಲದ ಕೊಂಬು ಮುಂತಾದದ್ದು ಹೇಗೂ[2] ಹುಟ್ಟುವದು ಕಂಡಿರುವದಿಲ್ಲವಲ್ಲವೆ ?

---

1. ಕನಸು ಹುಟ್ಟುವದೆಂದು ಒಪ್ಪಿದರಲ್ಲವೆ, ಅದಕ್ಕೂ ಎಚ್ಚರಕ್ಕೂ ಇರುವ ತಾರತಮ್ಯವು ಹೇಗೆಂಬುದನ್ನು ವಿವರಿಸಬೇಕಾಗುವದು, ವೇದಾಂತಿಗಳ ಮತದಲ್ಲಿ ಯಾವದೊಂದೂ ಹುಟ್ಟುವದೇ ಇಲ್ಲ.

2. ನಿಜವಾಗಿರುವ ಕಾರಣದಿಂದಲಾಗಲಿ, ಅಸತ್ತಿನಿಂದಲಾಗಲಿ ಎಂದರ್ಥ. ಯಾವದೂ ಹುಟ್ಟುವದೇ ಇಲ್ಲವೆಂಬುದನ್ನು ೪-೨೨ರಲ್ಲಿ ತಿಳಿಸಿದ್ದಾಗಿದೆ. ಕನಸು ಚಂಚಲವಾಗಿ ತೋರುವದೆಂಬುದನ್ನು ಒಪ್ಪಿದರೂ ಅತ್ಯಂತವಾಗಿ ಹುಟ್ಟದೆ ಇರುವ ಎಚ್ಚರಕನಸುಗಳಿಗೆ ಕಾರ್ಯಕಾರಣ ಭಾವವನ್ನು ಒಪ್ಪಬೇಕಾಗಿರುವದಿಲ್ಲವೆಂದು ಭಾವ. ಕನಸಿನ ಚಂಚಲತೆಯಾಗಲಿ ಅದು ಕನಸೆಂಬುದಾಗಲಿ ನಮಗೆ ಕನಸಿನ ಕಾಲದಲ್ಲಿ ಹೊಳೆಯುವದೇ ಇಲ್ಲ, ಅದು ಆಗ ಎಚ್ಚರವೆಂದೇ ತೋರುತ್ತಿರುತ್ತದೆ-ಎಂಬುದನ್ನು ಲಕ್ಷ್ಯಕ್ಕೆ ತಂದರೆ ಆಕ್ಷೇಪಕ್ಕೇ ಕಾರಣವಿರುವದಿಲ್ಲ.

(ಭಾಷ್ಯ)

೨೮೧. ನನು ಉಕ್ತಂ ತ್ವಯೈವ ಸ್ವಪ್ನಃ ಜಾಗರಿತಕಾರ್ಯಮ್ ಇತಿ । ತತ್ ಕಥಮ್ ಉತ್ಪಾದೋಽಪ್ರಸಿದ್ಧಃ ಇತ್ಯುಚ್ಯತೇ ? ಶೃಣು ತತ್ರ ಯಥಾ ಕಾರ್ಯಕಾರಣ ಭಾವಃ ಅಸ್ಮಾಭಿಃ ಅಭಿಪ್ರೇತ ಇತಿ ।।

(ಭಾಷ್ಯಾರ್ಥ)

(ಆಕ್ಷೇಪ) :- ಕನಸು ಎಚ್ಚರದ ಕಾರ್ಯವೆಂದು ನೀನೇ ಹೇಳಿದ್ದೆಯಲ್ಲ ! ಹೀಗಿರುವಲ್ಲಿ ಹುಟ್ಟುವದೆಂಬುದೇ ಅಸಿದ್ಧವೆಂದು (ನೀನು ಈಗ) ಹೇಳುವದು ಹೇಗೆ (ಸರಿ) ?

(ಸಮಾಧಾನ) :- ಅಲ್ಲಿ ಕಾರ್ಯಕಾರಣಭಾವವನ್ನು ಯಾವ ಅಭಿಪ್ರಾಯದಿಂದ (ಹೇಳಿದೆವೆಂಬುದನ್ನು ತಿಳಿಸುತ್ತೇವೆ) ಕೇಳು :-

ಅಸಜ್ಜಾಗರಿತೇ ದೃಷ್ಟ್ವಾ ಸ್ವಪ್ನೇ ಪಶ್ಯತಿ ತನ್ಮಯಃ ।
ಅಸತ್ಸ್ವಪ್ನೇಪಿ ದೃಷ್ಟ್ವಾ ಚ ಪ್ರತಿಬುದ್ಧೋ ನ ಪಶ್ಯತಿ ।।೩೯।।

೩೯. ಎಚ್ಚರದಲ್ಲಿ ಅಸತ್ತನ್ನು ಕಂಡು ತನ್ಮಯನಾಗಿ ಕನಸಿನಲ್ಲಿಯೂ (ಅದನ್ನು) ಕಾಣುತ್ತಾನೆ. ಮತ್ತು ಅಸತ್ತಾದದ್ದನ್ನು ಕನಸಿನಲ್ಲಿಯೂ ಕಂಡು ಎಚ್ಚೆತ್ತರೆ (ಅದನ್ನು) ಕಾಣುವದಿಲ್ಲ.

(ಭಾಷ್ಯ)

೨೮೨. ಅಸತ್ ಅವಿದ್ಯಮಾನಂ ರಜ್ಜುಸರ್ಪವತ್ ಪಿಕಲ್ಪಿತಂ ವಸ್ತು ಜಾಗರಿತೇ ದೃಷ್ಟ್ವಾ ತದ್ಭಾವಭಾವಿತಃ ತನ್ಮಯಃ ಸ್ವಪ್ನೇಽಪಿ ಜಾಗರಿತವತ್ ಗ್ರಾಹ್ಯಗ್ರಾಹಕರೂಪೇಣ ವಿಕಲ್ಪಯನ್ ಪಶ್ಯತಿ । ತಥಾ ಅಸತ್ ಸ್ವಪ್ನೇಽಪಿ ದೃಷ್ಟ್ವಾ ಚ ಪ್ರತಿಬುದ್ಧಃ ನ ಪಶ್ಯತಿ ಅವಿಕಲ್ಪಯನ್ । ಚಶಬ್ದಾತ್ ತಥಾ ಜಾಗರಿತೇಽಪಿ ದೃಷ್ಟ್ವಾ ಸ್ವಪ್ನೇ ನ ಪಶ್ಯತಿ ಕದಾಚಿತ್ ಇತ್ಯರ್ಥಃ । ತಸ್ಮಾತ್ ಜಾಗರಿತಂ ಸ್ವಪ್ನ ಹೇತುಃ ಇತ್ಯುಚ್ಯತೇ । ನ ತು ಪರಮಾರ್ಥಸತ್ ಇತಿ ಕೃತ್ವಾ

(ಭಾಷ್ಯಾರ್ಥ)

ಅಸತ್ತಾದದ್ದನ್ನು[1] (ನಿಜವಾ)ಗಿಲ್ಲದ್ದನ್ನು ಹಗ್ಗದ ಹಾಗಿನಂತೆ ಪಿಕಲ್ಪಿತವಾಗಿರುವ

1. ತೋರಿದ್ದು ನಿಜವಾಗಿರಬೇಕೆಂಬ ನಿಯಮವೇನೂ ಇಲ್ಲ . ಉದಾಹರಣೆಗೆ ಹಗ್ಗದ ಹಾವು ಅಸತ್ತೆಂಬುದು ಎಲ್ಲರಿಗೂ ಸಮ್ಮತ. ಆದ್ದರಿಂದ ತೋರಿಕೆಯಾದ ಎಚ್ಚರಿಕೆಯ ವಸ್ತುವೆಲ್ಲವೂ ಹೀಗೆಯೇ ಅಸತ್ತೆನ್ನಬಹುದು.

ವಸ್ತುವನ್ನು ಎಚ್ಚರದಲ್ಲಿ ಕಂಡು ಅದೇ ಭಾವನೆಯು ಊರಿಕೊಂಡು ತನ್ಮಯನಾಗಿ ಕನಸಿನಲ್ಲಿಯೂ ಎಚ್ಚರದಂತೆ ಅರಿಯಲ್ಪಡತಕ್ಕದ್ದು, ಅರಿಯುವದು-ಎಂಬ ರೂಪದಿಂದ ವಿಕಲ್ಪಿಸಿ ಕಾಣುತ್ತಾನೆ[1]. ಮತ್ತು ಹಾಗೂ ಕನಸಿನಲ್ಲಿಯೂ ಅಸತ್ತಾದದ್ದನ್ನು ಕಂಡು ಎಚ್ಚತ್ತಮೇಲೆ (ಹಾಗೆ) ವಿಕಲ್ಪಿಸಿಕೊಳ್ಳದ್ದರಿಂದ (ಅದನ್ನು) ಕಾಣುವದಿಲ್ಲ. (ಮೂಲದಲ್ಲಿ) ಚ (ಮತ್ತು) ಎಂಬ ಮಾತಿರುವದರಿಂದ ಹಾಗೆಯೇ ಎಚ್ಚರದಲ್ಲಿಯೂ ಕಂಡು ಕನಸಿನಲ್ಲಿ ಕೆಲವುವೇಳೆ ಕಾಣುವದಿಲ್ಲ ಎಂದರ್ಥ. ಆದ್ದರಿಂದ[2] ಎಚ್ಚರವು ಕನಸಿಗೆ ಕಾರಣವೆಂದು ಹೇಳಿದೆಯೇ ಹೊರತು (ಅದು) ನಿಜವಾಗಿರುವದೆಂದು ಮಾಡಿಕೊಂಡೇನೂ (ಹೇಳಿರುವ)ದಿಲ್ಲ.

(ಭಾಷ್ಯ)

೨೮೩. ಪರಮಾರ್ಥತಸ್ತು ನ ಕಸ್ಯಚಿತ್ ಕೇನಚಿದಪಿ ಪ್ರಕಾರೇಣ ಕಾರ್ಯ ಕಾರಣಭಾವ ಉಪಪದ್ಯತೇ । ಕಥಮ್ ?

(ಭಾಷ್ಯಾರ್ಥ)

ಆದರೆ ಪರಮಾರ್ಥವಾಗಿ ನೋಡಿದರೆ ಯಾವದಕ್ಕೂ ಯಾವದರೊಡನೆಯೂ ಯಾವ ಪ್ರಕಾರದಿಂದಲೂ ಕಾರ್ಯಕಾರಣಭಾವವು ಹೊಂದುವದಿಲ್ಲ. ಹೇಗೆಂದರೆ :-

ನಾಸ್ತ್ಯಸದ್ಧೇತುಕಮಸತ್ ಸದಸದ್ಧೇತುಕಂ ತಥಾ ।
ಸಚ್ಚ ಸದ್ಧೇತುಕಂ ನಾಸ್ತಿ ಸದ್ಧೇತುಕಮಸತ್ ಕುತಃ ॥೪೦॥

೪೦. ಅಸದ್ಧೇತುಕವಾದ ಅಸತ್ತು ಇರುವದಿಲ್ಲ ; ಹಾಗೂ ಅಸದ್ಧೇತುಕವಾದ ಸತ್ತೂ (ಇರುವದಿಲ್ಲ). ಸದ್ಧೇತುಕವಾದ ಸತ್ತು ಇರುವದಿಲ್ಲ. ಸದ್ಧೇತುಕವಾದ ಅಸತ್ತು ಎಲ್ಲಿಯದು ?

(ಭಾಷ್ಯ)

೨೮೪. ನಾಸ್ತಿ ಅಸದ್ಧೇತುಕಮ್ । ಅಸತ್ ಶಶವಿಷಾಣಾದಿ ಹೇತುಃ ಕಾರಣಂ ಯಸ್ಯ ಅಸತ ಏವ ವಿಕುಸುಮಾದೇಃ[3] ತತ್ ಅಸದ್ಧೇತುಕಮ್ ಅಸತ್ ನ ವಿದ್ಯತೇ । ತಥಾ ಸದಪಿ ಘಟಾದಿವಸ್ತು ಅಸದ್ಧೇತುಕಮ್ ಶಶವಿಷಾಣಾದಿ ಕಾರ್ಯಂ ನಾಸ್ತಿ । ತಥಾ ಸಚ್ಚ

---

1. ಹಿಂದೆ ಸದ್ವಸ್ತುವನ್ನು ಕಂಡೇ ಈಗ ಭ್ರಾಂತಿಯಾಗುವದೆಂಬ ನಿಯಮವಿಲ್ಲ.

2. ಎಚ್ಚರದ ಅಸದ್ವಸ್ತುವಿನ ಅನುಭವದ ವಾಸನೆಯಿಂದ ಕನಸಿನಲ್ಲಿಯೂ ಅಸದ್ವಸ್ತುವಿನ ದರ್ಶನವಾಗುವದುಂಟೆಂಬ ಕಾರಣದಿಂದ. ಇದೂ ವ್ಯವಹಾರದೃಷ್ಟಿಯಿಂದ ಹೇಳಿದ್ದು.

3. "ಖಪುಷ್ಪಾದೇಃ" ವಾ॥

ಘಟಾದಿ ವಿದ್ಯಮಾನಂ ಘಟಾದಿವಸ್ತ್ವನ್ತರಕಾರ್ಯಂ[1] ನಾಸ್ತಿ । ಸತ್ಕಾರ್ಯಮ್ ಅಸತ್ ಕುತ ಏವ ಸಮ್ಭವತಿ ? ನ ಚ ಅನ್ಯಃ ಕಾರ್ಯಕಾರಣಭಾವಃ ಸಮ್ಭವತಿ ಶಕ್ಯೋ ವಾ ಕಲ್ಪಯಿತುಮ್ । ಅತಃ ವಿವೇಕಿನಾಮ್ ಅಸಿದ್ಧ ಏವ ಕಾರ್ಯ ಕಾರಣಭಾವಃ ಕಸ್ಯಚಿತ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಅಸದ್ಧೇತುಕವಾದದ್ದು ಇರುವದಿಲ್ಲ. ಅಸತ್ತಾದ ಮೊಲದ ಕೊಂಬು ಮುಂತಾದದ್ದು ಯಾವದಕ್ಕೆ ಅಸತ್ತಾದ ಆಕಾಶದ ಹೂವೇ ಮುಂತಾದದ್ದಕ್ಕೆ ಹೇತುವೋ ಕಾರಣವೋ (ಅಂಥ) ಅಸದ್ಧೇತುಕವಾದ ಅಸತ್ತು ಇರುವದಿಲ್ಲ. ಇದರಂತೆ ಸತ್ತಾಗಿರುವ ಘಟಾದಿ ವಸ್ತುವೂ ಅಸದ್ಧೇತುಕವಾಗಿ ಮೊಲದ ಕೊಂಬು ಮುಂತಾದದ್ದರ ಕಾರ್ಯವಾಗಿ, ಇರು ವದಿಲ್ಲ. ಹೀಗೆಯೇ ಗಡಿಗೆಯೇ ಮುಂತಾದ ಇರುವ ಮತ್ತೊಂದು ವಸ್ತುವಿನ ಕಾರ್ಯ ವಾದ ಸತ್ತೂ, ಇರುವ ಗಡಿಗೆ ಮುಂತಾದದ್ದೂ ಇರುವದಿಲ್ಲ. ಸತ್ತಿನ ಕಾರ್ಯವಾದ ಅಸತ್ತು ಹೇಗೆತಾನೆ ಉಂಟಾದೀತು ?

(ಈ ನಾಲ್ಕನ್ನು ಬಿಟ್ಟರೆ) ಬೇರೆ ರೀತಿಯಿಂದ ಕಾರ್ಯಕಾರಣಭಾವವು ಇರುವ ಹಾಗೆಯೇ ಇಲ್ಲ. ಕಲ್ಪಿಸುವದಕ್ಕೂ ಆಗುವದಿಲ್ಲ[2]. ಆದ್ದರಿಂದ ವಿವೇಕಿಗಳಿಗೆ ಯಾವದಕ್ಕೂ ಕಾರ್ಯಕಾರಣಭಾವವು ಸಿದ್ಧವಾಗಿಲ್ಲ ಎಂದು ಅಭಿಪ್ರಾಯ.

(ಭಾಷ್ಯ)

೨೮೫. ಪುನರಪಿ ಜಾಗ್ರತ್ಸ್ವಪ್ನಯೋಃ ಅಸತೋರಪಿ ಕಾರ್ಯಕಾರಣಭಾವ ಶಙ್ಕಾಮ್ ಅಪನಯನ್ ಆಹ-

(ಭಾಷ್ಯಾರ್ಥ)

ಎಚ್ಚರಕನಸುಗಳು ಅಸತ್ತಾದರೂ ಕಾರ್ಯಕಾರಣಭಾವ[3](ವು ಇರಬಹುದಲ್ಲ ! ಎಂಬ) ಶಂಕೆಯನ್ನು ಕಳೆಯುವದಕ್ಕಾಗಿ ಮತ್ತೂ (ಹೀಗೆಂದು) ಹೇಳುತ್ತಿದ್ದಾರೆ :-

---

1. "ಘಟಾದಿವಿದ್ಯಮಾನ" ಎಂಬ ಮಾತುಗಳು ವಾ।। ಕಾ।। ಗಳಲ್ಲಿ ಬಿಟ್ಟುಹೋಗಿದೆ.

2. ಕಾರ್ಯ, ಕಾರಣ-ಇವೆರಡರಲ್ಲಿ (೧) ಕಾರಣವು ಅಸತ್ತು. ಕಾರ್ಯವೂ ಅಸತ್ತು ; (೨) ಕಾರಣವು ಅಸತ್ತು, ಕಾರ್ಯವು ಸತ್ತು ; (೩) ಕಾರಣವು ಸತ್ತು ; ಕಾರ್ಯವೂ ಸತ್ತು ; (೪) ಕಾರಣವು ಸತ್ತು, ಕಾರ್ಯವು ಅಸತ್ತು-ಹೀಗೆ ನಾಲ್ಕು ವಿಕಲ್ಪಗಳನ್ನು ಬಿಟ್ಟರೆ ಮತ್ತೆ ಯಾವ ದನ್ನೂ ಕಲ್ಪಿಸುವದಕ್ಕೆ ಬರುವದಿಲ್ಲ. ಈ ನಾಲ್ಕು ವಿಕಲ್ಪಗಳೂ ಅನುಭವಕ್ಕೆ ಹೊಂದುವದಿಲ್ಲವಾದ್ದ ರಿಂದ ಕಾರ್ಯಕಾರಣಭಾವವೇ ನಿಜವಾಗಿಲ್ಲ ಎಂದು ಭಾವ. 3. ಆತ್ಮನಿಗೆ ವ್ಯತಿರಿಕ್ತವಾದದ್ದೆಲ್ಲವೂ ಅಸತ್ತಾಗಿರುವದರಿಂದ ಅಸತ್ತಾಗಿರುವ ಎಚ್ಚರಕನಸುಗಳಿಗೆ ಕಾರ್ಯಕಾರಣವೆಂಬುದು ಹೊಂದು ವಂತಿಲ್ಲ-ಎಂಬ ಸಿದ್ಧಾಂತವನ್ನು ಕೇಳಿದವನು ಎರಡು ಅಸತ್ತುಗಳಿಗೂ ಕಾರ್ಯಕಾರಣಭಾವವಿರ ಬಾರದೇಕೆ ? ಎಂದು ಶಂಕಿಸಿದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆಂದು ಭಾವ.

ವಿಪರ್ಯಾಸಾದ್ಯಥಾ ಜಾಗ್ರದಚಿನ್ತ್ಯಾನ್ ಭೂತವತ್ ಸ್ಪೃಶೇತ್ ।
ತಥಾ ಸ್ವಪ್ನೇ ವಿಪರ್ಯಾಸಾದ್ಧರ್ಮಾಂಸ್ತತ್ರೈವ ಪಶ್ಯತಿ　　॥೪೧॥

೪೧. ವಿಪರ್ಯಾಸದಿಂದ ಹೇಗೆ ಎಚ್ಚರದಲ್ಲಿ ಅಚಿಂತ್ಯವಾದವುಗಳನ್ನೇ ಭೂತವಾಗಿದ್ದಂತೆ ಮುಟ್ಟುವನೋ ಹಾಗೆ ಕನಸಿನಲ್ಲಿಯೇ ವಿಪರ್ಯಾಸದಿಂದ ಧರ್ಮಗಳನ್ನು ಅಲ್ಲಿಯೇ ಕಾಣುತ್ತಾನೆ.

(ಭಾಷ್ಯ)

೨೪೬. ವಿಪರ್ಯಾಸಾತ್ ಅವಿವೇಕತಃ ಯಥಾ ಜಾಗ್ರತ್ ಜಾಗರಿತೇ ಅಚಿನ್ತ್ಯಾನ್ ಭಾವಾನ್ ಅಶಕ್ಯಚಿನ್ತನೀಯಾನ್[1] ರಜ್ಜುಸರ್ಪಾದೀನ್ ಭೂತವತ್ ಪರಮಾರ್ಥವತ್ ಸ್ಪೃಶೇತ್[2] ಸ್ಪೃಶನ್ನಿವ ವಿಕಲ್ಪಯೇತ್ ಇತ್ಯರ್ಥಃ । ಕಶ್ಚಿತ್ ಯಥಾ, ತಥಾ ಸ್ವಪ್ನೇ ವಿಪರ್ಯಾಸಾತ್ ಹಸ್ತ್ಯಾದೀನ್ ಧರ್ಮಾನ್[3] ಪಶ್ಯನ್ನಿವ ವಿಕಲ್ಪಯತಿ । ತತ್ರೈವ ಪಶ್ಯತಿ ನ ತು ಜಾಗರಿತಾತ್ ಉತ್ಪದ್ಯಮಾನಾನ್ ಇತ್ಯರ್ಥಃ ॥

(ಭಾಷ್ಯಾರ್ಥ)

ವಿಪರ್ಯಾಸದಿಂದ ಅವಿವೇಕದಿಂದ[4] ಹೇಗೆ ಎಚ್ಚರದಲ್ಲಿ ಅಚಿಂತ್ಯಗಳಾದ[5] ವಸ್ತುಗಳನ್ನು (ಇಂಥ ಸ್ವರೂಪವೆಂದು) ತರ್ಕಿಸುವದಕ್ಕೆ ಶಕ್ಯವಲ್ಲದ ಹಗ್ಗದಹಾವೇ ಮುಂತಾದವುಗಳನ್ನು ಭೂತವಾಗಿದ್ದಂತೆ ನಿಜವಾಗಿರುವ (ವಸ್ತುವಿನಂತೆ) ಮುಟ್ಟುವನೋ, ಮುಟ್ಟುವಂತೆ ವಿಕಲ್ಪಿಸುವನೋ ಎಂದರ್ಥ. ಯಾವನಾದರೂ (ಇದನ್ನು ಹೇಗೆ ವಿಕಲ್ಪಿಸುವನೋ) ಹಾಗೆ[6] ಕನಸಿನಲ್ಲಿಯೂ ವಿಪರ್ಯಾಸದಿಂದ ಆನೆಯೇ ಮುಂತಾದ ಧರ್ಮಗಳನ್ನು[7] ನೋಡುವಂತೆ ವಿಕಲ್ಪಿಸುತ್ತಾನೆ. "ಅಲ್ಲಿಯೇ ನೋಡುತ್ತಾನೆ" ಯೇ ಹೊರತು ಎಚ್ಚರದಿಂದ ಹುಟ್ಟುವ (ಧರ್ಮಗಳನ್ನು) ನೋಡುವದಿಲ್ಲ[8] ಎಂದರ್ಥ.

---

1. "ಅಶಕ್ಯಚಿಂತನಾನ್ " ವಾ॥ ಮೈ॥　2. ಆ॥ ದಲ್ಲಿ ಈ ಮಾತು ಬಿಟ್ಟುಹೋಗಿದೆ.

3. ವಾ॥ ದಲ್ಲಿ ಬಿಟ್ಟುಹೋಗಿದೆ.　4. ವಿಂಗಡಿಸಿ ಅರಿಯದೆ ತಪ್ಪಾಗಿ ತಿಳಿದುಕೊಳ್ಳುವದರಿಂದ ಎಂದರ್ಥ.　5. ಅನಿರ್ವಚನೀಯವೆಂಬ ಮಾತೂ ಇದೇ ಅರ್ಥದ್ದು.

6. ಹಗ್ಗದಹಾವು ಹೊರಗಾಗಲಿ ಮನಸ್ಸಿನಲ್ಲಾಗಲಿ ನಿಜವಾಗಿರುವದಿಲ್ಲ, ಹಾವೆಂಬ ಮಾತು, ತಿಳಿವಳಿಕೆ-ಇವನ್ನು ಬಿಟ್ಟರೆ ಯಾವ ವಸ್ತುವೂ ಇರುವದಿಲ್ಲ. (೨-೩೨ರ ಭಾಷ್ಯವನ್ನು ನೋಡಿ). ಇದ್ದರಿಂದ ಹಾವೆಂಬ ವೃತ್ತಿಯು ಇಲ್ಲಿ ವಿಕಲ್ಪವೇ. ಕನಸಿನ ವಸ್ತುಗಳೂ ಹಾಗೆಯೇ ಎಂದರ್ಥ.

7. ಪದಾರ್ಥಗಳನ್ನು.　8. ಎಚ್ಚರದ ಅನಿರ್ವಚನೀಯವಸ್ತುಗಳಾದ ರಜ್ಜುಸರ್ಪಾದಿಗಳು ಭ್ರಾಂತಿಯಿಂದ ಅಲ್ಲಿ ಕಾಣಿಸುವವೇ ಹೊರತು ನಿಜವಾಗಿ ಹುಟ್ಟಿರುವದಿಲ್ಲ. ಕನಸಿನ ದೃಶ್ಯಗಳೂ ಹಾಗೆಯೇ ಕನಸಿನಲ್ಲಿಯೇ ಕಾಣಿಸುತ್ತವೆ ಎಚ್ಚರದ ವಸ್ತುಗಳಿಂದಾಗಿರುವದಿಲ್ಲ.

ವೇದಾಂತಿಗಳು ಜನ್ಮವುಂಟೆಂದು ಹೇಳುವದರ ಅಭಿಪ್ರಾಯ

ಉಪಲಮ್ಭಾತ್ ಸಮಾಚಾರಾದಸ್ತಿ ವಸ್ತುತ್ವವಾದಿನಾಮ್ ।
ಜಾತಿಸ್ತು ದೇಶಿತಾ ಬುದ್ಧೈರಜಾತೇಸ್ತ್ರಸತಾಂ ಸದಾ ॥೪೨॥

೪೨. ಆದರೆ ಉಪಲಂಭದಿಂದಲೂ ಸಮಾಚಾರದಿಂದಲೂ ವಸ್ತುವಿದೆ ಎನ್ನುತ್ತಿರುವ, ಅಜಾತಿಗೆ ಯಾವಾಗಲೂ ಹೆದರುತ್ತಿರುವವರಿಗಾಗಿ ಬುದ್ಧರುಗಳಿಂದ ಜಾತಿಯು ಉಪದಿಷ್ಟವಾಗಿರುವದು.

(ಭಾಷ್ಯ)

೨೪೭. ಯಾಪಿ ಬುದ್ಧೈಃ ಅದ್ವೈತವಾದಿಭಿಃ ಜಾತಿಃ ದೇಶಿತಾ ಉಪದಿಷ್ಟಾ (ಉಪಲಮ್ಭಾತ್[1]) ಉಪಲಮ್ಭನಮ್ ಉಪಲಮ್ಭಃ ತಸ್ಮಾತ್ ಉಪಲಬ್ಧೇಃ ಇತ್ಯರ್ಥಃ । ಸಮಾಚಾರಾತ್ ವರ್ಣಾಶ್ರಮಾದಿಧರ್ಮಸಮಾಚಾರಾತ್[2] ತಾಭ್ಯಾಂ ಹೇತುಭ್ಯಾಂ ಅಸ್ತಿವಸ್ತುತ್ವವಾದಿನಾಂ ಅಸ್ತಿ ವಸ್ತುಭಾವಃ ಇತ್ಯೇವಂ ವದನಶೀಲಾನಾಮ್ ದೃಢಾಗ್ರಹವತಾಂ ಶ್ರದ್ಧಧಾನಾನಾಂ ಮನ್ದವಿವೇಕಿನಾಮ್ ಅರ್ಥೋಪಾಯತ್ವೇನ ಸಾ ದೇಶಿತಾ ಜಾತಿಃ । ತಾಂ ಗೃಹ್ಣನ್ತು ತಾವತ್ । ವೇದಾನ್ತಾಭ್ಯಾಸಿನಾಂ ತು ಸ್ವಯಮೇವ ಅಜಾದ್ವಯಾತ್ಮವಿಷಯೋ ವಿವೇಕಃ ಭವಿಷ್ಯತಿ ಇತಿ । ನ ತು ಪರಮಾರ್ಥಬುದ್ಧ್ಯಾ । ತೇ ಹಿ ಶ್ರೋತ್ರಿಯಾಃ ಸ್ಥೂಲಬುದ್ಧಿತ್ವಾತ್ ಅಜಾತೇಃ ಅಜಾತಿವಸ್ತುನಃ ಸದಾ ತ್ರಸ್ಯನ್ತಿ ಆತ್ಮನಾಶಂ ಮನ್ಯಮಾನಾ ಅವಿವೇಕಿನಃ ಇತ್ಯರ್ಥಃ । "ಉಪಾಯಃ ಸೋಽವತಾರಾಯ" (೩-೧೫) ಇತ್ಯುಕ್ತಮ್ ॥

(ಭಾಷ್ಯಾರ್ಥ)

ಬುದ್ಧರಿಂದ ಅದ್ವೈತವಾದಿ(ಗಳಾದ ಜ್ಞಾನಿ)ಗಳಿಂದಲೂ (ವಸ್ತುಗಳ) ಜನ್ಮವು ಉಪದಿಷ್ಟವಾಗಿದೆಯಷ್ಟೆ, (ಆ ಹುಟ್ಟು) ಉಪಲಂಭದಿಂದ-ಉಪಲಂಭವೆಂದರೆ ಉಪಲಂಭನವು, ಅದರಿಂದ-ಅರಿಯುವದರಿಂದ ಎಂದರ್ಥ. ಸಮಾಚಾರದಿಂದ, ವರ್ಣಾಶ್ರಮಧರ್ಮಗಳನ್ನು ಆಚರಿಸುವದರಿಂದ. ಈ (ಎರಡು) ಹೇತುಗಳಿಂದ ವಸ್ತು ಇದೆ ಎನ್ನುತ್ತಿರುವ[3], ವಸ್ತುವಿನ ಇರವು (ನಿಜವಾಗಿ) ಇದೆ ಎಂದು ವಾದಮಾಡುತ್ತಿರುವ

1. ಈ ಮಾತು ಅಚ್ಚಿನ ಪುಸ್ತಕದಲ್ಲಿ ಬಿಟ್ಟುಹೋಗಿದೆ. 2. 'ಸಮಾಚರಣಾಚ್ಚ' ವಾ॥

3. ನೀರೆಂಬ ವಸ್ತು ಕಣ್ಣಿಗೆ ಗೋಚರವಾಗುತ್ತದೆ, ಶಾಸ್ತ್ರೋಕ್ತವಾದ ಆಚಮನಕ್ಕೂ ಉಪಯುಕ್ತವಾಗಿದೆ. ಹೀಗೆ ಇಂದ್ರಿಯಗೋಚರವಾದದ್ದು ಇದೆ ಎಂದೆಣಿಸುವದೇ ಯುಕ್ತ. ಶಾಸ್ತ್ರದಲ್ಲಿ ಕರ್ಮಕ್ಕೆ ಅಂಗವಾಗಿ ಹೇಳಿರುವ ವಸ್ತು ಇಲ್ಲವೆಂಬುದು ಯುಕ್ತವಲ್ಲ-ಎಂದು ಅವರ ಭಾವ.

ಸ್ವಭಾವವುಳ್ಳ ಬಲವಾಗಿ ಪಟ್ಟುಹಿಡಿದು ಶ್ರದ್ಧೆಯಿಟ್ಟಿರುವ ಕಡಿಮೆಯ ವಿವೇಕವುಳ್ಳ ವರಿಗಾಗಿ (ಪರ)ಮಾರ್ಥವನ್ನು (ತಿಳಿಯುವದಕ್ಕೆ) ಸಾಧನವಾಗಿ ಉಪದಿಷ್ಟವಾಗಿರುತ್ತದೆ. ಇದನ್ನು ಮೊದಲು ಇಟ್ಟುಕೊಳ್ಳಲಿ, ಆದರೆ ವೇದಾಂತವನ್ನು ಮತ್ತೆಮತ್ತೆ ವಿಚಾರ ಮಾಡಿದಮೇಲೆ ಹುಟ್ಟಿಲ್ಲದವನೂ, ತನಗೆರಡನೆಯದಿಲ್ಲದವನೂ ಆದ ಆತ್ಮನ ವಿಷಯವಾದ ವಿವೇಕವು ತಾನೇ ಉಂಟಾಗುವದು ಎಂದುಕೊಂಡು (ಅದನ್ನು ಹೇಳಿದೆಯೇ ಹೊರತು ಅದು) ಪರಮಾರ್ಥವೆಂಬ ಅಭಿಪ್ರಾಯದಿಂದ (ಹೇಳಿ)ದ್ದಲ್ಲ[1]. ಏಕೆಂದರೆ ಆ ಶ್ರೋತ್ರಿಯರು[2] ಸ್ಥೂಲಬುದ್ಧಿಯುಳ್ಳವರಾದ್ದರಿಂದ ಹುಟ್ಟಿಲ್ಲದ್ದಕ್ಕೆ ಹುಟ್ಟಿಲ್ಲದ ವಸ್ತುವಿಗೆ (ಇದರಿಂದ) ತಮ್ಮ ನಾಶವೇ ಆಗುವದೆಂದೆಣಿಸಿ, ಅವಿವೇಕಿಗಳಾದ್ದರಿಂದ ಯಾವಾಗಲೂ ಅಂಜಿಕೊಳ್ಳುತ್ತಿರುವರು[3] ಎಂದರ್ಥ. "ಅದು (ಐಕ್ಯವನ್ನು) ತಿಳಿಸುವದಕ್ಕೆ ಉಪಾಯವೇ" (೩-೧೫) ಎಂದು (ಹಿಂದೆಯೇ) ಹೇಳಿರುತ್ತದೆ(ಯಷ್ಟೆ).

ಅಜಾತೇಸ್ತ್ರಸತಾಂ ತೇಷಾಮುಪಲಮ್ಭಾದ್ವಿಯನ್ತಿ ಯೇ ।
ಜಾತಿದೋಷಾ ನ ಸೇತ್ಸ್ಯನ್ತಿ ದೋಷೋಽಪ್ಯಲ್ಪೋ ಭವಿಷ್ಯತಿ ॥೪೩॥

೪೩. (ಯಾರು) ಉಪಲಂಭದ (ಕಾರಣ)ದಿಂದ ಅಜಾತಿಗೆ ಹೆದರಿ ತಪ್ಪಿ ಹೋಗುತ್ತಿರುವರೋ ಅವರಿಗೆ ಜಾತಿಯ ದೋಷಗಳು ಸಿದ್ಧಿಸುವದಿಲ್ಲ. ದೋಷವೂ ಸ್ವಲ್ಪವಾಗಿ ಆಗುವದು.

(ಭಾಷ್ಯ)

೨೮೮. ಯೇ ಚ-ಏವಮ್ ಉಪಲಮ್ಭಾತ್ ಸಮಾಚಾರಾಚ್ಚ ಅಜಾತೇಃ ಅಜಾತಿವಸ್ತುನಃ ತ್ರಸನ್ತಃ ಅಸ್ತಿ ವಸ್ತ್ವಿತಿ ಅದ್ವಯಾತ್ ಆತ್ಮನಃ ವಿಯನ್ತಿ ವಿರುದ್ಧಂ ಯನ್ತಿ ದ್ವೈತಂ ಪ್ರತಿಪದ್ಯನ್ತೇ ಇತ್ಯರ್ಥಃ । ತೇಷಾಮ್ ಅಜಾತೇಃ ತ್ರಸತಾಂ ಶ್ರದ್ಧಾನಾನಾಂ ಸನ್ಮಾರ್ಗಾವಲಮ್ಬಿನಾಂ ಜಾತಿದೋಷಾಃ ಜಾತ್ಯುಪಲಮ್ಭಕೃತಾಃ ದೋಷಾಃ ನ ಸೇತ್ಸ್ಯನ್ತಿ ಸಿದ್ಧಿಂ ನ

1. ಬ್ರಹ್ಮವು ಜಗತ್ಕಾರಣವೆಂದು ಮೊದಲು ಹೇಳಿದ್ದರೂ ಶ್ರುತಿಯು ಮುಂದೆ ಬ್ರಹ್ಮದಲ್ಲಿ ಕಾರಣತ್ವವಿಲ್ಲವೆಂದೂ ಹೇಳುವದರಿಂದ ಅಜಾತಿವಾದವೇ ಅವರಿಗೆ ಕೊನೆಗೆ ನಿಶ್ಚಯವಾಗುತ್ತದೆ-ಎಂದು ಅರ್ಥ. ಓಗೆ ಕಾರಣತ್ವವನ್ನು ಇಟ್ಟುಕೊಂಡು ಉಪದೇಶಿಸುವದು ಅಧ್ಯಾರೋಪಾಪವಾದ ಪ್ರಕ್ರಿಯೆಯಿಂದ.

2. ವೈದಿಕಕರ್ಮದಲ್ಲಿ ಶ್ರದ್ಧೆಯಿರುವ ಆಸ್ತಿಕರು.

3. ಯಾವದೂ ಹುಟ್ಟಿಲ್ಲವಾದರೆ ಕರ್ಮಗಳಿಗೆ ಫಲವೇ ಇಲ್ಲವೆಂದಾಗುವದಲ್ಲ, ನಮ್ಮ ಗತಿಯೇನು ?-ಎಂದು ಅಂಜುವರು.

ಉಪಯಾಸ್ಯನ್ತಿ । ವಿವೇಕಮಾರ್ಗಪ್ರವೃತ್ತತ್ವಾತ್ । ಯದ್ಯಪಿ ಕಶ್ಚಿತ್ ದೋಷಃ ಸ್ಯಾತ್, ಸೋಽಪಿ ಅಲ್ಪ ಏವ ಭವಿಷ್ಯತಿ ಸಮ್ಯಗ್ದರ್ಶನಾಪ್ರತಿಪತ್ತಿಹೇತುಕಃ ಇತ್ಯರ್ಥಃ ।।

(ಭಾಷ್ಯಾರ್ಥ)

ಹೀಗೆ ಯಾರು (ವಸ್ತುವನ್ನು) ಕಾಣುವದರಿಂದಲೂ, (ವರ್ಣಾಶ್ರಮಧರ್ಮಗಳನ್ನು) ಆಚರಿಸುವದರಿಂದಲೂ ಅಜಾತಿಗೆ ಹುಟ್ಟಿಲ್ಲದ ವಸ್ತುವಿಗೆ ಅಂಜಿಕೊಂಡು (ದ್ವೈತ)ವಸ್ತು ಇದೆ ಎಂದು ತನಗೆರಡನೆಯದಿಲ್ಲದ ಆತ್ಮನಿಂದ ತಪ್ಪಿಹೋಗುತ್ತಿರುವರೋ (ಅದಕ್ಕೆ)ವಿರುದ್ಧವಾಗಿ ಹೋಗುತ್ತಿರುವರೋ, ದ್ವೈತವನ್ನು (ನಿಜವೆಂದು) ತಿಳಿಯುತ್ತಿರುವರೋ ಎಂದರ್ಥ. ಹುಟ್ಟಿಲ್ಲದ್ದಕ್ಕೆ ಹೆದರುವ ಶ್ರದ್ಧೆಯುಳ್ಳ ಸನ್ಮಾರ್ಗವನ್ನ ವಲಂಬಿಸಿರುವ[1] ಅಂಥವರಿಗೆ ಜಾತಿದೋಷಗಳು, ಹುಟ್ಟನ್ನು (ನಿಜವೆಂದು) ಅರಿಯುವದರಿಂದಾದ ದೋಷಗಳು ಸಿದ್ಧಿಸುವದಿಲ್ಲ, ಸಿದ್ಧಿಯನ್ನು ಹೊಂದುವದಿಲ್ಲ ; ಏಕೆಂದರೆ (ಅವರು) ವಿವೇಕದ ಮಾರ್ಗದಲ್ಲಿ ಹೊರಟಿರುತ್ತಾರೆ. ಒಂದಿಷ್ಟು ದೋಷವೇನೋ ಆಗುವದಾದರೂ ಸರಿಯಾದ ಜ್ಞಾನವನ್ನು ಪಡೆದುಕೊಳ್ಳದಿರುವ ಕಾರಣದಿಂದ (ಆಗುವ) ಆ (ದೋಷವೂ) ಸ್ವಲ್ಪವೇ ಆಗುವದು ಎಂದರ್ಥ.

## ವ್ಯವಹಾರಗೋಚರವಾದಮಾತ್ರಕ್ಕೆ ದ್ವೈತವು ಸತ್ಯವಾಗಲಾರದು

(ಭಾಷ್ಯ)

೨೮೯. ನನು ಉಪಲಮ್ಭಸಮಾಚಾರಯೋಃ ಪ್ರಮಾಣತ್ವಾತ್ ಅಸ್ತ್ಯೇವ ದ್ವೈತಂ ವಸ್ತು ಇತಿ । ನ । ಉಪಲಮ್ಭಸಮಾಚಾರಯೋಃ ವ್ಯಭಿಚಾರಾತ್ । ಕಥಂ ವ್ಯಭಿಚಾರ ಇತಿ ? ಉಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- (ವಸ್ತುವನ್ನು) ಕಾಣುವದು, (ಅದನ್ನು) ಕರ್ಮಕ್ಕೆ ಉಪಯೋಗಿಸಿಕೊಳ್ಳುವದು-ಇವು ಪ್ರಮಾಣವಾಗಿರುವದರಿಂದ ದ್ವೈತವಸ್ತು ಇದ್ದೇ ಇದೆ (ಎನ್ನಬೇ)ಕಲ್ಲವೆ ?

---

1. ಪ್ರಧಾನ, ಪರಮಾಣು-ಮುಂತಾದವನ್ನು ಜಗತ್ಕಾರಣವೆಂದು ನಂಬಿರುವವರು ಕಾರ್ಯಕಾರಣಭಾವವು ಪರಮಾರ್ಥವೆಂದೇ ನಂಬುವದರಿಂದ ಅವರದು ತಪ್ಪುಹಾದಿ. ಬ್ರಹ್ಮಕಾರಣವಾದಿಗಳು ಕಾರ್ಯಕಾರಣಭಾವವನ್ನು ಮೀರಿದ ಬ್ರಹ್ಮವನ್ನು ಕೊನೆಗಾದರೂ ಸೇರುವದರಿಂದ ಅವರದು ಸರಿಯಾದ ಹಾದಿ.

(ಪರಿಹಾರ) :- ಹಾಗಲ್ಲ. ಏಕೆಂದರೆ ಕಾಣುವದು, ಕೆಲಸಕ್ಕೆ ಉಪಯೋಗಿಸುವದು-ಇವು ಬೇರೆಕಡೆಯಲ್ಲಿಯೂ ಇರುತ್ತವೆ[1]. (ಅವು) ಬೇರೆಕಡೆಯಲ್ಲಿರುವವೆಂಬುದು ಹೇಗೆ ? ಎಂದರೆ ಹೇಳುತ್ತೇವೆ-

ಉಪಲಮ್ಭಾತ್ ಸಮಾಚಾರಾನ್ಮಾಯಾಹಸ್ತೀ ಯಥೋಚ್ಯತೇ ।
ಉಪಲಮ್ಭಾತ್ ಸಮಾಚಾರಾದಸ್ತಿ ವಸ್ತು ತಥೋಚ್ಯತೇ ॥೪೪॥

೪೪. ಉಪಲಂಭದಿಂದಲೂ, ಸಮಾಚಾರದಿಂದಲೂ, ಮಾಯೆಯ ಆನೆಯನ್ನು ಹೇಗೆ (ಆನೆ)ಯೆನ್ನುವರೋ, ಹಾಗೆಯೇ ಉಪಲಂಭದಿಂದಲೂ ಸಮಾಚಾರದಿಂದಲೂ ವಸ್ತುವಿದೆ ಎನ್ನುವರು.

(ಭಾಷ್ಯ)

೨೯೦. ಉಪಲಭ್ಯತೇ ಹಿ ಮಾಯಾಹಸ್ತೀ ಹಸ್ತೀವ । ಹಸ್ತಿನಮಿವ ಅತ್ರ ಸಮಾಚರನ್ತಿ ಬನ್ಧನಾರೋಹಣಾದಿ ಹಸ್ತಿಸಮ್ಬನ್ಧಿಭಿಃ ಧರ್ಮೈಃ । ಹಸ್ತೀ ಇತಿ ಚ ಉಚ್ಯತೇ ಅಸನ್ನಪಿ ಯಥಾ ತಥೈವ ಉಪಲಮ್ಭಾತ್ ಸಮಾಚಾರಾತ್ ದ್ವೈತಂ ಭೇದರೂಪಮ್ ಅಸ್ತಿ ವಸ್ತು ಇತ್ಯುಚ್ಯತೇ । ತಸ್ಮಾತ್ ನ ಉಪಲಮ್ಭಸಮಾಚಾರೌ ದ್ವೈತವಸ್ತುಸದ್ಭಾವೇ ಹೇತೂ ಭವತಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಮಾಯೆಯ ಆನೆಯು ಆನೆಯಂತೆ ಕಾಣುತ್ತದೆಯಲ್ಲವೆ ? (ಗೂಟಕ್ಕೆ) ಕಟ್ಟೋಣ, ಹತ್ತಿಕೊಳ್ಳೋಣ-ಮುಂತಾದ ಆನೆಗೆ ಸಂಬಂಧಪಟ್ಟ ಧರ್ಮಗಳಿಂದ (ಕೂಡಿರುವಂತೆ) ಅದರ (ವಿಷಯ)ದಲ್ಲಿ ಆನೆಯಂತೆಯೇ ವ್ಯವಹರಿಸುತ್ತಾರೆ. (ನಿಜವಾಗಿ) ಇರುವದಲ್ಲವಾದರೂ ಆನೆ ಎಂದೂ ಅದು ಕರೆಯಿಸಿಕೊಳ್ಳುತ್ತದೆ. (ಇದು) ಹೇಗೋ ಹಾಗೆಯೇ, ಉಪಲಂಭದಿಂದಲೂ ಸಮಾಚಾರದಿಂದಲೂ ಭೇದರೂಪವಾದ ದ್ವೈತವಸ್ತುವು ಇದೆ ಎನ್ನುವರು. ಆದ್ದರಿಂದ ಉಪಲಂಭಸಮಾಚಾರಗಳು ದ್ವೈತವಸ್ತು (ನಿಜವಾಗಿ) ಇದೆ ಎಂಬುದಕ್ಕೆ ಹೇತುಗಳಾಗುವದಿಲ್ಲ ಎಂದು ಅಭಿಪ್ರಾಯ.

(ಭಾಷ್ಯ)

೨೯೧. ಕಿಂ ಪುನಃ ಪರಮಾರ್ಥಸತ್ ವಸ್ತು ಯದಾಸ್ಪದಾ ಜಾತ್ಯಾದ್ಯಸದ್ಬುದ್ಧ್ಯಃ ಇತಿ ? ಆಹ-

1. ಅಸದ್ವಸ್ತುಗಳಲ್ಲಿಯೂ ಇವೆ.

(ಭಾಷ್ಯಾರ್ಥ)

ಯಾವದನ್ನು ಆಶ್ರಯಿಸಿ ಹುಟ್ಟು ಮುಂತಾದ ತಪ್ಪುತಿಳಿವಳಿಕೆಗಳು ಉಂಟಾಗುತ್ತಿರುವವೋ, ಆ ಪರಮಾರ್ಥವಾಗಿ ನಿಜವಾಗಿರುವ ವಸ್ತು ಯಾವದು[1] ? ಎಂದರೆ ಹೇಳುತ್ತಾರೆ :-

ಜಾತ್ಯಾಭಾಸಂ ಚಲಾಭಾಸಂ ವಸ್ತ್ವಾಭಾಸಂ ತಥೈವ ಚ ।
ಅಜಾಚಲಮವಸ್ತುತ್ವಂ ವಿಜ್ಞಾನಂ ಶಾನ್ತಮದ್ವಯಮ್ ॥೪೫॥

೪೫. ಜಾತ್ಯಾಭಾಸ, ಚಲಾಭಾಸ, ಹಾಗೂ ವಸ್ತ್ವಾಭಾಸವು, (ಆದರೂ) ವಿಜ್ಞಾನವು ಅಜವು, ಅಚಲವು, ಅವಸ್ತು, ಶಾಂತವು, ಅದ್ವಯವು.

(ಭಾಷ್ಯ)

೨೯೨. ಅಜಾತಿ ಸತ್ ಜಾತಿವತ್ ಅವಭಾಸತೇ ಇತಿ ಜಾತ್ಯಾಭಾಸಮ್, ತದ್ಯಥಾ ದೇವದತ್ತೋ ಜಾಯತೇ ಇತಿ । ಚಲಾಭಾಸಮ್, ಚಲಮಿವ ಅವಭಾಸತೇ ಇತಿ । ಯಥಾ ಸ ಏವ ದೇವದತ್ತಃ ಗಚ್ಛತಿ ಇತಿ । ವಸ್ತ್ವಾಭಾಸಮ್ । ವಸ್ತುದ್ರವ್ಯಂ ಧರ್ಮಿ । ತದ್ವತ್ ಅವಭಾಸತೇ ಇತಿ ವಸ್ತ್ವಾಭಾಸಮ್ । ಯಥಾ ಸ ಏವ ದೇವದತ್ತಃ ಗೌರಃ ದೀರ್ಘಃ ಇತಿ । ಜಾಯತೇ ದೇವದತ್ತಃ ಸ್ಪನ್ದತೇ ದೀರ್ಘಃ ಗೌರಃ ಇತ್ಯೇವಮ್ ಅವಭಾಸತೇ । ಪರಮಾರ್ಥತಸ್ತು ಅಜಮ್ ಅಚಲಮ್ ಅವಸ್ತುತ್ವಮ್ ಅದ್ರವ್ಯಂ ಚ । ಕಿಂ ತತ್ ಏವಂಪ್ರಕಾರಮ್ ? ವಿಜ್ಞಾನಂ ವಿಜ್ಞಪ್ತಿಃ ಜಾತ್ಯಾದಿರಹಿತತ್ವಾತ್ ಶಾನ್ತಮ್ ಅತ ಏವ ಅದ್ವಯಂ ಚ ತತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹುಟ್ಟಿಲ್ಲದ್ದಾಗಿದ್ದು ಹುಟ್ಟುವಂತೆ ತೋರುವದಾದ್ದರಿಂದ (ಅದು) **ಜಾತ್ಯಾಭಾಸವು**. ಅದು ಹೇಗೆಂದರೆ ದೇವದತ್ತನು ಹುಟ್ಟುತ್ತಾನೆ ಎಂದು (ತೋರುವದು ಜಾತ್ಯಾಭಾಸವು). (ತಾನು ಚಲವಲ್ಲದಿದ್ದರೂ) ಚಲವಾಗಿರುವಂತೆ ತೋರುವದು **ಚಲಾಭಾಸವು**. ಹೇಗೆಂದರೆ ಅದೇ ದೇವದತ್ತನು ಹೋಗುತ್ತಿದ್ದಾನೆ ಎಂದು (ತೋರುತ್ತಿರುವದು ಚಲಾಭಾಸವು). **ವಸ್ತ್ವಾಭಾಸವು** ವಸ್ತುವೆಂದರೆ ಧರ್ಮಗಳುಳ್ಳದ್ರವ್ಯವು, (ದ್ರವ್ಯವಲ್ಲದೆ ಇದ್ದರೂ) ಅದರಂತೆ ಕಾಣುವದರಿಂದ ವಸ್ತ್ವಾಭಾಸವು. ಹೇಗೆಂದರೆ ಅದೇ ದೇವದತ್ತನು

---

1. ಹುಟ್ಟುವದು ಮುಂತಾದದ್ದು ತೋರಿಕೆಯಾದರೆ ಯಾವದರ ತೋರಿಕೆ ? ಎಂದು ಪ್ರಶ್ನೆ. ಈ ಅಧಿಷ್ಠಾನದ ವಿಷಯದಲ್ಲಿಯೇ ವೇದಾಂತಕ್ಕೂ ವಿಜ್ಞಾನವಾದಕ್ಕೂ ಮತಭೇದವಿರುವದು. ಪೀಠಿಕೆಯನ್ನು ನೋಡಿ.

ಬೆಳ್ಳಗಿದ್ದಾನೆ, ಉದ್ದಕ್ಕಿದ್ದಾನೆ ಎಂದು (ತೋರುವದು ವಸ್ತ್ವಾಭಾಸವು). (ಅಂತು) ದೇವದತ್ತನು ಹುಟ್ಟುತ್ತಾನೆ, ಓಡಾಡುತ್ತಾನೆ, ಉದ್ದಕ್ಕಿದ್ದಾನೆ, ಬೆಳ್ಳಗಿದ್ದಾನೆ-ಎಂದೀ ಪರಿಯಾಗಿ ತೋರುತ್ತಿರುವದು. ಆದರೆ ನಿಜವಾಗಿಯೋ ಎಂದರೆ (ಅದು) ಹುಟ್ಟುವದಲ್ಲ, ಅಲುಗಾಡುವದಲ್ಲ, ವಸ್ತುವಲ್ಲ (ಎಂದರೆ) ದ್ರವ್ಯವೂ ಅಲ್ಲ[1]. ಈ ಪ್ರಕಾರವಾಗಿರುವದು ಯಾವದು ? ಎಂದರೆ ವಿಜ್ಞಾನವು ಅರಿವು[2] ; ಹುಟ್ಟುವದೇ ಮುಂತಾದದ್ದಿಲ್ಲವಾದ್ದರಿಂದ ಶಾಂತವು, ಆದ್ದರಿಂದಲೇ ಅದು ಅದ್ವಯವೂ[3] ಆಗಿರುವದು ಎಂದರ್ಥ.

ಏವಂ ನ ಜಾಯತೇ ಚಿತ್ತಮೇವಂ ಧರ್ಮಾ ಅಜಾಃ ಸ್ಮೃತಾಃ ।
ಏವಮೇವ ವಿಜಾನನ್ತೋ ನ ಪತನ್ತಿ ವಿಪರ್ಯಯೇ ॥೪೬॥

೪೬. ಹೀಗೆ ಚಿತ್ತವು ಹುಟ್ಟುವದಿಲ್ಲ. ಹೀಗೆ ಧರ್ಮರು ಅಜರು, ಎನಿಸುವರು. ಹೀಗೆಯೇ ತಿಳಿದವರು ವಿಪರ್ಯಯದಲ್ಲಿ ಬೀಳುವದಿಲ್ಲ.

(ಭಾಷ್ಯ)

೨೯೩. ಏವಂ ಯಥೋಕ್ತೇಭ್ಯಃ ಹೇತುಭ್ಯಃ ನ ಜಾಯತೇ ಚಿತ್ತಮ್ । ಏವಂ ಧರ್ಮಾಃ ಆತ್ಮಾನಃ ಅಜಾಃ ಸ್ಮೃತಾಃ ಬ್ರಹ್ಮವಿದ್ಭಿಃ । ಧರ್ಮಾಃ ಇತಿ ಬಹುವಚನಂ ದೇಹಭೇದಾನುವಿಧಾಯಿತ್ವಾತ್ ಅದ್ವಯಸ್ಯೈವ ಉಪಚಾರತಃ । ಏವಮೇವ ಯಥೋಕ್ತಂ ವಿಜ್ಞಾನಂ ಜಾತ್ಯಾದಿರಹಿತಮ್ ಅದ್ವಯಮ್ ಆತ್ಮತತ್ತ್ವಮ್ ವಿಜಾನನ್ತಃ ತ್ಯಕ್ತ ಬಾಹ್ಯೈಷಣಾಃ ಪುನಃ ನ ಪತನ್ತಿ ಅವಿದ್ಯಾಧ್ವಾನ್ತಸಾಗರೇ ವಿಪರ್ಯಯೇ । "ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ" (ಈ. ೭) ಇತ್ಯಾದಿ ಮನ್ತ್ರವರ್ಣಾತ್ ॥

(ಭಾಷ್ಯಾರ್ಥ)

ಹೀಗೆ ಹೇಳಿದ ಹೇತುಗಳಿಂದ[4] ಚಿತ್ತವು ಹುಟ್ಟುವದಿಲ್ಲ. ಹೀಗೆ ಧರ್ಮರು

---

1. ದ್ರವ್ಯವು ಗುಣಗಳಿಗೆ ಆಧಾರವಾಗಿರುವದು. ಕ್ರಿಯೆಗಳುಳ್ಳದ್ದು ಹುಟ್ಟಿ ನಾಶವಾಗುವದು ಎಂದು ತಾರ್ಕಿಕರು ಹೇಳುವದೆಲ್ಲ ಭ್ರಾಂತಿಜ್ಞಾನದ ಫಲವು. ನಿಜವಾಗಿ ನೋಡಿದರೆ ಪರಮಾರ್ಥತತ್ತ್ವವನ್ನೇ ಭ್ರಾಂತಿಯಿಂದ ಅವರು ದ್ರವ್ಯಾದಿಗಳೆಂದು ವಿಕಲ್ಪಿಸುತ್ತಿರುವರು ಎಂದು ಭಾವ. ಗೀ. ಭಾ. ೧೮-೪೮, ಭಾ. ಭಾ. ೫೪೯ ; ಸೂ. ಭಾ. ೨-೨-೧೭.

2. ಅರಿಯುವಿಕೆ ಎಂಬ ಕ್ರಿಯೆಯಲ್ಲ. ಅರಿವಿನ ಸ್ವರೂಪವೇ. ಇದನ್ನೇ ಚೈತನ್ಯವೆಂದು ವೇದಾಂತಿಗಳು ಕರೆಯುತ್ತಿರುವರು.

3. 'ಶಾಂತಂ ಶಿವಮದ್ವೈತಮ್' ಎಂಬ ಶ್ರುತಿಯ ಸೂಚನೆ.

4. ಕಾರ್ಯಕಾರಣಭಾವವನ್ನು ಹೊಂದಿಸಿ ಹೇಳುವದಾಗುವದಿಲ್ಲ-ಮುಂತಾದ ಕಾರಣಗಳಿಂದ.

ಆತ್ಮರುಗಳು ಹುಟ್ಟುವರಲ್ಲವೆಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. 'ಧರ್ಮರು' ಎಂದು ಬಹುವಚನವನ್ನು, ಬೇರೆಬೇರೆಯ ದೇಹಗಳನ್ನನುಸರಿಸುವದರಿಂದ ಅದ್ವೈತಾತ್ಮನನ್ನು (ತಿಳಿಸುವದಕ್ಕೇ) ಉಪಚಾರದಿಂದ[1] ಪ್ರಯೋಗಿಸಿರುತ್ತದೆ. ಹೀಗೆಯೇ ಮೇಲೆ ಹೇಳಿದ ವಿಜ್ಞಾನವನ್ನು ಜಾತ್ಯಾದಿಗಳಿಲ್ಲದ ಅದ್ವಿತೀಯವಾದ ಆತ್ಮತತ್ತ್ವವನ್ನು ಅರಿತುಕೊಂಡು ಹೊರಗಿನ ಏಷಣೆಗಳನ್ನು[2] ಬಿಟ್ಟವರು ಮತ್ತೆ ವಿಪರ್ಯಯದಲ್ಲಿ ಅಜ್ಞಾನದ ಕತ್ತಲೆಯ ಸಾಗರದಲ್ಲಿ ಬೀಳುವದಿಲ್ಲ[3]. ''ಏಕತ್ವವನ್ನು ಕಂಡುಕೊಂಡವನಿಗೆ ಅಲ್ಲಿ ಎಂಥ ಮೋಹವು, ಎಂಥ ಶೋಕವು ?'' (ಈ. ೭) ಎಂದು ಮುಂತಾಗಿರುವ ಮಂತ್ರವರ್ಣವು ಇದಕ್ಕೆ ಪ್ರಮಾಣವು.

## ಅಜಾತವಸ್ತುವಿಗೆ ದೃಷ್ಟಾಂತ

(ಭಾಷ್ಯ)

೨೯೪. ಯಥೋಕ್ತಂ ಪರಮಾರ್ಥದರ್ಶನಂ ಪ್ರಪಞ್ಚಯಿಷ್ಯನ್ ಆಹ-

(ಭಾಷ್ಯಾರ್ಥ)

ಮೇಲೆ ಹೇಳಿರುವ ಪರಮಾರ್ಥದರ್ಶನವನ್ನು ವಿಸ್ತರಿಸಬೇಕೆಂದು (ಈಗ ದೃಷ್ಟಾಂತವನ್ನು) ಹೇಳುತ್ತಾರೆ.

ಋಜುವಕ್ರಾದಿಕಾಭಾಸಮಲಾತಸ್ಪನ್ದಿತಂ ಯಥಾ ।
ಗ್ರಹಣಗ್ರಾಹಕಾಭಾಸಂ ವಿಜ್ಞಾನಸ್ಪನ್ದಿತಂ ತಥಾ ॥೪೭॥

೪೭. ಹೇಗೆ ನೆಟ್ಟಗಿರುವದು, ಸೊಟ್ಟಗಿರುವದು-ಮುಂತಾಗಿ ತೋರಿಕೊಳ್ಳುವದು ಅಲಾತಸ್ಪಂದಿತವೋ, ಹಾಗೆ ಅರಿಯುವಿಕೆ, ಅರಿಯುವವನು-ಎಂಬ (ರೂಪದಲ್ಲಿ) ತೋರಿಕೊಳ್ಳುವದು ವಿಜ್ಞಾನಸ್ಪಂದಿತವು.

(ಭಾಷ್ಯ)

೨೯೫. ಯಥಾ ಹಿ ಲೋಕೇ ಋಜುವಕ್ರಾದಿಪ್ರಕಾರಾಭಾಸಮ್ ಅಲಾತಸ್ಪನ್ದಿತಮ್

---

1. ಒಂದೊಂದು ದೇಹಕ್ಕೆ ಒಬ್ಬೊಬ್ಬ ಆತ್ಮನೆಂದು ತೋರುವದನ್ನನುಸರಿಸಿ ಧರ್ಮರು ಎಂದು ಬಹುವಚನವನ್ನುಪಯೋಗಿಸಿದೆಯೇ ಹೊರತು ನಿಜವಾಗಿ ಆತ್ಮರು ಅನೇಕರೆಂದು ತಿಳಿಸುವದಕ್ಕಲ್ಲ.

2. ಪುತ್ರಪಿತೃಲೋಕಗಳ ಬಯಕೆಗಳನ್ನು.

3. ಆತ್ಮಜ್ಞಾನಿಗೆ ದ್ವೈತಮಿಥ್ಯಾತ್ವವು ನಿಶ್ಚಯವಾಗಿಬಿಡುವದರಿಂದ ಮತ್ತೆ ಅದು ಸತ್ಯವೆಂಬ ಅಜ್ಞಾನವುಂಟಾಗಲಾರದು ಎಂದು ಭಾವ. ಆಚಾರ್ಯರು ಅವಿದ್ಯಾಲೇಶವಾದವನ್ನು, ಜ್ಞಾನಿಗೂ ಒಂದಿಷ್ಟು ಅವಿದ್ಯೆಯುಂಟೆಂಬುದನ್ನು, ಒಪ್ಪುವದಿಲ್ಲ.

ಉಲ್ಲಾಚಲನಮ್, ತಥಾ ಗ್ರಹಣಗ್ರಾಹಕಾಭಾಸಂ ವಿಷಯಿವಿಷಯಾಭಾಸಮ್ ಇತ್ಯರ್ಥಃ । ಕಿಂ ತತ್ ? ವಿಜ್ಞಾನಸ್ಪನ್ದಿತಮ್, ಸ್ಪನ್ದಿತಮಿವ ಸ್ಪನ್ದಿತಮ್ ಅವಿದ್ಯಯಾ । ನ ಹಿ ಅಚಲಸ್ಯ ವಿಜ್ಞಾನಸ್ಯ ಸ್ಪನ್ದನಮ್ ಅಸ್ತಿ । ''ಅಜಾಚಲಮ್'' (೪-೪೫) ಇತಿ ಹಿ ಉಕ್ತಮ್ ।।

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ನೆಟ್ಟಗಿರುವದು, ಸೊಟ್ಟಗಿರುವದು-ಮುಂತಾದ ಪ್ರಕಾರಗಳಿಂದ ತೋರುವದು ಅಲಾತಸ್ಪಂದಿತವೇ, ಕೊಳ್ಳಿಯ ತಿರುಗಾಟವೇ (ಆಗಿರುವದೋ), ಹಾಗೆ ಅರಿಯುವಿಕೆ, ಅರಿಯುವವನು-ಎಂಬ ರೂಪದಲ್ಲಿ ತೋರಿಕೊಳ್ಳುವದು ವಿಷಯಿವಿಷಯಗಳ (ರೂಪದಲ್ಲಿ) ತೋರಿಕೊಳ್ಳುವದು ಎಂದರ್ಥ. ಅದು ಯಾವದು ? ಎಂದರೆ ವಿಜ್ಞಾನಸ್ಪಂದಿತವು. ಅವಿದ್ಯೆಯಿಂದ ಅಲುಗಾಡುವಂತೆ ತೋರುವದನ್ನೇ ಇಲ್ಲಿ ಸ್ಪಂದಿತ (ವೆಂದು ಕರೆದಿದೆ)[1]. ಏಕೆಂದರೆ ಚಲನವಿಲ್ಲದ ವಿಜ್ಞಾನಕ್ಕೆ (ನಿಜವಾದ) ಅಲುಗಾಟವೇನೂ ಇರಲಾರದು. ''ಅಜವೂ ಅಚಲವೂ (ಆಗಿರುವದು)'' (೪-೪೫) ಎಂದಲ್ಲವೆ, (ಹಿಂದೆ) ಹೇಳಿದೆ ?

ಅಸ್ಪನ್ದಮಾನಮಲಾತಮನಾಭಾಸಮಜಂ ಯಥಾ ।
ಅಸ್ಪನ್ದಮಾನಂ ವಿಜ್ಞಾನಮನಾಭಾಸಮಜಂ ತಥಾ ।।೪೮।।

೪೮. ಅಲುಗಾಡದೆ ಇರುವ ಕೊಳ್ಳಿಯು ಹೇಗೆ (ಬೇರೆಯ ರೂಪದಿಂದ) ತೋರಿಕೊಳ್ಳದೆ ಅಜವಾಗಿರುವದೋ ಹಾಗೆ ಅಲುಗಾಡದೆ ಇರುವ ವಿಜ್ಞಾನವು (ಬೇರೆಯ ರೂಪದಿಂದ) ತೋರಿಕೊಳ್ಳದೆ ಅಜವಾಗಿರುವದು.

(ಭಾಷ್ಯ)

೨೯೬. ಅಸ್ಪನ್ದಮಾನಂ ಸ್ಪನ್ದನವರ್ಜಿತಂ ತದೇವ ಅಲಾತಮ್ ಋಜ್ವಾದ್ಯಾಕಾರೇಣ ಅಜಾಯಮಾನಮ್ ಅನಾಭಾಸಮ್ ಅಜಂ ಯಥಾ । ತಥಾ ಅವಿದ್ಯಯಾ ಸ್ಪನ್ದಮಾನಮ್ ಅವಿದ್ಯೋಪರಮೇ ಅಸ್ಪನ್ದಮಾನಮ್ (ವಿಜ್ಞಾನಂ)[2] ಜಾತ್ಯಾದ್ಯಾಕಾರೇಣ ಅನಾಭಾಸಮ್ ಅಜಮ್ ಅಚಲಂ ಭವಿಷ್ಯತಿ ಇತ್ಯರ್ಥಃ ।।

1. ಕೊಳ್ಳಿಯಲ್ಲಿಲ್ಲದ ಆಕಾರಗಳು ಹೇಗೆ ತೋರಿಕೊಳ್ಳುವವೋ ಹಾಗೆಯೇ ಆತ್ಮನಲ್ಲಿಲ್ಲದ ವಿಷಯಿವಿಷಯಭಾವವು ಅವಿದ್ಯೆಯಿಂದ ತೋರುವದು-ಎಂಬುದಿಷ್ಟೇ ದೃಷ್ಟಾಂತ ದಾರ್ಷ್ಟಾಂತಿಕಗಳಿಗೆ ಹೋಲಿಕೆಯು. ಕೊಳ್ಳಿಯು ನಿಜವಾಗಿ ತಿರುಗುವಂತೆ ಆತ್ಮನು ನಿಜವಾಗಿ ತಿರುಗುವದಿಲ್ಲ. ಅಂತಃಕರಣದ ಚಲನವನ್ನೇ ಆತ್ಮನಲ್ಲಿ ಆರೋಪಿಸುತ್ತೇವೆ. ಅಷ್ಟೆ. 2. ಈ ಮಾತು ಭಾಷ್ಯದಲ್ಲಿರಬೇಕಾದದ್ದು ಬಿಟ್ಟುಹೋಗಿದೆ. ಮೂಲಕ್ಕೆ ತಕ್ಕಂತೆ ಇಲ್ಲಿ ಇದನ್ನು ಸೇರಿಸಿಕೊಂಡಿದ್ದೇವೆ.

(ಭಾಷ್ಯಾರ್ಥ)

ಅಲುಗಾಡದಿರುವ ಅಲುಗಾಟವಿಲ್ಲದ ಅದೇ ಕೊಳ್ಳಿಯು ನೆಟ್ಟಗಿರುವದು-ಮುಂತಾದ ಆಕಾರದಿಂದ ಹುಟ್ಟದೆ ಇರುವಾಗ (ಬೇರೆಯ ರೂಪದಿಂದ) ತೋರಿಕೊಳ್ಳದ ಹೇಗೆ ಅಜ(ವಾಗಿರುವದೋ), ಹಾಗೆಯೇ ತಪ್ಪುತಿಳಿವಳಿಕೆಯಿಂದ ಅಲುಗಾಡುತ್ತಿದ್ದು ತಪ್ಪುತಿಳಿವಳಿಕೆಯು ಹೋಗುತ್ತಲೂ ಅಲುಗಾಡದೆ ಇರುವ ವಿಜ್ಞಾನವು ಜಾತಿಯೇ ಮುಂತಾದ ರೂಪದಿಂದ ತೋರಿಕೊಳ್ಳದೆ ಅಜವೂ ಅಚಲವೂ ಆಗುವದು[1] ಎಂದರ್ಥ.

ಅಲಾತೇ ಸ್ಪನ್ದಮಾನೇ ವೈ ನಾಭಾಸಾ ಅನ್ಯತೋಭುವಃ ।
ನ ತತೋಽನ್ಯತ್ರ ನಿಸ್ಪನ್ದಾನ್ನಾಲಾತಂ ಪ್ರವಿಶನ್ತಿ ತೇ ॥೪೯॥

೪೯. ಕೊಳ್ಳಿಯು ಅಲುಗಾಡುತ್ತಿರುವಾಗ ತೋರಿಕೆಗಳು ಮತ್ತೊಂದರಿಂದ ಆಗುವದಿಲ್ಲ. ಅಲುಗಾಡದೆ ಇರುವಾಗ ಅದನ್ನು ಬಿಟ್ಟು ಮತ್ತೊಂದು ಕಡೆ ಹೋಗುವದೂ ಇಲ್ಲ, ಕೊಳ್ಳಿಯನ್ನು ಪ್ರವೇಶಿಸುವದೂ ಇಲ್ಲ.

(ಭಾಷ್ಯ)

೨೯೭. ಕಿಂ ಚ ತಸ್ಮಿನ್ನೇವ ಅಲಾತೇ ಸ್ಪನ್ದಮಾನೇ । ವೈ ಋಜುವಕ್ರಾದ್ಯಾಭಾಸಾ ಅಲಾತಾತ್ ಅನ್ಯತಃ ಕುತಶ್ಚಿತ್ ಆಗತ್ಯ ಅಲಾತೇ ನೈವ ಭವನ್ತಿ ಇತಿ ನಾನ್ಯತೋಭುವಃ । ನ ಚ ತಸ್ಮಾತ್ ನಿಸ್ಪನ್ದಾತ್ ಅಲಾತಾತ್ ಅನ್ಯತ್ರ ನಿರ್ಗತಾಃ । ನ ಚ ನಿಸ್ಪನ್ದಮ್ ಅಲಾತಮೇವ ಪ್ರವಿಶನ್ತಿ ತೇ ॥

(ಭಾಷ್ಯಾರ್ಥ)

ಮತ್ತು ಅದೇ ಕೊಳ್ಳಿಯು ಅಲುಗಾಡುತ್ತಿರುವಾಗ ನೆಟ್ಟಗೆ ಸೊಟ್ಟಗೆ ಮುಂತಾಗಿ ತೋರುವ (ಆಕಾರಗಳು) ಕೊಳ್ಳಿಗಿಂತ ಬೇರೆಯಾದ ಯಾವದಾದರೊಂದು (ಪದಾರ್ಥ)[2] ದಿಂದ ಬಂದು ಕೊಳ್ಳಿಯಲ್ಲಿ ಇದ್ದುಕೊಂಡಿರುವದೇ ಇಲ್ಲವಾದ್ದರಿಂದ ಮತ್ತೊಂದರಿಂದ ಆಗುವದಿಲ್ಲ. ಆ ಕೊಳ್ಳಿಯು ಅಲುಗಾಡದೆ ಇರುವಾಗ (ಆ) ಕೊಳ್ಳಿಯಿಂದ ಮತ್ತೊಂದು

---

1. ಆತ್ಮನು ಯಾವಾಗಲೂ ಅಜನು, ಅಚಲನು. ಸರಿಯಾದ ಜ್ಞಾನವುಂಟಾದರೇ ಈ ವಿಷಯವು ಮನದಟ್ಟಾಗುವದರಿಂದ ತಪ್ಪುತಿಳಿವು ಹೋದರೆ ಹೀಗೆ ಆಗುವನು ಎಂದಿದೆ.

2. ಒಂದು ವಸ್ತುನಿನಲ್ಲಿ ಭ್ರಾಂತಿಯಿಂದ ತೋರುವ ಆಕಾರವು ಮತ್ತೊಂದು ಕಡೆಯಿಂದ ಬಂದು ಅಲ್ಲಿ ತೋರಿಕೊಳ್ಳುವದಿಲ್ಲ ; ಉದಾಹರಣೆಗೆ ಹಗ್ಗದಲ್ಲಿ ತೋರುವ ಭ್ರಾಂತಿಸರ್ಪವು ಹುತ್ತದಿಂದ ಹರಿದು ಬಂದು ಅಲ್ಲಿ ತೋರುತ್ತಿರುವದಿಲ್ಲ.

ಕಡೆಗೆ (ಅವು) ಹೋಗುವದಿಲ್ಲ[1] ; ಅಲುಗಾಡದೆ ಇರುವ ಆ ಕೊಳ್ಳಿಯನ್ನೂ ಅವು ಪ್ರವೇಶಿಸುವದಿಲ್ಲ[2].

न निर्गता अलातात् ते द्रव्यत्वाभावयोगतः ।
विज्ञानेऽपि तथैवस्युराभासस्याविशेषतः ॥೫೦॥

೫೦. ಅವು ಕೊಳ್ಳಿಯಿಂದ ಹೊರಟುಬಂದಿರುವದಿಲ್ಲ ; ಏಕೆಂದರೆ, ದ್ರವ್ಯತ್ವಾಭಾವಯೋಗದಿಂದ. ವಿಜ್ಞಾನ(ದ ವಿಷಯ)ದಲ್ಲಿಯೂ ಹೀಗೆಯೇ ಇರಬೇಕು. ಏಕೆಂದರೆ ತೋರಿಕೆಯೆಂಬುದು ಸಮಾನವಾಗಿದೆ.

(ಭಾಷ್ಯ)

೨೯೮. ಕಿಂಚ ನ ನಿರ್ಗತಾ ಅಲಾತಾತ್ ತೇ ಆಭಾಸಾಃ ಗೃಹಾದಿವ । ದ್ರವ್ಯತ್ವಾಭಾವಯೋಗತಃ । ದ್ರವ್ಯಸ್ಯ ಭಾವಃ ದ್ರವ್ಯತ್ವಮ್ । ತದಭಾವಃ ದ್ರವ್ಯತ್ವಾಭಾವಃ । ದ್ರವ್ಯತ್ವಾಭಾವಯೋಗತಃ ದ್ರವ್ಯತ್ವಾಭಾವಯುಕ್ತೇಃ । ವಸ್ತುತ್ವಾಭಾವಾತ್ ಇತ್ಯರ್ಥಃ । ವಸ್ತುನೋ ಹಿ ಪ್ರವೇಶಾದಿ ಸಮ್ಭವತಿ ನ ಅವಸ್ತುನಃ । ವಿಜ್ಞಾನೇಽಪಿ ಜಾತ್ಯಾದ್ಯಾ ಭಾಸಾಃ ತಥೈವ ಸ್ಯುಃ ಅಭಾಸಸ್ಯ ಅವಿಶೇಷತಃ ತುಲ್ಯತ್ವಾತ್ ॥

(ಭಾಷ್ಯಾರ್ಥ)

ಮತ್ತು ಆ ತೋರಿಕೆಗಳು ಮನೆಯಿಂದ (ಜನರು ಹೊರಕ್ಕೆ ಬರು)ವಂತೆ ಕೊಳ್ಳಿಯಿಂದ ಹೊರಟುಬಂಟರುವದಿಲ್ಲ[3]. (ಏಕೆಂದರೆ) ದ್ರವ್ಯತ್ವಾಭಾವಯೋಗದಿಂದ ; ದ್ರವ್ಯತ್ವವೆಂದರೆ ದ್ರವ್ಯದ ಭಾವವು ಅದು ಇಲ್ಲದ್ದು ದ್ರವ್ಯತ್ವಾಭಾವವು ; ದ್ರವ್ಯತ್ವಾಭಾವಯೋಗದಿಂದ, ದ್ರವ್ಯತ್ವವು ಅವುಗಳಲ್ಲಿಲ್ಲವೆಂಬ ಯುಕ್ತಿಯಿಂದ. (ಅವು ನಿಜವಾದ) ವಸ್ತುಗಳಲ್ಲವಾದ್ದರಿಂದ ಎಂದರ್ಥ. (ನಿಜವಾದ) ವಸ್ತುವಿಗೇ ಪ್ರವೇಶವೇ ಮುಂತಾದದ್ದು ಹೊಂದುವದೇ ಹೊರತು ಅವಸ್ತುವಿಗೆ (ಹೊಂದುವ)ದಿಲ್ಲ. ವಿಜ್ಞಾನದ ವಿಷಯದಲ್ಲಿಯೂ ಜಾತಿಯೇ ಮುಂತಾದ ತೋರಿಕೆಗಳು ಹಾಗೆಯೇ.

1. ಅಲುಗಾಡುತ್ತಿದ್ದ ಕೊಳ್ಳಿಯಲ್ಲಿ ಆಕಾರಗಳು ನಿಜವಾಗಿ ಅದರಲ್ಲಿದ್ದು ಬಳಿಕ ಅದನ್ನು ಬಿಟ್ಟು ಎಲ್ಲಿಗೋ ಹೋಗುವವೆಂದು ಕಲ್ಪಿಸುವದು ಅನುಭವಾನುಗುಣವಲ್ಲ.

2. ಅಲುಗಾಡುವಂತೆ ತೋರುತ್ತಿದ್ದ ಆಕಾರಗಳು ಅದು ಅಲುಗಾಡುವದು ನಿಲ್ಲುತ್ತಲೂ ಅದರೊಳಕ್ಕೆ ಸೇರಿಕೊಂಡುಬಿಡುವದೆಂದು ಯಾರೂ ನಂಬುವದಿಲ್ಲ.

3. ಕೊಳ್ಳಿಯೊಳಕ್ಕೆ ಆಕಾರಗಳು ಸೇರುವದಿಲ್ಲವೆಂಬದರಷ್ಟೇ ಅದರಿಂದ ಅವು ಹೊರಕ್ಕೆ ಬಂದಿರುವದಿಲ್ಲವೆಂಬುದೂ ನಿಶ್ಚಯವು.

ಇರಬೇಕು[1], ಏಕೆಂದರೆ ತೋರಿಕೆಯಾಗಿರುವದೆಂಬುದು, ಅವಿಶೇಷವಾಗಿದೆ, (ಅವಕ್ಕೂ) ಸಮಾನವಾಗಿರುತ್ತದೆ.

(ಭಾಷ್ಯ)

೨೯೯. ಕಥಂ ತುಲ್ಯತ್ವಮ್ ಇತಿ ? ಆಹ-

(ಭಾಷ್ಯಾರ್ಥ)

(ತೋರಿಕೆಗಳಿರಡೂ) ಸಮಾನವೆಂಬುದು ಹೇಗೆ ? ಎಂದರೆ ಹೇಳುತ್ತಾರೆ :

ವಿಜ್ಞಾನೇ ಸ್ಪನ್ದಮಾನೇ ವೈ ನಾಭಾಸಾ ಅನ್ಯತೋಭುವಃ ।
ನ ತತೋಽನ್ಯತ್ರ ನಿಸ್ಪನ್ದಾನ್ನ ವಿಜ್ಞಾನಂ ವಿಶನ್ತಿ ತೇ ॥೫೧॥

ನ ನಿರ್ಗತಾಸ್ತೇ ವಿಜ್ಞಾನಾದ್ದ್ರವ್ಯತ್ವಾಭಾವಯೋಗತಃ ।
ಕಾರ್ಯಕಾರಣತಾಭಾವಾದ್ಯತೋಽಚಿನ್ತ್ಯಾಃ ಸದೈವ ತೇ ॥೫೨॥

೫೧-೫೨. ವಿಜ್ಞಾನವು ಅಲುಗಾಡುತ್ತಿರುವಾಗ ತೋರಿಕೆಗಳು ಮತ್ತೊಂದರಿಂದ ಆಗಿರುವದಿಲ್ಲ. ಅಲುಗಾಡದೆ ಇರುವಾಗ ಆ (ವಿಜ್ಞಾನ) ದಿಂದ ಬೇರೆ (ಕಡೆಗೆ ಹೋಗುವದೂ) ಇಲ್ಲ ; ಅವು ವಿಜ್ಞಾನವನ್ನು ಸೇರಿಕೊಳ್ಳುವದೂ ಇಲ್ಲ. ಅವು ವಿಜ್ಞಾನದಿಂದ ಹೊರಟುಬಂದಿರುವದಿಲ್ಲ, (ಏಕೆಂದರೆ) ದ್ರವ್ಯತ್ವಾಭಾವಯುಕ್ತಿಯಿರುವದರಿಂದ. ಏಕೆಂದರೆ ಕಾರ್ಯಕಾರಣತ್ವವು ಇಲ್ಲದ್ದರಿಂದ ಅವು ಯಾವಾಗಲೂ ಅಚಿಂತ್ಯಗಳೇ (ಆಗಿರುತ್ತವೆ).

(ಭಾಷ್ಯ)

೩೦೦. ಅಲಾತೇನ ಸಮಾನಂ ಸರ್ವಂ ವಿಜ್ಞಾನಸ್ಯ । ಸದಾ ಅಚಲತ್ವಂ ತು ವಿಜ್ಞಾನಸ್ಯ ವಿಶೇಷತಃ । ಜಾತ್ಯಾದ್ಯಾಭಾಸಾಃ ವಿಜ್ಞಾನೇ ಅಚಲೇ ಕಿಂಕೃತಾಃ ಇತಿ ? ಆಹ- ಕಾರ್ಯಕಾರಣತಾಭಾವಾತ್ ಜನ್ಯಜನಕತ್ವಾನುಪಪತ್ತೇಃ । ಅಭಾವರೂಪತ್ವಾತ್, ಅಚಿನ್ತ್ಯಾಃ ತೇ ಯತಃ ಸದೈವ । ಯಥಾ ಅಸತ್ಸು ಋಜ್ವಾದ್ಯಾಭಾಸೇಷು ಋಜ್ವಾದಿ ಬುದ್ಧಿಃ ದೃಷ್ಟಾ ಅಲಾತಮಾತ್ರೇ ತಥಾ ಅಸತ್ಸ್ವೇವ ಜಾತ್ಯಾದಿಷು ವಿಜ್ಞಾನಮಾತ್ರೇ ಜಾತ್ಯಾದಿಬುದ್ಧಿಃ ಮೃಷೈವ ಇತಿ ಸಮುದಾಯಾರ್ಥಃ ॥

---

1. ಕೊಳ್ಳಿಯ ಆಕಾರಾಭಾಸಗಳಂತಯೇ ಮಿಥ್ಯೆ.

(ಭಾಷ್ಯಾರ್ಥ)

ವಿಜ್ಞಾನಕ್ಕೂ ಕೊಳ್ಳಿಗೂ ಎಲ್ಲವೂ ಸಮಾನವಾಗಿಯೇ[1] ಇರುವದು. ಆದರೆ ಯಾವಾಗಲೂ ಅಲುಗಾಡದೆ ಇರುವದೆಂಬುದು ವಿಜ್ಞಾನದ ವಿಶೇಷವು.

(ಹಾಗಾದರೆ) ಅಲುಗಾಡದಿರುವ ವಿಜ್ಞಾನದಲ್ಲಿ ಹುಟ್ಟುವದೇ ಮುಂತಾದ ತೋರಿಕೆಗಳು ಏತರಿಂದಾಗುತ್ತವೆ ? ಎಂದರೆ ಹೇಳುತ್ತಾರೆ : ಏಕೆಂದರೆ (ಅವು) ಅಭಾವ ರೂಪವಾಗಿರುವದರಿಂದ[2], (ವಿಜ್ಞಾನಕ್ಕೂ, ಅವಕ್ಕೂ) ಕಾರ್ಯಕಾರಣಭಾವವಿಲ್ಲ ದ್ದರಿಂದ (ಇದೇ ಹುಟ್ಟಿಸಲ್ಪಡತಕ್ಕದ್ದು, ಇದು) ಹುಟ್ಟಿಸತಕ್ಕದ್ದು-ಎಂಬುದಿಲ್ಲ ದ್ದರಿಂದ, ಅಚಿಂತ್ಯವಾಗಿಯೇ ಇರುತ್ತವೆ. ಹೇಗೆ 'ನೆಟ್ಟಗಿರುವದು' ಎಂದು ಮುಂತಾದ ತೋರಿಕೆಗಳು ಇಲ್ಲದಿದ್ದರೂ ಬರಿಯ ಕೊಳ್ಳಿಯ (ವಿಷಯಕ್ಕೇ) ನೆಟ್ಟಗಿದೆ ಎಂದು ಮುಂತಾದ ಬುದ್ಧಿಯುಂ(ಟಾಗುವದು) ಕಂಡುಬಂದಿದೆಯೋ[3] ಹಾಗೆಯೇ ಜಾತ್ಯಾದಿಗಳು ಇಲ್ಲವೇ ಇಲ್ಲವಾದರೂ ಬರಿಯ ವಿಜ್ಞಾನ(ದ ವಿಷಯಕ್ಕೆ ಅದು) 'ಹುಟ್ಟುವದು' ಎಂದು ಮುಂತಾದ ಬುದ್ಧಿಯು ಸುಳ್ಳುಸುಳ್ಳಾಗಿಯೇ (ಉಂಟಾಗಿರುತ್ತದೆ) ಎಂದು ಒಟ್ಟರ್ಥವು.

## ಆತ್ಮನಲ್ಲಿ ಕಾರ್ಯಕಾರಣಭಾವವಿಲ್ಲವೆಂಬುದಕ್ಕೆ ಯುಕ್ತಿ

(ಭಾಷ್ಯ)

೩೦೧. ಅಜಮ್ ಏಕಮ್ ಆತ್ಮತತ್ತ್ವಮ್ ಇತಿ ಸ್ಥಿತಮ್ । ತತ್ರ ಯೈರಪಿ ಕಾರ್ಯಕಾರಣಭಾವಃ ಕಲ್ಪ್ಯತೇ, ತೇಷಾಮ್-

(ಭಾಷ್ಯಾರ್ಥ)

ಆತ್ಮತತ್ತ್ವವು ಹುಟ್ಟುವದಲ್ಲ, ಒಂದು-ಎಂದು ನಿರ್ಣಯವಾಯಿತು. ಅದರಲ್ಲಿ ಯಾರು ಕಾರ್ಯಕಾರಣಭಾವವನ್ನು ಕಲ್ಪಿಸುವರೋ ಅವರ (ಮತದಲ್ಲಿಯೂ)-

1. ತೋರಿಕೆಗಳು ಹುಟ್ಟಿಲ್ಲ. ಲಯವಾಗುವದೂ ಇಲ್ಲ-ಎಂಬುದು ಸಮಾನ. ೧-೧೭, ೧-೧೮,-ಇವುಗಳ ಭಾಷ್ಯವನ್ನು ನೋಡಿ.

2. ಯಾವದಾದರೊಂದು ವಸ್ತುವಿನ ಅಭಾವವೆಂದರ್ಥವಲ್ಲ, ಹುಸಿತೋರಿಕೆಯೆಂದೇ ಅರ್ಥ. ಹುಸಿತೋರಿಕೆಯೆಂಬುದು ವಸ್ತುವಲ್ಲ. ಆದ್ದರಿಂದ ಅದಕ್ಕೆ ಕಾರಣದ ಅಪೇಕ್ಷೆಯಿಲ್ಲ.

3. ಪ್ರಾತಿಭಾಸಿಕವಸ್ತುಗಳು, ಹುಸಿತೋರಿಕೆಗಳು, ಬುದ್ಧಿಕಲ್ಪಿತವಾಗಿರುವವೇ ಹೊರತು ತಮ್ಮ ರೂಪದಲ್ಲಿ ನಿಜವಾಗಿರುವದೇ ಇಲ್ಲ. ಆದ್ದರಿಂದ ಅವುಗಳ ಹುಟ್ಟು ಬೆಳವಣಿಗೆ, ಲಯ-ಮುಂತಾದವುಗಳೆಲ್ಲ ವಿಕಲ್ಪವೇ ಎಂದು ಭಾವ.

ದ್ರವ್ಯಂ ದ್ರವ್ಯಸ್ಯ ಹೇತುಃ ಸ್ಯಾದನ್ಯದನ್ಯಸ್ಯ ಚೈವ ಹಿ ।
ದ್ರವ್ಯತ್ವಮನ್ಯಭಾವೋ ವಾ ಧರ್ಮಾಣಾಂ ನೋಪಪದ್ಯತೇ

೫೩. ದ್ರವ್ಯವು ದ್ರವ್ಯಕ್ಕೆ ಹೇತುವಾದೀತು ; ಒಂದು ಮತ್ತೊಂದಕ್ಕೇ ಕಾರಣವಾದೀತು ಅಲ್ಲವೆ ? (ಆದರೆ) ಧರ್ಮರುಗಳು ದ್ರವ್ಯವೆಂಬುದಾಗಲಿ ಬೇರೆಯೆಂಬುದಾಗಲಿ ಹೊಂದುವದಿಲ್ಲ.

(ಭಾಷ್ಯ)

೫೩. ದ್ರವ್ಯಂ ದ್ರವ್ಯಸ್ಯ ಅನ್ಯಸ್ಯ ಅನ್ಯತ್ ಹೇತುಃ ಕಾರಣಂ ಸ್ಯಾತ್ । ನ ತು ತಸ್ಯೈವ ತತ್ । ನಾಽಪಿ ಅದ್ರವ್ಯಂ ಕಸ್ಯಚಿತ್ ಕಾರಣಂ ಸ್ವತನ್ತ್ರಂ ದೃಷ್ಟಂ ಲೋಕೇ । ನ ಚ ದ್ರವ್ಯತ್ವಂ ಧರ್ಮಾಣಾಮ್ ಆತ್ಮನಾಮ್ ಉಪಪದ್ಯತೇ । ಅನ್ಯತ್ವಂ ವಾ ಕುತಶ್ಚಿತ್, ಯೇನ ಅನ್ಯಸ್ಯ ಕಾರಣತ್ವಂ ಕಾರ್ಯತ್ವಂ ವಾ ಪ್ರತಿಪದ್ಯೇತ । ಅತಃ ಅದ್ರವ್ಯತ್ವಾತ್ ಅನನ್ಯತ್ವಾಚ್ಚ ನ ಕಸ್ಯಚಿತ್ ಕಾರ್ಯಂ ಕಾರಣಂ ವಾ ಆತ್ಮಾ ಇತ್ಯರ್ಥಃ ॥

(ಭಾಷ್ಯಾರ್ಥ)

(ಒಂದು) ದ್ರವ್ಯವು (ಮತ್ತೊಂದು) ದ್ರವ್ಯಕ್ಕೆ ಕಾರಣವಾದೀತು[1]. ಒಂದು ಮತ್ತೊಂದಕ್ಕೆ ಕಾರಣವಾದೀತು ; ಆದರೆ ತನಗೆ ತಾನೇ (ಕಾರಣ)ವಾಗಲಾರದು. ದ್ರವ್ಯವಲ್ಲದ್ದಾದರೂ ಯಾವದಕ್ಕೂ ಸ್ವತಂತ್ರವಾಗಿ[2] ಕಾರಣ(ವಾಗಿರುವದು) ಲೋಕದಲ್ಲಿ ಕಂಡುಬಂದಿಲ್ಲ. ಆದರೆ ಧರ್ಮರುಗಳು ಆತ್ಮರುಗಳು ದ್ರವ್ಯವೆಂಬುದಾಗಲಿ, ಮತ್ತೊಂದಕ್ಕಿಂತ ಬೇರೆಯೆಂಬುದಾಗಲಿ[3] ಹೊಂದುವದಿಲ್ಲ ; ಹಾಗಿದ್ದರೆ (ಆತ್ಮನು) ಮತ್ತೊಂದಕ್ಕೆ ಕಾರಣವೆಂದಾಗಲಿ ಕಾರ್ಯವೆಂದಾಗಲಿ ಆಗಬಹುದಾಗಿತ್ತು. ಆದ್ದರಿಂದ ಆತ್ಮನು ದ್ರವ್ಯ

---

1. ಒಂದು ದ್ರವ್ಯವು ಮತ್ತೊಂದು ದ್ರವ್ಯಕ್ಕೆ ಕಾರಣವಾದೀತು-ಎಂಬ ಅಭಿಪ್ರಾಯವು 'ಅನ್ಯತ್ ದ್ರವ್ಯಂ ಅನ್ಯಸ್ಯ ಹೇತುಃ ಸ್ಯಾತ್' ಎಂದು ಅನ್ವಯಿಸಿದರೆ ಹೊರಡುತ್ತದೆ. ಮೂಲವು ಈಗ ಇರುವಂತೆ ದ್ರವ್ಯವು ದ್ರವ್ಯಕ್ಕೆ ಸಮವಾಯಿಕಾರಣವು. ಅದ್ರವ್ಯವು ಎಂದರೆ ಗುಣವು ಕಾರ್ಯವಾದ ಅವಯವಿಯ ಗುಣಗಳಿಗೆ ಕಾರಣ ಎಂದು ಅರ್ಥವನ್ನು ಮಾಡಬೇಕಾಗುವದು.

2. ನೂಲಿನ ರೂಪವು ಬಟ್ಟೆಯ ರೂಪಕ್ಕೆ ಕಾರಣವಾಗಿರುವದಾದರೂ ಸ್ವತಂತ್ರವಾಗಿ ಕಾರಣವಲ್ಲ, ನೂಲಿನ ಮೂಲಕವಾಗಿ ಅಸಮವಾಯಿಕಾರಣವಾಗಿರುತ್ತದೆ ಎಂದು ವೈಶೇಷಿಕರು ಹೇಳುತ್ತಾರೆ.

3. ಆತ್ಮನು ಮತ್ತೊಂದಕ್ಕಿಂತ ಬೇರೆಯಲ್ಲ, ಏಕೆಂದರೆ ಆ ಮತ್ತೊಂದೆಂಬುದು ನಿಜವಾಗಿಲ್ಲ. ಒಂದು, ಇನ್ನೊಂದು-ಎಂದು ಕಲ್ಪನೆಮಾಡುವದಕ್ಕೆ ಎರಡೂ ದೇಶಕಾಲಗಳಲ್ಲಿರಬೇಕು. ಆದರೆ ಆತ್ಮನು ದೇಶಕಾಲಗಳನ್ನು ಮೀರಿರುತ್ತಾನೆ.

ವಲ್ಲದ್ದರಿಂದಲೂ (ಮತ್ತೊಂದಕ್ಕಿಂತ) ಬೇರೆಯಲ್ಲದೆ (ಇರುವದ)ರಿಂದಲೂ ಆತ್ಮನು ಯಾವದಕ್ಕೂ ಕಾರ್ಯವೂ ಅಲ್ಲ, ಕಾರಣವೂ ಅಲ್ಲ ಎಂದರ್ಥ.

ಏವಂ ನ ಚಿತ್ತಜಾ ಧರ್ಮಾಶ್ಚಿತ್ತಂ ವಾಪಿ ನ ಧರ್ಮಜಮ್ ।
ಏವಂ ಹೇತುಫಲಾಜಾತಿಂ ಪ್ರವಿಶನ್ತಿ ಮನೀಷಿಣಃ ॥೫೪॥

೫೪. ಹೀಗೆ ಚಿತ್ತದಿಂದ ಧರ್ಮಗಳು ಹುಟ್ಟುವದಿಲ್ಲ, ಚಿತ್ತವೂ ಧರ್ಮಗಳಿಂದ ಹುಟ್ಟುವದಿಲ್ಲ. ಹೀಗೆ ಹೇತುಫಲಗಳು ಹುಟ್ಟುವದಿಲ್ಲ(ವೆಂಬ ಮತವನ್ನು) ಪಂಡಿತರು ಪ್ರವೇಶಿಸುವರು.

(ಭಾಷ್ಯ)

೩೦೩. ಏವಂ ಯಥೋಕ್ತೇಭ್ಯೋ ಹೇತುಭ್ಯಃ ಆತ್ಮವಿಜ್ಞಾನಸ್ವರೂಪಮೇವ ಚಿತ್ತಮ್ ಇತಿ ನ ಚಿತ್ತಜಾ ಬಾಹ್ಯಧರ್ಮಾಃ, ನಾಽಪಿ ಬಾಹ್ಯಧರ್ಮಜಂ ಚಿತ್ತಮ್ । ವಿಜ್ಞಾನಸ್ವರೂಪಾಭಾಸಮಾತ್ರತ್ವಾತ್ ಸರ್ವಧರ್ಮಾಣಾಮ್ । ಏವಂ ನ ಹೇತೋಃ ಫಲಂ ಜಾಯತೇ, ನಾಪಿ ಫಲಾತ್ ಹೇತುಃ-ಇತಿ ಹೇತುಫಲಯೋಃ ಅಜಾತಿಂ ಹೇತುಫಲಾಜಾತಿಂ ಪ್ರವಿಶನ್ತಿ ಅಧ್ಯವಸ್ಯನ್ತಿ । ಆತ್ಮನಿ ಹೇತುಫಲಯೋಃ ಅಭಾವಮೇವ ಪ್ರತಿಪದ್ಯನ್ತೇ[1] ಬ್ರಹ್ಮವಿದಃ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಮೇಲೆ ಹೇಳಿದ ಕಾರಣಗಳಿಂದ[2] ಚಿತ್ತವು ಆತ್ಮನೆಂಬ ವಿಜ್ಞಾನದ ಸ್ವರೂಪವೇ ಆಗಿರುವದರಿಂದ ಹೊರಗಿನ ಧರ್ಮಗಳು[3] ಚಿತ್ತದಿಂದ ಹುಟ್ಟುವದಿಲ್ಲ, ಹೊರಗಿನ ಧರ್ಮಗಳಿಂದ ಚಿತ್ತವೂ ಹುಟ್ಟುವದಿಲ್ಲ. ಏಕೆಂದರೆ ಎಲ್ಲಾ ಧರ್ಮಗಳೂ[4] ವಿಜ್ಞಾನಸ್ವರೂಪದ ಬರಿಯ ತೋರಿಕೆಗಳಾಗಿರುತ್ತವೆ. ಹೀಗಿರುವದರಿಂದ ಹೇತುವಿನಿಂದ ಫಲವೂ ಹುಟ್ಟುವದಿಲ್ಲ,, ಫಲದಿಂದ ಹೇತುವೂ ಹುಟ್ಟುವದಿಲ್ಲ-ಎಂದು ಹೇತುಫಲಗಳೆರಡೂ ಹುಟ್ಟುವದಿಲ್ಲ(ವೆಂಬ ಮತವನ್ನು ಪಂಡಿತರು) ಪ್ರವೇಶಿಸುವರು, (ಅದೇ

---

1. ಇಲ್ಲಿ 'ಮನೀಷಿಣಃ' ಎಂಬ ಮಾತು ಬಿಟ್ಟುಹೋಗಿದೆಯೆಂದು ಕಾಣುತ್ತದೆ.

2. ತೋರಿಕೆಗಳಿಗೆ ಹೇಗೂ ಜನ್ಮವಿಲ್ಲ ; ಅವುಗಳಿಗೆ ಲಯವೂ ಇಲ್ಲ ; ಅವು ಅಚಿಂತ್ಯವಾಗಿವೆ ; ಆತ್ಮನು ದ್ರವ್ಯವಲ್ಲದ್ದರಿಂದ ಕಾರ್ಯವಲ್ಲ ಕಾರಣವೂ ಅಲ್ಲ-ಎಂಬ ಕಾರಣಗಳಿಂದ.

3. ಹೊರಗಿನ ವಿಷಯಗಳು.

4. ಚಿತ್ತವೂ ವಿಷಯಗಳೂ.

ಸರಿ ಎಂದು) ನಿಶ್ಚಯಿಸುವರು. ಆತ್ಮನಲ್ಲಿ ಹೇತುಫಲಗಳು ಇಲ್ಲವೇ ಇಲ್ಲವೆಂದು ಮನೀಷಿಗಳು ಬ್ರಹ್ಮಜ್ಞಾನಿಗಳು ಅರಿತಿರುವರು ಎಂದರ್ಥ[1].

## ಹೇತುಫಲಾಭಿಮಾನವು ಹೋದರೆ ಮುಕ್ತಿ

(ಭಾಷ್ಯ)

೩೦೪. ಯೇ ಪುನಃ ಹೇತುಫಲಯೋಃ ಅಭಿನಿವಿಷ್ಟಾಃ ತೇಷಾಂ ಕಿಂ ಸ್ಯಾತ್ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಆದರೆ ಯಾರು ಹೇತುಫಲಗಳಲ್ಲಿ ಅಭಿಮಾನವುಳ್ಳವರಾಗಿರುವರೋ ಅವರಿಗೆ ಏನಾಗುವದು ? ಎಂದರೆ ಹೇಳುತ್ತಾರೆ :-

**ಯಾವದ್ಧೇತುಫಲಾವೇಶಸ್ತಾವದ್ಧೇತುಫಲೋದ್ಭವಃ ।**
**ಕ್ಷೀಣೇ ಹೇತುಫಲಾವೇಶೇ ನಾಸ್ತಿ ಹೇತುಫಲೋದ್ಭವಃ ॥೫೫॥**

೫೫. ಎಲ್ಲಿಯವರೆಗೆ ಹೇತುಫಲಾವೇಶವಿರುವದೋ ಅಲ್ಲಿಯವರೆಗೆ ಹೇತುಫಲೋದ್ಭವ(ವಿರುವದು) ; ಹೇತುಫಲಾವೇಶವು ಕ್ಷಯವಾದರೆ ಹೇತು ಫಲೋದ್ಭವವಿರುವದಿಲ್ಲ.

(ಭಾಷ್ಯ)

೩೦೫. "ಧರ್ಮಾಧರ್ಮಾಖ್ಯಸ್ಯ ಹೇತೋಃ ಅಹಂ ಕರ್ತಾ ಮಮ ಧರ್ಮಾಧರ್ಮೌ, ತತ್ಫಲಂ ಕಾಲಾನ್ತರೇ ಕ್ವಚಿತ್ ಪ್ರಾಣಿನಿಕಾಯೇ ಜಾತಃ ಭೋಕ್ಷ್ಯೆ" ಇತಿ ಯಾವತ್ ಹೇತುಫಲಯೋಃ ಆವೇಶಃ ಹೇತುಫಲಾಗ್ರಹಃ ಆತ್ಮನಿ ಅಧ್ಯಾರೋಪಣಮ್ ತಚ್ಚಿತ್ತತಾ ಇತ್ಯರ್ಥಃ । ತಾವತ್ ಹೇತುಫಲಯೋಃ ಉದ್ಭವಃ ಧರ್ಮಾಧರ್ಮಯೋಃ ತತ್ಫಲಸ್ಯ ಚ ಅನುಚ್ಛೇದೇನ ಪ್ರವೃತ್ತಿಃ ಇತ್ಯರ್ಥಃ । ಯದಾ ಪುನಃ ಮನ್ತ್ರೌಷಧಿ ವೀರ್ಯೇಣೇವ ಗ್ರಹಾವೇಶಂ ಯಥೋಕ್ತಾದ್ವೈತದರ್ಶನೇನ ಅವಿದ್ಯೋದ್ಭೂತಹೇತುಫಲಾವೇಶಃ ಅಪನೀತೋ ಭವತಿ, ತದಾ ತಸ್ಮಿನ್ ಕ್ಷೀಣೇ ನಾಸ್ತಿ ಹೇತುಫಲೋದ್ಭವಃ ॥

---

1. ಧರ್ಮಾಧರ್ಮಗಳೆಂಬ ಹೇತು, ಶರೀರವೆಂಬ ಫಲ-ಇವು ಹುಟ್ಟುವವೆಂದರೆ ಅನ್ಯೋನ್ಯಾಶ್ರಯಾದಿದೋಷವುಂಟಾಗುವದು ಎಂದು ಹಿಂದೆ ಹೇಳಿತ್ತು. ಅವು ತೋರಿಕೆಗಳಾಗಿರುವದರಿಂದ ಹುಟ್ಟುವ ಯೋಗ್ಯತೆಯೇ ಅವಕ್ಕಿಲ್ಲವೆಂದು ಈಗ ಹೇಳಿದ.

(ಭಾಷ್ಯಾರ್ಥ)

ಧರ್ಮಾಧರ್ಮಗಳೆಂಬ "ಹೇತುವಿಗೆ ನಾನು ಕರ್ತನು, ಈ ಧರ್ಮಾಧರ್ಮಗಳು ನನ್ನವು, ಅವುಗಳ ಫಲವನ್ನು ಮತ್ತೊಂದು ಕಾಲದಲ್ಲಿ ಯಾವದೋ ಒಂದು ಜೀವರಾಶಿಯಲ್ಲಿ ಹುಟ್ಟಿ ಅನುಭವಿಸುವೆನು" ಎಂದು ಎಲ್ಲಿಯವರೆಗೆ ಹೇತುಫಲಗಳಲ್ಲಿ ಆವೇಶ(ವಿರುವದೋ), ಹೇತುಫಲಗಳಲ್ಲಿ ಪಟ್ಟುಹಿಡಿದಿರುವಿಕೆಯು, ತನ್ನಲ್ಲಿ (ಅವನ್ನು) ಹುಟ್ಟುಗಟ್ಟಿಕೊಂಡಿರುವಿಕೆಯು, ಅದೇ ಚಿತ್ತವಿಟ್ಟುಕೊಂಡಿರುವಿಕೆಯು (ಇರುವದೋ) ಎಂದರ್ಥ. ಅಲ್ಲಿಯವರೆಗೆ ಹೇತುಫಲಗಳ ಉದ್ಭವ(ವಿರುವದು), ಧರ್ಮಾಧರ್ಮಗಳೂ ಅದರ ಫಲವೂ ನಾಶವಾಗದೆ ಮುನ್ನಡೆ(ಯುತ್ತಿರುವವು) ಎಂದರ್ಥ. ಆದರೆ ಯಾವಾಗ ಮಂತ್ರ, ಔಷಧಿ-ಇವುಗಳ ಸಾಮರ್ಥ್ಯದಿಂದ ಗ್ರಹದ (ಆವೇಶವು ಬಿಡುಗಡೆಯಾಗು)ವಂತೆ ಮೇಲೆ ಹೇಳಿರುವ ಅದ್ವೈತದರ್ಶನದಿಂದ ಅವಿದ್ಯೆಯಿಂದ ಉಂಟಾಗಿದ್ದ ಹೇತುಫಲಗಳ ಹಿಡಿತವು[1] ಕಳೆದುಹೋಗುವದೋ ಆಗ ಅದು ಕ್ಷಯವಾಗಲು ಹೇತುಫಲಗಳ ಹುಟ್ಟುವಿಕೆಯು ಇರುವದಿಲ್ಲ.

(ಭಾಷ್ಯ)

೩೦೬. ಯದಿ ಹೇತುಫಲೋದ್ಭವಃ, ತದಾ ಕೋ ದೋಷಃ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಹೇತುಫಲಗಳ ಹುಟ್ಟುವಿಕೆಯು ಇದೆಯಾದರೆ ಆಗ ದೋಷವೇನು ? ಎಂದರೆ ಹೇಳುತ್ತಾರೆ :-

ಯಾವದ್ಧೇತುಫಲಾವೇಶಃ ಸಂಸಾರಸ್ತಾವದಾಯತಃ ।
ಕ್ಷೀಣೇ ಹೇತುಫಲಾವೇಶೇ ಸಂಸಾರಂ ನ ಪ್ರಪದ್ಯತೇ ॥೫೬॥

೫೬. ಎಲ್ಲಿಯವರೆಗೆ ಹೇತುಫಲಾವೇಶವಿರುವದೋ ಅಲ್ಲಿಯವರೆಗೆ ಸಂಸಾರವು ಆಯತ(ವಾಗಿರುತ್ತದೆ) ; ಹೇತುಫಲಾವೇಶವು ಕ್ಷೀಣವಾದರೆ ಸಂಸಾರವನ್ನು ಹೊಂದುವದಿಲ್ಲ.

(ಭಾಷ್ಯ)

೩೦೭. ಯಾವತ್ ಸಮ್ಯಗ್ದರ್ಶನೇನ ಹೇತುಫಲಾವೇಶಃ ನ ನಿವರ್ತತೇ । ಅಕ್ಷೀಣಃ,

---

1. ಅವಿದ್ಯೆಯೇ ಹೇತುಫಲಗಳ ಅಭಿಮಾನಕ್ಕೆ ಕಾರಣ, ವಿದ್ಯೆಯಿಂದ ಅವಿದ್ಯೆಯು ಹೋದ ಕೂಡಲೆ ಗ್ರಹದ ಪಟ್ಟಿನಿಂದ ಬಿಡುಗಡೆಯಾದವನಂತೆ ಮನುಷ್ಯನು ಧರ್ಮಾಧರ್ಮಗಳ ಹಿಡಿತದಿಂದ ಪಾರಾಗುತ್ತಾನೆ.

ಸಂಸಾರಃ ತಾವತ್ ಆಯತಃ ದೀರ್ಘೋ ಭವತಿ ಇತ್ಯರ್ಥಃ । ಕ್ಷೀಣೇ ಪುನಃ ಹೇತು ಫಲಾವೇಶೇ ಸಂಸಾರಂ ನ ಪ್ರಪದ್ಯತೇ । ಕಾರಣಾಭಾವಾತ್ ।।

(ಭಾಷ್ಯಾರ್ಥ)

ಎಲ್ಲಿಯವರೆಗೆ ಸರಿಯಾದ ತಿಳಿವಳಿಕೆಯಿಂದ ಹೇತುಫಲಗಳ ಅಭಿಮಾನವು ಹೋಗದೆ ಇರುವದೋ ನಾಶವಾಗದೆ ಇರುವದೋ ಅಲ್ಲಿಯವರೆಗೆ ಸಂಸಾರವು ಆಯತ (ವಾಗಿರುತ್ತದೆ), ಉದ್ದಕ್ಕೆ ಇದ್ದುಕೊಂಡಿರುತ್ತದೆ ಎಂದರ್ಥ. ಆದರೆ ಹೇತುಫಲಗಳ ಅಭಿಮಾನವು ನಾಶವಾಗಿಬಿಟ್ಟರೆ ಆಗ (ಜೀವನು) ಸಂಸಾರವನ್ನು ಹೊಂದುವದಿಲ್ಲ ; ಏಕೆಂದರೆ (ಆಗ ಅದಕ್ಕೆ) ಕಾರಣವಿರುವದಿಲ್ಲ[1].

## ಪರಮಾರ್ಥದೃಷ್ಟಿಯಲ್ಲಿ ನಿತ್ಯಾನಿತ್ಯವಿಭಾಗವಿಲ್ಲ

(ಭಾಷ್ಯ)

೩೦೮. ನನು ಅಜಾತ್ ಆತ್ಮನಃ ಅನ್ಯತ್ ನಾಸ್ತ್ಯೇವ । ತತ್ ಕಥಂ ಹೇತು ಫಲಯೋಃ ಸಂಸಾರಸ್ಯ ಚ ಉತ್ಪತ್ತಿವಿನಾಶೌ ಉಚ್ಯೇತೇ ತ್ವಯಾ ? ಶೃಣು ।

(ಭಾಷ್ಯಾರ್ಥ)

(ಆಕ್ಷೇಪ) :- ಹುಟ್ಟಿಲ್ಲದ ಆತ್ಮನಿಗಿಂತ ಬೇರೆಯಾದದ್ದು ಇಲ್ಲವೇ ಇಲ್ಲ. ಹೀಗಿರುವಲ್ಲಿ ಹೇತುಫಲಗಳೂ ಸಂಸಾರವೂ ಹುಟ್ಟುತ್ತವೆ ನಾಶವಾಗುತ್ತವೆ ಎಂದು ನೀನು ಹೇಳುತ್ತೀಯಲ್ಲ[2] ! ಇದು ಹೇಗೆ (ಸರಿ) ?

(ಪರಿಹಾರ) :- (ಹೇಗೆಂದರೆ) ಕೇಳು :-

ಸಂವೃತ್ಯಾ ಜಾಯತೇ ಸರ್ವಂ ಶಾಶ್ವತಂ ನಾಸ್ತಿ ತೇನ ವೈ ।
ಸದ್ಭಾವೇನ ಹ್ಯಜಂ ಸರ್ವಮುಚ್ಛೇದಸ್ತೇನ ನಾಸ್ತಿ ವೈ ।।೫೭।।

೫೭. ಸಂವೃತಿಯಿಂದ ಎಲ್ಲವೂ ಹುಟ್ಟುತ್ತದೆ ; ಆದ್ದರಿಂದ ಶಾಶ್ವತವೆಂಬುದು ಇಲ್ಲವೇ ಇಲ್ಲ. ಸದ್ಭಾವದಿಂದ ಎಲ್ಲವೂ ಅಜವು ; ಆದ್ದರಿಂದ ಉಚ್ಛೇದವು ಇಲ್ಲವೇ ಇಲ್ಲ.

---

1. ಹೇತುಫಲಾಭಿಮಾನವೇ ಸಂಸಾರಕ್ಕೆ ಕಾರಣವಾದ್ದರಿಂದ ಅದಿಲ್ಲದಾಗ ಸಂಸಾರವೂ ಇರುವದಿಲ್ಲ ಎಂದರ್ಥ.

2. ಹೇತುಫಲಾಭಿಮಾನವು ಹೋದರೆ ಸಂಸಾರವು ಹೋಗುವದು ಎಂದದ್ದರಿಂದ ಇವೆರಡೂ ನಿಜವಾಗಿ ಇರುವವೆಂದಾಗಲಿಲ್ಲವೆ ? ಇದು ಸಿದ್ಧಾಂತಕ್ಕೆ ವಿರುದ್ಧವಲ್ಲವೆ ? ಎಂದು ಆಕ್ಷೇಪ.

(ಭಾಷ್ಯ)

೩೦೯. ಸಂವೃತ್ಯಾ ಸಂವರಣಂ ಸಂವೃತಿಃ ಅವಿದ್ಯಾವಿಷಯಃ ಲೌಕಿಕವ್ಯವಹಾರಃ । ತಯಾ ಸಂವೃತ್ಯಾ ಜಾಯತೇ ಸರ್ವಮ್ । ತೇನ ಅವಿದ್ಯಾವಿಷಯೇ ಶಾಶ್ವತಂ ನಿತ್ಯಂ ನಾಸ್ತಿ ವೈ । ಅತಃ ಉತ್ಪತ್ತಿವಿನಾಶಲಕ್ಷಣಃ ಸಂಸಾರಃ ಆಯತಃ ಇತಿ ಉಚ್ಯತೇ । ಪರಮಾರ್ಥ ಸದ್ಭಾವೇನ ತು[1] ಅಜಂ ಸರ್ವಮ್ ಆತ್ಮೈವ ಯಸ್ಮಾತ್ ಅತಃ ಜಾತ್ಯಭಾವಾತ್ ಉಚ್ಛೇದಃ ತೇನ ನಾಸ್ತಿ ವೈ ಕಸ್ಯಚಿತ್ ಹೇತುಫಲಾದೇಃ ಇತ್ಯರ್ಥಃ ॥

(ಭಾಷ್ಯಾರ್ಥ)

ಸಂವೃತಿಯಿಂದ-ಸಂವೃತಿ ಎಂದರೆ ಸಂವರಣವು ಅವಿದ್ಯಾವಿಷಯವಾದ ಲೌಕಿಕ ವ್ಯವಹಾರವು ; ಆ ಸಂವೃತಿ(ಯ ದೃಷ್ಟಿ)ಯಿಂದ-ಎಲ್ಲವೂ ಹುಟ್ಟುತ್ತದೆ. ಆದ್ದರಿಂದ ಅವಿದ್ಯಾ (ದೃಷ್ಟಿಯ) ವಿಷಯದಲ್ಲಿ ಶಾಶ್ವತವಾದದ್ದು ನಿತ್ಯವಾದದ್ದು ಇಲ್ಲವೇ ಇಲ್ಲ. ಆದ್ದರಿಂದ (ಈ ದೃಷ್ಟಿಯಲ್ಲಿ) ಹುಟ್ಟುವದು, ಸಾಯುವದು-ಎಂಬ ಸಂಸಾರವು ಆಯತ (ವಾಗಿರುವದು) ಎಂದು ಹೇಳಿರುತ್ತೇವೆ. ಆದರೆ ಪರಮಾರ್ಥವಾದ ಸದ್ಭಾವ(ದ ದೃಷ್ಟಿಯಿಂದ[2]) ಎಲ್ಲವೂ ಅಜವೇ, ಎಲ್ಲವೂ ಆತ್ಮನಾಗಿರುವದಷ್ಟೆ, ಆದ್ದರಿಂದ (ಆ ದೃಷ್ಟಿಯಲ್ಲಿ) ಹುಟ್ಟುವದೆಂಬುದೇ ಇಲ್ಲವಾದ್ದರಿಂದ ಹೇತು, ಫಲ-ಮುಂತಾದ ಯಾವದಕ್ಕೂ ಉಚ್ಛೇದವು (ನಾಶವು) ಇಲ್ಲವೇ ಇಲ್ಲ ಎಂದರ್ಥ.

ಧರ್ಮಾ ಯ ಇತಿ ಜಾಯನ್ತೇ ಜಾಯನ್ತೇ ತೇ ನ ತತ್ತ್ವತಃ ।
ಜನ್ಮ ಮಾಯೋಪಮಂ ತೇಷಾಂ ಸಾ ಚ ಮಾಯಾ ನ ವಿದ್ಯತೇ ॥೫೮॥

೫೮. ಯಾವ ಧರ್ಮಗಳು ಹೀಗೆ ಹುಟ್ಟುವವೋ ಅವು ತತ್ತ್ವದಿಂದ ಹುಟ್ಟುವದಿಲ್ಲ. ಅವುಗಳ ಜನ್ಮವು ಮಾಯೋಪಮವು, ಆ ಮಾಯೆಯೇ ಇರುವದಿಲ್ಲ.

(ಭಾಷ್ಯ)

೩೧೦. ಯೇಽಪಿ ಆತ್ಮಾನಃ ಅನ್ಯೇ ಚ ಧರ್ಮಾಃ ಜಾಯನ್ತೇ ಇತಿ ಕಲ್ಪ್ಯನ್ತೇ ತೇ ಇತಿ

1. ಕಾರಿಕೆಯಲ್ಲಿರುವ ಹಿ ಎಂಬುದಕ್ಕೆ ಇದು ಅರ್ಥ. ಅಥವಾ ಭಾಷ್ಯಕಾರರಂತೆ 'ಸದ್ಭಾವೇನ ತು' ಎಂದೇ ಪಾಠವೆಂದೂ ಕಲ್ಪಿಸಬಹುದು.

2. ನಿಜವಾಗಿ ಇರುವದನ್ನೇ ತಿಳಿಸುವ ಪರಮಾರ್ಥದೃಷ್ಟಿಯಿಂದ ಎಲ್ಲವೂ ಅಜನಾದ ಆತ್ಮನೇ ; ಆದ್ದರಿಂದ ಆ ದೃಷ್ಟಿಯಲ್ಲಿ ಯಾವದೂ ಹುಟ್ಟುವದೇ ಇಲ್ಲ.

ಏವಂಪ್ರಕಾರಾಃ । ಯಥೋಕ್ತಾ ಸಂವೃತಿಃ ನಿರ್ದಿಶ್ಯತೇ 'ಇತಿ' ಇತಿ[1] । ಸಂವೃತ್ಯೈವ ಧರ್ಮಾ ಜಾಯನ್ತೇ । ನ ತೇ ತತ್ತ್ವತಃ ಪರಮಾರ್ಥತಃ ಜಾಯನ್ತೇ । ಯತ್ ಪುನಃ ಸಂವೃತ್ಯಾ ಜನ್ಮ ತೇಷಾಂ ಧರ್ಮಾಣಾಂ ಯಥೋಕ್ತಾನಾಂ ಯಥಾ ಮಾಯಯಾ ಜನ್ಮ, ತಥಾ ತತ್ ಮಾಯೋಪಮಂ ಪ್ರತ್ಯೇತವ್ಯಮ್ । ಮಾಯಾ ನಾಮ ವಸ್ತು ತರ್ಹಿ ? ಮೈವಮ್ । ಸಾ ಚ ಮಾಯಾ ನ ವಿದ್ಯತೇ । ಮಾಯಾ ಇತಿ ಅವಿದ್ಯಮಾನಸ್ಯ ಆಖ್ಯಾ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಇನ್ನು ಧರ್ಮಗಳು ಎಂದರೆ ಆತ್ಮರು ಮತ್ತು ಮಿಕ್ಕವೂ[2] ಹುಟ್ಟುವವೆಂದು ಕಲ್ಪಿಸುತ್ತಾರಲ್ಲ, ಅವುಗಳ ಹೀಗೆ (ಇತಿ) ಈ ಪ್ರಕಾರವಾಗಿ[3] (ಹುಟ್ಟುತ್ತವೆ). ಮೇಲೆ ಹೇಳಿದ ಸಂವೃತಿಯನ್ನೇ 'ಇತಿ' (ಹೀಗೆ) ಎಂಬ (ಮಾತಿನಿಂದ) ತೋರಿಸಿರುತ್ತದೆ. ಸಂವೃತಿಯಿಂದಲೇ ಧರ್ಮಗಳು ಹುಟ್ಟುವವು, ಅವು ತತ್ತ್ವದಿಂದ ಪರಮಾರ್ಥವಾಗಿ ಹುಟ್ಟುವದಿಲ್ಲ (ಎಂದು ಅಭಿಪ್ರಾಯ). ಇನ್ನು ಮೇಲೆ ಹೇಳಿದ ಆ ಧರ್ಮಗಳಿಗೆ ಸಂವೃತಿಯಿಂದಾಗುವ ಜನ್ಮವಿದೆಯಲ್ಲ, ಅದು ಮಾಯೋಪಮವು, ಮಾಯೆಯೆಂದಾಗುವ ಜನ್ಮವು ಹೇಗೋ ಹಾಗೆ ಎಂದು ತಿಳಿಯಬೇಕು[4].

(ಪ್ರಶ್ನೆ) :- ಹಾಗಾದರೆ ಮಾಯೆಯೆಂದರೆ (ನಿಜವಾಗಿರುವ) ವಸ್ತುವಷ್ಟೆ ?

(ಉತ್ತರ) :- ಹಾಗಲ್ಲ, ಆ ಮಾಯೆಯೂ ಇರುವದಿಲ್ಲ. ಮಾಯೆಯೆಂಬುದು ಇಲ್ಲದ್ದರ ಹೆಸರು ಎಂದರ್ಥ[5].

(ಭಾಷ್ಯ)

೩೧೧. ಕಥಂ ಮಾಯೋಪಮಂ ತೇಷಾಂ ಧರ್ಮಾಣಾಂ ಜನ್ಮ ಇತಿ ? ಆಹ-

(ಭಾಷ್ಯಾರ್ಥ)

ಆ ಧರ್ಮಗಳು ಹುಟ್ಟುವದು ಮಾಯೋಪಮವೆಂಬುದು ಹೇಗೆ ? ಎಂದರೆ ಹೇಳುತ್ತಾರೆ :-

1. ಒಂದು 'ಇತಿ' ಯು ಲೇಖಕರ ಕೈತಪ್ಪಿನಿಂದ ಬಿಟ್ಟುಹೋಗಿದೆ ಎಂದು ಕಲ್ಪಿಸಲಾಗಿದೆ.

2. 'ಧರ್ಮಾಃ' ಎಂಬ ಮಾತಿಗೆ ಆತ್ಮರು ಮತ್ತು ಬಾಹ್ಯವಸ್ತುಗಳು ಎಂದು ಎರಡು ಅರ್ಥವೂ ಉಂಟು. ೧, ೬, ೧೦, ೨೧, ೫೩-ಮುಂತಾದ ಕಾರಿಕೆಗಳಲ್ಲಿ ಇದು ಸ್ಪಷ್ಟವಾಗಿದೆ.

3. ಮಾಯೆಯಿಂದಲೇ.

4. ಮಾಯೆಯಿಂದ ಹುಟ್ಟುವ ವಸ್ತು ಹೇಗೆ ನಿಜವಲ್ಲವೋ ಹಾಗೆ ಎಂದು ತಿಳಿಯಬೇಕು.

5. ಮಾಯೆಯಿಂದ ಹುಟ್ಟುವವೆಂದರೆ ಹುಟ್ಟಿದಂತೆ ತೋರುವವೆಂದು ಅರ್ಥ. ನಿಜವಾದ ಹುಟ್ಟಾಗಲಿ ಅದಕ್ಕೆ ಕಾರಣವಾದ ಮಾಯೆಯಾಗಲಿ ಇರುವದಿಲ್ಲ.

ಯಥಾ ಮಾಯಾಮಯಾದ್ ಬೀಜಾಜ್ಜಾಯತೇ, ತನ್ಮಯೋಽಙ್ಕುರಃ ।
ನಾಸೌ ನಿತ್ಯೋ ನ ಚೋಚ್ಛೇದೀ ತದ್ವದ್ಧರ್ಮೇಷು ಯೋಜನಾ ॥೫೯॥

೫೯. ಮಾಯಾಮಯವಾದ ಬೀಜದಿಂದ ತನ್ಮಯವಾದ ಅಂಕುರವು ಹೇಗೆ ಹುಟ್ಟುವದೋ, ಹೇಗೆ ಅದು ನಿತ್ಯವೂ ಅಲ್ಲ, ನಾಶವಾಗತಕ್ಕದ್ದೂ ಅಲ್ಲವೋ, ಅದರಂತೆ ಧರ್ಮಗಳಲ್ಲಿಯೂ ಯೋಜನೆ.

(ಭಾಷ್ಯ)

೩೧೨. ಯಥಾ ಮಾಯಾಮಯಾತ್ ಆಮ್ರಾದಿಬೀಜಾತ್ ಜಾಯತೇ ತನ್ಮಯಃ ಮಾಯಾಮಯಃ ಅಙ್ಕುರಃ । ನಾಸೌ ಅಙ್ಕುರಃ ನಿತ್ಯಃ ನ ಚ ಉಚ್ಛೇದೀ ವಿನಾಶೀ ವಾ । ಅಭೂತತ್ವಾತ್ ತದ್ವದೇವ[1] ಧರ್ಮೇಷು ಜನ್ಮನಾಶಾದಿಯೋಜನಾಯುಕ್ತಿಃ । ನ ತು ಪರಮಾರ್ಥತಃ ಧರ್ಮಾಣಾಂ ಜನ್ಮ ನಾಶೋ ವಾ ಯುಜ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಹೇಗೆ ಮಾಯಾಮಯವಾದ ಮಾವು ಮುಂತಾದ ಬೀಜದಿಂದ ತನ್ಮಯವಾದ ಮಾಯಾಮಯವಾದ ಮೊಳಕೆಯು ಹುಟ್ಟುವದೋ ಹಾಗೆ ಆ ಮೊಳಕೆಯು (ನಿಜವಾಗಿ) ಇರುವದಲ್ಲವಾದ್ದರಿಂದ ನಿತ್ಯವೂ ಅಲ್ಲ ನಾಶವಾಗತಕ್ಕದ್ದೂ ಅಲ್ಲವೋ ಅದರಂತೆ[2] ಧರ್ಮಗಳಲ್ಲಿ ಹುಟ್ಟು, ಹೊಂದು-ಮುಂತಾದವುಗಳ ಯೋಜನಸಂಬಂಧವು (ಇರುವದು)[3]. ಆದರೆ ಪರಮಾರ್ಥವಾಗಿಯೂ ಧರ್ಮಗಳ ಜನ್ಮವಾಗಲಿ ನಾಶವಾಗಲಿ (ಆಗುವದೆಂಬುದು) ಹೊಂದುವದಿಲ್ಲ.

ನಾಜೇಷು ಸರ್ವಧರ್ಮೇಷು ಶಾಶ್ವತಾಶಾಶ್ವತಾಭಿದಾ ।
ಯತ್ರ ವರ್ಣಾ ನ ವರ್ತನ್ತೇ ವಿವೇಕಸ್ತತ್ರ ನೋಚ್ಯತೇ ॥೬೦॥

೬೦. ಅಜರಾದ ಯಾವ ಧರ್ಮರುಗಳಲ್ಲಿಯೂ ಶಾಶ್ವತ, ಅಶಾಶ್ವತ

1. 'ಅಭೂತತ್ವಾದೇವ' ಕಾ॥ ವಾ॥

2. ಮಾಯೆಯ ಮಾವು ವ್ಯವಹಾರದ ಮಾವಿನಂತೆ ನಿಜವಲ್ಲ ; ಆದ್ದರಿಂದ ಅದನ್ನು ನಿತ್ಯವೆಂದಾಗಲಿ ಅನಿತ್ಯವೆಂದಾಗಲಿ ಕರೆಯುವದಕ್ಕೆ ಬರುವದಿಲ್ಲ. ಇದರಂತೆ ವ್ಯವಹಾರದಲ್ಲಿ ಹುಟ್ಟುವ ವಸ್ತುಗಳೂ ಪರಮಾರ್ಥದೃಷ್ಟಿಯಿಂದ ನೋಡಿದಾಗ ನಿಜವಾಗಿರುವದಿಲ್ಲವಾಗಿ ಅವಕ್ಕೂ ನಿಜವಾದ ಜನ್ಮನಾಶಗಳಿಲ್ಲ-ಎಂದು ಭಾವ

3. ಈ ಮಾತು ಇಲ್ಲಿರಬೇಕು ಅಚ್ಚಿನ ಪುಸ್ತಕಗಳಲ್ಲಿಲ್ಲ.

ಎಂಬ ಮಾತಿಲ್ಲ. ಎಲ್ಲಿ ವರ್ಣಗಳು ಇರುವದಿಲ್ಲವೋ, ಅಲ್ಲಿ ವಿವೇಕವನ್ನು ಹೇಳುವದಿಲ್ಲ.

(ಭಾಷ್ಯ)

೩೧೩. ಪರಮಾರ್ಥತಸ್ತು ಆತ್ಮಸು, ಅಜೇಷು ನಿತ್ಯೈಕರಸಜ್ಞಪ್ತಿಮಾತ್ರ ಸತ್ತಾಕೇಷು ಸರ್ವಧರ್ಮೇಷು ಶಾಶ್ವತಃ ಅಶಾಶ್ವತಃ ಇತಿ ವಾ ನ ಅಭಿಧಾ ನಾಭಿಧಾನಂ ಪ್ರವರ್ತತೇ ಇತ್ಯರ್ಥಃ । ಯತ್ರ ಯೇಷು ವರ್ಣ್ಯನ್ತೇ ಯೈಃ ಅರ್ಥಾಃ ತೇ ವರ್ಣಾಃ ಶಬ್ದಾಃ ನ ವರ್ತನ್ತೇ, ಅಭಿಧಾತುಂ ಪ್ರಕಾಶಯಿತುಂ ನ ಪ್ರವರ್ತನ್ತೇ ಇತ್ಯರ್ಥಃ । 'ಇದಮ್ ಏವಮ್' ಇತಿ ವಿವೇಕಃ ವಿವಿಕ್ತತಾ ತತ್ರ ನಿತ್ಯಃ ಅನಿತ್ಯಃ ಇತಿ ನ ಉಚ್ಯತೇ । "ಯತೋ ವಾಚೋ ನಿವರ್ತನ್ತೇ" (ತೈ. ೨-೯) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಆದರೆ ಪರಮಾರ್ಥವಾಗಿ (ನೋಡಿದರೋ)[1] ಆಜರಾದ ಯಾವಾಗಲೂ ಒಂದೇ ರೂಪದಲ್ಲಿರುವ ಬರಿಯ ಚೈತನ್ಯವೆಂಬ ಇರವುಳ್ಳ ಯಾವ ಧರ್ಮಗಳಲ್ಲಿಯೂ (ಯಾವ) ಆತ್ಮರುಗಳಲ್ಲಿಯೂ ಶಾಶ್ವತ (ಅಥವಾ) ಅಶಾಶ್ವತ ಎಂಬ ಮಾತು ಇರುವದಿಲ್ಲ, (ಅಲ್ಲಿ ಈ) ಮಾತು (ಹೇಳುವದಕ್ಕೆ) ಹೊರಡುವದಿಲ್ಲ[2] ಎಂದರ್ಥ. ಎಲ್ಲಿ ಯಾವ (ಧರ್ಮರು)ಗಳಲ್ಲಿ ವರ್ಣಗಳು-ಯಾವವುಗಳಿಂದ ಅರ್ಥಗಳು ವರ್ಣಿಸಲ್ಪಡುವವೋ, ಅವು ವರ್ಣಗಳು-ಶಬ್ದಗಳು ; (ಅವು)-ಇರುವದಿಲ್ಲವೋ, ತಿಳಿಸುವದಕ್ಕೆ, ಬೆಳಗುವದಕ್ಕೆ ಹೊರಡುವದಿಲ್ಲವೋ ಎಂದರ್ಥ. 'ಇದು ಹೀಗೆ' ಎಂಬ ವಿವೇಕವು ನಿತ್ಯ (ಅಥವಾ) ಅನಿತ್ಯ ಎಂದು ವಿಂಗಡಿಸುವದು, ಅಲ್ಲಿ ಹೇಳಲ್ಪಡುವದಿಲ್ಲ[3]. "ಯಾವದನ್ನು (ಬಿಟ್ಟು) ವಾಕ್ಕುಗಳು ಹಿಂತಿರುಗುವವೋ" (ತೈ. ೨-೯) ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು).

1. ಹಿಂದಿನ ಕಾರಿಕೆಯಲ್ಲಿ ವ್ಯವಹಾರದೃಷ್ಟಿಯಿಂದ ಮಾಯಿಕವಾಗಿ ಹುಟ್ಟುವದೆಂಬುದು ಮಾಯಿಕವೆಂದು ಹೇಳಿದ್ದಾಗಿದೆ. ಈಗ ಪರಮಾರ್ಥದೃಷ್ಟಿಯಿಂದ ನೋಡಿದರೆ ಎಲ್ಲವೂ ಆತ್ಮನೇ ಆಗಿದೆ ಎಂದು ಹೇಳಿದೆ. ಈ ಎರಡು ಸಂದರ್ಭಗಳಲ್ಲಿಯೂ ನಿತ್ಯಾನಿತ್ಯವಿಭಾಗವು ನಿಜವಾಗಿರುವದಿಲ್ಲ.

2. ಜಾತಿ, ಗುಣ, ಕ್ರಿಯೆ, ಮುಂತಾದವುಗಳು ಇಲ್ಲದ್ದರಿಂದ ಆತ್ಮರನ್ನು ಶಬ್ದವು ಹೇಳಲಾರದು.

3. ಹೇಳುವದಕ್ಕಾಗುವದಿಲ್ಲ. ಏಕೆಂದರೆ ನಿತ್ಯಾನಿತ್ಯವಿವೇಕವು ಶಬ್ದಗೋಚರವಸ್ತುಗಳಲ್ಲಿ ಮಾತ್ರ ಸಾಧ್ಯ.

## ದ್ವೈತವೆಲ್ಲವೂ ಚಿತ್ತದ ಅಲುಗಾಟ

ಯಥಾ ಸ್ವಪ್ನೇ ದ್ವಯಾಭಾಸಂ ಚಿತ್ತಂ ಚಲತಿ ಮಾಯಯಾ ।
ತಥಾ ಜಾಗ್ರದ್ ದ್ವಯಾಭಾಸಂ ಚಿತ್ತಂ ಚಲತಿ ಮಾಯಯಾ ॥೬೧॥
ಅದ್ವಯಂ ಚ ದ್ವಯಾಭಾಸಂ ಚಿತ್ತಂ ಸ್ವಪ್ನೇ ನ ಸಂಶಯಃ ।
ಅದ್ವಯಂ ಚ ದ್ವಯಾಭಾಸಂ ತಥಾ ಜಾಗ್ರನ್ನ ಸಂಶಯಃ ॥೬೨॥

೬೧-೬೨. ಹೇಗೆ ಕನಸಿನಲ್ಲಿ ಚಿತ್ತವು ದ್ವೈತದಂತೆ ಮಾಯೆಯಿಂದ ಅಲುಗಾಡುತ್ತಿರುವದೋ, ಅದರಂತೆ ಎಚ್ಚರದಲ್ಲಿ ಚಿತ್ತವು ದ್ವೈತದಂತೆ ಮಾಯೆಯಿಂದ ಅಲುಗಾಡುತ್ತಿರುವದು. ಚಿತ್ತವು ಕನಸಿನಲ್ಲಿ (ತಾನು) ಅದ್ವಯವಾಗಿಯೇ ಇದ್ದು ದ್ವೈತದಂತೆ ತೋರುತ್ತಿರುವದೆಂಬುದಕ್ಕೆ ಸಂಶಯವಿಲ್ಲ ; ಹಾಗೆಯೇ ಎಚ್ಚರದಲ್ಲಿಯೂ ತಾನು ಅದ್ವಯವಾಗಿಯೇ ಇದ್ದು ದ್ವೈತವಾಗಿಯೇ ಇರುವಂತೆ ತೋರುತ್ತಿರುವದೆಂಬುದಕ್ಕೆ ಸಂಶಯವಿಲ್ಲ.

(ಭಾಷ್ಯ)

೩೧೪. ಯತ್ ಪುನಃ ವಾಗ್ಗೋಚರತ್ವಂ ಪರಮಾರ್ಥತಃ ಅದ್ವಯಸ್ಯ ವಿಜ್ಞಾನ ಮಾತ್ರಸ್ಯ ತತ್ ಮನಸಃ ಸ್ಪನ್ದನಮಾತ್ರಮ್ ನ ಪರಮಾರ್ಥತಃ ಇತಿ । ಉಕ್ತಾರ್ಥೌ ಶ್ಲೋಕೌ ॥

(ಭಾಷ್ಯಾರ್ಥ)

ಆದರೆ ನಿಜವಾಗಿ ಎರಡನೆಯದಿಲ್ಲದ ಚೈತನ್ಯಮಾತ್ರವಾಗಿರುವ (ಆತ್ಮವಸ್ತುವು) ಮಾತಿಗೆ ಗೋಚರವಾಗಿದೆಯಲ್ಲ, ಅದು ಮನಸ್ಸಿನ ಅಲುಗಾಟವೇ ಹೊರತು ನಿಜವಾಗಿಯೂ (ಹಾಗಿರು)ವದಲ್ಲ[1] ; ಈ ಎರಡು ಶ್ಲೋಕಗಳಿಗೂ (ಹಿಂದೆ[2]) ಅರ್ಥವನ್ನು ಹೇಳಿರುತ್ತದೆ.

(ಭಾಷ್ಯ)

೩೧೫. ಇತಶ್ಚ ವಾಗ್ಗೋಚರಸ್ಯ ಅಭಾವೋ ದ್ವೈತಸ್ಯ-

(ಭಾಷ್ಯಾರ್ಥ)

ಮಾತಿಗೆ ವಿಷಯವಾಗಿರುವ ದ್ವೈತವು ಈ ಕಾರಣದಿಂದಲೂ (ನಿಜವಾಗಿ) ಇರುವದಿಲ್ಲ :-

1. ಆತ್ಮನಲ್ಲಿ ಹುಟ್ಟುಗಟ್ಟಿದ ತೋರಿಕೆಯೇ ; ನಿಜವಾಗಿರುವದಲ್ಲ- ಎಂದರ್ಥ.
2. ೩-೨೯, ೩೦ನೆಯ ಕಾರಿಕೆಗಳಲ್ಲಿ.

ಸ್ವಪ್ನದೃಕ್ ಪ್ರಚರನ್ ಸ್ವಪ್ನೇ ದಿಕ್ಷು ವೈ ದಶಸು ಸ್ಥಿತಾನ್ ।
ಅಣ್ಡಜಾನ್ ಸ್ವೇದಜಾನ್ ವಾಪಿ ಜೀವಾನ್ ಪಶ್ಯತಿ ಯಾನ್ ಸದಾ ॥೬೩॥
ಸ್ವಪ್ನದೃಕ್ಚಿತ್ತದೃಶ್ಯಾಸ್ತೇ ನ ವಿದ್ಯನ್ತೇ ತತಃ ಪೃಥಕ್ ।
ತಥಾ ತದ್ದೃಶ್ಯಮೇವೇದಂ ಸ್ವಪ್ನದೃಕ್ಚಿತ್ತಮಿಷ್ಯತೇ ॥೬೪॥

೬೩-೬೪. ಸ್ವಪ್ನದರ್ಶಿಯು ಕನಸಿನಲ್ಲಿ ಓಡಾಡುತ್ತಾ ಹತ್ತುದಿಕ್ಕುಗಳಲ್ಲಿಯೂ ಇರುವ ಅಂಡಜಗಳನ್ನಾಗಲಿ ಸ್ವೇದಜಗಳನ್ನಾಗಲಿ ಯಾವ ಜೀವರುಗಳನ್ನು ಯಾವಾಗಲೂ ನೋಡುತ್ತಿರುವನೋ ಅವು ಸ್ವಪ್ನದೃಕ್ಚಿತ್ತದೃಶ್ಯಗಳಾಗಿರುತ್ತವೆ. ಅದಕ್ಕಿಂತ ಬೇರೆಯಾಗಿರುವದಿಲ್ಲ. ಹಾಗೆಯೇ ಈ ಸ್ವಪ್ನದೃಕ್ಚಿತ್ತವೂ ತದ್ದೃಶ್ಯವೇ ಎನಿಸುತ್ತದೆ.

(ಭಾಷ್ಯ)

೬೩. ಸ್ವಪ್ನಾನ್ ಪಶ್ಯತಿ ಇತಿ ಸ್ವಪ್ನದೃಕ್ ಪ್ರಚರನ್ ಪರ್ಯಟನ್ ಸ್ವಪ್ನೇ ಸ್ವಪ್ನಸ್ಥಾನೇ ದಿಕ್ಷು ವೈ ದಶಸು ಸ್ಥಿತಾನ್ ವರ್ತಮಾನಾನ್ ಜೀವಾನ್ ಪ್ರಾಣಿನಃ ಅಣ್ಡಜಾನ್ ಸ್ವೇದಜಾನ್ ವಾ ಯಾನ್ ಸದಾ ಪಶ್ಯತಿ ಇತಿ ॥ (೬೩) ಯದ್ಯೇವಮ್ ತತಃ ಕಿಮ್ ? ಉಚ್ಯತೇ । ಸ್ವಪ್ನದೃಶಃ ಚಿತ್ತಮ್ ಸ್ವಪ್ನದೃಕ್ಚಿತ್ತಮ್ । ತೇನ ದೃಶ್ಯಾಃ ತೇ ಜೀವಾಃ । ತತಃ ತಸ್ಮಾತ್ ಸ್ವಪ್ನದೃಕ್ಚಿತ್ತಾತ್ ಪೃಥಕ್ ನ ವಿದ್ಯನ್ತೇ । ನ ಸನ್ತಿ ಇತ್ಯರ್ಥಃ । ಚಿತ್ತಮೇವ ಹಿ ಅನೇಕಜೀವಾದಿಭೇದಾಕಾರೇಣ ವಿಕಲ್ಪ್ಯತೇ । ತಥಾ ತದಪಿ ಸ್ವಪ್ನದೃಕ್ಚಿತ್ತಮ್ ಇದಂ ತದ್ದೃಶ್ಯಮೇವ ತೇನ ಸ್ವಪ್ನದೃಶಾ ದೃಶ್ಯಂ ತದ್ದೃಶ್ಯಮ್ । ಅತಃ ಸ್ವಪ್ನದೃಗ್ವ್ಯತಿರೇಕೇಣ ಚಿತ್ತಂ ನಾಮ ನಾಸ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಕನಸುಗಳನ್ನು ಕಾಣುತ್ತಾನಾದ್ದರಿಂದ ಸ್ವಪ್ನದರ್ಶಿ(ಯೆನಿಸುವನು. ಅವನು) ಸ್ವಪ್ನದಲ್ಲಿ ಕನಸೆಂಬ ಅವಸ್ಥೆಯಲ್ಲಿ ಓಡಾಡುತ್ತಾ ತಿರುಗಾಡುತ್ತಾ ಹತ್ತು ದಿಕ್ಕುಗಳಲ್ಲಿಯೂ ಇರುವವಲ್ಲ ಇದ್ದುಕೊಂಡಿರುವವಲ್ಲ, (ಅಂಥ) ಅಂಡಜಗಳನ್ನಾಗಲಿ ಸ್ವೇದಜಗಳನ್ನಾಗಲಿ ಯಾವ ಜೀವರುಗಳನ್ನು ಪ್ರಾಣಿಗಳನ್ನು ಯಾವಾಗಲೂ ನೋಡುತ್ತಿರುವನೋ-(೬೩)

(ಪ್ರಶ್ನೆ) :- ಆಗಲಿ, ಅದರಿಂದೇನು ?

(ಉತ್ತರ) :- ಹೇಳುತ್ತೇವೆ. ಕನಸನ್ನು ಕಾಣುವವನ ಚಿತ್ತವು ಸ್ವಪ್ನದೃಕ್ಚಿತ್ತವು. ಅದಕ್ಕೆ ಆ ಜೀವರುಗಳು ಕಾಣಿಸುವವೇ ಹೊರತು, ಅದಕ್ಕಿಂತ ಆ ಸ್ವಪ್ನದೃಕ್ಚಿತ್ತಕ್ಕಿಂತ

ಬೇರೆಯಾಗಿ ಇರುವದಿಲ್ಲ. (ತಾವೇ) ಇರುವದಿಲ್ಲ ಎಂದರ್ಥ. ಚಿತ್ತವೇ ಅಲ್ಲವೆ, ಅನೇಕ ಜೀವರೇ ಮುಂತಾದ ಭೇದಗಳ ಆಕಾರದಿಂದ (ಅಲ್ಲಿ) ವಿಕಲ್ಪಿತವಾಗಿರುವದು ?[1] ಹಾಗೆಯೇ ಆ ಸ್ವಪ್ನದೃಕ್ಚಿತ್ತವು ಕೂಡ ತದ್ದೃಶ್ಯವೇ ಆ ಕನಸುಕಾಣುವವನಿಗೆ ಕಾಣಿಸುವ ದರಿಂದ ತದ್ದೃಶ್ಯವೇ. ಆದ್ದರಿಂದ ಕನಸು ಕಾಣುವವನಿಗಿಂತ ಬೇರೆಯಾಗಿ ಚಿತ್ತವೆಂಬ (ಪದಾರ್ಥವೇ) ಇಲ್ಲ ಎಂದರ್ಥ[2].

ಚರಾಚ್ಚರಗತೇ ಜಾಗ್ರದ್ದಿಕ್ಷ್ವಿವೈ ದಶಸು ಸ್ಥಿತಾನ್ ।
ಅಣ್ಡಜಾನ್ ಸ್ವೇದಜಾನ್ ವಾಪಿ ಜೀವಾನ್ ಪಶ್ಯತಿ ಯಾನ್ ಸದಾ ॥೬೫॥
ಜಾಗ್ರಚ್ಚಿತ್ತೇಕ್ಷಣೀಯಾಸ್ತೇ ನ ವಿದ್ಯನ್ತೇ ತತಃ ಪೃಥಕ್ ।
ತಥಾ ತದ್ದೃಶ್ಯಮೇವೇದಂ ಜಾಗ್ರತಶ್ಚಿತ್ತಮಿಷ್ಯತೇ ॥೬೬॥

೬೫-೬೬. ಎಚ್ಚರದಲ್ಲಿ ಓಡಾಡುತ್ತಾ ಎಚ್ಚರವಾಗಿರುವವನು ಹತ್ತು ದಿಕ್ಕುಗಳಲ್ಲಿರುವ ಅಂಡಜಗಳನ್ನಾಗಲಿ ಸ್ವೇದಜಗಳನ್ನಾಗಲಿ ಯಾವ ಜೀವರುಗಳನ್ನು ಯಾವಾಗಲೂ ಕಾಣುತ್ತಿರುವನೋ ಅವು ಎಚ್ಚತ್ತಿರುವವನ ಚಿತ್ತಕ್ಕೆ ಕಾಣಿಸುವವಾಗಿರುವವು. ಅದಕ್ಕಿಂತ ಬೇರೆಯಾಗಿರುವದಿಲ್ಲ. ಹಾಗೆಯೇ ಈ ಎಚ್ಚತ್ತವನ ಚಿತ್ತವೂ ಅವನಿಗೆ ಕಾಣಿಸುವದೇ ಎನಿಸುತ್ತದೆ.

(ಭಾಷ್ಯ)

೩೧೭. ಜಾಗ್ರತೋ ದೃಶ್ಯಾ ಜೀವಾಃ ತಚ್ಚಿತ್ತಾವ್ಯತಿರಿಕ್ತಾಃ । ಚಿತ್ತೇಕ್ಷಣೀಯತ್ವಾತ್, ಸ್ವಪ್ನದೃಕ್ಚಿತ್ತೇಕ್ಷಣೀಯಜೀವವತ್ । ತಚ್ಚ ಜೀವೇಕ್ಷಣಾತ್ಮಕಮ್ ಚಿತ್ತಂ ದ್ರಷ್ಟುರ ವ್ಯತಿರಿಕ್ತಮ್ । ದ್ರಷ್ಟೃದೃಶ್ಯತ್ವಾತ್ । ಸ್ವಪ್ನಚಿತ್ತವತ್ । ಉಕ್ತಾರ್ಥಮ್ ಅನ್ಯತ್ ॥

(ಭಾಷ್ಯಾರ್ಥ)

**ಎಚ್ಚರವಾಗಿರುವವನಿಗೆ ಕಾಣುವ ಜೀವರು ಅವನ ಚಿತ್ತಕ್ಕಿಂತ ಬೇರೆಯಾಗಿರುವದಿಲ್ಲ ; ಏಕಂದರೆ ಅವರು ಕನಸುಕಾಣುವವನ ಚಿತ್ತಕ್ಕೆ ಕಾಣುವ ಜೀವರುಗಳಂತೆಯೇ**

1. ಕನಸಿನಲ್ಲಿ ಚಿತ್ತವೊಂದೇ ಬಗೆಬಗೆಯ ಜೀವರುಗಳಾಗಿಯೂ ಮಿಕ್ಕ ವಸ್ತುಗಳಾಗಿಯೂ ಕಾಣುವವೆಂಬುದು ಎಚ್ಚರದ ದೃಷ್ಟಿಯಿಂದ ಸಿದ್ಧವಾಗಿರುತ್ತದೆ.

2. ಇರವಿನ ರಾಶಿಯನ್ನು ದೃಕ್ಕು, ದೃಶ್ಯ-ಎಂದು ಎರಡು ಭಾಗವಾಗಿ ವಿಂಗಡಿಸುವದಾದರೆ ದೃಕ್ಕಿಗಿಂತ (ನೋಡುವವನಿಗಿಂತ) ದೃಶ್ಯವು (ನೋಡಲ್ಪಡತಕ್ಕದ್ದು) ಇರುವದಿಲ್ಲ; ಅದಕ್ಕೆ ಅಧೀನವಾಗಿಯೇ ಇರುತ್ತದೆ. ಚಿತ್ತವು ಆತ್ಮನಿಗೆ ದೃಶ್ಯವಾಗಿರುವದರಿಂದ ಅದು ಆತ್ಮನಿಗಿಂತ ಬೇರೆಯಾಗಿರುವದಿಲ್ಲವೆಂದಾಗುತ್ತದೆ.

ಚಿತ್ತಕ್ಕೆ ಕಾಣುವವರಾಗಿರುತ್ತಾರೆ[1]. ಮತ್ತು ಜೀವರನ್ನು ನೋಡುವ ಸ್ವರೂಪದಲ್ಲಿರುವ ಚಿತ್ತವು[2] ಕೂಡ ನೋಡುವ ಆತ್ಮನಿಗಿಂತ ಬೇರೆಯಾಗಿರುವದಿಲ್ಲ. ಏಕೆಂದರೆ ಅದು ಕನಸಿನ ಚಿತ್ತದಂತೆ[3] ನೋಡುವ (ಆತ್ಮನಿಗೇ) ಕಾಣಿಸುವದಾಗಿರುತ್ತದೆ. ಉಳಿದದ್ದರ ಅರ್ಥವನ್ನು ಹಿಂದೆಯೇ ಹೇಳಿರುತ್ತದೆ[4].

ಉಭೇ ಹ್ಯನ್ಯೋನ್ಯದೃಶ್ಯೇ ತೇ ಕಿಂ ತದಸ್ತೀತಿ ನೋಚ್ಯತೇ ।
ಲಕ್ಷಣಾಶೂನ್ಯಮುಭಯಂ ತನ್ಮತೇನೈವ ಗೃಹ್ಯತೇ ॥೬೭॥

೬೭. ಅವೆರಡೂ ಅನ್ಯೋನ್ಯದೃಶ್ಯಗಳೇ ಆಗಿರುವವು. ಇರುವದು ಯಾವದು ?-ಎಂಬುದನ್ನು ಹೇಳುವದಿಲ್ಲ. ಎರಡೂ ಲಕ್ಷಣಾಶೂನ್ಯವು, ತನ್ಮತದಿಂದಲೇ ಅರಿಯಲ್ಪಡುತ್ತದೆ.

(ಭಾಷ್ಯ)

೩೧೮. ಜೀವಚಿತ್ತೇ ಉಭೇ[5] ಚಿತ್ತಚೈತ್ಯೇ ತೇ ಅನ್ಯೋನ್ಯದೃಶ್ಯೇ ಇತರೇತರಗಮ್ಯೇ । ಜೀವಾದಿವಿಷಯಾಪೇಕ್ಷಂ ಹಿ ಚಿತ್ತಂ ನಾಮ ಭವತಿ । ಚಿತ್ತಾಪೇಕ್ಷಂ ಹಿ ಜೀವಾದಿದೃಶ್ಯಮ್ । ಅತಃ ತೇ ಅನ್ಯೋನ್ಯದೃಶ್ಯೇ । ತಸ್ಮಾತ್ ನ ಕಿಂಚಿತ್ ಅಸ್ತೀತಿ ಚೋಚ್ಯತೇ ಚಿತ್ತಂ ವಾ ಚಿತ್ತೇಕ್ಷಣೇಯಂ ವಾ ಕಿಂ ತದಸ್ತೀತಿ ವಿವೇಕಿನಾ ನೋಚ್ಯತೇ[6] । ನ ಹಿ ಸ್ವಪ್ನೇ

1. ಎಷ್ಟು ಕನಸುಗಳಾಗುವವೋ ಅಷ್ಟು ಚಿತ್ತಗಳಿರುವವು, ಆದ್ದರಿಂದ ಚಿತ್ತ ದೃಶ್ಯವಾದದ್ದು ಚಿತ್ತಕ್ಕಿಂತ ಬೇರಯಿರುವದಿಲ್ಲ ಎಂಬ ವ್ಯಾಪ್ತಿಯು ಏರ್ಪಡುತ್ತದೆ. ಇಲ್ಲಿ ಕನಸಿನ ಚಿತ್ತವನ್ನು ದೃಷ್ಟಾಂತವಾಗಿ ತೆಗೆದುಕೊಂಡಿರುವದರಿಂದ ಎರಡವಸ್ಥೆಗಳಿಗೂ ಬೇರೆ ಬೇರೆಯ ಚಿತ್ತಗಳಿರುವವೆಂದು ಸೂಚಿತವಾಗಿದೆ. ಇಲ್ಲಿರುವ ಯುಕ್ತಿಯು ಸೂ. ಭಾ. ೨-೨-೨೯ ಕ್ಕೆ ವಿರುದ್ಧವೆ ?-ಎಂಬ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಚಿತ್ತವೆಂದರೆ ವಿಷಯಗಳ ಅರಿವು. ಅರಿವು ಆತ್ಮಚೈತನ್ಯವೇ.

3. ಕನಸಿನಲ್ಲಿ ಆತ್ಮಚೈತನ್ಯವೇ ಚಿತ್ತವಾಗಿ ತೋರಿತು-ಎಂಬುದು ನಿರ್ವಿವಾದವು, ಏಕೆಂದರೆ ಅಲ್ಲಿ ನಿಜವಾದ ಚಿತ್ತವಾಗಲಿ ಚಿತ್ತದೃಶ್ಯವಾಗಲಿ ಇರುವದೆಂದು ನಾವು ಯಾರೂ ಒಪ್ಪುವುದಿಲ್ಲ. ಎಚ್ಚರದ ಚಿತ್ತವೇ ಅಲ್ಲಿದ್ದರೆ ಆಗ ಏಕೆ ಅದು ಭ್ರಾಂತವಾಯಿತೆಂಬುದಕ್ಕೆ ಉತ್ತರವನ್ನು ಹೇಳುವದಕ್ಕಾಗುವದೂ ಇಲ್ಲ.

4. ಕಾರಿಕೆಗಳ ಅಕ್ಷರಾರ್ಥವನ್ನು ಹಿಂದಿನ ಎರಡು ಕಾರಿಕೆಗಳ ಭಾಷ್ಯಕ್ಕೆ ಅನುಸಾರವಾಗಿ ಮಾಡಿಕೊಳ್ಳಬೇಕು ಎಂದು ಅರ್ಥ.

5. ಇದಾದಮೇಲೆ ಹಿ ಎಂಬ ಮಾತಿರಬೇಕು.

6. ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ಹಸ್ತಿಚಿತ್ತಂ ವಾ ವಿದ್ಯತೇ । ತಥಾ ಇಹಾಪಿ ವಿವೇಕಿನಾಮ್ ಇತ್ಯಭಿಪ್ರಾಯಃ । ಕಥಮ್ ? ಲಕ್ಷಣಾಶೂನ್ಯಮ್ । ಲಕ್ಷ್ಯತೇ ಅನಯಾ ಇತಿ ಲಕ್ಷಣಾ ಪ್ರಮಾಣಮ್ । ಪ್ರಮಾಣ ಶೂನ್ಯಮ್ ಉಭಯಂ ಚಿತ್ತಂ ಚೈತ್ಯಂ ದ್ವಯಮ್ । ಯತಃ ತನ್ಮತೇನೈವ ತಚ್ಚಿತ್ತ ತಯೈವ ತತ್ ಗೃಹ್ಯತೇ । ನ ಹಿ ಘಟಿಮತಿಂ ಪ್ರತ್ಯಾಖ್ಯಾಯ ಘಟೋ ಗೃಹ್ಯತೇ । ನಾಪಿ ಘಟಂ ಪ್ರತ್ಯಾಖ್ಯಾಯ ಘಟಿಮತಿಃ । ನ ಹಿ ತತ್ರ ಪ್ರಮಾಣಪ್ರಮೇಯಭೇದಃ ಶಕ್ಯತೇ ಕಲ್ಪಯಿತುಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಜೀವಚಿತ್ತಗಳು, ಚಿತ್ತಚೈತನ್ಯಗಳು ಎರಡೂ ಒಂದಕ್ಕೊಂದು ಕಾಣುತ್ತಿರುವವು. ಒಂದರಿಂದ ಒಂದು ತಿಳಿಯಬರುವವುಗಳು, ಅಲ್ಲವೆ ? ಹೇಗೆಂದರೆ ಜೀವರೇ ಮುಂತಾದ ವಿಷಯಗಳನ್ನವಲಂಬಿಸಿಯೇ ಚಿತ್ತವೆಂಬುದು ಇರುತ್ತದೆ, ಚಿತ್ತವನ್ನವಲಂಬಿಸಿಯೇ ಜೀವರೇ ಮುಂತಾದ ದೃಶ್ಯವು (ಇರುತ್ತದೆ)[1]. ಆದ್ದರಿಂದ ಅವು(ಎರಡೂ) ಒಂದಕ್ಕೊಂದು ಕಾಣುವವಾಗಿರುತ್ತವೆ. ಆದ್ದರಿಂದ ಯಾವದೂ ಇಲ್ಲ ಎಂದು ಹೇಳುತ್ತೇವೆ[2]. ಚಿತ್ತವಾಗಲಿ ಚಿತ್ತಕ್ಕೆ ತೋರುವ (ವಿಷಯ)ವಾಗಲಿ ಯಾವದು ಇದೆ ಎಂದು ವಿವೇಕಿಯಾದವನು ಹೇಳುವದಿಲ್ಲ[3]. ಕನಸಿನಲ್ಲಿ (ಕಾಣುವ) ಆನೆಯಾಗಲಿ (ಅದನ್ನರಿಯದ) ಆನೆ ಎಂಬ ಬುದ್ಧಿಯಾಗಲಿ (ನಿಜವಾಗಿ) ಇರುವದಿಲ್ಲವಷ್ಟೆ ; ವಿವೇಕಿಗಳ (ಮತದಲ್ಲಿ) ಇಲ್ಲಿಯೂ ಹಾಗೆಯೇ ಎಂದಭಿಪ್ರಾಯ. (ಇದು) ಹೇಗೆ ? ಎಂದರೆ (ಎರಡೂ) ಲಕ್ಷಣಾಶೂನ್ಯವು. ಇದರಿಂದ ತಿಳಿಯಬರುತ್ತದೆಯಾದ್ದರಿಂದ ಪ್ರಮಾಣವು ಲಕ್ಷ್ಯವೆಯು. (ಆದ್ದರಿಂದ ಲಕ್ಷಣಾಶೂನ್ಯವು ಎಂದರೆ) ಎರಡೂ ಚಿತ್ತ, ಚೈತ್ಯ

---

1. ವಿಷಯದ ಸಂಬಂಧವಿಲ್ಲದೆ ವಿಷಯಬುದ್ಧಿಯುಂಟಾಗುವದಿಲ್ಲ, ವಿಷಯಬುದ್ಧಿಯಿಲ್ಲದೆ ವಿಷಯವು ಸಿದ್ಧವಾಗುವದಿಲ್ಲ.

2. ಆದ್ದರಿಂದ ಚಿತ್ತವಾಗಲಿ ಚೈತ್ಯವಾಗಲಿ ಸ್ವತಂತ್ರವಾಗಿ ಇರುವದೇ ಇಲ್ಲ-ಎಂದು ಅಭಿಪ್ರಾಯ. 3. ಈಗ ಇರುವ ಪಾಠದ ಅನುವಾದವಿದು. "ಯಾವದು ಇದೆ ? ಎಂದು ಕೇಳಿದರೆ ವಿವೇಕಿಯಾವವನು ಯಾವದೂ ಇಲ್ಲ ಎಂದೇ ಉತ್ತರಕೊಡುತ್ತಾನೆ" ಎಂದು ಆ॥ ವ್ಯಾಖ್ಯಾನ ಕಾರರು ಈ ಭಾಷ್ಯಕ್ಕೆ ಅರ್ಥಮಾಡಿರುತ್ತಾರೆ. ಈ ಭಾಷ್ಯವು "ತಸ್ಮಾತ್ ಕಂ ತದಸ್ತೀತಿ ವಿವೇಕಿನಾ ನೋಚ್ಯತೇ । ನ ಕಂಚಿದಸ್ತೀತಿ ಚೋಚ್ಯತೇ ಚಿತ್ತಂ ವಾ ಚಿತ್ತೇಕ್ಷಣೇಯಂ ವಾ" ಎಂದಿದ್ದರೆ "ಆದ್ದರಿಂದ ಯಾವದು ಇದೆ ಎಂಬುದನ್ನು ವಿವೇಕಿಯು ಹೇಳುವದಿಲ್ಲ, ಚಿತ್ತವಾಗಲಿ ಚಿತ್ತದೃಶ್ಯವಾಗಲಿ ಯಾವದೊಂದೂ ಇರುವದಿಲ್ಲವೆಂದು ಅವನು ಹೇಳುತ್ತಾನೆ" ಎಂದು ಸರಳವಾಗಿ ಕನ್ನಡಿಸ ಬಹುದಾಗಿತ್ತು "ನೋಚ್ಯತೇ" ಎಂಬುದಕ್ಕೆ ಬದಲು 'ಚೋಚ್ಯತೇ' ಎಂದು ಪಾ॥ ದಲ್ಲಿ ಕಾರಿಕಾಪಾಠ.

ವೆಂಬ ಎರಡೂ ಪ್ರಮಾಣವಿಲ್ಲದ್ದು ಎಂದರ್ಥ. ಏಕೆಂದರೆ ಆ ಬುದ್ಧಿಯಿಂದಲೇ ಆ ಚಿತ್ತವಿರುವದರಿಂದಲೇ, ಅದು ಅರಿಯಲ್ಪಡುತ್ತದೆ. ಗಡಿಗೆಯೆಂಬ ಬುದ್ಧಿಯನ್ನು ಬಿಟ್ಟು ಗಡಿಗೆಯು ಅರಿಯುವದಕ್ಕೆ ಬರುವದೇ ಇಲ್ಲ ; ಗಡಿಗೆಯನ್ನು ಬಿಟ್ಟು, ಗಡಿಗೆ ಎಂಬ ಬುದ್ಧಿಯೂ (ಅರಿಯುವದಕ್ಕೆ ಬರುವ)ದಿಲ್ಲ. ಇಲ್ಲಿ (ಇದು) ಪ್ರಮಾಣ, (ಇದು) ಪ್ರಮೇಯ-ಎಂಬ ಭೇದವನ್ನು ಕಲ್ಪಿಸುವದಕ್ಕೆ ಆಗುವದೇ ಇಲ್ಲ ಎಂದು ಅಭಿಪ್ರಾಯ[1].

ಯಥಾ ಸ್ವಪ್ನಮಯೋ ಜೀವೋ ಜಾಯತೇ ಮ್ರಿಯತೇಽಪಿ ಚ ।
ತಥಾ ಜೀವಾ ಅಮೀ ಸರ್ವೇ ಭವನ್ತಿ ನ ಭವನ್ತಿ ಚ ॥೬೮॥

ಯಥಾ ಮಾಯಾಮಯೋ ಜೀವೋ ಜಾಯತೇ ಮ್ರಿಯತೇಽಪಿ ಚ ।
ತಥಾ ಜೀವಾ ಅಮೀ ಸರ್ವೇ ಭವನ್ತಿ ನ ಭವನ್ತಿ ಚ ॥೬೯॥

ಯಥಾ ನಿರ್ಮಿತಕೋ ಜೀವೋ ಜಾಯತೇ ಮ್ರಿಯತೇಽಪಿ ಚ[2] ।
ತಥಾ ಜೀವಾ ಅಮೀ ಸರ್ವೇ ಭವನ್ತಿ ನ ಭವನ್ತಿ ಚ ॥೭೦॥

೬೮-೭೦. ಕನಸಿನಿಂದಾಗಿರುವ ಜೀವನು ಹೇಗೆ ಹುಟ್ಟುವನೋ ಮತ್ತು ಸಾಯುವನೋ ಅದರಂತೆ ಈ ಜೀವರುಗಳೆಲ್ಲರೂ ಉಂಟಾಗುತ್ತಿರುವರು. ಮತ್ತು ಇಲ್ಲವಾಗುತ್ತಿರುವರು. ಮಾಯೆಯಿಂದಾಗಿರುವ ಜೀವನು ಹೇಗೆ ಹುಟ್ಟುವನೋ ಮತ್ತು ಸಾಯುವನೋ ಅದರಂತೆ ಈ ಜೀವರುಗಳೆಲ್ಲರೂ ಉಂಟಾಗುತ್ತಿರುವರು, ಮತ್ತು ಇಲ್ಲವಾಗುತ್ತಿರುವರು. ಹೇಗೆ ನಿರ್ಮಿತಕಜೀವನು ಹುಟ್ಟುವನೋ ಮತ್ತು ಸಾಯುವನೋ, ಅದರಂತೆ ಈ ಜೀವರುಗಳೆಲ್ಲರೂ ಉಂಟಾಗುತ್ತಿರುವರು, ಮತ್ತು ಇಲ್ಲವಾಗುತ್ತಿರುವರು.

(ಭಾಷ್ಯ)

೩೧೯. ಮಾಯಾಮಯಃ ಮಾಯಾವಿನಾ ಯಃ ಕೃತಃ । ನಿರ್ಮಿತಕಃ ಮನ್ತ್ರೌಷಧ್ಯಾದಿಭಿಃ ನಿಷ್ಪಾದಿತಃ । ಸ್ವಪ್ನಮಾಯಾನಿರ್ಮಿತಕಾಃ ಅಣ್ಡಜಾದಯಃ ಜೀವಾಃ

1. ಯಾವದರಿಂದ ಅರಿಯುವೆವೋ ಅದು ಪ್ರಮಾಣವು, ಯಾವದನ್ನು ಅದರಿಂದ ಅರಿಯುವೆವೋ ಅದು ಪ್ರಮೇಯವು. ಪ್ರಮೇಯವಾದ ಚಿತ್ತವು ಪರಾಧೀನವಾದರೂ ಪ್ರಮಾಣವಾದ ಚಿತ್ತವು ಸ್ವತಂತ್ರವು ಎಂಬ ಪೂರ್ವಪಕ್ಷಕ್ಕೆ ಉತ್ತರವಿದು.

2. 'ವಾ' ಎಂಬ ಪಾಠಕ್ಕಿಂತ ಈ ವಾ॥ ಪಾಠವೇ ಮೇಲು

ಯಥಾ ಜಾಯನ್ತೇ ಮ್ರಿಯನ್ತೇ ಚ ತಥಾ ಮನುಷ್ಯಾದಿಲಕ್ಷಣಾಃ ಅವಿದ್ಯಮಾನಾ ಏವ ಚಿತ್ತವಿಕಲ್ಪನಾಮಾತ್ರಾಃ ಇತ್ಯರ್ಥಃ ।।

(ಭಾಷ್ಯಾರ್ಥ)

ಮಾಯೆಯಿಂದಾಗಿರುವವನು ಎಂದರೆ ಮಾಯಾವಿಯು ಮಾಡಿರುವನಲ್ಲ, (ಅವನು). ನಿರ್ಮಿತಕನು ಎಂದರೆ ಮಂತ್ರ, ಔಷಧಿ ಮುಂತಾದವುಗಳಿಂದ[1] ಮಾಡಲ್ಪಟ್ಟವನು. ಕನಸಿನ, ಮಾಯೆಯ, ನಿರ್ಮಿತಕರಾದ ಅಂಡಜಾದಿಜೀವರುಗಳು ಹೇಗೆ ಹುಟ್ಟುವರೋ ಮತ್ತು ಸಾಯುವರೋ[2] ಹಾಗೆಯೇ ಮನುಷ್ಯನೇ ಮೊದಲಾದ ರೂಪದ (ಈ ಜೀವರೂ ಪರಮಾರ್ಥವಾಗಿ) ಇರುವವರಲ್ಲವೇ ಅಲ್ಲ. ಬರಿಯ ಚಿತ್ತದ ವಿಕಲ್ಪನೆ[3] ಯಾಗಿರುತ್ತಾರೆ. ಎಂದರ್ಥ.

ನ ಕಶ್ಚಿಜ್ಜಾಯತೇ ಜೀವಃ ಸಮ್ಭವೋಽಸ್ಯ ನ ವಿದ್ಯತೇ ।
ಏತತ್ತದುತ್ತಮಂ ಸತ್ಯಂ ಯತ್ರ ಕಿಂಚಿನ್ನ ಜಾಯತೇ ।।೭೧।।

೭೧. ಯಾವ ಜೀವನೂ ಹುಟ್ಟುವದಿಲ್ಲ. ಇವನಿಗೆ (ಹುಟ್ಟುವದಕ್ಕೆ) ಕಾರಣವೇ ಇಲ್ಲ. ಎಲ್ಲಿ ಯಾವದೊಂದೂ ಹುಟ್ಟುವದೇ ಇಲ್ಲವೋ ಇದೇ ಆ ಉತ್ತಮಸತ್ಯವು.

(ಭಾಷ್ಯ)

೭೨೦. ವ್ಯವಹಾರಸತ್ಯವಿಷಯೇ ಜೀವಾನಾಂ ಜನ್ಮಮರಣಾದಿಃ ಸ್ವಪ್ನಾದಿ ಜೀವವತ್ ಇತ್ಯುಕ್ತಮ್ । ಉತ್ತಮಂ ತು ಪರಮಾರ್ಥಸತ್ಯಂ ನ ಕಶ್ಚಿಜ್ಜಾಯತೇ ಜೀವಃ ಇತಿ । ಉಕ್ತಾರ್ಥಮ್ ಅನ್ಯತ್ ।।

(ಭಾಷ್ಯಾರ್ಥ)

ವ್ಯವಹಾರಸತ್ಯದ ವಿಷಯದಲ್ಲಿ ಜೀವರುಗಳ ಜನ್ಮ, ಮರಣ-ಮುಂತಾದದ್ದು ಕನಸು ಮುಂತಾದವುಗಳ ಜೀವರು(ಗಳ ಹುಟ್ಟು, ಸಾವು-ಮುಂತಾದದ್ದ)ರಂತೆ ಎಂದು ಹೇಳಿದ್ದಾಯಿತು. ಆದರೆ ಉತ್ತಮವಾದ ಪರಮಾರ್ಥಸತ್ಯವು ಯಾವದೆಂದರೆ ಯಾವ

---

1. ಯೋಗಿಗಳ ನಿರ್ಮಾಣಕಾಯದಲ್ಲಿ ಕಲ್ಪಿತರಾಗುವ ಜೀವರನ್ನೂ ಇಲ್ಲಿ ಸೇರಿಸಿಕೊಳ್ಳಬೇಕು. 2 ಹುಟ್ಟಿದಂತೆಯೋ ಸತ್ತಂತೆಯೋ ತೋರುವರೋ ಎಂದರ್ಥ.

3. ಚಿತ್ತವಿಕಲ್ಪವೆಂದರೆ ಚಿತ್ತವು ಪರಮಾರ್ಥವೆಂದು ತಿಳಿಯಬಾರದು. ಯಾವದೂ ಪರಮಾರ್ಥವಾಗಿ ಹುಟ್ಟಿಸಲ್ಪಟ್ಟಿಲ್ಲವೆಂಬುದೇ ವಿವಕ್ಷಿತ.

ನೊಬ್ಬ ಜೀವನೂ (ಪರಮಾರ್ಥವಾಗಿ) ಹುಟ್ಟುವದಿಲ್ಲವೆಂಬುದೇ. ಉಳಿದದ್ದಕ್ಕೆ (ಹಿಂದೆಯೇ[1]) ಅರ್ಥವನ್ನು ಹೇಳಿರುತ್ತದೆ.

ಚಿತ್ತಸ್ಪನ್ದಿತಮೇವೇದಂ ಗ್ರಾಹ್ಯಗ್ರಾಹಕವತ್ ದ್ವಯಮ್ ।
ಚಿತ್ತಂ ನಿರ್ವಿಷಯಂ ನಿತ್ಯಮಸಙ್ಗಂ ತೇನ ಕೀರ್ತಿತಮ್ ॥೭೨॥

೭೨. ಗ್ರಾಹ್ಯಗ್ರಾಹಕಗಳನ್ನುಳ್ಳ ಈ ದ್ವೈತವು ಚಿತ್ತದ ಅಲುಗಾಟವೇ. ಚಿತ್ತವು ವಿಷಯವಿಲ್ಲದ್ದು, ಆದ್ದರಿಂದ (ಅದು) ಯಾವಾಗಲೂ ಅಸಂಗವೆನ್ನಲ್ಪಡುತ್ತದೆ.

(ಭಾಷ್ಯ)

೩೨೧. ಸರ್ವಂ ಗ್ರಾಹ್ಯಗ್ರಾಹಕವತ್ ಚಿತ್ತಸ್ಪನ್ದಿತಮೇವ ದ್ವಯಮ್ । ಚಿತ್ತಂ ಪರಮಾರ್ಥತಃ ಆತ್ಮೈವ ಇತಿ ನಿರ್ವಿಷಯಮ್ । ತೇನ ನಿರ್ವಿಷಯತ್ವೇನ ನಿತ್ಯಂ ಅಸಂಗಂ ಕೀರ್ತಿತಮ್ । "ಅಸಙ್ಗೋ ಹ್ಯಯಂ ಪುರುಷಃ" (ಬೃ. ೪-೩-೧೫) ಇತಿ ಶ್ರುತೇಃ । ಸವಿಷಯಸ್ಯ ಹಿ ವಿಷಯೇ ಸಙ್ಗಃ । ನಿರ್ವಿಷಯತ್ವಾತ್ ಚಿತ್ತಮ್ ಅಸಙ್ಗಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಅರಿಯಲ್ಪಡತಕ್ಕದ್ದು ಅರಿಯುವದು-ಎಂಬ (ಭೇದ)ವುಳ್ಳ ದ್ವೈತವೆಲ್ಲವೂ ಚಿತ್ತದ ಅಲುಗಾಟವೇ[2]. ಚಿತ್ತವು ನಿಜವಾಗಿ ಆತ್ಮನೇ ಆದ್ದರಿಂದ ನಿರ್ವಿಷಯವಾದದ್ದು[3]. ಆದ್ದರಿಂದ (ಹೀಗೆ) ವಿಷಯವಿಲ್ಲದ್ದಾದ್ದರಿಂದ ಯಾವಾಗಲೂ ಅಸಂಗವು ಎನ್ನಲ್ಪಡುತ್ತದೆ. "ಈ ಪುರುಷನು ಅಸಂಗನೇ ಅಲ್ಲವೆ ?" (ಬೃ. ೪-೩-೧೫) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ವಿಷಯವುಳ್ಳದ್ದಕ್ಕೇ ಅಲ್ಲವೆ, ವಿಷಯದಲ್ಲಿ ಸಂಗ(ವಿರುತ್ತದೆ) ? (ಆದರೆ) ಚಿತ್ತವು ನಿರ್ವಿಷಯವಾದ್ದರಿಂದ ಅಸಂಗವು ಎಂದರ್ಥ.

## ಶಾಸ್ತ್ರಾದಿಭೇದವೂ ಅಜತ್ವವೂ ಅವಿದ್ಯಕವೇ

(ಭಾಷ್ಯ)

೩೨೨. ನನು ನಿರ್ವಿಷಯತ್ವೇನ ಚೇತ್ ಅಸಙ್ಗತ್ವಂ ಚಿತ್ತಸ್ಯ ನಿಸ್ಸಙ್ಗತಾ ಭವತಿ ।

---

1. ೩-೪ರ ಭಾಷ್ಯದಿಂದ ಈ ಕಾರಿಕೆಯ ಉತ್ತರಾರ್ಧಕ್ಕೆ ಅರ್ಥವನ್ನು ತಿಳಿದುಕೊಳ್ಳಬೇಕು ಎಂದು ಭಾವ. 2. ಚಿತ್ತವೆಂಬ ಸಕ್ರಿಯಪದಾರ್ಥವನ್ನು ಕಲ್ಪಿಸಿಕೊಂಡಿರುವ ಅವಿದ್ಯೆಯೇ ದ್ವೈತಕ್ಕೆ ಕಾರಣವು ಎಂದರ್ಥ.

3. ತನ್ನ ರೂಪದಿಂದ ವಿಷಯವುಳ್ಳದ್ದಾದರೂ ಆತ್ಮರೂಪದಿಂದ ಅದ್ವಿತೀಯವಾಗಿದೆ.

ಯಸ್ಮಾತ್[1] ಶಾಸ್ತಾ ಶಾಸ್ತ್ರಂ ಶಿಷ್ಯಶ್ಚ ಇತ್ಯೇವಮಾದೇಃ ವಿಷಯಸ್ಯ ವಿದ್ಯಮಾನತ್ವಾತ್ । ನೈಷ ದೋಷಃ । ಕಸ್ಮಾತ್ ?

(ಭಾಷ್ಯಾರ್ಥ)

(ಆಕ್ಷೇಪ) :- ವಿಷಯವಿಲ್ಲದಿರುವದರಿಂದ ಅಸಂಗವೆನ್ನುವದಾದರೆ ಚಿತ್ತವು ಅಸಂಗವಾಗುವದಿಲ್ಲ. ಏಕೆಂದರೆ ಶಾಸ್ತ್ರವನ್ನು ಹೇಳಿಕೊಡುವ ಗುರು, ಶಾಸ್ತ್ರ, ಮತ್ತು ಶಿಷ್ಯನು-ಎಂಬಿವೇ ಮುಂತಾದ ವಿಷಯವು ಇರುತ್ತದೆ[2].

(ಪರಿಹಾರ) :- ಇದು ತಪ್ಪಲ್ಲ. ಏಕೆಂದರೆ :-

ಯೋಽಸ್ತಿ ಕಲ್ಪಿತಸಂವೃತ್ಯಾ ಪರಮಾರ್ಥೇನ ನಾಸ್ತ್ಯಸೌ ।
ಪರತನ್ತ್ರಾಭಿಸಂವೃತ್ಯಾ ಸ್ಯಾನ್ನಾಸ್ತಿ ಪರಮಾರ್ಥತಃ ॥೭೩॥

೭೩. ಯಾವದು ಕಲ್ಪಿತಸಂವೃತಿಯಿಂದ ಇರುವದೋ ಅದು ಪರಮಾರ್ಥದಿಂದ ಇರುವದಿಲ್ಲ. ಪರತಂತ್ರಾಭಿಸಂವೃತಿಯಿಂದ ಇರಬಹುದು, ಪರಮಾರ್ಥವಾಗಿರುವದಿಲ್ಲ.

(ಭಾಷ್ಯ)

೩೨೩. ಯಃ ಪದಾರ್ಥಃ ಶಾಸ್ತ್ರಾದಿಃ ವಿದ್ಯತೇ ಸ ಕಲ್ಪಿತಸಂವೃತ್ಯಾ । ಕಲ್ಪಿತಾ ಚ ಸಾ ಪರಮಾರ್ಥಪ್ರತಿಪತ್ತ್ಯುಪಾಯತ್ವೇನ ಸಂವೃತಿಶ್ಚ ಸಾ । ತಯಾ ಯಃ ಅಸ್ತಿ ಪರಮಾರ್ಥೇನ ನಾಸ್ತಿ ಅಸೌ ನ ವಿದ್ಯತೇ । "ಜ್ಞಾತೇ ದ್ವೈತಂ ನ ವಿದ್ಯತೇ" (೧-೧೮) ಇತಿ (ಹಿ) ಉಕ್ತಮ್ । ಯಶ್ಚ ಪರತನ್ತ್ರಾಭಿಸಂವೃತ್ಯಾ ಪರಶಾಸ್ತ್ರವ್ಯವಹಾರೇಣ ಸ್ಯಾತ್ ಪದಾರ್ಥಃ ಸ ಪರಮಾರ್ಥತೋ ನಿರೂಪ್ಯಮಾಣಃ ನಾಸ್ತ್ಯೇವ । ತೇನ ಯುಕ್ತಮುಕ್ತಮ್ "ಅಸಙ್ಗಂ ತೇನ ಕೀರ್ತಿತಮ್" (೪-೭೨) ಇತಿ ॥

(ಭಾಷ್ಯಾರ್ಥ)

ಶಾಸ್ತ್ರವೇ ಮುಂತಾದ ಪದಾರ್ಥವಿರುವದಲ್ಲ, ಅದು ಕಲ್ಪಿತಸಂವೃತಿಯಿಂದ. ಅದು ಪರಮಾರ್ಥವನ್ನು ಅರಿಯುವದಕ್ಕೆ ಉಪಾಯವಾಗಿ ಕಲ್ಪಿತವಾಗಿಯೂ ಇರುತ್ತದೆ. ಅದು ಸಂವೃತಿಯಾಗಿಯೂ[3] ಇರುತ್ತದೆ. ಆ (ಕಲ್ಪಿತಸಂವೃತಿಯಿಂದ) ಯಾವದು ಇರು

---

1. ಇಲ್ಲಿ ಕಸ್ಮಾತ್ ಎಂತ ಇದ್ದರೆ ಒಳ್ಳೆಯದೆಂತ ಕಾಣುತ್ತದೆ.
2. ೧-೧೮ ರಲ್ಲಿ ಹೇಳಿರುವ ಸಮಾಧಾನವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.
3. ೪-೫೭ ನೆಯ ಕಾರಿಕೆಯ ಭಾ. ಭಾ. ೩೦೯ ನ್ನು ನೋಡಿ.

ತ್ತದೆಯೋ ಅದು ಪರಮಾರ್ಥವಾಗಿರುವದಿಲ್ಲ, (ನಿಜವಾಗಿ) ಇರುವದಿಲ್ಲ. "ಅರಿತು ಕೊಂಡರೆ ದ್ವೈತವಿರುವದಿಲ್ಲ" (೧-೧೮) ಎಂದಲ್ಲವೆ, (ಹಿಂದೆ) ಹೇಳಿರುತ್ತದೆ[1] ?

ಮತ್ತು ಯಾವ ಪದಾರ್ಥವು ಪರತಂತ್ರದ ಸಂವೃತಿಯಿಂದ ಮತ್ತೊಬ್ಬರ ಶಾಸ್ತ್ರದ ವ್ಯವಹಾರದಿಂದ ಇರುತ್ತದೆಯೋ[2], ಅದು ನಿಜವಾಗಿ ಪರೀಕ್ಷಿಸಿ ನೋಡಿದರೆ ಇರುವದೇ ಇಲ್ಲ. ಆದಕಾರಣ "ಆದ್ದರಿಂದ (ಅದು) ಅಸಂಗವೆನಿಸಿರುತ್ತದೆ" (೪-೭೨) ಎಂದು ಹೇಳಿದ್ದು ಸರಿಯೇ.

(ಭಾಷ್ಯ)

೩೨೪. ನನು ಶಾಸ್ತ್ರಾದೀನಾಂ ಸಂವೃತಿತ್ವೇ ಅಜ ಇತಿ ಇಯಮಪಿ ಕಲ್ಪನಾ ಸಂವೃತಿಃ ಸ್ಯಾತ್ । ಸತ್ಯಮೇವಮ್-

(ಭಾಷ್ಯಾರ್ಥ)

(ಆಕ್ಷೇಪ) :- ಶಾಸ್ತ್ರವೇ ಮುಂತಾದವು ಸಂವೃತಿಯಾದರೆ ಈ ಹುಟ್ಟುವದಿಲ್ಲ ಎಂಬ ಕಲ್ಪನೆಯೂ ಸಂವೃತಿಯಾಗುವದಲ್ಲ ?

(ಪರಿಹಾರ) :- ನಿಜ, ಹಾಗೆಯೇ (ಸರಿ).

ಅಜಃ ಕಲ್ಪಿತಸಂವೃತ್ಯಾ ಪರಮಾರ್ಥೇನ ನಾಪ್ಯಜಃ ।
ಪರತನ್ತ್ರಾಭಿನಿಷ್ಪತ್ತ್ಯಾ ಸಂವೃತ್ಯಾ ಜಾಯತೇ ತು ಸಃ ॥೭೪॥

೭೪. ಕಲ್ಪಿತಸಂವೃತಿಯಿಂದ ಅಜನು, ಪರಮಾರ್ಥದಿಂದ ಅಜನೂ ಅಲ್ಲ. ಪರತಂತ್ರದ ಅಭಿನಿಷ್ಪತ್ತಿಯಿಂದ, ಅವನು ಸಂವೃತಿಯಿಂದ ಮಾತ್ರ ಹುಟ್ಟುತ್ತಾನೆ.

(ಭಾಷ್ಯ)

೩೨೫. ಶಾಸ್ತ್ರಾದಿ (ವತ್)[3] ಕಲ್ಪಿತಸಂವೃತ್ಯೈವ ಅಃ ಇತ್ಯುಚ್ಯತೇ

---

1. "ಶಾಸ್ತ್ರಾದಿಭೇದವು ಹೋಗುವದು ಹೇಗೆ ?" ಎಂಬ ಆಕ್ಷೇಪಕ್ಕೆ ಪರಿಹಾರವನ್ನು ೧-೧೮ ರಲ್ಲಿ ಹೇಳಿತ್ತು ; ಶಾಸ್ತ್ರಾದಿಭೇದವು ಇರುವಾಗ ಚಿತ್ತವು ಅಸಂಗವೆಂಬುದು ಹೇಗೆ ?-ಎಂಬ ಆಕ್ಷೇಪಕ್ಕೆ ಇಲ್ಲಿ ಪರಿಹಾರವನ್ನು ಹೇಳಿದೆ.

2. ಚಿತ್ತವಿಲ್ಲ. ವಿಷಯವಿಲ್ಲ-ಎಂದು ನಾವು ಹೇಳಿರುವದು ನಿಜವಾಗಿರುವ ಚಿತ್ತ ವಿಷಯಗಳ ನಿಷೇಧವಲ್ಲ ; ಮಿಕ್ಕ ದರ್ಶನಕಾರರು ಕಲ್ಪಿಸಿಕೊಂಡಿರುವವುಗಳನ್ನೇ ಇಲ್ಲವೆಂದಿರುತ್ತೇವೆ. ಇದರಂತೆ ಶಾಸ್ತ್ರಾದಿಭೇದವೂ, ಆ ದರ್ಶನಕಾರರು ಅವಿದ್ಯೆಯಿಂದ ಕಲ್ಪಿಸಿರುವದೇ ಹೊರತು ನಿಜವಾಗಿರುವದಲ್ಲ-ಎಂದು ಭಾವ.

3. 'ಶಾಸ್ತ್ರಾದಿಕಲ್ಪಿತಸಂವೃತ್ಯೈವ' ಎಂಬ ಅಚ್ಚಿನ ಪಾಠಕ್ಕಿಂತ ಇದು ಉತ್ತಮ.

ಪರಮಾರ್ಥೇನ ನಾಪಿ ಅಜಃ । ಯಸ್ಮಾತ್ ಪರತನ್ತ್ರಾಭಿನಿಷ್ಪತ್ತ್ಯಾ ಪರಶಾಸ್ತ್ರಪ್ರಸಿದ್ಧಿಮ್[1] ಅಪೇಕ್ಷ್ಯ ಯಃ ಅಜಃ ಇತ್ಯುಕ್ತಃ ಸಃ ಸಂವೃತ್ಯಾ ಜಾಯತೇ । ಅತಃ ಅಜಃ ಇತೀಯಮಪಿ ಕಲ್ಪನಾ ಪರಮಾರ್ಥವಿಷಯೇ ನೈವ ಕ್ರಮತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಶಾಸ್ತ್ರವೇ ಮುಂತಾದ (ದೃಷ್ಟತದಂತೆ)[2] ಕಲ್ಪಿತಸಂವೃತಿಯಿಂದಲೇ ಅಜನು ಎನ್ನುತ್ತೇವೆ. ನಿಜವಾಗಿ (ನೋಡಿದರೆ ಅವನು) ಅಜನೂ ಅಲ್ಲ. ಏಕೆಂದರೆ ಪರತಂತ್ರಾಭಿನಿಷ್ಪತ್ತಿಯಿಂದ ಮತ್ತೊಬ್ಬರ ಶಾಸ್ತ್ರದ ಪ್ರಸಿದ್ಧಿಯನ್ನಿಟ್ಟುಕೊಂಡು[3] ಅಜನು ಎಂದು ಹೇಳಿದೆವಲ್ಲ, ಆ (ಆತ್ಮನು) ಸಂವೃತಿಯಿಂದಲೇ ಹುಟ್ಟುತ್ತಾನೆ[4]. ಆದ್ದರಿಂದ ಅಜನೆಂಬೀ ಕಲ್ಪನೆಯೂ ಪರಮಾರ್ಥವಿಷಯದಲ್ಲಿ ಬರುವದಿಲ್ಲ[5] ಎಂದರ್ಥ.

## ಮಿಥ್ಯಾಭಿಮಾನದಿಂದ ಸಂಸಾರ, ಜ್ಞಾನದಿಂದ ಮೋಕ್ಷ

(ಭಾಷ್ಯ)

೩೨೬. ಯಸ್ಮಾತ್ ಅಸನ್[6] ವಿಷಯಃ ತಸ್ಮಾತ್-

(ಭಾಷ್ಯಾರ್ಥ)

(ಹೀಗೆ) ವಿಷಯವು (ನಿಜವಾಗಿ) ಇಲ್ಲದೆ ಇರುವದಷ್ಟೆ, ಆದ್ದರಿಂದ-

ಅಭೂತಾಭಿನಿವೇಶೋಽಸ್ತಿ ದ್ವಯಂ ತತ್ರ ನ ವಿದ್ಯತೇ ।
ದ್ವಯಾಭಾವಂ ಸ ಬುದ್ಧ್ಯೈವ ನಿರ್ವಿಮಿತ್ತೋ ನ ಜಾಯತೇ ॥೭೫॥

1. 'ಪರಶಾಸ್ತ್ರಸಿದ್ಧಿಮ್' ಎಂಬ ಅಚ್ಚಿನ ಪಾಠಕ್ಕಿಂತ ಇದು ಉತ್ತಮ.

2. ಶಾಸ್ತ್ರ, ಶಾಸ್ತ್ರ, ಶಿಷ್ಯ-ಎಂಬಿವುಗಳು ಕಲ್ಪಿತಸಂವೃತಿಯಿಂದಲೇ ಇವೆ ಎಂದು ಹಿಂದಿನ ಕಾರಿಕೆಯಲ್ಲಿ ಹೇಳಿರುವಂತೆ ಅಜತ್ವವೂ ಕಲ್ಪಿತಸಂವೃತಿಯಿಂದಲೇ ಎಂದು ತಿಳಿಯಬೇಕು ಎಂದರ್ಥ. ಶಾಸ್ತ್ರಾದಿಕಲ್ಪನೆಯು ಸಂವೃತಿಸಿದ್ಧವಾಗಿರುವದರಿಂದ ಅದಕ್ಕಧೀನವಾಗಿ ಸಿದ್ಧವಾಗುವ ಅಜತ್ವ ಕಲ್ಪನೆಯೂ ಸಂವೃತಿಸಿದ್ಧವೇ ಎಂಬ ಅರ್ಥವನ್ನು 'ಶಾಸ್ತ್ರಾದಿಕಲ್ಪಿತ ಸಂವೃತ್ಯೈವ' ಎಂಬ ಪಾಠದ ಬಲದಿಂದ ಆ॥ ವ್ಯಾಖ್ಯಾನಕಾರರು ತೆಗೆದಿದ್ದಾರೆ.

3. ತಾರ್ಕಿಕರ ಶಾಸ್ತ್ರದಲ್ಲಿ ಆತ್ಮನು ಜನ್ಮವುಳ್ಳವನೆಂದು ಪ್ರಸಿದ್ಧಿ ; ಅದನ್ನು ಅಲ್ಲಗಳೆಯುವದಕ್ಕಾಗಿ ಅಜನೆಂದಿದೆ.

4. ಅಜತ್ವವೂ ಸಂವೃತಿಯಿಂದಲೇ ಆಗಿರುತ್ತದೆ ಎಂದರ್ಥ.

5. ಅಜತ್ವವೂ ಎಂದರೆ ಜನ್ಮಾಭಾವವೆಂಬ ಧರ್ಮವಿರುವದೆಂಬುದು ನಿಜವಾಗಿ ಆತ್ಮನ ವಿಶೇಷಣವಲ್ಲ-ಎಂದು ಅಭಿಪ್ರಾಯ. ನಿಷೇಧವಾಕ್ಯದ ತಾತ್ಪರ್ಯವನ್ನು ೨-೩೨ ರಲ್ಲಿ ಚರ್ಚಿಸಿರುವದನ್ನು ನೋಡಿ.

6. 'ಅಸತ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

೭೫. ಅಭೂತದಲ್ಲಿ ಅಭಿನಿವೇಶವಿರುತ್ತದೆ, ಅಲ್ಲಿ ಅದ್ವೈತವು ಇರುವದಿಲ್ಲ. ದ್ವಯಾಭಾವವನ್ನು ಅರಿತುಕೊಂಡರೇ ಅವನು ನಿಮಿತ್ತವಿಲ್ಲದವನಾಗಿ ಹುಟ್ಟದೇ ಇರುವನು.

(ಭಾಷ್ಯ)

೩೨೭. ಅಸತಿ ಅಭೂತೇ ದ್ವೈತೇ ಅಭಿನಿವೇಶಃ ಅಸ್ತಿ ಕೇವಲಮ್ । ಅಭಿನಿವೇಶಃ ಆಗ್ರಹಮಾತ್ರಮ್ । ದ್ವಯಂ ತತ್ರ ನ ವಿದ್ಯತೇ । ಮಿಥ್ಯಾಭಿನಿವೇಶಮಾತ್ರಂ ಚ ಜನ್ಮನಃ ಕಾರಣಂ ಯಸ್ಮಾತ್, ತಸ್ಮಾತ್ ದ್ವಯಾಭಾವಂ ಬುದ್ಧ್ವಾ ನಿರ್ನಿಮಿತ್ತಃ ನಿವೃತ್ತ ಮಿಥ್ಯಾದ್ವಯಾಭಿನಿವೇಶೋ ಯಃ ಸ ನ ಜಾಯತೇ ॥

ಅಭೂತದಲ್ಲ (ನಿಜವಾಗಿ) ಇಲ್ಲದಿರುವ ದ್ವೈತದಲ್ಲ ಬರಿಯ ಅಭಿನಿವೇಶವಿರುತ್ತದೆ. ಅಭಿನಿವೇಶವೆಂದರೆ (ಇರುವದೆಂಬ) ಬರಿಯ ಹಟವು. (ಆದರೆ) ಅಲ್ಲಿ ದ್ವೈತವು ಇರುವದಿಲ್ಲ. (ಹೀಗೆ) ಮಿಥ್ಯಾ (ವಿಷಯದ) ಅಭಿಮಾನವೇ ಜನ್ಮಕ್ಕೆ ಕಾರಣವಾಗಿರುವದಷ್ಟೆ, ಆದ್ದರಿಂದ ದ್ವೈತವು ಇಲ್ಲವೆಂಬುದನ್ನು ಅರಿತುಕೊಂಡ (ಮಾತ್ರದಿಂದಲೇ) ನಿರ್ನಿಮಿತ್ತನಾದವನು, ಮಿಥ್ಯಾದ್ವೈತದ ಅಭಿನಿವೇಶವು ತೊಲಗಿರುವವನು ಯಾವನೋ ಅವನು ಹುಟ್ಟುವದಿಲ್ಲ[1].

**ಯದಾ ನ ಲಭತೇ ಹೇತೂನುತ್ತಮಾಧಮಮಧ್ಯಮಾನ್ ।**
**ತದಾ ನ ಜಾಯತೇ ಚಿತ್ತಂ ಹೇತ್ವಭಾವೇ ಫಲಂ ಕುತಃ** ॥೭೬॥

೭೬. ಉತ್ತಮ, ಅಧಮ, ಮಧ್ಯಮ-ಎಂಬ ಹೇತುಗಳನ್ನು ಯಾವಾಗ ಪಡೆಯುವದಿಲ್ಲವೋ ಆಗ ಚಿತ್ತವು ಹುಟ್ಟುವದಿಲ್ಲ. ಹೇತುವಿಲ್ಲದಿರಲು ಫಲವು ಎಲ್ಲಿಯದು ?

1. ಹಗ್ಗವನ್ನು ಹಾವೆಂದು ಭಾವಿಸುವಾಗ ಹಾವೆಂಬ ಭಾವನೆಯಿರುವದೇ ಹೊರತು ನಿಜವಾಗಿಯೂ ಹಾವೇನೂ ಅಲ್ಲಿರುವದಿಲ್ಲ ; ಇದರಂತೆ ದ್ವೈತವಿರುವದೆಂಬ ಭಾವನೆಯಿಂದಲೇ ದ್ವೈತವಿರುವದೇ ಹೊರತು ನಿಜವಾಗಿಯೂ ದ್ವೈತವಿರುವದಿಲ್ಲ. ಆದ್ದರಿಂದ ಪರಮಾರ್ಥವನ್ನು ಅರಿತುಕೊಂಡವನಿಗೆ ಮಿಥ್ಯಾಭಿಮಾನವೂ ಇರುವದಿಲ್ಲ, ಅದರಿಂದಾಗುವ ಸಂಸಾರವೂ ಇರುವದಿಲ್ಲ-ಎಂದರ್ಥ. ವ್ಯಾಖ್ಯಾನಕಾರರು ಕಲ್ಪಿತಶಾಸ್ತ್ರವು ಪರಮಾರ್ಥಫಲವನ್ನು ಕೊಡುವ ಜ್ಞಾನವನ್ನು ಹೇಗೆ ಕೊಟ್ಟೀತು ? ಎಂಬ ಶಂಕೆಗೆ ಪರಿಹಾರವಾಗಿ ಈ ಕಾರಿಕೆಯನ್ನು ಒಡ್ಡಿರುತ್ತಾರೆ

(ಭಾಷ್ಯ)

೩೨೮. ಜಾತ್ಯಾಶ್ರಮಪೀಠಿತಾಃ ಆಶೀರ್ವರ್ಜಿತೈರನುಷ್ಠೀಯಮಾನಾಃ ಧರ್ಮಾಃ ದೇವತ್ವಾದಿಪ್ರಾಪ್ತಿಹೇತವಃ ಉತ್ತಮಾಃ, ಕೇವಲಾಶ್ಚ ಧರ್ಮಾಃ । ಅಧರ್ಮವ್ಯಾಮಿಶ್ರಾಃ ಮನುಷ್ಯತ್ವಾದಿ (?) ಪ್ರಾಪ್ತ್ಯರ್ಥಾಃ ಮಧ್ಯಮಾಃ । ತಿರ್ಯಗಾದಿಪ್ರಾಪ್ತಿನಿಮಿತ್ತಾ ಅಧರ್ಮಲಕ್ಷಣಾಃ ಪ್ರವೃತ್ತಿವಿಶೇಷಾಶ್ಚ, ಅಧಮಾಃ । ತಾನ್ ಉತ್ತಮಮಧ್ಯಮಾಧಮಾನ್ (ಹೇತೂನ್[1]) ಅವಿದ್ಯಾಪರಿಕಲ್ಪಿತಾನ್ ಯದಾ ಏಕಮೇವ ಅದ್ವಿತೀಯಮ್ ಆತ್ಮತತ್ತ್ವಂ ಸರ್ವಕಲ್ಪನಾವರ್ಜಿತಂ ಜಾನನ್ ನ ಲಭತೇ ನ ಪಶ್ಯತಿ-ಯಥಾ ಬಾಲೋ ದೃಶ್ಯಮಾನಂ ಗಗನೇ ಮಲಂ ನಿರೇಕೇ ನ ಪಶ್ಯತಿ ತದ್ವತ್-ತದಾ ನ ಜಾಯತೇ ನೋತ್ಪದ್ಯತೇ ಚಿತ್ತಂ ದೇವಾದ್ಯಾಕಾರೈಃ ಉತ್ತಮಾಧಮಮಧ್ಯಮಫಲರೂಪೇಣ । (ಹೇತ್ವಭಾವೇ ಫಲಂ ಕುತಃ[2] ?) ನ ಹಿ ಅಸತಿ ಹೇತೌ ಫಲಮ್ ಉತ್ಪದ್ಯತೇ, ಬೀಜಾದ್ಯಭಾವೇ ಇವ ಸಸ್ಯಾದಿ ॥

(ಭಾಷ್ಯಾರ್ಥ)

ಜಾತಿಗಳಿಗೂ ಆಶ್ರಮಗಳಿಗೂ (ಶಾಸ್ತ್ರದಲ್ಲಿ) ವಿಧಿಸಿರುವ, (ಫಲದ) ಆಶೆಯಿಲ್ಲದೆ ಅನುಷ್ಠಾನಮಾಡಿದರೆ ದೇವತ್ವವೇ ಮುಂತಾದದ್ದನ್ನು ಪಡೆಯುವದಕ್ಕೆ ಕಾರಣವಾಗಿರುವ ಬರಿಯ ಧರ್ಮಗಳು[3] ಉತ್ತಮವಾದವು : ಮತ್ತು ಅಧರ್ಮದೊಡನೆ ಬೆರೆತುಕೊಂಡು ಮನುಷ್ಯತ್ವವೇ ಮುಂತಾದದ್ದನ್ನು[4] ಪಡೆಯುವದಕ್ಕೆ ಕಾರಣವಾಗಿರುವವು ಮಧ್ಯಮಗಳು ; ಅಧರ್ಮರೂಪವಾದ ತಿರ್ಯಕ್ಪ್ರಾಣಿ(ಗಳ ಜನ್ಮವೇ) ಮುಂತಾದದ್ದನ್ನು ಪಡೆಯುವದಕ್ಕೆ ಕಾರಣವಾಗಿರುವ ಬೇರೆಬೇರೆಯ ಪ್ರವೃತ್ತಿಗಳು ಅಧಮಗಳು. ಆ ಅವಿದ್ಯಾಕಲ್ಪಿತವಾದ ಉತ್ತಮ, ಮಧ್ಯಮ, ಅಧಮ-ಎಂಬ (ಹೇತುಗಳನ್ನು)[5] ಯಾವಾಗ ಯಾವ ಕಲ್ಪನೆಯೂ ಇಲ್ಲದ ಎರಡನೆಯದಿಲ್ಲದ ಒಂದೇ ಒಂದಾದ ಆತ್ಮತತ್ತ್ವವನ್ನು ಅರಿತುಕೊಂಡು ಪಡೆಯದೆ ಇರುವನೋ ಕಾಣದೆ ಇರುವನೋ-ಹೇಗೆ ಅವಿವೇಕಿಗಳು ಆಕಾಶದಲ್ಲಿ ಕಾಣುವ ಕಲ್ಮಷವನ್ನು ವಿವೇಕಿಯು ಕಾಣದೆ ಇರುವನೋ ಹಾಗೆ (ಯಾವಾಗ

1. ಈ ಮಾತು ಬರೆದವರ ತಪ್ಪಿನಿಂದ ಬಿಟ್ಟುಹೋಗಿದೆ.

2. ಈ ವಾಕ್ಯವು ಇಲ್ಲಿದ್ದರೆ ಚೆನ್ನ ; ಮೂಲಾನುಸಾರಿಯಾಗುತ್ತದೆ.

3. ಕಾಮ್ಯಕರ್ಮಗಳನ್ನು ಬಿಟ್ಟು ; ಉಪಾಸನೆಯೊಡನೆ ಎಂದು ಸೇರಿಸಿಕೊಳ್ಳಬಹುದು.

4. ಇಲ್ಲಿ ಮುಂತಾದದ್ದು ಎಂಬುದರ ಅರ್ಥವೇನೆಂಬುದು ತಿಳಿಯುವಂತಿಲ್ಲ. ಮಧ್ಯಮಜನ್ಮಗಳು ಎಂದು ಆ॥ ವ್ಯಾಖ್ಯಾನ.

5. ಸಂಸಾರವೆಲ್ಲ ಇಪ್ಪರಲ್ಲಿ ಅಡಕವಾಗಿದೆ. ಸೂ. ಭಾ. ೧-೧-೪.

ಜ್ಞಾನದಿಂದ ಅವನ್ನು ಕಾಣದೆ ಇರುವನೋ)-ಆಗ ಚಿತ್ತವು ದೇವತೆಗಳೇ ಮುಂತಾದ ಆಕಾರಗಳನ್ನು ಪಡೆದು ಉತ್ತಮ, ಮಧ್ಯಮ, ಅಧಮ-ಎಂಬ ಫಲರೂಪದಿಂದ ಹುಟ್ಟದೆ ಇರುವದು. (ಹೇತುವಿಲ್ಲದಿರಲು ಫಲವು ಎಲ್ಲಿಯದು ?) ಬೀಜವೇ ಮುಂತಾದದ್ದೂ ಇಲ್ಲದಿದ್ದರೆ ಪೈರು ಮುಂತಾದದ್ದೂ ಆಗದೆ ಇರುವಂತೆ, ಹೇತುವಿಲ್ಲದಿದ್ದರೆ ಫಲವು ಹುಟ್ಟಲೇ ಆರದು.

(ಭಾಷ್ಯ)

೩೨೯. ಹೇತ್ವಭಾವೇ ಚಿತ್ತಂ ನೋತ್ಪದ್ಯತೇ ಇತಿ ಓ[1] ಉಕ್ತಮ್ । ಸಾ ಪುನರನುತ್ಪತ್ತಿಶ್ಚಿತ್ತಸ್ಯ ಕೀದೃಶೀತಿ ? ಉಚ್ಯತೇ-

(ಭಾಷ್ಯಾರ್ಥ)

ಹೇತುವೇ ಇಲ್ಲದಿದ್ದರೆ ಚಿತ್ತವು ಹುಟ್ಟುವದಿಲ್ಲ ಎಂದು ಹೇಳಲಾಯಿತಷ್ಟೆ. ಚಿತ್ತವು ಹುಟ್ಟುವದಿಲ್ಲ ಎಂಬು(ದಿದೆಯಲ್ಲ), ಅದು ಎಂಥದ್ದು ? ಎಂದರೆ ಹೇಳುತ್ತಾರೆ :-

ಅನಿಮಿತ್ತಸ್ಯ ಚಿತ್ತಸ್ಯ ಯಾಽನುತ್ಪತ್ತಿಃ ಸಮಾದ್ವಯಾ ।
ಅಜಾತಸ್ಯೈವ ಸರ್ವಸ್ಯ ಚಿತ್ತದೃಶ್ಯಂ ಹಿ ತದ್ಯತಃ ॥೨೨॥

೨೨. ಅನಿಮಿತ್ತವಾದ ಚಿತ್ತವು ಹುಟ್ಟುವದಿಲ್ಲವೆಂಬುದಿದೆಯಲ್ಲ, ಅದು ಅಜಾತವಾಗಿಯೇ ಎಲ್ಲವೂ ಆಗಿರುವ (ಚಿತ್ತದ) ಸಮವೂ ಅದ್ವಯವೂ ಆಗಿರುವ (ಅನುತ್ಪತ್ತಿಯು). ಏಕೆಂದರೆ ಅದು ಚಿತ್ತದೃಶ್ಯವೇ.

(ಭಾಷ್ಯ)

೩೩೦. ಪರಮಾರ್ಥದರ್ಶನೇನ ನಿರಸ್ತಧರ್ಮಾಧರ್ಮಾಖ್ಯೋತ್ಪತ್ತಿನಿಮಿತ್ತಸ್ಯ ಅನಿಮಿತ್ತಸ್ಯ ಚಿತ್ತಸ್ಯ ಇತಿ[2] (?) ಯಾ ಮೋಕ್ಷಾಖ್ಯಾ ಅನುತ್ಪತ್ತಿಃ ಸಾ ಸರ್ವದಾ ಸರ್ವಾವಸ್ಥಾಸು ಸಮಾ ನಿರ್ವಿಶೇಷಾ ಅದ್ವಯಾ ಚ । ಪೂರ್ವಮಪಿ ಅಜಾತಸ್ಯೈವ ಅನುತ್ಪನ್ನಸ್ಯ ಚಿತ್ತಸ್ಯ ಸರ್ವಸ್ಯ ಅದ್ವಯಸ್ಯ ಇತ್ಯರ್ಥಃ । ಯಸ್ಮಾತ್ ಪ್ರಾಗಪಿ ವಿಜ್ಞಾನಾತ್ ಚಿತ್ತದೃಶ್ಯಂ ತತ್ ದ್ವಯಂ ಜನ್ಮ ಚ ತಸ್ಮಾತ್ ಅಜಾತಸ್ಯ ಸರ್ವಸ್ಯ ಸರ್ವದಾ ಚಿತ್ತಸ್ಯ ಸಮಾ ಅದ್ವಯೈವ ಅನುತ್ಪತ್ತಿಃ । ನ ಪುನಃ ಕದಾಚಿತ್ ಭವತಿ ಕದಾಚಿತ್ ವಾ ನ ಭವತಿ । ಸರ್ವದಾ ಏಕರೂಪೈವ ಇತ್ಯರ್ಥಃ ॥

---

1. ಈ ಮಾತು ಇಲ್ಲದಿದ್ದರೂ ಸಾಗುತ್ತದೆ.
2. ಈ ಮಾತು ಇಲ್ಲಿ ಅವಶ್ಯವಾಗಿ ಕಾಣುವದಿಲ್ಲ.

(ಭಾಷ್ಯಾರ್ಥ)

ಪರಮಾರ್ಥದರ್ಶನವನ್ನು ಕಂಡುಕೊಂಡು ಧರ್ಮ, ಅಧರ್ಮ-ಎಂಬ ಉತ್ಪತ್ತಿ ನಿಮಿತ್ತವು[1] ಹೋಗಿಬಿಡುವ ಅನಿಮಿತ್ತವಾದ ಚಿತ್ತಕ್ಕೆ ಮೋಕ್ಷವೆಂಬ ಹುಟ್ಟಿಲ್ಲದಿರುವಿಕೆ (ಯಾಗುವದಲ್ಲ[2]), ಅದು ಯಾವಾಗಲೂ ಎಲ್ಲಾ ಅವಸ್ಥೆಗಳಲ್ಲಿಯೂ ಸಮವಾಗಿ ಯಾವ ವಿಶೇಷವೂ ಇಲ್ಲದ್ದಾಗಿ, ಅದ್ವಯವೂ ಆಗಿರುತ್ತದೆ[3]. (ಅದು) ಮೊದಲೂ ಅಜಾತವಾಗಿಯೇ ಹುಟ್ಟದೆ ಇರುವದಾಗಿ, ಎಲ್ಲವೂ ಆಗಿರುವ ಎಂದರೆ ತನಗೆರಡನೆಯ ದಿಲ್ಲದ ಚಿತ್ತದ್ದೇ ಎಂದರ್ಥ. ಏಕೆಂದರೆ ವಿಜ್ಞಾನ(ವುಂಟಾಗುವ)ದಕ್ಕೆ ಮೊದಲೂ ಅದು ಎಂದರೆ ದ್ವೈತವೂ ಜನ್ಮವೂ ಚಿತ್ತಕ್ಕೆ ಕಾಣುವದಾಗಿಯೇ[4] ಇರುವದು ; ಆದ್ದರಿಂದ ಯಾವಾಗಲೂ ಹುಟ್ಟದೆ ಎಲ್ಲವೂ ಆಗಿರುವ ಚಿತ್ತದ(ಈ) ಅನುತ್ಪತ್ತಿಯು (ಒಂದೇ) ಸಮವಾಗಿ ತನಗೆರಡನೆಯದಿಲ್ಲದ್ದಾಗಿಯೇ ಇರುವದೇ ಹೊರತು ಕೆಲವು ವೇಳೆ ಇರುತ್ತದೆ, ಕೆಲವುವೇಳೆ ಇರುವದಿಲ್ಲ-ಎಂಬುದಿಲ್ಲ[5]. ಯಾವಾಗಲೂ ಒಂದೇ ಬಗೆಯಾಗಿಯೇ (ಇರುತ್ತದೆ) ಎಂದರ್ಥ.

(ಭಾಷ್ಯ)

೩೩೧. ಯಥೋಕ್ತೇನ ನ್ಯಾಯೇನ ಜನ್ಮನಿಮಿತ್ತಸ್ಯ ದ್ವಯಸ್ಯ ಅಭಾವಾತ್-

(ಭಾಷ್ಯಾರ್ಥ)

ಮೇಲೆ ಹೇಳಿದ ಯುಕ್ತಿಯಿಂದ[6] ಜನ್ಮಕ್ಕೆ ಕಾರಣವಾದ ದ್ವೈತವು ಇಲ್ಲದಿರುವದರಿಂದ-

1. ಹುಟ್ಟುವದಕ್ಕೆ ಕರ್ಮವೇ ಕಾರಣವು. 2. ಕಾರಣವಾದ ಕರ್ಮವು ಹೋಗಿಬಿಡುವದರಿಂದ ಮೋಕ್ಷವಾಗುವದೆಂಬ ವ್ಯವಹಾರವಿದೆಯಲ್ಲ, ಅದು ಬರಿಯ ವ್ಯವಹಾರವು ಎಂದರ್ಥ. ಇಲ್ಲಿ ಚಿತ್ತ, ಅದರ ಅನುತ್ಪತ್ತಿ, ಮೋಕ್ಷ-ಎಂಬ ಮಾತುಗಳಿಗೆಲ್ಲ ಆತ್ಮನೆಂದೇ ಅರ್ಥ.

3. ಆತ್ಮರೂಪವಾದ ಚಿತ್ತವು ಹುಟ್ಟುವದಿಲ್ಲ ಎಂದು ತಿಳಿದ ಬಳಿಕ ಹುಟ್ಟದೆ ಇರುವ ಸ್ವಭಾವವುಂಟಾಗುತ್ತದೆ ಎಂಬ ವಿಶೇಷವನ್ನು ಕಲ್ಪಿಸಬಾರದು. ಅದು ಯಾವಾಗಲೂ ಅಜವೇ.

4. ಚಿತ್ತಕ್ಕೆ ಕಾಣುವದು ಚಿತ್ತಕ್ಕಿಂತ ಬೇರೆಯಲ್ಲ ; ಆದ್ದರಿಂದ ಆತ್ಮನಿಗಿಂತ ಬೇರೆಯಾಗಿ ಯಾವದೊಂದೂ ಹುಟ್ಟಿಯೇ ಇಲ್ಲ

5. ಹಗ್ಗವೆಂಬ ನಿಜವನ್ನು ಅರಿತರೆ ಕಲ್ಪಿತವಾದ ಹಾವು ಹೋಗಿಬಿಡುತ್ತದೆ, ಮತ್ತೆ ಅಲ್ಲಿ ಹುಟ್ಟಿಕೊಳ್ಳುವದಿಲ್ಲ- ಎಂಬ ವ್ಯವಹಾರದಂತೆ ಇದನ್ನು ಅರಿಯಬೇಕು. ಹಗ್ಗದಲ್ಲಿ ಯಾವಾಗಲೂ ಹಾವು ಇರುವದಿಲ್ಲ , ಇದು ಜ್ಞಾನದಿಂದ ಗೊತ್ತಾಗುತ್ತದೆ. ಇದರಂತೆ ಆತ್ಮನು ಯಾವಾಗಲೂ ಅಜನೆಂಬುದು ಜ್ಞಾನದಿಂದ ಗೊತ್ತಾಗುತ್ತವೆ. ಜ್ಞಾನದಿಂದ ಆತ್ಮನು ಹೊಸದಾಗಿ ಅಜನಾಗುವದಿಲ್ಲ.

6. ಚಿತ್ತದೃಶ್ಯವಾಗಿರುವದರಿಂದ ಯಾವ ಚೈತನ್ಯವೂ ಇಲ್ಲವೆಂಬ ಯುಕ್ತಿಯಿಂದ.

ಬುದ್ಧ್ವಾऽನಿಮಿತ್ತತಾಂ ಸತ್ಯಾಂ ಹೇತುಂ ಪೃಥಗನಾಪ್ನುವನ್
ವೀತಶೋಕಂ ತಥಾऽಕಾಮಮಭಯಂ ಪದಮಶ್ನುತೇ ॥೭೮॥

೭೮. ನಿಮಿತ್ತವಿಲ್ಲವೆಂಬುದನ್ನು ಸತ್ಯವೆಂದು ಅರಿತುಕೊಂಡು ಹೇತುವನ್ನು ಬೇರೆಯಾಗಿ ಪಡೆಯದವನು ಶೋಕವಿಲ್ಲದ ಮತ್ತು ಕಾಮವಿಲ್ಲದ ಭಯವಿಲ್ಲದ ಪದವನ್ನು ಹೊಂದುತ್ತಾನೆ.

(ಭಾಷ್ಯ)

೩೩೨. ಅನಿಮಿತ್ತತಾಂ ಚ ಸತ್ಯಾಂ ಪರಮಾರ್ಥರೂಪಾಂ ಬುದ್ಧ್ವಾ ಹೇತುಂ ಧರ್ಮಾದಿಕಾರಣಂ ದೇವಾದಿಯೋನಿಪ್ರಾಪ್ತಯೇ ಪೃಥಗನಾಪ್ನುವನ್ ಅನುಪಾದದಾನಃ ತ್ಯಕ್ತಬಾಹ್ಯೈಷಣಃ ಸನ್ ಕಾಮಶೋಕಾದಿವರ್ಜಿತಮ್ ಅವಿದ್ಯಾದಿರಹಿತಮ್ ಅಭಯಂ ಪದಮ್ ಅಶ್ನುತೇ ಪುನರ್ನ ಜಾಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ನಿಮಿತ್ತವಿಲ್ಲವೆಂಬುದನ್ನೇ ಸತ್ಯವೆಂದು ಪರಮಾರ್ಥವೆಂದು ಅರಿತುಕೊಂಡದ್ದರಿಂದ ದೇವಾದಿಜನ್ಮವನ್ನು ಪಡೆಯುವದಕ್ಕೆ ಕಾರಣವಾಗಿರುವ[1] ಧರ್ಮಾದಿಗಳೆಂಬ ಹೇತುವನ್ನು ಬೇರೆಯಾಗಿ ಪಡೆಯದೆ ಇರುವಾತನು ಸ್ವೀಕರಿಸದೆ ಇರುವಾತನು, ಹೊರಗಿನ ಏಷಣೆಗಳನ್ನು ಬಿಟ್ಟು ಕಾಮ, ಶೋಕ-ಮುಂತಾದವುಗಳಿಲ್ಲದ ಅಭಯವಾದ ಅವಿದ್ಯಾದಿಗಳಿಲ್ಲದ[2] ಪದವನ್ನು ಹೊಂದುತ್ತಾನೆ, ಮತ್ತೆ ಹುಟ್ಟುವದಿಲ್ಲ ಎಂದರ್ಥ.

ಅಭೂತಾಭಿನಿವೇಶಾದ್ಧಿ ಸದೃಶೇ ತತ್ಪ್ರವರ್ತತೇ ।
ವಸ್ತ್ವಭಾವಂ ಸ ಬುದ್ಧ್ವೈವ ನಿಸ್ಸಙ್ಗಂ ವಿನಿವರ್ತತೇ ॥೭೯॥

೭೯. ಅಭೂತಾಭಿನಿವೇಶದಿಂದಲೇ (ಅದಕ್ಕೆ) ಸದೃಶವಾದದ್ದರಲ್ಲಿ ಅದು ತೊಡಗುತ್ತದೆ. ವಸ್ತುವಿಲ್ಲವೆಂದು ಅವನು ಅರಿತುಕೊಂಡರೇ ಸಂಗವಿಲ್ಲದೆ ಹಿಂತಿರುಗುವನು.

1. ನಿಮಿತ್ತವು ಪರಮಾರ್ಥವಾಗಿಲ್ಲ. ಧರ್ಮಾಧರ್ಮಗಳೇ ಇಲ್ಲ ; ಆದ್ದರಿಂದ ದೇವತೆಯ ಜನ್ಮವೇ ಮುಂತಾದ ಉತ್ತಮಮಧ್ಯಮನೀಚಯೋನಿಗಳಿಗೆ ಕಾರಣವಾದ ಸಾಧನವೂ ಆತ್ಮನಿಗಿಂತ ವ್ಯತಿರಿಕ್ತವಾಗಿಲ್ಲ, ಎಲ್ಲವೂ ಆತ್ಮನೇ-ಎಂದು ತಿಳಿದುಕೊಂಡಿರುವಾತನು ಯಾವ ಕರ್ಮಕ್ಕೂ ಕೈಹಾಕುವದಿಲ್ಲ ಎಂದರ್ಥ.

2. ದ್ವೈತವನ್ನು ಸತ್ಯವೆಂದು ಬಗೆಯುವ ಅವಿದ್ಯೆಯೇ ಭಯಕ್ಕೆ ಕಾರಣವಾಗಿರುವದರಿಂದ ಅವಿದ್ಯೆಯನ್ನೇ ಇಲ್ಲಿ ಭಯವೆಂದು ಕರೆದಿದೆ-ಎಂದು ಭಾವ

(ಭಾಷ್ಯ)

೩೩೩. ಯಸ್ಮಾತ್ ಅಭೂತಾಭಿನಿವೇಶಾತ್ । ಅಸತಿ ದ್ವಯೇ ದ್ವಯಾಸ್ತಿತ್ವ ನಿಶ್ಚಯಃ ಅಭೂತಾಭಿನಿವೇಶಃ, ತಸ್ಮಾತ್ ಅವಿದ್ಯಾವ್ಯಾಮೋಹರೂಪಾತ್ ಹಿ ಸದೃಶೇ ತದನುರೂಪೇ ತತ್ ಚಿತ್ತಂ ಪ್ರವರ್ತತೇ । ತಸ್ಯ ದ್ವಯಸ್ಯ ವಸ್ತುನಃ ಅಭಾವಂ ಯದಾ ಬುದ್ಧವಾನ್ ತದಾ ತಸ್ಮಾತ್ ನಿಸ್ಸಙ್ಗಂ ನಿರಪೇಕ್ಷಂ ಸತ್ ವಿನಿವರ್ತತೇ ಅಭೂತಾಭಿನಿವೇಶವಿಷಯಾತ್ ॥

(ಭಾಷ್ಯಾರ್ಥ)

ಏಕೆಂದರೆ ಅಭೂತಾನಿಭಿವೇಶದಿಂದ-ಇಲ್ಲದೆ ಇರುವ ದ್ವೈತದಲ್ಲಿ (ದ್ವೈತವು) ಇದೆ ಎಂಬ ನಿಶ್ಚಯವೇ ಅಭೂತಾಭಿನಿವೇಶವು. ಅವಿದ್ಯೆಯಿಂದಾದ ವ್ಯಾಮೋಹರೂಪವಾದ (ಅಭಿಮಾನದಿಂದ ಅದಕ್ಕೆ) ಸದೃಶವಾದದ್ದರಲ್ಲಿ ಅದರಂತಿರುವ[1] (ಮತ್ತೊಂದು ವಸ್ತುವಿನಲ್ಲಿ) ಆ ಚಿತ್ತವು ತೊಡಗುತ್ತದೆ. ಆ ದ್ವೈತವೆಂಬ ವಸ್ತು (ನಿಜವಾಗಿ) ಇಲ್ಲವೆಂದು ಯಾವಾಗ ಅರಿತುಕೊಳ್ಳುವನೋ ಆಗ (ಅದು) ಸಂಗವಿಲ್ಲದೆ (ಅದರ) ಅಪೇಕ್ಷೆಯಿಲ್ಲದ್ದಾಗಿ, ಇಲ್ಲದ್ದನ್ನು ಇದೆಯೆಂದು ತಿಳಿಯುವ ಅಭಿಮಾನಕ್ಕೆ ವಿಷಯವಾದ ಆ (ಪದಾರ್ಥ)ದಿಂದ ಹಿಂತಿರುಗುವನು[2].

ನಿವೃತ್ತಸ್ಯಾಪ್ರವೃತ್ತಸ್ಯ ನಿಶ್ಚಲಾ ಹಿ ತದಾ ಸ್ಥಿತಿಃ ।
ವಿಷಯಃ ಸ ಹಿ ಬುದ್ಧಾನಾಂ ತತ್ ಸಾಮ್ಯಮಜಮದ್ವಯಮ್ ॥೮೦॥

೮೦. ಹಿಂತಿರುಗಿ (ಮತ್ತೆ) ಮುಂದುವರಿಯದೆ ಇರುವ (ಚಿತ್ತದ) ಆಗಿನ ಸ್ಥಿತಿಯು ನಿಶ್ಚಲವಾಗಿಯೇ ಇರುವದು. ಅದು ಜ್ಞಾನಿಗಳಿಗೆ ವಿಷಯವಾಗಿರುವದು ; ಅದು ಸಾಮ್ಯವು, ಹುಟ್ಟಿಲ್ಲದ್ದು, ಎರಡನೆಯದಿಲ್ಲದ್ದು.

(ಭಾಷ್ಯ)

೩೩೪. ನಿವೃತ್ತಸ್ಯ ದ್ವೈತವಿಷಯಾತ್, ವಿಷಯಾನ್ತರೇ ಚ ಅಪ್ರವೃತ್ತಸ್ಯ

1. ಹಿಂದೆ ತಾನು ಅನುಭವಿಸಿದ ವಸ್ತುವಿನಂತಿರುವ ಮತ್ತೊಂದು ವಸ್ತುವಿನಲ್ಲಿ ಎಂದರ್ಥ. ಹಿಟ್ಟಿನ ಹಾಲಿನಲ್ಲಿ ಹಾಲು ಎಂಬ ಬುದ್ಧಿಯುಂಟಾಗಿದ್ದ ಉಪಮನ್ಯು ಮತ್ತೆ ಹಿಟ್ಟಿನ ರಸವನ್ನೇ ಹಸುವಿನ ಹಾಲೆಂದು ನಂಬಿ ಕುಡಿಯುವದಕ್ಕೆ ಪ್ರವರ್ತಿಸುತ್ತಿದ್ದದ್ದನ್ನು ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು.

2. ಪ್ರವೃತ್ತಿಗೆ ದ್ವೈತಸತ್ಯತ್ವಬುದ್ಧಿಯೂ ಆ ಬುದ್ಧಿಗೆ ಅವಿದ್ಯೆಯೂ ಕಾರಣವು ; ಆದ್ದರಿಂದ ಅವಿದ್ಯೆಯ ನಾಶವುಂಟಾದರೆ ಪ್ರವೃತ್ತಿಯುಂಟಾಗಲಾರದು.

ಅಭಾವದರ್ಶನೇನ, ಚಿತ್ತಸ್ಯ ನಿಶ್ಚಲಾ ಚಲನವರ್ಜಿತಾ ಬ್ರಹ್ಮಸ್ವರೂಪೈವ ತಥಾ ಸ್ಥಿತಿಃ । ಯೈಷಾ ಬ್ರಹ್ಮಸ್ವರೂಪಾ ಸ್ಥಿತಿಃ ಚಿತ್ತಸ್ಯ ಅದ್ವಯವಿಜ್ಞಾನೈಕರಸಘನಲಕ್ಷಣಾ । ಸ ಹಿ ಯಸ್ಮಾತ್ ವಿಷಯಃ ಗೋಚರಃ ಪರಮಾರ್ಥದರ್ಶಿನಾಂ ಬುದ್ಧಾನಾಮ್ । ತಸ್ಮಾತ್ ತತ್ ಸಾಮ್ಯಂ ಪರಂ ನಿರ್ವಿಶೇಷಮ್, ಅಜಮ್, ಅದ್ವಯಂ ಚ ।।

(ಭಾಷ್ಯಾರ್ಥ)

ದ್ವೈತವಿಷಯವನ್ನು ಬಿಟ್ಟು ಹಿಂತಿರುಗಿ (ದ್ವೈತ)ವಿಲ್ಲವೆಂದು ಕಂಡುಕೊಂಡದ್ದರಿಂದ ಮತ್ತೊಂದು ವಿಷಯದಲ್ಲಿಯೂ ಪ್ರವರ್ತಿಸದೆ ಇರುವ ಚಿತ್ತದ ಆಗಿನ ಸ್ಥಿತಿಯು[1] ನಿಶ್ಚಲವಾದ ಅಲುಗಾಟವಿಲ್ಲದ ಬ್ರಹ್ಮದ ಸ್ವರೂಪವೇ ಆಗಿರುವದು.

ಚಿತ್ತವು ತನಗೆರಡನೆಯದಿಲ್ಲದ ವಿಜ್ಞಾನವೆಂಬ ಒಂದೇ ರಸದ ಗಟ್ಟಿಯ ರೂಪವಾಗಿರುವ ಈ ಬ್ರಹ್ಮಸ್ವರೂಪವಾಗಿರುವದೆಂಬ ಈ ಸ್ಥಿತಿಯುಂಟಲ್ಲ, ಅದು ಪರಮಾರ್ಥವನ್ನು ಕಂಡುಕೊಂಡಿರುವ ಬುದ್ಧರಿಗೆ (ಮಾತ್ರ) ವಿಷಯವಾಗಿರುವದು, ಗೋಚರವಾಗಿರುವದು., ಅಲ್ಲವೆ ? (ಹಿ=ಯಸ್ಮಾತ್) ಆದ್ದರಿಂದ ಅದು ಹೆಚ್ಚಿನ ಸಾಮ್ಯವು ; ಯಾವ ವಿಶೇಷವೂ ಇಲ್ಲದ್ದು[2] ; ಹುಟ್ಟಿಲ್ಲದ್ದೂ, ಎರಡನೆಯದಿಲ್ಲದ್ದೂ ಆಗಿರುವದು.

(ಭಾಷ್ಯ)

೩೩೫. ಪುನರಪಿ ಕೀದೃಶಶ್ಚ ಅಸೌ ಬುದ್ಧಾನಾಂ ವಿಷಯಃ ಇತಿ ಆಹ-

(ಭಾಷ್ಯಾರ್ಥ)

ಜ್ಞಾನಿಗಳಿಗೆ ಮಾತ್ರ ಗೋಚರವಾಗುವ ಈ (ತತ್ತ್ವವು) ಮತ್ತು ಎಂಥದ್ದು[3] ? ಎಂದರೆ ಹೇಳುತ್ತಾರೆ :-

ಅಜಮನಿದ್ರಮಸ್ವಪ್ನಂ ಪ್ರಭಾತಂ ಭವತಿ ಸ್ವಯಮ್ ।
ಸಕೃದ್ವಿಭಾತೋ ಹ್ಯೇವೈಷ ಧರ್ಮೋ ಧಾತುಸ್ವಭಾವತಃ ।।೮೧।।

೮೧. ಹುಟ್ಟಿಲ್ಲದ್ದು, ನಿದ್ರೆಯಿಲ್ಲದ್ದು, ಕನಸಿಲ್ಲದ್ದು, ತಾನೇ ಬೆಳಗು

---

1. ಅದ್ವೈತವ್ರಕರಣದ ೪೬ ನೆಯ ಕಾರಿಕೆಯಲ್ಲಿ ಹೇಳಿದ ಧ್ಯಾನದಿಂದ ಪಡೆಯುವ ಸ್ಥಿತಿಯನ್ನು ಹೇಳಿದೆ ; ಇಲ್ಲಿ ಜ್ಞಾನದಿಂದ ಅರಿತುಕೊಳ್ಳುವ ನಿತ್ಯಸ್ವರೂಪವನ್ನೇ ಸ್ಥಿತಿಯೆಂದು ಕರೆದಿದೆ. ಅದ್ವೈತಪ್ರಕರಣದ ೩೫ ರಿಂದ ೬೯ರ ವರೆಗಿನ ಕಾರಿಕೆಗಳಲ್ಲಿ ಹೇಳಿರುವ ಸ್ಥಿತಿಯೂ ಇದೇ.

2. ಇಂಥದ್ದು ಅಂಥದ್ದು ಎಂದು ಹೇಳುವದಕ್ಕೆ ಆಗದ್ದು.

3. ಹಿಂದೆ ಹೇಳಿದ "ವಿಷಯಃ ಸ ಬುದ್ಧಾನಾಂ" ಎಂಬುದಕ್ಕೇ ಈ ಶ್ಲೋಕದಲ್ಲಿ ಬೇರೆಯ ವಿಶೇಷಣವನ್ನು ಹೇಳಿದೆ. ಎರಡೂ ಸೇರಿ ಒಂದೇ ವಾಕ್ಯ ಎಂದು ಭಾವ.

ವಂಥದ್ದಾಗಿರುತ್ತದೆ. ಈ ಧರ್ಮವು ಧಾತುಸ್ವಭಾವದಿಂದಲೇ ಒಂದೇ ಸಮನೆ ಬೆಳಗುವಂಥದ್ದು.

(ಭಾಷ್ಯ)

೩೩೭. ಸ್ವಯಮೇವ ತತ್ ಪ್ರಭಾತಂ ಭವತಿ, ನಾದಿತ್ಯಾದ್ಯಪೇಕ್ಷಮ್ ಸ್ವಯಂ ಜ್ಯೋತಿಃಸ್ವಭಾವಮಿತ್ಯರ್ಥಃ । ಸಕೃದ್ವಿಭಾತಃ ಸದೈವ ವಿಭಾತಃ ಇತ್ಯೇತತ್ । ಏಷ ಏವಂಲಕ್ಷಣಃ ಆತ್ಮಾಖ್ಯೋ ಧರ್ಮಃ ಧಾತುಸ್ವಭಾವತಃ ವಸ್ತುಸ್ವಭಾವತಃ ಇತ್ಯರ್ಥಃ ॥

(ಭಾಷ್ಯಾರ್ಥ)

ಅದು ತಾನೇ ಬೆಳಗುವಂಥದ್ದು, ಆಗಿರುತ್ತದೆ[1], ಆದಿತ್ಯನೇ ಮುಂತಾದ(ಬೆಳಕನ್ನು) ಬಯಸುವದಿಲ್ಲ[2] ಸ್ವಯಂಪ್ರಕಾಶವಾದ ಸ್ವಭಾವವುಳ್ಳದ್ದು ಎಂದರ್ಥ. ಒಂದೇ ಸಮನೆ ಬೆಳಗುವಂಥದ್ದು, ಯಾವಾಗಲೂ ಬೆಳಗುತ್ತಿರುವಂಥದ್ದು ಎಂದರ್ಥ[3]. ಈ (ಮೇಲೆ ಹೇಳಿದ) ರೂಪದ ಆತ್ಮನೆಂಬ ಧರ್ಮವು[4] ಧಾತುಸ್ವಭಾವದಿಂದಲೇ ವಸ್ತುಸ್ವಭಾವದಿಂದಲೇ (ಸ್ವಯಂಪ್ರಕಾಶವಾಗಿ ನಿತ್ಯಪ್ರಕಾಶಸ್ವರೂಪವಾಗಿರುತ್ತದೆ) ಎಂದರ್ಥ.

(ಭಾಷ್ಯ)

೩೩೮. ಏವಂ ಬಹುಶಃ[5] ಉಚ್ಯಮಾನಮಪಿ ಪರಮಾರ್ಥತತ್ತ್ವಂ ಕಸ್ಮಾತ್ ಲೌಕಿಕೈರ್ನ ಗೃಹ್ಯತೇ ? ಇತಿ ಉಚ್ಯತೇ :-

(ಭಾಷ್ಯಾರ್ಥ)

ಹೀಗೆ ಬಹುಪ್ರಕಾರಗಳಿಂದ ಹೇಳಿದರೂ (ಈ) ಪರಮಾರ್ಥತತ್ತ್ವವನ್ನು ಲೋಕದ(ಜನರು) ಏತಕ್ಕೆ ಅರಿತುಕೊಳ್ಳದೆ ಇರುವರು ? ಎಂದರೆ ಹೇಳುತ್ತಾರೆ :-

---

1 "ಅಜಮನಿದ್ರಮಸ್ವಪ್ನಂ" ಎಂಬುದರ ಭಾಷ್ಯವು ಲೇಖಕರ ತಪ್ಪಿನಿಂದ ಕೈಬಿಟ್ಟು ಹೋಗಿದೆಯೋ, ೧-೧೩, ೩-೩೬ರಲ್ಲಿ ವ್ಯಾಖ್ಯಾನವಾಗಿದೆಯೆಂದು ಭಾಷ್ಯಕಾರರು ಬೇಕೆಂತ ಬಿಟ್ಟಿದಾರೋ ತಿಳಿಯದು

2 ಕ ೨-೨-೧೫, ಮುಂ, ೨-೨-೧೦ ಇವುಗಳ ಸೂಚನೆ ; ಆತ್ಮನು ಜ್ಞಾನದಿಂದ ತಿಳಿಯಬರುವನು ಎನ್ನುವದೂ ಉಪಚಾರವೇ, ಏಕೆಂದರೆ ಅವನು ಮತ್ತೊಂದನ್ನು ಬಯಸಿ ಬೆಳಗುವವನಲ್ಲ

3 ಒಂದು ಕಾಲದಲ್ಲಿ ಬೆಳಗದೆ ಮತ್ತೊಂದು ಕಾಲದಲ್ಲಿ ಬೆಳಗುವಂತಿದ್ದರೆ ಜ್ಞಾನವು ಬಂದ ಮೇಲೆ ಬೆಳಗುತ್ತಾನೆ ಎನ್ನಬಹುದಾಗಿತ್ತು ಎಂದು ಭಾವ.

4 ಧರ್ಮವು ಎಂದರೆ ತತ್ತ್ವವು

5 ಮಾ।। ದಲ್ಲಿ ಮಾತ್ರ ಈ ಮಾತು ಇದೆ.

ಸುಖಮಾವ್ರಿಯತೇ ನಿತ್ಯಂ ದುಃಖಂ ವಿವ್ರಿಯತೇ ಸದಾ ।
ಯಸ್ಯ ಕಸ್ಯ ಚ ಧರ್ಮಸ್ಯ ಗ್ರಹೇಣ ಭಗವಾನಸೌ ॥೮೨॥

೮೨. ಯಾವದಾದರೊಂದು ಧರ್ಮವನ್ನು ಗ್ರಹಿಸುವದರಿಂದ ಈ ಭಗವಂತನು ಯಾವಾಗಲೂ ಸುಲಭವಾಗಿ ಮುಚ್ಚಲ್ಪಡುತ್ತಾನೆ. ಯಾವಾಗಲೂ ಕಷ್ಟದಿಂದ ತೋರಿಕೊಳ್ಳುತ್ತಾನೆ.

(ಭಾಷ್ಯ)

೩೩೮. ಯಸ್ಮಾತ್ ಯಸ್ಯ ಕಸ್ಯಚಿತ್ ದ್ವ್ಯವಸ್ತುನಃ ಧರ್ಮಸ್ಯ ಗ್ರಹೇಣ ಗ್ರಹಣಾವೇಶೇನ ವಿಥ್ಯಾಭಿನಿವಿಷ್ಟತಯಾ ಸುಖಮ್ ಆವ್ರಿಯತೇ ಅನಾಯಾಸೇನ ಆಚ್ಛಾದ್ಯತೇ ಇತ್ಯರ್ಥಃ । ದ್ವ್ಯಯೋಪಲಬ್ಧಿನಿಮಿತ್ತಂ ಹಿ ತತ್ರ ಆವರಣಂ ನ ಯತ್ನಾಂತರಮ್ ಅಪೇಕ್ಷತೇ । ದುಃಖಂ ಚ ವಿವ್ರಿಯತೇ ಪ್ರಕಟೀಕ್ರಿಯತೇ । ಪರಮಾರ್ಥಜ್ಞಾನಸ್ಯ ದುರ್ಲಭತ್ವಾತ್ । ಭಗವಾನ್ ಅಸೌ । ಆತ್ಮಾ ಅದ್ವಯೋ ದೇವ ಇತ್ಯರ್ಥಃ । ಅತಃ ವೇದಾನ್ತೈಃ ಆಚಾರ್ಯೈಶ್ಚ ಬಹುಶಃ ಉಚ್ಯಮಾನೋಪಿ ನೈವ ಜ್ಞಾತುಂ ಶಕ್ಯಃ ಇತ್ಯರ್ಥಃ । "ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ" (ಕ. ೧-೨-೭) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಏಕೆಂದರೆ ಯಾವದಾದರೊಂದು ದ್ವ್ಯತವಸ್ತುವೆಂಬ ಧರ್ಮವನ್ನು[1] ಗ್ರಹಿಸುವದರಿಂದ ಅರಿಯುತ್ತೇನೆಂಬ ಭಾವನೆಯಿಂದ ಸುಳ್ಳಾಗಿ ಅಭಿಮಾನವಿಟ್ಟುಬಿಟ್ಟಿರುವದರಿಂದ[2] ಸುಲಭವಾಗಿ[3] ಮುಚ್ಚಲ್ಪಡುವನು, ಯಾವ ಆಯಾಸವೂ ಇಲ್ಲದೆ ಮುಚ್ಚಿಹೋಗುತ್ತಾನೆ ಎಂದರ್ಥ. ದ್ವ್ಯತವನ್ನು ಕಾಣುವದೆಂಬ ನಿಮಿತ್ತದಿಂದಲೇ ಅಲ್ಲಿ ಮುಸುಕು (ಉಂಟಾಗುವದೇ ಹೊರತು) ಅದಕ್ಕೆ ಮತ್ತೆ ಯಾವ ಬೇರೆಯ ಪ್ರಯತ್ನವೂ ಬೇಕಿರುವದಿಲ್ಲ[4]. ಮತ್ತು ಕಷ್ಟದಿಂದ ತೋರಿಕೊಳ್ಳುತ್ತಾನೆ, ಪ್ರಕಟವಾಗುತ್ತಾನೆ ; ಏಕೆಂದರೆ ಪರಮಾರ್ಥದ ಅರಿವು ದುರ್ಲಭವಾಗಿರುತ್ತದೆ.

1. ಪದಾರ್ಥವನ್ನು. 2. ನಾವು ಅನಾತ್ಮವನ್ನು ಕಾಣುತ್ತಿದೇವೆಂದು ನಿಶ್ಚಯಿಸಿರುವಾಗಲೂ ಅದು ತಪ್ಪುತಿಳಿ ವಳಿಕೆಯೇ ಹೊರತು ಆ ಪದಾರ್ಥವು ನಿಜವಾಗಿರುವದಿಲ್ಲ.

3. ಕಾರಿಕೆಯಲ್ಲಿ "ಸುಖಂ" ಎಂಬ ಮಾತು ಕ್ರಿಯಾವಿಶೇಷಣವೇ ಹೊರತು ನಾಮಪದವಲ್ಲ.

4. ದ್ವ್ಯತವಿದೆಯೆಂಬ ಮಿಥ್ಯಾಭಿಮಾನವೇ ಆತ್ಮದರ್ಶನಕ್ಕೆ ಅಡ್ಡಿ ; ಆದ್ದರಿಂದ ಅಭಿಮಾನವು ತೊಲಗಿದರೆ ಸಾಕ್ಷಾತ್ಕಾರವಾದಂತೆಯೇ ಎಂದು ಭಾವ. ಮೂಲಾವಿದ್ಯೆಯೆಂಬ ಒಂದು ಆವರಣವು ಆತ್ಮವನ್ನು ಮುಸುಕಿರುವದೆಂದು ಹೇಳುವ ವ್ಯಾಖ್ಯಾನಕಾರರ ಪ್ರಸ್ಥಾನವು ಆಚಾರ್ಯರಿಗೆ ಸಮ್ಮತವಲ್ಲ.

ಈ ಭಗವಂತನು ಆತ್ಮನು ಅಪ್ರತೀಯನಾದ ದೇವನು (ಸುಖವಾಗಿ ಮರೆಯಾಗುತ್ತಾನೆ, ಕಷ್ಟದಿಂದ ಪ್ರಕಟವಾಗುತ್ತಾನೆ) ಎಂದರ್ಥ. ಆದ್ದರಿಂದ ಉಪನಿಷತ್ತುಗಳೂ ಆಚಾರ್ಯರೂ ಬಹುವಾಗಿ ಹೇಳಿದರೂ ಅರಿಯುವದಕ್ಕೆ ಆಗುವಂತಿಲ್ಲ ಎಂದರ್ಥ. "ಹೇಳುವಾತನು ಆಶ್ಚರ್ಯರೂಪನು, ಇವನನ್ನು ಪಡೆದುಕೊಳ್ಳುವಾತನು ಜಾಣನು" (ಕ. ೧-೨-೭) ಎಂಬ ಶ್ರುತಿಯು ಇದಕ್ಕೆ ಪ್ರಮಾಣ.

(ಭಾಷ್ಯ)

೩೩೯. ಅಸ್ತಿನಾಸ್ತೀತ್ಯಾದಿಸೂಕ್ಷ್ಮವಿಷಯಾ ಅಪಿ ಪಣ್ಡಿತಾನಾಂ ಗ್ರಹಾಃ ಭಗವತಃ ಪರಮಾತ್ಮನಃ ಆವರಣಾ ಏವ, ಕಿಮುತ ಮೂಢಜನಾನಾಂ ಬುದ್ಧಿಲಕ್ಷಣಾಃ ಇತ್ಯೇವ ಮರ್ಥಂ ಪ್ರದರ್ಶಯನ್ ಆಹ-

(ಭಾಷ್ಯಾರ್ಥ)

ಇದಾನೆ, ಇಲ್ಲ-ಮುಂತಾದ ಸೂಕ್ಷ್ಮವಿಷಯವಾದ ಪಂಡಿತರ ತಿಳಿವುಗಳು ಕೂಡ ಭಗವಂತನಾದ ಪರಮಾತ್ಮನಿಗೆ ಮುಸುಕೇ ಆಗಿರುವವು[1]. (ಹೀಗಿರುವಲ್ಲಿ) ಮೂಢಜನರ ಬುದ್ಧಿಯೆಂಬಿವು (ಮುಸುಕು ಎಂದು ಹೇಳುವ)ದೇನು ?-ಎಂಬೀ ವಿಷಯವನ್ನು ತಿಳಿಸುವದಕ್ಕಾಗಿ (ಹೀಗೆಂದು) ಹೇಳುತ್ತಾರೆ :-

ಅಸ್ತಿ ನಾಸ್ತ್ಯಸ್ತಿನಾಸ್ತೀತಿ ನಾಸ್ತಿನಾಸ್ತೀತಿ ವಾ ಪುನಃ ।
ಚಲಸ್ಥಿರೋಭಯಾಭಾವೈರಾವೃಣೋತ್ಯೇವ ಬಾಲಿಶಃ ॥೬೩॥

೬೩. ಇದಾನೆ, ಇಲ್ಲ, ಇದ್ದೂ ಇಲ್ಲ ಎಂದೋ, ಇಲ್ಲವೇ ಇಲ್ಲ ಎಂದೋ, ಚಲ, ಸ್ಥಿರ, ಉಭಯ, ಅಭಾವ-(ಇವು)ಗಳಿಂದ ಬಾಲಿಶನು ಮುಚ್ಚುತ್ತಲೇ ಇರುವನು.

(ಭಾಷ್ಯ)

೩೪೦. ಅಸ್ತಿ ಆತ್ಮಾ ಇತಿ ವಾದೀ ಕಶ್ಚಿತ್ ಪ್ರತಿಪದ್ಯತೇ । ನಾಸ್ತಿ ಇತಿ ಅಪರಃ ವೈನಾಶಿಕಃ । ಅಸ್ತಿನಾಸ್ತಿ ಇತಿ ಅಪರಃ ಅರ್ಧವೈನಾಶಿಕಃ ಸದಸದ್ವಾದೀ ದಿಗ್ವಾಸಾಃ । ನಾಸ್ತಿ ನಾಸ್ತಿ ಇತಿ ಅತ್ಯನ್ತಶೂನ್ಯವಾದೀ । ತತ್ರ ಅಸ್ತಿಭಾವಃ ಚಲಃ । ಘಟಾದ್ಯನಿತ್ಯಲಕ್ಷಣ[2]

1. ಬುದ್ಧಿಗೆ ವಿಷಯವಾಗುವದೆಲ್ಲವೂ ದೃಶ್ಯವೇ, ಅದೃಶ್ಯರೂಪವಾದ ಪರಮಾರ್ಥಕ್ಕೆ ಆವರಣವೇ.

2. 'ಘಟಾದ್ಯನಿತ್ಯವಿಲಕ್ಷಣತ್ವಾತ್' ಎಂಬ ಅಚ್ಯುತ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ತ್ವಾತ್ । ನಾಸ್ತಿಭಾವಃ ಸ್ಥಿರಃ । ಸದಾ ಅವಿಶೇಷತ್ವಾತ್ । ಉಭಯಂ ಚಲಸ್ಥಿರವಿಷಯ ತ್ವಾತ್ ಸದಸದ್ಭಾವಃ । ಅಭಾವಃ ಅತ್ಯನ್ತಾಭಾವಃ । ಪ್ರಕಾರಚತುಷ್ಟಯಸ್ಯಾಪಿ (ಭಗವದಾ ವರಣತ್ವಮ್ ಆಹ-[1]) ತೈಃ ಏತೈಃ ಚಲಸ್ಥಿರೋಭಯಾಭಾವೈಃ ಸದಸದಾದಿವಾದೀ ಸರ್ವೋಽಪಿ ಭಗವನ್ತಮ್ ಆವೃಣೋತ್ಯೇವ, ಬಾಲಿಶಃ ಅವಿವೇಕೀ । ಯದ್ಯಪಿ ಪಣ್ಡಿತಃ ಬಾಲಿಶ ಏವ । ಪರಮಾರ್ಥತತ್ತ್ವಾನವಬೋಧಾತ್ । ಕಿಮು ಸ್ವಭಾವಮೂಢೋ ಜನಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಆತ್ಮನು ಇದಾನೆ ಎಂದು ಒಬ್ಬ ವಾದಿಯು[2] ತಿಳಿದುಕೊಂಡಿದಾನೆ. ಮತ್ತೊಬ್ಬನು, ವೈನಾಶಿಕನು[3], ಇಲ್ಲ ಎಂದು (ತಿಳಿದುಕೊಂಡಿರುತ್ತಾನೆ). ಇದ್ದೂ ಇಲ್ಲ ಎಂದು ಇನ್ನೊಬ್ಬನು, ಅಧಡವೈನಾಶಿಕನಾದ ಸದಸದ್ವಾದಿಯಾದ ದಿಗಂಬರನು (ತಿಳಿದು ಕೊಂಡಿರುತ್ತಾನೆ). ಇಲವೇ ಇಲ್ಲ ಎಂದು ಅತ್ಯಂತಶೂನ್ಯವಾದಿಯು (ತಿಳಿದು ಕೊಂಡಿರುತ್ತಾನೆ).

ಇವುಗಳಲ್ಲಿ ಇದೆಯೆಂಬ ಭಾವವು ಚಲವು. ಏಕೆಂದರೆ (ಅದು) ಗಡಿಗೆ ಮುಂತಾದ ಅನಿತ್ಯ (ಪದಾರ್ಥಗಳಿಗೆ) ಲಕ್ಷಣವಾಗಿರುತ್ತದೆ[4]. ಇಲ್ಲವೆಂಬುದು ಸ್ಥಿರ(ವಾಗಿರುತ್ತದೆ) ; ಏಕೆಂದರೆ ಅದು ಯಾವಾಗಲೂ ಒಂದೇ ರೂಪವಾಗಿರುತ್ತದೆ[5]. ಇದ್ದೂ ಇಲ್ಲವೆಂಬುದು ಚಲ, ಸ್ಥಿರ ಈ ಎರಡರ ವಿಷಯವಾಗಿರುವದರಿಂದ ಉಭಯವು[6]. ಅಭಾವವೆಂದರೆ

1. ಕಂಸದಲ್ಲಿರುವ ಗ್ರಂಥವು ಲೇಖಕರ ಕೈತಪ್ಪಿನಿಂದ ಬಿಟ್ಟುಹೋಗಿದೆ ಎಂದು ಕಲ್ಪಿಸಲಾಗಿದೆ.

2. ತಾರ್ಕಿಕರು, ಮಿಮಾಂಸಕರು ಮುಂತಾದವರು. 3. ಬೌದ್ಧನು.

4. ಯಾವದನ್ನು ಇದೆ ಎನ್ನುವೆವೋ ಅದು ಅನಿತ್ಯವು. ಈ ಅರ್ಥದಲ್ಲಿ ಪರಮಾರ್ಥವು ಇದೆ ಎನ್ನಕೂಡದು. ಗೀ. ಭಾ. ೧೩-೧೨. (ಭಾ. ಭಾ ೨೫೦-೨೫೨), ಕ. ಭಾ. ೨-೩-೧೩, (ಭಾ. ಭಾ. ೧೭೬) ಇವುಗಳನ್ನು ನೋಡಿರಿ. ಆ॥ ವ್ಯಾಖ್ಯಾನಕಾರರು ''ಘಟಾದ್ಯನಿತ್ಯವಿಲಕ್ಷಣತ್ವಾತ್'' ಎಂಬ ಪಾಠವನ್ನು ಒಪ್ಪಿ ಆತ್ಮನು ಸುಖಾದ್ಯಾಕಾರದಿಂದ ಪರಿಣಾಮವಾಗುವದರಿಂದ ಅನಿತ್ಯವಾದ ಘಟವೇ ಮುಂತಾದವುಗಳಿಗಿಂತ ವಿಲಕ್ಷಣನಾಗಿರುವದರಿಂದ ಚಲನು, ಸವಿಶೇಷನು, ಪರಿಣಾಮಿಯು ಎಂದು ಅರ್ಥಮಾಡಿರುತ್ತಾರೆ.

5. ಆತ್ಮನು ಇಲ್ಲ ಎಂಬುದರಲ್ಲಿ ಯಾವ ವಿಶೇಷವನ್ನೂ ಕಲ್ಪಿಸುವದಕ್ಕೆ ಬರುವದಿಲ್ಲ ; ಆದರೆ ಆತ್ಮನು ಸವಿಶೇಷವಾಗಿ ತೋರುವನೆಂಬ ಅನುಭವವು ಈ ಪಕ್ಷಕ್ಕೆ ವಿರುದ್ಧವಾಗಿದೆ ಎಂದು ಭಾವ.

6. ಈ ಪಕ್ಷದಲ್ಲಿ ಹಿಂದಿನ ಎರಡು ದೋಷಗಳೂ ಗಂಟುಬೀಳುವವು. ಚಲವೂ ಸ್ಥಿರವೂ ಆಗಿದೆ ಎಂಬುದು ವ್ಯಾಹತವೂ ಆಗಿದೆ ಎಂದು ಭಾವ.

ಅತ್ಯಂತವಾಗಿ ಇಲ್ಲದೆಯೇ ಇರುವಮ[1]-(ಈ) ನಾಲ್ಕು ಪ್ರಕಾರಗಳೂ (ಭಗವಂತನಿಗೆ ಆವರಣಗಳೇ ಎಂದು ಈಗ ಹೇಳುತ್ತಾರೆ). ಹೀಗೆ ಚಲ, ಸ್ಥಿರ, ಉಭಯ, ಅಭಾವ-ಎಂಬ ಈ (ನಾಲ್ಕು ಪ್ರಕಾರಗಳಿಂದ) ಸದ್ಯಾದಿ, ಅಸದ್ಯಾದಿ ಮೊದಲಾದವರೆಲ್ಲರೂ ಭಗವಂತನನ್ನು ಮುಚ್ಚುತ್ತಲೇ ಇರುವರು. (ಹೀಗೆ ಮುಚ್ಚುವವನು) ಬಾಲಿಶನು : (ಅವನು) ಪಂಡಿತನಾದರೂ ಪರಮಾರ್ಥತತ್ತ್ವವನ್ನು ಅರಿಯದ್ದರಿಂದ ಬಾಲಿಶನೇ (ಆಗಿರುತ್ತಾನೆ). ಇನ್ನು ಸ್ವಭಾವದಿಂದಲೇ ಮೂಢರಾದ ಜನರು[2] (ಮುಚ್ಚುತ್ತಾರೆಂದು ಹೇಳುವ)ದೇನು ?-ಎಂಬ ಅಭಿಪ್ರಾಯ.

(ಭಾಷ್ಯ)

೩೪೧. ಕೀದೃಕ್ ಪುನಃ ಪರಮಾರ್ಥತತ್ತ್ವಮ್, ಯದವಬೋಧಾತ್ ಅಬಾಲಿಶಃ ಪಣ್ಡಿತೋ ಭವತಿ ಇತಿ ? ಅಹ-

(ಭಾಷ್ಯಾರ್ಥ)

ಹಾಗಾದರೆ ಯಾವ (ಪರಮಾರ್ಥತತ್ತ್ವವನ್ನು) ಅರಿತುಕೊಂಡರೆ ಬಾಲಿಶನಾಗದೆ ಪಂಡಿತನಾಗುವನೋ (ಆ) ಪರಮಾರ್ಥತತ್ತ್ವವು ಹೇಗಿರುವದು ? ಎಂದರೆ ಹೇಳುತ್ತಾರೆ :-

ಕೋಟ್ಯಶ್ಚತಸ್ರ ಏತಾಸ್ತು ಗ್ರಹೈರ್ಯಾಸಾಂ ಸದಾವೃತಃ ।
ಭಗವಾನಾಭಿರಸ್ಪೃಷ್ಟೋ ಯೇನ ದೃಷ್ಟಃ ಸ ಸರ್ವದೃಕ್ ॥೪೪॥

೪೪. ಈ ನಾಲ್ಕುಕೋಟಿಗಳಿವೆಯಲ್ಲ, ಇವುಗಳನ್ನು ಗ್ರಹಿಸುವದರಿಂದ (ಆತ್ಮನು) ಯಾವಾಗಲೂ ಮುಚ್ಚಲ್ಪಡುತ್ತಿರುವನಷ್ಟೆ. ಇವುಗಳ ಸೋಂಕಿಲ್ಲದ ಭಗವಂತನು ಯಾವನಿಂದ ದೃಷ್ಟನಾಗಿರುವನೋ ಆತನೇ ಸರ್ವವನ್ನೂ ಕಂಡವನು.

(ಭಾಷ್ಯ)

೩೪೨. ಕೋಟ್ಯಃ ಪ್ರಾವಾದುಕಶಾಸ್ತ್ರನಿರ್ಣಯಾನ್ತಾಃ ಏತಾಃ ಉಕ್ತಾಃ ಅಸ್ತಿನಾಸ್ತಿ-ಇತ್ಯಾದ್ಯಾಃ ಚತಸ್ರಃ । ಯಾಸಾಂ ಕೋಟೀನಾಂ ಗ್ರಹೈಃ ಗ್ರಹಣೈಃ ಉಪಲಬ್ಧಿನಿಶ್ಚಯೈಃ ಸದಾ

---

1. ಅಭಾವವಾದವು ಶೂನ್ಯವಾದಿಯ ಪಕ್ಷವು. ಆತ್ಮನು ಇಲ್ಲವೆಂದು ಕಲ್ಪಿಸುವದಕ್ಕೂ ಕಲ್ಪಿಸುವವನು ಇರಲೇಬೇಕಾಗುವದರಿಂದ ಈ ಪಕ್ಷವೂ ಅನುಭವವಿರುದ್ಧವೆಂದು ಭಾವ.

2. ಯಾವ ವಿಚಾರವನ್ನೂ ಮಾಡದೆ ಇರುವ ಸಾಮಾನ್ಯರು.

ಸರ್ವದಾ ಅವೃತಃ ಅಚ್ಛಾದಿತಃ ತೇಷಾಮೇವ ಪ್ರಾವಾದುಕಾನಾಂ ಯಃ, ಸ ಭಗವಾನ್ ಅಭಿಃ ಅಸ್ತಿ ನಾಸ್ತಿ ಇತ್ಯಾದಿಕೋಟಿಭಿಃ ಚತಸೃಭಿರಪಿ ಅಸ್ಪೃಷ್ಟಃ ಅಸ್ಯಾದಿವಿಕಲ್ಪನಾ ವರ್ಜಿತಃ ಇತ್ಯೇತತ್ । ಯೇನ ಮುನಿನಾ ದೃಷ್ಟಃ ಜ್ಞಾತಃ ವೇದಾನ್ತೇಷು ಔಪನಿಷದಃ ಪುರುಷಃ ಸ ಸರ್ವದೃಕ್ ಸರ್ವಜ್ಞಃ ಪರಮಾರ್ಥಪಣ್ಡಿತಃ ಇತ್ಯರ್ಥಃ ।।

(ಭಾಷ್ಯಾರ್ಥ)

(ಮೇಲೆ) ಹೇಳಿದ ಇದಾನೆ, ಇಲ್ಲ-ಮುಂತಾದ ಈ ನಾಲ್ಕು ಕೋಟಿಗಳು ವಾದಿಗಳ ಶಾಸ್ತ್ರದ ಸಿದ್ಧಾಂತಗಳು (ಇವೆಯಲ್ಲ), ಈ ಕೋಟಿಗಳ ಗ್ರಹಗಳಿಂದ ಗ್ರಹಣಗಳಿಂದ, ಅರಿತೆವೆಂಬ ನಿಶ್ಚಯಗಳಿಂದ[1] ಯಾವಾಗಲೂ ಎಂದೆಂದಿಗೂ ಇದೇ ವಾದಿಗಳ (ಪಾಲಿಗೆ[2]) ಮುಚ್ಚಲ್ಪಡುತ್ತಿರುವನಷ್ಟೆ. ಆ ಈ ಭಗವಂತನು ಈ "ಇದಾನೆ" "ಇಲ್ಲ" ಮುಂತಾದ ನಾಲ್ಕು ಕೋಟಿಗಳ ಸೋಂಕಿಲ್ಲದ, ಇದಾನೆ ಎಂಬುದೇ ಮುಂತಾದ ವಿಕಲ್ಪಗಳಿಲ್ಲದ ಎಂದರ್ಥ ; (ಇಂಥ) ವೇದಾಂತವಚನಗಳಲ್ಲಿ (ಹೇಳಿರುವ) ಔಪನಿಷದಪುರುಷನು[3] ಯಾವ ಮುನಿಯಿಂದ ದೃಷ್ಟನಾಗಿರುವನೋ ಅರಿಯಲ್ಪಟ್ಟಿರುವನೋ[4] ಅವನೇ ಸರ್ವವನ್ನೂ ಕಂಡವನು, ಸರ್ವಜ್ಞನು, ನಿಜವಾಗಿ ಪಂಡಿತನು ಎಂದರ್ಥ.

## ಜ್ಞಾನದ ವ್ಯಾವಹಾರಿಕಪ್ರಯೋಜನ

ಪ್ರಾಪ್ಯ ಸರ್ವಜ್ಞತಾಂ ಕೃತ್ಸ್ನಂ ಬ್ರಾಹ್ಮಣ್ಯಂ ಪದಮದ್ವಯಮ್ ।
ಅನಾಪನ್ನಾದಿಮಧ್ಯಾನ್ತಂ ಕಿಮತಃ ಪರಮಾಹತೇ ।।೬೫।।

---

1. ಅಸ್ತಿ ಮುಂತಾದ ರೂಪದಿಂದ ಆತ್ಮನನ್ನು ಅರಿತೆವೆಂದ ವಾದಿಗಳು ತಪ್ಪಾಗಿ ನಿಶ್ಚಯಿಸಿಕೊಂಡಿರುವರು ; ಅವರ ಮಿಥ್ಯಾನಿಶ್ಚಯದಿಂದ ಆತ್ಮನು ಮರೆಯಾಗಿರುವನು.

2. ನಿಜವಾಗಿ ಭಗವಂತನನ್ನು ಯಾವದೂ ಮರೆಮಾಡಿರುವದಿಲ್ಲ. ವಾದಿಗಳ ತಪ್ಪು ತಿಳಿವಳಿಕೆಯಿಂದ ಅವರ ಪಾಲಿಗೆ ಮರೆಯಾಗಿರುವಂತೆ ಆಗಿರುತ್ತಾನೆ.

3. ಬೃ. ೩-೯-೨೬ರ ಸೂಚನೆ. ಉಪನಿಷತ್ತುಗಳಲ್ಲಿ ಹೇಳಿರುವ ಸರ್ವಸಾಕ್ಷಿಯಾದ ನಿರ್ವಿಶೇಷಚೈತನ್ಯವನ್ನು ಮತ್ತೆ ಯಾವ ಶಾಸ್ತ್ರದಲ್ಲಿಯೂ ತಿಳಿಸಿರುವದಿಲ್ಲ ; ತರ್ಕದಿಂದಲೂ ಅದನ್ನು ಅರಿಯುವದಕ್ಕೆ ಆಗುವದಿಲ್ಲ. 4. ವೇದಾಂತವಾಕ್ಯಗಳಿಂದಲಾದರೂ ಆತ್ಮನನ್ನು ಅರಿತುಕೊಳ್ಳುವದು ಹೇಗೆ ? ಅದೂ ಒಂದು ಆವರಣವಲ್ಲವೆ ?-ಎಂದು ಶಂಕಿಸಬಾರದು ; ಏಕೆಂದರೆ ಆತ್ಮನ ಧರ್ಮವಲ್ಲದ ಕಲ್ಪನೆಗಳನ್ನು ತೆಗೆದುಹಾಕುವದರಿಂದಲೇ ನಿತ್ಯಸಿದ್ಧವಾದ ಆತ್ಮತತ್ತ್ವವನ್ನು ವೇದಾಂತವಾಕ್ಯವು ತಿಳಿಸುತ್ತದೆ. ಆ ವಾಕ್ಯಜ್ಞಾನದಿಂದ ಪ್ರಮಾಣಪ್ರಮೇಯವ್ಯವಹಾರವೂ ಬಾಧಿತವಾಗುತ್ತದೆ. ವೈ. ಪ್ರ. ೩೨ನೆಯ ಭಾ, ಭಾ. ೧೧೫ನ್ನು ನೋಡಿ. ಗೀ. ಭಾ. ೨-೧೪, (ಭಾ. ಭಾ. ೨೯) ೨-೬೯,(ಭಾ. ಭಾ. ೧೨೯), ಸೂ. ಭಾ. ೧-೧-೪ ಇವನ್ನೂ ನೋಡಿ.

೮೫. ಪೂರ್ಣವಾದ ಸರ್ವಜ್ಞತೆಯನ್ನೂ ಅನಾಪನ್ನಾದಿಮಧ್ಯಾಂತವಾದ ಅದ್ವಯವಾದ ಬ್ರಾಹ್ಮಣ್ಯಪದವನ್ನೂ ಹೊಂದಿದ (ಮೇಲೆ) ಇನ್ನು ಮುಂದೆ ಏತಕ್ಕೆ ಪ್ರಯತ್ನಿಸುವನು ?

(ಭಾಷ್ಯ)

೩೪೩. ಪ್ರಾಪ್ಯ ಏತಾಂ ಯಥೋಕ್ತಾಂ ಕೃತ್ಸ್ನಾಂ ಸಮಸ್ತಾಂ ಸರ್ವಜ್ಞತಾಮ್, ಬ್ರಾಹ್ಮಣ್ಯಂ ಪದಮ್ ''ಸ ಬ್ರಾಹ್ಮಣಃ'' (ಬೃ. ೩-೮-೧೦) ''ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ'' (ಬೃ. ೪-೪-೨೩) ಇತಿ ಶ್ರುತೇಃ (ಅನಾಪನ್ನಾದಿಮಧ್ಯಾನ್ತಮ್[1]) ಆದಿಮಧ್ಯಾನ್ತಾಃ ಉತ್ಪತ್ತಿಸ್ಥಿತಿಲಯಾಃ ಅನಾಪನ್ನಾಃ ಅಪ್ರಾಪ್ತಾಃ ಯಸ್ಯ ಅದ್ವಯಸ್ಯ ಪದಸ್ಯ ನ ವಿದ್ಯನ್ತೇ ತತ್ ಅನಾಪನ್ನಾದಿಮಧ್ಯಾನ್ತಂ ಬ್ರಾಹ್ಮಣ್ಯಂ ಪದಮ್ । ತದೇವ ಪ್ರಾಪ್ಯ ಲಬ್ಧ್ವಾ ಕಿಮ್ ಅತಃ ಪರಮ್ ಅಸ್ಮಾತ್ ಆತ್ಮಲಾಭಾತ್ ಊರ್ಧ್ವಮ್ ಈಹತೇ ಚೇಷ್ಟತೇ ನಿಷ್ಪ್ರಯೋಜನಮ್ ? ಇತ್ಯರ್ಥಃ । ''ನೈವ ತಸ್ಯ ಕೃತೇನಾರ್ಥಃ'' (ಗೀ. ೩-೧೮) ಇತ್ಯಾದಿ ಸ್ಮೃತೇಃ ॥

(ಭಾಷ್ಯಾರ್ಥ)

ಈ ಮೇಲೆ ಹೇಳಿರುವ ಪೂರ್ಣವಾದ ಸಮಸ್ತವಾದ ಸರ್ವಜ್ಞತ್ವವನ್ನೂ[2], ಬ್ರಾಹ್ಮಣ್ಯವೆಂಬ ಪದವನ್ನೂ[3]-''ಅವನೇ ಬ್ರಾಹ್ಮಣನು'' (ಬೃ. ೩-೮-೧೦) ''ಬ್ರಾಹ್ಮಣನ ಈ ಮಹಿಮೆಯು ನಿತ್ಯವಾದದ್ದು'' (ಬೃ. ೪-೪-೨೩) ಎಂಬ ಶ್ರುತಿಯ ಪ್ರಮಾಣದಿಂದ (ಇದೇ ನಿಜವಾದ ಬ್ರಾಹ್ಮಣ್ಯವು). ಅನಾಪನ್ನಾದಿಮಧ್ಯಾಂತವಾದ ಆದಿಮಧ್ಯಾಂತಗಳು ಎಂದರೆ ಉತ್ಪತ್ತಿಸ್ಥಿತಿಲಯಗಳು ಯಾವ ಅದ್ವಿತೀಯವಾದ ಪದಕ್ಕೆ ಅನಾಪನ್ನವಾಗಿರುವವೋ, ಅಪ್ರಾಪ್ತವಾಗಿರುವವೋ, ಇರುವದಿಲ್ಲವೋ ಅದು ಅನಾಪನ್ನಾದಿಮಧ್ಯಾಂತವಾದ ಬ್ರಾಹ್ಮಣ್ಯಪದವು. ಅದನ್ನೇ ಹೊಂದಿ ಪಡೆದುಕೊಂಡು ಆಮೇಲೂ ಈ ಆತ್ಮಲಾಭವಾದ ಮೇಲೂ[4] ಏತಕ್ಕೆ (ಯಾವ) ಪ್ರಯೋಜನವೂ

1. ಮಾ ॥ ದಲ್ಲಿ ಮಾತ್ರ ಇದೆ.

2. ಕಪಿಲ, ಬುದ್ಧ- ಮೊದಲಾದವರನ್ನೂ ಸರ್ವಜ್ಞರೆನ್ನುವದುಂಟು. ಆದರೆ ಅವರದು ಪೂರ್ಣ ವಾದ ಸರ್ವಜ್ಞತೆಯಲ್ಲ ; ಅವರು ಎಲ್ಲಕ್ಕೂ ಆತ್ಮನಾಗಿರುವ ಈ ತತ್ತ್ವವನ್ನು ಅರಿಯರು.

3. ಬ್ರಹ್ಮಜ್ಞಾನವನ್ನು ಪಡೆದಮೇಲೆ ಸಿಕ್ಕುವ ಬ್ರಾಹ್ಮಣ್ಯವೇ ನಿಜವಾದದ್ದು, ನಿತ್ಯ ವಾದದ್ದು ; ಜಾತಿಬ್ರಾಹ್ಮಣ್ಯವು ಕೃತಕವು, ಅನಿತ್ಯವು.

4. ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲ-ಎಂದು ಆಪಸ್ತಂಬ ಸ್ಮೃತಿ.

ಇಲ್ಲದೆ ಪ್ರಯತ್ನಿಸುವನು, ಏನಾದರೂ ಕರ್ಮವನ್ನು ಮಾಡುವನು[1] ? "ಅವರಿಗೆ ಕರ್ಮವನ್ನು ಮಾಡಿದ್ದರಿಂದ (ಆಗಬೇಕಾದ) ಪ್ರಯೋಜನವೇನೂ ಇರುವದಿಲ್ಲ." (ಗೀ. ೩-೧೮) ಎಂದು ಮುಂತಾಗಿರುವ ಸ್ಮೃತಿಯು ಇದಕ್ಕೆ ಪ್ರಮಾಣವು.

ವಿಪ್ರಾಣಾಂ ವಿನಯೋ ಹ್ಯೇಷ ಶಮಃ ಪ್ರಾಕೃತ ಉಚ್ಯತೇ ।
ದಮಃ ಪ್ರಕೃತಿದಾನ್ತತ್ವಾದೇವಂ ವಿದ್ವಾಞ್ಛಮಂ ವ್ರಜೇತ್ ॥೬೬॥

೬೬. ವಿಪ್ರರಿಗೆ ಇದೇ ವಿನಯವು. (ಇದೇ) ಸ್ವಾಭಾವಿಕವಾದ ಶಮವೆನಿಸುತ್ತದೆ. ಸ್ವಭಾವದಿಂದ ದಾಂತವಾಗಿರುವದರಿಂದ (ಇದೇ) ದಮವು. ಹೀಗೆಂದು ತಿಳಿದವನು ಶಮವನ್ನು ಹೊಂದುವನು.

(ಭಾಷ್ಯ)

೩೪೪. ವಿಪ್ರಾಣಾಂ ಬ್ರಾಹ್ಮಣಾನಾಂ ವಿನಯೋ ವಿನೀತತ್ವಮ್ ಸ್ವಾಭಾವಿಕಂ ಯದೇತತ್ ಆತ್ಮಸ್ವರೂಪೇಣ ಅವಸ್ಥಾನಮ್ ಏಷ ವಿನಯಃ । ಶಮೋಽಪಿ ಏಷ ಏವ ಪ್ರಾಕೃತಃ ಸ್ವಾಭಾವಿಕಃ ಅಕೃತಕಃ ಉಚ್ಯತೇ । ದಮೋಽಪಿ ಏಷ ಏವ । ಪ್ರಕೃತಿದಾನ್ತತ್ವಾತ್ ಸ್ವಭಾವತ ಏವ ಚ ಉಪಶಾನ್ತರೂಪತ್ವಾತ್ ಬ್ರಹ್ಮಣಃ । ಏವಂ ಯಥೋಕ್ತಂ ಸ್ವಭಾವೋಪಶಾನ್ತಂ ಬ್ರಹ್ಮ ವಿದ್ವಾನ್ ಶಮಮ್ ಉಪಶಾನ್ತಿಂ ಸ್ವಾಭಾವಿಕೀಂ ಬ್ರಹ್ಮ ಸ್ವರೂಪಾಂ ವ್ರಜೇತ್ । ಬ್ರಹ್ಮಸ್ವರೂಪೇಣ ಅವತಿಷ್ಠತೇ ಇತ್ಯರ್ಥಃ ॥

(ಭಾಷ್ಯಾರ್ಥ)

ವಿಪ್ರರಿಗೆ ಬ್ರಾಹ್ಮಣರಿಗೆ (ಇದು) ವಿನಯವು ; ವಿನೀತವಾಗಿರುವದು ಸ್ವಾಭಾವಿಕವಾದ ಆತ್ಮಸ್ವರೂಪದಿಂದ ನೆಲೆನಿಲ್ಲುವದೆಂಬ ಇದೇ ವಿನಯವು. ಮತ್ತು ಇದೇ ಸ್ವಾಭಾವಿಕವಾದ ಕೃತಕವಲ್ಲದ[2] ಶಮವೆನಿಸಿಕೊಂಡಿರುತ್ತದೆ. ಇದೇ (ಸ್ವಾಭಾವಿಕವಾದ ಕೃತಕವಲ್ಲದ) ಶಮವೆನಿಸಿಕೊಂಡಿರುತ್ತದೆ. ಏಕೆಂದರೆ ಬ್ರಹ್ಮವು ಪ್ರಕೃತಿದಾಂತವಾಗಿರುತ್ತದೆ. ಸ್ವಭಾವದಿಂದಲೇ ಉಪಶಾಂತರೂಪವಾಗಿರುತ್ತದೆ. ಹೀಗೆ ಮೇಲೆ ಹೇಳಿದ ಸ್ವಭಾವದಿಂದ ಉಪಶಾಂತವಾಗಿರುವ ಬ್ರಹ್ಮವನ್ನು ಅರಿತುಕೊಂಡವನು ಶಮವನ್ನು

1. ಬೃ. ೪-೪-೨೨ನೆಯ ಮಂತ್ರಾರ್ಥದ ಸೂಚನೆಯೂ ಇಲ್ಲಿದೆ.

2. ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿಯುವ ದಮವೂ ಶಮವೂ ಕೃತಕ, ನಿಶ್ಚಲವಾಗಿರುವದಿಲ್ಲ. ಜ್ಞಾನಿಯ ಸ್ವರೂಪವೇ ಆಗಿ ಸ್ವಾಭಾವಿಕವಾಗಿರುವ ಶಮದಮಗಳೀಗೆ ಚ್ಯುತಿಯೇ ಇಲ್ಲ.

ಸ್ವಾಭಾವಿಕವಾದ ಬ್ರಹ್ಮಸ್ವರೂಪವಾದ ಉಪಶಾಂತಿಯನ್ನು ಹೊಂದುವನು, ಬ್ರಹ್ಮ ಸ್ವರೂಪದಿಂದ ನೆಲೆನಿಲ್ಲುವನು[1] ಎಂದರ್ಥ.

## ವೇದಾಂತಪ್ರಕ್ರಿಯೆ

### (ಭಾಷ್ಯ)

೩೪೫. ಏವಮ್ ಅನ್ಯೋನ್ಯವಿರುದ್ಧತ್ವಾತ್ ಸಂಸಾರಕಾರಣಾನಿ ರಾಗದ್ವೇಷ ದೋಷಾಸ್ಪದಾನಿ ಪ್ರಾಪಾಮುಕಾನಾಂ ದರ್ಶನಾನಿ । ಅತಃ ಮಿಥ್ಯಾದರ್ಶನಾನಿ ತಾನಿ ಇತಿ ತದ್ಯುಕ್ತಿಭಿರೇವ ದರ್ಶಯಿತ್ವಾ, ಚತುಷ್ಕೋಟಿವರ್ಜಿತತ್ವಾತ್ ರಾಗಾದಿದೋಷಾನಾಸ್ಪದಂ ಸ್ವಭಾವಶಾನ್ತಮ್ ಅದ್ವೈತದರ್ಶನಮೇವ ಸಮ್ಯಗ್ದರ್ಶನಮ್ ಇತ್ಯುಪಸಂಹೃತಮ್ । ಅಥ ಇದಾನೀಂ ಸ್ವಪ್ರಕ್ರಿಯಾಪ್ರದರ್ಶನಾರ್ಥಃ ಆರಮ್ಭಃ -

### (ಭಾವಾರ್ಥ)

ಹೀಗೆ ಒಂದಕ್ಕೊಂದು ವಿರುದ್ಧವಾಗಿರುವದರಿಂದ ಮಿಕ್ಕ ವಾದಿಗಳ ದರ್ಶನಗಳು ಸಂಸಾರಕ್ಕೆ ಕಾರಣವಾಗಿರುತ್ತವೆ. ರಾಗದ್ವೇಷಗಳೆಂಬ ದೋಷಗಳಿಗೆ ಎಡೆಯಾಗಿರುತ್ತವೆ. ಆದ್ದರಿಂದ ಅವು ತಪ್ಪು ದರ್ಶನಗಳು ಎಂದು ಅವರ ಯುಕ್ತಿಗಳಿಂದಲೇ ತೋರಿಸಿಕೊಟ್ಟು (ಇದಾನೆ, ಇಲ್ಲ-ಮುಂತಾದ) ನಾಲ್ಕುಕೋಟಿಗಳಿಲ್ಲದ್ದರಿಂದ ರಾಗಾದಿದೋಷಗಳಿಗೆ ಎಡೆಯಿಲ್ಲದ ಸ್ವಭಾವದಿಂದಲೇ ಶಾಂತವಾಗಿರುವ ಅದ್ವೈತದರ್ಶನವೇ ಸರಿಯಾದ ದರ್ಶನವು ಎಂದು ಉಪಸಂಹಾರಮಾಡಲಾಯಿತು. ಇನ್ನು ಈಗ ತಮ್ಮ ಪ್ರಕ್ರಿಯೆಯನ್ನು[2] ತಿಳಿಸಿಕೊಡುವದಕ್ಕಾಗಿ (ಇದನ್ನು) ಆರಂಭಿಸುತ್ತದೆ :-

ಸವಸ್ತು ಸೋಪಲಮ್ಭಂ ಚ ದ್ವಯಂ ಲೌಕಿಕಮಿಷ್ಯತೇ ।
ಅವಸ್ತು ಸೋಪಲಮ್ಭಂ ಚ ಶುದ್ಧಂ ಲೌಕಿಕಮಿಷ್ಯತೇ ॥೮೭॥

೮೭. ಸವಸ್ತುವೂ ಸೋಪಲಂಭವೂ ಆಗಿರುವ ದ್ವೈತವು ಲೌಕಿಕವೆನಿಸುವದು. ಅವಸ್ತುವೂ ಸೋಪಲಂಭವೂ ಆಗಿರುವದು ಶುದ್ಧಲೌಕಿಕವೆನಿಸುವದು.

---

1 ಬ್ರಹ್ಮಸ್ವರೂಪವನ್ನೇ ಶಮ ಮುಂತಾದ ಹೆಸರಿನಿಂದ ನಾವು ಕರೆದಿರುವದು ಎಂದರ್ಥ. ಆತ್ಮಸ್ವಗ...ಂದ ನೆಲೆನಿಲ್ಲುವವರಿಗೂ ಶಮಾದಿಗಳು ಯತ್ನಸಾಧ್ಯವಾಗಿರುವವು. ಹಾಗೆ ನೆಲೆನಿಂತಾಗ ಸ್ವಾಭಾವಿಕವಾಗಿ ಬಿಡುತ್ತವೆ ಎಂದು ಭಾವ.

2. ಅವಸ್ತಾತ್ರಯವನ್ನು ಪರೀಕ್ಷಿಸಿ ಶುದ್ಧಚೈತನ್ಯರೂಪವನ್ನು ಗೊತ್ತುಪಡಿಸುವದೇ ಸ್ವಪ್ರಕ್ರಿಯೆ. ಇದುವರೆಗೆ ಯುಕ್ತಿಯಿಂದ ಸಿದ್ಧವಾಗಿರುವದನ್ನು ಅವಸ್ಥಾತ್ರಯಪರೀಕ್ಷೆಯಿಂದ ಅನುಭವಾರೂಢವಾಗಿಸುವದೂ ಉಪಕ್ರಮದಂತೆ ಉಪಸಂಹಾರಮಾಡಿ ಪ್ರಕರಣಕ್ಕೆ ಉಪನಿಷತ್ಸಂಬಂಧವನ್ನು ಸ್ಪಷ್ಟಗೊಳಿಸುವದೂ ಇದಕ್ಕೆ ಪ್ರಯೋಜನವು.

(ಭಾಷ್ಯ)

೩೪೬. ಸವಸ್ತು ಸಂವೃತಿಸತಾ ವಸ್ತುನಾ ಸಹ ವರ್ತತೇ ಇತಿ ಸವಸ್ತು । ತಥಾ ಚ ಉಪಲಬ್ಧಿಃ ಉಪಲಮ್ಭಃ । ತೇನ ಸಹ ವರ್ತತೇ ಇತಿ ಸೋಪಲಮ್ಭಂ ಚ । ಶಾಸ್ತ್ರಾದಿಸರ್ವವ್ಯವಹಾರಾಸ್ಪದಂ ಗ್ರಾಹ್ಯಗ್ರಹಣಲಕ್ಷಣಂ ದ್ವಯಂ ಲೌಕಿಕಮ್ ಲೋಕಾತ್, ಅನಪೇತಂ ಲೌಕಿಕಮ್, ಜಾಗರಿತಮ್ ಇತ್ಯೇತತ್ । ಏವಂಲಕ್ಷಣಂ ಜಾಗರಿತಮ್ ಇಷ್ಯತೇ ವೇದಾನ್ತೇಷು । ಅವಸ್ತು ಸಂವೃತೇರಪ್ಯಭಾವಾತ್ । ಸೋಪಲಮ್ಭಮ್ । ವಸ್ತುವತ್ ಉಪಲಮ್ಭನಮ್ ಉಪಲಮ್ಭಃ ಅಸತ್ಯಪಿ ವಸ್ತುನಿ । ತೇನ ಸಹ ವರ್ತತೇ ಇತಿ ಸೋಪಲಮ್ಭಂ ಚ ಶುದ್ಧಂ ಕೇವಲಂ ಪ್ರವಿವಿಕ್ತಂ[1] ಜಾಗರಿತಾತ್ ಸ್ಥೂಲಾತ್ ಲೌಕಿಕಂ ಸರ್ವಪ್ರಾಣಿಸಾಧಾರಣತ್ವಾತ್ ಇಷ್ಯತೇ ಸ್ವಪ್ನಃ ಇತ್ಯರ್ಥಃ ।।

(ಭಾಷ್ಯಾರ್ಥ)

ಸವಸ್ತು ಸಂವೃತಿ (ವ್ಯವಹಾರ)ದಿಂದ ಸತ್ತಾಗಿರುವ ವಸ್ತುವಿನಿಂದ ಕೂಡಿರುವದು[2]. ಮತ್ತು ಉಪಲಮ್ಭವೆಂದರೆ ಅರಿಯುವದು ; ಅದರೊಡನೆ ಕೂಡಿರುವದು ಸೋಪಲಂಭವು. ಶಾಸ್ತ್ರವೇ ಮುಂತಾದ ಸರ್ವವ್ಯವಹಾರಕ್ಕೂ ಆಶ್ರಯವಾಗಿ[3] ಗ್ರಾಹ್ಯಗ್ರಾಹಕ ರೂಪವಾಗಿರುವ[4] ದ್ವೈತವು ಲೌಕಿಕವು ಲೋಕವನ್ನು ಬಿಡದಿರುವದು, ಎಚ್ಚರವು (ಎನಿಸುವದು). ಈ ಲಕ್ಷಣವುಳ್ಳದ್ದೇ ಉಪನಿಷತ್ತುಗಳಲ್ಲಿ ಎಚ್ಚರವೆನಿಸಿರುವದು. ಸಂವೃತಿ (ಯಿಂದ ಇರುವ ವಸ್ತುವೂ) ಇಲ್ಲದ್ದರಿಂದ[5] ವಸ್ತುವಿಲ್ಲದ್ದೂ ಸೋಪಲಂಭವೂ-ವಸ್ತುವಿಲ್ಲದಿದ್ದರೂ ವಸ್ತುವಿನಂತೆ ಕಾಣುವದು ಉಪಲಂಭವು ; ಅದರೊಡನೆ ಇರುವದು

---

1. "ಪ್ರವಿಭಕ್ತಂ" ಎಂಬ ಪಾಠಕ್ಕಿಂತ ಇದೇ ಮೇಲು ; ಇದು ೪ನೆಯ ಮಂತ್ರಕ್ಕೂ ೧-೩-ಅನೆಯ ಕಾರಿಕೆಗಳಿಗೂ ಅನುಸಾರವಾಗಿರುತ್ತದೆ.

2. ಅವಿದ್ಯಾಕಲ್ಪಿತವ್ಯವಹಾರದಿಂದಲೇ ವಸ್ತುಗಳು ಎಚ್ಚರದಲ್ಲಿ ಕಾಣುವವು.

3. ಎಚ್ಚರವು ಸಮಸ್ತಲೌಕಿಕವೈದಿಕವ್ಯವಹಾರಗಳಿಗೂ ಆಶ್ರಯವಾಗಿರುತ್ತದೆ. ಅವೆಲ್ಲವೂ ಅವಿದ್ಯಾವಿಷಯಗಳಾಗಿರುತ್ತವೆ. ೨-೩೨ನೆಯ ಕಾ. ಭಾ. ವನ್ನು ನೋಡಿ.

4. ಇದು ಸೋಪಲಮ್ಭ ಎಂಬುದರ ವಿವರವೇ.

5. ಇದೂ ಸೋಪಲಂಭ ಎಂಬುದರ ವಿವರವೇ. ಇಂದ್ರಿಯಗಳಿಂದಾಗಿರುವ ವ್ಯವಹಾರವನ್ನೇ ಇಲ್ಲಿ ಸಂವೃತಿ ಎಂದು ಕರೆದಿದೆ. ಎಚ್ಚರದಲ್ಲಿ ಇಂದ್ರಿಯವಿಷಯವ್ಯವಹಾರವಿರುವದೆಂದೂ ಕನಸಿನಲ್ಲಿ ಬರಿಯ ಮನಸ್ಸು ಮಾತ್ರ ಇರುವದೆಂದೂ ಜನರು ಕಲ್ಪಿಸುವರಷ್ಟೆ. ಅದನ್ನನುಸರಿಸಿ ಇಲ್ಲಿ ಎಚ್ಚರಕನಸುಗಳ ವಿಭಾಗವನ್ನು ಹೇಳಿದೆ. ಆಯಾ ಅವಸ್ಥೆ ಇರುವಾಗ ಎರಡರಲ್ಲಿಯೂ ಒಳಗೆ ಮನಸ್ಸಿನ, ಹೊರಗೆ ಇಂದ್ರಿಯಗಳ, ಅರಿವಿನಿಂದ ವಿಷಯಾನುಭವವಾಗುವಂತೆ ತೋರುತ್ತಿರುವದು ಸಮಾನವೆಂಬುದನ್ನು ವೈತಥ್ಯದ ೯ರಿಂದ ೧೫ರ ವರೆಗಿನ ಕಾರಿಕೆಗಳಲ್ಲಿ ಸ್ಪಷ್ಟಪಡಿಸಿದೆ.

ಸೋಪಲಂಭವು. (ಹೀಗೆ ವಸ್ತುವಿಲ್ಲದೆ ಸೋಪಲಂಭವಾಗಿರುವ ಅವಸ್ಥೆಯು) ಶುದ್ಧವಾದ ಬರಿಯದಾಗಿರುವ ಸ್ಥೂಲವಾದ ಎಚ್ಚರಕ್ಕಿಂತ ಸೂಕ್ಷ್ಮವಾಗಿರುವ ಲೌಕಿಕವು. ಎಲ್ಲಾ ಪ್ರಾಣಿಗಳಿಗೂ ಸಾಧಾರಣವಾಗಿರುವದರಿಂದ[1] (ಶುದ್ಧಲೌಕಿಕವೆನಿಸಿರುವದು), ಸ್ವಪ್ನ (ವೆನಿಸುವದು) ಎಂದರ್ಥ.

ಅವಸ್ತ್ವನುಪಲಮ್ಭಂ ಚ ಲೋಕೋತ್ತರಮಿತಿ ಸ್ಮೃತಮ್ ।
ಜ್ಞಾನಂ ಜ್ಞೇಯಂ ಚ ವಿಜ್ಞೇಯಂ ಸದಾ ಬುದ್ಧೈಃ ಪ್ರಕೀರ್ತಿತಮ್ ॥೮೮॥

೮೮. ವಸ್ತುವಿಲ್ಲದೆ ಉಪಲಂಭವೂ ಇಲ್ಲದೆ ಇರುವದು ಲೋಕೋತ್ತರ ವೆನಿಸುವದು. (ಹೀಗೆ) ಜ್ಞಾನವೂ ಜ್ಞೇಯವೂ ವಿಜ್ಞೇಯವೂ ಯಾವಾಗಲೂ ಬುದ್ಧರಿಂದ ಹೇಳಲ್ಪಟ್ಟಿರುತ್ತದೆ.

(ಭಾಷ್ಯ)

೩೪೭. ಅವಸ್ತು ಅನುಪಲಮ್ಭಂ ಚ ಗ್ರಾಹ್ಯಗ್ರಹಣವರ್ಜಿತಮ್ ಇತ್ಯೇತತ್ ಲೋಕೋತ್ತರಮ್ ಅತ ಏವ ಲೋಕಾತೀತಮ್ । ಗ್ರಾಹ್ಯಗ್ರಹಣವಿಷಯೋ ಹಿ ಲೋಕಃ । ತದಭಾವಾತ್ । ಸರ್ವಪ್ರವೃತ್ತಿಬೀಜಂ ಸುಷುಪ್ತಮ್ ಇತ್ಯೇತತ್ । ಏವಂ ಸ್ಮೃತಂ ಸೋಪಾಯಂ ಪರಮಾರ್ಥತತ್ತ್ವಮ್ । ಲೌಕಿಕಂ ಶುದ್ಧಲೌಕಿಕಂ ಲೋಕೋತ್ತರಂ ಚ ಕ್ರಮೇಣ ಯೇನ ಜ್ಞಾನೇನ ಜ್ಞಾಯತೇ ತತ್ ಜ್ಞಾನಮ್ । ಜ್ಞೇಯಮ್ ಏತಾನ್ಯೇವ ತ್ರೀಣಿ । ಏತದ್ವ್ಯತಿರೇಕೇಣ ಜ್ಞೇಯಾನುಪಪತ್ತೇಃ । ಸರ್ವಪ್ರಾವಾದುಕ ಕಲ್ಪಿತವಸ್ತುನಃ ಅತ್ಯೈವ ಅನ್ತರ್ಭಾವಾತ್ । ವಿಜ್ಞೇಯಂ[2] ಪರಮಾರ್ಥಸತ್ಯಂ ತುರ್ಯಾಖ್ಯಮ್ । ಅದ್ವಯಮ್ ಅಜಮ್ ಆತ್ಮತತ್ತ್ವಮ್ ಇತ್ಯರ್ಥಃ । ಸದಾ

---

1. ಈ ಪ್ರಕರಣದಲ್ಲಿ ಎಚ್ಚರಕನಸುಗಳ ಸ್ವರೂಪವನ್ನು ನಿರ್ಣಯಿಸುತ್ತದೆಯಾದ್ದರಿಂದ ಕನಸು ಸರ್ವಪ್ರಾಣಿಗಳಿಗೂ ಸಾಧಾರಣವಾಗಿದೆ ಎಂಬುದು ಹೊಂದುವದಿಲ್ಲ. ಆದ್ದರಿಂದ "ಲೋಕ ಪ್ರಸಿದ್ಧವಾಗಿದೆ" ಎಂದು ಈ ಮಾತಿಗೆ ಅರ್ಥವನ್ನು ವ್ಯಾಖ್ಯಾನಕಾರರು ಕಲ್ಪಿಸಿರುತ್ತಾರೆ. ಇಲ್ಲಿ "ಸರ್ವ ಪ್ರಾಣಿಸಾಧಾರತ್ವಾಣಭಾವಾತ್" ಎಂದೋ 'ಸರ್ವಪ್ರಾಣಿಸಾಧಾರಣಾತ್' ಎಂದೋ ಪಾಠವಿರ ಬೇಕೆಂದು ತೋರುತ್ತದೆ. ಮೊದಲನೆಯ ಪಾಠಕ್ಕೆ ಎಲ್ಲಾ ಪ್ರಾಣಿಗಳಿಗೂ ಸಾಧಾರಣವಲ್ಲದಿರುವದರಿಂದ ಇದು ಶುದ್ಧಲೌಕಿಕವು, ಬರಿಯ ತನ್ನ ಮಟ್ಟಿಗೆ ಕಾಣುವ ಗ್ರಾಹ್ಯಗಾಹಕಲಕ್ಷಣಲೋಕವು ಎಂದು ಅರ್ಥ. ಎರಡನೆಯ ಪಾಠಕ್ಕೆ ಎಲ್ಲಾ ಪ್ರಾಣಿಗಳಿಗೂ ಸಾಧಾರಣವಾಗಿರುವ ಎಚ್ಚರಕ್ಕಿಂತ ಸೂಕ್ಷ್ಮವಾದದ್ದು ಎಂದು ಅರ್ಥ.

2. ಇದಾದಬಳಿಕ ಯತ್ ಎಂದು ಹೆಚ್ಚಾಗಿರುವ ವಾ।। ಪಾಠವು ಅನವಶ್ಯ.

ಸರ್ವದಾ ಏತತ್[1] ಲೌಕಿಕಾದಿವಿಜ್ಞೇಯಾನ್ತಂ ಬುದ್ಧ್ಯೈಃ ಪರಮಾರ್ಥದರ್ಶಿಭಿಃ ಬ್ರಹ್ಮ ವಿದ್ಭಿಃ ಪ್ರಕೀರ್ತಿತಮ್ ।।

(ಭಾಷ್ಯಾರ್ಥ)

ವಸ್ತುವೂ ಇಲ್ಲದೆ ಉಪಲಂಭವೂ ಇಲ್ಲದೆ ಎಂದರೆ ಗ್ರಾಹ್ಯವಾಗಲಿ ಗ್ರಹಣವಾಗಲಿ (ಯಾವದೂ) ಇಲ್ಲದ್ದು ಎಂದರ್ಥ. ಆದ್ದರಿಂದಲೇ[2] ಲೋಕವನ್ನು ಮೀರಿದ್ದು ಗ್ರಾಹ್ಯ, ಗ್ರಹಣ-ಇವುಗಳ ವಿಷಯವಾದದ್ದೇ ಅಲ್ಲವೆ, ಲೋಕ(ವೆನ್ನುವದು[3]) ? ಅವೆರಡೂ ಇಲ್ಲದ್ದರಿಂದ (ಇದು ಲೋಕೋತ್ತರವು), ಎಲ್ಲಾ ಪ್ರವೃತ್ತಿಗಳಿಗೂ ಕಾರಣವಾದ[4] ಸುಷುಪ್ತಿಯು ಎಂದರ್ಥ. ಹೀಗೆ ಉಪಾಯಸಹಿತವಾದ ಪರಮಾರ್ಥತತ್ತ್ವವು ಹೇಳಲ್ಪಟ್ಟಿತು[5].

ಲೌಕಿಕವೂ ಶುದ್ಧಲೌಕಿಕವೂ ಲೋಕೋತ್ತರವೂ ಕ್ರಮವಾಗಿ[6] ಯಾವ ಜ್ಞಾನದಿಂದ ಅರಿಯಲ್ಪಡುವವೋ ಅದು ಜ್ಞಾನವು. ಈ ಮೂರೇ ಜ್ಞೇಯವು. ಏಕೆಂದರೆ ಸರ್ವವಾದಿಗಳು ಕಲ್ಪಿಸಿರುವ ವಸ್ತುಗಳೂ ಇವುಗಳಲ್ಲಿಯೇ ಅಡಕವಾಗಿರುವದರಿಂದ[7] ಇವನ್ನು ಬಿಟ್ಟರೆ ಬೇರೆಯ ಅರಿಯತಕ್ಕ (ಪದಾರ್ಥವೇ ಇರುವದಿಲ್ಲ). ವಿಜ್ಞೇಯ ಎಂದರೆ ತುರ್ಯ (ನಾಲ್ಕನೆಯದು) ಎಂಬ ಹೆಸರಿನ ಪರಮಾರ್ಥಸತ್ಯವು[8] ತನಗೆರಡನೆಯದಿಲ್ಲದ

---

1. "ಸರ್ವದೈವ ತತ್" ವಾ।। 2. ಗ್ರಾಹ್ಯ (ಅರಿಯಲ್ಪಡುವ ವಸ್ತು)ಗ್ರಹಣ (ಅರಿಯುವದು) ಎಂಬ ವಿಭಾಗವಿಲ್ಲದ್ದ ರಿಂದಲೇ ಎಂದರ್ಥ. ಇಲ್ಲಿ ಗ್ರಹಣವೆಂದರೆ ಬಿಡಿಯರಿವು.

3. ವಿಷಯಗಳನ್ನು ಅರಿಯುವದೇ ಅವುಗಳನ್ನು ಅನುಭವಿಸುವದೆಂಬ ಲೋಕವು.

4. ಎಚ್ಚರಕನಸುಗಳಲ್ಲಿ ಕಾಣುವ ಪ್ರವೃತ್ತಿಗಳಿಗೆ ಕಾರಣವೆಂದು ತೋರುವ ಅವಸ್ಥೆಯೇ ಸುಷುಪ್ತಿ. "ಪ್ರಾಜ್ಞನು ಕಾರಣಬದ್ಧನು" ಎಂದು ಆಗಮದ ಕಾ. ೧೦ರಲ್ಲಿ ಹೇಳಿದ ಅಭಿಪ್ರಾಯವಿದು.

5. ಅವಸ್ಥಾತ್ರಯದಲ್ಲಿಯೇ ಉಪಾಯವೂ ಅದರಿಂದ ಅರಿತುಕೊಳ್ಳಬೇಕಾದ ಪರಮಾರ್ಥತತ್ತ್ವವೂ ಅಡಕವಾಗಿರುತ್ತದೆ ಎಂದು ಭಾವ.

6. ಇಲ್ಲಿ ಅರಿಯುವ ಕ್ರಮವನ್ನು ಹೇಳಿದೆಯೇ ಹೊರತು ಅವಸ್ಥೆಗಳು ಕ್ರಮವಾಗಿ ಒಂದಾಗುತ್ತಲೊಂದು ಆಗುವವು ಎಂಬ ಅಭಿಪ್ರಾಯವೇನೂ ಇರುವದಿಲ್ಲ. ಎಚ್ಚರಕನಸು-ಎಂಬ ಅವಸ್ಥೆಗಳಲ್ಲಿಯೇ ಕಾಲವು ತೋರುತ್ತಿರುವದು. ಆದ್ದರಿಂದ ಅವಸ್ಥೆಗಳಿಗೆ ಕಾಲಕೃತವಾದ ಸಂಬಂಧವೇನೂ ಇರುವದಿಲ್ಲ.

7. ವೈಶೇಷಿಕರು ಕಲ್ಪಿಸಿರುವ ಸಪ್ತಪದಾರ್ಥಗಳು, ಸಾಂಖ್ಯರು ಕಲ್ಪಿಸಿರುವ ಇಪ್ಪತ್ತುನಾಲ್ಕು ತತ್ತ್ವಗಳು-ಮುಂತಾದವುಗಳೆಲ್ಲವೂ ಅವಸ್ಥಾತ್ರಯದಲ್ಲಿಯೇ ಅಡಕವಾಗಿರುವವೆಂದು ಭಾವ.

8. ಮೂರು ಅವಸ್ಥೆಗಳೂ ವ್ಯಾವಹಾರಿಕಸತ್ಯವೆಂದು ಭಾವ. ೭ನೆಯ ಮಂತ್ರದ ಭಾಷ್ಯವನ್ನು ಅದರಲ್ಲಿಯೂ ಭಾ. ಭಾ. ೩೭ನ್ನು ನೋಡಿ.

ಹುಟ್ಟಿಲ್ಲದ ಆತ್ಮತತ್ತ್ವವು ಎಂದರ್ಥ. ಯಾವಾಗಲೂ ನಿತ್ಯವೂ, ಈ ಲೌಕಿಕವೇ ಮುಂತಾದ ವಿಜ್ಞೇಯದವರೆಗೆ (ನಾವು ಹೇಳಿರುವ) ಇದನ್ನು ಬುದ್ಧರು ಪರಮಾರ್ಥವನ್ನು ಕಂಡುಕೊಂಡಿರುವ ಬ್ರಹ್ಮಜ್ಞಾನಿಗಳು ಹೇಳಿರುತ್ತಾರೆ.

## ಆತ್ಮನು ಅವಸ್ಥಾರಹಿತನು

ಜ್ಞಾನೇ ಚ ತ್ರಿವಿಧೇ ಜ್ಞೇಯೇ ಕ್ರಮೇಣ ವಿದಿತೇ ಸ್ವಯಮ್ ।
ಸರ್ವಜ್ಞತಾ ಹಿ ಸರ್ವತ್ರ ಭವತೀಹ ಮಹಾಧಿಯಃ ॥೬೯॥

೬೯. ಜ್ಞಾನವನ್ನೂ ಮೂರು ವಿಧವಾದ ಜ್ಞೇಯವನ್ನೂ ಕ್ರಮವಾಗಿ ಅರಿತುಕೊಂಡರೆ ತಾನೇ (ಅಂಥ) ಮಹಾಬುದ್ಧಿವಂತನಿಗೆ ಎಲ್ಲೆಲ್ಲಿಯೂ ಸರ್ವಜ್ಞತ್ವವು ಇಲ್ಲಿ ಉಂಟಾಗಿರುವದು.

(ಭಾಷ್ಯ)

೩೪೮. ಜ್ಞಾನೇ ಚ ಲೌಕಿಕಾದಿವಿಷಯೇ ಜ್ಞೇಯೇ ಚ ಲೌಕಿಕಾದೌ ತ್ರಿವಿಧೇ ಪೂರ್ವಂ ಲೌಕಿಕಂ ಸ್ಥೂಲಮ್, ತದಭಾವೇನ ಪಶ್ಚಾತ್ ಶುದ್ಧಂ ಲೌಕಿಕಮ್, ತದಭಾವೇನ ಲೋಕೋತ್ತರಮ್ ಇತಿ ಏವಂ ಕ್ರಮೇಣ ಸ್ಥಾನತ್ರಯಾಭಾವೇನ ಪರಮಾರ್ಥಸತ್ಯೇ ತುರ್ಯೇ ಅದ್ವಯೇ ಅಜೇ ಅಭಯೇ ವಿದಿತೇ ಸ್ವಯಮೇವ ಆತ್ಮಸ್ವರೂಪಮೇವ । ಸರ್ವಜ್ಞತಾ ಸರ್ವಶ್ಚ ಅಸೌ ಜ್ಞಶ್ಚ ಸರ್ವಜ್ಞಃ । ತದ್ಭಾವಃ ಸರ್ವಜ್ಞತಾ । ಇಹ ಅಸ್ಮಿನ್ ಲೋಕೇ ಭವತಿ ಮಹಾಧಿಯಃ ಮಹಾಬುದ್ಧೇಃ । ಸರ್ವಲೋಕಾತಿಶಯವಸ್ತುವಿಷಯಬುದ್ಧಿತ್ವಾತ್ ಏವಂವಿದಃ । ಸರ್ವತ್ರ ಸರ್ವದಾ ಭವತಿ । ಸಕೃದ್ವಿದಿತೇ ಸ್ವರೂಪೇ ವ್ಯಭಿಚಾರಾಭಾವಾತ್ ಇತ್ಯರ್ಥಃ । ನ ಹಿ ಪರಮಾರ್ಥವಿದಃ[1] ಜ್ಞಾನೋದ್ಭವಾ ಭವಂತಿ ಸ್ತಃ, ಯಥಾ ಅನ್ಯೇಷಾಂ ಪ್ರಾವಾದುಕಾನಾಮ್ ॥

(ಭಾಷ್ಯಾರ್ಥ)

ಲೌಕಿಕವೇ ಮುಂತಾದವುಗಳ ವಿಷಯವಾದ ಜ್ಞಾನ ; ಲೌಕಿಕವೇ ಮುಂತಾದ ಮೂರುಬಗೆಯ ಜ್ಞೇಯ(ವಸ್ತು) ಮೊದಲು ಸ್ಥೂಲವಾದ ಲೌಕಿಕವು, ಆಮೇಲೆ ಅದು ಇಲ್ಲದೆ ಇರುವದರಿಂದ[2] ಶುದ್ಧಲೌಕಿಕವು ಅದೂ ಇಲ್ಲದ್ದರಿಂದ[3]

1. ಇದರ ಮುಂದೆ "ಜ್ಞಾನಿನಃ" ಎಂದು ವಾ॥ ಆ॥

2. ಕನಸಿನಲ್ಲಿ ಲಯವಾಗುವದರಿಂದ. ಈ ಲಯಕ್ರಮವನ್ನು ವೈತಥ್ಯಪ್ರಕರಣದಲ್ಲಿ ವಿಸ್ತರಿಸಿದೆ.

3. ತನಿದ್ರೆಯಲ್ಲಿ ಎರಡನೆಯ ವಸ್ತುವನ್ನು ನೋಡುವ ಕನಸೂ ಇಲ್ಲದ್ದರಿಂದ.

ಲೋಕೋತ್ತರವು- ಈ ಕ್ರಮದಲ್ಲಿ[1] ಮೂರು ಅವಸ್ಥೆಗಳೂ ಇಲ್ಲವಾಗಲು[2] ಪರಮಾರ್ಥ ಸತ್ಯವಾದ ತನಗೆರಡನೆಯದಿಲ್ಲದ, ಹುಟ್ಟಿಲ್ಲದ, ಅಂಜಿಕೆಯಿಲ್ಲದ ತುರ್ಯವನ್ನು ಅರಿತುಕೊಂಡರೆ, ತಾನೇ (ಅದಾಗಿರುವನು), ಆತ್ಮಸ್ವರೂಪವೇ (ಆಗಿರುವನು)[3].

(ಅಂಥ) ಮಹಾಧೀಮಂತನಿಗೆ-ಹೀಗೆ ಅರಿತುಕೊಂಡವನು ಲೋಕದಲ್ಲಿ ಎಲ್ಲಕ್ಕೂ ಮೇಲೆನಿಸುವ ವಸ್ತುವಿನ ವಿಷಯವಾದ ಬುದ್ಧಿಯುಂಟಾಗಿರುವದರಿಂದ (ಮಹಾಧೀಮಂತನು)-(ಇಂಥ) ಮಹಾಬುದ್ಧಿವಂತನಿಗೆ, ಸರ್ವಜ್ಞತೆಯು-ಸರ್ವವೂ (ಆಗಿ) ಅವನು ಜ್ಞನೂ ಆಗಿರುವದರಿಂದ ಸರ್ವಜ್ಞನು ; ಅವನ ಭಾವವಾದ ಸರ್ವಜ್ಞತೆಯು-ಇಲ್ಲಿ ಈ ಲೋಕದಲ್ಲಿ ಎಲ್ಲೆಲ್ಲಿಯೂ ಎಂದರೆ ಯಾವಾಗಲೂ ಇದ್ದುಕೊಂಡಿರುತ್ತದೆ. ಏಕೆಂದರೆ ಒಂದುಸಲ ಸ್ವರೂಪವನ್ನು ಅರಿತುಕೊಂಡರೆ (ಅದು ಮತ್ತೆ) ಬೇರ್ಪಡುವದಿಲ್ಲ ಎಂದರ್ಥ. ಮಿಕ್ಕ ವಾದಿಗಳ ಮತದಲ್ಲಿ (ಜ್ಞಾನವು ಹುಟ್ಟುತ್ತಲೂ ನಾಶವಾಗುತ್ತಲೂ) ಇರುವಂತೆ ಪರಮಾರ್ಥವನ್ನು ಬಲ್ಲವನ(ದೃಷ್ಟಿಯಲ್ಲಿ) ಜ್ಞಾನಕ್ಕೆ ಹುಟ್ಟುಹೊಂದುಗಳು ಇರುವದಿಲ್ಲವಷ್ಟೆ[4].

(ಭಾಷ್ಯ)

೩೪೯. ಲೌಕಿಕಾದೀನಾಂ ಕ್ರಮೇಣ ಜ್ಞೇಯತ್ವೇನ ನಿರ್ದೇಶಾತ್ ಅಸ್ತಿತ್ವಾಶಙ್ಕಾ ಪರಮಾರ್ಥತೋ ಮಾ ಭೂತ್ ಇತ್ಯಾಹ :-

(ಭಾಷ್ಯಾರ್ಥ)

ಲೌಕಿಕವೇ ಮುಂತಾದವುಗಳನ್ನು ಕ್ರಮಕ್ರಮವಾಗಿ ತಿಳಿಯಬೇಕೆಂದು ಹೇಳಿರುವದರಿಂದ (ಅವು) ನಿಜವಾಗಿಯೂ ಇರುವವು ಎಂಬ ಶಂಕೆಯು ಉಂಟಾಗದೆ ಇರಲೆಂದು (ಹೀಗೆಂದು) ಹೇಳಿರುತ್ತಾರೆ :-

1. ಇಲ್ಲಿಯೂ ಅರಿಯುವ ಕ್ರಮವನ್ನೇ ಹೇಳಿದೆ ; ಅವಸ್ಥೆಗಳ ಅನುಕ್ರಮವನ್ನಲ್ಲ ಎಂದರ್ಥ.

2. ತುರೀಯವನ್ನು 'ಪಾದ' ಎಂದು ಕರೆದಿರುವದು ಹೇಗೆಂಬುದನ್ನು ವಿವರಿಸುವ ಭಾ. ಭಾ. ೯ನ್ನು ನೋಡಿ.

3. ಅದಕ್ಕಿಂತ ಬೇರೆಯಾಗಿರುವ ಜ್ಞಾತೃವಾಗಿ ಅರಿಯುವದಿಲ್ಲ. ತುರೀಯರೂಪವನ್ನು ಹೊಸದಾಗಿ ಹೊಂದುವದೂ ಇಲ್ಲ. ನಾನು ಯಾವಾಗಲೂ ನಿರ್ವಿಶೇಷನಾದ ತುರೀಯನು ಎಂಬುದೇ ಜ್ಞಾನದ ಸ್ವರೂಪವು-ಎಂದು ಭಾವ. 4. ಏಕೆಂದರೆ ಈ ಜ್ಞಾನವು ಮಿಕ್ಕವಾದಿಗಳು ಹೇಳುವ ವೃತ್ತಿರೂಪಜ್ಞಾನವಲ್ಲ ; ಸ್ವರೂಪ ಜ್ಞಾನವು.

ಹೇಯಜ್ಞೇಯಾಪ್ಯಪಾಕ್ಯಾನಿ ವಿಜ್ಞೇಯಾನ್ಯಗ್ರ್ಯಾಣತಃ ।
ತೇಷಾಮನ್ಯತ್ರ ವಿಜ್ಞೇಯಾದುಪಲಮ್ಭಸ್ತ್ರಿಷು ಸ್ಪೃತಃ ॥೯೦॥

೯೦. ಹೇಯ, ಜ್ಞೇಯ, ಆಪ್ಯ, ಪಾಕ್ಯ-(ಇವು)ಗಳನ್ನು ಅಗ್ರ್ಯಾಣವಾಗಿ ಚೆನ್ನಾಗಿ ತಿಳಿದುಕೊಳ್ಳಬೇಕು. ಅವುಗಳಲ್ಲಿ ವಿಜ್ಞೇಯವನ್ನು ಬಿಟ್ಟು ಮಿಕ್ಕವು ಗಳಲ್ಲಿ ಉಪಲಂಭವು (ಇರುವಿಕೆ)ನ್ನುವರು.

(ಭಾಷ್ಯ)

೩೫೦. ಹೇಯಾನಿ ಚ ಲೌಕಿಕಾದೀನಿ ತ್ರೀಣಿ ಜಾಗರಿತಸ್ವಪ್ನಸುಷುಪ್ತಾನಿ ಆತ್ಮನಿ ಅಸತ್ತ್ವೇನ ರಜ್ವಾಂ ಸರ್ಪವತ್ ಹಾತವ್ಯಾನಿ ಇತ್ಯರ್ಥಃ । ಜ್ಞೇಯಮ್ ಇಹ ಚತುಷ್ಕೋಟಿ ವರ್ಜಿತಂ ಪರಮಾರ್ಥತತ್ತ್ವಮ್ । ಆಪ್ಯಾನಿ ಆಪ್ತವ್ಯಾನಿ ತ್ಯಕ್ತಬಾಹ್ಯೈಷಣಾತ್ರಯೇಣ ಭಿಕ್ಷುಣಾ ಪಾಣ್ಡಿತ್ಯಬಾಲ್ಯಮೌನಾಖ್ಯಾನಿ ಸಾಧನಾನಿ । ಪಾಕ್ಯಾನಿ ರಾಗದ್ವೇಷಮೋಹಾದಯೋ ದೋಷಾಃ ಕಷಾಯಾಖ್ಯಾನಿ ಪಕ್ತವ್ಯಾನಿ । ಸರ್ವಾಣಿ ಏತಾನಿ ಹೇಯಜ್ಞೇಯಾಪ್ಯ ಪಾಕ್ಯಾನಿ ವಿಜ್ಞೇಯಾಯ ಭಿಕ್ಷುಣಾ ಉಪಾಯತ್ವೇನ ಇತ್ಯರ್ಥಃ । ಅಗ್ರ್ಯಾಣತಃ ಪ್ರಥಮತಃ । ತೇಷಾಂ ಹೇಯಾದೀನಾಮ್ ಅನ್ಯತ್ರ ವಿಜ್ಞೇಯಾತ್ ಪರಮಾರ್ಥಸತ್ಯಂ ವಿಜ್ಞೇಯಂ ಬ್ರಹ್ಮ ಏಕಂ ವರ್ಜಯಿತ್ವಾ ಉಪಲಮ್ಭನಮ್ ಉಪಲಮ್ಭಃ ಅವಿದ್ಯಾಕಲ್ಪನಾ ಮಾತ್ರಮ್ । ಹೇಯಾಪ್ಯಪಾಕ್ಯೇಷು ತ್ರಿಷ್ವಪಿ ಸ್ಪೃತಃ ಬ್ರಹ್ಮವಿದ್ಭಿಃ । ನ ಪರಮಾರ್ಥ ಸತ್ಯತಾ ತ್ರಯಾಣಾಮ್ ಇತ್ಯರ್ಥಃ ॥

(ಭಾಷ್ಯಾರ್ಥ)

**ಹೇಯಗಳು** ಎಂದರೆ ಲೌಕಿಕವೇ ಮುಂತಾದ ಮೂರು, ಎಚ್ಚರಕನಸುನಿದ್ರೆ ಗಳು ; ಹಗ್ಗದಲ್ಲಿ ಹಾವು ಹೇಗೆ ಇಲ್ಲವೋ ಹಾಗೆ (ಇವು) ಆತ್ಮನಲ್ಲಿ ಇಲ್ಲದವು ಗಳೆಂದು ಬಿಡತಕ್ಕವುಗಳು[1] ಎಂದರ್ಥ. **ಜ್ಞೇಯವು** ಎಂದರೆ ಇಲ್ಲಿ ನಾಲ್ಕುಕೋಟಿ ಗಳೂ[2] ಇಲ್ಲದ ಪರಮಾರ್ಥತತ್ತ್ವವು. **ಆಪ್ಯಗಳು** ಎಂದರೆ ಹೊರಗಿನ ಏಷಣಾ ತ್ರಯವನ್ನು[3] ಬಿಟ್ಟಿರುವ ಭಿಕ್ಷುವು ಪಡೆಯಬೇಕಾಗಿರುವ ಪಾಂಡಿತ್ಯ, ಬಾಲ್ಯ,

---

1. ಆತ್ಮನಲ್ಲಿ ತೋರುವವಾದರೂ ಅವಸ್ಥೆಗಳು ತಮ್ಮ ಸ್ವರೂಪದಿಂದ ಪರಮಾರ್ಥವಲ್ಲ.
2. ೪-೦೩ ರಲ್ಲಿ ಹೇಳಿರುವ ಇದಾನೆ, ಇಲ್ಲ ಮುಂತಾದ ಅವಿದ್ಯಾಕಲ್ಪನೆಗಳು.
3. ಪುತ್ರೈಷಣಾ, ವಿತ್ತೈಷಣಾ, ಲೋಕೈಷಣಾ-ಎಂಬ ಮೂರು ಬಯಕೆಗಳು. ಬೃ. ೩-೫-೧.

ಮೌನ[1],-ಎಂಬ ಸಾಧನಗಳು. ಪಾಕ್ಯಗಳು ಎಂದರೆ ಪಕ್ವಗೊಳಿಸಿಕೊಳ್ಳಬೇಕಾದ ಕಷಾಯ ವೆಂಬ[2] ಹೆಸರಿನ ರಾಗ, ದ್ವೇಷ, ಮೋಹ-ಮುಂತಾದ ದೋಷಗಳು. ಈ ಹೇಯ ಜ್ಞೇಯಾಪ್ಯಪಾಕ್ಯಗಳೆಂಬವೆಲ್ಲವನ್ನೂ ಭಿಕ್ಷುವಾದವನು (ಪರಮಾರ್ಥಕ್ಕೆ) ಉಪಾಯ ವೆಂದು ತಿಳಿದುಕೊಳ್ಳಬೇಕು ಎಂದರ್ಥ. ಅಗ್ರ್ಯಾಣವಾಗಿ ಎಂದರೆ ಮೊದಲನೆಯ (ದಾರಿಯಾಗಿ[3]) ತಿಳಿದುಕೊಳ್ಳಬೇಕು. ಈ ಹೇಯವೇ ಮುಂತಾದವುಗಳಲ್ಲಿ ವಿಜ್ಞೇಯ ವನ್ನು ಬಿಟ್ಟು ಎಂದರೆ ಪರಮಾರ್ಥಸತ್ಯವಾದ ಬ್ರಹ್ಮವೊಂದನ್ನು ಬಿಟ್ಟು ಮಿಕ್ಕವುಗಳಲ್ಲಿ, ಹೇಯ, ಆಪ್ಯ, ಪಾಕ್ಯ-ಈ ಮೂರರಲ್ಲಿಯೂ ಉಪಲಂಭವು ಎಂದರೆ ಅರಿವು, ಬರಿಯ ಅವಿದ್ಯಾಕಲ್ಪನೆಯೇ[4] ಎಂದು ಬ್ರಹ್ಮಜ್ಞಾನಿಗಳು ಹೇಳುವರು. (ಇವು) ಮೂರೂ ಪರಮಾರ್ಥಸತ್ಯವಲ್ಲ ಎಂದರ್ಥ.

## ಉಪಸಂಹಾರ

ಪ್ರಕೃತ್ಯಾಕಾಶವಜ್ಞೇಯಾಃ ಸರ್ವೇ ಧರ್ಮಾ ಅನಾದಯಃ
ವಿದ್ಯತೇ ನ ಹಿ ನಾನಾತ್ವಂ ತೇಷಾಂ ಕ್ವಚನ ಕಿಂಚನ ॥೯೧॥

ಎಲ್ಲಾ ಧರ್ಮರೂ ಪ್ರಕೃತಿಯಿಂದ ಆಕಾಶದಂತೆ (ಇರುವರೆಂದೂ) ಆದಿ ಯಿಲ್ಲದವರೆಂದೂ ಅರಿಯಬೇಕು. ಅವರುಗಳಿಗೆ ನಾನಾತ್ವವೆಂಬುದು ಎಲ್ಲಿಯೂ ಒಂದಿಷ್ಟೂ ಇರುವದೇ ಇಲ್ಲ.

1. ಪಾಂಡಿತ್ಯವೆಂದರೆ ಆಚಾರ್ಯರಿಂದಲೂ ಶಾಸ್ತ್ರದಿಂದಲೂ ಆತ್ಮಜ್ಞಾನವನ್ನು ಪಡಯುವಿಕೆ ; ಬಾಲ್ಯವೆಂದರೆ ವಿಷಯದೃಷ್ಟಿಯನ್ನು ತೊಲಗಿಸುವ ಜ್ಞಾನಬಲವನ್ನುಳ್ಳವನಾಗಿರುವಿಕೆ, ಮೌನವೆಂದರೆ ಅನಾತ್ಮಪ್ರತ್ಯಯವನ್ನು ತೊಲಗಿಸಿಕೊಂಡದ್ದರ ಫಲವಾಗಿ ಉಂಟಾಗುವ ಆತ್ಮಾನುಸಂಧಾನವು' ಬೃ. ಭಾ. ೩-೫-೧ ನ್ನು ನೋಡಿ. ಪಾಂಡಿತ್ಯಬಾಲ್ಯಮೌನಗಳು ಜ್ಞಾನಿಯಾದ ಸಂನ್ಯಾಸಿಗೆ ವಿಧಿಸಿರುವ ಸಾಧನಗಳೆಂದು ಸೂ. ಭಾ. ೩-೪-೪೭ ರಲ್ಲಿ ಹೇಳಿದೆ. ಇವು ಶ್ರವಣ ಮನನನಿದಿಧ್ಯಾಸನಗಳೆಂದು ಅ॥ ಟೀಕೆ.

2. ಕಷಾಯವು ಕರ್ಮದಿಂದ ಪಕ್ವವಾದರೆ ಜ್ಞಾನವುಂಟಾಗುತ್ತದೆ-ಎಂದು ಭಾರತಾದಿ ಸ್ಮೃತಿ ವಾಕ್ಯಗಳಿವೆ.

3. ಮೊದಲು ಇವನ್ನು ಸಾಧನವಾಗಿ ಸ್ವೀಕರಿಸಿ ಜ್ಞಾನವನ್ನು ಸಂಪಾದಿಸಿಕೊಂಡು ಇವು ಪರಮಾರ್ಥವಲ್ಲವೆಂದು ನಿಶ್ಚಯಿಸಬೇಕು-ಎಂದರ್ಥ.

4. ಉಪೇಯವಾದ ವಿಜ್ಞೇಯದಂತೆ ಇವು ಪರಮಾರ್ಥವಲ್ಲ ಎಂದರ್ಥ ೩-೨೯ನೆಯ ಕಾರಿಕೆಯನ್ನು ನೋಡಿ.

(ಭಾಷ್ಯ)

೩೫೧. ಪರಮಾರ್ಥತಸ್ತು ಪ್ರಕೃತ್ಯಾ ಸ್ವಭಾವತಃ ಆಕಾಶವತ್ ಆಕಾಶತುಲ್ಯಾಃ ಸೂಕ್ಷ್ಮನಿರಞ್ಜನಸರ್ವಗತತ್ವೈಃ ಸರ್ವೇ ಧರ್ಮಾಃ ಆತ್ಮಾನಃ ಜ್ಞೇಯಾಃ ಮುಮುಕ್ಷುಭಿಃ ಅನಾದಯಃ ನಿತ್ಯಾಃ । ಬಹುವಚನಕೃತಭೇದಾಶಙ್ಕಾಂ ನಿರಾಕುರ್ವನ್ ಆಹ-ಕ್ವಚನ[1] ಕಿಂಚನ ಕಿಂಚಿತ್ ಅಣುಮಾತ್ರಮಪಿ ತೇಷಾಂ ನ ವಿದ್ಯತೇ ನಾನಾತ್ವಮ್ ಇತಿ ॥

(ಭಾಷ್ಯಾರ್ಥ)

ನಿಜವಾಗಿ ನೋಡುವರೆಗೂ ಎಲ್ಲಾ ಧರ್ಮರೂ ಆತ್ಮರೂ ಪ್ರಕೃತಿಯಿಂದ ಸ್ವಭಾವದಿಂದ[2] ಆಕಾಶದಂತೆ ಸೂಕ್ಷ್ಮವಾಗಿರುವದು, (ಮತ್ತೊಂದರ) ಅಂಟಿಲ್ಲದೆ ಇರುವದು, ಎಲ್ಲೆಲ್ಲಿಯೂ ವ್ಯಾಪಿಸಿರುವದು-(ಈ ಸಾಮಾನ್ಯಧರ್ಮಗಳಿಂದ) ಆಕಾಶಸಮಾನರಾಗಿರುವರು[3]. ಆದಿಯಿಲ್ಲದವರು, ನಿತ್ಯರು ಎಂದು ಮುಮುಕ್ಷುಗಳು ಅರಿಯಬೇಕು. ('ಧರ್ಮರು') ಎಂದು ಬಹುವಚನವನ್ನು (ಹೇಳಿದ್ದರಿಂದ) ಆಗುವ (ಆತ್ಮನಲ್ಲಿ) ಭೇದವುಂಟೆಂಬ ಶಂಕೆಯನ್ನು ತೊಲಗಿಸುವದಕ್ಕಾಗಿ "ಅವರುಗಳಿಗೆ ಎಲ್ಲಿಯೂ ಒಂದಿಷ್ಟೂ[4] ಅಣುಮಾತ್ರವೂ ನಾನಾತ್ವವೆಂಬುದು ಇರುವದೇ ಇಲ್ಲ" ಎಂದು ಹೇಳಿರುತ್ತಾರೆ.

(ಭಾಷ್ಯ)

೩೫೨. ಜ್ಞೇಯತಾಪಿ ಧರ್ಮಾಣಾಂ ಸಂವೃತ್ತ್ಯೈವ ನ ಪರಮಾರ್ಥತಃ ಇತ್ಯಾಹ-

(ಭಾಷ್ಯಾರ್ಥ)

ಧರ್ಮಾದಿಗಳನ್ನು ಅರಿಯಬೇಕೆನ್ನುವದೂ ಸಂವೃತಿಯಿಂದಲೇ, ಪರಮಾರ್ಥದಿಂದಲ್ಲ-ಎಂದು (ಈಗ) ಹೇಳುತ್ತಾರೆ :-

---

1. ಇದರ ಮುಂದೆ "ಕ್ವಚಿದಪಿ" ಎಂದು ಹೆಚ್ಚಾಗಿ ವಾ॥ ಆ॥

2. ಉಪಾಧಿನಿಮಿತ್ತದಿಂದ ಸಂಸಾರಿಗಳಾಗಿ ತೋರಿದರೂ ಸ್ವರೂಪದಿಂದ ಬ್ರಹ್ಮವೇ ಆಗಿರುತ್ತಾರೆ.

3. "ಆಕಾಶದಂತೆ ಸರ್ವಗತನೂ ನಿತ್ಯನೂ ಆಗಿರುವನು" ಎಂಬ ಶ್ರುತಿಯ ಸೂಚನೆ. ಆಕಾಶವನ್ನು ಕೂಡ ವ್ಯಾಪಿಸಿರುವ ಆತ್ಮನನ್ನು ಆಕಾಶಕ್ಕೆ ಹೋಲಿಸಿರುವದು. "ಸೂರ್ಯನು ಬಾಣದಂತೆ ವೇಗವಾಗಿ ಹೋಗುತ್ತಾನೆ" ಎಂಬಂತೆ ಲೋಕಸಿದ್ಧ ದೃಷ್ಟಾಂತವನ್ನವಲಂಬಿಸಿ ಎಂದು ತಿಳಿಯಬೇಕು. ಗೀ. ಭಾ. ೨-೨೭ (ಭೂ ಭಾ. ೨೬).

4. "ನೇಹ ನಾನಾಸ್ತಿ ಕಿಂಚನ" (ಕ. ೨-೨-೧೧) ಎಂಬ ಶ್ರುತಿಯ ಸೂಚನೆ. ಅವಿದ್ಯಾಕಲ್ಪಿತವಾದ ಉಪಾಧಿಯಿಂದಾದ ನಾನಾತ್ವವು ಸ್ವರೂಪಕ್ಕೆ ಸೇರಿದ್ದಲ್ಲವೆಂದು ಭಾವ.

ಆದಿಬುದ್ಧಾಃ ಪ್ರಕೃತ್ಯೈವ ಸರ್ವೇ ಧರ್ಮಾಃ ಸುನಿಶ್ಚಿತಾಃ ।
ಯಸ್ಯೈವಂ ಭವತಿ ಕ್ಷಾನ್ತಿಃ ಸೋಽಮೃತತ್ವಾಯ ಕಲ್ಪತೇ ॥೯೨॥

೯೨. ಎಲ್ಲಾ ಧರ್ಮರೂ ಪ್ರಕೃತಿಯಿಂದಲೇ ಆದಿಬುದ್ಧರು- ಎಂದು ಸುನಿಶ್ಚಿತರಾಗಿರುವರು. ಯಾವನಿಗೆ ಹೀಗೆ ಕ್ಷಾನ್ತಿಯಿರುವದೋ ಅವನು ಅಮೃತತ್ವಕ್ಕೆ ತಕ್ಕವನಾಗುವನು.

(ಭಾಷ್ಯ)

೩೫೩. ಯಸ್ಮಾತ್ ಆದೌ ಬುದ್ಧಾಃ ಆದಿಬುದ್ಧಾಃ ಪ್ರಕೃತ್ಯೈವ ಸ್ವಭಾವತ ಏವ ಯಥಾ ನಿತ್ಯಪ್ರಕಾಶಸ್ವರೂಪಃ ಸವಿತಾ, ಏವಂ ನಿತ್ಯಬೋಧಸ್ವರೂಪಾಃ ಇತ್ಯರ್ಥಃ ಸರ್ವೇ ಧರ್ಮಾಃ ಸರ್ವೇ ಆತ್ಮಾನಃ (ಸುನಿಶ್ಚಿತಾಃ)[1] । ನ ಚ ತೇಷಾಂ ನಿಶ್ಚಯಃ ಕರ್ತವ್ಯಃ । ನಿತ್ಯನಿಶ್ಚಿತಸ್ವರೂಪಾ ಇತ್ಯರ್ಥಃ । ನ ಸನ್ದಿಹ್ಯಮಾನಸ್ವರೂಪಾ ಏವಂ ನೈವಂ ವಾ[2] ಇತಿ । ಯಸ್ಯ ಮುಮುಕ್ಷೋಃ ಏವಂ ಯಥೋಕ್ತಪ್ರಕಾರೇಣ ಸರ್ವದಾ ಬೋಧನಿಶ್ಚಯನಿರಪೇಕ್ಷತಾ ಆತ್ಮಾರ್ಥಂ ಪರಾರ್ಥಂ ವಾ ಯಥಾ ಸವಿತಾ ನಿತ್ಯಂ ಪ್ರಕಾಶಾನ್ತರನಿರಪೇಕ್ಷಃ ಸ್ವಾರ್ಥಂ ಪರಾರ್ಥಂ ವಾ[3] ಇತ್ಯೇವಂ ಭವತಿ ಕ್ಷಾನ್ತಿಃ ಬೋಧ ಕರ್ತವ್ಯತಾನಿರಪೇಕ್ಷತಾ ಸರ್ವದಾ ಸ್ವಾತ್ಮನಿ ಸಃ ಅಮೃತತ್ವಾಯ ಅಮೃತಭಾವಾಯ ಕಲ್ಪತೇ ಮೋಕ್ಷಾಯ ಸಮರ್ಥೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಏಕೆಂದರೆ ಮೊದಲೇ ಬುದ್ಧರಾಗಿರುವರು, (ಆದ್ದರಿಂದ) ಆದಿಬುದ್ಧರು. ಪ್ರಕೃತಿಯಿಂದಲೇ ಸ್ವಭಾವದಿಂದಲೇ ; ಸೂರ್ಯನು ಹೇಗೆ ನಿತ್ಯಪ್ರಕಾಶಸ್ವರೂಪನೋ ಹಾಗೆ ಯಾವಾಗಲೂ ಪ್ರಕಾಶದ ಸ್ವರೂಪರಾಗಿಯೇ ಇರುವರು[4] ಎಂದರ್ಥ. ಎಲ್ಲಾ ಧರ್ಮರೂ ಎಲ್ಲಾ ಆತ್ಮರೂ (ಆದಿಬುದ್ಧರು) ಮತ್ತು ಸುನಿಶ್ಚಿತರು[4]. ಅವರನ್ನು ನಿಶ್ಚಯಮಾಡತಕ್ಕದ್ದು (ಏನೂ) ಇರುವದಿಲ್ಲ ; ಯಾವಾಗಲೂ ನಿಶ್ಚಯಮಾಡಲ್ಪಟ್ಟ ಸ್ವರೂಪವುಳ್ಳವರೇ ; ಹೀಗೊ, ಹೀಗಲ್ಲವೊ ?-ಎಂದು ಸಂದೇಹವಾಗುವ

---

1. ಈ ಮಾತು ಅಚ್ಚಿನ ಪುಸ್ತಕದಲ್ಲಿ ಬಿಟ್ಟುಹೋಗಿರುತ್ತದೆ.
2. 'ಚ' ಆ ॥
3. 'ಚ' ಆ ॥
4. ಮೊದಲು ಅಜ್ಞಾತರಾಗಿದ್ದು ಆಮೇಲೆ ಜ್ಞಾತರಾಗುವವರಲ್ಲ ; ಸೂರ್ಯನು ಮೊದಲು ಕಾಣದ ಸ್ವಭಾವದವನಾಗಿದ್ದು ಆಮೇಲೆ ಕಾಣಬರುವ ಸ್ವಭಾವವನ್ನು ಹೇಗೆ ಪಡೆಯುವದಿಲ್ಲವೋ ಹಾಗೆ ಎಂದು ದೃಷ್ಟಾಂತದ ಅಭಿಪ್ರಾಯ.

ಸ್ವರೂಪದವರಲ್ಲ[1] ಎಂದರ್ಥ. ಯಾವ ಮುಮುಕ್ಷುವಿಗೆ ಹೀಗೆ ಮೇಲೆ ಹೇಳಿದ ರೀತಿಯಿಂದ ಯಾವಾಗಲೂ ಜ್ಞಾನ (ರೂಪವಾದ) ನಿಶ್ಚಯವು ತನಗಾಗಿ ಅಥವಾ ಮತ್ತೊಬ್ಬರಿಗಾಗಿ ಬೇಕಿರುವದಿಲ್ಲವೋ, ಹೇಗೆ ಸೂರ್ಯನು ತನಗಾಗಿ ಅಥವಾ ಪರರಿಗಾಗಿ ಮತ್ತೊಂದು ಬೆಳಕಿನ ಬಯಕೆ ಇಲ್ಲದೆ ಇರುವನೋ ಹಾಗೆ, (ಯಾವನಿಗೆ) ತನ್ನ ಆತ್ಮನಲ್ಲಿ ಕ್ಷಾಂತಿಯು ಜ್ಞಾನವನ್ನು ಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ಯಾವಾಗಲೂ ಇರುವ ದಿಲ್ಲವೋ[2] ಅವನು ಅಮೃತತ್ವಕ್ಕೆ ಅಮೃತಭಾವಕ್ಕೆ ತಕ್ಕವನಾಗುವನು, ಮೋಕ್ಷ(ವನ್ನು ಪಡೆಯುವದ)ಕ್ಕೆ ಸಮರ್ಥನಾಗುವನು ಎಂದರ್ಥ.

(ಭಾಷ್ಯ)

೩೫೪. ತಥಾ ನಾಪಿ ಶಾನ್ತಿಕರ್ತವ್ಯತಾ ಆತ್ಮನಿ ಇತ್ಯಾಹ :-

(ಭಾಷ್ಯಾರ್ಥ)

ಹೀಗೆಯೇ ಆತ್ಮನಲ್ಲಿ ಶಾಂತಿಯನ್ನುಂಟುಮಾಡಿಕೊಳ್ಳಬೇಕಾದದ್ದೂ ಇರುವದಿಲ್ಲ[3]-ಎಂದು (ಈ ಕಾರಿಕೆಯಲ್ಲಿ) ಹೇಳುತ್ತಾರೆ :-

ಆದಿಶಾನ್ತಾ ಹ್ಯನುತ್ಪನ್ನಾಃ ಪ್ರಕೃತ್ಯೈವ ಸುನಿರ್ವೃತಾಃ ।
ಸರ್ವೇ ಧರ್ಮಾಃ ಸಮಾಽಭಿನ್ನಾ ಅಜಂ ಸಾಮ್ಯಂ ವಿಶಾರದಮ್ ॥೯೩॥

೯೩. ಎಲ್ಲಾ ಧರ್ಮರೂ ಆದಿಶಾಂತರು. ಹುಟ್ಟಿದೆ ಇರುವವರು. ಸ್ವಭಾವದಿಂದಲೇ ಸುನಿರ್ವೃತರಾಗಿರುತ್ತಾರೆ. ಸಮರಾಗಿ ಅಭಿನ್ನರಾಗಿರುವರು ; ಹುಟ್ಟಿಲ್ಲದೆ, ಸಾಮಾನ್ಯವಾಗಿ ವಿಶಾರದವಾಗಿರುವದು.

---

1. ಆತ್ಮನನ್ನು ಅರಿಯಬೇಕು ಎಂದು ೭ನೆಯ ಮಂತ್ರದಲ್ಲಿ ಹೇಳಿತ್ತಷ್ಟೆ ; ಆತ್ಮನು ನಿತ್ಯ ಜ್ಞಾತನು ಎಂದು ಅರಿಯುವದನ್ನೇ ಹೀಗೆಂದು ಹೇಳಿದ ಎಂದು ಭಾವ.

2. ಸೂರ್ಯನಿಗೆ ತಾನು ಬೆಳಗುವದಕ್ಕಾಗಲಿ ಮತ್ತೊಂದನ್ನು ಬೆಳಗುವದಕ್ಕಾಗಲಿ ತನ್ನ ಸ್ವರೂಪಕ್ಕಿಂತ ಬೇರೆಯಾದ ಬೆಳಕು ಬೇಡದಿರುವಂತೆ ಆತ್ಮನಿಗೆ ತತ್ತ್ವವನ್ನು ಅರಿಯುವದಕ್ಕೆ ಅಥವಾ ಮತ್ತೊಬ್ಬರಿಗೆ ತತ್ತ್ವವನ್ನು ಅರುಹುವದಕ್ಕೆ ಜ್ಞಾನವೇನೂ ಬೇಕಾಗಿರುವದಿಲ್ಲ. ಹೀಗೆಂದು ಅರಿತುಕೊಳ್ಳವದೇ ಜ್ಞಾನದ ಉತ್ಪತ್ತಿಯು ಎಂದು ಭಾವ. ಜ್ಞಾನವಿಷಯತ್ವದಂತೆ ಜ್ಞಾನಾಶ್ರಯತ್ವವೂ ವ್ಯವಹಾರಿಕವೇ. ಆತ್ಮನು ಮೊದಲು ಅಜ್ಞನಾಗಿದ್ದು ಆಮೇಲೆ ತತ್ತ್ವವನ್ನು ಅರಿತುಕೊಳ್ಳುವನೆಂಬುದೂ ಪರಮಾರ್ಥವಲ್ಲ.

3. ಆತ್ಮನು ಯಾವಾಗಲೂ ಶಾಂತರೂಪನಾಗಿಯೇ ಇರುವನು ಎಂದು ೭ನೆಯ ಮಂತ್ರದಲ್ಲಿರುವ "ಶಾಂತಮ್" ಎಂಬುದರ ಅರ್ಥವನ್ನು ಹೇಳಿದಂತಾಯಿತು.

(ಭಾಷ್ಯ)

೩೫೫. ಯಸ್ಮಾತ್ ಆದಿಶಾನ್ತಾಃ ನಿತ್ಯಮೇವ ಶಾನ್ತಾಃ ಅನುತ್ಪನ್ನಾಃ ಅಜಾಶ್ಚ ಪ್ರಕೃತ್ಯೈವ ಸುನಿರ್ವೃತಾಃ ಸುಷ್ಠು ಉಪರತಸ್ವಭಾವಾಃ ನಿತ್ಯಮುಕ್ತಸ್ವಭಾವಾಃ ಇತ್ಯರ್ಥಃ । ಸರ್ವೇ ಧರ್ಮಾಃ ಸಮಾಶ್ಚ ಅಭಿನ್ನಾಶ್ಚ ಸಮಾಭಿನ್ನಾಃ । ಅಜಂ ಸಾಮ್ಯಂ ವಿಶಾರದಂ ವಿಶುದ್ಧಮ್ ಆತ್ಮ ತತ್ತ್ವಮ್ ಯಸ್ಮಾತ್ ತಸ್ಮಾತ್ ಶಾನ್ತಿಃ ಮೋಕ್ಷೋ ವಾ ನಾಸ್ತಿ ಕರ್ತವ್ಯಃ ಇತ್ಯರ್ಥಃ । ನ ಹಿ ನಿತ್ಯೈಕಸ್ವಭಾವಸ್ಯ ಕೃತಂ ಕಿಂಚಿದರ್ಥವತ್ ಸ್ಯಾತ್ ॥

(ಭಾಷ್ಯಾರ್ಥ)

ಏಕೆಂದರೆ ಎಲ್ಲಾ ಧರ್ಮರೂ ಆದಿಶಾಂತರು, ಯಾವಾಗಲೂ ಶಾಂತರಾಗಿಯೇ ಇರುತ್ತಾರೆ ; ಹುಟ್ಟದೆ ಇರುವವರು ಎಂದರೆ ಜನ್ಮರಹಿತರಾಗಿಯೇ ಇರುತ್ತಾರೆ ; ಸ್ವಭಾವದಿಂದಲೇ ಸುನಿರ್ವೃತರಾಗಿರುತ್ತಾರೆ ; ಸಂಪೂರ್ಣವಾಗಿ ಉಪರತಿಯನ್ನು ಹೊಂದಿರುವ ಸ್ವಭಾವದವರಾಗಿರುತ್ತಾರೆ ಎಂದರ್ಥ[1]. ನಿತ್ಯಮುಕ್ತಸ್ವಭಾವದವರು ಎಂದರ್ಥ. ಸಮರಾಗಿಯೂ ಭೇದವಿಲ್ಲದವರೂ[2] ಆಗಿರುವದರಿಂದ ಸಮಾಭಿನ್ನರು.

ಆತ್ಮತತ್ತ್ವವು[3] ಹುಟ್ಟಿಲ್ಲದೆ, ಒಂದೇ ಸಮವಾಗಿ, ವಿಶಾರದವಾಗಿ ಎಂದರೆ ವಿಶುದ್ಧವಾಗಿರುವದಷ್ಟೆ, ಆದ್ದರಿಂದ ಶಾಂತಿಯಾಗಲಿ ಮೋಕ್ಷವಾಗಲಿ (ಹೊಸದಾಗಿ) ಮಾಡಿಕೊಳ್ಳತಕ್ಕದ್ದು (ಯಾವದೂ) ಇರುವದಿಲ್ಲ ಎಂದರ್ಥ. ಏಕೆಂದರೆ ಯಾವಾಗಲೂ ಒಂದೇ ಸ್ವಭಾವದ್ದಾಗಿರುವ (ವಸ್ತುವಿಗೆ) ಏನನ್ನು (ಹೊಸದಾಗಿ) ಮಾಡಿದರೂ (ಅದರಿಂದ) ಸಪ್ರಯೋಜನವಾಗಲಾರದು.

(ಭಾಷ್ಯ)

೩೫೬. ಯೇ ಯಥೋಕ್ತಂ ಪರಮಾರ್ಥತತ್ತ್ವಂ ಪ್ರತಿಪನ್ನಾಃ ತೇ ಏವ ಅಕೃಪಣಾಃ ಲೋಕೇ, ಕೃಪಣಾ ಏವ ಅನ್ಯೇ[4] ಇತ್ಯಾಹ-

1. "ಶಾಂತಂ ಶಿವಮ್" ಎಂಬ ವಿಶೇಷಣಗಳ ಅರ್ಥವನ್ನು ವಿವರಿಸಿದಂತೆ ಆಯಿತು. ಆತ್ಮನು ನಿತ್ಯಶಾಂತನು, ನಿತ್ಯಾನಂದನು. 2. ಧರ್ಮಾಃ ಎಂಬ ಬಹುವಚನದಿಂದ ಭಿನ್ನಸ್ವಭಾವವುಳ್ಳ ಅನೇಕಾತ್ಮರಿರುವರೆಂದು ತಿಳಿಯಬಾರದು ಎಂದು ಭಾವ. 3. ಆತ್ಮತತ್ತ್ವವು ಉತ್ಪಾದ್ಯ, ವಿಕಾರ್ಯ, ಸಂಸ್ಕಾರ್ಯ, ಆಪ್ಯ - ಎಂಬ ಕರ್ಮಕಾರ್ಯವಲ್ಲ ; ಆದ್ದರಿಂದ ಅದರಲ್ಲಿ ಹೊಸದಾಗಿ ಪ್ರಯತ್ನವನ್ನು ಮಾಡಿ ಏನನ್ನೂ ಉಂಟುಮಾಡಿಕೊಳ್ಳುವದಾಗುವದಿಲ್ಲ. ಆದ್ದರಿಂದ ಅದನ್ನು ಇದ್ದಂತೆ ಅರಿತುಕೊಳ್ಳಬೇಕೇ ಹೊರತು ಮತ್ತೇನೂ ಯತ್ನವು ಬೇಕಿಲ್ಲ ಎಂದು ಭಾವ. ಸೂ.ಭಾ. ೧-೧-೪, ಬೃ. ಭಾ. ೩-೩-೧, ತೈ. ಭಾ. ೧-೧೨, ಭಾ. ಭಾ. ೭೪ ರಲ್ಲಿ ಈ ಅಭಿಪ್ರಾಯವಿದೆ.

4. "ಕೃಪಾಣಾಸ್ತು ಅನ್ಯೇ" ವಾ।। 'ಕೇ ಅನ್ಯೇ ? ಕೃಪಣಾ ಏವ' ಎಂಬ ಪಾಠವೂ ಉಂಟು.

(ಭಾವಾರ್ಥ)

ಯಾರು ಮೇಲೆ ಹೇಳಿರುವ ಪರಮಾರ್ಥತತ್ತ್ವವನ್ನು ಅರಿತುಕೊಂಡಿರುವರೋ ಅವರೇ ಈ ಲೋಕದಲ್ಲಿ ಕೃಪಣರಲ್ಲದವರು, ಮಿಕ್ಕವರು ಕೃಪಣರೇ ಎಂದು (ಈಗ) ಹೇಳುತ್ತಾರೆ :-

ವೈಶಾರದ್ಯಂ ತು ವೈ ನಾಸ್ತಿ ಭೇದೇ ವಿಚರತಾಂ ಸದಾ ।
ಭೇದನಿಮ್ನಾಃ ಪೃಥಗ್ವಾದಾಸ್ತಸ್ಮಾತ್ತೇ ಕೃಪಣಾಃ ಸ್ಮೃತಾಃ ॥೯೪॥

೯೪. ಆದರೆ ಯಾವಾಗಲೂ ಭೇದದಲ್ಲಿ ಸಂಚರಿಸುತ್ತಿರುವವರಿಗೆ ವೈಶಾರದ್ಯವೆಂಬುದಿರುವುದಿಲ್ಲ. ಬೇರೆ ಎಂಬ ವಾದಿಗಳು ಭೇದದ ತಗ್ಗುಳ್ಳವರು ; ಆದ್ದರಿಂದ ಅವರು ಕೃಪಣರೆನಿಸುವರು.

(ಭಾಷ್ಯ)

ಯಸ್ಮಾತ್ ಭೇದನಿಮ್ನಾಃ ಭೇದಾನುಯಾಯಿನಃ ಸಂಸಾರಾನುಗಾಃ ಇತ್ಯರ್ಥಃ । ಕೇ ? ಪೃಥಗ್ವಾದಾಃ । ಪೃಥಕ್ ನಾನಾ ವಸ್ತು ಇತ್ಯೇವಂ (ವಾದಃ) ವದನಂ ಯೇಷಾಂ ತೇ ಪೃಥಗ್ವಾದಾಃ ದ್ವೈತಿನಃ ಇತ್ಯರ್ಥಃ । ತಸ್ಮಾತ್ ತೇ ಕೃಪಣಾಃ ಕ್ಷುದ್ರಾಃ ಸ್ಮೃತಾಃ ಯಸ್ಮಾತ್ ವೈಶಾರದ್ಯಂ ವಿಶುದ್ಧಿಃ (ತು ವೈ[1]*) ನಾಸ್ತಿ ತೇಷಾಂ ಭೇದೇ ವಿಚಾರತಾಂ (ಸದಾ)* ದ್ವೈತಮಾರ್ಗೇ ಅವಿದ್ಯಾಪರಿಕಲ್ಪಿತೇ ಸರ್ವದಾ ವರ್ತಮಾನಾನಾಮ್ ಇತ್ಯರ್ಥಃ । ಅತಃ ಯುಕ್ತಮೇವ ತೇಷಾಂ ಕಾರ್ಪಣ್ಯಮ್ ಇತ್ಯಭಿಪ್ರಾಯಃ ॥

(ಭಾವಾರ್ಥ)

ಭೇದವೆಂಬ ತಗ್ಗುಳ್ಳವರು ಎಂದರೆ ಭೇದವನ್ನು ಹಿಂಬಾಲಿಸುವವರು, ಸಂಸಾರವನ್ನು ಅನುಸರಿಸುವವರು ಎಂದರ್ಥ. ಯಾರು ? (ಎಂದರೆ) ಪೃಥಗ್ವಾದಿಗಳು. ವಸ್ತು ಪೃಥಕ್ಕಾಗಿರುತ್ತದೆ, ಬೇರೆಬೇರೆಯಾಗಿರುತ್ತದೆ-ಎಂಬ ವಾದವು ಹೇಳುವಿಕೆಯು ಯಾರಿಗೋ ಅವರು ಪೃಥಗ್ವಾದಿಗಳು. ದ್ವೈತಿಗಳು ಎಂದರ್ಥ. (ದ್ವೈತಿಗಳು ಸಂಸಾರವನ್ನು ಅನುಸರಿಸುವರಷ್ಟೆ.) ಆದ್ದರಿಂದ ಅವರು ಕೃಪಣರು, ಅಲ್ಪರು ಎನಿಸಿಕೊಳ್ಳುವರು. ಏಕೆಂದರೆ ಯಾವಾಗಲೂ ಭೇದದಲ್ಲಿ ಓಡಾಡುತ್ತಿರುವ, ಎಂದರೆ ಅವಿದ್ಯಾಕಲ್ಪಿತವಾದ[2] ದ್ವೈತಮಾರ್ಗದಲ್ಲಿಯೇ ಯಾವಾಗಲೂ ಇರುವ (ಆ ವಾದಿಗಳಿಗೆ)

---

1. ನಕ್ಷತ್ರ ಚಿಹ್ನೆ ಹಾಕಿರುವ ಮಾತುಗಳು ಅಚ್ಚಿನ ಪಾಠದಲ್ಲಿ ಬಿಟ್ಟುಹೋಗಿವೆ.
2. ದ್ವೈತವೂ ಸಂಸಾರವೂ ಅವಿದ್ಯಾಕಲ್ಪಿತವಾಗಿರುತ್ತದೆ.

ಎಂದರ್ಥ ; (ಅವರಿಗೆ) ವೈಶಾರದ್ಯವು, ವಿಶುದ್ಧಿಯು ಇರುವದಿಲ್ಲ[1]. ಆದ್ದರಿಂದ ಅವರು ಕೃಪಣರು ಎಂಬುದು ಯುಕ್ತವೇ[2] ಎಂದು ಅಭಿಪ್ರಾಯ.

(ಭಾಷ್ಯ)

೩೫೮. ಯದಿದಂ ಪರಮಾರ್ಥತತ್ತ್ವಮ್ (ತತ್) ಅಮಹಾತ್ಮಭಿಃ ಅಪಣ್ಡಿತೈಃ ವೇದಾನ್ತಬಹಿಷ್ಕೈಃ ಕ್ಷುದ್ರೈಃ ಅಲ್ಪಪ್ರಜ್ಞೈಃ ಅನವಗ್ರಾಹ್ಯಮ್ ಇತ್ಯಾಹ :-

(ಭಾಷ್ಯಾರ್ಥ)

ಈ ಪರಮಾರ್ಥತತ್ತ್ವವಿದೆಯಲ್ಲ, (ಅದನ್ನು) ಮಹಾತ್ಮರಲ್ಲದ, ಪಂಡಿತರಲ್ಲದ ವೇದಾಂತಕ್ಕೆ ಹೊರಚ್ಚಾಗಿರುವ[3] ಕ್ಷುದ್ರರಾದ ಅಲ್ಪಪ್ರಜ್ಞರು[4] ತಿಳಿದುಕೊಳ್ಳಲಾರರು ಎಂದು ಹೇಳುತ್ತಾರೆ :-

ಅಜೇ ಸಾಮ್ಯೇ ತು ಯೇ ಕೇಚಿದ್ಪವಿಷ್ಯನ್ತಿ ಸುನಿಶ್ಚಿತಾಃ ।
ತೇ ಹಿ ಲೋಕೇ ಮಹಾಜ್ಞಾನಾಸ್ತಚ್ಚ ಲೋಕೋ ನ ಗಾಹತೇ ॥೯೫॥

೯೫. ಅಜವಾಗಿ ಸಾಮ್ಯವಾಗಿರುವ (ತತ್ತ್ವ)ದಲ್ಲಿ ಯಾರೇ ಆಗಲಿ ಸರಿಯಾದ ನಿಶ್ಚಯವನ್ನು ಪಡೆದರೆಂದರೆ ಅವರೇ ಲೋಕದಲ್ಲಿ ಮಹಾಜ್ಞಾನಿಗಳು. ಅದನ್ನು ಲೋಕವು ಅರಿಯದು.

(ಭಾಷ್ಯ)

೩೫೯. ಅಜೇ ಸಾಮ್ಯೇ ಪರಮಾರ್ಥತತ್ತ್ವೇ ಏವಮೇವೇತಿ ಯೇ ಕೇಚಿತ್ ಸ್ತ್ರ್ಯಾದಯೋಽಪಿ ಸುನಿಶ್ಚಿತಾ ಭವಿಷ್ಯನ್ತಿ ಚೇತ್ ತ ಏವ ಹಿ ಲೋಕೇ ಮಹಾಜ್ಞಾನಾಃ ನಿರತಿಶಯತತ್ತ್ವವಿಷಯಜ್ಞಾನಾ ಇತ್ಯರ್ಥಃ । ತಚ್ಚ ತೇಷಾಂ ವರ್ತ್ಮ ತೇಷಾಂ ವಿದಿತಂ ಪರಮಾರ್ಥತತ್ತ್ವಂ ಸಾಮಾನ್ಯಬುದ್ಧಿಃ ಅನ್ಯೋ ಲೋಕಃ ನ ಗಾಹತೇ ನಾವತರತಿ ನ ವಿಷಯೀಕರೋತಿ ಇತ್ಯರ್ಥಃ ॥

1. ನಾವು ಅಶುದ್ಧರು, ಸಂಸಾರಿಗಳು ಎಂದು ಅಜ್ಞರು ತಿಳಿದುಕೊಂಡಿರುತ್ತಾರೆ.

2. ಬೃ. ೩-೮-೧೦ರ ಸೂಚನೆ.

3. ಉಪನಿಷತ್ತುಗಳಲ್ಲಿ ಹೇಳಿರುವ ಜ್ಞಾನಕ್ಕೆ ಹೊರಚ್ಚಾಗಿರುವ ಎಂದರ್ಥ.

4. ಎಲ್ಲಾ ಅವಸ್ಥೆಗಳ ಅನುಭವವನ್ನೂ ವಿಚಾರಿಸಿ ಪೂರ್ಣವಾದ ಆತ್ಮತತ್ತ್ವವನ್ನು ಮನಗಾಣಲಾರದವರು, ಬರಿಯ ವ್ಯವಹಾರಜ್ಞಾನದಿಂದ ತೃಪ್ತರಾಗಿರುವವರು ಎಂದರ್ಥ.

ಸರ್ವಭೂತಾತ್ಮಭೂತಸ್ಯ ಸರ್ವಭೂತಹಿತಸ್ಯ ಚ[1] ।
ದೇವಾಪಿ[2] ಮಾರ್ಗೇ ಮುಹ್ಯನ್ತ್ಯಪದಸ್ಯ ಪದೈಷಿಣಃ ॥ (೨೩೯-೨೩)

ಶಕುನೀನಾಮಿವಾಕಾಶೇ ಗತಿರ್ನ್ಯಾಯೋಪಲಭ್ಯತೇ[3] ॥ (?)
ಇತ್ಯಾದಿ ಸ್ಮರಣಾತ್ ॥

(ಭಾಷ್ಯಾರ್ಥ)

ಹುಟ್ಟಿಲ್ಲದ ಒಂದೇ ಸಮನಾಗಿರುವ ಪರಮಾರ್ಥತತ್ತ್ವದ ವಿಷಯದಲ್ಲಿ ಹೀಗೆಯೇ ಸರಿ ಎಂದು ಯಾರೇ ಆಗಲಿ-ಹೆಂಗಸರು ಮುಂತಾದವರು ಕೂಡ-[4] ಸರಿಯಾದ ನಿಶ್ಚಯವನ್ನು ಪಡೆದರೆಂದರೆ, ಲೋಕದಲ್ಲಿ ಅವರೇ ಮಹಾಜ್ಞಾನಿಗಳು, ತತ್ತ್ವವಿಷಯದಲ್ಲಿ ಇನ್ನಿಲ್ಲವೆಂಬಷ್ಟು, ಜ್ಞಾನವನ್ನು ಪಡೆದುಕೊಂಡವರು ಎಂದರ್ಥ. ಅದನ್ನು ಅವರ ಮಾರ್ಗವನ್ನು, ಅವರಿಗೆ ತಿಳಿದಿರುವ ಪರಮಾರ್ಥತತ್ತ್ವವನ್ನು, ಸಾಮಾನ್ಯಬುದ್ಧಿಯುಳ್ಳ ಉಳಿದ ಜನವು ಅರಿಯುವುದು (ಅಲ್ಲಿಯವರೆಗೆ) ಇಳಿಯಲಾರದು (ಅದನ್ನು) ವಿಷಯ ಮಾಡಿಕೊಳ್ಳಲಾರದು-ಎಂದರ್ಥ.

"ಸರ್ವಪ್ರಾಣಿಗಳಿಗೂ ಆತ್ಮನಾಗಿರುವ ಸರ್ವಪ್ರಾಣಿಗಳಿಗೂ ಹಿತವನ್ನು ಮಾಡುತ್ತಿರುವ ಹೆಚ್ಚಿನ ಗುರುತಿಲ್ಲದ (ಜ್ಞಾನಿಯು) ಹೆಜ್ಜೆಯ ಗುರುತನ್ನು ಹುಡುಕುತ್ತಿರುವ ದೇವತೆಗಳುಕೂಡ ಮೋಹಗೊಳ್ಳುವರು." (ಮೋ. ಧ. ೩೩೯-೨೩೧) "ಆಕಾಶದಲ್ಲಿ ಹಕ್ಕಿಗಳ (ಹಾದಿಯ ಗುರುತು ಸಿಕ್ಕದಿರುವಂತೆ) ಅವರ ದಾರಿಯ ಗುರುತು ಕಾಣುವಲ್ಲ" (?)-ಎಂಬುದೇ ಮುಂತಾದ ಸ್ಮೃತಿಯು ಇದಕ್ಕೆ ಪ್ರಮಾಣವು.

(ಭಾಷ್ಯ)

೩೬೦ ಕಥಂ ಮಹಾಜ್ಞಾನಿತ್ವಮ್ ಇತಿ ? ಆಹ :-

(ಭಾಷ್ಯಾರ್ಥ)

ಅವರು ಮಹಾಜ್ಞಾನಿಗಳೆಂಬುದು ಹೇಗೆ ? ಎಂದರೆ ಹೇಳುತ್ತಾರೆ :-

---

1 ಸಮೈಕಾರ್ಥಂ ಪ್ರಪಶ್ಯತಃ" (ಸಮವಾದ ಒಂದೇ ವಸ್ತುವನ್ನು ಕಾಣುತ್ತಿರುವ) ವಾ॥

2 "ದೇವಾ ಅಪಿ" ಎಂದು ಅಚ್ಚಿನ ಪಾಠ ; ನಾವು ಬರೆದಿರುವದು ಭಾರತದ ಪಾಠ.

3 ಶಾಂತಿ. ಅಪಧರ್ಮ ೧೭೦-೨೮, ಮೋ. ಧ. ೧೪೧-೧೯, ೨೩೯-೨೪ ಮುಂತಾ ಭಾರತಶ್ಲೋಕಗಳಲ್ಲಿ ಈ ಅಭಿಪ್ರಾಯವಿದೆ. ಈ ಅನುಪೂರ್ವಿಯ ಶ್ಲೋಕವು ನಮಗೆ ಸಿಕ್ಕಿಲ್ಲ.

4 ವೇದಾಧಿಕಾರವಿಲ್ಲದ ಶೂದ್ರಾದಿಗಳು ಕೂಡ ಇಲ್ಲಿ ಹೇಳಿರುವ ಕ್ರಮದಲ್ಲಿ ವಿಚಾರ ಮಾಡಿದರೆ ತತ್ತ್ವವನ್ನು ಅರಿಯಬಲ್ಲರು ಅವರೇ ಮಹಾಜ್ಞಾನಿಗಳು.

ಅಜೇಷ್ವಜಮಸಂಕ್ರಾನ್ತಂ ಧರ್ಮೇಷು ಜ್ಞಾನಮಿಷ್ಯತೇ ।
ಯತೋ ನ ಕ್ರಮತೇ ಜ್ಞಾನಮಸಙ್ಗಂ ತೇನ ಕೀರ್ತಿತಮ್ ॥೯೬॥

೯೬. ಅಜರಾದ ಧರ್ಮರುಗಳಲ್ಲಿ ಜ್ಞಾನವು ಅಜವಾಗಿ ಅಸಂಕ್ರಾಂತವಾಗಿರುವದು ಎನಿಸಿಕೊಂಡಿರುವದು. ಜ್ಞಾನವು ಮತ್ತೊಂದುಕಡೆಗೆ ಹೋಗದೆ ಇರುವದಷ್ಟೆ, ಅದರಿಂದ ಅಸಂಗವು ಎಂದು ಹೇಳಲ್ಪಟ್ಟಿದೆ.

(ಭಾಷ್ಯ)

೩೬೧. ಅಜೇಷು ಅನುತ್ಪನ್ನೇಷು ಅಚಲೇಷು ಧರ್ಮೇಷು ಆತ್ಮಸು ಅಜಮ್ ಅಚಲಂ ಚ ಜ್ಞಾನಮ್ ಇಷ್ಯತೇ ಸವಿತರೀವ ಔಷ್ಣ್ಯಂ ಪ್ರಕಾಶಶ್ಚ ಯತಃ, ತಸ್ಮಾತ್ ಅಸಜ್ಯಾನ್ತಮ್ ಅರ್ಥಾನ್ತರೇ ಜ್ಞಾನಮ್ ಅಜಮ್ ಇಷ್ಯತೇ । ಯಸ್ಮಾತ್ ನ ಕ್ರಮತೇ ಅರ್ಥಾನ್ತರೇ ಜ್ಞಾನಮ್, ತೇನ ಕಾರಣೇನ ಅಸಙ್ಗಂ ತತ್ ಕೀರ್ತಿತಮ್ ಆಕಾಶಕಲ್ಪಮ್ ಇತ್ಯುಕ್ತಮ್ ॥

(ಭಾಷ್ಯಾರ್ಥ)

ಅಜರಾದ ಹುಟ್ಟಿದ ಅಚಲರಾದ ಧರ್ಮರುಗಳಲ್ಲಿ ಆತ್ಮರುಗಳಲ್ಲಿ, ಸೂರ್ಯನಲ್ಲಿ ಬಿಸಿಯೂ ಬೆಳಕೂ (ಇರು)ವಂತೆ, ಅಜವೂ ಅಚಲವೂ ಆದ ಜ್ಞಾನವಿರುವದೆಂದು ಒಪ್ಪಿರುತ್ತದೆಯಲ್ಲವೆ[1] ? ಅದರಿಂದ[2] ಅಜವಾದ ಜ್ಞಾನವು ಮತ್ತೊಂದು ವಿಷಯದಲ್ಲಿ ಹೋಗದೆ ಇರುವದು ಎನಿಸುತ್ತದೆ. ಜ್ಞಾನವು (ಓಗೆ) ಮತ್ತೊಂದು ವಿಷಯಕ್ಕೆ ಹೋಗದೆ ಇರುವದರಿಂದ ಅದು ಅಸಂಗವು ಎಂದು ಹೇಳಲ್ಪಟ್ಟಿದೆ, ಆಕಾಶದಂತಿರುವದು ಎಂದು ಹೇಳಲ್ಪಟ್ಟಿದೆ[3].

1. ಆತ್ಮರು ಹುಟ್ಟುವದಿಲ್ಲ, ಮಾರ್ಪಡುವದಿಲ್ಲ ; ಜ್ಞಾನವು ಆತ್ಮಸ್ವರೂಪವೇ ಆಗಿರುವದರಿಂದ ಅದೂ ಹುಟ್ಟುವದಿಲ್ಲ. ಮಾರ್ಪಡುವದಿಲ್ಲ.

2. ಯತಃ ಎಂಬ ಮಾತನ್ನು ಭಾಷ್ಯಕಾರರು ಎರಡು ಕಡೆಗೂ ಅನ್ವಯಿಸಿರುತ್ತಾರೆ. "ಯತೋ ಜ್ಞಾನಮ್ ಅಚೇಷು ಧರ್ಮೇಷು ಅಜಮ್ ಇಷ್ಯತೇ । ತತಃ ಅಸಙ್ಗಮ್ ಇಷ್ಯತೇ । ಯತಃ ಜ್ಞಾನಮ್ ನ ಕ್ರಮತೇ ತೇನ ತತ್ ಅಸಙ್ಗಮ್ ಕೀರ್ತಿತಮ್" ಎಂದು ಅನ್ವಯ. ಜ್ಞಾನವು ವಿಷಯದೊಡನೆ ಸಂಬದ್ಧವಾದಾಗ ವಿಷಯಜ್ಞಾನವಾಗುತ್ತದೆ ಎನ್ನುವದು ತಪ್ಪು ; ಏಕೆಂದರೆ ಜ್ಞಾನವು ಸ್ವಲ್ಪವೂ ಚಲಿಸದೆ ತಾನು ಇದ್ದಂತೆಯೇ ಇರುತ್ತದೆ. ಎಂದು ಭಾವ.

3. ಜ್ಞಾನರೂಪನಾದ ಆತ್ಮನಿಗಿಂತ ಬೇರೆ ಯಾವ ಜ್ಞಾನವಿಲ್ಲ. ವಿಷಯವೂ ಇಲ್ಲ ಎಂದು ಭಾವ.

ಅಣುಮಾತ್ರೋಽಪಿ ವೈಧರ್ಮ್ಯೇ ಜಾಯಮಾನೇಽವಿಪಶ್ಚಿತಃ
ಅಸಙ್ಗತಾ ಸದಾ ನಾಸ್ತಿ ಕಿಮುತಾವರಣಚ್ಯುತಿಃ ॥೬೭॥

೬೭. ಅಣುಮಾತ್ರವಾಗಿ ವೈಧರ್ಮ್ಯವುಂಟಾದರೂ ಅರಿಯದವನಿಗೆ ಅಸಂಗತ್ವವು ಎಂದಿಗೂ ಇರುವದಿಲ್ಲ. ಇನ್ನು ಆವರಣದ ಚ್ಯುತಿಯು ಇರುವದಿಲ್ಲವೆಂದು (ಹೇಳುವ)ದೇನು ?

(ಭಾಷ್ಯ)

೩೬೨. ಇತಃ ಅನ್ಯೇಷಾಂ ವಾದಿನಾಮ್ ಅಣುಮಾತ್ರೇ ಅಲ್ಪೇಽಪಿ ವೈಧರ್ಮ್ಯೇ ವಸ್ತುನಿ ಬಹೋಃ ಅನ್ಯಸ್ಯಾ ಜಾಯಮಾನೇ ಉತ್ಪಾದ್ಯಮಾನೇ ಅವಿಪಶ್ಚಿತಃ ಅವಿವೇಕಿನಃ ಅಸಙ್ಗತಾ ಅಸಙ್ಗತ್ವಂ ಸದಾ ನಾಸ್ತಿ ಕಿಮುತ ವಕ್ತವ್ಯಮ್ ಆವರಣಚ್ಯುತಿಃ ಬನ್ಧನಾಶಃ ನಾಸ್ತಿ ಇತಿ ॥

(ಭಾಷ್ಯಾರ್ಥ)

ಇದಕ್ಕಿಂತ ಬೇರೆಯಾದ[1] ವಾದಿಗಳ (ಮತದಲ್ಲಿಯೋ ಎಂದರೆ), ಅಣುಮಾತ್ರವಾಗಿ ಸ್ವಲ್ಪವಾಗಿ ವೈಧರ್ಮ್ಯವುಂಟಾದರೂ ವಸ್ತುವಿನಲ್ಲಿ ಒಳಗಾಗಲಿ ಹೊರಗಾಗಲಿ (ಒಂದಿಷ್ಟು ವೈಧರ್ಮ್ಯವು) ಹುಟ್ಟಿದರೂ ಉಂಟಾದರೂ ಅರಿಯದವನಿಗೆ ಅವಿವೇಕಿಗೆ[2] ಅಸಂಗತೆಯು ಸಂಗವಿಲ್ಲದಿರುವಿಕೆಯು ಎಂದಿಗೂ ಇರುವದಿಲ್ಲ. ಇನ್ನು ಆವರಣದ ಚ್ಯುತಿಯು ಬಂಧದ ನಾಶವು ಇರುವದಿಲ್ಲವೆಂದು[3] ಹೇಳುವದೇನಿದೆ ?

(ಭಾಷ್ಯ)

೩೬೩. ತೇಷಾಮ್ ಆವರಣಚ್ಯುತಿಃ ನಾಸ್ತಿ ಇತಿ ಬ್ರುವತಾಂ ಸ್ವಸಿದ್ಧಾನ್ತೇ ಅಭ್ಯುಪಗತಂ ತರ್ಹಿ ಧರ್ಮಾಣಾಮ್ ಆವರಣಮ್ । ನೇತ್ಯುಚ್ಯತೇ-

(ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ಅವರಿಗೆ ಆವರಣದ ಚ್ಯುತಿಯಿರುವದಿಲ್ಲ ಎಂದು ಹೇಳುವ ನಿಮ್ಮ ಸಿದ್ಧಾಂತದಲ್ಲಿ ಆತ್ಮರಿಗೆ ಆವರಣವನ್ನು ಒಪ್ಪಿದಂತೆ ಆಯಿತಲ್ಲ ?

---

1 ಆತ್ಮನಿಂದ ಬೇರೆಯಾದ ವಸ್ತುವು ಹುಟ್ಟುವದೆಂದು ಒಪ್ಪುವ ವಾದಿಗಳ ಮತದಲ್ಲಿ ಎಂದರ್ಥ

2 ಅದ್ವೈತತತ್ತ್ವದಲ್ಲಿ ಭೇದವನ್ನು ಕಲ್ಪಿಸುವವನು ಅವಿವೇಕಿಯು.

3 ಅಜ್ಞಾನದ ಆವರಣವುಳ್ಳವರಿಗೆ ನಾವು ಪರ ತೆಂಬ ತಿಳಿವಳಿಕೆಯೂ ಬಂಧವೂ ವಿಷಯಾನುಭವದ ಬಂಧವೂ ಗಟ್ಟಿಯಾಗಿರುವದು.

(ಪರಿಹಾರ) :- ಹಾಗಲ್ಲವೆನ್ನುತ್ತೇವೆ (ಏಕೆಂದರೆ) :-

ಅಲಬ್ಧಾವರಣಾಃ ಸರ್ವೇ ಧರ್ಮಾಃ ಪ್ರಕೃತಿನಿರ್ಮಲಾಃ ।
ಆದೌ ಬುದ್ಧಾಸ್ತಥಾ ಮುಕ್ತಾ ಬುಧ್ಯನ್ತ ಇತಿ ನಾಯಕಾಃ ॥೯೮॥

೯೮. ಎಲ್ಲ ಧರ್ಮರೂ ಆವರಣವನ್ನು ಹೊಂದದಿರುವವರು, ಪ್ರಕೃತಿಯಿಂದ ನಿರ್ಮಲರಾಗಿರುವವರು, ಮೊದಲೇ ಬುದ್ಧರಾಗಿರುವವರು ಮತ್ತು ಮುಕ್ತರಾಗಿರುವವರು. ಸಮರ್ಥರಾಗಿರುವದರಿಂದ ತಿಳಿಯುವರು.

(ಭಾಷ್ಯ)

೩೬೪. ಅಲಬ್ಧಾವರಣಾಃ । ಅಲಬ್ಧುಮ್, ಅಪ್ರಾಪ್ತುಮ್ ಆವರಣಮ್ ಅವಿದ್ಯಾದಿ ಬನ್ಧನಂ ಯೇಷಾಂ ತೇ ಸರ್ವೇ[1] ಧರ್ಮಾಃ ಅಲಬ್ಧಾವರಣಾಃ । ಬನ್ಧನರಹಿತಾಃ ಇತ್ಯರ್ಥಃ । ಪ್ರಕೃತಿನಿರ್ಮಲಾಃ ಸ್ವಭಾವಶುದ್ಧಾಃ । ಆದೌ ಬುದ್ಧಾಃ ತಥಾ ಮುಕ್ತಾಃ ಯಸ್ಮಾತ್ ನಿತ್ಯಶುದ್ಧಬುದ್ಧಮುಕ್ತಸ್ವಭಾವಾಃ । ಯದ್ಯೇವಂ ಕಥಂ ತರ್ಹಿ ಬುಧ್ಯನ್ತೇ ಇತಿ ? ಉಚ್ಯತೇ-ನಾಯಕಾಃ ಸ್ವಾಮಿನಃ ಸಮರ್ಥಾಃ ಬೋದ್ಧುಮ್ । ಬೋಧಶಕ್ತಿಮತ್ಸ್ವಭಾವಾಃ ಇತ್ಯರ್ಥಃ । ಯಥಾ ನಿತ್ಯಪ್ರಕಾಶಸ್ವರೂಪೋಽಪಿಸತ್ ಸವಿತಾ 'ಪ್ರಕಾಶತೇ' ಇತ್ಯುಚ್ಯತೇ । ಯಥಾ ವಾ ನಿತ್ಯನಿವೃತ್ತಗತಯೋಽಪಿ ನಿತ್ಯಮೇವ ಶೈಲಾಃ "ತಿಷ್ಠನ್ತಿ" ಇತಿ ಉಚ್ಯತೇ ತದ್ವತ್ ॥

(ಭಾಷ್ಯಾರ್ಥ)

ಅಲಬ್ಧಾವರಣರು ಆವರಣವು ಅವಿದ್ಯೆಯೇ ಮುಂತಾದ ಬಂಧವು ಯಾರಿಗೆ ಅಲಬ್ಧವೋ ಹೊಂದಲ್ಪಡದೆ ಇರುವದೋ, ಆ ಎಲ್ಲಾ ಧರ್ಮರೂ ಅಲಬ್ಧಾವರಣರು, ಬಂಧನವಿಲ್ಲದವರು ಎಂದರ್ಥ. ಪ್ರಕೃತಿನಿರ್ಮಲರು, ಸ್ವಭಾವದಿಂದಲೇ ಶುದ್ಧರಾಗಿರುವವರು. (ಅವರು) ಮೊದಲೇ ಬುದ್ಧರು, ಮತ್ತು ಮುಕ್ತರು ; ಏಕೆಂದರೆ ನಿತ್ಯಶುದ್ಧಬುದ್ಧಮುಕ್ತವಾದ ಸ್ವಭಾವವುಳ್ಳವ(ರಾಗಿರುತ್ತಾರೆ).

(ಆಕ್ಷೇಪ) :- ಹಾಗಾದರೆ ಇವರು ಅರಿಯುತ್ತಾರೆಂಬುದು ಹೇಗೆ ?

(ಪರಿಹಾರ) :- ಹೇಳುತ್ತೇವೆ. (ಇವರು) ನಾಯಕರು, ಸ್ವತಂತ್ರರು ಅರಿಯುವ ಸಾಮರ್ಥ್ಯವುಳ್ಳವರು. ಜ್ಞಾನಶಕ್ತಿಯಿಂದೊಡಗೂಡಿದ ಸ್ವಭಾವದವರು ಎಂದರ್ಥ. ಹೇಗೆ ಸೂರ್ಯನು ಯಾವಾಗಲೂ ಪ್ರಕಾಶಸ್ವರೂಪನೇ ಆಗಿದ್ದರೂ "ಬೆಳಗುತ್ತಾನೆ"

---

1. ಈ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿದೆ.

ಎನ್ನುವರೋ[1], ಎಂದಿಗೂ ಓಡಾಡುವದಿಲ್ಲದಿದ್ದರೂ ಬೆಟ್ಟಗಳು ಯಾವಾಗಲೂ "ನಿಂತಿರುತ್ತವೆ" ಎಂದು ಹೇಳುವರೋ, ಅದರಂತೆಯೇ (ಇದು).

ಕ್ರಮತೇ ನ ಹಿ ಬುದ್ಧಸ್ಯ ಜ್ಞಾನಂ ಧರ್ಮೇಷು ತಾಯಿನಃ ।
ಸರ್ವೇ ಧರ್ಮಾಸ್ತಥಾ ಜ್ಞಾನಂ ನೈತದ್ ಬುದ್ಧೇನ ಭಾಷಿತಮ್ ॥೯೯॥

೯೯. ತಾಯಿಯಾದ ಬುದ್ಧನ (ದೃಷ್ಟಿಯಲ್ಲಿ) ಧರ್ಮದಲ್ಲಿರುವ ಜ್ಞಾನವು ಚಲಿಸುವದಿಲ್ಲ. ಸರ್ವಧರ್ಮರೂ ಹಾಗೆಯೇ (ಚಲಿಸುವದಿಲ್ಲ). ಈ ಜ್ಞಾನವು (ಗೌತಮ) ಬುದ್ಧನಿಂದ ಹೇಳಲ್ಪಟ್ಟಿರುವದಿಲ್ಲ.

(ಭಾಷ್ಯ)

೩೬೫. ಯಸ್ಮಾತ್ ನ ಹಿ ಕ್ರಮತೇ ಬುದ್ಧಸ್ಯ ಪರಮಾರ್ಥದರ್ಶಿನಃ ಜ್ಞಾನಂ ವಿಷಯಾನ್ತರೇಷು ಧರ್ಮೇಷು ಧರ್ಮಸಂಸ್ಥಂ[2] ಸವಿತರೀವ ಪ್ರಭಾ । ತಾಯಿನಃ ತಾಯಃ ಅಸ್ಯ ಅಸ್ತೀತಿ ತಾಯೀ । ಸನ್ತಾನವತೋ ನಿರನ್ತರಸ್ಯ ಆಕಾಶಕಲ್ಪಸ್ಯ ಇತ್ಯರ್ಥಃ ಪೂಜಾವತೋ ವಾ ಪ್ರಜ್ಞಾವತೋ ವಾ । ಸರ್ವೇ ಧರ್ಮಾಃ ಆತ್ಮಾನೋಽಪಿ ತಥಾ ಜ್ಞಾನವದೇವ ಆಕಾಶಕಲ್ಪತ್ವಾತ್ ನ ಕ್ರಮನ್ತೇ ಕ್ವಚಿದಪಿ ಅರ್ಥಾನ್ತರೇ ಇತ್ಯರ್ಥಃ । ಯತ್ ಆದೌ ಉಪನ್ಯಸ್ತಮ್ "ಜ್ಞಾನೇನ ಆಕಾಶಕಲ್ಪೇನ" (೪-೧) ಇತ್ಯಾದಿ,

---

1. ಕ್ರಿಯೆಯನ್ನು ಮಾಡುವದಕ್ಕೂ ಬಿಡುವದಕ್ಕೂ ಸ್ವತಂತ್ರನಾಗಿರುವವನನ್ನಲ್ಲವೆ, ಕರ್ತೃ ವೆನ್ನಬೇಕು ? ಜ್ಞಾನಿಯು ನಿತ್ಯಜ್ಞಾನಸ್ವರೂಪನೇ ಆದರೆ ಅವನು "ಅರಿಯುತ್ತಾನೆ" ಎಂದು ವ್ಯವಹರಿಸುವದು ಸರಿಯೆ ?-ಎಂದು ಪೂರ್ವಪಕ್ಷಿಯ ಆಕ್ಷೇಪ. ಸೂರ್ಯನು ನಿತ್ಯಪ್ರಕಾಶ ರೂಪನಾದರೂ ಬೆಳಗುತ್ತಾನೆ ಎಂದು ವ್ಯವಹರಿಸುವಂತೆ ಇದು ಔಪಚಾರಿಕಪ್ರಯೋಗವಾಗಿದೆ ಎಂದು ಪರಿಹಾರ.

2. 'ಧರ್ಮಸಂಸ್ಥಮ್' ಎಂಬುದು ಧರ್ಮೇಷು ಎಂಬುದರ ವ್ಯಾಖ್ಯಾನವೆಂದಿಟ್ಟು ಕೊಂಡರೆ ತಾಯಿನಃ ಬುದ್ಧಸ್ಯ (ಮತೇ) ಧರ್ಮೇಷು (ಸ್ಥಿತಂ) ಜ್ಞಾನಂ ನ ಹಿ (ಕ್ವಚಿತ್) ಕ್ರಮತೇ । ತಥಾ ಸರ್ವೇ ಧರ್ಮಾ (ಅಪಿ ನ ಕ್ವಚಿತ್ ಕ್ರಮನ್ತೇ)-ಎಂದು ಕಾರಿಕೆಗೆ ಅನ್ವಯ. " ಧರ್ಮಿ ಸಂಸ್ಥಮ್" ಎಂದು ಪಾಠವಿದ್ದರೆ ತಾಯಿನಃ ಬುದ್ಧಸ್ಯ ಜ್ಞಾನಂ ಧರ್ಮೇಷು (ವಿಷಯಾನ್ತ ರೇಷು) ನ ಹಿ ಕ್ರಮತೇ । ತಥಾ ಸರ್ವೇ ಧರ್ಮಾಃ ನ (ಕ್ವಚಿತ್) ಕ್ರಮನ್ತೇ" ಎಂದು ಅನ್ವಯ. ಮೊದಲನೆಯ ಅನ್ವಯದಂತೆ ಇಲ್ಲಿ ಅರ್ಥವನ್ನು ಬರೆದಿದೆ. ಎರಡನೆಯ ಅನ್ವಯದಲ್ಲಿ ತಾಯಿಯಾದ ಬುದ್ಧನ ಜ್ಞಾನವು ವಿಷಯಗಳಲ್ಲಿ ಹೋಗಿ ಸೇರುವದಿಲ್ಲ-ಎಂದು ಅರ್ಥವನ್ನು ಮಾಡಬೇಕು. ಅದು ಭಾಷ್ಯದ ಉಳಿದ ಭಾಗಕ್ಕೂ ಹೊಂದಿಕೊಳ್ಳುತ್ತದೆ.

ತದಿದಮ್ ಆಕಾಶಕಲ್ಪಸ್ಯ ತಾಯಿನಃ ಬುದ್ಧಸ್ಯ ತದನನ್ಯತ್ವಾತ್ ಆಕಾಶಕಲ್ಪಂ ಜ್ಞಾನಂ ನ ಕ್ರಮತೇ ಕ್ವಚಿದಪಿ ಅರ್ಥಾನ್ತರೇ ತಥಾ ಧರ್ಮಾಃ ಇತಿ ।।

(ಭಾಷ್ಯಾರ್ಥ)

ಬುದ್ಧನ ಪರಮಾರ್ಥವನ್ನು ಕಂಡುಕೊಂಡಿರುವಾತನ (ದೃಷ್ಟಿಯಲ್ಲಿ) ಧರ್ಮರಲ್ಲಿರುವ ಜ್ಞಾನವು, ಸೂರ್ಯನಲ್ಲಿರುವ ಬೆಳಕು ಹೇಗೆ (ಸೂರ್ಯನನ್ನು ಬಿಟ್ಟು ಮತ್ತೊಂದೆಡೆಗೆ ಹೋಗುವದಿಲ್ಲವೋ ಹಾಗೆ) ಬೇರೆಯ ವಿಷಯಗಳೆಡೆಗೆ ಹೋಗುವದೇ ಇಲ್ಲ. ತಾಯಿಯಾದ-ತಾಯವುಳ್ಳವನು ತಾಯಿಯು, ಸಂತತವಾಗಿರುವ ಎಡೆಬಿಡದ ಆಕಾಶದಂತೆ (ವ್ಯಾಪಿಸಿರುವ) ಎಂದರ್ಥ ; ಅಥವಾ ಪೂಜೆಯುಳ್ಳ (ಪೂಜ್ಯನಾದ) ; ಅಥವಾ ಪ್ರಕೃಷ್ಟವಾದ ಜ್ಞಾನವುಳ್ಳ-(ಬುದ್ಧನ ಮತದಲ್ಲಿ ಜ್ಞಾನವು) ಬೇರೆಯ ವಿಷಯಗಳಲ್ಲಿ ಹೋಗಿಸೇರುವದಿಲ್ಲ (ಎಂದರ್ಥ). ಮತ್ತು ಎಲ್ಲಾ ಧರ್ಮರೂ (ಎಲ್ಲಾ) ಆತ್ಮರೂ ಜ್ಞಾನದಂತೆಯೇ ಆಕಾಶಸಮರಾಗಿರುವದರಿಂದ ಮತ್ತೊಂದು ಬೇರೆ ಯಾವ ವಿಷಯದಲ್ಲಿಯೂ ಹೋಗಿ ಸೇರುವದಿಲ್ಲ ಎಂದರ್ಥ.

"ಆಕಾಶಕಲ್ಪವಾದ ಜ್ಞಾನದಿಂದ" ಎಂದು ಮುಂತಾಗಿ (೪-೧) ಮೊದಲು ಹೇಳಿತ್ತಷ್ಟೆ ; ಅದನ್ನೇ ಇಲ್ಲಿ ಆಕಾಶಕಲ್ಪನಾದ ತಾಯಿಯಾಗಿರುವ ಬುದ್ಧನ ಆಕಾಶಕಲ್ಪವಾದ ಜ್ಞಾನವು ಆತನ ಸ್ವರೂಪಕ್ಕಿಂತ ಬೇರೆಯಲ್ಲವಾದ್ದರಿಂದ ಮತ್ತೆ ಯಾವ ವಿಷಯಕ್ಕೂ ಹೋಗಿಸೇರುವದಿಲ್ಲ, ಧರ್ಮರೂ ಹಾಗೆಯೇ-ಎಂದು(ಉಪಸಂಹಾರ ಮಾಡಿರುತ್ತಾರೆ[1]).

(ಭಾಷ್ಯ)

೩೬೬. (ಜ್ಞಾನಮ್[2]) ಆಕಾಶಮಿವ ಅಚಲಮ್ ಅವಿಕ್ರಿಯಂ ನಿರವಯವಂ ನಿತ್ಯಮ್ ಅದ್ವಿತೀಯಮ್ ಅಸಜ್ಗಮ್ ಅದೃಶ್ಯಮ್ ಅಗ್ರಾಹ್ಯಮ್ ಅಶನಾಯಾದ್ಯತೀತಂ ಬ್ರಹ್ಮಾತ್ಮತತ್ತ್ವಮ್ "ನ ಹಿ ದೃಷ್ಟೇರ್ದ್ರಷ್ಟೇರ್ವಿಪರಿಲೋಪೋ ವಿದ್ಯತೇ" (ಬೃ. ೪-೩-೨೩) ಇತಿ ಶ್ರುತೇಃ । ಜ್ಞಾನಜ್ಞೇಯಜ್ಞಾತೃಭೇದರಹಿತಮ್ ಪರಮಾರ್ಥತತ್ತ್ವಮ್ ಅದ್ವಯಮ್ ಏತತ್ ನ ಬುದ್ಧೇನ ಭಾಷಿತಮ್ । ಯದ್ಯಪಿ ಬಾಹ್ಯಾರ್ಥನಿರಾಕರಣಂ ಜ್ಞಾನಮಾತ್ರಕಲ್ಪನಾ ಚ ಅದ್ವಯವಸ್ತುಸಾಮಾಪ್ಯಮ್ ಉಕ್ತಮ್ । ಇದಂ ತು ಪರಮಾರ್ಥತತ್ತ್ವಮ್ ಅದ್ವೈತಂ ವೇದಾನ್ತೇಷ್ವೇವ ವಿಜ್ಞೇಯಮ್ ಇತ್ಯರ್ಥಃ ।।

---

1. "ಉಪಸಂಹೃತಮ್" ಎಂಬ ಮಾತು ಭಾಷ್ಯದಲ್ಲಿದ್ದದ್ದು ಬಿಟ್ಟುಹೋಗಿದೆ ಎಂದು ತೋರುತ್ತದೆ. "ತದಿದಮಿಹೋಪಸಂಹೃತಮ್ ಇತಿ ಶೇಷಃ" ಎಂದು ವ್ಯಾಖ್ಯಾನದಲ್ಲಿದೆ.

2. ಈ ಮಾತು ಭಾಷ್ಯದಲ್ಲಿ ಇಲ್ಲಿರಬೇಕೆಂದು ಮೂಲಾನುಸಾರವಾಗಿ ಕಲ್ಪಿಸಲಾಗಿದೆ.

(ಭಾಷ್ಯಾರ್ಥ)

ಈ ಜ್ಞಾನವು, ಆಕಾಶದಂತೆ ಅಚಲವಾಗಿಯೂ ವಿಕಾರವಿಲ್ಲದ್ದಾಗಿಯೂ ಅವಯವವಿಲ್ಲದ್ದಾಗಿಯೂ ನಿತ್ಯವಾಗಿಯೂ ತನಗೆರಡನೆಯದಿಲ್ಲದ್ದಾಗಿಯೂ (ಮತ್ತೊಂದರ) ಸೋಂಕಿಲ್ಲದ್ದಾಗಿಯೂ ಕಾಣುವವಸ್ತುಗಳಿಗಿಂತ ಭಿನ್ನವಾಗಿಯೂ ಹಿಡಿದುಕೊಳ್ಳುವದಕ್ಕೆ ಬಾರದ್ದಾಗಿಯೂ, ಹಸಿವು ಮುಂತಾದವುಗಳನ್ನು ದಾಟಿರುವದಾಗಿಯೂ[1] ಇರುವ ಬ್ರಹ್ಮಾತ್ಮತತ್ತ್ವವು. "ನೋಡುವಾತನ ನೋಟಕ್ಕೆ ನಾಶವೆಂಬುದೇ ಇಲ್ಲ" (ಬೃ. ೪-೩-೨೩) ಎಂಬ ಶ್ರುತಿಯು[2] ಇದಕ್ಕೆ ಪ್ರಮಾಣವು ಜ್ಞಾನ, ಜ್ಞೇಯ, ಜ್ಞಾತೃ-ಎಂಬ ಭೇದಗಳಿಲ್ಲದ ತನಗೆರಡನೆಯದಿಲ್ಲದ ಈ ಪರಮಾರ್ಥತತ್ತ್ವವು (ಗೌತಮ)ಬುದ್ಧನಿಂದ[3] ಹೇಳಲ್ಪಡಲಿಲ್ಲ. ಹೊರಗಿನ ವಸ್ತುವನ್ನು ನಿರಾಕರಿಸುವದು, ಜ್ಞಾನವೊಂದೇ (ಇರುವದೆಂದು) ಕಲ್ಪಿಸುವದು-(ಹೀಗೆ) ಅದ್ವಯವಸ್ತುವಿಗೆ ಸಮೀಪವಾಗಿರುವದನ್ನೇ ಅವನು ಹೇಳಿದ್ದರೂ[4] (ಇದನ್ನು ಹೇಳಲಿಲ್ಲ) ಅದ್ವೈತವೆಂಬ ಈ ಪರಮಾರ್ಥತತ್ತ್ವವಾದರೋ ವೇದಾಂತಗಳಲ್ಲಿಯೇ ತಿಳಿಯಬರತಕ್ಕದ್ದಾಗಿರುತ್ತದೆ[5] ಎಂದರ್ಥ.

## ಮಂಗಲ

(ಭಾಷ್ಯ)

೩೬೭. ಶಾಸ್ತ್ರಸಮಾಪ್ತೌ ಪರಮಾರ್ಥತತ್ತ್ವಸ್ತುತ್ಯರ್ಥಂ ನಮಸ್ಕಾರ ಉಚ್ಯತೇ :-

---

1. ಇದುವರೆಗೆ ಹೇಳಿರುವ ವಿಶೇಷಣಗಳು ಮಾಂಡೂಕ್ಯೋಪನಿಷತ್ತಿನ ೭ನೆಯ ಮಂತ್ರದಲ್ಲಿ ವರ್ಣಿಸಿರುವ ತುರೀಯವನ್ನೇ ಇಲ್ಲಿ ಆಕಾಶಕಲ್ಪವಾದ ಜ್ಞಾನವೆಂದು ವರ್ಣಿಸಿದೆ ಎಂಬುದನ್ನು ಸೂಚಿಸುವವು. ಬೌದ್ಧರು ಒಪ್ಪುವ ಕ್ಷಣಿಕವಿಜ್ಞಾನಕ್ಕೂ ಈ ಸ್ವರೂಪಜ್ಞಾನಕ್ಕೂ ಇರುವ ಹೆಚ್ಚು ಕಡಿಮೆಯು ಇವುಗಳಿಂದ ಸ್ಪಷ್ಟವಾಗುತ್ತದೆ

2. ಆಕಾಶದಂತೆ ನಿತ್ಯವೂ ವ್ಯಾಪಕವೂ ಆದ ವಿಜ್ಞಾನವಿದೆ ಎಂಬುದಕ್ಕೆ ಈ ಶ್ರುತಿಯು ಪ್ರಮಾಣ

3. ಬುದ್ಧ ಎಂಬ ಶಬ್ದವನ್ನು ಜ್ಞಾನಿ ಎಂಬರ್ಥದಲ್ಲಿಯೇ ಕಾರಿಕೆಯಲ್ಲಿ ಪ್ರಚುರವಾಗಿ ಉಪಯೋಗಿಸಿದೆಯಾದರೂ ಪ್ರಕೃತದಲ್ಲಿ ಬುದ್ಧನೆಂದರೆ ಗೌತಮಬುದ್ಧನೇ ಎಂಬುದು ಸ್ಪಷ್ಟ.

4 ವಿಜ್ಞಾನವಾದಿಗಳಾದ ಬೌದ್ಧರೂ ಅದ್ವೈತಿಗಳಂತೆ ಜ್ಞಾನವೊಂದೇ ಪರಮಾರ್ಥವೆಂದು ಕಲ್ಪಿಸಿರುವದರಿಂದ ಅವರ ವಾದವು ಅದ್ವೈತಕ್ಕೆ ಸಮೀಪವಾಗಿದೆಯೆಂದು ಹೇಳಿದೆ. ಆದರೆ ವಿಜ್ಞಾನವಾದವು ಯುಕ್ತಿಯುಕ್ತವಲ್ಲವೆಂಬುದನ್ನು ಈ ಪ್ರಕರಣದಲ್ಲಿ ಸ್ಪಷ್ಟವಾಗಿ ತೋರಿಸಿರುತ್ತದೆ. ಬೌದ್ಧವಾದದ ವಿಷಯವಾಗಿ ಟೀಕೆಯನ್ನು ನೋಡಿ

5 ಬೃ ೩-೯-೨೬ರ ಸೂಚನೆ

(ಭಾಷ್ಯಾರ್ಥ)

ಶಾಸ್ತ್ರವನ್ನು ಮುಗಿಸುವ (ಕಾಲ)ದಲ್ಲಿ[1] ಪರಮಾರ್ಥತತ್ತ್ವವನ್ನು ಹೊಗಳುವದಕ್ಕಾಗಿ ನಮಸ್ಕಾರವನ್ನು ಹೇಳುತ್ತಾರೆ :-

ದುರ್ದರ್ಶಮತಿಗಮ್ಭೀರಮಜಂ ಸಾಮ್ಯಂ ವಿಶಾರದಮ್ ।
ಬುದ್ಧ್ವಾ ಪದಮನಾನಾತ್ವಂ ನಮಸ್ಕುರ್ಮೋ ಯಥಾಬಲಮ್ ॥೧೦೦॥

೧೦೦. ದುರ್ದರ್ಶವಾದ, ಅತಿಗಂಭೀರವಾದ, ಅಜವಾದ ಸಾಮ್ಯವಾದ, ವಿಶಾರದವಾದ, ನಾನಾತ್ವವಿಲ್ಲದ ಪದವನ್ನು ಅರಿತುಕೊಂಡು ಬಲವಿದ್ದಷ್ಟು ನಮಸ್ಕರಿಸುತ್ತೇವೆ.

(ಭಾಷ್ಯ)

೩೬೮. ದುರ್ದರ್ಶಂ ದುಃಖೇನ ದರ್ಶನಮ್ ಅಸ್ಯ ಇತಿ ದುರ್ದರ್ಶಮ್ । ಅಸ್ತಿ ನಾಸ್ತೀತ್ಯಾದಿ[2] ಚತುಷ್ಕೋಟಿವರ್ಜಿತತ್ವಾತ್ ದುರ್ವಿಜ್ಞೇಯಮ್ ಇತ್ಯರ್ಥಃ । ಅತ ಏವ ಅತಿಗಮ್ಭೀರಂ ದುಷ್ಪ್ರವೇಶಂ ಮಹಾಸಮುದ್ರವತ್ ಅಕೃತಪ್ರಜ್ಞೈಃ । ಅಜಂ ಸಾಮ್ಯಂ ವಿಶಾರದಮ್ । ಈದೃಕ್ಪದಮ್ ಅನಾನಾತ್ವಂ ನಾನಾತ್ವವರ್ಜಿತಂ ಬುದ್ಧ್ವಾ ಅವಗಮ್ಯ ತದ್ಭೂತಾಃ ಸನ್ತಃ ನಮಸ್ಕುರ್ಮಃ ತಸ್ಮೈ ಪದಾಯ । ಅವ್ಯವಹಾರ್ಯಮಪಿ ವ್ಯವಹಾರ ಗೋಚರತಾಮ್[3] ಆಪಾದ್ಯ ಯಥಾಬಲಂ ಯಥಾಶಕ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ದುರ್ದರ್ಶವಾದ : ಇದನ್ನು ಕಾಣುವದು ಕಷ್ಟದಿಂದ ; ಆದ್ದರಿಂದ (ಇದು ದುರ್ದರ್ಶವು. ಇದೆ, ಇಲ್ಲ ಮುಂತಾದ ನಾಲ್ಕುಕೋಟಿಗಳೂ ಇಲ್ಲದ್ದಾದ್ದರಿಂದ ಅರಿಯುವದಕ್ಕೆ ಕಷ್ಟವಾದದ್ದು ಎಂದರ್ಥ. ಆದ್ದರಿಂದಲೇ ಅತಿಗಂಭೀರವಾದ : (ಸರಿಯಾದ) ಪ್ರಜ್ಞೆಯನ್ನು ಮಾಡಿಕೊಳ್ಳದೆ ಇರುವವರಿಗೆ ದೊಡ್ಡ ಕಡಲಿನಂತೆ ಹೋಗುವದಕ್ಕೆ ಆಗದೆ ಇರುವಂಥದ್ದು. ಅಜವೂ ಸಾಮ್ಯವೂ ವಿಶಾರದವೂ ಆದದ್ದು[4]. ಇಂಥ ಅನಾನಾತ್ವವಾದ ನಾನಾತ್ವವಿಲ್ಲದ ಪದವನ್ನು ಅರಿತುಕೊಂಡು ನಿಶ್ಚಯಿಸಿಕೊಂಡು ಅದರ ಸ್ವರೂಪವನ್ನೇ

---

1. ಈ ಪ್ರಕರಣವನ್ನು ಶಾಸ್ತ್ರವೆಂದು ಕರೆದಿರುವ ವಿಷಯಕ್ಕೆ ಪೀಠಿಕೆಯನ್ನು ನೋಡಿ.
2. "ಅಸ್ತಿ ನಾಸ್ತಿ" ಎಂಬ ಅಚ್ಚಿನ ಪಾಠಕ್ಕಿಂತ ಇದು ಉತ್ತಮ.
3. "ವ್ಯವಹಾರಗೋಚರಮ್" ಆ॥
4. ಳ-ಕ ರಲ್ಲಿಯೂ ಈ ವಿಶೇಷಣಗಳಿವೆ ; ಆದ್ದರಿಂದ ಮತ್ತೆ ವಿವರಿಸಲಿಲ್ಲ.

ಹೊಂದಿದವರಾಗಿ[1] ಆ ಪದವನ್ನು ನಮಸ್ಕರಿಸುತ್ತೇವೆ. ಅವ್ಯವಹಾರ್ಯವಾದರೂ ವ್ಯವಹಾರಕ್ಕೆ ವಿಷಯವಾಗಿ ಮಾಡಿಕೊಂಡು[2] ಬಲವಿದ್ದಷ್ಟುಮಟ್ಟಿಗೆ ಶಕ್ತಿಯಿದ್ದಷ್ಟು ಮಟ್ಟಿಗೆ (ನಮಸ್ಕರಿಸುತ್ತೇವೆ) ಎಂದರ್ಥ.

## ಭಾಷ್ಯಕಾರರ ಮಂಗಲ

ಅಜಮಪಿ ಜನಿಯೋಗಂ ಪ್ರಾಪದೈಶ್ವರ್ಯಯೋಗಾ-
ದಗತಿ ಚ ಗತಿಮತ್ತಾಂ ಪ್ರಾಪದೇಕಂ ಹ್ಯನೇಕಮ್ ।
ವಿವಿಧವಿಷಯಧರ್ಮಗ್ರಾಹಿಮುಗ್ಧೇಕ್ಷಣಾನಾಂ
ಪ್ರಣತಭಯವಿಹನ್ತೃ ಬ್ರಹ್ಮ ಯತ್ತನ್ನತೋಽಸ್ಮಿ ॥೧॥

೧. ಬಗೆಬಗೆಯ ವಿಷಯಗಳ ಧರ್ಮವನ್ನು ಗ್ರಹಿಸುವದರಿಂದ ಮೋಹಗೊಂಡಿರುವ ನೋಟವುಳ್ಳವರಿಗೆ ಯಾವ ಬ್ರಹ್ಮವು (ತಾನು ನಿಜವಾಗಿ) ಅಜವಾಗಿದ್ದರೂ ಐಶ್ವರ್ಯಯೋಗದಿಂದ[3] ಹುಟ್ಟಿನ ಸಂಬಂಧವನ್ನು ಪಡೆದಿರುವದೋ, (ತನ್ನಲ್ಲಿ) ಗಮನವಿಲ್ಲದ್ದಾದರೂ ಗತಿಯುಳ್ಳದ್ದಾಗಿರುವದೋ, (ತಾನು) ಒಂದೇ (ಆಗಿದ್ದರೂ) ಅನೇಕವಾಗಿರುವದೋ, ನಮಸ್ಕರಿಸಿದವರ ಅಂಜಿಕೆಯನ್ನು[4] ನಾಶಗೊಳಿಸುವದಾಗಿರುವದೋ ಅದನ್ನು ನಮಸ್ಕರಿಸುವೆನು.

ಪ್ರಜ್ಞಾವೈಶಾಖವೇಧಕ್ಷುಭಿತಜಲನಿಧೇರ್ವೇದನಾಮ್ನೋಽನ್ತರಸ್ಥಂ
ಭೂತಾನ್ಯಾಲೋಕ್ಯ ಮಗ್ನಾನ್ಯವಿರತಜನನಗ್ರಾಹಘೋರೇ ಸಮುದ್ರೇ ।
ಕಾರುಣ್ಯಾದುದ್ಧರಾಮೃತಮಿದಮಮರೈರ್ದುರ್ಲಭಂ
ಭೂತಹೇತೋರ್ಯಸ್ತಂ ಪೂಜ್ಯಾಭಿಪೂಜ್ಯಂ ಪರಮಗುರುಮಮುಂ
ಪಾದಪಾತೈರ್ನತೋಽಸ್ಮಿ ॥೨॥

೨. ಎಡೆಬಿಡದೆ ಬರುವ ಜನ್ಮಗಳೆಂಬ ಮೊಸಳೆಗಳಿಂದ ಭಯಂಕರವಾಗಿರುವ ಸಮುದ್ರದಲ್ಲಿ ಮುಳುಗಿರುವ ಪ್ರಾಣಿಗಳನ್ನು ನೋಡಿ ಯಾವಾತನು ಕರುಣೆಯಿಂದ, ತನ್ನ ಪ್ರಜ್ಞೆಯೆಂಬ ಕಡೆಗೋಲಿನ ಕಡೆತದಿಂದ[5] ಗರಬಾಡಿದ ವೇದವೆಂಬ ಸಾಗರದ

---

1 ಅದ್ವೈತತತ್ತ್ವವನ್ನು ಅರಿತಾಗ ಅದೇ ನಾವಾಗಿರುವೆವು.

2 ನಿಜವಾಗಿ ತತ್ತ್ವವು ನಮಸ್ಕಾರಾದಿವ್ಯವಹಾರಕ್ಕೂ ಹೊರಬ್ಟಾಗಿರುವದರಿಂದ ವಿಷಯವೆಂದು ಕಲ್ಪಿಸಿಕೊಂಡೇ ನಮಸ್ಕರಿಸುತ್ತೇವೆ ಎಂದರ್ಥ.

3. ಅಚಿಂತ್ಯಶಕ್ತಿಯಿಂದ.

4 ದ್ವೈತರೂಪವಾದ ಸಂಸಾರದ ಅಂಜಿಕೆಯನ್ನು

5. ವಿಚಾರದಿಂದ.

ಒಳಗಡೆಯಲ್ಲಿ ದೇವತೆಗಳಿಗೂ ದುರ್ಲಭವಾಗಿದ್ದ ಈ ಅಮೃತವನ್ನು[1] ಪ್ರಾಣಿಗಳಿಗಾಗಿ ಎತ್ತಿಕೊಟ್ಟನೋ, ಪೂಜ್ಯರಿಗೂ ಪೂಜ್ಯನಾಗಿರುವ ಆ ಪರಮಗುರುವನ್ನು[2] ಕಾಲುಗಳ ಮೇಲೆ ಬಾರಿಬಾರಿಗೂ ಬಿದ್ದು ನಮಸ್ಕರಿಸುವೆನು.

ಯತ್ಪ್ರಜ್ಞಾಲೋಕಭಾಸಾ ಪ್ರತಿಹತಿಮಗಮತ್ ಸ್ವಾನ್ತಮೋಹಾನ್ಧಕಾರೋ
ಮಜ್ಜೋನ್ಮಜ್ಜಚ್ಚ ಘೋರೇ ಹ್ಯಸಕೃದುಪಜನೋದನ್ವತಿ ತ್ರಾಸನೇ ಮೇ ।
ಯತ್ಪಾದಾವಾಶ್ರಿತಾನಾಂ ಶ್ರುತಿಶಮವಿನಯಪ್ರಾಪ್ತಿರಗ್ರ್ಯಾಹ್ಯಮೋಘಾ
ತತ್ಪಾದೌ ಪಾವನೀಯೌ ಭವಭಯವಿನುದೌ ಸರ್ವಭಾವೈರ್ನಮಸ್ಯೇ ॥೩॥

೩. ಅನೇಕಾವೃತ್ತಿ ಹುಟ್ಟುವದೆಂಬ ಭಯಂಕರವಾದ ಕಷ್ಟದಾಯಕವಾದ ಸಮುದ್ರದಲ್ಲಿ ಮುಳುಗುತ್ತಲೂ ಏಳುತ್ತಲೂ ಇದ್ದ ನನ್ನ ಹೃದಯದ ಮೋಹವೆಂಬ ಕತ್ತಲೆಯು ಯಾವನ ಪ್ರಜ್ಞೆಯೆಂಬ ಬೆಳಕಿನ ಹೊಳಪಿನಿಂದ ನಾಶವನ್ನು ಹೊಂದಿತೋ ಯಾರ ಪಾದಗಳನ್ನು ಆಶ್ರಯಿಸಿರುವವರಿಗೆ ಬಹುಮುಖ್ಯವೂ ಅಮೂಲ್ಯವೂ ಆಗಿರುವ ಶ್ರುತ್ಯುಕ್ತ ಶಮವೂ ವಿನಯವೂ ದೊರೆಯುವವೋ, ಸಂಸಾರದ ಭಯವನ್ನು ತೊಲಗಿಸುವ ಆ (ಗುರುಗಳ[3]) ಪವಿತ್ರವಾದ ಪಾದಗಳನ್ನು ಸರ್ವಭಾವಗಳಿಂದಲೂ[4] ನಮಸ್ಕರಿಸುವೆನು.

ಇತಿ ಮಾಣ್ಡೂಕ್ಯೋಪನಿಷತ್ಕಾರಿಕಾಭಾಷ್ಯಂ ಸಂಪೂರ್ಣಮ್

ಓಂ ತತ್ ಸತ್

******

1. ಮೋಕ್ಷಕಾರಣವಾದ ಈ ಅಜಾತಬ್ರಹ್ಮವಾದವನ್ನು.
2. ಗುರುಗಳ ಗುರುಗಳಾದ ಶ್ರೀಗೌಡಪಾದರನ್ನು.
3. ಶ್ರೀಗೋವಿಂದಭಗವತ್ಪಾದರ.
4. ವಾಙ್ಮನಃಕಾಯಗಳಿಂದ.

# ಮಾಂಡೂಕ್ಯಕಾರಿಕೆಯ ಸಾರ

## ಆಗಮಪ್ರಕರಣ

೧-೨ ಎಚ್ಚರವಿದ್ದಾಗ ಹೊರ ಅರಿವಿನ ಆತ್ಮನಿಗೆ ವಿಶ್ವನೆಂದು ಹೆಸರು ; ಕನಸಿನಲ್ಲಿ ಒಳಅರಿವಿನ ಆತ್ಮನಿಗೆ ತೈಜಸನೆಂದು ಹೆಸರು . ತನಿಸಿದ್ರೆಯಲ್ಲಿ ಬರಿಯ ಅರಿವಿನ ಗಟ್ಟಿಯಾಗಿರುವ ಆತ್ಮನಿಗೆ ಪ್ರಾಜ್ಞನೆಂದು ಹೆಸರು ಒಬ್ಬ ಆತ್ಮನೇ ಹೀಗೆ ಅವಸ್ಥೆಗಳ ಉಪಾಧಿಯಿಂದ ಮೂರು ಬಗೆಯನಾಗಿ ತೋರುತ್ತಿರುವನು. ಇಂದ್ರಿಯಗಳ ಮೂಲಕ ಅರಿಯುವ ವಿಶ್ವನು, ಮನಸ್ಸಿನ ಮೂಲಕ ತನಗೆ ತಂದುಕೊಳ್ಳುವ ತೈಜಸನು, ಈ ಎರಡು ಬಗೆಯ ಅನುಭವವೂ ಇಲ್ಲದ ಪ್ರಾಜ್ಞನು-ಎಂದು ಮೂರು ಬಗೆಯಲ್ಲಿಯೂ ಆತ್ಮನು ಎಚ್ಚರದಲ್ಲಿಯೇ ತೋರಿಬರುತ್ತಿರುವನು ಸ್ಥೂಲವಾದ ವಿಷಯಗಳ ಭೋಗವು ವಿಶ್ವನಿಗೆ, ಸೂಕ್ಷ್ಮವಾದ ವಿಷಯಗಳ ಭೋಗವು ತೈಜಸನಿಗೆ, ವಿಷಯಭೋಗದ ಆಯಾಸವಿಲ್ಲದ ಆನಂದಭೋಗವು ಪ್ರಾಜ್ಞನಿಗೆ-ಹೀಗೆ ಭೋಗಗಳ ಉಪಾಧಿಯಿಂದಲೂ ಆತ್ಮನು ಒಬ್ಬನೇ ಮೂರು ವಿಧವಾಗಿ ತೋರುತ್ತಿರುವನು.

೪-೯. ಸುಷುಪ್ತಿಯ ಆತ್ಮನಾದ ಪ್ರಾಜ್ಞನೇ ಜಗತ್ಸೃಷ್ಟ್ಯವಾದ ಪ್ರಾಣನು. ಆ ಪ್ರಾಣನಿಂದಲೇ ಚೇತನಾಚೇತನಾತ್ಮಕವಾದ ಜಗತ್ತೆಲ್ಲವೂ ಹುಟ್ಟುವದು. ಪ್ರಾಣನು ಜಗದ್ರೂಪವಾಗುವ ಸೃಷ್ಟಿಯನ್ನು ಮಾದಿಗಳು ಬಗೆಬಗೆಯಾಗಿ ಏಕಲ್ಪಿಸಿಯಿತ್ತಾರೆ ; ಆದರೆ ಅವಿದ್ಯೆಯೆಂಬ ಸ್ವಭಾವವೊಂದಲ್ಲದೆ ಈ ಸೃಷ್ಟಿಗೆ ಬೇರೆ ಯಾವದೂ ಕಾರಣವಿರುವದಿಲ್ಲ.

೧೦-೧೫ ನಿಜವಾಗಿ ನೋಡಿದರೆ ಆತ್ಮನಲ್ಲಿ ವಿಶ್ವ, ತೈಜಸ, ಪ್ರಾಜ್ಞ-ಎಂಬ ಮೂರು ರೂಪಗಳೂ ಇರುವದಿಲ್ಲ ಅವನು ಈ ಮೂರು ರೂಪಕ್ಕಿಂತಲೂ ಬೇರೆಯವನಾದ ತುರೀಯನು, ನಾಲ್ಕನೆಯವನು. ಅದ್ವಿತೀಯನು ಪ್ರಾಜ್ಞರೂಪದಲ್ಲಿ ಏನನ್ನೂ ಅರಿಯದ್ದೆಂಬ ಕಾರಣಾಜ್ಞಾನ ವಿರುತ್ತದೆ , ವಿಶ್ವತೈಜಸರಲ್ಲಿ ಈ ಕಾರಣವೂ ಇದರಿಂದಾಗುವ ತಪ್ಪುತಿಳಿವೆಂಬ ಕಾರ್ಯಾಜ್ಞಾನವೂ ಇರುತ್ತವೆ. ಕಾರಣಾಜ್ಞಾನರೂಪವಾದ ನಿದ್ರೆಯಾಗಲಿ ಕಾರ್ಯಾಜ್ಞಾನರೂಪವಾದ ಕನಸಾಗಲಿ ಇಲ್ಲದೆ ತನ್ನ ಚೈತನ್ಯಸ್ವರೂಪವಾದ ಎಚ್ಚರಿನಲ್ಲಿಯೇ ಇರುವವನು ತುರೀಯನು. ಅಜ್ಞಾನವೂ ಅನ್ಯಥಾಜ್ಞಾನವೂ ಆತ್ಮನಿಗೆ ನಿಜವಾಗಿಲ್ಲವೆಂದು ಯಾವನು ಅರಿತುಕೊಳ್ಳುವನೋ ಅವನೇ ನಿಜವಾಗಿ ಆತ್ಮಸ್ವರೂಪವನ್ನು ಅರಿತುಕೊಂಡವನು

೧೬-೧೮ ಜೀವನಿಗೆ ಅನಾದಿಮಾಯೆಯಿಂದ ಈ ಅಜ್ಞಾನ, ಅನ್ಯಥಾಜ್ಞಾನಗಳೆಂಬ ಕನಸು ಆಗಿರುತ್ತದೆಯೇ ಹೊರತು ಅವನಲ್ಲಿ ಇದು ಪರಮಾರ್ಥವಾಗಿ ಇರುವದಿಲ್ಲ. ಈ ಕನಸಿನಿಂದ ಎಚ್ಚೆತ್ತಕೂಡಲೆ ಆತ್ಮತತ್ತ್ವವು ಹುಟ್ಟಿಲ್ಲದ್ದು, ಯಾವ ನಿದ್ರೆಯಾಗಲಿ ಕನಸಾಗಲಿ ಇಲ್ಲದ್ದು, ತನಗೆರಡನೆಯದಿಲ್ಲದ್ದು ಎಂಬ ಅರಿವು ಆಗುವದು. ಈಗ ಅವಸ್ಥೆಗಳು, ವಿಶ್ವತೈಜಸಾದಿರೂಪಗಳು-ಎಂಬ ಪ್ರಪಂಚವೆಯೆಂದೂ ಜ್ಞಾನದಿಂದ ಅದು ಹೋಗುವದೆಂದೂ ಅಭಿಪ್ರಾಯವಲ್ಲ ; ಅದು

ಪರಮಾರ್ಥವಾಗಿಲ್ಲವೇ ಇಲ್ಲ, ಆತ್ಮನು ಯಾವಾಗಲೂ ನಿಜವಾಗಿ ಅದ್ವೈತನೇ ಆಗಿರುತ್ತಾನೆ-ಎಂದು ಅರಿತುಕೊಳ್ಳುವದೇ ಅದ್ವೈತಪ್ರಾಪ್ತಿಯು. ಈ ಜ್ಞಾನವನ್ನು ತಿಳಿಸುವ ಗುರು, ಅದನ್ನು ಅರಿಯುವ ಶಿಷ್ಯ-ಎಂಬ ಭೇದವೂ ಪರಮಾರ್ಥವಲ್ಲ. ಅವಿದ್ಯಕವಾದ ಈ ಭೇದವು ಪರಮಾರ್ಥವಾಗಿರುವಂತೆ ಜ್ಞಾನವಾಗುವವರೆಗೆ ತೋರುತ್ತಿರುತ್ತದೆ. ಜ್ಞಾನವುಂಟಾದ ಬಳಿಕ ಈ ಭೇದವೂ ಮಾಯಾಮಾತ್ರವೇ ಎಂಬ ಅರಿವು ಉಂಟಾಗಿಬಿಡುತ್ತದೆ.

೧೯-೨೩. ಆತ್ಮನಲ್ಲಿ ವಾಚ್ಯವಾಚಕರೂಪವಾದ ಭೇದವೂ ಇರುವದಿಲ್ಲ. ವಾಚ್ಯದೃಷ್ಟಿಯಿಂದ ಆತ್ಮನು ಬ್ರಹ್ಮವು ; ವಾಚಕದೃಷ್ಟಿಯಿಂದ ನೋಡಿದರೆ ಆತ್ಮನು ಓಂಕಾರವು, ವಾಚ್ಯವಾಚಕ ವಿಭಾಗರಹಿತನಾದ ತುರೀಯಾತ್ಮನನ್ನು ಓಂಕಾರವೆಂದಾಗಲಿ ಬ್ರಹ್ಮವೆಂದಾಗಲಿ ಕರೆಯುವದಕ್ಕಿಲ್ಲ. ಬ್ರಹ್ಮರೂಪವಾದ ಆತ್ಮನಲ್ಲಿ ವಿಶ್ವ, ತೈಜಸ, ಪ್ರಾಜ್ಞ-ಎಂಬ ಪಾದಗಳು ಕಲ್ಪಿತವಾಗಿರುವಂತೆ ಓಂಕಾರರೂಪನಾದ ಆತ್ಮನಲ್ಲಿ ಅಕಾರ, ಉಕಾರ, ಮಕಾರ-ಎಂಬ ಪಾದವಾಚಕಗಳಾದ ಮಾತ್ರೆಗಳು ಕಲ್ಪಿತವಾಗಿರುವುವು. ಕಲ್ಪಿತಪಾದಗಳಿಗಿಂತ ವಿಲಕ್ಷಣನಾದ ತುರೀಯಾತ್ಮನೇ ಕಲ್ಪಿತಮಾತ್ರೆಗಳಿಗಿಂತ ವಿಲಕ್ಷಣವಾದ ಓಂಕಾರವು. ತುರೀಯತತ್ತ್ವವು ಪಾದವೂ ಅಲ್ಲ, ಮಾತ್ರೆಯೂ ಅಲ್ಲ.

೨೪-೨೯. ಇಂಥ ವಾಚ್ಯವಾಚಕಭಾವವಿಲಕ್ಷಣವಾದ ಓಂಕಾರವೇ ಪ್ರಣವವು. ಇದನ್ನು ಪಾದಗಳು, ಮಾತ್ರೆಗಳು-ಎಂಬ ಕಲ್ಪಿತೋಪಾಯದಿಂದ ತಿಳಿದುಕೊಂಡು ಅದರಲ್ಲಿಯೇ ಚಿತ್ತವನ್ನು ಇಟ್ಟುಕೊಂಡವರಿಗೆ ಅಂಜಿಕೆಯಿಲ್ಲ. ಪರಬ್ರಹ್ಮವೆಂದೂ ಅಪರಬ್ರಹ್ಮವೆಂದೂ ಶ್ರುತಿಯು ಹೇಳುವದು ಈ ಪ್ರಣವವನ್ನೇ. ಇದು ಆದಿಮಧ್ಯಾಂತರಹಿತವಾದದ್ದು, ಎಲ್ಲಕ್ಕೂ ಆದಿಮಧ್ಯಾಂತವು ಇದೇ. ಇದೇ ಜೀವರ ಹೃದಯದಲ್ಲಿರುವ ಈಶ್ವರನೆಂಬುದು. ಈ ಅಮಾತ್ರವಾದ ಅಪರಿಚ್ಛಿನ್ನವಾದ ಪ್ರಪಂಚೋಪಶಮವಾದ ಓಂಕಾರವನ್ನು ಯಾವನು ಅರಿತಿರುವನೋ ಅವನೇ ಮುನಿಯು.

# ವೈತಥ್ಯಪ್ರಕರಣ

೧-೩. ಕನಸಿನಲ್ಲಿ ಒಳಗೆ ಕಾಣುವ, ಹೊರಗೆ ಕಾಣುವ, ಭಾವಗಳೆಲ್ಲವೂ ಮಿಥ್ಯೆಯಾಗಿರುವವು. ಏಕೆಂದರೆ ಅವು ಸಂಕುಚಿತವಾದ ದೇಹದೊಳಗಡೆಯಲ್ಲಿ ತೋರುತ್ತಿರುವವು ; ಅಲ್ಲಿ ನೋಡುವ ದೂರಪ್ರದೇಶಗಳಿಗೆ ಹೋಗುವಷ್ಟು ಕಾಲವು ಅಲ್ಲಿರುವದಿಲ್ಲ, ಎಚ್ಚತ್ತವನು ಅಲ್ಲಿರುವದೂ ಇಲ್ಲ. ಶ್ರುತಿಯಲ್ಲಿಯೂ ಈ ಅನುಭವಸಿದ್ಧವಾದ ವಿಷಯವನ್ನು ಅನುವಾದ ಮಾಡಿಕೊಂಡು ಕನಸಿನಲ್ಲಿ ಆತ್ಮನೊಬ್ಬನೇ ಸ್ವಯಂಜ್ಯೋತಿಯಾಗಿರುವನೆಂದು ಹೇಳಿರುತ್ತದೆ.

೪-೧೦. ಹೀಗೆಯೇ ಎಚ್ಚರದಲ್ಲಿ ತೋರುವ ಭಾವಗಳೂ ಮಿಥ್ಯೆಯೆಂದು ಹೇಳಬೇಕು ; ಏಕೆಂದರೆ ಎಚ್ಚರವೂ ಕನಸಿನಂತೆಯೇ ಇದೆ ; ಅದರಲ್ಲಿಯೂ ಭಾವಗಳು ಗ್ರಾಹ್ಯಗ್ರಾಹಕರೂಪವಾಗಿರುತ್ತವೆ. ಎಚ್ಚರಕ್ಕೆ ಮೊದಲೂ ಎಚ್ಚರವು ಮುಗಿದಮೇಲೂ ಇಲ್ಲದಿರುವ ಈ ದೃಶ್ಯಗಳು ಎಚ್ಚರದ ಕಾಲದಲ್ಲಿಯೂ ಇಲ್ಲವೆಂಬುದೇ ಯುಕ್ತ. ಎಚ್ಚರದಲ್ಲಿರುವ ವಸ್ತುಗಳಿಗೆ ಪ್ರಯೋಜನವುಂಟೆಂಬುದು ಕನಸಿನ ವಸ್ತುಗಳಂತೆಯೇ ; ಏಕೆಂದರೆ ಈ ಸಪ್ರಯೋಜನತ್ವವು ಆಯಾ ಅವಸ್ಥೆಯಲ್ಲಿ ಮಾತ್ರ ಇದ್ದು ಮತ್ತೊಂದು ಅವಸ್ಥೆಯಲ್ಲಿ ಇಲ್ಲವಾಗುತ್ತದೆ ಕನಸಿನಲ್ಲಿ ಕೆಲವು ಹೊಸದೃಶ್ಯಗಳೂ

ಕಾಣಿಸುತ್ತವೆ ಎಂಬುದು ನಿಮ್ಮ ; ಆದರೆ ಬಿಳಿಯ ಸ್ವಾಭಾವಿಕ ಧರ್ಮಗಳೇ, ಆ ಅವಸ್ಥೆಯಲ್ಲಿರುವವನಿಗೆ ಮಾತ್ರ ಕಾಣತಕ್ಕವೇ ಹೊರತು ಸ್ವತಃಸಿದ್ಧವಾಗಿರುವ ಸತ್ಯವಸ್ತುಗಳಲ್ಲ. ಮನಸ್ಸಿನಲ್ಲಿ ಮಾತ್ರ ಕಲ್ಪಿಸಿಕೊಂಡದ್ದು ಬಾಹ್ಯವಾಗಿಯೂ ಹೊರಗೆ ಕಾಣಿಸಿದ್ದು ಸತ್ಯವಾಗಿಯೂ ತೋರುವದೆಂಬುದು ಎರಡು ಅವಸ್ಥೆಗಳಿಗೂ ಸಮಾನವಾಗಿರುವುದರಿಂದ ಕನಸಿನ ತೋರಿಕೆಗಳಂತೆ ಎಚ್ಚರದ ತೋರಿಕೆಗಳೂ ಹುಸಿಯೇ ಎನ್ನುವದಕ್ಕೆ ಮೇಲಣ ಪಕ್ಷಿಯೂ ಗಿಳಿ.

೧೧-೧೫. ಈ ಎರಡು ಅವಸ್ಥೆಗಳಲ್ಲಿಯೂ ಆತ್ಮನೊಬ್ಬನೇ ಪರಮಾರ್ಥವಾಗಿರುವನು. ಅವುಗಳನ್ನು ಅನುಸರಿಸುವಂತೆ ಮಾಯೆಯಿಂದ ತನ್ನಲ್ಲಿ ಕಲ್ಪಿಸಿಕೊಂಡು ಕಾಣುತ್ತಿರುವನು-ಎಂಬುದು ಉಪನಿಷತ್ಪ್ರಾಣಿಯ ತಿಳಿವಳಿಗೆ. ಕೆಲವು ಭಾವಗಳನ್ನೂ ಹೊರಗೆ ಮತ್ತೆ ಕೆಲವು ಭಾವಗಳನ್ನೂ ವಿಲಕ್ಷಣಪ್ರಕಾರವಾದ ಕಲ್ಪಿಸುವಿಕೆಯೂ ಈ ಎರಡವಸ್ಥೆಗಳಿಗೆ ಸಮಾನವಾಗಿರುತ್ತದೆ. ಒಳಗಿರುವ ಭಾವಗಳು ಆಯಾ ವ್ಯಕ್ತಿಯವನಿಗೆ ಇರುವಂತೆಯೂ, ಹೊರಗಿನ ಭಾವಗಳು ಸ್ಥಿರವಾಗಿ ಅನ್ಯೋನ್ಯಪರಿಚ್ಛೇದ್ಯಗಳಾಗಿರುವಂತೆಯೂ ಕಾಣಿಸುವದರಲ್ಲಾಗಲಿ, ಒಳಗಿನ ಭಾವಗಳು ಅವ್ಯಕ್ತವಾಗಿಯೂ ಹೊರಗಿನವು ಸ್ಪಷ್ಟವಾಗಿಯೂ ತೋರುವದರಲ್ಲಾಗಲಿ ಈ ಎರಡು ಅವಸ್ಥೆಗಳ ದೃಶ್ಯಗಳಿಗೆ ಯಾವ ತಾರತಮ್ಯವನ್ನೂ ಕಾಣಿಸುವದಿಲ್ಲ.

೧೬. ಈ ಕಲ್ಪನೆಗೆ "ಜೀವನು ಜೀವನು, ಕರ್ತೃಭೋಕ್ತೃಸ್ವರೂಪನು" ಎಂದು ಕಲ್ಪಿಸಿರುವದೇ ಮೂಲವು ಹೀಗಿನ ಬಾಹ್ಯಭವಕ್ಕೆ ತಕ್ಕಂತೆ ಈಗಿನ ಸ್ಮೃತಿಯೂ ಮತ್ತೆ ಅನುಭವಸ್ಮೃತಿಗಳೂ ಸಂತತವಾಗಿ ಈ ಕಲ್ಪನೆಯಿಂದಲೇ ಆಗಿರುವವು.

೧೭-೧೮ ಕತ್ತಲೆಯಲ್ಲಿ ಇದು ಹಗ್ಗವೆಂದು ಗೊತ್ತುಮಾಡಿಕೊಳ್ಳದೆ ಇರುವಾಗ ಅದು ಹಾವು, ನೀರಿನ ಕೋಡಿ-ಮುಂತಾದ ರೂಪಗಳಿಂದ ತೋರುವಂತೆ ಅಜ್ಞಾತನಾದ ಆತ್ಮನಲ್ಲಿಯೂ ಅನೇಕ ಭಾವಗಳು ಕಲ್ಪಿತವಾಗಿರುತ್ತವೆ. ಇದು ಹಗ್ಗವೇ ಎಂದು ನಿಶ್ಚಯವಾಗಲು ಎಲ್ಲಾ ವಿಕಲ್ಪಗಳೂ ತೊಲಗುವಂತೆಯೂ ಹಗ್ಗವೊಂದೇ ಉಳಿಯುವಂತೆಯೂ ಆತ್ಮನನ್ನು ಅರಿತುಕೊಂಡಾಗ ಎಲ್ಲಾ ವಿಕಲ್ಪಗಳೂ ತೊಲಗಿ ಆತ್ಮನೊಬ್ಬನೇ ಪರಮಾರ್ಥವಾಗಿ ಉಳಿದುಕೊಳ್ಳುವನು.

೧೯. ಈ ಆತ್ಮನಲ್ಲಿ ಪ್ರಾಣನೇ ಮುಂತಾದ ಅನಂತಭಾವಗಳು ಕಲ್ಪಿತವಾಗಿರುವವು. ಮಾಯೆಯಿಂದ ಕಲ್ಪಿತವಾದ ವಸ್ತುಗಳು ನೋಟಕರನ್ನು ಮರುಳುಗೊಳಿಸುವಂತೆ ಈ ಆತ್ಮಮಾಯೆಯು ಆತ್ಮನನ್ನೇ ಮರುಳುಗೊಳಿಸಿದಂತೆ ಆಗಿರುತ್ತದೆ.

೨೦-೩೦ ಪ್ರಾಣವೆಂಬ ಕಾರಣಾತ್ಮನಾದ ಪ್ರಾಜ್ಞನು, ಅವನ ಕಾರ್ಯಗಳಾದ ಭೂತಗಳು, ಗುಣಗಳು, ತತ್ತ್ವಗಳು, ಪಾದಗಳು, ವಿಷಯಗಳು, ಲೋಕಗಳು, ದೇವತೆಗಳು-ಮುಂತಾಗಿ ಈ ಕಲ್ಪಿತ ಭೇದಗಳು ಲೆಕ್ಕವಿಲ್ಲದಷ್ಟಿರುತ್ತವೆ. ಅವೆಲ್ಲವೂ ಈ ಆತ್ಮನಲ್ಲಿಯೇ ಕಲ್ಪಿತವಾಗಿರುತ್ತವೆ. ಆಯಾ ಕಲ್ಪನೆಯೇ ಪರಮಾರ್ಥವೆಂದು ಆಯಾ ವಾದಿಗಳು ಪಟ್ಟುಹಿಡಿದಿರುವರು ; ಆಯಾ ಸಿದ್ಧಾಂತದ ಆಚಾರ್ಯರ ಹೇಳಿಕೆಯನ್ನು ಅವರ ಅನುಯಾಯಿಗಳು ನಂಬಿರುವದರಿಂದ ತತ್ತ್ವವನ್ನು ಸರಿಯಾಗಿ ತಿಳಿಯದಂತೆ ಲಡ್ಡಿಯಾಗಿರುತ್ತದೆ. ಆತ್ಮನು ಈ ಯಾವ ಕಲ್ಪನೆಯೂ ಇಲ್ಲದವನೆಂದೂ ಅವನಲ್ಲಿ

ಇವೆಲ್ಲ ತಪ್ಪುತಿಳಿವಳಿಕೆಯಿಂದ ಕಲ್ಪಿತವಾಗಿರುವವೆಂದೂ ಯಾವನು ಅರಿತಿರುವನೋ ಅವನೇ ವೇದವಾಕ್ಯಗಳಿಗೆ ಯಾವ ಶಂಕೆಯೂ ಇಲ್ಲದೆ ಸರಿಯಾದ ತಾತ್ಪರ್ಯವನ್ನು ಗೊತ್ತುಪಡಿಸಬಲ್ಲನು.

೩೧-೩೨. ಈ ಇಡಿಯ ಜಗತ್ತು ಕನಸಿನಂತೆ, ಮಾಯೆಯಂತೆ, ಗಂಧರ್ವನಗರದಂತೆ-ಎಂದು ಉಪನಿಷತ್ತುಗಳಲ್ಲಿ ಹೇಳಿದೆ ಎಂಬುದನ್ನು ಪಂಡಿತರೇ ಬಲ್ಲರು. ಸೃಷ್ಟಿಯಿಲ್ಲ, ಪ್ರಲಯವಿಲ್ಲ, ಬದ್ಧನಿಲ್ಲ, ಸಾಧಕನಿಲ್ಲ, ಮುಮುಕ್ಷುವಿಲ್ಲ, ಮುಕ್ತನಿಲ್ಲ-ಎಂಬಿದೇ ಪರಮಾರ್ಥವು.

೩೩-೩೫. ಈ ಆತ್ಮನು ತಾನು ಇದ್ದಂತೆಯೇ ಇರುತ್ತಿರುವನಾದರೂ ಅತ್ಯಂತವಾಗಿ ಇಲ್ಲದಿರುವ ಈ ಭಾವಗಳ ರೂಪದಿಂದಲೂ ಅದ್ವಯನೆಂಬ ತನ್ನ ರೂಪದಿಂದಲೂ ಕಲ್ಪಿತನಾಗಿರುವನು. ಭಾವಗಳಿಗೂ ಅದ್ವಯರೂಪವೇ ಆಧಾರವಾಗಿರುವದರಿಂದ ಅದ್ವಯಭಾವವೇ ಮಂಗಳಕರವಾದದ್ದು. ರಾಗಾದಿದೋಷಗಳಿಲ್ಲದ ವೇದಪಾರಗರಾದ ಮುನಿಗಳೇ ಈ ಪ್ರಪಂಚೋಪಶಮನಾದ ಅದ್ವಯಾತ್ಮನನ್ನು ಬಲ್ಲರು.

೩೬-೩೮. ಹೀಗೆಂದು ತಿಳಿದ ವಿವೇಕಿಯು ಅದ್ವೈತದಲ್ಲಿಯೇ ಚಿತ್ತವನ್ನಿಡಬೇಕು. ಅದನ್ನರಿತುಕೊಂಡು ಏನೂ ಅರಿಯದವನಂತೆ ವ್ಯವಹಾರವನ್ನು ಮಾಡಿಕೊಂಡಿರಬೇಕು. ಸ್ತುತಿನಮಸ್ಕಾರಗಳಾಗಲಿ ಮತ್ತೆ ಯಾವ ಕರ್ಮಗಳಾಗಲಿ ಇಲ್ಲದ ಪರಮಹಂಸಪಾರಿವ್ರಾಜ್ಯವನ್ನು ಹೊಂದಿ ಅನಿಕೇತನಾಗಿ ಯದೃಚ್ಛಾಲಾಭಸಂತುಷ್ಟನಾಗಿ ಎಲ್ಲೆಲ್ಲಿಯೂ ಅದ್ವೈತಾತ್ಮತತ್ತ್ವವೊಂದನ್ನೇ ಕಾಣುತ್ತಾ ಆ ತತ್ತ್ವವನ್ನು ಬಿಟ್ಟು ಒಂದಿಷ್ಟೂ ಕದಲದೆ ಇರಬೇಕು.

## ಅದ್ವೈತಪ್ರಕರಣ

೧-೨. ಉಪಾಸನೆಯೇ ಪರಮಪುರುಷಾರ್ಥಕ್ಕೆ ಮುಖ್ಯಸಾಧನವೆಂದು ಯಾವನು ನಂಬಿರುವನೋ ಅವನು "ಸೃಷ್ಟಿಗೆ ಪೂರ್ವದಲ್ಲಿ ಅಜಾತಬ್ರಹ್ಮವಿದ್ದಿತು, ಈಗ ನಾನು ಅದರಿಂದ ಹುಟ್ಟಿರುವೆನು, ಮುಂದೆ ಉಪಾಸನೆಯಿಂದ ಅದರ ಸಾಯುಜ್ಯವನ್ನು ಪಡೆಯುವೆನು"-ಎಂದು ಜಾತಬ್ರಹ್ಮದಲ್ಲಿ ನಿಂತಿರುವದರಿಂದ ಕೃಪಣನು ಎಂದು ಬ್ರಹ್ಮವಾದಿಗಳು ಹೇಳುವರು. ಆದ್ದರಿಂದ ಅಜಾತವಾದ ಸಮವಾಗಿರುವ ತತ್ತ್ವವನ್ನು ತಿಳಿಸುವೆನು.

೩-೧೦. ಆಕಾಶವು ಘಟಾಕಾಶಾದಿಗಳ ರೂಪದಿಂದಲೂ ಘಟಾದಿಗಳ ರೂಪದಿಂದಲೂ ಹುಟ್ಟುವಂತೆ ಹೇಗೆ ತೋರುವದೋ ಹಾಗೆ ಆತ್ಮನು ಜೀವರುಗಳ ರೂಪದಿಂದಲೂ ಕಾರ್ಯಕರಣ ಸಂಘಾತಗಳ ರೂಪದಿಂದಲೂ ಹುಟ್ಟಿರುವ ಹಾಗೆ ತೋರುತ್ತಿರುವನು ಘಟವೇ ಮುಂತಾದವುಗಳು ನಷ್ಟವಾದರೆ ಘಟಾಕಾಶಾದಿಗಳು ಆಕಾಶದಲ್ಲಿ ಸೇರಿಹೋಗುವಂತೆ ಜೀವರುಗಳೂ ಆತ್ಮನಲ್ಲಿ ಲಯವಾಗುವರು. ಒಂದು ಘಟಾಕಾಶದಲ್ಲಿರುವಂತೆ ತೋರುವ ದೋಷವು ಹೇಗೆ ಮಿಕ್ಕ ಘಟಾಕಾಶಗಳಿಗೆ ಅಂಟದೆ ಇರುವದೋ ಹಾಗೆಯೇ ಒಬ್ಬ ಜೀವನಿಗೆ ಆಗುವ ಸುಖಾದಿಗಳು ಮಿಕ್ಕವರಿಗೆ ಅಂಟದೆ ಇರುವವು. ಘಟಾಕಾಶವೇ ಮುಂತಾದವುಗಳ ನಾಮ, ರೂಪ, ಕರ್ಮ-ಇವುಗಳು ಬೇರೆಬೇರೆಯಾಗಿರುತ್ತಿದ್ದರೂ ಆಕಾಶದಲ್ಲಿ ಹೇಗೆ ಯಾವ ಭೇದವೂ ಇರುವದಿಲ್ಲವೋ ಹಾಗೆಯೇ

ಜೀವರುಗಳ ವಿಷಯಕ್ಕೂ ತಿಳಿಯಬೇಕು. ಆತ್ಮನಲ್ಲಿ ಯಾವ ಭೇದವೂ ಪರಮಾರ್ಥವಾಗಿರುವದೇ ಇಲ್ಲ. ಸರಿಯಾಗಿ ನೋಡಿದರೆ ಘಟಾಕಾಶವು ಆಕಾಶದ ಕಾರ್ಯವೂ ಅಲ್ಲ, ಅಂಶವೂ ಅಲ್ಲ ; ಇದರಂತೆ ಜೀವನು ಆತ್ಮನ ಕಾರ್ಯವೂ ಅಲ್ಲ, ಅಂಶವೂ ಅಲ್ಲ. ಆಕಾಶಕ್ಕೆ ನಿಜವಾಗಿ ಧೂಳು, ಹೊಗೆ-ಮುಂತಾದವು ಎಂದಿಗೂ ಮಸಕನ್ನುಂಟುಮಾಡಿರುವದಿಲ್ಲ ; ಇದರಂತೆ ಆತ್ಮನಿಗೂ ಸುಖದುಃಖಾದಿಗಳು ಮಸಕನ್ನುಂಟುಮಾಡಿರುವದಿಲ್ಲ. ಹುಟ್ಟುವದು, ಸಾಯುವದು, ಹೋಗುವದು, ಬರುವದು, ಬೇರೆಬೇರೆಯ ಶರೀರಗಳಲ್ಲಿರುವದು-ಇವೆಲ್ಲವೂ ಆಕಾಶದಲ್ಲಿ ತೋರುವ ಮಿಥ್ಯಾ ಧರ್ಮಗಳಂತೆ ಹುಸಿತೋರಿಕೆಗಳೇ ಆಗಿರುತ್ತವೆ ಘಟಾಕಾಶಾದಿಗಳ ಉಪಾಧಿಯಾಗಿರುವ ಘಟಾದಿಗಳಂತೆ ಇರುವ ಜೀವರ ಉಪಾಧಿಗಳಾದ ದೇಹಾದಿಗಳು ಕೂಡ ನಿಜವಾಗಿ ಹುಟ್ಟುವದಿಲ್ಲ ; ಅವುಗಳಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ಏಕೆಂದರೆ ಅವು ಕನಸಿನ, ಮಾಯೆಯ, ದೇಹಗಳಂತೆ ಹುಸಿತೋರಿಕೆಗಳೇ ಆಗಿರುವವು ಆದ್ದರಿಂದ ಉಪಾಧಿಯಿಂದ ಜೀವರುಗಳಲ್ಲಿ ತಾರತಮ್ಯವಿರುವದೆಂಬುದೂ ಉತ್ಪತ್ತ್ಯಾದಿಧರ್ಮಗಳಿರುವವೆಂಬುದೂ ಭ್ರಾಂತಿಯೇ.

೧೧-೧೬. ಈ ಅರ್ಥವು ವೇದಾಂತಪ್ರಮಾಣದಿಂದ ಸಿದ್ಧವಾಗಿರುತ್ತದೆ. ಹೇಗಂದರೆ, ತೈತ್ತಿರೀಯದಲ್ಲಿ, ಅನ್ನರಸಮಯವೇ ಮುಂತಾದ ಪಂಚಕೋಶಗಳನ್ನು ಹೇಳಿ, ಕೊನೆಯಲ್ಲಿ ಪ್ರತಿಪಾದಿಸಿರುವ ಅವುಗಳ ಜೀವನಾದ ಪರಮಾತ್ಮನನ್ನೇ ನಾವು ಇಲ್ಲಿ ಆಕಾಶದೃಷ್ಟಾಂತದಿಂದ ತಿಳಿಸಿರುವೆವು. ಬೃಹದಾರಣ್ಯಕೋಪನಿಷತ್ತಿನ ಮಧುಬ್ರಾಹ್ಮಣದಲ್ಲಿ ಅಧಿದೈವವಾಗಿಯೂ ಅಧಿಭೂತವಾಗಿಯೂ ಇರುವ ಆತ್ಮನು ಒಬ್ಬನೇ ಎಂದು ಪೃಥಿವಿ, ಶರೀರ-ಮುಂತಾದ ಎರಡೆರಡನ್ನು ತಗದುಕೊಂಡು ಹೇಳಿರುತ್ತದೆಯಷ್ಟೆ, ಆ ಆತ್ಮನನ್ನೇ ನಾವು ಆಕಾಶದೃಷ್ಟಾಂತದಿಂದ ತಿಳಿಸಿರುತ್ತೇವೆ. ಅದ್ವೈತವು ಶ್ರುತ್ಯರ್ಥವೆನ್ನುವದಕ್ಕೆ ಒಂದು ಗಮಕವೇನೆಂದರೆ ಜೀವಾತ್ಮರು ಒಂದೇ ಎಂಬುದನ್ನು ಅಲ್ಲಿ ಹೊಗಳಿದೆ, ನಾನಾತ್ವವನ್ನು ನಿಂದಿಸಿರುತ್ತದೆ. ಜೀವಾತ್ಮರುಗಳು ಬೇರೆಬೇರೆ ಎಂದು ಕರ್ಮಕಾಂಡದಲ್ಲಿ ಹೇಳಿರುವದು ಗೌಣವು ; ಏಕೆಂದರೆ ಮುಖ್ಯವೃತ್ತಿಯಿಂದ ಐಕ್ಯವನ್ನು ಮುಂದೆ ಹೇಳಿರುತ್ತದೆ. ಮಣ್ಣು, ಕಬ್ಬಿಣ, ಕಿಡಿಗಳು-ಮುಂತಾದ ದೃಷ್ಟಾಂತಗಳಿಂದ ಶ್ರುತಿಯಲ್ಲಿ ಸೃಷ್ಟಿಯನ್ನು ಹೇಳಿರುವದು ಐಕ್ಯವನ್ನು ತಿಳಿಯಪಡಿಸುವದಕ್ಕೆ ಉಪಾಯವೇ ಹೊರತು ನಿಜವಾಗಿ ದ್ವೈತವಿದೆ ಎಂದು ತಿಳಿಸುವದಕ್ಕಲ್ಲ. ಶ್ರುತಿಗಳಲ್ಲಿ ಕರ್ಮವನ್ನೂ ಉಪಾಸನೆಯನ್ನೂ ಹೇಳಿರುವದು ಮಂದ ಮಧ್ಯಮಾಧಿಕಾರಿಗಳು ಕ್ರಮಕ್ರಮವಾಗಿ ಈ ಐಕ್ಯದೃಷ್ಟಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಉಪಾಯವಾಗಿದೆಯೇ ಹೊರತು ದ್ವೈತವೇ ಪರಮಾರ್ಥವೆಂದು ತಿಳಿಸುವದಕ್ಕಲ್ಲ.

೧೭-೨೨ ದ್ವೈತಿಗಳು ತಮ್ಮತಮ್ಮ ಸಿದ್ಧಾಂತಗಳನ್ನು ಪರಮಾರ್ಥವೆಂದು ತೋರಿಸಿಕೊಡುವದಕ್ಕಾಗಿ ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಿಸುತ್ತಿರುವರು. ಆದರೆ ಅದ್ವೈತವು ಅದಕ್ಕೆ ವಿರುದ್ಧವಲ್ಲ. ಏಕೆಂದರೆ ದ್ವೈತವು ಅಪರಮಾರ್ಥವಾಗಿರುತ್ತದೆ, ಅದ್ವೈತವು ಅದರ ಪರಮಾರ್ಥಸ್ವರೂಪವಾಗಿರುತ್ತದೆ ಭ್ರಾಂತಿದೃಷ್ಟಿಯ ದ್ವೈತಕ್ಕೆ ಪರಮಾರ್ಥದೃಷ್ಟಿಯ ಅದ್ವೈತವು ವಿರುದ್ಧವಾಗಿರಲಾರದು. ದ್ವೈತವು ಭ್ರಾಂತಿದೃಷ್ಟವೇ, ಮಾಯಿಕವೇ ; ಹಾಗಿಲ್ಲದೆ ಅದು ಸತ್ಯವೇ ಆಗಿದ್ದರೆ ಅಮೃತಸ್ವಭಾವವಾಗಿರುವ ಪರಮಾರ್ಥವು ಮರ್ತ್ಯವಾಯಿತೆಂದು ವ್ಯಾಹತವಾಗಿ ಹೇಳಿದಂತಾಗು

ವದು. ಕೆಲವರು ವೇದಾಂತಿಗಳು ಅಜವಾಗಿರುವ ತತ್ತ್ವವೇ ದ್ವೈತವಾಗಿ ಹುಟ್ಟಿರುವದೆನ್ನುವರು ; ಆದರೆ ಅಮೃತವು ಮರ್ತ್ಯವಾಗುವದು ಹೇಗೆ ? ಮರ್ತ್ಯವಾದದ್ದು, ಮತ್ತೆ ಅಮೃತವಾಗುವದು ಹೇಗೆ ? ಸ್ವಭಾವವು ಬೇರೆಯಾದೀತೇ ? ಹಾಗೆ ಅಮೃತವು ಮರ್ತ್ಯವಾಗುವದೆಂದರೆ ಅಮೃತವೆಂಬುದು ಕೃತಕವಾಗುವದು, ಸ್ವಾಭಾವಿಕವಾಗಲಾರದು.

೨೩-೨೬. ಸೃಷ್ಟಿಶ್ರುತಿಯು ಮಾಯಿಕಸೃಷ್ಟಿಯೆನ್ನಾದರೂ ಪರಮಾರ್ಥಸೃಷ್ಟಿಯನ್ನಾದರೂ ಹೇಳಬಹುದು. ಆದರೆ ಮಾಯಿಕಸೃಷ್ಟಿಯೇ ಯುಕ್ತಿಯುಕ್ತವಾಗುತ್ತದೆ. ''ನೇಹ ನಾನಾಸ್ತಿ ಕಿಂಚನ'', ''ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ'', ''ಅಜಾಯಮಾನೋ ಬಹುಧಾ ವಿಜಾಯತೇ'' ಮುಂತಾದ ಶ್ರುತಿಗಳು ಮಾಯಿಕಸೃಷ್ಟಿಯನ್ನೇ ಹೇಳುತ್ತವೆ-ಎಂಬುದು ಸ್ಪಷ್ಟವು. ''ಸಂಭೂತಿಯನ್ನು ಉಪಾಸನೆಮಾಡುವವರು ಅಂಧಂತಮನಸ್ಸನ್ನು ಹೊಂದುವರು'' ಎಂದು ಅವಿದ್ಯಕಸೃಷ್ಟಿಯನ್ನು ಉಪಾಸನೆಮಾಡುವವರಿಗೆ ಕೆಟ್ಟಫಲವಾಗುವದೆಂದು ಶ್ರುತಿಯಲ್ಲಿ ನಿಂದಿಸಿದೆ ; ''ಈತನನ್ನು ಹುಟ್ಟಿಸುವವರು ಯಾರು ?'' ಎಂದು ಜ್ಞಾನದಿಂದ ಅರಿತ ಆತ್ಮನನ್ನು ಹುಟ್ಟಿಸುವದಕ್ಕೆ ಕಾರಣವಿಲ್ಲವೆಂದೂ ಶ್ರುತಿಯಲ್ಲಿ ಹೇಳಿರುತ್ತದೆ. ಆದ್ದರಿಂದಲೂ ಸೃಷ್ಟಿ ಪರಮಾರ್ಥವೆಂಬುದಕ್ಕೆ ಶ್ರುತ್ಯಾಧಾರವಿಲ್ಲ. ''ಸ ಏಷ ನೇತಿ ನೇತಿ'' ಎಂಬ ಶ್ರುತಿಯು ಹಿಂದೆ ಹೇಳಿದ ಉಪಾಯವು ಯಾವದೂ ಪರಮಾರ್ಥವಾಗಿಲ್ಲವೆಂದು ತಿಳಿಸುವದಕ್ಕಾಗಿ ಹಿಂದ ಹೇಳಿದ ವಿವರವೆಲ್ಲವನ್ನೂ ಅಲ್ಲಗಳೆಯುತ್ತದೆ. ಆದ್ದರಿಂದ ಶ್ರುತಿಯು ಅಜಾತಬ್ರಹ್ಮವನ್ನೇ ತಿಳಿಸುತ್ತದೆ ಎಂದು ಸಿದ್ಧವಾಗುತ್ತದ.

೨೭-೩೧. ಇರುವದರಿಂದ ಹುಟ್ಟುವದೆಂಬುದು, ಅಥವಾ ಇರುವದು ಹುಟ್ಟುವದೆಂಬುದು ಮಾಯೆಯಿಂದ ಎಂದರೆ ಹೊಂದುತ್ತದೆ. ಏಕೆಂದರೆ ನಿಜವಾಗಿ ಹುಟ್ಟುತ್ತದೆ ಎನ್ನುವವರ ಪಕ್ಷದಲ್ಲಿ ಮೊದಲು ಹುಟ್ಟಿದ್ದೇ ಹುಟ್ಟಿತು ಎಂದಂತೆ ಆಗುತ್ತದೆ , ಎಂದರೆ ಕಾರಣವು ಹುಟ್ಟಿರುತ್ತದ, ಕಾರ್ಯವೂ ಹುಟ್ಟುತ್ತದೆ ಎಂದಾಗಿ ಅನವಸ್ಥೆಯಾಗುವದು. ಅಸತ್ತಾದದ್ದು ಹುಟ್ಟುತ್ತದೆ ಎಂಬುದು ಹೇಗೂ ಹೊಂದುವದೇ ಇಲ್ಲ ; ಏಕೆಂದರೆ ಬಂಜೆಯ ಮಗನು ನಿಜವಾಗಿಯೂ ಹುಟ್ಟುವದಿಲ್ಲ, ಮಾಯೆಯಿಂದಲೂ ಹುಟ್ಟುವದಿಲ್ಲ. ಆದ್ದರಿಂದ ಅಸತ್ತು ಜಗತ್ತಾಗಿ ಹುಟ್ಟಿದೆ ಎಂಬ ವಾದವು ಎಂದಿಗೂ ಸರಿಯಲ್ಲ. ಕನಸಿನಲ್ಲಿ ಮನಸ್ಸು ಮಾಯೆಯಿಂದ ದ್ವೈತರೂಪವಾಗಿ ತೋರುವಂತೆ ಎಚ್ಚರದಲ್ಲಿಯೂ ತೋರುತ್ತದೆ ಎಂಬುದೇ ಯುಕ್ತ. ಎರಡವಸ್ಥೆಗಳಲ್ಲಿಯೂ ಮನಸ್ಸು ಅದ್ವಿತೀಯಾತ್ಮನಾಗಿಯೇ ಇರುತ್ತದೆ. ದ್ವೈತವೆಲ್ಲವೂ ಮನಸ್ಸಿನ ಕಲ್ಪನೆಯೇ ಎನ್ನಬೇಕು ; ಏಕೆಂದರೆ ಮನಸ್ಸು ಅಮನಸ್ಸಾದರೆ ದ್ವೈತವು ಕಾಣಿಸುವದೇ ಇಲ್ಲ.

೩೨-೩೯. ಆತ್ಮನೊಬ್ಬನೇ ಸತ್ಯವೆಂಬುದನ್ನು ಶಾಸ್ತ್ರಾಚಾರ್ಯರ ಉಪದೇಶವನ್ನು ಅನುಸರಿಸಿ ಅರಿತುಕೊಂಡರೆ ತನಗೆ ವಿಷಯವಿಲ್ಲದೆ ಮನಸ್ಸು ಅಮನಸ್ಕವಾಗುವದು. ಆಗ ಅದು ಅಜವೂ ಅದ್ವಯವೂ ಆಗಿರುತ್ತದೆ. ಹೀಗೆ ಆತ್ಮಸತ್ಯಾನುಬೋಧದಿಂದ ಒಡಿತಕ್ಕೆ ಬಂದ ಮನಸ್ಸಿನ ವ್ಯಾಪಾರಕ್ಕೂ ಸುಷುಪ್ತಿಯಲ್ಲಿ ಲಯವಾಗಿರುವ ಮನಸ್ಸಿನ ವ್ಯಾಪಾರಕ್ಕೂ ತಾರತಮ್ಯವುಂಟು. ಏಕೆಂದರೆ ಜ್ಞಾನದಿಂದ ನಿರುದ್ಧವಾದ ಮನಸ್ಸು ನಿರ್ಭಯವಾದ ಬ್ರಹ್ಮವೇ ಆಗಿರುತ್ತದೆ. ಅದು ಅಜವೂ ಅನಿದ್ರವೂ ಅಸ್ವಪ್ನವೂ ಅನಾಮರೂಪವೂ ಆಗಿರುವ ಸ್ವಯಂಜ್ಯೋತಿಯಾದ ಚೈತನ್ಯ

ವಾಗಿರುತ್ತದೆ. ಆ ಜ್ಞಾನವು ಬಂದ ಬಳಿಕ ಮಾಡಬೇಕಾದದ್ದು ಏನೊಂದೂ ಉಳಿದಿರುವದಿಲ್ಲ. ಆ ಚೈತನ್ಯವು ವಾಕ್ಕಿಗೂ ಮನಸ್ಸಿಗೂ ಮೀರಿದ ನಿತ್ಯಪ್ರಕಾಶವಾಗಿರುತ್ತದೆ, ಹಾನೋಪಾದಾನರಹಿತವಾಗಿರುತ್ತದೆ. ಆದ್ದರಿಂದ ಈ ಜ್ಞಾನಕ್ಕೆ ಅಸ್ಪರ್ಶಯೋಗ ಎಂದು ಹೆಸರು. ಆತ್ಮಸತ್ಯಾನುಬೋಧವಿಲ್ಲದ ದ್ವೈತಯೋಗಿಗಳು ಈ ಅಭಯರೂಪವಾದ ಯೋಗವನ್ನೇ ಭಯಕಾರಣವೆಂದು ಅಂಜುತ್ತಿರುವರು.

೪೦-೪೭. ಆತ್ಮನಿಗಿಂತ ಬೇರೆಯಾಗಿ ಮನಸ್ಸೂ ಒಂದಿದೆಯೆಂದು ತಿಳಿಯುವ ಸಾಧಕರಿಗೆ ಅಭಯವೂ ದುಃಖಿಕ್ಷಯವೂ ಆತ್ಮಜ್ಞಾನವೂ ಮುಕ್ತಿಯೂ ಮನೋನಿಗ್ರಹದಿಂದಲೇ ಆಗಬೇಕು. ಅವರು ಬೇಸರವಿಲ್ಲದೆ ಮನಸ್ಸನ್ನು ಗಟ್ಟಿಮಾಡಿಕೊಂಡು ಹೊರಗೆ ವಿಷಯಭೋಗಕ್ಕಾಗಲಿ, ಒಳಗೆ ನಿದ್ರೆಗಾಗಲಿ ಎಡೆಗೊಡದಂತೆ ವೈರಾಗ್ಯವನ್ನೂ ವಿವೇಕವನ್ನೂ ಅಳವಡಿಸಿಕೊಂಡು, ಮನಸ್ಸು ವಾಸನಾಯುಕ್ತವಾಗಿ ನಿಲ್ಲದಂತೆ ಆತ್ಮಾಕಾರವಾಗಿ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಆತ್ಮನ ಕಡೆಗೆ ಮನಸ್ಸು ತಿರುಗಿದ ಮಾತ್ರದಿಂದ ಉಂಟಾಗುವ ಸುಖದಲ್ಲಿಯೂ ಆಸಕ್ತರಾಗದೆ ಮನಸ್ಸು ಆತ್ಮಾಕಾರವಾಗಿಯೇ ನಿಲ್ಲುವಂತೆ ಮಾಡಿಕೊಳ್ಳಬೇಕು. ಹೀಗಾದರೆ ಮನಸ್ಸು ಬ್ರಹ್ಮವಾಗಿ ನಿಲ್ಲುವದು. ಇದರಿಂದ ಜ್ಞಾನವೂ ದುಃಖನಾಶವೂ ಶಾಂತಿಯೂ ಉಂಟಾಗುತ್ತವೆ. ಹೀಗೆ ಮಧ್ಯಮಾಧಿಕಾರಿಗಳು ಅರಿಯುವ ವಸ್ತುವೂ ಪರಮಾರ್ಥವಾಗಿ ಜ್ಞಾನವಿಭಾಗಶೂನ್ಯವಾದ ಜನ್ಮರಹಿತವಾದ ಬ್ರಹ್ಮವೇ.

೪೮. ಇದುವರೆಗೆ ಹೇಳಿದ ಮನೋನಿಗ್ರಹವೇ ಮುಂತಾದ ಉಪಾಯವು ಯಾವದೂ ಪರಮಾರ್ಥವಲ್ಲ. ಪರಮಾರ್ಥವು ಯಾವದೆಂದರೆ ಯಾವ ಜೀವನೂ ಹುಟ್ಟುವದಿಲ್ಲ, ಅವನು ಹುಟ್ಟುವದಕ್ಕೆ ಕಾರಣವೂ ಇಲ್ಲ. ಯಾವದೊಂದೂ ಹುಟ್ಟುವದಿಲ್ಲ. ಎಲ್ಲವೂ ಅಜವೂ ಅದ್ವಿತೀಯವೂ ಆದ ಬ್ರಹ್ಮವೇ ಎಂಬುದೇ ಉತ್ತಮಸತ್ಯವು.

## ಅಲಾತಶಾಂತಿಪ್ರಕರಣ

೧-೨. ಜ್ಞಾನ, ಜ್ಞೇಯ, ಜ್ಞಾತೃ-ಇವೆಲ್ಲವೂ ಆಕಾಶದಂತೆ ನಿತ್ಯವಾದ ಸರ್ವಗತವಾದ ಅಸಂಗವಾದ ಒಂದೇ ತತ್ತ್ವದಲ್ಲಿ ಕಲ್ಪಿತವಾಗಿರುವ ತೋರಿಕೆಗಳು. ಅದ್ವೈತದರ್ಶನವು ಇಂಥ ಬ್ರಹ್ಮತತ್ತ್ವವನ್ನು ತಿಳಿಸುವದರಿಂದ ಅಸ್ಪರ್ಶಯೋಗವೆಂದು ಪ್ರಸಿದ್ಧವಾಗಿರುತ್ತದೆ. ಆದರಲ್ಲಿ ಯಾವ ವಿವಾದವಾಗಲಿ ವಿರೋಧವಾಗಲಿ ಇರುವದಿಲ್ಲ ; ಅದು ಎಲ್ಲಾ ಪ್ರಾಣಿಗಳಿಗೂ ಸುಖಕರವಾದದ್ದು, ಹಿತವಾದದ್ದು.

೩-೧೦. 'ಇಲ್ಲದ ವಸ್ತು ಹುಟ್ಟಲಾರದು', 'ಇರುವದು ಹುಟ್ಟುವದು ಹೇಗೆ ?' ಎಂದು ದ್ವೈತವಾದಿಗಳು ಒಬ್ಬರೊಡನೊಬ್ಬರು ವಿವಾದಮಾಡುತ್ತಾರೆ. ಇದರಿಂದ ಹುಟ್ಟೆಂಬುದೇ ಇಲ್ಲವೆಂದು ಸ್ಪಷ್ಟವಾಗುತ್ತದೆ. ಸ್ವಭಾವದಿಂದ ಅಜವಾದ ಅಮೃತವಾದ ಧರ್ಮವು ಹುಟ್ಟಿ ಮರ್ತ್ಯವಾಗಲಾರದು. ಆತ್ಮರುಗಳಿಗೆ ಮುಪ್ಪುಸಾವುಗಳಿಲ್ಲವೆಂಬುದೇ ಸಿದ್ಧಾಂತವು ; ಆದರೂ ಜನರು ತಮಗೆ ಮುಪ್ಪುಸಾವುಗಳುಂಟೆಂದು ನಂಬಿ ಅದೇ ಭಾವನೆಯಿಂದ ಅನರ್ಥವನ್ನು ಹೊಂದುತ್ತಾರೆ.

೧೧-೨೩. ಹುಟ್ಟುವದು ನಿಜವೆಂದು ನಂಬಿರುವವರಲ್ಲಿ ಕೆಲವರು ಸತ್ಕಾರ್ಯವಾದಿಗಳು, ಮತ್ತೆ ಕೆಲವರು ಅಸತ್ಕಾರ್ಯವಾದಿಗಳು. ಇವರಿಬ್ಬರೂ ಒಬ್ಬರ ಮತದಲ್ಲೊಬ್ಬರು ದೋಷವನ್ನು ತೋರಿಸುತ್ತಿರುವರು ; ಆದರಿಂದ ಇಬ್ಬರ ಮತದಲ್ಲಿಯೂ ದೋಷವಿದೆಯೆಂದೇ ಸ್ಪಷ್ಟವಾಗುತ್ತದೆ. ಆತ್ಮರು ಹುಟ್ಟುವದಕ್ಕೆ ಧರ್ಮಾಧರ್ಮಗಳು ಕಾರಣ, ಅವುಗಳಿಂದ ಶರೀರವೆಂಬ ಕಾರ್ಯವಾಗುತ್ತದೆ-ಎಂದು ಕರ್ಮವಾದಿಗಳು ಹೇಳುತ್ತಾರೆ ; ಆದರೆ ಧರ್ಮಾಧರ್ಮಗಳನ್ನು ಮಾಡುವದಕ್ಕೆ ಮೊದಲೇ ಶರೀರವಿರಬೇಕಾಗುತ್ತದೆ. ಆದ್ದರಿಂದ ಈ ವಾದಿಗಳ ಮತದಲ್ಲಿ ಧರ್ಮಾಧರ್ಮಗಳೆಂಬ ಹೇತು, ಶರೀರವೆಂಬ ಫಲ ಈ ಎರಡಕ್ಕೂ ಅನ್ಯೋನ್ಯಾಶ್ರಯವಿದೆ-ಎಂಬ ದೋಷವುಂಟಾಗುತ್ತದೆ. ಹೇತುಫಲಗಳ ಸಂಬಂಧವನ್ನು ಬಿಡಿಸಿ ಹೇಳುವದಕ್ಕೆ ಬರುವ ಹಾಗೆಯೇ ಇಲ್ಲ. ಇವುಗಳಲ್ಲಿ ಯಾವದು ಮೊದಲು ಇರುತ್ತದೆಯೆಂದೂ ನಿರ್ಧರಿಸುವದಕ್ಕಾಗುವದಿಲ್ಲ ; ಇವು ಅನಾದಿಯೆಂದೂ ಸಿದ್ಧವಾಗುವದಿಲ್ಲ. ಆದ್ದರಿಂದ ಹುಟ್ಟುವದೆಂಬುದೇ ಸುಳ್ಳು-ಎಂದು ಸ್ಪಷ್ಟವಾಗುತ್ತದೆ.

೨೪-೨೯. ಘಟಜ್ಞಾನ, ಪಟಜ್ಞಾನ-ಎಂದು ಜ್ಞಾನದಲ್ಲಿ ಭೇದಗಳಿರುವದರಿಂದಲೂ ಬೇರೆಬೇರೆಯ ವಿಷಯಗಳಿಂದ ಬೇರೆಬೇರೆಯಾಗಿ ಸುಖದುಃಖಾದಿಗಳು ಉಂಟಾಗುತ್ತಿರುವದರಿಂದಲೂ ಈ ವೈಚಿತ್ರ್ಯಕ್ಕೆ ಕಾರಣವಾಗಿ ಜ್ಞೇಯವಸ್ತುಗಳು ಹುಟ್ಟಿರಬೇಕು-ಎಂದು ಕೆಲವರು ಹೇಳುತ್ತಾರೆ. ವಿಜ್ಞಾನವಾದಿಗಳಾದ ಬೌದ್ಧರು ಅವರ ಮತವನ್ನು ಖಂಡಿಸಿ "ವಿಷಯಗಳು ಕಾರ್ಯವಾದರೆ ತಮ್ಮ ಕಾರಣವನ್ನು ಬಿಟ್ಟು ಬೇರೆಯಾಗಿ ಇರಲೇ ಆರವು ; ವಿಷಯಗಳೂ ಅವುಗಳಿಂದಾಗುವ ಸುಖದುಃಖಾದಿಗಳೂ ನಿಜವಾಗಿರುವವಾದರೆ ಸುಷುಪ್ತಿ ಸಮಾಧ್ಯಾದಿಗಳಲ್ಲಿ ಅವು ತೋರುವದಿಲ್ಲವೇಕೆ ? ಈ ಕಾರಣದಿಂದ ಹೊರಗೆ ವಿಷಯವು ಇರುವದೆಂಬುದು ಸುಳ್ಳು. ಚಿತ್ತವೊಂದೇ ನಿಜವು, ಅದೇ ಬಗೆಬಗೆಯ ವಿಷಯಗಳ ಆಕಾರದಿಂದ ತೋರುತ್ತಿರುವದು" ಎಂದು ವಾದಿಸುತ್ತಾರೆ. ಆದರೆ ಬೌದ್ಧರು ಹೇಳುವ ಯುಕ್ತಿಯಿಂದಲೇ ಚಿತ್ತವೂ ಇಲ್ಲವೆಂದು ಸಿದ್ಧವಾಗುತ್ತದೆ. ಇಲ್ಲದ ಗಡಿಗೆಯು ಗಡಿಗೆಯಂತೆ ತೋರಬಹುದಾದರೆ ಇಲ್ಲದ ಚಿತ್ತವು ಚಿತ್ರದಂತೆ ತೋರುವದೆಂದು ಏಕೆ ಹೇಳಬಾರದು ? ಆದ್ದರಿಂದ ಚಿತ್ರದ ವಿಷಯಗಳೂ ಹುಟ್ಟುವದಿಲ್ಲ, ಚಿತ್ತವೂ ಹುಟ್ಟುವದಿಲ್ಲ ; ಎಂದೆಂದಿಗೂ ಹುಟ್ಟದೆ ಕೂಟಸ್ಥವಾಗಿರುವ ಬ್ರಹ್ಮವೊಂದೇ ತತ್ತ್ವವು-ಎಂದು ಸಿದ್ಧವಾಯಿತು.

೩೦-೪೧. ಹುಟ್ಟುವದು ಪರಮಾರ್ಥವೆನ್ನುವವರ ಮತದಲ್ಲಿ ಸಂಸಾರವು ಅನಾದಿ, ಸಾಂತ-ಎಂದಾಗುವದು ; ಮೋಕ್ಷವು ಸಾದಿ, ನಿತ್ಯ-ಎಂದಾಗುವದು. ಇದು ಯುಕ್ತಿವಿರುದ್ಧ. ಆದ್ದರಿಂದ ಸಂಸಾರವು ಮೊದಲೂ ಇಲ್ಲ, ಕೊನೆಯಲ್ಲಿಯೂ ಇಲ್ಲ, ನಡುವೆ ಇರುವಂತೆ ತೋರಿದರೂ ನಿಜವಾಗಿ ಇಲ್ಲ-ಎಂಬುದೇ ಸರಿಯಾದದ್ದು. ಕನಸಿನಲ್ಲಿ ಹೇಗೆ ನಿಜವಾಗಿಲ್ಲದ ಶರೀರಾದಿಗಳು ತೋರುವವೋ ಹಾಗೆಯೇ ಎಚ್ಚರದಲ್ಲಿಯೂ ನಿಜವಾಗಿಲ್ಲದ ಶರೀರಾದಿಗಳೇ ತೋರುತ್ತಿರುವವೆಂದು ಕಲ್ಪಿಸುವದು ಯುಕ್ತವಾಗಿರುತ್ತದೆ. ಎಚ್ಚರವು ಕನಸಿನಂತೆ ಕಾರ್ಯವೆಂದು ಹೇಳುವವರು ಕನಸಿನಂತೆ ಎಚ್ಚರವೂ ಕನಸಿನಿಂದೆದ್ದವನೊಬ್ಬನಿಗೇ ಎಂದು ಒಪ್ಪಬೇಕಾಗುತ್ತದೆ. ಆದರೆ ಸರಿಯಾಗಿ ನೋಡಿದರೆ ಎಚ್ಚರ ಕನಸುಗಳಿಗೆ ಕಾರ್ಯಕಾರಣಭಾವವಿದೆಯೆಂಬುದೂ ಹೊಂದುವದಿಲ್ಲ. ಏಕೆಂದರೆ ಅಸತ್ತಿನಿಂದ ಅಸತ್ತು ಹುಟ್ಟಲಾರದು, ಅಸತ್ತಿನಿಂದ ಸತ್ತು ಹುಟ್ಟಲಾರದು, ಸತ್ತಿನಿಂದ ಸತ್ತು ಹುಟ್ಟಲಾರದು,

ಸತ್ತಿನಿಂದ ಅಸತ್ತೂ ಹುಟ್ಟುವುದಿಲ್ಲ. ಹೀಗೆ ಬುದ್ಧಿಯ ಬಗೆಯಿಂದ ನೋಡಿದರೂ ಹುಟ್ಟುವದೆಂಬುದೇ ಯುಕ್ತಿವಿರುದ್ಧವಾಗಿರುವದರಿಂದ ವಿಚಿತ್ರಕನಸುಗಳಿಗೆ ಕಾರ್ಯಕಾರಣಭಾವವಿಲ್ಲ ; ಆಯಾ ಪದಾರ್ಥಗಳನ್ನು ಅಲ್ಲಲ್ಲಿಯೇ ಜನರು ಕಲ್ಪಿಸಿಕೊಳ್ಳುತ್ತಾರೆಂಬುದೇ ಸರಿಯಾದದ್ದು.

೪೨-೪೬. ಬ್ರಹ್ಮದಿಂದ ಪ್ರಪಂಚವು ಹುಟ್ಟುತ್ತದೆ ಎಂದು ಬ್ರಹ್ಮವಾದಿಗಳೂ ಹೇಳುವದುಂಟು. ಹೊರಗೆ ವಸ್ತುಗಳು ಕಾಣುವದರಿಂದಲೂ ಅವುಗಳನ್ನು ನಾವು ವ್ಯವಹಾರದಲ್ಲಿ ಬಳಸುವದರಿಂದಲೂ ಅವು ನಿಜವಾಗಿಯೂ ಇರುವವೆಂದು ನಂಬಿರುವ ಜನರಿಗೆ ಮೊದಲನೆಯ ಮೆಟ್ಟಿಲಾಗಿ ಬ್ರಹ್ಮದಿಂದ ಜಗತ್ತು ಹುಟ್ಟಿರುವದೆಂದು ಉಪನಿಷತ್ತುಗಳು ಉಪದೇಶಿಸುವರೇ ಹೊರತು ನಿಜವಾಗಿಯೂ ಹುಟ್ಟುವಿಕೆಯುಂಟೆಂಬ ಅಭಿಪ್ರಾಯದಿಂದಲ್ಲ. ತತ್ತ್ವವು ಹುಟ್ಟುವಂತೆಯೂ ಚಲಿಸುವಂತೆಯೂ ಸಗುಣವಾಗಿರುವಂತೆಯೂ ತೋರುವದು ನಿಜ ; ಆದರೆ ಪರಮಾರ್ಥವಾಗಿ ತಾನು ಇದ್ದಂತೆಯೇ ಇರುತ್ತದೆ ಈ ದೃಷ್ಟಿಯಿಂದ ನೋಡಿದಾಗ ಚಿತ್ತವೂ ಹುಟ್ಟಿರುವದಿಲ್ಲ, ಚಿತ್ತಕ್ಕೆ ತೋರುತ್ತಿರುವ ವಿಷಯಗಳೂ ಹುಟ್ಟಿರುವದಿಲ್ಲ ; ಆತ್ಮರೂ ಹುಟ್ಟಿರುವದಿಲ್ಲ. ಹೀಗೆಂಬುದೇ ಸರಿಯೆಂದು ತಿಳಿದವರು ಅವಿದ್ಯೆಯ ಅಂಧಂತಮಸ್ಸಿಗೆ ಬೀಳದೆ ಇರುವರು.

೪೭-೫೪. ವೇಗವಾಗಿ ತಿರುಗಿಸುವ ಕೊಳ್ಳಿಯಲ್ಲಿ ಅನೇಕ ಆಕಾರಗಳು ತೋರುವವಷ್ಟೆ, ಅವು ಎಲ್ಲಿಂದ ಬರುತ್ತವೆ ? ಕೊಳ್ಳಿಯಲ್ಲಿ ತಿರುಗಿಸುವದನ್ನು ನಿಲ್ಲಿಸಿದಾಗ ಎಲ್ಲಿಗೆ ಹೋಗುತ್ತವೆ ? ಈ ಪ್ರಶ್ನೆಗೆ ತಿಳಿದವರು ಕೊಡಬಹುದಾದ ಉತ್ತರವಿಷ್ಟೇ : ಅವು ಕೊಳ್ಳಿಗಿಂತ ಬೇರೆಯಾಗಿ ಇಲ್ಲವೇ ಇಲ್ಲ ; ಅವು ಕೊಳ್ಳಿಯಿಂದಾಗಲಿ ಮತ್ತೆಲ್ಲಿಂದಾಗಲಿ ಬಂದಿರುವದಿಲ್ಲ. ಕೊಳ್ಳಿಯು ತಿರುಗುವದು ನಿಂತಾಗ ಕೊಳ್ಳಿಯೊಳಕ್ಕಾಗಲಿ ಮತ್ತೆಲ್ಲಿಗಾದರೂ ಆಗಲಿ- ಹೋಗುವದೂ ಇಲ್ಲ. ಇದರಂತೆಯೇ ಜ್ಞಾನಸ್ವರೂಪನಾದ ಆತ್ಮನಲ್ಲಿ ಅಜ್ಞಾನದಿಂದ ತೋರುವ ಆಕಾರಗಳು ಎಲ್ಲಿಂದಲೂ ಬರುವದಿಲ್ಲ, ಅಜ್ಞಾನವು ನಾಶವಾದರೆ ಅವು ಎಲ್ಲಿಗೂ ಹೋಗುವದೂ ಇಲ್ಲ. ಆತ್ಮನಿಗಿಂತ ಬೇರೆಯಾಗಿ ಅವು ಇರುವದೇ ಇಲ್ಲ. ಕಾರ್ಯಕಾರಣಗಳೆಂಬವು ದ್ರವ್ಯಗಳಾಗಿರಬೇಕು, ಅಥವಾ ದ್ರವ್ಯಕ್ಕೆ ಸಂಬಂಧಪಟ್ಟು ಬೇರೆಯ ಪದಾರ್ಥಗಳಾಗಿರಬೇಕು-ಎಂಬುದು ಕಾರ್ಯಕಾರಣವಾದಿಗಳ ನಂಬಿಕೆ ; ಆದರೆ ಆತ್ಮನು ದ್ರವ್ಯವಲ್ಲ, ಆತ್ಮನಿಗಿಂತ ವ್ಯತಿರಿಕ್ತವಾಗಿ ಯಾವದೊಂದೂ ಇರುವದೇ ಇಲ್ಲ. ಹೀಗಿರುವಲ್ಲಿ ಕಾರ್ಯಕಾರಣವನ್ನು ಒಪ್ಪುವದು ಹೇಗೆ ಸರಿಯಾದೀತು ? ಆದ್ದರಿಂದ ಆತ್ಮರುಗಳಾಗಲಿ ಚಿತ್ತವಾಗಲಿ ಹುಟ್ಟುವದಿಲ್ಲವೆಂಬುದೇ ಪರಮಾರ್ಥವು.

೫೫-೭೪. ಹೇತುಫಲವೆಂಬ ಸಂಸಾರವು ನಿಜವಾಗಿ ಇಲ್ಲವೇ ಇಲ್ಲ ; ಅದು ಇದೆಯೆಂಬ ಅಭಿಮಾನವೇ ಸಂಸಾರವು. ಅಜ್ಞಾನದೃಷ್ಟಿಯಿಂದ ಎಲ್ಲವೂ ಹುಟ್ಟುತ್ತದೆ, ಜ್ಞಾನದೃಷ್ಟಿಯಿಂದ ಯಾವದೂ ಹುಟ್ಟುವದಿಲ್ಲ. ಆತ್ಮರು ಹುಟ್ಟುವಂತೆಯೂ ಸಾಯುವಂತೆಯೂ ತೋರುವದು ಕನಸು, ಮಾಯೆ, ಯೋಗಿಯ ನಿರ್ಮಾಣ-ಇವುಗಳಲ್ಲಿ ತೋರುವ ಜೀವರುಗಳ ಹುಟ್ಟುಸಾವುಗಳಂತೆ ಬರಿಯ ತೋರಿಕೆಯಾಗಿರುತ್ತದೆ ಆತ್ಮರು ನಿತ್ಯರೊ, ಅನಿತ್ಯರೊ ?-ಎಂಬುದೂ ಪರಮಾರ್ಥಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ , ಯಾವದೊಂದೂ ಹುಟ್ಟುವದಿಲ್ಲವೆಂಬುದೇ ಪರಮಾರ್ಥವು. ಚಿತ್ತವೂ ಚಿತ್ತದಿಂದ ಕಲ್ಪಿತವಾದದ್ದೆಲ್ಲವೂ-ಶಾಸ್ತ್ರ, ಶಿಷ್ಯ, ಗುರು ಎಂಬ ಭೇದವುಕೂಡ-ಪರಮಾರ್ಥ

ವಾಗಿರುವದೇ ಇಲ್ಲ. ಆತ್ಮನು ಹುಟ್ಟುವವನಲ್ಲ ಎಂಬುದೂ ಪರಮಾರ್ಥವಲ್ಲ. ಅವನು ಹುಟ್ಟುತ್ತಾನೆಂದು ಹೇಳುವವರ ಕಲ್ಪನೆಯನ್ನು ಅಲ್ಲಗಳೆಯುವದಕ್ಕಾಗಿ ಆತ್ಮನು ಅಜನು ಎಂದು ಹೇಳುತ್ತೇವೆಯೇ ಹೊರತು ಮತ್ತೇನೂ ಇಲ್ಲ.

೭೫-೮೧. ದ್ವೈತವು ನಿಜವಾಗಿಲ್ಲದಿದ್ದರೂ ಅದು ಇದೆಯೆಂಬ ಅಭಿಮಾನದಿಂದಲೇ ಅದು ಇರುವಂತೆ ತೋರುತ್ತಿರುವದು. ಅದು ಇಲ್ಲವೆಂಬುದನ್ನು ತಿಳಿದುಕೊಂಡರೆ ಮುಕ್ತಿಯಾಗುವದು. ಏಕೆಂದರೆ ಆಗ ಧರ್ಮಾಧರ್ಮಗಳೆಂಬ ನಿಮಿತ್ತವಿಲ್ಲದಿರುವದರಿಂದ ಹುಟ್ಟುವದೆಂಬ ಸಂಸಾರವೂ ಇರುವದಿಲ್ಲ. ಪರಮಾರ್ಥವಾಗಿ ದ್ವೈತವಿಲ್ಲವೇ ಇಲ್ಲ ಎಂಬುದನ್ನು ತಿಳಿದುಕೊಂಡು ನಿಶ್ಚಲವಾಗಿರುವದು ಕೂಟಸ್ಥವಾದ ಬ್ರಹ್ಮವನ್ನು ಬಲ್ಲ ಜ್ಞಾನಿಗಳಿಗೆ ಮಾತ್ರ ಸಾಧ್ಯವಾಗುತ್ತದೆ.

೮೨-೮೬. ಆತ್ಮನ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳುವದು ಕಷ್ಟ ; ಅದನ್ನು ತಪ್ಪಾಗಿ ತಿಳಿದುಕೊಳ್ಳುವದು ಸುಲಭ. ಆತ್ಮನು 'ಇದಾನೆ', 'ಇಲ್ಲ', ಇದ್ದೂ ಇದಾನೆ, 'ಇಲ್ಲವೂ ಇಲ್ಲ', 'ಇಲ್ಲವೇ ಇಲ್ಲ'-ಎಂಬ ಬೇರಬೇರೆಯ ನಾಲ್ಕುಬಗೆಯನ್ನು ವಾದಿಗಳು ಆತ್ಮನಲ್ಲಿ ಅವಿವೇಕದಿಂದ ಕಲ್ಪಿಸಿರುತ್ತಾರೆ. ಈ ತಪ್ಪು ಕಲ್ಪನೆಗಳನ್ನು ಮೀರಿರುವ ಪರಮಾರ್ಥವನ್ನು ಬಲ್ಲವನೇ ಸರ್ವಜ್ಞನು, ಬ್ರಾಹ್ಮಣನು, ಕೃತಕೃತ್ಯನು, ವಿನೀತನು, ಶಾಂತನು, ದಾಂತನು.

೮೭-೯೦. ದ್ವೈತಿಗಳ ಯುಕ್ತಿಯಿಂದಲೇ ಅಜಾತಿವಾದವನ್ನು ಸಾಧಿಸಿದ್ದಾಯಿತು. ವೇದಾಂತ ಪ್ರಕ್ರಿಯೆಯಾದ ಅವಸ್ಥಾತ್ರಯಪರೀಕ್ಷೆಯ ದೃಷ್ಟಿಯಿಂದ ನೋಡಿದರಂತೂ ಅವಸ್ಥೆಗಳು ಒಂದರಲ್ಲೊಂದು ಲಯವಾಗಿ ಕೊನೆಗೆ ಅವಸ್ಕಾರಹಿತವಾದ ಆತ್ಮತತ್ತ್ವವೇ ಉಳಿಯುತ್ತದೆ. ಅವಸ್ಥೆಗಳು, ಪಾಂಡಿತ್ಯಬಾಲ್ಯಮೌನಗಳೆಂಬ ಸಾಧನಗಳು, ಶಮಾದಿಗಳು-ಇವೆಲ್ಲವೂ ಸಾಧಕನ ದೃಷ್ಟಿಯಿಂದ ಬೇಕಾದವುಗಳಾದರೂ ಇವುಗಳುಕೂಡ ಅವಿದ್ಯಾಕಾರ್ಯವೇ ಆಗಿರುತ್ತವೆ ; ಕೂಟಸ್ಥಚೈತನ್ಯವಾದ ಬ್ರಹ್ಮಾತ್ಮನೆಂಬ ತತ್ತ್ವವೊಂದೇ ಪರಮಾರ್ಥವಾಗಿರುತ್ತದೆ.

೯೧-೧೦೦. ಅಜಾದ್ವಿತೀಯವಾದ ಬ್ರಹ್ಮವೊಂದೇ ಸತ್ಯವು. ಅದು ನಿತ್ಯಶುದ್ಧಬುದ್ಧ ಮುಕ್ತಸ್ವಭಾವವಾಗಿರುತ್ತದೆ ; ಅದೇ ನಮ್ಮಗಳೆಲ್ಲರ ಆತ್ಮನು. ಹೀಗೆಂದು ತಿಳಿದವರು ಮಹಾಜ್ಞಾನಿಗಳು ; ಮಿಕ್ಕವರು ಕೃಪಣರು. ನಮ್ಮಗಳ ಆತ್ಮನಾಗಿ ನಿತ್ಯವೂ ಕೂಟಸ್ಥವೂ ಆಗಿರುವ ಅದ್ವಿತೀಯಚೈತನ್ಯವನ್ನು ಬೋಧಿಸಿರುವದೇ ವೇದಾಂತದ ವಿಶೇಷವು. ಇದನ್ನು ತಿಳಿದುಕೊಂಡರೆ ಗೌತಮಬುದ್ಧನು ಉಪದೇಶಿಸಿರುವ ವಿಜ್ಞಾನಕ್ಕೂ ವೇದಾಂತಿಗಳು ಹೇಳಿರುವ ಆತ್ಮತತ್ತ್ವಕ್ಕೂ ಇರುವ ತಾರತಮ್ಯವು ಸ್ಫುಟವಾಗಿ ತಿಳಿದಂತಾಗುವದು.

# ಪರಿಶಿಷ್ಟ

## ೧. ಬೌದ್ಧಪ್ರಕ್ರಿಯಾಸಾಮ್ಯವಿಚಾರ

ಮಾಂಡೂಕ್ಯಕಾರಿಕೆಯಲ್ಲಿ ಬರುವ ಕೆಲವು ವಾಕ್ಯಭಾಗಗಳೂ ಶಬ್ದಗಳೂ ಬೌದ್ಧ ಗ್ರಂಥಗಳಲ್ಲಿಯೂ ಕಂಡುಬರುತ್ತವೆಯಾದರೂ ಇವೆರಡಕ್ಕೂ ಅರ್ಥಸಾಮ್ಯವಿಲ್ಲ ಎಂಬುದನ್ನು ಪೀಠಿಕೆಯಲ್ಲಿ ಸ್ಪಷ್ಟಪಡಿಸಿರುತ್ತದೆ. ಇಂಥ ವಾಕ್ಯಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ ; ಶಬ್ದಗಳನ್ನು ಮುಂದಿನ ಪರಿಶಿಷ್ಟದಲ್ಲಿ ಕೊಟ್ಟಿದೆ.

೧. *ಅನಿರೋಧಮನುತ್ಪಾದಮನುಚ್ಛೇದಮಶಾಶ್ವತಮ್ ।*
*ಅನೇಕಾರ್ಥಮನಾನಾರ್ಥಮನಾಗಮಮನಿರ್ಗಮಮ್ ॥*
*ಯಃ ಪ್ರತೀತ್ಯಸಮುತ್ಪಾದಂ ಪ್ರಪಞ್ಚೋಪಶಮಂ ಶಿವಮ್ ।*
*ದೇಶಯಾಮಾಸ ಸಂಬುದ್ಧಸ್ತಂ ವನ್ದೇ ವದತಾಂ ವರಮ್ ॥*

– ಮಾಧ್ಯಮಿಕವೃತ್ತಿ, ನಾಗಾರ್ಜುನಕಾರಿಕೆ.

*ಪೂರ್ವೋಪಲಮ್ಭೋಪಶಮಃ ಪ್ರಪಞ್ಚೋಪಶಮಃ ಶಿವಃ ।*
*ನ ಕ್ವಚಿತ್ ಕಸ್ಯಚಿತ್ ಕೈಶ್ಚಿತ್ ಧರ್ಮೋ ಬುದ್ಧೇನ ದೇಶಿತಃ ॥*

– ನಿರ್ವಾಣಪರೀಕ್ಷಾ.

ಇಲ್ಲಿ ಕಾರಿಕೆಯ ಬೇರೆಬೇರೆಯ ಕಡೆಗಳಲ್ಲಿರುವ ಶಬ್ದಗಳ ಸಾಮ್ಯವು ಕಾಣುವದು. ಆದರೆ ಅಲ್ಲಿರುವ ತುರ್ಯಾತ್ಮನ ಮಾತು ಇಲ್ಲಿಲ್ಲ. ಇಲ್ಲಿರುವದು ಪ್ರತೀತ್ಯ ಸಮುತ್ಪಾದದ ವಿಚಾರ. ಅವಿದ್ಯಾ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ, ಜಾತಿ, ಜರಾಮರಣ-ಇವು ಒಂದರಿಂದ ಒಂದು ಉಂಟಾಗುವದೇ ಪ್ರತೀತ್ಯಸಮುತ್ಪಾದವು. 'ಪ್ರಪಂಚೋಪಶಮ' ಎಂಬ ಮಾತು ಬೌದ್ಧರ ನಿರ್ವಾಣವನ್ನು ತಿಳಿಸುತ್ತದೆ ; ನಿರ್ವಿಶೇಷನಾದ ಆತ್ಮನನ್ನು ಹೇಳುವದಿಲ್ಲ.

೨. *ಕಲ್ಪನಾಮಾತ್ರಮಿತ್ಯಸ್ಮಾತ್ ಸರ್ವಧರ್ಮಾಃ ಪ್ರಕಾಶಿತಾಃ ।*
*ಕಲ್ಪನಾಪ್ಯಸತೀ ಪೂರ್ವೋಕ್ತಾ ಯಯಾ ಶೂನ್ಯಂ ವಿಕಲ್ಪ್ಯತೇ ॥*

–ನಾಗಾರ್ಜುನನ ಅಚಿನ್ತ್ಯಸ್ತವ.

ಕಲ್ಪನೆಯೂ ಸತ್ಯವಲ್ಲವೆಂಬ ವಿಷಯವು ಗೌಡಪಾದಕಾರಿಕೆಯಲ್ಲಿಯೂ (೧-೧೮) ಇದೆ. ಆದರೆ ಶೂನ್ಯವನ್ನೇ ಬಗೆಬಗೆಯಾಗಿ ವಿಕಲ್ಪಿಸುತ್ತಾರೆಂಬುದು ಕಾರಿಕೆಗೆ ಸಮ್ಮತವಲ್ಲ. ಆತ್ಮನಲ್ಲಿಯೇ ಎಲ್ಲವೂ ಕಲ್ಪಿತವಾಗಿದೆ ಎಂಬುದೇ ವೇದಾಂತ ಸಿದ್ಧಾಂತವೆಂದು (೨-೧೨) ರಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ.

೩. *ಯಥಾ ಮಾಯಾ ಯಥಾ ಸ್ವಪ್ನೋ ಗನ್ಧರ್ವನಗರಂ ಯಥಾ ।*
*ತಥೋತ್ಪಾದಸ್ತಥಾ ಸ್ಥಾನಂ ತಥಾ ಭಙ್ಗ ಉದಾಹೃತಃ ॥*

-ಮಾಧ್ಯಮಿಕಸೂತ್ರ.

ಇಲ್ಲಿ ಕಾಣುವ ನಿರಾಸ್ಪದಕಲ್ಪನೆಯು ಬೌದ್ಧರದು ; ಕಾರಿಕೆಯಲ್ಲಿ (೨-೩೧) ಮೊದಲು ಹೇಳಿದ ಆತ್ಮಾಧಿಷ್ಠಾನವಾದವನ್ನೇ 'ವೇದಾನ್ತೇಷು' ಎಂಬ ಮಾತಿನಿಂದ ಸೂಚಿಸಿರುತ್ತದೆ.

೪. *ಉತ್ಪಾದೇ ಚ ನಿರೋಧೇ ಚ ತಥಾತಾಯಾಂ ಗಭೀರತಾ ।*
*ಜ್ಞೇಯಜ್ಞಾನೇ ಚ ಚರ್ಯಾಯಾಮದ್ವಯೋಪಾಯಕೌಶಲೇ ।*
*ಸ್ವಪ್ನೋಪಮತ್ವಾದ್ಧರ್ಮಾಣಾಂ ಭವಶಾನ್ತ್ಯೋರಕಲ್ಪನಾ ॥*

- ಅಭಿಸಮಯಾಲಂಕಾರಿಕಾ, ಮೈತ್ರೇಯಕೃತ.

'ನ ನಿರೋಧೋ ನ ಚೋತ್ಪತ್ತಿಃ' (೨-೩೨) ಎಂಬ ಕಾರಿಕೆಯಲ್ಲಿಯೂ ಇದೇ ಅರ್ಥವಿದ್ದರೂ ಮುಂದಿನ ಕಾರಿಕೆಯಲ್ಲಿ ಅಧಿಷ್ಠಾನರೂಪವಾದ ಪರಮಾರ್ಥತತ್ತ್ವ ವೊಂದಿದೆಯೆಂದು ಹೇಳಿರುತ್ತದೆ.

೫. *ನ ಸಂಭವಃ ಸ್ವಭಾವಸ್ಯ ಯುಕ್ತಃ ಪ್ರತ್ಯಯಹೇತುಭಿಃ ।*
*ಸ್ವಭಾವಃ ಕೃತಕೋ ನಾಮ ಭವಿಷ್ಯತಿ ಪುನಃ ಕಥಮ್ ॥*

-ಮಾಧ್ಯಮಿಕಸೂತ್ರ.

''ಸ್ವಭಾವೇನಾಮೃತೋ ಯಸ್ಯ'' (೩-೨೨, ೪-೮) ಎಂಬ ಕಾರಿಕೆಯಲ್ಲಿಯೂ ಸ್ವಭಾವವು ಬದಲಾಯಿಸಲಾರದು ಎಂದು ಹೇಳಿದೆ ; ಆದರೆ ಮಾಧ್ಯಮಿಕಸೂತ್ರದಲ್ಲಿ ಪ್ರತ್ಯಯಹೇತುಗಳಿಂದ ಆಗುವ ಪ್ರತೀತ್ಯಸಮುತ್ಪಾದವನ್ನು-ಎಂದರೆ ಅವಿದ್ಯೆಯಿಂದಾ ಗುವ ಪ್ರಪಂಚದುಃಖ, ಮಹಾಭೂತಗಳಿಂದಾಗುವ ಶರೀರಸೃಷ್ಟಿ ಎಂಬವುಗಳ ವಿಚಾರ ಗಳನ್ನು ಕುರಿತು-ಹೇಳಿರುತ್ತದೆ. ಕಾರಿಕೆಯಲ್ಲಿ ಅಜಾತಬ್ರಹ್ಮವಾದವು ಪ್ರಕೃತವಾಗಿರುವ

ದರಿಂದ ಆತ್ಮನು ದ್ವೈತರೂಪದಲ್ಲಿ ಮಾಯೆಯಿಂದ ತೋರುವನೆಂಬ ಶ್ರುತಿಯನ್ನು ಮುಂದೆ (೩-೨೮ರಲ್ಲಿ) ಉದಾಹರಿಸಿರುತ್ತದೆ.

೭. ಆಕಾಶಂ ಶಶಶೃಙ್ಗಂ ಚ ವನ್ಧ್ಯಾಯಾಃ ಪುತ್ರ ಏವ ಚ ।
ಅಸನ್ತಶ್ಚಾಭಿಧ್ಯಾಯನ್ತೇ ತಥಾ ಭಾವೇನ ಕಲ್ಪನಾ ॥

-ನಾಗಾರ್ಜುನಕಾರಿಕಾ.

ಈ ಕಾರಿಕೆಯಲ್ಲಿ ಅಸತ್ತಿಗೆ ತೋರಿಕೆಯುಂಟೆಂಬುದಕ್ಕೆ ಆಕಾಶಾದಿಗಳನ್ನು ದೃಷ್ಟಾಂತವಾಗಿ ಕೊಟ್ಟಿರುತ್ತದೆ. ಸತ್ತಾಗಿರುವದಕ್ಕೆ ಮಾಯೆಯಿಂದ ಜನ್ಮವುಂಟು, ಅಸತ್ತಿಗೆ ಮಾಯೆಯಿಂದಲೂ ಜನ್ಮವಿಲ್ಲ ಎಂದು (೩-೨೭, ೨೮) ಗೌಡಪಾದಕಾರಿಕೆಯಲ್ಲಿ ಹೇಳಿರುವದು ಇದಕ್ಕೆ ಅತ್ಯಂತ ವಿರುದ್ಧವಾಗಿರುತ್ತದೆ.

೭. ಏತತ್ತು ಪರಮಂ ಸತ್ಯಂ ಯತ್ರ ಲೋಕೋ ನ ಗಾಹತೇ ॥

-ಭವಸಂಕ್ರಾಂತಿಸೂತ್ರ, ಶ್ರೀಯುತ ಅಯ್ಯಾಶಾಸ್ತ್ರಿಗಳು ಟಿಬೆಟಿ ಭಾಷೆಯಿಂದ ಸಂಸ್ಕೃತಕ್ಕೆ ಪುನಃಪರಿವರ್ತನೆಮಾಡಿದ್ದು.

ಇಲ್ಲಿ ಗೌಡಪಾದಕಾರಿಕೆಯ (೩-೪೮, ೪-೭೧, ೪-೯೫) ಕೆಲವು ಶಬ್ದಗಳು ಕಂಡುಬರುತ್ತವೆ ; ಆದರೆ ಅಲ್ಲಿರುವ ಅಜಾತಬ್ರಹ್ಮವಾದದ ಸುಳಿವೂ ಇಲ್ಲ.

೮. ಭಾವಾನ್ನ ಜಾಯತೇಽಭಾವೋ ನಾಭಾವಾದಪಿ ಜಾಯತೇ ।
ಭಾವ ಉತ್ಪದ್ಯತೇ ನಿತ್ಯಂ ಭಾವೋ ಭ್ರಾನ್ತಿಃ ಖಪುಷ್ಪವತ್ ॥

-ಭವಸಂಕ್ರಾಂತಿಪರಿಕಥಾ, ಅಯ್ಯಾಶಾಸ್ತ್ರಿಗಳ ಪುನಃಪರಿವರ್ತನೆ.

ಇಲ್ಲಿ 'ನಾಸ್ತ್ಯಸದ್ಧೇತುಕಮಸತ್' (೪-೪೦) ಎಂಬ ಗೌಡಪಾದಕಾರಿಕೆಯ ಛಾಯೆ ಇದೆ, ಆದರೆ ಅಲ್ಲಿರುವ ಅಜಾಚಲವಿಜ್ಞಾನದ (೪-೪೫) ಸುದ್ದಿಯು ಈ ಗ್ರಂಥದಲ್ಲಿಲ್ಲ. ಇಲ್ಲಿರುವದು ಆಕಾಶಪುಷ್ಪದೃಷ್ಟಾಂತದ ಶೂನ್ಯವಾದ.

೯. "ಅನ್ಯೋನ್ಯಲಕ್ಷಣಹೇತುಕೇ"

-ಲಂಕಾವತಾರಸೂತ್ರ

ಇದು "ಉಭೇ ಹ್ಯನ್ಯೋನ್ಯದೃಶ್ಯೇ ತೇ" ಎಂಬ (೪-೬೭) ಗೌಡಪಾದಕಾರಿಕೆಯನ್ನು ನೆನಪಿಗೆ ತರುವಂತಿದೆ. ಆದರೆ ಅದರ ಹಿಂದಿನ ಕಾರಿಕೆಗಳಲ್ಲಿರುವ ಸಾಕ್ಷಿಚೈತನ್ಯ

ವಾದವು ಲಂಕಾವತಾರಸೂತ್ರದಲ್ಲಿರುಪದಿಲ್ಲ ; ಅದಕ್ಕೆ ಬದಲು 'ಆತ್ಮತತ್ತ್ವವನ್ನು ಮೂಢ ಜನರಿಗಾಗಿ ಒಪ್ಪಿಕೊಂಡು ಬುದ್ಧರು ಉಪದೇಶಮಾಡುತ್ತಾರೆ' ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತದೆ.

೧೦. *ಅಸ್ತೀತಿ ಶಾಶ್ವತಗ್ರಾಹೋ ನಾಸ್ತೀತ್ಯುಚ್ಛೇದದರ್ಶನಮ್ ।*
*ತಸ್ಮಾದಸ್ತೀತಿ ನಾಸ್ತೀತಿ ನಾಶ್ರಯೇತ ವಿಚಕ್ಷಣಃ ॥*
*ಅಸ್ತೀತಿ ನಾಸ್ತೀತಿ ಉಭೇಽಪಿ ಅನ್ತಾಃ*
*ಶುದ್ಧೀತ್ಯಶುದ್ಧೀತಿ ಇಮೇಽಪಿ ಅನ್ತಾಃ ।*
*ತಸ್ಮಾದುಭೇ ಅನ್ತ ವಿವರ್ಜಯಿತ್ವಾ*
*ಮಧ್ಯೇಽಪಿ ಸ್ಥಾನಂ ನ ಕರೋತಿ ಪಣ್ಡಿತಃ ॥*

-ಮಾಧ್ಯಮಿಕವೃತ್ತಿ.

ಇಲ್ಲಿ ೪-೫೭, ೪-೮೩ ಈ ಗೌಡಪಾದಕಾರಿಕೆಗಳ ಶಬ್ದಪ್ರಯೋಗಗಳಿವೆ. ಆದರೆ ಎಲ್ಲಾ ವಿಕಲ್ಪಗಳನ್ನೂ ಬಿಡಬೇಕೆಂಬುದು ಇಲ್ಲಿಯ ಉಪದೇಶ ; ವಿಕಲ್ಪಗಳಿಗೆ ಆಧಾರ ವಾದ ಕೂಟಸ್ಥನಿತ್ಯಬ್ರಹ್ಮದಲ್ಲಿ ನಿಲ್ಲಬೇಕೆಂಬುದೇ ಗೌಡಪಾದರ ಉಪದೇಶ.

# ೨. ಕಾರಿಕೆಗೂ ಬೌದ್ಧಗ್ರಂಥಗಳಿಗೂ ಸಮಾನವಾದ ಶಬ್ದಗಳು

ಈ ಶಬ್ದಗಳು ಯಾವ ಕಾರಿಕೆಯಲ್ಲಿ ಬಂದಿವೆಯೆಂಬುದನ್ನು ತಿಳಿಸುವದಕ್ಕೆ ಮುಖ್ಯವಾಗಿ ಅಲಾತಶಾಂತಿಪ್ರಕರಣದ ಸಂಖ್ಯೆಯನ್ನು ಕೊಟ್ಟಿರುತ್ತದೆ. ಬೌದ್ಧರ ಗ್ರಂಥಗಳ ಹೆಸರನ್ನು ಬರೆದಿಲ್ಲ ; ಅವರು ಶಬ್ದವನ್ನು ಯಾವ ಅರ್ಥದಲ್ಲಿ ಉಪಯೋಗಿಸುತ್ತಾರೆಂಬುದಿಷ್ಟನ್ನೇ ತಿಳಿಸಿರುತ್ತದೆ.

**ಅಗ್ರ್ಯಯಾಣ (೪-೯೦) -**

ಮೊದಲು, ಸಾಧಕನ ಸ್ಥಿತಿ. ಮಹಾಯಾನ ಎಂಬರ್ಥದಲ್ಲಿ ಬೌದ್ಧರಲ್ಲಿ ಪ್ರಯೋಗ.

**ಅಜಾತಿ (೪-೪೩) -**

ಹುಟ್ಟದೆ ಇರುವ ಬ್ರಹ್ಮ, ಹುಟ್ಟದ ಇರುವದು ಎಂಬರ್ಥದಲ್ಲಿ ಉದ್ಭೂತಿಗಳೂ (೪-೨೯) ಬೌದ್ಧರೂ ಪ್ರಯೋಗಿಸುವರು ; ಆದರೆ ಬ್ರಹ್ಮ, ಹುಟ್ಟಿದ ವಸ್ತು ಎಂಬರ್ಥದಲ್ಲಿ ಬೌದ್ಧರಲ್ಲಿ ಪ್ರಯೋಗವಿಲ್ಲ.

**ಅದ್ವಯ (೪-೪೫),**
**ಅದ್ವೈತ (೩-೧೮) -**

ತನಗೆರಡನೆಯದಿಲ್ಲದ ಆತ್ಮ. ದ್ವೈತ ರಹಿತವಾದ ಶೂನ್ಯ ಎಂಬರ್ಥದಲ್ಲಿ ಮಾತ್ರ ಬೌದ್ಧರಲ್ಲಿ ಬಳಕೆ.

**ಅನಾನಾತ್ವ (೪-೧೦೦) -**

ನಾನಾತ್ವವಿಲ್ಲದ ಅದ್ವಿತೀಯ ಆತ್ಮ. ಬೌದ್ಧರಲ್ಲಿ ನಾನಾರ್ಥವೆಂಬ ಮಾತನ್ನು ವಿಶೇಷಗಳನ್ನು ಮಾತ್ರ ನೋಡುವದು ಎಂಬರ್ಥದಲ್ಲಿ ಉಪಯೋಗಿಸುತ್ತಾರೆ. ಸಾಮಾನ್ಯವನ್ನು ಮಾತ್ರ ನೋಡುವ ಅರಿವು ಸಮತೆ ಅಥವಾ ಸಾಮ್ಯ ಎನಿಸುವದು. ಸಮತೆಯ ದೃಷ್ಟಿಯಿಂದ ನೋಡಿದರೆ ಎಲ್ಲವೂ ಬ್ರಹ್ಮವೆಂಬ ಅರಿವಾಗುವದು ; ನಾನಾರ್ಥದೃಷ್ಟಿಯಿಂದ ನಾನಾ ದೇವತೆಗಳ ಅರಿವಾಗುವದು. ಆದ್ದರಿಂದ ಪರಮಾರ್ಥವನ್ನು ತಿಳಿಯಬೇಕಾದರೆ ಈ ಎರಡು ದೃಷ್ಟಿಗಳನ್ನೂ ಉಪಯೋಗಿಸಬೇಕು-ಎಂದು ಕೆಲವು ಮಾಹಾಯಾನಿಕರ ಅಭಿಪ್ರಾಯ.

**ಅನಿಮಿತ್ತ (೪-೭೭) -**

ಧರ್ಮಾಧರ್ಮಗಳೆಂಬ ಜನ್ಮಕಾರಣವಿಲ್ಲದಿರುವದು. ಬೌದ್ಧರಲ್ಲಿ ಅನಿಮಿತ್ತವೆಂಬುದು ಪದಾರ್ಥಗಳು ನಿತ್ಯವೆಂಬ ಭ್ರಾಂತಿಯನ್ನು ಕಳೆಯುವ ಒಂದು ಬಗೆಯ ಧ್ಯಾನವು.

**ಅಭೂತಾಭಿನಿವೇಶ (೪-೭೫) -**

ಆತ್ಮನೊಬ್ಬನೇ ಇದ್ದರೂ ಇಲ್ಲದಿರುವ ಅನಾತ್ಮವೂ ಉಂಟೆಂಬ ಮಿಥ್ಯಾಭಿಮಾನ. ವಸ್ತುತಃ ಯಾವದೂ ಇಲ್ಲದಿದ್ದರೂ ವಾಸನೆಯಿಂದ ಅದನ್ನು ಇದೆ ಎಂದು ತಿಳಿಯುವದು-ಎಂಬ ಅರ್ಥದಲ್ಲಿ ಬೌದ್ಧರ ಪ್ರಯೋಗ.

**ಅಭಿನಿಷ್ಪತ್ತಿ (೪-೭೪) -**

ಸಿದ್ಧಿ. ಬೌದ್ಧರಲ್ಲಿ ಅಬಾಧಿತವಾದ ಕಟ್ಟಕಡೆಯ ಜ್ಞಾನ ಎಂಬ ಅರ್ಥದಲ್ಲಿ ಉಪಯೋಗವಾಗುವ 'ಪರಿನಿಷ್ಪನ್ನ' ಎಂಬ ಶಬ್ದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

**ಅಲಾತ (೪-೪೭) -**

ಕೊಳ್ಳಿ. ವಸ್ತುಗಳು ತೋರಿದರೂ ನಿಜವಾಗಿರುವದಿಲ್ಲವೆಂಬುದನ್ನು ತಿಳಿಸುವದಕ್ಕೆ

ತಿರುಗಿಸುವ ಕೊಳ್ಳಿಯ ದೃಷ್ಟಾಂತವನ್ನು ಬೌದ್ಧರೂ ವೇದಾಂತಿಗಳೂ ಕೊಡುತ್ತಾರಾದರೂ ತೋರಿಕೆಗಳೆಲ್ಲ ವಿಜ್ಞಾನರೂಪವಾದ ಆತ್ಮನಲ್ಲಿ ಕಲ್ಪಿತವಾಗಿರುವವೆಂದು ತಿಳಿಸುವದು ವೇದಾಂತದಲ್ಲಿ ವಿಶೇಷ.

**ಅಸ್ಪರ್ಶಯೋಗ (೪-೨) -**

ಏತರಸಂಬಂಧವೂ ಇಲ್ಲದ ಆತ್ಮನನ್ನು ತಿಳಿಸುವ ಅದ್ವೈತದರ್ಶನ. ಯಾವ ಅನುಭವವೂ ಇಲ್ಲದ ನಿರ್ವಾಣ ಎಂಬರ್ಥದಲ್ಲಿ ಬೌದ್ಧರ ಬಳಕೆ.

**ಅಸತ್ (೪-೩೯) -**

ನಿಜವಾಗಿಲ್ಲದೆ ಇದ್ದರೂ ತೋರುವ ವಸ್ತು. ಎಚ್ಚರಕನಸುಗಳಲ್ಲಿರುವ ತೋರಿಕೆಗಳು ನಿಜವಾಗಿರುವದಿಲ್ಲವಾದ್ದರಿಂದ ಅಸತ್ತಾಗಿರುವವೆಂಬುದು ಬೌದ್ಧರಿಗೂ ವೇದಾಂತಿಗಳಿಗೂ ಸಮಾನ. ಅವು ಸದ್ರೂಪವಾದ ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೆಂಬುದು ವೇದಾಂತಿಗಳ ವಿಶೇಷೋಪದೇಶ.

**ಅಸ್ತಿವಸ್ತುತ್ವವಾದಿ (೪-೪೨) -**

ದ್ವೈತವಸ್ತುವಿದೆ ಎನ್ನುವವನು. ವಿಜ್ಞಾನಕ್ಕಿಂತ ಹೊರಗೆ ವಸ್ತುವಿದೆ ಎನ್ನುವ ಸರ್ವಾಸ್ತಿತ್ವವಾದಿ ಎಂಬರ್ಥದಲ್ಲಿ ಬೌದ್ಧರಲ್ಲಿ ಬಳಕೆ.

**ಆಕಾಶ (೪-೧) -**

ಸರ್ವಗತ, ಸೂಕ್ಷ್ಮ, ನಿತ್ಯ-ಎಂಬುದನ್ನು ತಿಳಿಸುವದಕ್ಕೆ ಕೊಡುವ ದೃಷ್ಟಾಂತ. ಇಲ್ಲದ್ದು ಎಂಬುದನ್ನು ತಿಳಿಸುವದಕ್ಕೆ ಮಾಧ್ಯಮಿಕರು ಉಪಯೋಗಿಸುತ್ತಾರೆ.

**ಆದಿಬುದ್ಧ (೪-೯೨) -**

ಮೊದಲಿನಿಂದಲೂ ಜ್ಞಾನಸ್ವರೂಪವೇ ಆಗಿರುವ. ಬೌದ್ಧರು ಬೇರಬೇರೆ ಯುಗಗಳಲ್ಲಿ ಅವತರಿಸಿರುವ ಬುದ್ಧರಿಗೆಲ್ಲ ಮೂಲಸ್ವರೂಪವಾದ ಎಂಬರ್ಥದಲ್ಲಿ ಉಪಯೋಗಿಸುತ್ತಾರೆ.

**ಆದಿಶಾನ್ತ (೪-೯೩) -**

ಯಾವಾಗಲೂ ಶಾಂತಿಯುಳ್ಳ. ಎಲ್ಲವೂ ನಾಶವಾಗುವ ನಿರ್ವಾಣ ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುವರು.

**ಉಚ್ಛೇದ (೪-೫೭) -**

ನಾಶ. ಪರಮಾರ್ಥದಿಂದ ಎಲ್ಲವೂ ಜನ್ಮರಹಿತವಾದ ಆತ್ಮನೇ ಆಗಿರುವದರಿಂದ ಉಚ್ಛೇದವೆಂಬುದೇ ಇಲ್ಲ-ಎಂದು ಕಾರಿಕೆಯಲ್ಲಿ ಹೇಳಿದೆ. ಇರತಕ್ಕ ಆತ್ಮನು ಮರಣವಾದ ಮೇಲೆ ನಾಶವಾಗಿಬಿಡುತ್ತಾನೆ-ಎಂಬ ತಪ್ಪುತಿಳಿವಳಿಕೆಯನ್ನು ಬೌದ್ಧರು ಉಚ್ಛೇದವೆಂಬ ಹೆಸರಿನಿಂದ ಕರೆಯುತ್ತಾರೆ.

**ಉಪಲಮ್ಭ (೪-೯೦) -**

ಬರಿಯ ತೋರಿಕೆ. ಅವಿದ್ಯಾಕಲ್ಪನೆ. ಸಾಧಕನು ಮೊದಲು ಅಂಗೀಕರಿಸಬೇಕಾದ ಹೇಯ, ಉಪಾಯ, ಪಾಕ್ಯ-ಇವು ಮೂರೂ ಅವಿದ್ಯಕವೆಂದೂ ಎಚ್ಛೇಯವಾದ ಬ್ರಹ್ಮವೊಂದೇ ಸತ್ಯವೆಂದೂ ವೇದಾಂತಿಗಳು ಹೇಳುವರು. ಎಲ್ಲವೂ ಅವಿದ್ಯಕವೇ ಎಂದು ಬೌದ್ಧರು.

**ಕಲ್ಪಿತ (೪-೭೪) -**

ಕಲ್ಪಿತವಾದ ವ್ಯವಹಾರ. ಹಗ್ಗದಲ್ಲಿ ಹಾವು ಕಲ್ಪಿತವೆಂದು ವೇದಾಂತಿಗಳಂತೆ ಬೌದ್ಧರೂ ಹೇಳುತ್ತಾರೆ ; ಆದ್ದರಿಂದ ಅವರು ಹಗ್ಗದ ಹಾವಿನ ಅರಿವನ್ನು **ಪರಿಕಲ್ಪಿತ** ಎಂದು ಕರೆಯುತ್ತಾರೆ. ಎಲ್ಲವೂ ಕಲ್ಪಿತವೇ, ವಿಜ್ಞಾನವೊಂದೇ ಪರಮಾರ್ಥವು-ಎಂಬುದು ವಿಜ್ಞಾನ

ವಾದಿಗಳಾದ ಬೌದ್ಧರ ಮತವು. ಆತ್ಮನಲ್ಲಿಯೇ ಎಲ್ಲವೂ ಕಲ್ಪಿತವು ಆತ್ಮನಲ್ಲಿ ತೋರುವ ಧರ್ಮಗಳೂ ಕಲ್ಪಿತವೇ-ಎಂಬುದು ವೇದಾಂತಿಗಳ ಮತ

ಕೋಟಿ (೪-೪೪) -

ಇದೆ, ಇಲ್ಲ, ಇದೂ, ಇಲ್ಲ, ಇಲ್ಲವೇ ಇಲ್ಲ-ಎಂಬ ನಾಲ್ಕು ಪಾದಗಳು ಆತ್ಮನ ವಿಷಯದಲ್ಲಿರುವ ಈ ಪಾದಗಳು ಆತ್ಮನಿಗೆ ಆವರಣಗಳು ಎಂದರೆ ಆತ್ಮನ ಪರಮಾರ್ಥ ಸ್ವರೂಪವನ್ನು ತಿಳಿಯುವದಕ್ಕೆ ಅಡ್ಡಿಗಳು ಎಂದು ವೇದಾಂತಿಗಳಿಸ್ಸುವರು ಶೂನ್ಯವೇ ಪರಮಾರ್ಥವು. ಆದು ಈ ನಾಲ್ಕುಕೋಟಿಗಳಲ್ಲೊಂದಕ್ಕೂ ಪಿಷಯವಲ್ಲವೆಂದು ಬೌದ್ಧರ ಮತ.

ಗಂಧರ್ವನಗರ (೩-೩೧) -

ಆಕಾಶದಲ್ಲಿ ತೋರಿ ಹಾರುವ ದೃಶ್ಯ. ಈ ದೃಷ್ಟಾಂತವನ್ನು ದೃಶ್ಯವೆಲ್ಲವೂ ಆತ್ಮನಲ್ಲಿ ಕಲ್ಪಿತವೆಂದು ತಿಳಿಸುವದಕ್ಕೆ ವೇದಾಂತಿಗಳು ಉಪಯೋಗಿಸುವರು , ದೃಶ್ಯವೆಲ್ಲವೂ ಅಸಾರವೆಂದು ತಿಳಿಸುವದಕ್ಕೆ ಬೌದ್ಧರು ಉಪಯೋಗಿಸುವರು

ಗಂಭೀರ (೪-೧೦೦) -

ಆಳವಾದ, ಪ್ರವೇಶಿಸುವದಕ್ಕಾಗದ ಪರಮಾರ್ಥವು ಸಾಮಾನ್ಯರಿಗೆ ತಿಳಿಯುವದಲ್ಲ ಎಂಬುದನ್ನು ತಿಳಿಸುವದಕ್ಕೆ ವೇದಂತಿಗಳಲ್ಲಿ ಬಳಕೆ ಪ್ರತೀತ್ಯಸಮುತ್ಪಾದವು ಸಾಮಾನ್ಯರಿಗೆ ತಿಳಿಯುವದಲ್ಲ ಎಂಬುದನ್ನು ತಿಳಿಸುವದಕ್ಕೆ ಬೌದ್ಧರಲ್ಲಿ ಬಳಕೆ

ಚಿತ್ತ (೪-೭೨) -

ಚಿತ್ತ, ಆತ್ಮ ಅಂತಃಕರಣಾತ್ಮಕವಾದ ಬೇರೆಯಾದ ಆತ್ಮನೆಂಬರ್ಥದಲ್ಲಿಯೂ ಗೌಡಪಾದ ಕಾರಿಕೆಯಲ್ಲಿ ಪ್ರಯುಕ್ತವಾಗಿದೆ ; ಬೌದ್ಧರಲ್ಲಿ ಈ ಅರ್ಥದಲ್ಲಿ ಪ್ರಯೋಗವಿಲ್ಲ.

ತಾಯಿನ್ (೪-೯೯) -

ವ್ಯಾಪಕವಾದ ಜ್ಞಾನವುಳ್ಳ ಆತ್ಮಜ್ಞಾನಿ. ಬೌದ್ಧಮತದ ತತ್ತ್ವವನ್ನು ಮನಗಂಡ ಜ್ಞಾನಿ, ಬುದ್ಧನು-ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುತ್ತಾರೆ.

ದುರ್ದರ್ಶ (೪-೧೦೦) -

ತಿಳಿದುಕೊಳ್ಳುವದಕ್ಕೆ ಕಷ್ಟವಾದ. ಈ ವಿಶೇಷಣವನ್ನು ವೇದಾಂತಿಗಳು ಆತ್ಮವಸ್ತುವಿಗೂ, ಬೌದ್ಧರು ಪ್ರತೀತ್ಯಸಮುತ್ಪಾದಕ್ಕೂ ಉಪಯೋಗಿಸಿರುತ್ತಾರೆ.

ದೇಶಿತ (೪-೨) -

ಅದ್ವೈತದರ್ಶನದ ಉಪದೇಶ. ಬುದ್ಧನ ಉಪದೇಶವನ್ನು 'ದೇಶನಾ' ಎಂಬ ಹೆಸರಿನಿಂದ ಬೌದ್ಧರು ಕರೆದಿರುತ್ತಾರೆ.

ದ್ವಯ (೪-೪, ೭೫) -

ದ್ವೈತ, ದ್ವೈತಿ ಎಂಬರ್ಥದಲ್ಲಿ ವೇದಾಂತಿಗಳೂ ಬೌದ್ಧರೂ ಈ ಮಾತನ್ನು ಉಪಯೋಗಿಸುವರು. ದ್ವೈತವು ಶೂನ್ಯವಾದಿಗಳ ಮತದಲ್ಲಿ ನಿಸ್ಸಾರ, ವಿಜ್ಞಾನವಾದಿಗಳ ಮತದಲ್ಲಿ ವಿಜ್ಞಾನಮಾತ್ರ, ವೈಭಾಷಿಕಸೌತ್ರಾಂತಿಕರಲ್ಲಿ ಕ್ಷಣಿಕ. ಆತ್ಮನೇ ಅವಿದ್ಯೆಯಿಂದ ದ್ವೈತವಾಗಿ ತೋರುವನೆಂದು ವೇದಾಂತಿಗಳ ಮತ.

ದ್ವಿಪದಾಂ ವರ (೪-೧) -

ಪುರುಷೋತ್ತಮ. ಈ ಮಾತನ್ನೂ 'ವದತಾಂ ವರ' ಎಂಬ ಮಾತನ್ನೂ ಬೌದ್ಧರು ಬುದ್ಧನಿಗೆ ವಿಶೇಷಣವಾಗಿ ಉಪಯೋಗಿಸಿರು

ತ್ತಾರೆ. ಗೌಡಪಾದಕಾರಿಕೆಯಲ್ಲಿ ಅದ್ವೈತ ಶಾಸ್ತ್ರಕ್ಕೆ ಮೂಲಗುರುವಾದ ನಾರಾಯಣನಿಗೆ ವಿಶೇಷಣವಾಗಿ ಉಪಯೋಗಿಸಿರುತ್ತದೆ.

ಧರ್ಮ (೩-೧, ೪-೧, ೪-೧೦, ೪-೩೩) -

ಆತ್ಮ, ವಸ್ತು. ದ್ರವ್ಯ, ಗುಣ, ಕಾರಣ, ಇರವಿಲ್ಲದ್ದು, ನಿರಾತ್ಮಕ-ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುತ್ತಾರೆ.

ಧಾತು (೪-೮೧) -

ಆತ್ಮತತ್ತ್ವ. 'ಧರ್ಮಧಾತು' ಎಂಬ ಮಾತನ್ನು ಬೌದ್ಧರು ಮನಸ್ಸಿನ ವಿಷಯ ಎಂಬ ಅರ್ಥದಲ್ಲಿ ಉಪಯೋಗಿಸುವರು.

ನಿರ್ವಾಣ (೩-೪೭) -

ಆನಂದ, ಆತ್ಮನೊಬ್ಬನೇ ಉಳಿದು ಕೊಳ್ಳುವ ಕೈವಲ್ಯ. ದುಃಖವೂ ದ್ವೈತವೂ ಹೋಗಿರುವ ಸ್ಥಿತಿ ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುತ್ತಾರೆ.

ಪರತಂತ್ರ (೪-೭೪) -

ಅದ್ವೈತಿಗಳಾದವರ ಶಾಸ್ತ್ರ. ವಿಜ್ಞಾನಕ್ಕೆ ಅಧೀನವಾಗಿರುವ ಬಾಹ್ಯವಸ್ತುಜ್ಞಾನ-ಎಂಬ ಅರ್ಥದಲ್ಲಿ ಬೌದ್ಧರು ಬಳಸುತ್ತಾರೆ. ರಜ್ಜು ಸರ್ಪಜ್ಞಾನದಲ್ಲಿ ಸರ್ಪಜ್ಞಾನವು 'ಪರಿಕಲ್ಪಿತ', ರಜ್ಜುಜ್ಞಾನವು 'ಪರತಂತ್ರ'-ಎಂದು ಅವರ ವಾದ. ವಿಜ್ಞಾನವು ಪರಮಾರ್ಥವಾದ್ದರಿಂದ ಅದರ ಜ್ಞಾನವು 'ಪರಿನಿಷ್ಪನ್ನ' ಎಂದು ಅವರು ಹೇಳುವರು.

ಬುದ್ಧ (೪-೪೨) -

ಜ್ಞಾನಿ, ಗೌತಮಬುದ್ಧ, ಅದ್ವೈತಾತ್ಮನನ್ನು ಬಲ್ಲವನು ಎಂಬರ್ಥದಲ್ಲಿಯೇ ಗೌಡಪಾದ ಕಾರಿಕೆಯಲ್ಲಿ ಈ ಶಬ್ದವನ್ನು ಹೆಚ್ಚಾಗಿ ಉಪಯೋಗಿಸಿದೆ.

ಮಾಯಾ (೩-೨೮) -

ಹುಸಿಯಾದ ತೋರಿಕೆ, ತಪ್ಪುತಿಳಿವಳಿಕೆ. ನಿಸ್ಸಾರವಾದ ತೋರಿಕೆ ಎಂಬರ್ಥದಲ್ಲಿಯೇ ಬೌದ್ಧರಲ್ಲಿ ಇದು ಬಳಕೆಯಲ್ಲಿದೆ ; ಮಾಯಾ ಕಲ್ಪಿತವಸ್ತುವಿಗೂ ಆತ್ಮನು ಆಧಾರವಾಗಿರುತ್ತಾನೆಂದು ವೇದಾಂತಿಗಳ ಅಭಿಪ್ರಾಯ.

ಲೌಕಿಕ (೪-೮೭) -

ಲೋಕದ ವ್ಯವಹಾರಕ್ಕೆ ಆಸ್ಪದವಾಗಿರುವ ಜಾಗ್ರದವಸ್ಥೆ. ಸಾಮಾನ್ಯಜನರ ಅಭಿಪ್ರಾಯವನ್ನು ಬೌದ್ಧರು 'ಲೋಕ್ಯ' ಎಂದು ಕರೆಯುತ್ತಾರೆ.

ಲೋಕೋತ್ತರ (೪-೮೮)-

ವ್ಯವಹಾರದ ದೃಶ್ಯವೇ ಇಲ್ಲದ ಸುಮುಪ್ತಿ. ಬೌದ್ಧದರ್ಶನಗಳನ್ನು ಬಲ್ಲ ಜ್ಞಾನಿಗಳ ಅಭಿಪ್ರಾಯ ಎಂಬರ್ಥದಲ್ಲಿ 'ಲೋಕೋತ್ತರ' ಎಂಬ ಶಬ್ದವನ್ನು ಬೌದ್ಧರು ಉಪಯೋಗಿಸುತ್ತಾರೆ. ಅಷ್ಟಾಂಗಮಾರ್ಗದಲ್ಲಿರುವ ಸಮ್ಯಗ್ದೃಷ್ಟಿ, ಮುಂತಾದವುಗಳನ್ನೆಲ್ಲ ಲೋಕ್ಯಸಮ್ಯಗ್ದೃಷ್ಟಿ, ಲೋಕೋತ್ತರಸಮ್ಯಗ್ದೃಷ್ಟಿ-ಹೀಗೆ ಎರಡೆರಡು ಬಗೆಯಾಗಿ ವಿಂಗಡಿಸುವದುಂಟು.

ಶಾಶ್ವತ (೪-೫೭) -

ನಿತ್ಯವಾದದ್ದು. ಆತ್ಮನು ನಾಶವಾಗುವದಿಲ್ಲವೆಂಬ ವಾದ ಎಂಬರ್ಥದಲ್ಲಿ ಬೌದ್ಧರಲ್ಲಿ ಬಳಕೆ.

ಸಂಬುದ್ಧ (೪-೧) -

ತಿಳಿದವನು. ಗೌತಮಬುದ್ಧನಿಗೆ ಸಮ್ಯಕ್ಸಂಬುದ್ಧನೆಂಬ ವಿಶೇಷಣವು ಬೌದ್ಧರಲ್ಲಿ ಬಳಕೆಯಲ್ಲಿದೆ.

ಸಂವೃತಿ (೪-೫೭) -

ಅವಿದ್ಯಾವ್ಯವಹಾರ ಆರ್ಯಸತ್ಯ ಚತುಷ್ಟಯವನ್ನು ತಿಳಿಯದಿರುವ ಅವಿದ್ಯೆ ಎಂಬ ಅರ್ಥದಲ್ಲಿ ಬೌದ್ಧರಲ್ಲಿ ಒಳಕೆ ಆತ್ಮನನ್ನು ತಿಳಿಯದೆ ಇರುವ ಅವಿದ್ಯೆ ಎಂಬರ್ಥದಲ್ಲಿ ಗೌಡಪಾದಕಾರಿಕೆಯಲ್ಲಿ ಇದನ್ನು ಉಪಯೋಗಿಸಿದೆ

ಸಾಮ್ಯ (೪-೮೦) -

ಒಂದೇ ಸಮನಾಗಿರುವ ಕೂಟಸ್ಥಾತ್ಮ ತತ್ತ್ವ. ಈ ಶಬ್ದವನ್ನು ನಾನಾರ್ಥ ಎಂಬುದಕ್ಕೆ ವಿರುದ್ಧವಾದ ಅರ್ಥದಲ್ಲಿ ಬೌದ್ಧರು ಉಪಯೋಗಿಸಿದ್ದಾರೆ ಈ ಪರಿಶಿಷ್ಟದಲ್ಲಿರುವ 'ಅನಾನಾತ್ವ' ಎಂಬ ಮಾತನ್ನು ನೋಡಿರಿ.

ವಿಜ್ಞಾನ (೪-೪೮)-

ಜ್ಞಾನಸ್ವರೂಪನಾದ ಆತ್ಮ. ಮನಸ್ಸಿನ ಅರಿವು ಎಂಬರ್ಥದಲ್ಲಿ ಕಾರಿಕೆಯಲ್ಲಿಯೂ ಬೌದ್ಧರಲ್ಲಿಯೂ ಈ ಶಬ್ದವು ಪ್ರಯುಕ್ತವಾಗಿದೆ. ಆತ್ಮ ಎಂಬರ್ಥವು ಕಾರಿಕೆಯಲ್ಲಿ ಮಾತ್ರ ಇದೆ.

ವೈಶಾರದ್ಯ (೪-೯೪) -

ಶುದ್ಧಿ. ಬುದ್ಧನಲ್ಲಿದ್ದ ನಿರತಿಶಯ ಗುಣಗಳು ಎಂಬರ್ಥದಲ್ಲಿ ಬೌದ್ಧರು ಪ್ರಯೋಗಿಸಿರುತ್ತಾರೆ.

## ೩. ಶ್ರುತ್ಯುದಾಹರಣಸೂಚಿಕೆ

ಈ ಸೂಚಿಕೆಯಲ್ಲಿ ಮೊದಲು ಕೊಟ್ಟಿರುವದು ಕಾರಿಕೆಯ ಸಂಖ್ಯೆ. ಕಾರಿಕಾಕಾರರು ಯಾವ ಶ್ರುತಿಯನ್ನು ಇಲ್ಲಿ ಸೂಚಿಸಿರುತ್ತಾರೆ ಅಥವಾ ಉದಾಹರಿಸಿರುತ್ತಾರೆ-ಎಂಬುದನ್ನು ತಿಳಿಯುವದರಿಂದ ಅವರು ಬೌದ್ಧಪಕ್ಷದವರೆಂಬ ಮಾತು ನಿರಾಧಾರವಾದದ್ದೆಂದು ಸ್ಪಷ್ಟವಾಗುತ್ತದೆ. ಅವರು ಉಪಯೋಗಿಸಿರುವ ಯುಕ್ತಿಗಳಿಗೂ ಶ್ರುತಿಯ ಆಧಾರವಿದೆ ಎಂಬದೂ ವ್ಯಕ್ತವಾಗುತ್ತದೆ.

೧-೬. ''ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶನ್ತಿ
ಪ್ರಾಣಮಭ್ಯುಜ್ಜಿಹತೇ ।'' (ಛಾ೦. ೧-೧೧-೫).

೧-೨೬. ''ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಂಕಾರಃ ।''
(ಪ್ರಶ್ನ. ೫-೨).

೧-೨೮. ''ಅನ್ತರಾತ್ಮಾ ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ।''
(ಕಠ. ೨-೩-೧೭).

೨-೩. ''ನ ತತ್ರ ರಥಾ ನ ರಥಯೋಗಾ ನ ಪನ್ಥಾನೋ ಭವನ್ತ್ಯಥ ರಥಾನ್
ರಥಯೋಗಾನ್ ಪಥಃ ಸೃಜತೇ ।'' (ಬೃ. ೪-೩-೧೦).

೩-೧. ''ಯೋ ವಾ ಏತದಕ್ಷರಂ ಗಾರ್ಗ್ಯವಿದಿತ್ವಾಸ್ಮಾಲ್ಲೋಕಾತ್ ಪ್ರೈತಿ ಸ ಕೃಪಣಃ ।''
(ಬೃ. ೩-೮-೧೦).

೩-೧೧. ''ಸ ಯ ಏವಂವಿತ್ । ಅಸ್ಮಾಲ್ಲೋಕಾತ್ ಪ್ರೇತ್ಯ । ಏತಮನ್ನಮಯ
ಮಾತ್ಮಾನಮುಪಸಂಕ್ರಾಮತಿ । ಏತಂ ಪ್ರಾಣಮಯಮಾತ್ಮಾನಮುಪ
ಸಂಕ್ರಾಮತಿ । ಏತಂ ಮನೋಮಯಮಾತ್ಮಾನಮುಪಸಂಕ್ರಾಮತಿ ।
ಏತಂ ವಿಜ್ಞಾನಮಯಮಾತ್ಮಾನಮುಪಸಂಕ್ರಾಮತಿ । ಏತಮಾನನ್ದಮಯ
ಮಾತ್ಮಾನಮುಪಸಂಕ್ರಾಮತಿ ।।'' (ತೈ. ೨-೮).

೩-೧೩. ''ಯಶ್ಚಾಯಮಸ್ಯಾಂ ಪೃಥಿವ್ಯಾಂ ತೇಜೋಮಯೋಽಮೃತಮಯಃ
ಪುರುಷೋ ಯಶ್ಚಾಯಮಧ್ಯಾತ್ಮಗ್ಂ ಶಾರೀರಸ್ತೇಜೋಽಮೃತಮಯಃ

ಪುರುಷೋ ಽಯಮೇವ ಸ ಯೋ ಽಯಮಾತ್ಮೇದಮಮೃತಮಿದಂ
ಬ್ರಹ್ಮೇದಗ್ಂ ಸರ್ವಮ್ ॥''

(ಬೃ. ೨-೫-೧ ಇಲ್ಲಿಂದ ೧೪ನೆಯ ಮಂತ್ರದವರೆಗೆ).

೩-೧೫. ''ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ ಸರ್ವಂ ಮೃಣ್ಮಯಂ ವಿಜ್ಞಾತಗ್ಂ
ಸ್ಯಾದ್ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ ।''

(ಛಾಂ. ೬-೧-೪).

೩-೧೫. ''ಯಥಾ ಕ್ಷುದ್ರಾ ಪಿಪ್ಪಲಿಜ್ಞಾ ವ್ಯುಚ್ಚರನ್ತ್ಯೇವಮೇವಾಸ್ಮಾದಾತ್ಮನಃ ಸರ್ವೇ
ಪ್ರಾಣಾಃ : ಸರ್ವೇ ಲೋಕಾಃ ಸರ್ವೇ ದೇವಾಃ ಸರ್ವಾಣಿ ಭೂತಾನಿ
ವ್ಯುಚ್ಚರನ್ತಿ ।'' (ಬೃ. ೨-೧-೨೦).

೩-೨೪. ''ನೇಹ ನಾನಾಸ್ತಿ ಕಿಂಚನ ।'' (ಬೃ. ೪-೪-೧೯).

''ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ ।'' (ಬೃ. ೩-೫-೧೯).

''ಅಚಾಯಮಾನೋ ಬಹುಧಾ ವಿಜಾಯತೇ ।'' (ಪುರುಷಸೂಕ್ತ).

೩-೨೫. ಅನ್ಧಂ ತಮಃ ಪ್ರವಿಶನ್ತಿ ಯೇ ಸಂಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಮ್ಭೂತ್ಯಾಗ್ಂ ರತಾಃ ।''

(ಈ. ಮಾ. ೯).

೩-೨೬. ''ಸ ಏಷ ನೇತಿ ನೇತ್ಯಾತ್ಮಾ ।''

(ಬೃ. ೩-೯-೨೭, ೪-೨-೪, ೪-೪-೫, ೪-೫-೧೫).

೪-೪೪. ''ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ।'' (ಬೃ. ೪-೪-೨೩).

೪-೪೬. ''ತಸ್ಮಾದೇವಂವಿಚ್ಛಾನ್ತೋ ದಾನ್ತ ಉಪರತಸ್ತಿತಿಕ್ಷುಃ ।'' (ಬೃ. ೪-೪-೨೩).

# ಕಾರಿಕೆಗಳ ಅನುಕ್ರಮಣಿಕೆ

ಇಲ್ಲಿ ಮೊದಲು ಕೊಟ್ಟಿರುವದು ಪ್ರಕರಣದ ಸಂಖ್ಯೆ, ಎರಡನೆಯದು ಕಾರಿಕೆಯ ಸಂಖ್ಯೆ. ಉದಾಹರಣೆಗೆ '೩-೩೩' ಎಂದರೆ ಮೂರನೆಯ ಅದ್ವೈತಪ್ರಕರಣದ ಮೂವತ್ತುಮೂರನೆಯ ಕಾರಿಕೆ ಎಂದರ್ಥ.


| | | | |
|---|---|---|---|
| ಅಕಲ್ಪಕಮಜಂ ಜ್ಞಾನಮ್ | ೩-೩೩ | ಅಪೂರ್ವಂ ಸ್ಥಾನಿಧರ್ಮೋ ಽಂ | ೨-೮ |
| ಅಕಾರೋ ನಯತೇ ವಿಶ್ವಮ್ | ೧-೨೩ | ಅಭಾವಶ್ಚ ರಥಾದೀನಾಮ್ | ೨-೩ |
| ಅಜಃ ಕಲ್ಪಿತಸಂವೃತ್ಯಾ | ೪-೭೪ | ಅಭೂತಾಭಿನಿವೇಶಾದ್ಧಿ | ೪-೭೯ |
| ಅಜಮನಿದ್ರಮಸ್ವಪ್ನ-ಮ್ | ೩-೩೬ | ಅಭೂತಾಭಿನಿವೇಶೋಽಸ್ತಿ | ೪-೭೫ |
| ಅಜಮನಿದ್ರಮಸ್ವಪ್ನ-ಮ್ | ೪-೮೧ | ಅಮಾತ್ರೋಽನನ್ತಮಾತ್ರಶ್ಚ | ೧-೨೯ |
| ಅಜಾತಂ ಜಾಯತೇ ಯಸ್ಮಾತ್ | ೪-೨೯ | ಅಲಬ್ಧಾವರಣಾಃ ಸರ್ವೇ | ೪-೯೮ |
| ಅಜಾತಸ್ಯೈವ ಧರ್ಮಸ್ಯ | ೪-೬ | ಅಲಾತೇ ಸ್ಪನ್ದಮಾನೇ ವೈ | ೪-೪೯ |
| ಅಜಾತಸ್ಯೈವ ಭಾವಸ್ಯ | ೩-೨೦ | ಅವಸ್ತ್ವಸುಪಲಮ್ಭಂ ಚ | ೪-೮೮ |
| ಅಜಾತೇಸ್ತ್ರಸತಾಂ ತೇಷಾಮ್ | ೪-೪೩ | ಅವ್ಯಕ್ತಾ ಏವ ಯೇಽನ್ತಸ್ತು | ೨-೧೫ |
| ಅಜಾದ್ಯೈ ಜಾಯತೇ ಯಸ್ಯ | ೪-೧೩ | ಅಶಕ್ತಿರಪರಿಜ್ಞಾನಮ್ | ೪-೧೯ |
| ಅಜೇಷ್ವಜಮಸಂಕ್ರಾನ್ತಮ್ | ೪-೯೬ | ಅಸಙ್ಗಾಗರಿಕೇ ದೃಷ್ಟ್ವಾ | ೪-೩೯ |
| ಅಜೇ ಸಾಮ್ಯೇ ತು ಯೇ ಕೇಚಿತ್ | ೪-೯೫ | ಅಸತೋ ಮಾಯಯಾ ಜನ್ಮ | ೩-೨೮ |
| ಅಣುಮಾತ್ರೇಽಪಿ ವೈಧರ್ಮ್ಯೇ | ೪-೯೭ | ಅಸ್ತಿ ನಾಸ್ತ್ಯಸ್ತಿ ನಾಸ್ತೀತಿ | ೪-೮೩ |
| ಅತೋ ವಕ್ಷ್ಯಾಮ್ಯಕಾರ್ಪಣ್ಯಮ್ | ೩-೨ | ಅಸ್ಪನ್ದಮಾನಮಲಾತಮ್ | ೪-೪೮ |
| ಅದೀರ್ಘತ್ವಾಚ್ಚ ಕಾಲಸ್ಯ | ೨-೨ | ಅಸ್ಪರ್ಶಯೋಗೋ ವೈ ನಾಮ | ೩-೩೯ |
| ಅದ್ವಯಂ ಚ ದ್ವಯಾಭಾಸಮ್ | ೩-೩೦ | ಅಸ್ಪರ್ಶಯೋಗೋ ವೈ ನಾಮ | ೪-೨ |
| ಅದ್ವಯಂ ಚ ದ್ವಯಾಭಾಸಮ್ | ೪-೬೨ | ಆತ್ಮಸಹ್ಯಾನುಬೋಧೇನ | ೩-೩೨ |
| ಅದ್ವೈತಂ ಪರಮಾರ್ಥೋ ಽಂ | ೩-೧೮ | ಆತ್ಮಾ ಹ್ಯಾಕಾಶವಜ್ಜೀವೈಃ | ೩-೩ |
| ಅನಾದಿಮಾಯಯಾ ಸುಪ್ತಃ | ೧-೧೬ | ಆದಾವನ್ತೇ ಚ ಯನ್ನಾಸ್ತಿ | ೨-೬ |
| ಅನಾದೇರನ್ತವತ್ತ್ವಂ ಚ | ೪-೩೦ | ಆದಾವನ್ತೇ ಚ ಯನ್ನಾಸ್ತಿ | ೪-೩೧ |
| ಅನಿಮಿತ್ತಸ್ಯ ಚಿತ್ತಸ್ಯ | ೪-೭೭ | ಆದಿಬುದ್ಧಾಃ ಪ್ರಕೃತ್ಯೈವ | ೪-೯೨ |
| ಅನಿಶ್ಚಿತಾ ಯಥಾ ರಜ್ಜುಃ | ೨-೧೭ | ಆದಿಶಾನ್ತಾ ಹ್ಯನುತ್ಪನ್ನಾಃ | ೪-೯೩ |
| ಅನ್ತಃಸ್ಥಾನಾತ್ತು ಭೇದಾನಾಮ್ | ೨-೪ | ಆಶ್ರಮಾಸ್ತ್ರಿವಿಧಾ ಹೀನ- | ೩-೧೬ |
| ಅನ್ಯಥಾ ಗೃಹ್ಣತಃ ಸ್ವಪ್ನಃ | ೧-೧೫ | ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ | ೧-೬ |

| | |
|---|---|
| ಉತ್ಪಾದಸ್ಯಾಪ್ರಸಿದ್ಧತ್ವಾತ್ | ೪-೩೮ |
| ಉತ್ಸೇಕ ಉದಧೇರ್ಯದ್ವತ್ | ೩-೪೧ |
| ಉಪಲಮ್ಭಾತ್ ಸಮಾಚಾರಾತ್ | ೪-೪೨ |
| ಉಪಲಮ್ಭಾತ್ ಸಮಾಚಾರಾತ್ | ೪-೪೪ |
| ಉಪಾಯೇನ ನಿಗೃಹ್ಣೀಯಾತ್ | ೩-೪೨ |
| ಉಪಾಸನಾಶ್ರಿತೋ ಧರ್ಮಃ | ೩-೧ |
| ಉಭಯೋರಪಿ ವೈತಥ್ಯಮ್ | ೨-೧೧ |
| ಉಭೇ ಹ್ಯನ್ಯೋನ್ಯದೃಶ್ಯೇತೇ | ೪-೬೭ |
| ಋಜುವಕ್ರಾದಿಕಾಭಾಸಮ್ | ೪-೪೭ |
| ಏಕೈರೇಷೋಽಪೃಥಗ್ಭಾವೈಃ | ೧-೩೦ |
| ಏವಂ ನ ಚಿತ್ತಜಾ ಧರ್ಮಾಃ | ೪-೫೪ |
| ಏವಂ ನ ಜಾಯತೇ ಚಿತ್ತಮ್ | ೪-೪೬ |
| ಓಂಕಾರಂ ಪಾದಶೋ ವಿದ್ಯಾತ್ | ೧-೨೪ |
| ಕಲ್ಪಯತ್ಯಾತ್ಮನಾತ್ಮಾನಮ್ | ೨-೧೨ |
| ಕಾರಣಂ ಯಸ್ಯ ವೈ ಕಾರ್ಯಮ್ | ೪-೧೧ |
| ಕಾರಣಾದ್ಧ್ಯನನ್ಯತ್ವಮ್ | ೪-೧೨ |
| ಕಾರ್ಯಕಾರಣಬದ್ಧೌ ತೌ | ೧-೧೧ |
| ಕಾಲ ಇತಿ ಕಾಲವಿದಃ | ೧-೨೪ |
| ಕೋಟ್ಯಶ್ಚತಸ್ರ ಏತಾಸ್ತು | ೪-೮೪ |
| ಕ್ರಮತೇ ನ ಹಿ ಬುದ್ಧಸ್ಯ | ೪-೯೯ |
| ಖ್ಯಾಪ್ಯಮಾನಾಮಜಾತಿಂ ತೈಃ | ೪-೫ |
| ಗ್ರಹಣಾಜ್ಜಾಗರಿತವದ್ | ೪-೩೭ |
| ಗ್ರಹೋ ನ ತತ್ರ ನೋತ್ಸರ್ಗಃ | ೩-೩೮ |
| ಘಟಾದಿಷು ಪ್ರಲೀನೇಷು | ೩-೪ |
| ಚರಜ್ಜಾಗರಿತೇ ಜಾಗ್ರತ್ | ೪-೬೫ |
| ಚತ್ತಕಾಲಾ ಹಿ ಯೇಽನ್ತಸ್ತು | ೨-೧೪ |
| ಚಿತ್ತಂ ನ ಸಂಸ್ಪೃಶತ್ಯರ್ಥಮ್ | ೩-೨೪ |
| ಚಿತ್ತಸ್ಪನ್ದಿತಮೇವೇದಮ್ | ೪-೭೨ |
| ಜರಾಮರಣನಿರ್ಮುಕ್ತಾಃ | ೪-೧೦ |
| ಜಾಗ್ರಚ್ಚಿತ್ತೇಕ್ಷಣೇಯಾಸ್ತೇ | ೪-೬೬ |
| ಜಾಗ್ರದ್ಭುತ್ತಾವೆವಿ ತ್ವನ್ತಃ | ೨-೧೦ |
| ಜಾತ್ಯಾಭಾಸಂ ಚಲಾಭಾಸಮ್ | ೪-೪೫ |
| ಜೀವಂ ಕಲ್ಪಯತೇ ಪೂರ್ವಮ್ | ೨-೧೬ |
| ಜೀವಾತ್ಮನೋಃ ಪೃಥಕ್ತ್ವಂ ಯತ್ | ೩-೧೪ |
| ಜೀವಾತ್ಮನೋರನನ್ಯತ್ವಮ್ | ೩-೧೩ |
| ಜ್ಞಾನೇ ಚ ತ್ರಿವಿಧೇ ಜ್ಞೇಯೇ | ೪-೮೯ |
| ಜ್ಞಾನೇನಾಕಾಶಕಲ್ಪೇನ | ೪-೧ |
| ತತ್ತ್ವಮಾಧ್ಯಾತ್ಮಿಕಂ ದೃಷ್ಟ್ವಾ | ೨-೩೮ |
| ತಸ್ಮಾದೇವಂ ವಿದಿತ್ವೈನಮ್ | ೨-೩೬ |
| ತಸ್ಮಾನ್ನ ಜಾಯತೇ ಚಿತ್ತಮ್ | ೪-೨೮ |
| ತೈಜಸಸ್ಯೋತ್ಸವಿಜ್ಞಾನೇ | ೧-೨೦ |
| ತ್ರಿಷು ಧಾಮಸು ಯಸ್ತುಲ್ಯಮ್ | ೧-೨೨ |
| ತ್ರಿಷು ಧಾಮಸು ಯದ್ಭೋಜ್ಯಮ್ | ೧-೫ |
| ದಕ್ಷಿಣಾಕ್ಷಿಮುಖೇ ವಿಶ್ವಃ | ೧-೨ |
| ದುಃಖಂ ಸರ್ವಮನುಸ್ಮೃತ್ಯ | ೩-೪೩ |
| ದುರ್ದರ್ಶಮತಿಗಮ್ಭೀರಮ್ | ೪-೧೦೦ |
| ದ್ರವ್ಯಂ ದ್ರವ್ಯಸ್ಯ ಹೇತುಃ ಸ್ಯಾತ್ | ೪-೫೩ |
| ದ್ವಯೋರ್ದ್ವಯೋರ್ಮಧುಜ್ಞಾನೇ | ೩-೧೨ |
| ದ್ವೈತಸ್ಯಾಗ್ರಹಣಂ ತುಲ್ಯಮ್ | ೧-೧೩ |
| ಧರ್ಮಾ ಯ ಇತಿ ಜಾಯನ್ತೇ | ೪-೫೮ |
| ನ ಕಶ್ಚಿಜ್ಜಾಯತೇ ಜೀವಃ | ೩-೪೮ |
| ನ ಕಶ್ಚಿಜ್ಜಾಯತೇ ಜೀವಃ | ೪-೭೧ |
| ನ ನಿರೋಧೋ ನ ಚೋತ್ಪತ್ತಿಃ | ೨-೩೨ |
| ನ ನಿರ್ಗತಾ ಅಲಾತಾತ್ತೇ | ೪-೫೦ |
| ನ ನಿರ್ಗತಾಸ್ತೇ ವಿಜ್ಞಾನಾತ್ | ೪-೫೨ |
| ನ ಭವತ್ಯಮೃತಂ ಮರ್ತ್ಯಮ್ | ೩-೨೧ |

| | | | |
|---|---|---|---|
| ನ ಭವತ್ಯಮೃತಂ ಮರ್ತ್ಯಮ್ | ೪-೭ | ಫಲಾದುತ್ಪದ್ಯಮಾನಃ ಸನ್ | ೪-೧೭ |
| ನ ಯುಕ್ತಂ ದರ್ಶನಂ ಗತ್ವಾ | ೪-೩೪ | ಬಹಿಃ ಪ್ರಜ್ಞೋ ವಿಭುರ್ವಿಶ್ವಃ | ೧-೧ |
| ನಾಕಾಶಸ್ಯ ಘಟಾಕಾಶೋ | ೩-೭ | ಬೀಜಾಙ್ಕುರಾಖ್ಯೋ ದೃಷ್ಟಾನ್ತಃ | ೪-೨೦ |
| ನಾಜೇಷು ಸರ್ವೇ ಧರ್ಮೇಷು | ೪-೬೦ | ಬುದ್ಧ್ಯಾ ನಿಮಿತ್ತತಾಂ ಸತ್ಯಾಮ್ | ೪-೭೮ |
| ನಾತ್ಮಭಾವೇನ ನಾನೇದಮ್ | ೩-೩೪ | ಭಾವೈರಸದ್ಭಿರೇವಾಯಮ್ | ೨-೩೩ |
| ನಾತ್ಮಾನಂ ನ ಪರಾಂಶ್ಚೈವ | ೧-೧೨ | ಭೂತಂ ನ ಜಾಯತೇ ಕಿಂಚಿತ್ | ೪-೪ |
| ನಾಸ್ಯಸದ್ಧೇತುಕಮಸತ್ | ೪-೪೦ | ಭೂತತೋಽಭೂತತೋ ವಾಪಿ | ೩-೨೩ |
| ನಾಸ್ವಾದಯೇತ್ ಸುಖಂ ತತ್ರ | ೩-೪೫ | ಭೂತಸ್ಯ ಜಾತಿಮಿಚ್ಛನ್ತಿ | ೪-೩ |
| ನಿಸ್ತುತಿರ್ನಿರ್ನಮಸ್ಕಾರಃ | ೧-೩೭ | ಭೋಗಾರ್ಥಂ ಸೃಷ್ಟಿರಿತ್ಯನ್ಯೇ | ೧-೯ |
| ನಿಗೃಹೀತಸ್ಯ ಮನಸಃ | ೩-೩೪ | ಮಕಾರಭಾವೇ ಪ್ರಾಜ್ಞಸ್ಯ | ೧-೨೧ |
| ನಿಮಿತ್ತಂ ನ ಸದಾ ಚಿತ್ತಮ್ | ೪-೨೭ | ಮನ ಇತಿ ಮನೋವಿದಃ | ೨-೨೫ |
| ನಿವೃತ್ತಸ್ಯಾಪ್ರವೃತ್ತಸ್ಯ | ೪-೪೦ | ಮನಸೋ ನಿಗ್ರಹಾಯತ್ನಮ್ | ೩-೪೦ |
| ನಿವೃತ್ತೇಃ ಸರ್ವದುಃಖಾನಾಮ್ | ೧-೧೦ | ಮನೋ ದೃಶ್ಯಮಿದಂ ದ್ವೈತಮ್ | ೩-೩೧ |
| ನಿಶ್ಚಿತಾಯಾಂ ಯಥಾ ರಜ್ವಾಮ್ | ೨-೧೪ | ಮರಣೇ ಸಂಭವೇ ಚೈವ | ೩-೯ |
| ನೇಹ ನಾನೇತಿ ಚಾಮ್ನಾಯಾತ್ | ೩-೨೪ | ಮಾಯಯಾ ಭಿದ್ಯತೇ ಹ್ಯೇತತ್ | ೩-೧೯ |
| ಪಞ್ಚವಿಂಶಕ ಇತ್ಯೇಕೇ | ೨-೨೬ | ಮಿತ್ರಾದ್ಯೈಃ ಸಹ ಸಂಮನ್ತ್ರ್ಯ | ೪-೩೫ |
| ಪಾದಾ ಇತಿ ಪಾದವಿದಃ | ೨-೨೧ | ಮೃಲ್ಲೋಹಮಿಶ್ಚುಲಿಙ್ಗಾದ್ಯೈಃ | ೩-೧೫ |
| ಪೂರ್ವಾಪರಾವರಿಜ್ಞಾನಮ್ | ೪-೨೧ | ಯಥಾ ನಿರ್ಮಿತಕೋ ಜೀವಃ | ೪-೭೦ |
| ಪ್ರಕೃತ್ಯಾಕಾಶವಚ್ಚೈಕ್ಯಾಃ | ೪-೯೧ | ಯಥಾ ಭವತಿ ಬಾಲಾನಾಮ್ | ೪-೯ |
| ಪ್ರಜ್ಞಪ್ತೇಃ ಸನಿಮಿತ್ತತ್ವಮ್ | ೪-೨೪ | ಯಥಾ ಮಾಯಾಮಯಾತ್‌ಬೀಜಾತ್ | ೪-೫೯ |
| ಪ್ರಜ್ಞಪ್ತೇಃ ಸನಿಮಿತ್ತತ್ವಮ್ | ೪-೨೫ | ಯಥಾ ಮಾಯಾಮಯೋ ಜೀವಃ | ೪-೬೯ |
| ಪ್ರಣವಂ ಹೀಶ್ವರಂ ವಿದ್ಯಾತ್ | ೧-೨೮ | ಯಥಾ ಸ್ವಪ್ನಮಯೋ ಜೀವಃ | ೪-೬೮ |
| ಪ್ರಣವೋ ಹ್ಯಪರಂ ಬ್ರಹ್ಮ | ೧-೨೬ | ಯಥಾ ಸ್ವಪ್ನೇ ದ್ವಯಾಭಾಸಮ್ | ೩-೨೯ |
| ಪ್ರಪಞ್ಚೋ ಯದಿ ವಿದ್ಯೇತ | ೧-೧೭ | ಯಥಾ ಸ್ವಪ್ನೇ ದ್ವಯಾಭಾಸಮ್ | ೪-೬೧ |
| ಪ್ರಭವಃ ಸರ್ವಭಾವಾನಾಮ್ | ೧-೬ | ಯಥೈ ಕಸ್ಮಿನ್ ಘಟಾಕಾಶೇ | ೩-೫ |
| ಪ್ರಾಣ ಇತಿ ಪ್ರಾಣವಿದಃ | ೨-೨೦ | ಯದಾ ನ ಲಭತೇ ಹೇತೂನ್ | ೪-೭೬ |
| ಪ್ರಾಣಾದಿಭಿರನನ್ತೈಶ್ಚ | ೨-೧೯ | ಯದಾ ನ ಲೀಯತೇ ಚಿತ್ತಮ್ | ೪-೪೬ |
| ಪ್ರಾಪ್ಯ ಸರ್ವಜ್ಞತಾಂ ಕೃತ್ಸ್ನಾಮ್ | ೪-೮೫ | ಯದಿ ಹೇತೋಃ ಫಲಾಸ್ಸಿದ್ಧಿಃ | ೪-೧೮ |

| | | | |
|---|---|---|---|
| ಯಂ ಭಾವಂ ದರ್ಶಯೇದ್ಯಸ್ಯ | ೨-೨೯ | ಸಂಭವೇ ಹೇತುಫಲಯೋಃ | ೪-೧೬ |
| ಯಾವದ್ಧೇತುಫಲಾವೇಶಃ | ೪-೫೫ | ಸಂಭೂತೇರಪವಾದಾಚ್ಚ | ೩-೨೫ |
| ಯಾವದ್ಧೇತುಫಲಾವೇಶಃ | ೪-೫೬ | ಸರ್ವಸ್ಯ ಪ್ರಣವೋ ಹ್ಯಾದಿಃ | ೧-೨೭ |
| ಯುಕ್ತೋತ ಪ್ರಣವೇ ಚೇತಃ | ೧-೨೫ | ಸರ್ವಾಭಿಲಾಪವಿಗತಃ | ೩-೩೭ |
| ಯೋಽಸ್ತಿ ಕಲ್ಪಿತಸಂವೃತ್ಯಾ | ೪-೭೩ | ಸರ್ವೇ ಧರ್ಮಾ ಮೃಷಾ ಸ್ವಪ್ನೇ | ೪-೩೩ |
| ರಸಾದಯೋ ಹಿ ಯೇ ಕೋಶಾಃ | ೩-೧೧ | ಸಮಸ್ತು ಸೋಪಲಮ್ಭಂ ಚ | ೪-೮೭ |
| ರೂಪಕಾರ್ಯಸಮಾಖ್ಯಾಶ್ಚ | ೩-೬ | ಸಾಂಸಿದ್ಧಿಕೀ ಸ್ವಾಭಾವಿಕೀ | ೪-೯ |
| ಲಯೇ ಸಂಬೋಧಯೇಚ್ಚಿತ್ತಮ್ | ೩-೪೪ | ಸುಖಮಾವ್ರಿಯತೇ ನಿತ್ಯಮ್ | ೪-೮೨ |
| ಲೀಯತೇ ಹಿ ಸುಷುಪ್ತೇ ತತ್ | ೩-೩೫ | ಸೂಕ್ಷ್ಮ ಇತಿ ಸೂಕ್ಷ್ಮವಿದಃ | ೨-೨೩ |
| ಲೋಕಾಲ್ಲೋಕವಿದಃ ಪ್ರಾಯಃ | ೨-೨೭ | ಸೃಷ್ಟಿರಿತಿ ಸೃಷ್ಟಿವಿದಃ | ೨-೨೮ |
| ವಿಕರೋತ್ಯಪರಾನ್ ಭಾವಾನ್ | ೨-೧೩ | ಸ್ಥೂಲಂ ತರ್ಪಯತೇ ವಿಶ್ವಮ್ | ೧-೪ |
| ವಿಕಲ್ಪೋ ವಿನಿವರ್ತೇತ | ೧-೧೮ | ಸ್ಮೃತೋ ವಾ ಪರತೋ ವಾಪಿ | ೪-೨೨ |
| ವಿಜ್ಞಾನೇ ಸ್ಪನ್ದಮಾನೇ ವೈ | ೪-೫೧ | ಸ್ವಪ್ನಜಾಗರಿತಸ್ಥಾನೇ | ೨-೫ |
| ವಿಪರ್ಯಾಸಾದ್ಯಥಾ ಜಾಗ್ರತ್ | ೪-೪೧ | ಸ್ವಪ್ನದೃಕ್ಚಿತ್ತದೃಶ್ಯಾಸ್ತೇ | ೪-೬೪ |
| ವಿಪ್ರಾಣಾಂ ವಿನಯೋ ಹ್ಯೇಷಃ | ೪-೮೬ | ಸ್ವಪ್ನದೃಕ್ಪ್ರಚರನ್ ಸ್ವಪೇ | ೪-೬೩ |
| ವಿಭೂತಿಂ ಪ್ರಸವಂ ತ್ವನ್ಯೇ | ೧-೭ | ಸ್ವಪ್ನನಿದ್ರಾಯುತಾವಾದ್ಯೌ | ೧-೧೪ |
| ವಿಶ್ವಸ್ಯಾತ್ಮವಿವಕ್ಷಾಯಾಮ್ | ೧-೧೯ | ಸ್ವಪ್ನಮಾಯೇ ಯಥಾ ದೃಷ್ಟೇ | ೨-೩೧ |
| ವಿಶ್ವೋ ಹಿ ಸ್ಥೂಲಭುಪ್ಸ್ಥಿತಮ್ | ೧-೩ | ಸ್ವಪ್ನ ವೃತ್ತಾವಪಿ ತ್ವನ್ತಃ | ೨-೯ |
| ವೀತರಾಗಭಯಕ್ರೋಧೈಃ | ೨-೩೫ | ಸ್ವಪ್ನೇ ಚಾಮಸ್ತುಕಃ ಕಾಯಃ | ೪-೩೬ |
| ವೇದಾ ಇತಿ ವೇದವಿದಃ | ೨-೨೨ | ಸ್ವಭಾವೇನಾಮೃತೋ ಯಸ್ಯ | ೩-೨೨ |
| ವೈತಥ್ಯಂ ಸರ್ವಭಾವಾನಾಮ್ | ೨-೧ | ಸ್ವಭಾವೇನಾಮೃತೋ ಯಸ್ಯ | ೪-೮ |
| ವೈಶಾರದ್ಯಂ ಶು ವೈ ನಾಮ್ನಿ | ೪-೯೪ | ಸ್ವಸಿದ್ಧಾನ್ತವ್ಯವಸ್ಥಾಸು | ೩-೧೭ |
| ಸ ಏಷ ನೇತಿ ನೇತೀತಿ | ೩-೨೬ | ಸ್ವಸ್ಥಂ ಶಾನ್ತಂ ಸನಿರ್ವಾಣಮ್ | ೩-೪೭ |
| ಸಂವೃತ್ಯಾ ಜಾಯತೇ ಸರ್ವಮ್ | ೪-೫೭ | ಹೇತುರ್ನ ಜಾಯತೇಽನಾದೇಃ | ೪-೨೩ |
| ಸಙ್ಘಾತಾಃ ಸ್ವಪವತ್ ಸರ್ವೇ | ೩-೧೦ | ಹೇತೋರಾದಿಃ ಫಲಂ ಯೇಷಾಮ್ | ೪-೧೪ |
| ಸತೋ ಹಿ ಮಾಯಯಾ ಜನ್ಮ | ೩-೨೭ | ಹೇತೋರಾದಿಃ ಫಲಂ ಯೇಷಾಮ್ | ೪-೧೫ |
| ಸಪ್ರಯೋಜನತಾ ತೇಷಾಮ್ | ೨-೭ | ಹೇಯಜ್ಞೇಯಾಪ್ಯಪಾಕ್ಯಾನಿ | ೪-೯೦ |
| ಸಪ್ರಯೋಜನತಾ ತೇಷಾಮ್ | ೪-೩೨ | | |

# ಶಬ್ದಾನುಕ್ರಮಣಿಕೆ

(ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಬಂದಿರುವ ಮುಖ್ಯಶಬ್ದಗಳು)

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯಭಾಗದ ಸಂಖ್ಯೆಗಳು. ಬಹಳ ಸಂಖ್ಯೆಗಳಿರುವಲ್ಲಿ ಕೆಲವನ್ನು ಮಾತ್ರ ಕೊಟ್ಟಿದೆ.


೧. **ಅಕೃತಕರ್ತೃ** -

ಮೊದಲೇ ಆಗದಿರುವ ಅರಿವನ್ನುಂಟು ಮಾಡಿಕೊಡತಕ್ಕ (ಶಾಸ್ತ್ರ), ೧೧೫.

೨. **ಅಚಿನ್ತ್ಯ** -

(೧) ಮನಸ್ಸಿನಿಂದ ಚಿಂತಿಸುವದಕ್ಕೆ ಆಗದಿರುವ (ಆತ್ಮತತ್ತ್ವ), ೪೨.

(೨) ಇಂಥದ್ದೆಂದು ಗೊತ್ತುಪಡಿಸುವದಕ್ಕಾಗದ ವಸ್ತು. ಇದನ್ನು ಈಗಿನ ವೇದಾಂತಿಗಳು ಅನಿರ್ವಚನೀಯವೆನ್ನುತ್ತಾರೆ, ೨೮೬, ೩೦೦.

೩. **ಅಜ** -

ಹುಟ್ಟಿಲ್ಲದ, ನಿರ್ವಿಕಾರವಾದ (ಬ್ರಹ್ಮ), ೫೩, ೧೨೮, ೧೨೯, ೧೩೦, ೧೩೫, ೧೩೮, ೧೪೮, ೧೯೫, ೨೧೨, ೨೧೯, ೨೩೨, ೨೩೨, ೩೦೮, ೩೦೯, ೩೧೩, ೩೩೬, ೩೫೯, ೩೬೧.

೪. **ಅಜಾತ** -

ಎಂದಿಗೂ ಹುಟ್ಟಿದೆ ಇರುವ ನಿರ್ವಿಕಾರವಾದ (ಬ್ರಹ್ಮ), ೧೬೬, ೨೬೯.

೫. **ಅಜಾತಿಃ** -

(೧) ಹುಟ್ಟಿದೆ ಇರುವದು, ೨೪೪, ೨೪೯.

(೨) ಹುಟ್ಟಿಂಬ ವಿಕಾರವಿಲ್ಲದ(ಬ್ರಹ್ಮ), ೧೩೦, ೧೩೧, ೧೬೯, ೨೪೭.

೬. **ಅಣಿಮಾದ್ಯೈಶ್ವರ್ಯಮ್** -

ಅಣಿಮಾ ಮಾಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿಃ, ಪ್ರಾಕಾಮ್ಯಮ್, ಈಶಿತ್ವಮ್, ವಶಿತ್ವಮ್-ಎಂಬ ಎಂಟು ಯೋಗಸಿದ್ಧಿಗಳು.

೭. **ಅದ್ವಯ** -

ತನಗೆರಡನೆಯದಿಲ್ಲದ (ಬ್ರಹ್ಮ), ೧೧೭, ೧೧೯, ೧೨೧, ೧೨೮, ೧೪೪, ೧೪೮, ೧೬೦, ೧೭೬, ೧೯೨, ೨೪೨, ೨೪೪, ೨೯೨, ೨೯೩.

೮. **ಅದ್ವೈತ** -

ತನಗೆರಡನೆಯದಿಲ್ಲದ (ಬ್ರಹ್ಮ) ೧೨, ೧೩, ೪೨, ೫೩, ೫೪, ೫೫, ೧೧೪, ೧೨೩, ೧೨೭, ೧೬೫.

೯. **ಅದ್ವೈತದರ್ಶನಮ್, ಅದ್ವಯಾತ್ಮದರ್ಶನಮ್** -

ಅದ್ವೈತತತ್ತ್ವದ ಜ್ಞಾನ, ಅದ್ವೈತವೇ ಪರಮಾರ್ಥವೆಂದು ಹೇಳುವ ಶ್ರೀಗೌಡಪಾದರೇ ಮೊದಲಾದವರು ಒಪ್ಪಿರುವ ವೇದಾಂತದರ್ಶನ, ೧೬೦, ೨೧೨, ೨೧೩, ೨೧೫, ೩೪೫.

೧೦. **ಅದ್ವೈತಪ್ರತಿಪತ್ತಿಃ, ಅದ್ವೈತಭಾವಃ** -

ಅದ್ವೈತವನ್ನು ಅರಿತು ಅದ್ವೈತಸ್ವರೂಪನಾಗುವದು, ೨, ೩.

೧೧. **ಅಧಿದೈವಮ್** -

ದೇವತೆಗಳ ವಿಷಯವಾಗಿ, ೧೫೦.

೧೨. **ಅಧ್ಯಾತ್ಮಮ್** -

ತನ್ನೊಳಗೆ, ೧೫೦.

೧೩. ಅನಾದಿಃ -
(೧) ಆದಿಯಿಲ್ಲದ, ಅನಾದಿಕಾಲದಿಂದ ಬಂದಿರುವ (ಮಾಯೆ), ೫೩ .
(೨) ಹುಟ್ಟದೆ ಇರುವ, ೨೫೫.

೧೪. ಅನ್ಯಥಾಗ್ರಹಣಮ್ -
ತಪ್ಪುತಿಳಿವಳಿಕೆ, ೧೫, ೪೫, ೪೬, ೫೦, ೫೩.

೧೫. ಅಪರಂ ಬ್ರಹ್ಮ -
ಸಗುಣಬ್ರಹ್ಮ, ನಿರ್ಗುಣಬ್ರಹ್ಮಕ್ಕಿಂತ ಕಡಿಮೆಯಾದ ಬ್ರಹ್ಮ, ೭೧

೧೬. ಅಬೀಜಾವಸ್ಥಾ -
ಕಾರಣವಲ್ಲದ ತುರೀಯಾತ್ಮನಾಗಿರುವ ಸ್ಥಿತಿ, ೨೫.

೧೭. ಅಭಿಧಾನಮ್ -
ಹೆಸರು, ವಾಚಕ, ೪, ೫, ೭, ೫೮.

೧೮. ಅಭಿಧಾನಾಭಿಧೇಯೇ -
ವಾಚಕ ಮತ್ತು ವಾಚ್ಯ-ಇವು, ೪, ೫, ೭, ೫೮, ೬೦ , ಇವುಗಳನ್ನು ತಿಳಿಸುವ ವಾಙ್ಮನಸ್ಸುಗಳು, ೬೮

೧೯. ಅಭಿಧೇಯಮ್ -
ಗ್ರಂಥದ ವಿಷಯ, ೧, ೨.

೨೦. ಅಮನೀಭಾವಃ -
ಮನಸ್ಸು ಮನಸ್ಸಲ್ಲದ ಹೋಗಿ ಆತ್ಮನಲ್ಲಿ ಅಡಗುವದು, ೧೮೪, ೧೮೫, ೧೮೬, ೧೮೯.

೨೧. ಅರ್ಧಮೈನಾಶಿಕಃ -
ಬೌದ್ಧಪಕ್ಷವನ್ನೂ ಸ್ವಲ್ಪಮಟ್ಟಿಗೆ ಅಂಗೀಕರಿಸುವವನು, ಜೈನ, ೫೪.

೨೨. ಅವಸ್ಥಾ -
ಅರಿಯುವದು, ಅರಿಯದಿರುವದು-ಎಂಬ ಅನುಭವರೂಪವಾದ ಎಚ್ಚರ, ಕನಸು, ತನಿನಿದ್ರೆ-ಇವು, ೧೬, ೨೦, ೩೮, ೪೦, ೫೨.

೨೩. ಅವಿದ್ಯಾಕಾಮಕರ್ಮಾಣಿ -
ಆತ್ಮನ ವಿಷಯದ ತಪ್ಪುತಿಳಿವಳಿಕೆ ಅನಾತ್ಮದ ಇಚ್ಛೆ, ಮತ್ತು ಕರ್ಮ-ಇವು, ೧೪.

೨೪. ಅವಿದ್ಯಾಕೃತ -
ಅವಿದ್ಯಾನಿಮಿತ್ತದಿಂದಾಗಿರುವ, (ವಿಶ್ವಾದಿ ಪಾದತ್ರಯ), ೩೭ ; (ಗ್ರಾಹ್ಯಗ್ರಾಹಕವೆಂಬ ಮಲ), ೧೯೨ ; (ದ್ವೈತಪ್ರಪಂಚ) ೨ ; (ನಾಮರೂಪಮಾಯೆ), ೨೯ ; (ದೇಹಾದಿ ಸಂಘಾತಗಳು), ೧೪೭ ; (ವ್ಯವಹಾರ) ೧೩೮, ೧೩೯.

೨೫. ಅವಿದ್ಯಾಧ್ಯಸ್ತ, ಅವಿದ್ಯಾಧ್ಯಾರೋಪಿತ, ಅವಿದ್ಯಾಪರಿಕಲ್ಪಿತ -
ಭ್ರಾಂತಿಯಿಂದ ತೋರುವ (ದ್ವೈತ) ೧೧೫ ; (ಸುಖಿತ್ವಾದಿ) ೧೧೫ ; (ಉಪಾಧಿ) ೧೩೮ ; (ಸಮಾಧಿಸುಖ) ೨೦೭ ; (ಧರ್ಮಾಧರ್ಮಗಳು) ೩೨೮ ; (ದ್ವೈತಮಾರ್ಗ) ೩೫೭ ; (ರಜ್ಜುಸರ್ಪ) ೧೭೪.

೨೬. ಅವಿದ್ಯಾಪ್ರತ್ಯುಪಸ್ಥಾಪಿತ -
ಅವಿದ್ಯೆಯು ಮುಂದೊಡ್ಡಿದ (ಜೀವ) ೧೭೪.

೨೭. ಅವಿದ್ಯಾಮಯ -
ಅವಿದ್ಯಾರೂಪವಾದ (ಇಂದ್ರಿಯಪ್ರಜ್ಞೆ), ೧೭೨.

೨೮. ಅವಿದ್ಯಾಲಕ್ಷಣ -
ಅವಿದ್ಯೆಯಿಂದ ತೋರುವ ನಿದ್ರೆ, ಅಜ್ಞಾನ, ೧೯೩.

೨೯. ಅವಿದ್ಯಾವಿಜೃಂಭಿತಮ್, ಅವಿದ್ಯಾವಿಷಯಃ -
ಅವಿದ್ಯೆಯಿಂದ ಹರಡಿಕೊಂಡಿರುವ, (ದೃಷ್ಟ) ೨೦೫ ; ಅವಿದ್ಯೆಗೆ ಗೋಚರವಾದ, (ವ್ಯವಹಾರ), ೧೧೧.

೩೦. ಅವ್ಯಾಕೃತಮ್ -
ನಾಮರೂಪಾತ್ಮಕವಾಗಿರುವ ಜಗತ್ತಿನ ಬೀಜ, ೬.

೩೧. ಅವ್ಯಾಕೃತ -
(೧) ಬಿಡಿಬಿಡಿಯಾಗಿರುವ ಪ್ರಾಣ, ೨೩ ; (೨) ಕಾರಣರೂಪನಾದ (ಆತ್ಮ), ೧೩, ೨೪ ; (೩) ಅವ್ಯಕ್ತವಾಗಿರುವ (ಭಾವನೆಗಳು), ೯೬, ೯೯.

೩೨. ಅಸತ್, ಅಸತ್ಯಮ್ -
ಇಲ್ಲದ, ಹುಸಿತೋರಿಕೆಯಾದ, ೭೬, ೮೧, ೮೫, ೮೬, ೮೭, ೮೮, ೧೧೦, ೧೧೪, ೧೧೭, ೧೨೬, ೧೨೭, ೧೭೯, ೧೮೪, ೧೮೭, ೨೭೧, ೨೭೬.

೩೩. ಅಸದ್ವಾದೀ -
ಮೊದಲು ಇಲ್ಲದ ಕಾರ್ಯವು ಹುಟ್ಟುತ್ತದೆ ಎಂಬ (ವೈಶೇಷಿಕ), ೨೨೦, ೨೨೨, ೨೫೨, ೨೫೩, ೨೮೦, ೨೮೨, ೨೮೪, ೨೮೫.

೩೪. ಅಸ್ಪರ್ಶಯೋಗಃ -
ಯಾವದರ ಸಂಬಂಧವೂ ಇಲ್ಲದ ಅದ್ವೈತಾತ್ಮದರ್ಶನ, ೧೯೯, ೨೧೬.

೩೫. ಆಕಾಶಾದಿಕ್ರಮಃ -
ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿ, ಓಷಧಿಗಳು, ಅನ್ನ, ಅನ್ನರಸಮಯಪುರುಷ-ಮುಂತಾದ ಕ್ರಮ, ೧೪೯.

೩೬. ಆಗಮಃ -
ಉಪದೇಶ, ಯುಕ್ತಿಯನ್ನು ಕೊಡದೆ ಹೇಳುವದು, ೩, ೭೫, ೧೨೭, ೨೧೨.

೩೭. ಆಗಮವಿದಾಂ ಸೂತ್ರಮ್ -
ಶಾಸ್ತ್ರವ್ಯಾಪಾರವನ್ನು ಬಲ್ಲ ದ್ರವಿಡಾಚಾರ್ಯರ ಸೂತ್ರವು, ೧೧೫.

೩೮. ಆತ್ಮತತ್ತ್ವಪ್ರತಿಪತ್ತಿಃ -
ಆತ್ಮನನ್ನು ಇದ್ದದ್ದು ಇದ್ದಂತೆ ತಿಳಿದುಕೊಳ್ಳುವದು, ೩, ೪.

೩೯. ಆತ್ಮಪ್ರತ್ಯಯಃ -
ನಾನೆಂಬ ಅರಿವು, ಆತ್ಮನನ್ನು ತಿಳಿಸುವದಕ್ಕೆ ಮುಖ್ಯಪ್ರಮಾಣ. ೪೨.

೪೦. ಆತ್ಮಭಾವಃ -
(೧) ತಾನೇ ಆದಾಗುವದು, ೧೦೭ ; (೨) ಪರಮಾರ್ಥಸ್ವರೂಪ, ೧೧೯.

೪೧. ಆತ್ಮವಿವೇಕಃ -
ಆತ್ಮನನ್ನು ವಿಂಗಡಿಸಿಕೊಂಡು ಅರಿಯುವದು, ೨೦೬.

೪೨. ಆತ್ಮಸಂಸ್ಥಮ್ -
ಆತ್ಮನಲ್ಲಿಯೇ ಅವನ ಸ್ವಭಾವವಾಗಿರುವ (ಜ್ಞಾನ) ೧೯೭.

೪೩. ಆತ್ಮಾ -
ನಮ್ಮೆಲ್ಲರ ನಿಜವಾದ ಸ್ವರೂಪ, ೬೮, ೯೪, ೧೦೩, ೧೦೫, ೧೦೮, ೧೧೩, ೧೧೫, ೧೧೭, ೧೨೧, ೧೨೬, ೧೩೩, ೧೩೪, ೧೩೬, ೧೪೬, ೧೪೯, ೧೫೦, ೧೫೪, ೧೫೫, ೧೮೬, ೨೮೦.

೪೪. ಆತ್ಮೈಕತ್ವಪ್ರತಿಪತ್ತಿಃ, ಆತ್ಮೈಕತ್ವಬುದ್ಧಿಃ -
ಪರಮಾರ್ಥವಾಗಿ ಎಲ್ಲಕ್ಕೂ ಆತ್ಮನಾಗಿರು

ವದು, ಅದ್ವೈತವನ್ನು ಅರಿತುಕೊಳ್ಳುವದು ೧೫೭, ೧೬೧, ೧೭೨

೪೫. ಆಧಿದೈವಿಕ -
ದೇವತೆಗಳಿಗೆ ಸಂಬಂಧಪಟ್ಟು, ೧೨, ೧೭.

೪೬. ಆಧ್ಯಾತ್ಮಿಕ -
ಶರೀರಕ್ಕೆ ಸಂಬಂಧಪಟ್ಟು, ನಮ್ಮೊಳಗಿನ, ೧೨, ೧೦೧, ೧೨೬, ೧೩೨.

೪೭. ಆನನ್ದಮಯಃ -
ಅನಾತ್ಯಂತಿಕವಾಗಿರುವ ಆನಂದರೂಪನಾದ ಸಮಷ್ಟ್ಯಾತ್ಮ, ೧೬

೪೮. ಆಸ್ಪದಮ್ -
ಆರೋಪಿತವಾಗಿರುವ ಹಾವು, ಬೆಳ್ಳಿ-ಮುಂತಾದವಕ್ಕೆ ಆಧಾರವಾಗಿರುವ ಹಗ್ಗ, ಕಪ್ಪಯ ಚಿಪ್ಪು ಮುಂತಾದದ್ದು, ೪, ೩೫, ೧೧೪, ೧೭೭.

೪೯. ಈಶ್ವರಃ -
ಜಗತ್ಕಾರಣನಾದ ಪರಮಾತ್ಮ, ೩೧ , ಅಂತಃಕರಣಸಾಕ್ಷಿಯಾದ ಪರಮಾತ್ಮ, ೭೩ ; ನಾರಾಯಣನು, ೨೧೪.

೫೦. ಉಪಾಧಿಕೃತ -
ಉಪಾಧಿಗಳಿಂದ ತೋರುವ, ೧೩೪, ೧೪೦.

೫೧. ಊಷರದೇಶಃ -
(ನೀರೆಂದು ಕಲ್ಪಿಸುವದಕ್ಕೆ ಆಧಾರವಾದ) ಮರುಭೂಮಿ, ೧೪೪.

೫೨. ಏಕಾತ್ಮಪ್ರತ್ಯಯಸಾರಮ್ -
ಒಬ್ಬನೇ ಆತ್ಮನು ಮೂರು ಅವಸ್ಥೆಗಳಲ್ಲಿಯೂ ಇರುವನೆಂಬ ಪ್ರತ್ಯಯದಿಂದ ಅನುಸರಿಸಿ ತಿಳಿಯಬೇಕಾದ ಆತ್ಮ, ೪೨.

೫೩. ವಿಷಯಾದ್ವಯಮ್ -
ಸಾಧ್ಯ, ಸಾಧನ-ಇವುಗಳ ಬಯಕೆ, ೧೭೩.

೫೪. ಕರ್ಮಕಾಣ್ಡಮ್ -
ಕರ್ಮಗಳನ್ನು ವಿಧಿಸುವ ವೇದಭಾಗ, ೧೫೨.

೫೫. ಕಾರಣಬನ್ಧಃ -
ಅರಿಯದಿರುವದೆಂಬ ಬಂಧ, ೪೮, ೪೯, ೫೦, ೫೨.

೫೬. ಕಾರ್ಯಕಾರಣಸಙ್ಘಾತಃ -
ಶರೀರ, ಇಂದ್ರಿಯಗಳು-ಇವುಗಳ ಒಟ್ಟು, ೧೩೨, ೧೪೭.

೫೭. ಕಾರ್ಯಬನ್ಧಃ -
ತಪ್ಪುತಿಳಿವಳಿಕೆ ಎಂಬ ಬಂಧ, ೪೫, ೫೦, ೫೨.

೫೮. ಕಾರ್ಷಾಪಣಮ್ -
ಒಂದು ಕರ್ಷ (ಒಂದು ತೊಲೆ) ಚಿನ್ನದಿಂದ ಮಾಡಿದ ನಾಣ್ಯ, ೯.

೫೯. ಕುತಾರ್ಕಿಕಾಃ -
ವೇದವಿರುದ್ಧವಾದ ತರ್ಕವನ್ನೇ ಹಿಡಿದು ವಾದಿಸುವವರು, ೧೫೧.

೬೦. ಕ್ರಿಯಾಕಾರಕಫಲಭೇದಃ -
ಕರ್ಮ, ಕರ್ಮದ ಸಾಮಗ್ರಿ, ಕರ್ಮದಿಂದ ಪಡೆದುಕೊಳ್ಳುವ ಫಲ-ಎಂಬ ಭೇದ, ೧೦೧.

೬೧. ಕ್ರಿಯಾಫಲಸಾಙ್ಕರ್ಯಮ್ -
ಒಬ್ಬರು ಮಾಡಿದ ಕರ್ಮಕ್ಕೆ ಎಲ್ಲಾ ಜೀವರೂ ಫಲವನ್ನನುಭವಿಸುವದು, ೧೩೪.

೬೨. ಕ್ಲೇಶಕರ್ಮಫಲಮಲಮ್ -
ಅವಿದ್ಯಾದಿಗಳು, ಕರ್ಮವನ್ನು ಮಾಡುವದು, ಫಲವನ್ನು ಅನುಭವಿಸುವದು-ಎಂಬ ಕಲ್ಮಷ, ೧೪೩, ೧೪೪.

೬೩. ಕ್ಷುದ್ರಬ್ರಹ್ಮವಿತ್ -

ಅಲ್ಪವಾದ ಬ್ರಹ್ಮವನ್ನು, ಅಪರಬ್ರಹ್ಮವನ್ನು ಅರಿತವನು, ೧೨೮.

೬೪. ಕ್ಷೇತ್ರಜ್ಞಃ -

ಶರೀರವನ್ನು ಅರಿಯುವ ಜೀವ, ೧೩೨.

೬೫. ಖಕುಸುಮಮ್ -

ಆಕಾಶದ ಹೂ, ಅತ್ಯಂತವಾಗಿ ಇಲ್ಲದ್ದು, ೨೮೪.

೬೬. ಗನ್ಧರ್ವನಗರಮ್ -

ಆಕಾಶದಲ್ಲಿ ನಗರದಂತೆ ತಟ್ಟನೆ ತೋರುವ ಹುಸಿತೋರಿಕೆ, ೧೧೦.

೬೭. ಗ್ರಹಣಾಗ್ರಹಣೇ -

ಅರಿಯುವದು, ಅರಿಯದಿರುವದು-ಎಂಬ ವಿಕಾರಗಳು, ೧೯೩.

೬೮. ಗ್ರಾಹ್ಯಗ್ರಹಣಮ್ -

ಅರಿಯತಕ್ಕ ವಿಷಯವನ್ನು ಅರಿಯುವದು, ೩೪೬, ೩೪೭.

೬೯. ಗ್ರಾಹ್ಯಗ್ರಾಹಕೇ -

ಅರಿಯತಕ್ಕ ವಿಷಯ, ಅರಿಯುವ ಪ್ರತ್ಯಯ-ಎಂಬ ಭೇದ, ೧೯೨, ೨೭೮.

೭೦. ಘಟಕರಕಾಪವರಕಾದ್ಯಾಕಾಶಾಃ -

ಗಡಿಗೆ, ಕುಡಿಕೆ, ಕೋಣೆ-ಮುಂತಾದ ಉಪಾಧಿಗಳಿಂದ ಬೇರೆಬೇರೆಯಾಗಿ ತೋರುವ ಆಕಾಶಗಳು, ೧೪೦.

೭೧. ಘಟಾಕಾಶಃ -

ಗಡಿಗೆ ಎಂಬ ಉಪಾಧಿಯಿಂದ ಬೇರೆಯಾಗಿ ತೋರುವ ಆಕಾಶ, ೧೩೨, ೧೩೩, ೧೩೫, ೧೪೦, ೧೪೨, ೧೪೩, ೧೪೬, ೧೫೫.

೭೨. ಚತುರ್ಥಃ -

ಎಚ್ಚರ, ಕನಸು, ತನಿನಿದ್ರೆ-ಎಂಬ ಮೂರು ಅವಸ್ಥೆಗಳ ಪಂಗಿಲ್ಲದ ನಾಲ್ಕನೆಯ ಪರಮಾರ್ಥತತ್ತ್ವ, ೩೮, ೪೨.

೭೩. ಚತುಷ್ಪಾತ್ -

ನಾಲ್ಕುಪಾದಗಳುಳ್ಳ ; ಎಚ್ಚರ, ಕನಸು, ತನಿನಿದ್ರೆ-ಎಂಬ ಅವಸ್ಥೆಗಳಲ್ಲಿರುವ ಆತ್ಮ, ಅವಸ್ಥೆಯ ಪಂಗಿಲ್ಲದ ಶುದ್ಧಾತ್ಮ-ಎಂಬ ನಾಲ್ಕುರೂಪಗಳುಳ್ಳ (ಆತ್ಮ), ೮, ೯, ೧೨, ೩೮, ೫೮.

೭೪. ಚಿತ್ತಮ್ -

ಅರಿಯುವ ಅಂತಃಕರಣ, ೧೧, ೯೬, ೯೭, ೨೦೬, ೨೦೭, ೨೦೮, ೨೬೬, ೩೧೬, ೩೧೭, ೩೧೮, ೩೨೧, ೩೩೩.

೭೫. ಚಿತ್ತಕಾಲ, ಚಿತ್ತಪರಿಚ್ಛೇದ್ಯ -

ಚಿತ್ತದಲ್ಲಿ ಕಲ್ಪನೆಯಾದಾಗ ಮಾತ್ರ ಕಾಣುವ ವಸ್ತು, ೯೬, ೯೭.

೭೬. ಚಿತ್ತಸ್ಪನ್ದನಮ್, ಚಿತ್ತಸ್ಪನ್ದಿತಮ್

ಅಂತಃಕರಣದ ವ್ಯಾಪಾರದ ಫಲವಾಗಿರುವ ದೈತ, ೧೬೩, ೩೨೧.

೭೭. ಚೇತೋಂಶವಃ -

ಚೈತನ್ಯದ ಕಿರಣಗಳು, ಬೇರೆಬೇರೆಯಾಗಿ ತೋರುವ ವಿಶ್ವ, ತೈಜಸ, ಪ್ರಾಜ್ಞ-ಇವರು, ೩೦.

೭೮. ಜಾಗರಿತಮ್ -

ಎಚ್ಚರವೆಂಬ ಅವಸ್ಥೆ, ೧೧, ೨೦, ೫೨, ೬೦, ೩೧೭, ೩೪೬, ೩೫೦.

೭೯. ಜೀವಾಃ -

ಕರ್ತೃಭೋಕ್ತೃರೂಪವಾಗಿ ತೋರುವ ಪ್ರಾಣಗಳು, ೧೦೧, ೧೦೨, ೧೦೩, ೧೧೨, ೧೩೨, ೧೩೫, ೧೫೧, ೧೫೪, ೧೫೫, ೧೭೪, ೩೧೬, ೩೧೭

೮೦. ಜ್ಞಾನಕಾಣ್ಡಮ್ -

ಆತ್ಮಜ್ಞಾನವನ್ನು ತಿಳಿಸುವ ವೇದಭಾಗ, ಉಪನಿಷತ್ತು, ೧೫೨

೮೧. ಜ್ಞಾನದಾಹ್ಯಬೀಜಮ್ -

ಜ್ಞಾನದಿಂದ ನಾಶವಾಗುವ ಅಜ್ಞಾನ ರೂಪವಾದ ಸಂಸಾರಕಾರಣ, ೨೪.

೮೨. ಜ್ಞಾನಾಭ್ಯಾಸಃ -

ವಸ್ತುತತ್ತ್ವವನು ಮತ್ತೆ ಮತ್ತೆ ಮನ ದಂದುಕೊಳ್ಳುವದು, ೨೦೬

೮೩. ತತ್ತ್ವಾಗ್ರಹಣಮ್,
ತತ್ತ್ವಪ್ರತಿಬೋಧಃ -

ನಿಜವನ್ನು ಅರಿಯದಿರುವದು, ೧೫, ೪೫, ೫೩

೮೪. ತಮೋರೂಪಮ್ -

ಏಂಗಡಿಸಿ ಅರಿಯದ ಅಜ್ಞಾನರೂಪ, ೧೯೨.

೮೫. ತಾರ್ಕಿಕಾಃ -

ಬರಿಯ ತರ್ಕವನ್ನೇ ನಂಬಿರುವವರು, ವೇದಾಂತಿಗಳಲ್ಲದ ವಾದಿಗಳು, ೧೩೧, ೧೩೧, ೧೪೯, ೧೫೧.

೮೬. ತುರೀಯ, ತುರ್ಯ -

ನಾಲ್ಕನೆಯ, ಎಚ್ಚರಕನಸುನಿದ್ರೆಗಳಲ್ಲಿರುವ ಆತ್ಮರೂಪಕ್ಕಿಂತ ವಿಲಕ್ಷಣವಾದ ಆತ್ಮ, ೯, ೩೧, ೩೪, ೩೬, ೩೮, ೩೯, ೪೩, ೪೭, ೪೯, ೫೩

೮೭. ತ್ಯೆದಸಃ -

ಕನಸೆಂಬ ಅವಸ್ಥೆಯ ಉಪಾಧಿಯುಳ್ಳ ಆತ್ಮ, ೧೪, ೨೦, ೨೮, ೩೯, ೪೩, ೪೮, ೬೧.

೮೮. ತ್ರಿಕಾಲಾತೀತಮ್ -

ಮೂರು ಕಾಲವನ್ನೂ ಮೀರಿರುವ ಅವ್ಯಾಕೃತವೇ ಮುಂತಾದದ್ದು, ೬.

೮೯. ತ್ರೈಮಿರಿಕಾನೇಕಚನ್ದ್ರಾಃ -

ಪರಿಗಣ್ಣಿನವರಿಗೆ ಕಾಣುವ ಅನೇಕ ಚಂದ್ರರು, (ಹುಸಿಯಾದ ದ್ವೈತಕ್ಕೆ ದೃಷ್ಟಾಂತ), ೧೬೫.

೯೦ ದರ್ಶನಾದರ್ಶನವೃತ್ತೀ -

ಮತ್ತೊಂದನ್ನು ಕಾಣುವ ಕನಸಿನ ನಿದ್ರೆ, ಮತ್ತೊಂದನು ಕಾಣದ ನಿದ್ರೆ-ಎಂಬ ಎರಡು ಬಗೆಯ ನಿದ್ರೆಗಳು, ೧೫.

೯೧. ದೃಷ್ಟಾರ್ಥಃ -

ಇಹಲೋಕದ ಕರ್ಮಫಲ, ೬೯.

೯೨. ದೇಹಾದಿಸಙ್ಘಾತಾಃ -

ದೇಹ, ಇಂದ್ರಿಯಗಳು-ಇವು ಒಟ್ಟುಗೂಡಿ ಆಗಿರುವ ಗುಂಪುಗಳು, ೧೩೩, ೧೪೭.

೯೩. ದ್ವಯಕಾಲಾಃ -

ಒಂದರ ಕಾಲದವರೆಗೆ ಇನ್ನೊಂದಿರುವ ಹೊರಗಿನ ವಸ್ತುಗಳು, ೯೮.

೯೪. ದ್ವೈತಪ್ರಪಞ್ಚಃ -

ನಾನಾರೂಪದಲ್ಲಿ ಹರಡಿಕೊಂಡಿರುವ ಅನಾತ್ಮ, ೨, ೩.

೯೫. ದ್ವೈತಿನಃ -

ನಾನಾತ್ವವೇ ಪರಮಾರ್ಥವೆನ್ನುವ ವಾದಿಗಳು, (ಕಪಿಲ, ಕಣಾದ, ಬುದ್ಧ, ಜಿನ-ಇವರ ಅನುಯಾಯಿಗಳು), ೧೩೪, ೧೬೦, ೧೬೧, ೧೬೩, ೨೧೨.

೯೬. ದ್ವೈತೋಪಶಮಃ -

ದ್ವೈತವು ಜ್ಞಾನದಿಂದ ಇಲ್ಲವಾಗುವದು, ೧೩, ೭೪.

೯೭. ಧರ್ಮಃ -

ಪುಣ್ಯಕರ್ಮ, ೨೩೪.

೯೮. ಧರ್ಮಾಃ -

ಜೀವರು, ೧೨೮, ೨೧೩, ೨೧೪, ೨೨೭, ೨೯೭, ೩೦೨ ೩೫೧, ೩೫೨, ೩೫೩, ೩೫೫, ೩೬೧, ೩೬೩, ೩೬೪.

೯೯. ಧಾಮಾನಿ -

ಎಚ್ಚರ, ಕನಸು, ನಿದ್ರೆ-ಎಂಬ ಅವಸ್ಥೆಗಳು, ೨೮.

೧೦೦. ನಾಮರೂಪೇ -

ಹೆಸರು, ರೂಪ-ಎಂದು ವಿಂಗಡವಾಗಿರುವ ಅನಾತ್ಮದ ತೋರಿಕೆಗಳು, ೨೯, ೧೯೩.

೧೦೧. ನಿತ್ಯಶುದ್ಧಬುದ್ಧಮುಕ್ತಸ್ವಭಾವಃ

ಯಾವಾಗಲೂ ಶುದ್ಧನಾಗಿರುವ, ಚೈತನ್ಯ ಸ್ವರೂಪನಾಗಿರುವ, ಮುಕ್ತನಾಗಿರುವ ಸ್ವಭಾವವುಳ್ಳ, ೧೫೮, ೧೯೩, ೩೬೪.

೧೦೨. ನಿರಾತ್ಮವಾದಃ -

ಆತ್ಮನೇ ಇಲ್ಲವೆಂಬ ಶೂನ್ಯವಾದ, ೯೩.

೧೦೩. ನಿರಾಸ್ಪದ -

ಯಾವದೊಂದು ಆಧಾರವೂ ಇಲ್ಲದ (ಭ್ರಾಂತಿ), ೨೯, ೯೪, ೧೧೪, ೧೧೭, ೧೧೮

೧೦೪. ನಿರುದ್ಧ -

ಜ್ಞಾನದಿಂದ ಬಾಧಿತವಾದ ೧೯೦, ೧೯೨, ೧೯೩.

೧೦೫. ನಿರುಪಾಧಿಕ -

ಯಾವ ಉಪಾಧಿಯೂ ಇಲ್ಲದ (ಆತ್ಮ), ೩೫.

೧೦೬. ನಿರ್ನಿಮಿತ್ತತ್ವಮ್ -

ಕಲ್ಪನೆಗೆ ಯಾವ ಆಸ್ಪದವೂ ಇಲ್ಲದಿರುವಿಕೆ, ೩೫.

೧೦೭. ನಿರ್ಬೀಜರೂಪಮ್ -

ಕಾರಣತ್ವವಿಲ್ಲದ (ಆತ್ಮನ) ಶುದ್ಧರೂಪ, ೨೪.

೧೦೮. ನಿರ್ವಾಣಮ್ -

ಕೈವಲ್ಯ, ೨೦೯.

೧೦೯. ನಿರ್ವಿಕಲ್ಪ -

ಯಾವ ವಿಕಲ್ಪವೂ ಇಲ್ಲದ (ಆತ್ಮ), ೧೦೮, ೧೨೧, ೧೯೦.

೧೧೦. ನಿರ್ವಿಶೇಷ -

ಇಂಥದ್ದು, ಅಂಥದ್ದು-ಎಂದು ಗೊತ್ತು ಮಾಡಿ ಹೇಳುವ ವಿಶೇಷವಿಲ್ಲದ, ೧೩, ೧೧೫.

೧೧೧. ಪರಮಹಂಸಪಾರಿವ್ರಾಜ್ಯಮ್

ಮುಮುಕ್ಷುಗಳೂ ಜ್ಞಾನಿಗಳೂ ಮಾಡುವ ಸರ್ವಕರ್ಮಸಂನ್ಯಾಸ, ೧೨೫.

೧೧೨. ಪರಮಾತ್ಮಾ, ಪರಃ ಆತ್ಮಾ -

ಎಲ್ಲರಿಗೂ ಆತ್ಮನಾಗಿರುವ ನಿಜವಾದ ಆತ್ಮ, ೧೩೨, ೧೫೬, ೧೫೮, ೧೭೩.

೧೧೩. ಪರಮಾರ್ಥಃ,
ಪರಮಾರ್ಥತತ್ತ್ವಮ್ -

ನಿಜವು, ನಿಜವಾಗಿರುವ ವಸ್ತು, ೩೧, ೫೨, ೧೪೦, ೧೬೧, ೧೭೩, ೧೯೦, ೨೧೪.

೧೧೪. ಪರಮಾರ್ಥಕೃತ -

ನಿಜವಾಗಿರುವ, ೧೪೧.

೧೧೫. ಪರಮಾರ್ಥಚಿನ್ತಕಾಃ -

ನಿಜವನ್ನು ಕುರಿತು ವಿಚಾರಮಾಡುವವರು, ೩೧.

೧೧೬. ಪರಮಾರ್ಥದರ್ಶೀ-

ತತ್ತ್ವವನ್ನೇ ಪರಿಶೀಲಿಸುತ್ತಿರುವವನು, ೬೮.

೧೧೭. ಪರಮಾರ್ಥಪ್ರತಿಪತ್ತ್ಯುಪಾಯಃ
ನಿಜವನ್ನು ಅರಿತುಕೊಳ್ಳುವದಕ್ಕೆ ಸಾಧನ, ೩೨೩.

೧೧೮. ಪರಮಾರ್ಥಸತ್, ಪರಮಾರ್ಥಸತ್ಯ -
ನಿಜವಾಗಿರುವ, ಹುಸಿತೋರಿಕೆಯಲ್ಲದ, ೧೧೯, ೧೪೨, ೧೬೫, ೧೭೩, ೧೭೬, ೧೮೮, ೨೮೦, ೩೪೮, ೩೫೦

೧೧೯. ಪರಮಾರ್ಥಸುಖಮ್ -
ಜ್ಞಾನದಿಂದ ಸಿಕ್ಕುವ ನಿಜವಾದ ಸುಖ, ೨೦೯.

೧೨೦. ಪರಮಾರ್ಥಾಕಾಶಃ, - ಮಹಾಕಾಶಃ
ಉಪಾಧಿಯ ಕಟ್ಟಿಲ್ಲದ ಬರಿಯ ಆಕಾಶ, ೧೪೨, ೧೫೩.

೧೨೧. ಪರಂ ಬ್ರಹ್ಮ -
ಎಲ್ಲಕ್ಕೂ ಹೆಚ್ಚಿನ ತತ್ತ್ವವಾದ ಬ್ರಹ್ಮ, ೭೧, ೧೫೦.

೧೨೨. ಪರಿಚ್ಛಿನ್ನಾಭಿಮಾನಃ -
ಅಳತೆಯ ವಸ್ತುವನ್ನೇ ತಾನೆಂದು ತಿಳಿಯುವದು, ೨೩.

೧೨೩. ಪಾಣ್ಡಿತ್ಯಬಾಲ್ಯಮೌನಾನಿ -
ಆತ್ಮಜ್ಞಾನವನ್ನು ಸಂಪಾದಿಸುವದು, ಆತ್ಮಬಲವನ್ನು ಸಂಪಾದಿಸಿಕೊಳ್ಳುವದು, ಆತ್ಮಾನುಸಂಧಾನವು-ಎಂಬ ಸಾಧನಗಳು, ೩೫೦.

೧೨೪. ಪಿಣ್ಡಾತ್ಮಾ -
ಶಾರೀರಾತ್ಮ, ೧೨.

೧೨೫. ಪುರುಷಬುದ್ಧಿಪ್ರಮಾಣಗಮ್ಯ -
ಶಾಸ್ತ್ರವಿಲ್ಲದ ಬರಿಯ ಮನುಷ್ಯಬುದ್ಧಿಯಿಂದ ತಿಳಿದುಬರುವ, ೧೪೯.

೧೨೬. ಪ್ರಕರಣಮ್ -
ಶಾಸ್ತ್ರದ ಒಂದಾನೊಂದು ಭಾಗವನ್ನು ವಿಸ್ತರಿಸುವ ಗ್ರಂಥ, ೧, ೩, ೭೫.

೧೨೭. ಪ್ರಚಾರಃ -
ಮನಸ್ಸಿನ ವೃತ್ತಿ, ೧೯೦, ೧೯೧, ೧೯೨.

೧೨೮. ಪ್ರಣವಃ -
ಓಂಕಾರದಿಂದ ತಿಳಿಯಬರುವ ಆತ್ಮ, ೭೦, ೭೧, ೭೨, ೭೩.

೧೨೯. ಪ್ರತಿಷೇಧವಿಜ್ಞಾನಮ್ -
ಅನಾತ್ಮವು ಆತ್ಮನಲ್ಲಿಲ್ಲವೆಂಬ ಅರಿವು, ೩೯.

೧೩೦. ಪ್ರತಿಸನ್ಧಾನಮ್ -
ಅದೇ ಇದೆಂಬ ಅರಿವು, ೧೯, ೨೮.

೧೩೧. ಪ್ರತ್ಯಗಾತ್ಮಾ -
ಒಳಗಿನ ಆತ್ಮ, ೮, ೧೨.

೧೩೨. ಪ್ರತ್ಯಯಃ -
ವಿಷಯದ ಅರಿವು, ೪೨, ೧೯೦, ೧೯೨.

೧೩೩, ಪ್ರಪಞ್ಚೋಪಶಮಃ -
ಅನಾತ್ಮವಾದ ದ್ವೈತವು ಇಲ್ಲವಾಗುವದು, ೧೨, ೪೨, ೬೮, ೧೨೧, ೧೨೭.

೧೩೪. ಪ್ರಮಾತೃತ್ವಾದಿಭೇದಃ -
ಪ್ರಮಾತೃ, ಪ್ರಮಾಣ, ಪ್ರಮೇಯ-ಎಂಬ ಭೇದ, ೩೯.

೧೩೫. ಪ್ರಯೋಜನಮ್ -
(೧) ಗ್ರಂಥದ ಒಂದು ಅನುಬಂಧ, ೧, ೨ ;
(೨) ಫಲ, ೨, ೭.

೧೩೬. ಪ್ರವಿಲಾಪನಮ್ -
ನಿಜವಾದ ಸ್ವರೂಪದಲ್ಲಿ ತೋರಿಕೆಯನ್ನು ಜ್ಞಾನದಿಂದ ಅಡಗಿಸುವದು, ೭, ೯.

೧೩೭. ಪ್ರಶಾನ್ತಸರ್ವಕ್ಲೇಶರಜಃ -
ಅವಿದ್ಯೆಯೇ ಮುಂತಾದ ಯಾವ ಧೂಳೂ ಇಲ್ಲವಾಗಿರುವ ಮನಸ್ಸು, ೧೯೦.

೧೩೮. ಪ್ರಸವಬೀಜಾತ್ಮಕತ್ವಮ್ -
ಜೀವರೂಪವನ್ನು ಪಡೆಯುವದಕ್ಕೆ ಕಾರಣವಾಗಿರುವದು, ೨೩, ೨೪.

೧೩೯. ಪ್ರಾಜ್ಞಃ -
ಜ್ಞಾತೃತ್ವವನ್ನು ಪಡೆಯುವ ಚೈತನ್ಯರೂಪ ಅಥವಾ ಚೈತನ್ಯವೆಂಬ ಅಸಾಧಾರಣಧರ್ಮವುಳ್ಳ ಆತ್ಮರೂಪ, ಸುಷುಪ್ತಾತ್ಮ, ೧೬, ೨೦, ೨೮, ೩೦, ೪೩, ೪೮.

೧೪೦. ಪ್ರಾಣಃ -
ಕಾರಣಾತ್ಮನು, ೩೦, ೧೦೬, ೧೦೭, ೧೦೮.

೧೪೧. ಫಲಮ್ -
ಧರ್ಮಾಧರ್ಮಗಳ ಫಲವಾದ ಶರೀರ, ೨೩೪, ೨೩೬, ೨೩೮, ೨೪೦, ೨೫೫.

೧೪೨. ಫಲಭಾವಃ -
ಅಜ್ಞಾನದ ಕಾರ್ಯವಾದ ತಪ್ಪುತಿಳಿವಳಿಕೆ, ೪೫.

೧೪೩. ಬಾಹ್ಯೈಷಣಾ -
ಹೊರಗಿನ (ಅನಾತ್ಮವನ್ನು) ಬಯಸುವದು, ೧೨೫.

೧೪೪. ಬೀಜನಿದ್ರಾ -
ತಪ್ಪುತಿಳಿವಳಿಕೆಗೆ ಕಾರಣವಾಗಿರುವ ಅಜ್ಞಾನ, ೪೯.

೧೪೫. ಬೀಜಭಾವಃ -
ಕಾರಣವಾದ ಅಜ್ಞಾನ, ೪೫, ೬೨, ೬೮, ೮೪, ೧೯೨.

೧೪೬. ಬೀಜಾಙ್ಕುರೌ -
ಒಂದಕ್ಕೊಂದು ಕಾರಣವಾಗಿರುವ ಬೀಜ ಮೊಳಕೆಗಳು, ೩೭, ೨೪೫, ೨೪೬, ೨೪೭.

೧೪೭. ಬೀಜಾತ್ಮಾ -
ಜಗತ್ತಿಗೆ ಕಾರಣವಾಗಿರುವ ಆತ್ಮನು, ೩೦, ೧೦೬.

೧೪೮. ಬೀಜಾವಸ್ಥಾ -
ಅನ್ಯಥಾಗ್ರಹಣದ ಎಚ್ಚರಕನಸುಗಳಿಗೆ ಕಾರಣವಾಗಿರುವ ಅಜ್ಞಾನಾವಸ್ಥೆ, ೨೬.

೧೪೯. ಬುದ್ಧಾಃ -
ಪಂಡಿತರೆಂದುಕೊಳ್ಳುವ ವಾದಿಗಳು, ೧೪೪, ೨೪೯ ; ಉದ್ಭೃತವಾದಿಗಳು, ೨೪೭, ೪೩೪, ೪೩೫, ೪೪೭.

೧೫೦. ಬುದ್ಧಿಃ -
ನಿಶ್ಚಯಾತ್ಮಕವಾದ ಅಂತಃಕರಣವೃತ್ತಿ, ೧೧.

೧೫೧. ಬ್ರಹ್ಮ -
ಮಿಗಿಲಿಲ್ಲದ ತತ್ತ್ವ, ಪರಮಾತ್ಮ, ೭, ೮, ೬೮, ೭೦, ೭೧, ೧೨೮, ೧೩೦, ೧೫೦, ೧೯೬, ೧೯೭, ೨೦೦, ೨೧೧, ೨೬೮, ೨೬೯.

೧೫೨. ಬ್ರಹ್ಮವಾದಿನಃ -
ಬ್ರಹ್ಮವು ಜಗತ್ಕಾರಣವೆಂಬ ವೇದಾಂತಿಗಳು, ೧೬೬.

೧೫೩. ಬ್ರಹ್ಮವಿದ್ಯಾಪ್ರತಿಪತ್ತಿಃ -
ಪರಮಾರ್ಥತತ್ತ್ವದ ತಿಳಿವಳಿಕೆ, ೫, ೧೫೦, ೧೭೩.

೧೫೪. ಬ್ರಾಹ್ಮಣಾಃ -
ಬ್ರಹ್ಮಜ್ಞಾನಿಗಳು, ೧೧೯

೧೫೫. ಭಾವಃ -
ಪದಾರ್ಥ, ೭೬, ೭೭, ೮೧, ೯೬, ೯೯, ೧೦೦, ೨೮೬.

೧೫೬. ಭಾವವಿಕಾರಾಃ -
ವಸ್ತುಗಳಿಗೆ ಆಗುವ ಹುಟ್ಟು, ಇರವು, ಬೆಳವಣಿಗೆ ಮುಂತಾದ ವಿಕಾರಗಳು, ೫೩.

೧೫೭. ಭೂತ -
ಇರುವ, ನಿಜವಾಗಿರುವ (ವಸ್ತು), ೨೧೪, ೨೨೦, ೨೬೦.

೧೫೮. ಭೇದಾಃ -
ಬೇರೆಬೇರೆಯಾಗಿ ಕಾಣುವ ಪದಾರ್ಥಗಳು ೮೨, ೮೪, ೮೫, ೮೯, ೯೪, ೯೮, ೯೯, ೧೦೦.

೧೫೯. ಭ್ರಾನ್ತಿದರ್ಶನಮ್ -
ತಪ್ಪುತಿಳಿವಳಿಕೆ, ೨೬೧.

೧೬೦. ಮನಃ -
ಮನನಮಾಡುವ ಅಂತಃಕರಣವೃತ್ತಿ, ೧೧.

೧೬೧. ಮನಃಸ್ಪನ್ದನಮ್ -
ಮನಸ್ಸಿನ ವ್ಯಾಪಾರ, ೧೪.

೧೬೨. ಮನೋನಿಗ್ರಹಃ -
ಬ್ರಹ್ಮಜ್ಞಾನಕ್ಕಾಗಿ ಮನಸ್ಸನ್ನು ಹಿಡಿತದಲ್ಲಿಡುವದು, ೨೦೦, ೨೦೧, ೨೦೨, ೨೧೦.

೧೬೩. ಮನೋರಥಃ -
ಮನಸ್ಸಿನಲ್ಲಿಯೇ ಕಲ್ಪಿಸಿಕೊಳ್ಳುವದು, ೮೫, ೯೦, ೯೬, ೯೭.

೧೬೪. ಮನೋವಿಕಲ್ಪನಾ -
ಮನಸ್ಸಿನಿಂದ ವಿಕಲ್ಪಿಸಿದ ಹುಸಿತೋರಿಕೆ, ೧೧೩.

೧೬೫. ಮನ್ದಮಧ್ಯಮಧಿಯಃ, ಮನ್ದಮಧ್ಯಮದೃಷ್ಟಯಃ -
ಬ್ರಹ್ಮಜ್ಞಾನಕ್ಕೆ ಅಧಮಾಧಿಕಾರಿಗಳು, ಮತ್ತು ಮಧ್ಯಮಾಧಿಕಾರಿಗಳು ; ಓಂಕಾರವನ್ನು ಬ್ರಹ್ಮಕ್ಕೆ ಪ್ರತೀಕವಾಗಿ ಅಥವಾ ವಾಚಕವಾಗಿ ಉಪಯೋಗಿಸುವ ಸಾಧಕರು, ೬೮, ೧೫೯.

೧೬೬. ಮಾಯಾ -
ಹುಸಿಯಾಗಿ ತೋರುವ ನಾಮರೂಪಗಳು, ೨೯, ೩೧ ; ಇಂದ್ರಜಾಲ ಅಥವಾ ಅದರಿಂದ ತೋರುವ ವಸ್ತು, ೩೧, ೫೫, ೫೭ ; ೧೦೫, ೧೧೦, ೧೨೬, ೧೨೭ ; ಅವಿದ್ಯೆ, ೯೪, ೧೬೫, ೧೭೨, ೧೭೮, ೧೭೯, ೧೮೦, ೧೮೧.

೧೬೭. ಮಾಯಾವೀ -
ಐಂದ್ರಜಾಲಿಕ, ೩೧, ೫೫, ೧೦೫, ೧೪೭, ೧೭೭.

೧೬೮. ಮಿಥ್ಯಾ -
ಹುಸಿತೋರಿಕೆ, ೮೬.

೧೬೯. ಮಿಥ್ಯಾದರ್ಶನಮ್ -
ತಪ್ಪುತಿಳಿವಳಿಕೆ, ೧೬೦, ೨೧೨, ೩೪೫.

೧೭೦. ಮುನಿಃ -
ತತ್ತ್ವವನ್ನು ಮನನಮಾಡುವವ, ೭೪, ೩೪೨.

೧೭೧. ಯೋಗೀ -
ಅದ್ವೈತಜ್ಞಾನವಿಲ್ಲದ ಸಾಧಕನು, ೧೯೯, ೨೦೦, ೨೦೭.

೧೭೨. ರಜ್ಜುಸರ್ಪಃ -
ಹಗ್ಗದಲ್ಲಿ ಕಲ್ಪಿಸಿದ ಹಾವು, ೩೭, ೪೩, ೫೭, ೮೮, ೧೦೪, ೧೧೩, ೧೧೪, ೧೧೭, ೧೨೬, ೧೩೦, ೧೭೮, ೧೮೫, ೨೦೦, ೨೪೨.

೧೭೩. **ರಜ್ಜುಸರ್ಪವಿವೇಕಃ** -

ಹಗ್ಗವು ಸತ್ಯವೆಂದೂ, ಅದರಲ್ಲಿ ಕಲ್ಪಿತವಾದ ಹಾವು ಅಸತ್ಯವೆಂದೂ ವಿಂಗಡಿಸಿ ಅರಿತುಕೊಳ್ಳುವದು, ೭೯.

೧೭೪. **ಲಯಃ** -

ತನಿನಿದ್ರೆ, ೨೦೩, ೨೦೬.

೧೭೫. **ವನ್ಧ್ಯಾಪುತ್ರಃ** -

ಬಂಜೆಯ ಮಗ, ಅತ್ಯಂತವಾಗಿಲ್ಲದ್ದು, ೧೭೯.

೧೭೬. **ವಾಕ್ಪ್ರಪಞ್ಚಃ**

ಹೆಸರುಗಳ ಪ್ರಪಂಚ, ಹೆಸರು, ವಸ್ತು-ಎಂದು ವಿಂಗಡಿಸಿಕೊಂಡಿರುವ ದ್ವೈತದಲ್ಲಿ ಹೆಸರುಗಳ ಭಾಗ, ೪.

೧೭೭. **ವಾಸನಾ** -

ಅನುಭವದಿಂದ ಉಂಟಾಗುವ ಸಂಸ್ಕಾರ, ೧೪, ೨೨, ೯೬, ೧೯೦.

೧೭೮. **ವಿಕಲ್ಪಃ ವಿಕಲ್ಪನಾ** -

ಮನಸ್ಸಿನ ಕಲ್ಪನೆ. ಹುಸಿತೋರಿಕೆ, ೪, ೩೫, ೩೮, ೪೧, ೪೨, ೧೦೩, ೧೦೪, ೧೧೪, ೧೪೩, ೧೪೬, ೩೧೯.

೧೭೯. **ವಿತಥ** -

ಹುಸಿಯಾದ, ೭೬, ೮೪, ೧೨೪, ೧೪೭.

೧೮೦. **ವಿವೇಕವಿಜ್ಞಾನಮ್** -

ಆತ್ಮ, ಅನಾತ್ಮ-ಇವುಗಳನ್ನು ವಿಂಗಡಿಸಿಕೊಂಡು ಇದ್ದದ್ದು ಇದ್ದಂತೆ ಅರಿಯುವದು ೧೯೨.

೧೮೧. **ವಿಶ್ವಃ, ವಿರಾಡಾತ್ಮಾ, ವೈಶ್ವಾನರಃ** -

ಎಚ್ಚರದವಸ್ಥೆಯ ಸಮಷ್ಟ್ಯಾತ್ಮ. ೧೧, ೧೨, ೨೦, ೨೧, ೨೨, ೨೮, ೩೪, ೪೩, ೪೭, ೫೦, ೬೦.

೧೮೨. **ವಿಷಯಃ** -

ಜ್ಞಾನಕ್ಕೆ ಗೋಚರವಾದ ವಸ್ತು, ೧೪, ೧೬.

೧೮೩. **ವಿಷಯಿಾ** -

ಅರಿಯುವ (ಚೈತನ್ಯ), ೧೪.

೧೮೪. **ವಿಷಯವಿಷಯ್ಯಾ ಕಾರಸ್ವನ್ದನಮ್** -

ತಾನೇ ವಿಷಯದ ಆಕಾರವಾಗಿಯೂ ತಾನೇ ವಿಷಯಿಯ ಆಕಾರವಾಗಿಯೂ ತೋರಿಕೊಳ್ಳುವ ವ್ಯಾಪಾರ, ೧೬.

೧೮೫. **ವೃತ್ತಿಃ** -

ಅವಸ್ಥೆ, ೧೫, ೯೦, ೯೧.

೧೮೬. **ವೇದಾನ್ತಾಃ** -

ಉಪನಿಷತ್ತುಗಳು, ೧, ೯೪, ೧೦೯, ೧೨೧, ೧೩೨, ೩೩೮, ೩೬೬.

೧೮೭. **ವೈತಥ್ಯಮ್** -

ಹುಸಿಯಾಗಿರುವದು, ೭೬, ೮೧, ೮೨.

೧೮೮. **ವೈನಾಶಿಕಾಃ** -

ಯಾವದೂ ನಿಜವಾಗಿಲ್ಲವೆಂಬ ಬೌದ್ಧರು ೯೪, ೨೧೨.

೧೮೯. **ವ್ಯವಹಾರಃ** -

ಶಬ್ದಪ್ರಯೋಗ ಮತ್ತು ಜ್ಞಾನ-ಇವುಗಳು, ೧೧೧.

೧೯೦. **ವ್ಯವಹಾರಸತ್ಯಮ್** -

ವ್ಯವಹಾರದಲ್ಲಿ ಸತ್ಯವೆಂದನಿಸಿಯುವ, ನಿಜವಾಗಿ ಸತ್ಯವಲ್ಲದ, ೮, ೩೨೦.

೧೯೧. ವ್ಯಾಕೃತ -
ಬಿಡಿಬಿಡಿಯಾಗಿರುವ, ೨೩.

೧೯೨. ವ್ಯಾವಹಾರಿಕ -
ವ್ಯವಹಾರದಲ್ಲಿ ಸತ್ಯವೆಂದೆನಿಸುವ (ಬಂಧ ಮೋಕ್ಷಗಳು), ೧೩೮.

೧೯೩. ಶಬ್ದಪ್ರವೃತ್ತಿನಿಮಿತ್ತಾನಿ -
ಶಬ್ದವು ತಿಳಿಸುವದಕ್ಕೆ ನಿಮಿತ್ತವಾಗಿರುವ ಜಾತಿ ; ದ್ರವ್ಯ, ಗುಣ-ಮುಂತಾದವು, ೩೪, ೩೫.

೧೯೪. ಶರೀರಪಾತಃ -
ಶರೀರವು ಬಿದ್ದುಹೋಗುವದು, ಸಾಯುವದು, ೧೨೮.

೧೯೫. ಶಶವಿಷಾಣಮ್ -
ಮೊಲದ ಕೊಂಬು, ಅತ್ಯಂತವಾಗಿ ಇಲ್ಲದ ವಸ್ತು, ೩೬, ೧೧೩, ೨೫೩, ೨೭೧, ೨೮೦, ೨೮೪.

೧೯೬. ಶಾಸ್ತ್ರಮ್ -
ವೇದಾಂತವಾಕ್ಯ, ೧೧೪, ೧೧೫, ೧೫೧, ೧೬೦, ೨೧೨, ೨೧೬ ; ಉಪಶಾಂತಿಪ್ರಕರಣ, ೨೧೩.

೧೯೭. ಶಾಸ್ತ್ರಾಚಾರ್ಯೋಪದೇಶಃ -
ಶ್ರುತಿಯ ಮತ್ತು ಗುರುಗಳ ಉಪದೇಶ, ೧೮೬.

೧೯೮. ಶೂನ್ಯವಾದಃ -
ಯಾವದೂ ನಿಜವಾಗಿಲ್ಲವೆಂಬ ಬೌದ್ಧರ ವಾದ, ೨೬೭, ೩೪೦.

೧೯೯. ಸಂಸಾರೀ -
ಸಂಸಾರದಲ್ಲಿ ತೊಳಲುವ ಜೀವ, ೫೩, ೧೧೨.

೨೦೦. ಸಂಸ್ಕಾರಃ -
ವಾಸನೆ, ಸ್ಮೃತಿಗೆ ಕಾರಣ, ೧೪, ೧೩೭.

೨೦೧. ಸದಸದ್ವಿಭಾಗಃ -
ಇರುವದು, ಇಲ್ಲದ್ದು-ಎಂಬ ವಿಭಾಗ, ೯೦.

೨೦೨. ಸದ್ಭಾವಃ -
ನಿಜವಾಗಿರುವದು, ೩೦೯.

೨೦೩. ಸಂನ್ಯಾಸಿನಃ -
ಸರ್ವಕರ್ಮಗಳನ್ನೂ ಬಿಡುವ ಪರಮ ಹಂಸರು, ೧೨೧.

೨೦೪. ಸಮಾಧಾನಮ್, ಸಮಾಧಿಃ -
ಮನಸ್ಸನ್ನು ಆತ್ಮನಲ್ಲಿಯೇ ನಿಲ್ಲಿಸಿ ಕೊಳ್ಳುವದು, ೧೬೩, ೧೯೩, ೧೯೫ ; ಆತ್ಮ, ೧೯೫.

೨೦೫. ಸಂಪ್ರದಾಯಕರ್ತಾ -
ಶಿಷ್ಯರಿಗೆ ಉಪದೇಶಿಸುವದಕ್ಕೆ ಮೊದಲು ಮಾಡಿದವನು, ೨೧೩.

೨೦೬. ಸಮ್ಯಗ್ದರ್ಶನಮ್ -
ಸರಿಯಾದ ತಿಳಿವಳಿಕೆ, ಅದ್ವೈತಜ್ಞಾನ, ೧೬೦, ೧೬೧, ೨೧೨, ೨೧೭.

೨೦೭. ಸಂಬನ್ಧಃ -
ಗ್ರಂಥಕ್ಕೆ ಇರಬೇಕಾದ ಅನುಬಂಧಗಳಲ್ಲಿ ಒಂದು, ೧, ೨.

೨೦೮. ಸರ್ವನಿವೃತ್ತಿಃ -
ಕಲ್ಪಿತವಾದ ಹಾವು ಜ್ಞಾನದಿಂದ ಬಾಧಿತವಾಗುವದು, ೫೯.

೨೦೯. ಸರ್ಪಾದಿವಿಕಲ್ಪಃ -
ಹಗ್ಗದ ಹಾವೇ ಮುಂತಾದ ಕಲ್ಪಿತವಸ್ತು, ೩, ೪.

೨೧೦. ಸರ್ವಜ್ಞ -

(೧) ಎಲ್ಲವನ್ನೂ ಬಲ್ಲ, ೧೭, ೩೪೨ ;

(೨) ಎಲ್ಲವೂ ತಾನೇ ಆಗಿ ಚೈತನ್ಯ ವಾಗಿರುವ, ೨೦೯, ೩೪೬.

೨೧೧. ಸರ್ವಾತ್ಮೈಕ್ಯಮ್ -

ಎಲ್ಲರ ಆತ್ಮನೂ ಒಬ್ಬನೇ ಆಗಿರುವದು, ೧೨.

೨೧೨. ಸುಷುಪ್ತಿಃ, ಸುಷುಪ್ತಮ್ -

ತನಿನಿದ್ರೆ, ೧೫, ೧೬, ೨೩, ೬೨, ೨೬೧.

೨೧೩. ಸ್ಥಾನಮ್ -

ಅವಸ್ಥೆ, ೧೧, ೧೪, ೧೫, ೩೭, ೬೦, ೬೧, ೬೨, ೬೬, ೮೨, ೯೩.

೨೧೪. ಸ್ವಪ್ನಃ -

(೧) ಕನಸೆಂಬ ಅವಸ್ಥೆ, ೧೪, ೧೬, ೫೨, ೬೧, ೭೬, ೭೭, ೭೮, ೮೦, ೮೭, ೮೮, ೮೯, ೮೯, ೧೪೧, ೧೪೨, ೨೭೪, ೩೧೫, ೩೪೬ ; (೨) ಕನಸು, ಸುಳ್ಳುತೋರಿಕೆ ೩೧, ೧೧೦, ೧೨೭.

೨೧೫. ಸ್ವಪ್ನಜಾಗ್ರನ್ಮನಃಸ್ಪಂದನಾನಿ -

ಕನಸಿನಲ್ಲಿಯೂ ಎಚ್ಚರದಲ್ಲಿಯೂ ವಿಷಯಗಳ ಜ್ಞಾನದ ರೂಪವಾಗಿ ತೋರುವ ಮನೋವ್ಯಾಪಾರಗಳು, ೧೬.

೨೧೬. ಸ್ವಭಾವಃ ಸ್ವಾಭಾವಿಕಾ ಜ್ಞಾನಮ್, ಸ್ವಾಭಾವಿಕಾವಿದ್ಯಾ -

ಸ್ವಭಾವದಿಂದಿರುವ ಅವಿದ್ಯೆ, ೩೩, ೧೫೩, ೧೭೩.

೨೧೭. ಹಿರಣ್ಯಗರ್ಭಃ -

ಸೂಕ್ಷ್ಮಸಮಷ್ಟಿಯ ಅಭಿಮಾನಿಯಾದ ಆತ್ಮ, ೧೩, ೨೨ ; ವಿರಾಟ್ಪುರುಷ, ೨೧.

೨೧೮. ಹೇತುಫಲಾತ್ಮಕಃ -

ಧರ್ಮಾಧರ್ಮಗಳಿಂದ ಶರೀರವನ್ನು ಪಡೆಯುವ ಜೀವ, ೫೩, ೧೦೧.

೨೧೯. ಹೇತುಫಲೇ -

ಧರ್ಮಾಧರ್ಮಗಳು, ಮತ್ತು ಅವುಗಳ ಕಾರ್ಯವಾದ ಶರೀರ-ಇವು, ೨೩೮, ೨೪೧, ೨೪೨, ೨೪೪, ೨೪೫, ೨೫೧, ೨೫೫, ೩೦೫, ೩೦೬.

ವರ್ಣಿಸಿರುತ್ತದೆ. ಶ್ರೀಗೌಡಪಾದಾಚಾರ್ಯರು ಬರೆದಿರುವ ನಾಲ್ಕು ಪ್ರಕರಣಗಳುಳ್ಳ ಕಾರಿಕೆಗಳೂ ಶಾಂಕರಭಾಷ್ಯಸಮೇತ ಈ ಉಪನಿಷತ್ತಿಗೆ ಇರುವದು ಒಂದು ವಿಶೇಷ. ವೇದಾಂತಸಾರ ಸಂಗ್ರಹವನ್ನೂ, ಬೌದ್ಧರ ಪ್ರಕ್ರಿಯೆಗೂ ವೇದಾಂತಪ್ರಕ್ರಿಯೆಗೂ ಇರುವ ತಾರತಮ್ಯವನ್ನೂ ಇದರಲ್ಲಿ ಕಾಣಬಹುದು.

**ಈಗ ಇದು ನಿಮ್ಮ ಕೈಯಲ್ಲಿದೆ.** *(ಐದನೆಯ ಮುದ್ರಣ : ೨೦೦೨ – ಪುಟಗಳು ಡೆಮ್ಮಿ ೩೨ + ೪೦೦)*

೭. ಐತರೇಯೋಪನಿಷತ್ತು : ಪರಮಾತ್ಮನೇ ಈ ಇಡಿಯ ಜಗತ್ತನ್ನು ಸೃಷ್ಟಿಸಿ ಅದರೊಳಗಿನ ಬೇರೆಬೇರೆಯ ಶರೀರಗಳೊಳಗೆ ಹೊಕ್ಕಿರುವ ಪ್ರಜ್ಞಾನರೂಪನು. ಅವನೇ ಜ್ಞಾನದಿಂದ ಸಂಸಾರಿಯಾಗಿ ಕಾಣುತ್ತಿರುವನು. ಆ ಪರಮಾತ್ಮನ ನಿಜವಾದ ಸ್ವರೂಪವನ್ನು ನಿರ್ಧರಿಸಿಕೊಂಡರೆ ಸದ್ಯೋಮುಕ್ತಿಯಾಗುವದು ಎಂಬುದನ್ನು ವಿವರಿಸುವ ಉಪನಿಷತ್ತು.

*(ಮೂರನೆಯ ಮುದ್ರಣ : ೧೯೯೩ – ಪುಟಗಳು ೧೬+೧೩೦ ಡೆಮ್ಮಿ)*

೮. ತೈತ್ತಿರೀಯೋಪನಿಷತ್ತು : ಇದರಲ್ಲಿ ಶೀಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ – ಎಂಬ ಮೂರು ಭಾಗಗಳಿವೆ. ವೇದಾಂತಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. ಮುಖ್ಯವಾಗಿ ಕರ್ಮಗಳಿಗೂ, ಜ್ಞಾನಕ್ಕೂ ಇರುವ ಸಂಬಂಧ, ಪರಬ್ರಹ್ಮಪ್ರಾಪ್ತಿಗೂ ಅಪರ ಬ್ರಹ್ಮಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವದು – ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಅವಿದ್ಯಕವೆಂಬುದು, ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ – ಎಂಬಿದೇ ಮುಂತಾದ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. *(ಮೂರನೆಯ ಮುದ್ರಣ : ೧೯೯೮ – ಪುಟಗಳು ಡೆಮ್ಮಿ ೧೮ + ೩೩೮)*

೯. ಛಾಂದೋಗ್ಯೋಪನಿಷತ್ತು : ಈ ಉಪನಿಷತ್ತು ಸಾಮವೇದಕ್ಕೆ ಸೇರಿದ್ದು. ಇದರಲ್ಲಿ ಮೊದಲನೆಯ ಐದು ಅಧ್ಯಾಯಗಳಲ್ಲಿ ಕ್ರಮವಾಗಿ ಉಪಾಸನೆಗಳ ವಿವರವನ್ನು ವಿಸ್ತಾರವಾಗಿ ತಿಳಿಸಿ ಅನಂತರ ಆರನೆಯ ಅಧ್ಯಾಯದಿಂದ ಮುಂದೆ ಆತ್ಮಜ್ಞಾನವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿರುವ ವಿಷಯವಾಕ್ಯಗಳು ಬ್ರಹ್ಮಸೂತ್ರಭಾಷ್ಯದಲ್ಲಿ ವಿಚಾರಕ್ಕೆ ಬಹಳವಾಗಿ ತೆಗೆದುಕೊಳ್ಳಲ್ಪಟ್ಟಿವೆ. ತತ್ತ್ವಮಸಿ ಮಹಾವಾಕ್ಯದ ವಿಸ್ತಾರವಾದ ವಿವರವು ಇದರಲ್ಲಿ ಅಡಕವಾಗಿದೆ. ಶಾಂಕರವೇದಾಂತದ ಅಮೋಘವಿಚಾರಗಳ ಮನನಕ್ಕೆ ಅತ್ಯುತ್ತಮ ಗ್ರಂಥವಿದು. ಎಂಟು ಅಧ್ಯಾಯಗಳ ಪೂರ ಭಾಷ್ಯ ಗ್ರಂಥವು ಒಂದೇ ಸಂಪುಟವಾಗಿ ಪ್ರಕಟವಾಗಿದೆ.

*(ಎರಡನೆಯ ಮುದ್ರಣ : ೧೯೯೬ – ಪುಟಗಳು ಡೆಮ್ಮಿ ೬೧+೧೦೯೫)*

೧೦. ಬೃಹದಾರಣ್ಯಕೋಪನಿಷತ್ತು (ಭಾಗ೧, ಭಾಗ೨) : ಹೆಸರಿಗೆ ತಕ್ಕಂತೆ ಉಪನಿಷತ್ತುಗಳಲ್ಲೆಲ್ಲ ದೊಡ್ಡದಾಗಿರುವ, ಶುಕ್ಲಯಜುರ್ವೇದಕ್ಕೆ ಸೇರಿರುವ ಈ ಉಪನಿಷತ್ತಿಗೆ ಆಚಾರ್ಯರು ವಿಸ್ತಾರವಾಗಿ ಭಾಷ್ಯವನ್ನು ಬರೆದಿರುತ್ತಾರೆ. ಮಧುಕಾಂಡವೆಂದು ಪ್ರಸಿದ್ಧವಾಗಿರುವ ಇದರ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಆಗಮಪ್ರಧಾನವಾಗಿ ತತ್ತ್ವವನ್ನು ತಿಳಿಸಿರುತ್ತದೆ. ಮೂರು – ನಾಲ್ಕು ಅಧ್ಯಾಯಗಳು ಮುನಿಕಾಂಡವೆಂಬ ಹೆಸರಿನಿಂದ ತರ್ಕಪ್ರಧಾನವಾಗಿದ್ದು ಆಗಮ ಉಪಪತ್ತಿಗಳಿಂದ ತತ್ತ್ವವನ್ನು ವಿವರಿಸಿರುತ್ತದೆ. ಕೊನೆಯ ಎರಡು ಅಧ್ಯಾಯಗಳು ಖಿಲಕಾಂಡವೆಂದು ಪ್ರಸಿದ್ಧವಾಗಿದ್ದು ಉಪಾಸನಾಭಾಗವನ್ನು ಒಳಗೊಂಡಿದೆ. ಆತ್ಮಸ್ವರೂಪವನ್ನು ಅವಸ್ಥಾತ್ರಯ ಪರೀಕ್ಷೆಯಿಂದ ಗೊತ್ತುಪಡಿಸುವ ವಿಚಾರಸರಣಿಯು ಇದರಲ್ಲಿ ಬಹಳ ಸುಂದರವಾಗಿದೆ. ಯಾಜ್ಞವಲ್ಕ್ಯ – ಮೈತ್ರೇಯೀ ಸಂವಾದ, ಜನಕ – ಯಾಜ್ಞವಲ್ಕ್ಯ ಸಂವಾದ – ಮುಂತಾದ ಕಥಾರೂಪಗಳಿಂದ ತತ್ತ್ವವನ್ನು ಹೃದಯಂಗಮವಾಗಿ ಪ್ರತಿಪಾದಿಸುವ ಉಪನಿಷತ್ತಿದು. ಆಚಾರ್ಯರು ತಮ್ಮ ಭಾಷ್ಯದಲ್ಲಿ ಅನೇಕ ವಿಷಯಗಳ ವಿಸ್ತಾರವಾದ ಚರ್ಚೆಯನ್ನು ಮಾಡಿ ಈ ಉಪನಿಷತ್ತಿನ ರಹಸ್ಯವನ್ನು ಹೊರಗೆಡವಿರುತ್ತಾರೆ. ಇಂಥ ಅಮೂಲ್ಯಗ್ರಂಥವು ವಿಷಯದಲ್ಲೂ ಆಕಾರದಲ್ಲೂ ಬ್ರಹ್ಮಸೂತ್ರಭಾಷ್ಯಕ್ಕೆ ಸರಿಸಮಾನವಾಗಿದೆ. ಎರಡು ಸಂಪುಟಗಳಲ್ಲಿ ಪೂರ್ತಿ ಉಪನಿಷತ್ತು ಭಾಷ್ಯ ಸಮೇತ ಪ್ರಕಟವಾಗಿದೆ. ಜಿಜ್ಞಾಸುಗಳು ಅವಶ್ಯವಾಗಿ ಸಂಗ್ರಹಿಸಬೇಕಾದ ಉಪನಿಷತ್ತಿದು.

*೧ನೆಯ ಸಂಪುಟ ; ಎರಡನೆಯ ಮುದ್ರಣ : ೧೯೯೪ – ಪುಟಗಳು ಡೆಮ್ಮಿ ೩೨ +೭೩೬.*
*೨ನೆಯ ಸಂಪುಟ ; ಎರಡನೆಯ ಮುದ್ರಣ : ೧೯೯೫ – ಪುಟಗಳು ಡೆಮ್ಮಿ ೫೦+೧೦೧೦)*

# ಸಂಸ್ಥಾಪಕರ ಸ್ಮರಣೆ

ಕರ್ನಾಟಕರಾಜ್ಯದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ **ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ವಿಷಯಕ್ಕೆ ೨೦ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

೫-೧-೧೮೮೦ ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ.ಸುಬ್ಬರಾವ್ ಎಂದಿತ್ತು. ೧೯೪೮ ರವರೆಗೆ (೬೮ನೆಯ ವಯಸ್ಸಿನವರೆಗೆ) ಅವರು ಸುಬ್ಬಾಯ ರೆಂದೇ ಪ್ರಖ್ಯಾತರಾಗಿದ್ದರು. ೧೦-೬-೧೯೪೮ ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ** ಎಂಬ ಅಭಿದಾನದಿಂದ ವಿರಾಜಮಾನರಾದರು.

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ ೯೬ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **''ಪುರುಷಸರಸ್ವತಿ''** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ ೧೯೭೫ನೇ ಆಗಸ್ಟ್ ೫ (೧೮೮೦-೧೯೭೫)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

---


**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ-573211

ವಿನ್ಯಾಸ - ಮುದ್ರಣ : ಶ್ರೀಗಣೇಶಮಾರುತಿ ಪ್ರಿಂಟರ್ಸ್ ದೂ - 6766 342